ಹಸಿವಿನ ಪರಿಕಲ್ಪನೆ: ಪ್ರಾತಿನಿಧಿಕ ಕನ್ನಡ ಸಣ್ಣಕತೆಗಳ ಹಿನ್ನೆಲೆಯಲ್ಲಿ

(ಪಿಎಚ್. ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ ಮಹಾಪ್ರಬಂಧ)

ಸಂಶೋಧಕರು
ಮಂಜುನಾಥ ಎನ್. ಎಂ.

ಮಾರ್ಗದರ್ಶಕರು
ಡಾ. ವರದರಾಜ ಚಂದ್ರಗಿರಿ
ಪ್ರಾಂಶುಪಾಲರು
ಸರಕಾರಿ ಪ್ರಥಮ ದರ್ಜೆ ಕಾಲೇಜು
ಬೆಟ್ಟಂಪಾಡಿ, ಪುತ್ತೂರು, ದ. ಕ.

ಭಾಷಾ ನಿಕಾಯ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಮಾನ್ಯತಾ ಕೇಂದ್ರ
ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು

೨೦೧೯

8K0.9
MAN
h

ಪರಾಮರ್ಶನ ಗ್ರಂಥ
ಅಕ್ಷರ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

1018

ಅಕ್ಷರ ಗ್ರಂಥಾ...
ಕನ್ನಡ ವಿ.ವಿ. ಹಂ...

ಅಕ್ಷರ ಗ್ರಂಥಾಲಯ
ಕನ್ನಡ ವಿ.ವಿ. ಹಂಪಿ

ಹಸಿವಿನ ಪರಿಕಲ್ಪನೆ: ಪ್ರಾತಿನಿಧಿಕ ಕನ್ನಡ ಸಣ್ಣಕತೆಗಳ ಹಿನ್ನೆಲೆಯಲ್ಲಿ

(ಪಿಎಚ್. ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ ಮಹಾಪ್ರಬಂಧ)

ಸಂಶೋಧಕರು

ಮಂಜುನಾಥ ಎಂ. ಎಂ.

ಮಾರ್ಗದರ್ಶಕರು

ಡಾ. ವರದರಾಜ ಚಂದ್ರಗಿರಿ

ಪ್ರಾಂಶುಪಾಲರು
ಸರಕಾರಿ ಪ್ರಥಮ ದರ್ಜೆ ಕಾಲೇಜು
ಬೆಟ್ಟಂಪಾಡಿ, ಪುತ್ತೂರು, ದ. ಕ.

ಭಾಷಾ ನಿಕಾಯ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬.

ಮಾನ್ಯತಾ ಕೇಂದ್ರ
ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು

೨೦೧೯

ಅಕ್ಷರ ಗ್ರಂಥಾಲಯ

141333

8K0.9
MAH h

ಸಂಶೋಧಕರ ಪ್ರಮಾಣ ಪತ್ರ

ಡಾ. ವರದರಾಜ ಚಂದ್ರಗಿರಿಯವರ ಮಾರ್ಗದರ್ಶನದಲ್ಲಿ **"ಹಸಿವಿನ ಪರಿಕಲ್ಪನೆ: ಪ್ರಾತಿನಿಧಿಕ ಕನ್ನಡ ಸಣ್ಣಕತೆಗಳ ಹಿನ್ನೆಲೆಯಲ್ಲಿ"** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಸಿದ್ಧಪಡಿಸಿ, ಪಿಎಚ್. ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಭಾಷಾನಿಕಾಯದ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿ ಇಲ್ಲವೇ ಇತರೆ ಉದ್ದೇಶಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಎಂ.ಎಂ.ಮಂಜುನಾಥ

ಸಂಶೋಧಕರು

ದಿನಾಂಕ: ೧೮.೧೧.೨೦೧೯

ಸ್ಥಳ: ಮಂಗಳೂರು

ಮಂಜುನಾಥ ಎಂ. ಎಂ.

ಮಾರ್ಗದರ್ಶಕರ ದೃಢೀಕರಣ ಪತ್ರ

ಮಂಜುನಾಥ ಎಂ.ಎಂ ರವರು ನನ್ನ ಮಾರ್ಗದರ್ಶನದಲ್ಲಿ **"ಹಸಿವಿನ ಪರಿಕಲ್ಪನೆ: ಪ್ರಾತಿನಿಧಿಕ ಕನ್ನಡ ಸಣ್ಣಕತೆಗಳ ಹಿನ್ನೆಲೆಯಲ್ಲಿ"** ಎಂಬ ಶೀರ್ಷಿಕೆಯ ಸಂಶೋಧನಾ ಮಹಾಪ್ರಬಂಧವನ್ನು ಸಿದ್ಧಪಡಿಸಿದ್ದು, ಕನ್ನಡ ವಿಶ್ವವಿದ್ಯಾಲಯದ ಭಾಷಾನಿಕಾಯದ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಪಿಎಚ್. ಡಿ. ಪದವಿಗಾಗಿ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿ ಇಲ್ಲವೇ ಇತರೆ ಉದ್ದೇಶಗಳಿಗಾಗಿ ಬಳಸಿಕೊಂಡಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

ದಿನಾಂಕ: ೧೬.೧೧.೨೦೧೯

ಸ್ಥಳ : ಮಂಗಳೂರು

ಡಾ. ವರದರಾಜ ಚಂದ್ರಗಿರಿ
ಪ್ರಾಂಶುಪಾಲರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಬೆಟ್ಟಂಪಾಡಿ, ಪುತ್ತೂರು. ದ.ಕ

ಹಸಿವಿನ ಪರಿಕಲ್ಪನೆ: ಪ್ರಾತಿನಿಧಿಕ ಕನ್ನಡ ಸಣ್ಣಕತೆಗಳ ಹಿನ್ನೆಲೆಯಲ್ಲಿ

ಅಧ್ಯಾಯ ೧: ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವೈಧಾನಿಕತೆ

೧.೧ ಪ್ರಸ್ತಾವನೆ

೧.೨ ಅಧ್ಯಯನದ ಉದ್ದೇಶ

೧.೩ ಅಧ್ಯಯನದ ವ್ಯಾಪ್ತಿ ಮತ್ತು ಮಹತ್ತ್ವ

೧.೪ ಅಧ್ಯಯನದ ವಿಧಾನ

೧.೫ ಈವರೆಗಿನ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವೈಧಾನಿಕತೆ

೧.೧ ಪ್ರಸ್ತಾವನೆ

ಆಧುನಿಕ ಕನ್ನಡ ಸಾಹಿತ್ಯದ ಪ್ರಧಾನ ನೆಲೆಗಳಾದ ನವೋದಯ, ಪ್ರಗತಿಶೀಲ, ನವ್ಯ, ದಲಿತ-ಬಂಡಾಯ ಚಳವಳಿಗಳ ಅನೇಕ ಉತ್ಪನ್ನಗಳಲ್ಲಿ ಕಥಾಸಾಹಿತ್ಯವೂ ಒಂದು. ವಸಾಹತುಶಾಹಿ ಅನುಭವ ಹಾಗೂ ಅನೇಕ ವಿಚಾರವಾದಗಳ ಪ್ರಭಾವ ಇತ್ಯಾದಿಗಳಿಂದ ರೂಪುಗೊಂಡ ಮೇಲಿನ ಎಲ್ಲಾ ಸಾಹಿತ್ಯ ಚಳವಳಿಗಳು ಸಾಹಿತ್ಯದ ಆಕಾರಗಳಲ್ಲೂ ಕೂಡಾ ಅನೇಕ ಸ್ವೀಕೃತಿಗಳನ್ನು ಪಡೆಯುವುದರ ಮೂಲಕ ಪ್ರೇರಣೆ-ಪ್ರಭಾವಗಳನ್ನು ಪಡೆದುಕೊಂಡಿರುವುದು ಸರ್ವವಿಧಿತ. ವಸಾಹತು ಪ್ರಭಾವದಿಂದ ರೂಪು ಪಡೆದು, ಕನ್ನಡದಲ್ಲಿ ತನ್ನದೇ ಆದ ವಿಶಿಷ್ಟತೆಯನ್ನು ಬೆಳೆಸಿಕೊಂಡ ಗದ್ಯಕಥನದಲ್ಲಿ ಕಥಾಸಾಹಿತ್ಯ ಪ್ರಮುಖವಾದುದು. ಪಂಜೆ, ಮಾಸ್ತಿಯವರಿಂದ ಆರಂಭಗೊಂಡು ಇಲ್ಲಿಯವರೆಗೆ ಕನ್ನಡ ಸಣ್ಣ ಕಥೆಗಳ ಪರಂಪರೆ ದೀರ್ಘ ಹಾಗೂ ವಿಸ್ತಾರವಾದುದು.

ಮೇಲೆ ಹೇಳಿದ ಪ್ರೇರಣೆ ಪ್ರಭಾವಗಳ ನಿರಾಕರಣೆ ಅಸಾಧ್ಯವಾದರೂ ಕನ್ನಡ ಸಣ್ಣ ಕಥೆಗಳು ಒಂದು ವಿಶಿಷ್ಟತೆಯನ್ನು, ತಾಜಾತನವನ್ನು, ನಿರೂಪಣೆಯ ಕಾವ್ಯಾತ್ಮಕ ಶೈಲಿಯನ್ನು ತಮ್ಮದಾಗಿಸಿಕೊಂಡಿವೆ. ಈ ಹಿನ್ನೆಲೆಯಲ್ಲಿ ವಿವಿಧ ಸಾಹಿತ್ಯ ಚಳವಳಿಗಳ ಸಂದರ್ಭದಲ್ಲಿ ಕನ್ನಡ ಸೃಜನಶೀಲ ಮನಸ್ಸು ಕನ್ನಡದ ಅಂದಿನ ಪರಿಸರ-ಸಂದರ್ಭಗಳಿಗೆ ಪ್ರತಿಕ್ರಿಯಿಸಿದ ವಿಧಾನವನ್ನು ಅವಲೋಕಿಸುವುದಾದರೆ ಅದು ನಿಜವಾಗಿಯೂ ಒಂದು ಬಗೆಯ ಪ್ರತಿಭಟನೆಯ ಪ್ರವೃತ್ತಿಯಾಗಿದೆ. ಪ್ರತಿಭಟನೆ ಎಂದರೆ, ಪ್ರತಿರೋಧ, ವಿರೋಧ, ಪ್ರಶ್ನೆ ಮಾಡು, ನಿರಾಕರಿಸು, ಮುಂತಾದ ಅರ್ಥವ್ಯಾಪ್ತಿಯ ಹಿನ್ನೆಲೆಯಲ್ಲಿ ಬಂಡಾಯ ಶಬ್ದ ನಿರೂಪಿತವಾಗಿದೆ. ಎಲ್ಲ ನಿರ್ಬಂಧಗಳಾಚೆ, ಎಲ್ಲಾ ಶೋಷಣೆಯ ವಿರೋಧದೊಂದಿಗೆ ಸಮಾನತೆ ಮತ್ತು ಸ್ವಾತಂತ್ರ್ಯ ಸಾಧಿಸುವ ಉದ್ದೇಶ ಈ ಬಂಡಾಯಕ್ಕಿದೆ. ಈ ಹಿನ್ನೆಲೆಯಲ್ಲಿ ರೂಪಿತಗೊಂಡ ವಿವಿಧ ಸಾಹಿತ್ಯ ಚಳವಳಿಗಳ ಪ್ರಾತಿನಿಧಿಕ ಕಥೆಗಾರರ ಸಣ್ಣ ಕತೆಗಳಲ್ಲಿ 'ಹಸಿವಿನ ಬಹು ನೆಲೆ'ಗಳ ಹುಡುಕಾಟವನ್ನು ಈ ಪ್ರಬಂಧದಲ್ಲಿ ಚರ್ಚಿಸಲಾಗಿದೆ.

ಅಧಿಕಾರಶಾಹಿ, ಪುರೋಹಿತಶಾಹಿ, ಬಂಡವಾಳಶಾಹಿ ವ್ಯವಸ್ಥೆಗಳು ಹಾಗೂ ಲಿಂಗ ಅಸಮಾನತೆಯ ಸಮಾಜ ಶೋಷಣೆಯ ಅಸ್ತ್ರದಿಂದ ಸಾಮಾನ್ಯ ಮನುಷ್ಯ ಹಸಿವಿನಿಂದ ನಲುಗಿದ ಹಾಗೂ ಆ ಹಸಿವಿನ ಪರಿಣಾಮಗಳೇ ಪ್ರತಿಭಟನೆಯ, ಸ್ವಾವಲಂಬನೆಯ, ಸ್ವಾತಂತ್ರ್ಯದ, ಸಮಾನತೆಯ ಅಸ್ತ್ರಗಳಾಗಿ ಪ್ರಯೋಗವಾಗಿರುವುದನ್ನು ಪ್ರಾತಿನಿಧಿಕ ಕಥೆಗಾರರ ಕಥೆಗಳ ಅಭಿವ್ಯಕ್ತಿಯಲ್ಲಿ ಕಾಣಬಹುದಾಗಿದೆ. ಈ ರೀತಿ ಹಸಿವಿನ ಅನಾವರಣದೊಂದಿಗೆ ರೂಪುಗೊಳ್ಳುವ ಪ್ರತಿರೋಧದ ನೆಲೆಗಳನ್ನು ಕೂಡಾ ಏಕಕಾಲಕ್ಕೆ ಧ್ವನಿಸುವ ವಿಧಾನಗಳನ್ನು, ಸಾಧ್ಯತೆಗಳನ್ನು ಈ ಪ್ರಬಂಧ ಒಳಗೊಂಡಿದೆ.

೧.೨ ಅಧ್ಯಯನದ ಉದ್ದೇಶ

ಹಲವು ಕಥೆ-ಕಾದಂಬರಿಗಳನ್ನು ಗಮನಿಸಿದಾಗ ಅದರಲ್ಲಿ ಚಿತ್ರಣಗೊಂಡಿರುವ ಹಸಿವು ಮತ್ತು ಹಸಿವಿನಿಂದಾಗುವ ತಲ್ಲಣಗಳು ಪ್ರಭಾವ ಬೀರಿದವು. ಹಸಿವು ಮೇಲ್ನೋಟಕ್ಕೆ ಇದೊಂದು ಭೌತಿಕ ಕ್ರಿಯೆಯಾದರೂ ಹಸಿವಿನ ಹಿನ್ನೆಲೆ, ಕಾರಣ ಅದರಿಂದಾಗುವ ಸಾಮಾಜಿಕ ದುಷ್ಪರಿಣಾಮಗಳು, ಆ ಮೂಲಕ ಹಸಿವನ್ನು ನೀಗಿಸುವ ಸಲುವಾಗಿ ಕೆಳವರ್ಗ ತೆಗೆದುಕೊಳ್ಳುವ ನಕಾರಾತ್ಮಕ ತೀರ್ಮಾನ ಸಮಾಜದ ಸ್ವಾಸ್ಥ್ಯವನ್ನು ಕದಡುವ ಬಗೆ ಮನ ಕಲಕುವಂಥದ್ದು.

ಈ ದೇಶದ ದಾರಿದ್ರ್ಯದ ಹೆಸರಿನಲ್ಲಿ ಹಸಿವಿನ ಕೆಲವು ಮುಖಗಳನ್ನು ಪರಿಚಯಿಸುವುದು. ಇದೊಂದು ಸಾಮಾಜಿಕ ಬದಲಾವಣೆಗೆ, ಹೊಸ ಚಿಂತನೆಗೆ ನಮ್ಮನ್ನು ನಾವೇ ಒರೆಗೆ ಹಚ್ಚಿಕೊಳ್ಳಬೇಕಾಗಿದೆ ಎಂಬ ಉದ್ದೇಶದಿಂದ ಈ ವಿಷಯವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ನಮ್ಮ ಆಹಾರಕ್ರಮ, ಆಲೋಚನಾಕ್ರಮ ಬದಲಾಯಿಸಿಕೊಳ್ಳಬೇಕು ಎಂಬುದು ತತ್ವಶಾಸ್ತ್ರದವರ ವಾದವಾದರೂ ಒಂದು ಹೊತ್ತಿನ ಅನ್ನವೇ ಸಿಗದ ಒಂದು ವರ್ಗಕ್ಕೆ ಇದು ಸಫಲವಾಗುವುದಾದರೂ ಹೇಗೆ? ಮೂಲಭೂತ ಸಮಸ್ಯೆಯ ಅರಿವಿನೆಡೆಗೆ ಈ ಅಧ್ಯಯನ ನೆರವಾಗಲಿದೆ. ಇದರ ಮೂಲಕ ಬರಹಗಾರ ಸಮಸ್ಯೆಯನ್ನು ಪರಿಚಯಿಸಬಹುದೇ ಹೊರತು ಪೂರ್ಣ ಪರಿಹಾರ ಸೂಚಿಸಲು ಸಾಧ್ಯವಿಲ್ಲ. ಮುಂದಿನ ದಿನಗಳಲ್ಲಿ ಪರಿಹಾರಕ್ಕೆ ನಾಂದಿಯಾಗಬಹುದು.

ಹಸಿವನ್ನು ಬಣ್ಣಿಸುವುದು ಕಷ್ಟ. ಅನುಭವಿಸುವುದು ಕಷ್ಟ. ಅನುಭವಿಸಿ ಬಣ್ಣಿಸ ಹೊರಟರೆ ಅದರಲ್ಲೂ ಆತ್ಮರತಿ ಮತ್ತು ಕೃತ್ರಿಮತೆ ಇಣುಕುವ ಸಾಧ್ಯತೆಯೇ ಹೆಚ್ಚು. ಹಸಿವೆಯಲ್ಲೂ ನೂರೆಂಟು ಬಗೆಗಳಿವೆ. ಕಣ್ಣೆದುರಿಗೆ ಮೃಷ್ಟಾನ್ನ ಭೋಜನವಿದ್ದರೂ ಅನಾರೋಗ್ಯದ ಕಾರಣದಿಂದ ತಿನ್ನಲಾಗದವರದ್ದು ಒಂದು ಬಗೆ. ಕಣ್ಣೆದುರಿಗೆ ಭೋಜನ ಇಟ್ಟುಕೊಂಡು ತಿನ್ನುವುದಿಲ್ಲ ಎಂದು ಹಟ ಹಿಡಿದು ಕೂರುವವರದ್ದು ಇನ್ನೊಂದು ಬಗೆ. ಊಟ ಎನ್ನುವುದೇ ಕೆಲವರಿಗೆ ಮಾಯಾಮೃಗವಾಗಿರುವ ಬಡವನದ್ದು ನೈಜ ಬಗೆ. ಬಡತನ ಮತ್ತು ಹಸಿವು ಎರಡು ಕಾಲು ಚಾಚಿ ಕುಳಿತಿರುವ ದೇಶಗಳಲ್ಲಿ ಭಾರತವೂ ಒಂದು (ಇತರ ದೇಶಗಳೆಂದರೆ ಸೋಮಾಲಿಯಾ, ದಕ್ಷಿಣ ಸುಡಾನ್). ಕುಡಿಯಲು ನೀರು, ತಿನ್ನಲು ಕಾಳು ಸಿಗದಿರುವ ಸಂದರ್ಭದಲ್ಲಿ ಈ ನೈಜ ಹಸಿವೆಯ ಅನುಭವವನ್ನು ಬಣ್ಣಿಸುವವರು ಯಾರು?

'ಹಸಿದು ಕುಳಿತವನಿಗೆ ಅದನ್ನು ಬಣ್ಣಿಸುವ ಅಗತ್ಯವಾಗಲೀ, ಅಷ್ಟು ಶಕ್ತಿಯಾಗಲೀ ಇರುವುದಿಲ್ಲ. ಹಸಿವನ್ನು ಅದರ ಎಲ್ಲಾ ಬಗೆಗಳೊಂದಿಗೆ ಅನುಭವಿಸಿದವನಿಗೆ ಮಾತ್ರ ಇನ್ನೊಬ್ಬನ ಹಸಿವು ಅರ್ಥವಾಗಬಹುದು.'[೧]

ಒಡಲುಗೊಂಡವ ಹಸಿವ, ಒಡಲುಗೊಂಡವ ಹುಸಿವ' ಎಂಬ ಮಾತಿನಲ್ಲಿ ಮತ್ತು 'ಹಸಿವೆಂಬ ಹೆಬ್ಬಾವು ಬಸಿರು ಬಂದು ಹಿಡಿದಡೆ, ವಿಷವೇರಿತ್ತಯ್ಯ ಆಪಾದಮಸ್ತಕಕ್ಕೆ, ಹಸಿವಿಗನವನ್ನಿಕ್ಕಿ ವಿಷವನು ಇಳುಹಬಲ್ಲಡೆ ವಸುಧೆಯೊಳಗಾತನೇ - ಗಾರುಡಿಗ' ಎಂಬ ವಚನದಲ್ಲಿ ಹಸಿವಿನ ತೀಕ್ಷ್ಣತೆಯನ್ನು, ಹಸಿವಿನ ಪರಿಹಾರದ ಮಹತ್ತ್ವವನ್ನು ಅರಿಯಬಹುದು.

ಕನಕದಾಸರ 'ಎಲ್ಲಾರು ಮಾಡುವುದು ಹೊಟ್ಟೆಗಾಗಿ' ಎಂಬ ಕೀರ್ತನೆಯಲ್ಲಿ ಮನುಷ್ಯ ಉದರದ ನಿಮಿತ್ತವಾಗಿ ಬೇರೆ ಬೇರೆ ವೇಷ ಹಾಕಿಕೊಳ್ಳುವುದು ವಿಶೇಷವಾದುದೇನಲ್ಲ.

'ಮನುಷ್ಯನಿಗೆ ಎರಡು ಕಣಿವೆ ಸಂಪತ್ತು ಸಿಕ್ಕಿದರೂ ಮೂರನೆಯದಕ್ಕಾಗಿ ಹಾತೊರೆಯುತ್ತಾನೆ. ಅವನ ಹೊಟ್ಟೆಯನ್ನು ಅನ್ನ ಮಾತ್ರ ತುಂಬಬಲ್ಲದು' ಎನ್ನುವ ಪ್ರವಾದಿ ವಚನ ಇದನ್ನು ಸ್ಪಷ್ಟಪಡಿಸುತ್ತದೆ. ಉಪವಾಸ ಕಲಿಸುವ ಪಾಠವೆಂದರೆ, ವಾಂಛೆಯನ್ನು ಗೆಲ್ಲುವುದು, ತಿನ್ನುವ, ಕುಡಿಯುವ, ವೈಮನಸ್ಸುಗಳನ್ನು ತಣಿಸುವ, ಸುಖಿಸುವ ಎಲ್ಲಾ ವಾಂಛೆಗಳಿಗೆ ಕಡಿವಾಣ ಹಾಕುವ ವಿದ್ಯೆಯನ್ನು ಕರಗತ ಮಾಡಿಕೊಳ್ಳಲು ಸಾಧ್ಯ ಎಂಬುದು. ಹೊಟ್ಟೆ ತುಂಬಿದವನಿಗೆ ಜಗತ್ತಿನ ಭೋಗಭಾಗ್ಯಗಳೆರಡೂ ಸಂತೋಷವನ್ನು ನೀಡುತ್ತವೆ. ಹೊಟ್ಟೆ ಖಾಲಿ ಇದ್ದವನಿಗೆ (ಹಸಿದವನಿಗೆ) ಇಡೀ ಜಗತ್ತೇ ಕ್ಷುಲ್ಲಕವೆಂಬಂತೆ ಕಾಣಿಸುತ್ತದೆ. ದೊಡ್ಡ ಕರುಳಿನಿಂದ ಹೊರಟು ಧಮನಿ ಧಮನಿಗಳಲ್ಲಿ ಹರಿದಾಡುವ ಹಸಿವಿನ ನರಳುವಿಕೆ ಮನುಷ್ಯನ ಒಳಗನ್ನು ಇಂಚಿಂಚಾಗಿ ಶುದ್ಧೀಕರಿಸುತ್ತದೆ.

ಪ್ರಾಣಿಗಳಲ್ಲೆಲ್ಲಾ ಮೇಲ್ಪಟ್ಟದ ಜೀವಿಯಾಗಿರುವ ಮನುಷ್ಯನ ಮೂಲಭೂತ ಅವಶ್ಯಕತೆಗಳೆಂದರೆ ಅನ್ನ, ಬಟ್ಟೆ, ವಸತಿ. ಈ ಮೂರು ಅವಶ್ಯಕತೆಗಳ ನಂತರದ್ದು ಶಿಕ್ಷಣ. ತದನಂತರದ ಅವಶ್ಯಕತೆಗಳು ಅವರವರ ಸಾಮರ್ಥ್ಯ, ಪ್ರತಿಭೆಗೆ ಸಲ್ಲುವಂಥವುಗಳು.

ನಮ್ಮದು ಸಮೃದ್ಧ ದೇಶವಾದರೂ ಸಮಾನತೆಗೆ, ಉತ್ತಮ ಬದುಕಿಗಾಗಿ ನಿರಂತರ ಹೋರಾಟ ನಡೆದೇ ಇದೆ. ಶತಶತಮಾನಗಳಿಂದ ಶೋಷಣೆಗೆ ಒಳಗಾದ ಜನ ಸಮಪಾಲು-ಸಮಬಾಳು ಪಡೆಯಲು ನಿರಂತರ ಪ್ರಯತ್ನದಲ್ಲಿದ್ದಾರೆ. ಅದರಲ್ಲೂ ಇಲ್ಲಿ ಎಲ್ಲ ಇದ್ದರೂ 'ಯಾರಿಗುಂಟು ಯಾರಿಗಿಲ್ಲ' ಎನ್ನುವ ವಾತಾವರಣವಿದೆ. ಬಡವರ-ನಿರ್ಗತಿಕರ ಹಸಿವಿನ-ಬದುಕಿನ ಆರ್ತ ನೋವಿಗೆ ಮನ ಮಿಡಿಯುವವರೇ ವಿರಳವಾಗಿದ್ದಾರೆ.

ತಿನ್ನಲು ತುತ್ತು ಅನ್ನವೂ ಸಿಗದ ಜನ ಸಮುದಾಯ ನಗುವುದಾದರೆ ಹೇಗೆ ಮತ್ತು ಎಂದು? ಅವರ ಹಸಿವನ್ನು ನೀಗಿಸಿ, ದುಗುಡ ದುಮ್ಮಾನಗಳಿಂದ ದೂರ ಮಾಡಿ ಬಡತನವೆನ್ನುವ ಸ್ಥಿತಿಯಿಂದ ಮುಕ್ತಿ ಕೊಡಿಸಿ ಅವರ ಬದುಕಲ್ಲಿ ನಗು ಮೂಡಿಸಿ, ಭರವಸೆಯ ಬೆಳಕು ಚೆಲ್ಲಿ ಶೋಷಿತರ ಪರ ನಿಲ್ಲಬೇಕಾಗಿದೆ. ಸಾಮಾಜಿಕ ಅಸಮಾನತೆಯು ಬಡವರನ್ನು ಹಸಿವಿನ ಸುಳಿಯಲ್ಲಿ ಸಿಲುಕಿಸಿ ನರಳಿಸುತ್ತಿದೆ. ಹಸಿವೆಯ ನೋವಿನಿಂದ ಬಳಲುವವರು ಸಂತೋಷದಿಂದಿರಲು ಸಾಧ್ಯವೇ? ಹೊಟ್ಟೆಗೆ ಅನ್ನವಿಲ್ಲದೇ ಬಳಲುವವರು ಶಕ್ತಿಯನ್ನು ಪಡೆಯುವುದಾದರೂ ಹೇಗೆ?

ಮನುಷ್ಯ-ಮನುಷ್ಯರ ನಡುವಿನಲ್ಲಿ ಹೊರಹೊಮ್ಮಬೇಕಾದ ಮಾನವೀಯತೆ, ಹೃದಯ ವೈಶಾಲ್ಯತೆಯು ಮರೆಯಾದಾಗ, ಮನುಷ್ಯ ಸ್ವಾರ್ಥಿಯಾದಾಗ ಸಮಾಜದಲ್ಲಿ ಸಮಾನತೆ ಬರಲು ಸಾಧ್ಯವಿಲ್ಲ. ಹಾಗೆಯೇ ಸರ್ವರಿಗೆ ಸಮಪಾಲು-ಸಮಬಾಳು ಲಭಿಸುವುದು ದುಸ್ತರವೇ. ಅಸಮಾನತೆಯೇ ಜಗದ ತುಂಬ ತುಂಬಿ ಉಳ್ಳವರು-ಇಲ್ಲದವರು ಎಂಬ ಎರಡು ವರ್ಗಗಳ ಸೃಷ್ಟಿಗೆ ನಾಂದಿಯಾಗುತ್ತದೆ. ಧನಿಕರು ಬಡವರನ್ನು ಶೋಷಿಸಲು ಪ್ರಯತ್ನಿಸುತ್ತಾರೆ. ಈ ಶೋಷಣೆಗೆ ಒಳಗಾಗುವ ಬಡವರು ಹಸಿವಿನಿಂದ, ಆರ್ಥಿಕ ಅಡಚಣೆಯಿಂದ ಕುಗ್ಗಿ

ಹೋಗುತ್ತಾರೆ. ಹಸಿದವರ ನೋವನ್ನು ನೋಯಬವರು ಅರಿಯಲು ಸಾಧ್ಯವೇ? ಹಸಿದ ಹೊಟ್ಟೆಗೆ ಬೇಕಾಗಿರುವುದು ಅನ್ನವೇ ಹೊರತು ಒಣಬೋಧೆಯಲ್ಲ. ಆದ್ದರಿಂದ ಹಸಿದವರಿಗೆ ಹಾರೈಕೆ ಮಾಡಿದರೆ ಹೊಟ್ಟೆ ತುಂಬಲು ಸಾಧ್ಯವಿಲ್ಲ. ಹಾರೈಸುವ ಕೈಗಳಿಗಿಂತ ನೀಡುವ ಕೈಗಳು ಶ್ರೇಷ್ಠ. ಹಸಿದವರಿಗೆ ಮೊದಲು ಅನ್ನ ಸಿಗಬೇಕು. ಮೊದಲು ಅನ್ನ, ನಂತರ ಉಳಿದದ್ದು.

ಈ ದೇಶದ ಬಡ ಜನರ ದಾರುಣ ಸ್ಥಿತಿಯನ್ನು ಕುರಿತು ಕವಯಿತ್ರಿ ಸುಕನ್ಯಾ ಮಾರುತಿಯವರು 'ಒಮ್ಮೆ ನಗುತ್ತೇವೆ' ಕವನದಲ್ಲಿ ಹೀಗೆ ಹೇಳಿದ್ದಾರೆ:

ದನಗಳಿಗೆ ಮೇವಿಲ್ಲ
ಜನಗಳಿಗೆ ನೀರಿಲ್ಲ
ಗಂಜಿಗೂ ಗತಿಯಿಲ್ಲ
ನನ್ನವರು ಸತ್ತ ದನಗಳ
ಕಿತ್ತು ತಿನ್ನುವುದನ್ನು
ಕಣ್ಣಾರೆ ಕಾಣುತ್ತಾ
ಕತಕತ ಕುದಿಯುವ
ಅಗ್ನಿಪರ್ವತವಾಗಿದ್ದೇನೆ

ಏನೂ ಮಾಡಲಾಗದೆ
ಅವರ ಸ್ಥಿತಿ ನೋಡಲಾಗದೆ
ಅವರಿಗಾಗಿ
ಮುಗಿಲತ್ತ ಕೈಚಾಚಿ
ನಿಂತಿದ್ದೇನೆ
ಧಗಧಗಿಸಿ ಉರಿವ
ಜ್ವಾಲಾಮುಖಿಯಾಗಿದ್ದೇನೆ.[೩]

ಈ ಕವಿತೆಯ ಮುಖ್ಯ ಆಶಯ ಜನಪರವಾದ ಜೀವಪರವಾದ ನಿಲುವನ್ನು ದಾಖಲಿಸುತ್ತದೆ. ಸಕಲ ಜೀವಿಗಳಲ್ಲೂ ಲೇಸನ್ನೇ ಬಯಸುವ ಪರಿ ಇದು. ಸಾಮಾಜಿಕ ಕಳಕಳಿಯುಳ್ಳವರು ಮಾತ್ರ ಸಮಾಜದ ದುಸ್ಥಿತಿಗೆ ಮರುಗಬಲ್ಲರು. ಬರವಣಿಗೆಯ ಮೂಲಕ ಅದಕ್ಕೊಂದು ನ್ಯಾಯ ದೊರಕಿಸಿಕೊಡಬಲ್ಲರು. ಶ್ರೀಮಂತರು ಮೋಜಿನ ಮದದಲ್ಲಿ ತಿಂದು ಎಸೆದದ್ದನ್ನು ತಮ್ಮದನ್ನಾಗಿಸಿಕೊಳ್ಳಲು ಅದೆಷ್ಟೋ ಹಸಿದ ಒಡಲುಗಳು ಒಂದು ಕೈಯಲ್ಲಿ ಎಂಜಲನ್ನವನ್ನು ಹೊಟ್ಟೆಗೆ ಹಾಕಿಕೊಳ್ಳುತ್ತಾ, ಇನ್ನೊಂದು ಕೈಯಲ್ಲಿ ನಾಯಿ, ಹಂದಿ, ಕ್ರಿಮಿ-ಕೀಟಗಳನ್ನು ನಿಯಂತ್ರಿಸುವ ಸಾಹಸಕಾರ್ಯವನ್ನು ಮಾಡಲೇಬೇಕಾಗಿದೆ. ಬಿಟ್ಟರೆ ತಮ್ಮ ಒಡಲ ಆಹಾರವಾಗಬೇಕಾದ ಎಂಜಲನ್ನ ನಾಯಿ-ಹಂದಿಗಳ-ಬೀದಿ ದನಗಳ ಪಾಲಾಗಿ, ಹಸಿದ ಹೊಟ್ಟೆಯಲ್ಲೇ ನೋಯಬೇಕಾದ ಸ್ಥಿತಿ ಇಂದಿಗೂ ಕಂಡು ಬರುತ್ತಿದೆ. ಅದಕ್ಕೆಂದೇ ಕನ್ನಡದ ಮೊದಲ ವಚನಕಾರ ಜೇಡರ ದಾಸಿಮಯ್ಯ ತನ್ನ ಒಂದು ವಚನದಲ್ಲಿ ಹೀಗೆ ಹೇಳಿದ್ದಾರೆ.

ಹಸಿವೆಂಬ ಹೆಬ್ಬಾವು ಬಸಿರ ಬಂದು ಹಿಡಿದಡೆ
ವಿಷವೇರಿತ್ತಯ್ಯಾ – ಆಪಾದ ಮಸ್ತಕಕ್ಕೆ

ಹಸಿವಿಗನ್ನವನ್ನಿಕ್ಕಿ ವಿಷವನಿಳುಹಬಲ್ಲಡೆ
ವಸುಧೆಯೊಳಗಾತನೇ ಗಾರುಡಿಗ ಕಾಣಾ ರಾಮನಾಥಾ![9]

ಹಸಿವು ಎಂಬುದು ಹೆಬ್ಬಾವಿದ್ದ ಹಾಗೆ. ಹಸಿವು ಆದ ತತ್‌ಕ್ಷಣ ಬೇಕಾದದ್ದು ಆಹಾರ. ಹಸಿವಾದ ಕೂಡಲೇ ಅದು ನಿವಾರಣೆಯಾಗದಿದ್ದಲ್ಲಿ ಅಡಿಯಿಂದ ಮುಡಿಯವರೆಗೆ ನಂಜು ವ್ಯಾಪಿಸಿಬಿಡುತ್ತದೆ. ನಂಜು ದೇಹವನ್ನು ವ್ಯಾಪಿಸುವ ಮೊದಲೇ ಹಸಿವಿಗೆ ಅನ್ನವನ್ನಿಡುವವನು ಭೂಮಿಯಲ್ಲಿ ಮನ್ನಣೆಯನ್ನು ಪಡೆಯುವ ಮಾಂತ್ರಿಕನಾಗುತ್ತಾನೆ ಎಂಬುದು ದಾಸಿಮಯ್ಯನ ಅಭಿಪ್ರಾಯ.

ಕನ್ನಡ ಸಾಹಿತ್ಯದಲ್ಲಿ ನೋವಿನ ನೆಲೆಗಳು ಹಲವಾರು. ಸಂಸ್ಕೃತಿಯ ಸ್ಥಿರತೆ ನೋವನ್ನು ತರುವಂತೆ ಸ್ಥಿತ್ಯಂತರವನ್ನೂ ತರುವುದು. ಪ್ರಾಚೀನ ವ್ಯವಸ್ಥೆ ಉಂಟು ಮಾಡುವ ನೋವಿನ ನೆಲೆ ಮತ್ತು ಆಧುನಿಕ ಸಮಾಜದ ಒತ್ತಡಗಳು ಉಂಟು ಮಾಡುವ ನೋವಿನ ತಳಮಳಗಳು ವಿಭಿನ್ನವಾಗಿದ್ದು ಅಭಿವ್ಯಕ್ತಿಯಲ್ಲೂ ಆ ಕಾಲದ ಸೂಕ್ಷ್ಮಗಳನ್ನು ಒಳಗೊಂಡಿರಲು ಸಾಧ್ಯ. ಮನುಷ್ಯನೆಂದ ಮೇಲೆ ನೋವಿನ ಅನುಭವ ಇದ್ದೇ ಇರುತ್ತದೆಯಾದರೂ ಪ್ರಭು ಮತ್ತು ಭೃತ್ಯನ ನೋವಿನ ನೆಲೆಗಳು ಬೇರೆ ಇರುತ್ತವೆ. ಗಂಡ ಮತ್ತು ಹೆಂಡತಿಯ ನೋವಿನ ಒತ್ತಡಗಳೂ ಬೇರೆ ಇರುತ್ತವೆ. ಜಾತಿ, ವರ್ಗ, ವರ್ಣ ವ್ಯವಸ್ಥೆಗಳಿಂದ ಹುಟ್ಟುವ ನೋವುಗಳೂ ಇವೆ. ನೋವಿಗೆ ಪ್ರಜ್ಞಾಪೂರ್ವಕ ಅಪ್ರಜ್ಞಾಪೂರ್ವಕ ನೆಲೆಗಳೂ ಇರಬಹುದು. ಈ ಎಲ್ಲಾ ನೋವುಗಳಿಗಿಂತ ತೀವ್ರತರವಾದ ನೋವು ಬಡತನ ಮತ್ತು ಅದರಿಂದುಂಟಾಗುವ ಹಸಿವಿನ ನೋವು – ಮನುಷ್ಯನನ್ನು ಅಣು ಅಣುವಾಗಿ ಹಿಂಸಿಸುತ್ತವೆ. ಹೀಗೆ ಪ್ರಾತಿನಿಧಿಕ ಕನ್ನಡದ ಸಣ್ಣ ಕತೆಗಳಲ್ಲಿ ಅಂತರ್ಗತವಾದ ಈ ವಿಶಿಷ್ಟ ಸಂಗತಿಯಾದ ಒಡಲ ಹಸಿವಿನ ನೆಲೆಯನ್ನು ಹುಡುಕುವ ಪ್ರಯತ್ನ ಇದಾಗಿದೆ.

ಈ ನಿಟ್ಟಿನಲ್ಲಿ ಅಧಿಕಾರಶಾಹಿ, ಬಂಡವಾಳಶಾಹಿ ಹಾಗೂ ಪುರೋಹಿತಶಾಹಿ ಮತ್ತು ಲಿಂಗ ಅಸಮಾನತೆ, ಸಾಮಾಜಿಕ ಮೌಢ್ಯಗಳನ್ನು ಬಂಡವಾಳವಾಗಿಸಿಕೊಂಡು ಶೋಷಣೆಯ ಅಸ್ತ್ರವಾಗಿ ಸಾಮಾನ್ಯ ಜನರನ್ನು 'ಹಸಿವಿನ ಕೂಪ'ಕ್ಕೆ ತಳ್ಳುವ ಮೂಲಕ ಜೀವನಪರ್ಯಂತ ಜೀತದಾಳಾಗಿ ಬದುಕುವ ಸಚಿತ್ರಗಳ ದಾಖಲೆಯನ್ನು ಪರಾಮರ್ಶಿಸುವುದು ಹಾಗೂ ಫಲಿತಗಳನ್ನು ಕೂಲಂಕಷವಾಗಿ ಚರ್ಚಿಸುವ, ಶೋಧಿಸುವ ಉದ್ದೇಶ 'ಹಸಿವಿನ ಪರಿಕಲ್ಪನೆ: ಪ್ರಾತಿನಿಧಿಕ ಕನ್ನಡ ಸಣ್ಣ ಕಥೆಗಳ ಹಿನ್ನೆಲೆಯಲ್ಲಿ' ಪ್ರಬಂಧದ ಆಶಯವಾಗಿದೆ.

೧.೩ ಅಧ್ಯಯನದ ವ್ಯಾಪ್ತಿ ಮತ್ತು ಮಹತ್ವ

ಕನ್ನಡ ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಕಥಾ ಪ್ರಕಾರವು ವಿಶಿಷ್ಟವಾಗಿದೆ. ಕಥೆಯು ಪಾಶ್ಚಾತ್ಯ ಪ್ರಭಾವನ್ನು ಹೊಂದಿದ್ದರೂ ಕೂಡಾ ಅದು ಕನ್ನಡದಲ್ಲಿ ತುಂಬಾ ವೇಗವಾಗಿ ಬೆಳವಣಿಗೆಯನ್ನು ಕಂಡುಕೊಂಡಿದೆ. ಅದರಲ್ಲಿಯೂ ಸಣ್ಣ ಕಥೆಗಳು ಹೆಚ್ಚು ಜನಪ್ರಿಯವೂ, ಜನಪರವೂ ಆದವುಗಳಾಗಿವೆ. ಕಿರಿದರಲ್ಲಿ ಹಿರಿದುದನ್ನು ಹೇಳುವ, ಸಮಾಜದ ಸಮಸ್ಯೆಗೆ ಅಕ್ಷರದ ಮೂಲಕ ರೂಪ ಕೊಟ್ಟು ಅದನ್ನು ವಾಚಕರಿಗೆ ಒಪ್ಪಿಸುವ, ಸಮಸ್ಯೆಯ ನಿವಾರಣೆಗೆ

ಸಮಾಜದಲ್ಲಿನ ಎಲ್ಲರನ್ನೂ ಹೊಣೆಗಾರರನ್ನಾಗಿಸುವ ಪ್ರಯತ್ನ ಮಾಡಿವೆ. ಒಟ್ಟಿನಲ್ಲಿ ಕನ್ನಡ ಕಥೆಗಳು ಸಹಜವಾಗಿ ತಮ್ಮ ಅಂತರಂಗದ ವೇದನೆಯನ್ನು ಓದುಗರಲ್ಲಿ ತೆರೆದಿಡುತ್ತವೆ.

ಈ ಕಥೆಗಳ ಹರವು ನವೋದಯ, ಪ್ರಗತಿಶೀಲ, ನವ್ಯ, ದಲಿತ-ಬಂಡಾಯ-ಸ್ತ್ರೀ ಸಂವೇದನೆಗಳೆಂಬ ಕಾಲಘಟ್ಟಗಳಲ್ಲಿ ಚಾಚಿಕೊಂಡಿದೆ. ಆಧುನಿಕ ಸಂವೇದನೆಗಳಿಗೆ ಸೂಕ್ತ ಪ್ರಕಾರ ಸಣ್ಣ ಕತೆಗಳಾಗಿದ್ದರೂ ನಿಜವಾದ ಅರ್ಥದಲ್ಲಿ ಅತ್ಯಂತ ವೇಗವಾಗಿ ಮತ್ತು ವೈಶಿಷ್ಟ್ಯಪೂರ್ಣವಾದ ಬೆಳವಣಿಗೆಯ ಬದಲಾವಣೆಗಳನ್ನು ಇಲ್ಲಿ ಕಾಣಬಹುದಾಗಿದೆ.

ಎಪ್ಪತ್ತರ ದಶಕದಲ್ಲಿಯೇ ಆರಂಭವಾದ, ಕಂಡು ಬಂದ ಆಧುನಿಕ ಕನ್ನಡ ಕಥಾ ಸಾಹಿತ್ಯವು ಚಾರಿತ್ರಿಕ, ಸಾಂಸ್ಕೃತಿಕ, ಸಾಮಾಜಿಕ ಒತ್ತಡಗಳನ್ನು ಒಳಗೊಂಡೇ ಸೃಷ್ಟಿಯಾದ ಸಾಹಿತ್ಯ ಪ್ರಕಾರಗಳಲ್ಲಿ ಒಂದಾಗಿದೆ.

ಎಪ್ಪತ್ತರ ದಶಕದಲ್ಲಿ ಸೃಷ್ಟಿಯಾದ ಕಥಾ ಸಾಹಿತ್ಯಕ್ಕೆ ಒಂದು ಹೊಸ ರೂಪ ಬಂದದ್ದು ಆ ಕಾಲಮಾನದಲ್ಲಿ ಹುಟ್ಟಿದ ಪ್ರತಿಭಾವಂತ ಸೃಜನಶೀಲ ವ್ಯಕ್ತಿತ್ವದ, ಸಾಮಾಜಿಕ ಹಿತ ಕಾಯುವ ಲೇಖಕ-ಲೇಖಕಿಯರಿಂದ. ಇಂತಹ ಸೃಜನಶೀಲ ಬರಹಗಾರರು ಯಾವುದೇ ಪಕ್ಷಪಾತವಿಲ್ಲದೆ ಸಮಾಜದ ಓರೆ-ಕೋರೆಗಳನ್ನು, ಸಮಸ್ಯೆಗಳನ್ನು, ದಲಿತ, ಸಾಮಾನ್ಯ, ಸ್ತ್ರೀ, ವಿಧವೆ, ವೃದ್ಧಾಪ್ಯ, ಬಡತನ, ಹಸಿವು, ಅನಕ್ಷರತೆ, ಮೂಢನಂಬಿಕೆ, ಸಂಪ್ರದಾಯಗಳ ಕುರಿತಾದ ಸಮಸ್ಯೆಗಳಿಗೆ ತಮ್ಮ ಧೋರಣೆಯನ್ನು ಓದುಗರ ಮುಂದಿಡುವ ಪ್ರಯತ್ನ ಮಾಡಿದ್ದಾರೆ.

ಪರಂಪರಾಗತವಾದ ಮೌಲ್ಯಗಳನ್ನು ಪ್ರಶ್ನಿಸುವ, ಅವಲೋಕಿಸುವ, ಧ್ವನಿಯಿಲ್ಲದವರಿಗೆ ಧ್ವನಿಯಾಗುವ, ಶೋಷಿತರ ಪ್ರತಿನಿಧಿಗಳಾಗುವ, ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸುವ, ಸ್ವಸ್ಥ ಸಮಾಜಕ್ಕೆ ಬುನಾದಿ ಹಾಕುವ ಸ್ತ್ರೀ ಪರವಾದ ಕಾಳಜಿಗಳನ್ನು ತೋರಿಸುವಂತಹ ಕಥೆಗಳು ರಚನೆಯಾಗಿ ಸ್ತ್ರೀ ಬರಹಗಾರ್ತಿಯರು ಬರೆಯಲು ಪ್ರೇರಣೆಯಾಯಿತು.

ಬಡವರ ಶೋಷಣೆಗೆ ಕಾರಣವಾದ ಸಾಮಾಜಿಕ, ಆರ್ಥಿಕ, ಧಾರ್ಮಿಕ ಮೌಲ್ಯಗಳನ್ನು ಪ್ರಶ್ನೆ ಮಾಡುವ ಮನೋಭಾವವನ್ನು ಕಥೆಗಾರರು ತಮ್ಮ ಕಥೆಗಳ ಮೂಲಕ ಹೆಚ್ಚಿಸಿಕೊಂಡು ಅಸಮಾನತೆಯ ವಿರುದ್ಧ ಶಾಂತಿಯುತವಾದ ಪ್ರತಿಭಟನೆಯನ್ನು ಮಾಡಿ ಶೋಷಕರ ಕಣ್ಣು ತೆರೆಸುವ ಪ್ರಯತ್ನ ಮಾಡಿದರು.

ಹಸಿವಿನ ಸಮಸ್ಯೆಗೆ ಪ್ರಮುಖ ಕಾರಣಗಳಾದ ಬಡತನ, ಆರ್ಥಿಕ, ಸಾಮಾಜಿಕ, ಧಾರ್ಮಿಕ ಅಸಮಾನತೆ, ಶಿಕ್ಷಣ ಹಕ್ಕು, ಸ್ತ್ರೀ ಶಿಕ್ಷಣ ಸ್ವಾತಂತ್ರ್ಯ ಮತ್ತು ಜಾತಿ-ಧರ್ಮದ ನಿವಾರಣೆಗೆ ಕಥೆಗಳಲ್ಲಿ ಯಾವ ಧೋರಣೆಗಳನ್ನಿಟ್ಟುಕೊಂಡು ನೋಡಿದ್ದಾರೆಂಬುದನ್ನು ನೋಡುವ ಪ್ರಯತ್ನ ಮಾಡಲಾಗಿದೆ.

ಬಡತನ, ಅನಕ್ಷರತೆ, ವಿಧವಾ ಸಮಸ್ಯೆ, ವರದಕ್ಷಿಣೆ ಸಮಸ್ಯೆ, ಸ್ತ್ರೀ ವಿದ್ಯಾಭ್ಯಾಸದ ಮಹತ್ವ, ವೃದ್ಧಾಪ್ಯದ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ಪ್ರಯತ್ನವನ್ನು ಆಯಾ ಕಾಲಘಟ್ಟದ ಕಥೆಗಾರರು ತಮ್ಮ ಕಥೆಗಳ ಮೂಲಕ ಮಾಡಿ ಸಮಾಜದ ಕಣ್ಣು ತೆರೆಸುವ ಪ್ರಯತ್ನ

ಮಾಡಿದ್ದಾರೆ. ಮಾನವೀಯ ನೆಲೆಯಲ್ಲಿ ತೆರೆದ ಕಣ್ಣಿಂದ ಸಮಾಜವನ್ನು ನೋಡಿದಾಗ ಮಾತ್ರ ಸಮಾಜದ ಸಮಸ್ಯೆಗಳು ಕಾಣುತ್ತವೆ ಹಾಗೂ ಅವುಗಳಿಗೆ ಪರಿಹಾರ ಸಾಧ್ಯ ಎಂಬ ಅಂಶಗಳನ್ನು ಅಧ್ಯಯನದ ವ್ಯಾಪ್ತಿಯಲ್ಲಿ ತರಲಾಗಿದೆ.

ಈ ಅಧ್ಯಯನದ ವ್ಯಾಪ್ತಿಯಲ್ಲಿ ನವೋದಯ ಧೋರಣೆಯ ಕಥೆಗಾರರ (ಕಾರಂತ, ಕುವೆಂಪು, ಶಾಂತರಸ) ಕಥೆಗಳನ್ನು, ಪ್ರಗತಿಶೀಲ ಮನೋಧರ್ಮದ (ಕೊರಡ್ಕಲ್ ಶ್ರೀನಿವಾಸ ರಾವ್, ನಿರಂಜನ, ಭಾರತೀಪ್ರಿಯ) ಕಥೆಗಾರರ ಕಥೆಗಳನ್ನು, ನವ್ಯ ಕಾಲಘಟ್ಟದ (ಲಂಕೇಶ್, ಬೆಸಗರಹಳ್ಳಿ ರಾಮಣ್ಣ) ಕಥೆಗಾರರ ಕಥೆಗಳನ್ನು, ನವ್ಯೋತ್ತರ ಕಾಲಘಟ್ಟದ (ದಲಿತ, ಬಂಡಾಯ) ಕುಂ. ವೀರಭದ್ರಪ್ಪ, ಬರಗೂರು ರಾಮಚಂದ್ರಪ್ಪ, ದೇವನೂರು ಮಹಾದೇವ, ಮೊಗಳ್ಳಿ ಗಣೇಶ್, ಬಿ. ಟಿ. ಲಲಿತಾ ನಾಯಕ್) ಕಥೆಗಾರರ ಕಥೆಗಳನ್ನು ಹಾಗೂ ಮುಸ್ಲಿಂ ಧರ್ಮದ (ಫಕೀರ್ ಮಹಮ್ಮದ್ ಕಟ್ಪಾಡಿ, ಬಾನು ಮುಸ್ತಾಕ್, ಬಿ. ಎಂ. ಬಶೀರ್, ಸಾರಾ ಅಬೂಬಕ್ಕರ್) ಕಥೆಗಾರರ ಕಥೆಗಳನ್ನು, ಸ್ತ್ರೀವರ್ಗದ (ಗೀತಾ ನಾಗಭೂಷಣ್, ಮಿತ್ರಾ ವೆಂಕಟ್ರಾಜ್, ಎಚ್. ನಾಗವೇಣಿ, ತುಳಸಿ ವೇಣುಗೋಪಾಲ್) ಕಥೆಗಾರರ ಕಥೆಗಳನ್ನು ತರಲಾಗಿದೆ.

ಈ ಸಂಶೋಧನಾ ಪ್ರಬಂಧದ ವ್ಯಾಪ್ತಿಯಲ್ಲಿ ಆಧುನಿಕ ಕಥಾ ಸಂವೇದನೆಯನ್ನು ರೂಪಿಸಿದ ವಸಾಹತುಶಾಹಿ ಪರಿಣಾಮ, ಕರ್ನಾಟಕದ ಸಾಹಿತ್ಯಿಕ, ರಾಜಕೀಯ ಹಾಗು ವೈಚಾರಿಕ ಚಳವಳಿಗಳ ಪ್ರಭಾವ, ಪ್ರೇರಣೆಗಳು ಹಾಗೂ ಕಾರ್ಲ್ ಮಾರ್ಕ್ಸ್, ಗಾಂಧಿ, ಅಂಬೇಡ್ಕರ್ ಮುಂತಾದ ವಿಚಾರವಾದಿಗಳ ಚಿಂತನೆಗಳನ್ನು ಬಳಸಿಕೊಳ್ಳಲಾಗಿದೆ. ಹಾಗೆಯೇ ಸ್ವತಂತ್ರ ಭಾರತದ ನಿಷ್ಫಲ ಯೋಜನೆಗಳಿಂದಾಗುವ ಪರಿಣಾಮಗಳನ್ನು ಕೂಡಾ ಕಥಾ ಸಂದರ್ಭಕ್ಕೆ ಬಳಸಿಕೊಳ್ಳಲಾಗಿದೆ. ಹೀಗೆ ವಿವಿಧ ಚಿಂತನೆಗಳು, ಸಂದರ್ಭಗಳು ಹಾಗೂ ವೈಚಾರಿಕ ಆಕೃತಿಗಳು ನಿರ್ಮಿಸಿ ಕೊಡುವ ಎಲ್ಲಾ ಚಿಂತನೆಗಳ ಫಲಿತಗಳನ್ನು ಈ ಅಧ್ಯಯನದ ವ್ಯಾಪ್ತಿಯಲ್ಲಿ ಸೇರಿಸಿಕೊಂಡು 'ಹಸಿವಿನ ಪರಿಕಲ್ಪನೆ – ಪ್ರಾತಿನಿಧಿಕ ಕನ್ನಡ ಸಣ್ಣ ಕತೆಗಳ ಹಿನ್ನೆಲೆಯಲ್ಲಿ' ಪ್ರಬಂಧದಲ್ಲಿ ಚರ್ಚಿಸಲಾಗಿದೆ.

ಮಹತ್ವ

ಸಮಾಜದಲ್ಲಿ ಮೊದಲಿನಿಂದಲೂ ಬಡವರ, ಕೂಲಿಕಾರರ, ನಿರ್ಗತಿಕರ ಬಗ್ಗೆ ತಾರತಮ್ಯ ಧೋರಣೆ ಎದ್ದು ಕಾಣುತ್ತದೆ. ಉಳ್ಳವರು ದುರ್ಬಲರ ಶ್ರಮವನ್ನಾಗಲೀ, ಪ್ರತಿಭೆಯನ್ನಾಗಲೀ ಗೌರವಿಸದೆ ಅವರ ಪರಿಶ್ರಮದಲ್ಲೇ ತಮ್ಮ ಬದುಕನ್ನು ಕಟ್ಟಿಕೊಳ್ಳಲು ಪ್ರಯತ್ನಿಸುತ್ತಾರೆ. ಶೋಷಿತರ ಸ್ವಾಭಿಮಾನಕ್ಕೆ ಧಕ್ಕೆ ಬಂದಾಗ ಅದರ ಪರಿಣಾಮವೇನು ಎಂಬುದನ್ನು ಮನಗಂಡಿದ್ದರೂ ಶೋಷಣೆ ಮಾತ್ರ ನಿಂತಿಲ್ಲ.

ಮೈಮುರಿದು ದುಡಿದರೂ ಕೂಡಾ ಹೊಟ್ಟೆ ತುಂಬುತ್ತಿರಲಿಲ್ಲ. ತನ್ನನ್ನೇ ನಂಬಿದ ಕುಟುಂಬದವರ ಪಾಡಂತೂ ಹೇಳತೀರದು. ಅದಕ್ಕೆಂದೇ ಬೆನ್ಓಕ್ರಿ (ಪ್ರಸಿದ್ಧ ನೈಜೀರಿಯನ್ ಕವಿ) 'ಬಡಜನರ ಬಳಿ ಇರುವ ಏಕೈಕ ಶಕ್ತಿ ಎಂದರೆ ಅವರ ಹಸಿವು ಮಾತ್ರ' ಎಂದಿರುವುದು.[೫]

ಬಡವರ ಹಸಿವು ಮತ್ತು ಬಡತನವನ್ನು ಅಸ್ತ್ರವಾಗಿಟ್ಟುಕೊಂಡು ದಬ್ಬಾಳಿಕೆ ಮಾಡುವ, ಶೋಷಿಸುವ ಶೋಷಕರು ಅನ್ನದ, ಹಣದ ಆಸೆಯನ್ನು ತೋರಿಸುತ್ತಾರೆಯೇ ವಿನಃ ತಮ್ಮ ಕೆಲಸ ತೀರಿದ ಬಳಿಕ ತಾವು ನುಡಿದದ್ದನ್ನು ಮರೆತುಬಿಡುತ್ತಾರೆ.

ಹೊಟ್ಟೆಯ ಮೇಲೆ 'ಕಟ್ಟೋಗರದ ಮೊಟ್ಟೆಯ' ಕಟ್ಟಿದಡೇನು ಹಸಿವು ಹೋಹುದೇ? ಎಂಬ ಅಲ್ಲಮನ ಮಾತಿನಲ್ಲಿ ಹಸಿವಿನ ನಿವಾರಣೆಗೆ ಅನ್ನ ಒಡಲಿನಲ್ಲಿಳಿಯಬೇಕು. ಅನ್ನದ ಗಂಟನ್ನು ಹೊಟ್ಟೆಯ ಮೇಲಿಟ್ಟ ಮಾತ್ರಕ್ಕೆ ಹೊಟ್ಟೆ ತುಂಬಲಾರದು.[೬]

'ಆಹಾರ ಮತ್ತು ಹಸಿವುಗಳ ಪರಿಭಾಷೆಯನ್ನು ಬಳಸಿಕೊಂಡಾಗ ಮಾತ್ರ ಯಾವುದೇ ವ್ಯವಸ್ಥೆಯ ಸಾರ್ಥಕ್ಯವನ್ನು ನಿರ್ಣಯಿಸಲು ಸಾಧ್ಯವೆಂದು ತೋರುತ್ತದೆ' ಎಂಬ ಡಾ. ಎಚ್. ಎಸ್. ಮುರಳೀಧರರ ಮಾತು ನಿಜವಾದುದು.[೭]

ಬಡವರ ಬದುಕು ಹಸನಾಗಬೇಕು, ಅವರ ಅಸಹಾಯಕತೆಗೆ ಸಮಾಜದ ಸಹಾಯ ಒದಗಬೇಕು. ಆಗ ಮಾತ್ರ ಆರೋಗ್ಯವಂತ ಸಮಾಜ ನಿರ್ಮಾಣ ಸಾಧ್ಯ. ಆದರೆ ಉಳ್ಳವರು ತಮ್ಮ ಸ್ವಾರ್ಥ, ಆಮಿಷಕ್ಕೆ ಬಡವರನ್ನು ದಾರುಣವಾಗಿ ದುಡಿಸಿಕೊಂಡರೇ ಹೊರತು ಅದಕ್ಕೆ ತಕ್ಕ ಪ್ರತಿಫಲವನ್ನು ನೀಡದೇ ಇದ್ದುದು ನಿಜಕ್ಕೂ ಅಮಾನುಷವಾದುದು.

ಅನ್ನದ ಮಹಿಮೆಯನ್ನು ಹಸಿದವರು ಮಾತ್ರ ಬಲ್ಲರು. ಹಸಿವಿನ ನೋವು ಸಾವಿನ ನೋವಿಗಿಂತಲೂ ತೀವ್ರವಾದುದು. ಅದಕ್ಕೆಂದೇ ಬೇಂದ್ರೆಯವರು ಅನ್ನದಾನ 'ಮಹಾಯಜ್ಞ' ಅಣ್ಣಗಳಿರಾ ಅನ್ನದಲ್ಲಿ ಮಣ್ಣ ಕಲಸಬೇಡಿರಿ ಎಂದದ್ದು.

ಇದುವರೆಗಿನ ಸಂಶೋಧನಾ ಪ್ರಬಂಧಗಳು, ಲೇಖನಗಳು, ಕಥೆ, ಕಾದಂಬರಿಗಳು ಹಲವು ಸಮಸ್ಯೆಗಳ ಚಿತ್ರಣವನ್ನು ನೀಡಿ ಓದುಗರನ್ನು ಎಚ್ಚರಿಸಿದ್ದರು ಕೂಡಾ ಹಸಿವನ್ನು ಒಂದು ಸಮಸ್ಯೆಯಾಗಿ ನೋಡಿದ್ದು ತುಂಬಾ ಕಡಿಮೆ. ಮನದ ಒಡಲು ತುಂಬುವ ಮೊದಲು ದೇಹದ ಒಡಲು ತುಂಬಬೇಕಾದ ಅಗತ್ಯವಿದೆ.

ಸಮಾಜದಲ್ಲಿ ಹಲವು ರೀತಿಯ ಸಮಸ್ಯೆಗಳಿವೆ. ಬಡತನ, ವಸತಿ, ವಸ್ತ್ರ, ವಿಧವಾ, ದೇವದಾಸಿ ಪದ್ಧತಿ, ಬಾಲ್ಯ ವಿವಾಹ, ವೃದ್ಧಾಪ್ಯ, ವರದಕ್ಷಿಣೆ ಈ ಎಲ್ಲಾ ಸಮಸ್ಯೆಗಳಿಗಿಂತಲೂ ಪ್ರಬಲವಾದುದು ಅನ್ನದ ಸಮಸ್ಯೆ. ಅಂದರೆ ಹಸಿವಿನ ಸಮಸ್ಯೆ. ಮನುಷ್ಯನ ಸಕಲ ಚಟುವಟಿಕೆಗಳಿಗೆ ಕಾರಣ ಆತನ ಚೈತನ್ಯ. ದೇಹಕ್ಕೆ ಚೈತನ್ಯ ತುಂಬುವುದು ಅನ್ನ. ಅನ್ನಕ್ಕೆ ಆದ್ಯತೆ ನೀಡಿದರೆ ಉಳಿದವುಗಳು ತನ್ನಿಂದ ತಾನೇ ನಿವಾರಣೆಯಾಗುತ್ತವೆ.

ಸಂವೇದನಾಶೀಲ ಬರಹಗಾರರು ಹಸಿವನ್ನು ನೋಡಿರುವ ರೀತಿ ಅದರ ಪರಿಹಾರೋಪಾಯ, ಇಡೀ ನಾಗರಿಕ ಸಮಾಜ ಹಸಿದವರ ಬಗ್ಗೆ ತೋರುವ ಪ್ರತಿಕ್ರಿಯೆ ಏನೆಂಬುದು ಇಲ್ಲಿ ಅನಾವರಣಗೊಂಡಿದೆ. ಹಸಿದವನ ಹೊಟ್ಟೆಯನ್ನು ಒಂದು ಮುಷ್ಠಿ ಅನ್ನದಿಂದ ತುಂಬಿಸಲು ಸಾಧ್ಯವಿದೆ.

ವಿಜ್ಞಾನ-ತಂತ್ರಜ್ಞಾನದಲ್ಲಿ ಮುಂದುವರಿದಿದ್ದರೂ ದೇಶದ ದಾರಿದ್ರ್ಯಕ್ಕೆ ಇನ್ನೂ ಮುಕ್ತಿ ಸಿಕ್ಕಿಲ್ಲ. ಆರ್ಥಿಕ ಶೋಷಣೆ, ನಿರುದ್ಯೋಗ, ಭ್ರಷ್ಟಾಚಾರ, ಬೆಲೆಯೇರಿಕೆ ಮೊದಲಾದವುಗಳಿಂದ ಬಡವರ ಹಸಿವು ಉಲ್ಬಣಗೊಂಡಿದೆ.

'ಆಹಾರೋತ್ಪಾದನೆಯ ಏರಿಕೆಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಜನಸಂಖ್ಯೆಯು ಏರುತ್ತಾ ಹೋಗಿರುವುದರಿಂದ ಭೂಮಾಲಿಕರು ಮತ್ತು ಬಂಡವಾಳಶಾಹಿಗಳು ಕೂಲಿಕಾರರನ್ನು ಮತ್ತು ಕಾರ್ಮಿಕರನ್ನು ಶೋಷಣೆ ಮಾಡಿದ್ದರಿಂದಲೇ ಬಡತನ ಮತ್ತು ಹಸಿವಿನ ಪ್ರಮಾಣ ಹೆಚ್ಚಾಗಲು, ಬೇರೂರಲು ಕಾರಣವಾಯಿತು" ಎಂದು ಅರ್ಥಶಾಸ್ತ್ರಜ್ಞ ಟಿ. ಆರ್. ಮಾಲ್ಥಸ್ ಹೇಳಿದ್ದಾರೆ.[೮]

ಹಸಿವು ಮತ್ತು ಬಡತನ ನಿವಾರಣೆಯಾಗದ ಹೊರತು ಯಾವ ದೇಶವೂ ಅಭಿವೃದ್ಧಿಯನ್ನು ಕಾಣಲು ಸಾಧ್ಯವಿಲ್ಲ. ಮೊದಲು ಹೊಟ್ಟೆಯ ಉದ್ಧಾರವಾಗಬೇಕು, ಆ ನಂತರ ದೇಶದ ಉದ್ಧಾರ ಪ್ರಗತಿಯ ಮಾತು. ಅಂತೆಯೇ ಈ ಎಲ್ಲಾ ಕಾರಣಗಳಿಂದ ಹಸಿವನ್ನು ನಿವಾರಿಸುವುದೇ ಮುಖ್ಯ. ಅದೇ ಇಂದಿನ ಮಹತ್ತ್ವ.

೧.೪ ಅಧ್ಯಯನದ ವಿಧಾನ

ಪ್ರಾತಿನಿಧಿಕ ಕಥಾ ಲೇಖಕರ ಕಥಾ ಸಾಹಿತ್ಯದ ಅಧ್ಯಯನದ ವಿಮರ್ಶಾ ನೆಲೆಗಳನ್ನು, ಅವರ ಕಥೆಗಳ ಅಧ್ಯಯನದ ಮೂಲಕವೇ ರೂಪಿಸಿಕೊಳ್ಳಬಹುದಾದ ಸಾಧ್ಯತೆಯನ್ನು ಈ ಅಧ್ಯಯನದ ಸಂದರ್ಭದಲ್ಲಿ ಪರಿಶೋಧಿಸಲಾಗಿದೆ. ಅಲ್ಲದೆ ಕಥೆಗಳ ರೂಪುಗೊಳ್ಳುವಿಕೆಯಲ್ಲಾದ ಪ್ರೇರಣೆ, ಪ್ರಭಾವಗಳನ್ನು ಈ ಅಧ್ಯಯನದ ವೈಧಾನಿಕತೆಯಲ್ಲಿ ಚರ್ಚಿಸಲಾಗಿದೆ. ಹಾಗೆಯೇ ಗಾಂಧಿ, ಅಂಬೇಡ್ಕರ್ ಹಾಗೂ ಆಧುನಿಕ ಬಂಡವಾಳಶಾಹಿಯ ವಿಸ್ತರಣೆಯ ರೂಪವಾದ ಜಾಗತೀಕರಣದ ಪ್ರಭಾವಗಳನ್ನು ಈ ಪ್ರಬಂಧಕ್ಕೆ ವೈಧಾನಿಕ ಆಕೃತಿಯ ಚೌಕಟ್ಟನ್ನೂ ರೂಪಿಸುವ ಸಂದರ್ಭದಲ್ಲಿ ಚರ್ಚಿಸಲಾಗಿದೆ. ಆದ್ದರಿಂದ "ಹಸಿವಿನ ಪರಿಕಲ್ಪನೆ: ಪ್ರಾತಿನಿಧಿಕ ಸಣ್ಣಕತೆಗಳ ಹಿನ್ನೆಲೆಯಲ್ಲಿ" ಪ್ರಬಂಧದಲ್ಲಿ ಚರ್ಚೆಯ ವಿಧಾನವು ಬಹುನೆಲೆಗಳ ಹುಡುಕಾಟದ ಸಾಧ್ಯತೆಯನ್ನು ಒಳಗೊಂಡಿದೆ.

೧.೫ ಈವರೆಗಿನ ಅಧ್ಯಯನಗಳ ಸಮೀಕ್ಷೆ

- 'ಆಧುನಿಕ ಕನ್ನಡ ಸಣ್ಣಕತೆಗಳಲ್ಲಿ ದಲಿತರ ಜೀವನ'ದ ಕುರಿತು ಸಿ. ಬಿ. ಹೊನ್ನಯ್ಯನವರು (ಬೆಂಗಳೂರು ವಿ. ವಿ., ೨೦೦೩) ಸಿ. ವೀರಣ್ಣನವರ ಮಾರ್ಗದರ್ಶನದಲ್ಲಿ ಸಂಶೋಧನಾ ಪ್ರಬಂಧವನ್ನು ರಚಿಸಿದ್ದಾರೆ. ದಲಿತರ ಸ್ಥಾನಮಾನ, ವೃತ್ತಿ, ಪ್ರತಿಭೆ, ಕೌಶಲ್ಯ, ಕೌಟುಂಬಿಕ ಸಮಸ್ಯೆ, ವಿವಾಹ, ಹಬ್ಬಗಳ ಆಚರಣೆ, ನೋವು-ನಲಿವುಗಳ ಕುರಿತು ಚರ್ಚಿಸಿದ್ದಾರೆ.
- 'ಕನ್ನಡದಲ್ಲಿ ಮುಸ್ಲಿಂ ಲೇಖಕರ ಕಥಾ ಸಾಹಿತ್ಯ'ದ ಕುರಿತು (ಕರ್ನಾಟಕ ವಿ. ವಿ., ೨೦೦೩) ಡಿ. ವಿ. ಹುಬ್ಬಳ್ಳಿಯವರ ಮಾರ್ಗದರ್ಶನದಲ್ಲಿ ಸಂಶೋಧನಾ ಪ್ರಬಂಧವನ್ನು ಶಿವಾನಂದ ಕಲ್ಹಣ್ಣನವರ ಪ್ರಕಟಿಸಿದ್ದಾರೆ.

- 'ಆಧುನಿಕ ಕನ್ನಡ ಕಥನ ಸಾಹಿತ್ಯದಲ್ಲಿ ವಾಸ್ತವದ ಪ್ರತಿನಿಧೀಕರಣ – ಒಂದು ಸ್ತ್ರೀವಾದಿ ಅಧ್ಯಯನ' ಎಂಬ ಪ್ರಬಂಧವನ್ನು ಎಲ್. ಜಿ. ಮೀರಾ (ಬೆಂಗಳೂರು ವಿ. ವಿ.) ಡಿ. ಆರ್. ನಾಗರಾಜ್ ಮಾರ್ಗದರ್ಶನದಲ್ಲಿ ರಚಿಸಿದ್ದಾರೆ.

- 'ಗುಲ್ಬರ್ಗ ಜಿಲ್ಲೆಯ ಸಣ್ಣಕತೆಗಳು' ಎಂಬ ಸಂಶೋಧನಾ ಪ್ರಬಂಧವನ್ನು ಸಿದ್ಧಲಿಂಗ ಚನ್ನಣ್ಣವಾಲೀಕರ್ (ಗುಲ್ಬರ್ಗ ವಿ. ವಿ., ೨೦೦೦) ಪ್ರಕಟಿಸಿದ್ದಾರೆ.

- 'ಕರಾವಳಿ ಕಥಾ ಸಾಹಿತ್ಯ'ಕ್ಕೆ ಸಂಬಂಧಿಸಿದಂತೆ ದ. ಕ. ಜಿಲ್ಲೆಯ ಸಣ್ಣ ಕಥೆಗಳನ್ನು ಕೇಂದ್ರೀಕರಿಸಿಕೊಂಡು ಸಬೀಹಾ ಭೂಮಿಗೌಡರು ಬಿ. ಎ. ವಿವೇಕ ರೈಯವರ ಮಾರ್ಗದರ್ಶನದಲ್ಲಿ (ಮಂಗಳೂರು ವಿ. ವಿ., ೧೯೯೨) 'ದಕ್ಷಿಣ ಕನ್ನಡ ಜಿಲ್ಲೆಯ ಸಣ್ಣ ಕತೆಗಳ ಹುಟ್ಟು ಮತ್ತು ಬೆಳವಣಿಗೆ' ಎಂಬ ಸಂಶೋಧನ ಪ್ರಬಂಧವನ್ನು ಬರೆದಿದ್ದಾರೆ.

- 'ಆಧುನಿಕ ಕನ್ನಡ ಕಥಾ ಸಾಹಿತ್ಯದಲ್ಲಿ ಜೈನ ಸಂವೇದನೆ' ಎಂಬ ಮಹಾಪ್ರಬಂಧವನ್ನು ಬಾಳಾ ಸಾಹೇಬರು ರಹಮತ್ ತರೀಕೆರೆಯವರ ಮಾರ್ಗದರ್ಶನದಲ್ಲಿ (ಹಂಪಿ ಕನ್ನಡ ವಿಶ್ವವಿದ್ಯಾಲಯ, ೨೦೦೪) ರಚಿಸಿದ್ದಾರೆ.

- '೧೯೭೦–೮೦ರ ದಶಕದ ಕನ್ನಡ ಸಣ್ಣ ಕತೆಗಳು – ಒಂದು ಅಧ್ಯಯನ' ಎಂಬ ಸಂಶೋಧನ ಪ್ರಬಂಧವನ್ನು ಮೋಹನ್ ಕುಂಟಾರ್‌ರವರು, ಪ್ರಭಾಕರ ವಿ. ಕುಲಕರ್ಣಿಯವರ ಮಾರ್ಗದರ್ಶನದಲ್ಲಿ (ಮಧುರೈ ಕಾಮರಾಜ ವಿ. ವಿ., ೧೯೯೩) ರಚಿಸಿದ್ದಾರೆ.

- 'ಕನ್ನಡ ಸಣ್ಣ ಕತೆಗಳು – ಒಂದು ಸ್ತ್ರೀವಾದಿ ಅಧ್ಯಯನ' ಎಂಬ ಸಂಶೋಧನ ಪ್ರಬಂಧವನ್ನು ಗಿರಿಜಾ ಶಾಸ್ತ್ರಿಯವರು, ತಾಳ್ತಜೆ ವಸಂತ ಕುಮಾರರ ಮಾರ್ಗದರ್ಶನದಲ್ಲಿ (ಮುಂಬೈ ವಿಶ್ವವಿದ್ಯಾಲಯ, ೧೯೯೪) ರಚಿಸಿದ್ದಾರೆ.

- 'ಪಿ. ಲಂಕೇಶ್ ಸಾಹಿತ್ಯ' ಕುರಿತ ಮಹಾಪ್ರಬಂಧವನ್ನು ಹಾಲತಿ ಸೋಮಶೇಖರ್ (ಮೈಸೂರು ವಿ. ವಿ., ೨೦೦೩) ರಚಿಸಿದ್ದಾರೆ.

- 'ಕನ್ನಡ ದಲಿತ ಕಥಾ ಸಾಹಿತ್ಯದ ಕುರಿತು' ಕಾಜುನಗೋಳರವರು (ಧಾರವಾಡ ವಿ. ವಿ.) ಸಂಶೋಧನಾ ಪ್ರಬಂಧವನ್ನು ರಚಿಸಿದ್ದಾರೆ.

- 'ಕನ್ನಡ ದಲಿತ ಕಥಾ ಸಾಹಿತ್ಯದಲ್ಲಿ ದಲಿತರ ಬದುಕಿನ ಸಂಘರ್ಷ ಮತ್ತು ಪರಿವರ್ತನೆ' ಕುರಿತ ಮಹಾ ಪ್ರಬಂಧವನ್ನು ಎನ್. ರವೀಂದ್ರರವರು (ಮೈಸೂರು ವಿ. ವಿ., ೨೦೦೬) ಗಂಗಾ ನಾಯ್ಕ್‌ರವರ ಮಾರ್ಗದರ್ಶನದಲ್ಲಿ ಪ್ರಕಟಿಸಿದ್ದಾರೆ.

- 'ಕನ್ನಡದಲ್ಲಿ ಮಹಿಳಾ ಕಥಾ ಸಾಹಿತ್ಯ'ದ ಕುರಿತು ಮಲ್ಲಿಕಾ ಘಂಟಿಯವರು (ಧಾರವಾಡ ಕರ್ನಾಟಕ ವಿ. ವಿ., ೧೯೯೧) ಮಹಾಪ್ರಬಂಧ ರಚಿಸಿದ್ದಾರೆ.

- ಎಸ್. ಶಿವಶಂಕರ್‌ರವರು 'ವೀಣಾಶಾಂತೇಶ್ವರಿ ಅವರ ಕಥೆಗಳು' ಕುರಿತು ಮಹಾಪ್ರಬಂಧವನ್ನು (ಧಾರವಾಡ ಕರ್ನಾಟಕ ವಿ. ವಿ., ೧೯೯೪) ರಚಿಸಿದ್ದಾರೆ.

- ನಂದಕುಮಾರ್ ಸ್ವಾಮಿಯವರು 'ಆಧುನಿಕ ಕನ್ನಡ ಮಹಿಳಾ ಕಥಾ ಸಾಹಿತ್ಯ' ಎಂಬ ಸಂಶೋಧನಾ ಪ್ರಬಂಧವನ್ನು (ಬೆಂಗಳೂರು ವಿ. ವಿ., ೨೦೦೩) ನರಹಳ್ಳಿ ಬಾಲಸುಬ್ರಹ್ಮಣ್ಯರವರ ಮಾರ್ಗದರ್ಶನದಲ್ಲಿ ರಚಿಸಿದ್ದಾರೆ.

೧.೫ ಅಧ್ಯಾಯಗಳ ವಿಂಗಡಣೆ

ಈ ಸಂಶೋಧನಾ ಮಹಾಪ್ರಬಂಧದ ವಿವರಣೆಯನ್ನು ಒಟ್ಟು ಆರು ಅಧ್ಯಾಯಗಳಲ್ಲಿ ಅನಾವರಣಗೊಳಿಸಲಾಗಿದೆ.

ಅಧ್ಯಾಯ ೧ರಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ವೈಧಾನಿಕತೆ ಮತ್ತು ಈವರೆಗಿನ ಅಧ್ಯಯನಗಳ ಸಮೀಕ್ಷೆಯ ಕುರಿತು ಚರ್ಚಿಸಲಾಗಿದೆ. ಅಧ್ಯಾಯ ೨ರಲ್ಲಿ ಸಾಮಾನ್ಯ ಮನುಷ್ಯ, ಹಸಿವು ಮತ್ತು ಹಸಿವಿನ ಪರಿಕಲ್ಪನೆಯ ಬಗ್ಗೆ ವಿವರಿಸಲಾಗಿದೆ. ಅಧ್ಯಾಯ ೩ರಲ್ಲಿ ಹಸಿವಿನ ಸಮಸ್ಯೆಯ ಕಾರಣಗಳ ಕುರಿತು ಚರ್ಚಿಸಲಾಗಿದೆ. ಅಧ್ಯಾಯ ೪ರಲ್ಲಿ ಹಸಿವನ್ನು ಕುರಿತ ಪ್ರಾತಿನಿಧಿಕ ಸಣ್ಣಕತೆಗಳ ಬಗ್ಗೆ ಚರ್ಚಿಸಲಾಗಿದೆ. ಅಧ್ಯಾಯ ೫ರಲ್ಲಿ ಹಸಿವಿನ ಸಮಸ್ಯೆಯ ನಿವಾರಣೆಯ ಕ್ರಮಗಳ ಕುರಿತು ಚರ್ಚಿಸಲಾಗಿದೆ. ಅಧ್ಯಾಯ ೬ರಲ್ಲಿ ಅಧ್ಯಯನದಲ್ಲಿ ಕಂಡುಕೊಂಡ ಫಲಿತಗಳನ್ನು ಮತ್ತು ಮುಂದಿನ ಅಧ್ಯಯನದ ಸಾಧ್ಯತೆಗಳನ್ನು ತಿಳಿಸಲಾಗಿದೆ.

ಕೊನೆ ಟಿಪ್ಪಣಿಗಳು

೧. ಪ್ರಜಾವಾಣಿ, ಸಂಪಾದಕೀಯ, ೧೩.೭.೨೦೧೪

೨. ಪ್ರಜಾವಾಣಿ, 'ತನುವಿನೊಳಗನುದಿನವಿದ್ದು', ೧೩.೭.೨೦೧೪

೩. ಸುಕನ್ಯಾ ಮಾರುತಿ, ಒಮ್ಮೆ ನಗುತ್ತೇವೆ, ಸಂಗ್ರಾಮ ಪ್ರಕಾಶನ, ಧಾರವಾಡ, ೨೦೧೧

೪. ಡಾ. ಅಭಯ ಕುಮಾರ್ (ಸಂ), ಬೇರು ಬಳ್ಳಿ, ಪ್ರಸಾರಾಂಗ, ಮಂ. ವಿ. ವಿ., ಪು. ೫೦, ೨೦೧೩

೫. ಡಾ. ಎಚ್. ಎನ್. ಮುರಳೀಧರ, ವಿಜಯವಾಣಿ, 'ಕಡಲು' – II, ೧೫.೩.೨೦೧೭

೬. ಡಾ. ಅಭಯಕುಮಾರ್ (ಸಂ), ಪನಿಯಾರ, ಪ್ರಸಾರಾಂಗ, ಮಂ. ವಿ. ವಿ., ಪು. ೫೩, ೨೦೧೦

೭. ವಿಜಯವಾಣಿ, ೧೫.೩.೨೦೧೭.

೮. ಕಾರ್ಲ್ ಮಾರ್ಕ್ಸ್ ಮತ್ತು ಎಂಗೆಲ್ಸ್, ಭಾರತದ ಸಾಮಾಜಿಕ ಸಮಸ್ಯೆಗಳು, ೨೦೦೩, ಪು. ೧೨೬.

ಅಧ್ಯಾಯ ೨: ಸಾಮಾನ್ಯ ಮನುಷ್ಯ, ಹಸಿವು ಮತ್ತು ಬಡತನದ ಪರಿಕಲ್ಪನೆ

೨.೧ ಸಾಮಾನ್ಯ ಮನುಷ್ಯ, ಹಸಿವು, ಹಸಿವಿನ ಪರಿಕಲ್ಪನೆ

೨.೨ ಹಸಿವಿನ ಅರ್ಥ ಮತ್ತು ವಿಧಗಳು

೨.೩ ಪ್ರಾತಿನಿಧಿಕ ಕವಿಗಳ ಪ್ರಕಾರ ಹಸಿವು

೨.೪ ಹಸಿವಿನ ವ್ಯಾಖ್ಯಾನಗಳು

ಅಧ್ಯಾಯ ೨

ಸಾಮಾನ್ಯ ಮನುಷ್ಯ, ಹಸಿವು ಮತ್ತು ಹಸಿವಿನ ಪರಿಕಲ್ಪನೆ

೨.೧ ಸಾಮಾನ್ಯ ಮನುಷ್ಯ, ಹಸಿವು ಮತ್ತು ಹಸಿವಿನ ಪರಿಕಲ್ಪನೆ

ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ ಏರುಪೇರುಗಳಿಲ್ಲದ ಸರ್ವರೂ ಕೆಲವು ಸಾಮಾನ್ಯ ನಿಯಮಗಳಿಗೆ ಬದ್ಧರಾದ ಯಾವುದೇ ಒಡಕುಗಳಿಲ್ಲದ ಸಮಾಜ ವ್ಯವಸ್ಥೆ ತುಂಬಾ ಸರಳವಾಗಿರುತ್ತದೆ. ಅಲ್ಲಿಯ ಮನುಷ್ಯ ಕೂಡಾ ಅಂತಹ ಸಂದರ್ಭದಲ್ಲಿ ಕಲಾಕಾರನೊಬ್ಬನ ಪ್ರತಿಭೆ ಮಾನವ ಬದುಕಿನ ಆದ್ಯಂತಗಳ ಅನ್ವೇಷಿಸುವ ತಾತ್ತ್ವಿಕ ಮಾರ್ಗವನ್ನೋ, ಬದುಕಿನ ಸೌಂದರ್ಯದ ಕಾಣ್ಕೆಗಳ ದರ್ಶನದ ಮಾರ್ಗವನ್ನೋ ಅನುಸರಿಸಿದರೆ ತಪ್ಪಿಲ್ಲ. ಅಸಮಾನತೆ, ಅನ್ಯಾಯಗಳು ಸ್ಥಾಯಿಯಾಗಿರುವ ವ್ಯವಸ್ಥೆಯಲ್ಲಿ ಕೂಡಾ ಇಂಥದ್ದೇ ಸಾಹಿತ್ಯ ನಿರ್ಮಾಣವಾಗತೊಡಗಿದರೆ ಸಾಹಿತಿ ತನ್ನ ಸಾಮಾಜಿಕ ಪರಿಸರದಿಂದ ವಿಮುಖನಾದಂತೆಯೇ.

ಮನುಷ್ಯನ ವ್ಯಕ್ತಿತ್ವ ರೂಪುಗೊಳ್ಳುವುದು ಆತ ಬದುಕುತ್ತಿರುವ ಸಾಮಾಜಿಕ ಪರಿಸರದಲ್ಲಿ. ಒಂದು ವ್ಯವಸ್ಥೆಯ ಆರ್ಥಿಕ, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಸಂಬಂಧಗಳು ಮನುಷ್ಯನ ಅಂತರಂಗ ಬಹಿರಂಗಗಳ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸುವಂತೆಯೇ ವ್ಯಕ್ತಿ ಆ ವ್ಯವಸ್ಥೆಯ ನಿರ್ಮಾಣದಲ್ಲಿ ತೊಡಗಿರುತ್ತಾನೆ. ಇದೊಂದು ನಿರಂತರ ಪ್ರಕ್ರಿಯೆ. ಬ್ರಾಹ್ಮಣ, ಲಿಂಗಾಯತ, ದಲಿತ ಜಾತಿಗಳಲ್ಲಿ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್, ಸಿಖ್ ಧರ್ಮಗಳಲ್ಲಿ ಶ್ರೀಮಂತ–ಬಡವ ಕುಟುಂಬಗಳಲ್ಲಿ ಹುಟ್ಟಿ ಬೆಳೆದ ವ್ಯಕ್ತಿಗಳ ಅನುಭವ ಲೋಕ ಭಾವನೆಗಳು ಸಹಜವಾಗಿ ಭಿನ್ನವಾಗಿರುತ್ತವೆ. ಜಾತಿ ಸಂಬಂಧಗಳು, ವರ್ಗ ಸಂಬಂಧಗಳು, ಧರ್ಮ ಸಂಬಂಧಗಳು ಅವನ ಅನುಭವ ಭಾವನೆಗಳನ್ನು ನಿಯಂತ್ರಿಸುತ್ತವೆ. ಮಾತ್ರವಲ್ಲ ಬದುಕಿನ ಬಗೆಗಿನ, ಮನುಷ್ಯನ ಬಗೆಗಿನ ಅವನ ಪರಿಕಲ್ಪನೆಯನ್ನು ರೂಪಿಸುತ್ತವೆ. ಸಾಹಿತಿ ಕೂಡಾ ಈ ವ್ಯವಸ್ಥೆಯ ಅಂಗವಾಗಿಯೇ ಇರುವುದರಿಂದ ಅವನ ಕೃತಿಯ ಆಕೃತಿ, ಸಮಾಜದ ಆಕೃತಿಯೇ ಆಗಿರುತ್ತದೆ. ಸಮಾಜದ ಮೂಲ ಘಟಕವಾಗಿರುವ ಮಾನವ ಅದರ ಕೇಂದ್ರ ಬಿಂದುವಾಗಿರುತ್ತಾನೆ. ಆದರೆ ಅಸಮಾನತೆಯ ಹಿನ್ನೆಲೆಯಲ್ಲಿ ಇಲ್ಲಿಯ ಮಾನವ ಸಂಬಂಧಗಳು ಶುದ್ಧ ಮಾನವ ಸಂಬಂಧಗಳಾಗಿರದೆ ಬದುಕಿನ ಏಕಸೂತ್ರತೆ ಇಲ್ಲಿ ಎಂದೋ ಕಳಚಿ ಹೋಗಿದೆ. ಹೀಗಾಗಿ ಮನುಷ್ಯನ ಪರಿಕಲ್ಪನೆಗೆ ಕೂಡಾ ಒಂದು ಏಕಸೂತ್ರತೆ–ಸಾರ್ವತ್ರಿಕತೆ ಇರಲು ಸಾಧ್ಯವಿಲ್ಲ.

ಧರ್ಮಪ್ರಭುತ್ವ ಹಾಗೂ ರಾಜಪ್ರಭುತ್ವಗಳ ಅಡಿಯಾಳಾಗಿ ಬೆಳೆದ ಭಾರತೀಯ ಸಮಾಜ ಹಲವಾರು ಸಾಂಸ್ಕೃತಿಕ ವೈರುಧ್ಯಗಳ ಬೀಡು. ಶಿಷ್ಟ ಸಂಸ್ಕೃತಿ, ಜನಪದ ಸಂಸ್ಕೃತಿ, ಪುರೋಹಿತ ಸಂಸ್ಕೃತಿ–ಶೂದ್ರ ಸಂಸ್ಕೃತಿ, ಪ್ರಭು ಸಂಸ್ಕೃತಿ, ಪ್ರಜಾ ಸಂಸ್ಕೃತಿ, ಪುರುಷ ಸಂಸ್ಕೃತಿ, ಸ್ತ್ರೀ ಸಂಸ್ಕೃತಿ ಹೀಗೆ ಹಲವಾರು ನೆಲೆಗಳಲ್ಲಿ ಆ ವೈರುಧ್ಯಗಳನ್ನು ಗುರುತಿಸಬಹುದು. ಗೋಪುರಾಕಾರದಲ್ಲಿರುವ ಭಾರತೀಯ ಸಮಾಜ ವ್ಯವಸ್ಥೆಯ ಕಲಶಪ್ರಾಯವಾಗಿ ಒಂದು ವರ್ಗದ ಸಂಸ್ಕೃತಿ ಮೆರೆದರೆ ಅದರ ತಳಪಾಯವಾಗಿ ಮತ್ತೊಂದು ವರ್ಗದ ಸಂಸ್ಕೃತಿ ಹತಾಶೆಯಿಂದ ಬಿದ್ದುಕೊಂಡಿದೆ.

ಭಾರತೀಯ ಬದುಕು ಚಾರಿತ್ರಿಕವಾಗಿ ಸಹಜವಾಗಿ ಅರಳಿರುವಂಥದ್ದಲ್ಲ. ದಲಿತರನ್ನು ಮತ್ತು ಮಹಿಳೆಯರನ್ನು ಅಕ್ಷರದಿಂದ ವಂಚಿತರನ್ನಾಗಿಸುವುದರ ಮೂಲಕ ಬಹುಪಾಲು ಜನತೆಯ ಶಕ್ತಿ, ಸಾಮರ್ಥ್ಯ, ಪ್ರತಿಭೆಗಳ ವಿಕಾಸಕ್ಕೆ ಕೊಡಲಿಯೇಟು ಹಾಕಲಾಯಿತು. ಅಕ್ಷರವನ್ನು ಕೇಳಿದ ಶೂದ್ರನ ಕಿವಿಯಲ್ಲಿ ಕಾಯ್ದ ಸೀಸವನ್ನು ಸುರಿಯಬೇಕು ಹಾಗೂ ಅಕ್ಷರವನ್ನು ಕೇಳಿದ ಹೆಣ್ಣು ಗರ್ಭಿಣಿಯಾಗಿದ್ದರೂ ಆನೆಯ ಕಾಲಿಗೆ ಹಾಕಿ ತುಳಿಸಬೇಕು ಎಂಬಂಥ ಕಠೋರ ನಿಯಮಗಳನ್ನು ಜನ ಪ್ರೀತಿಯಿಂದ ಒಪ್ಪಿಕೊಳ್ಳಲು ಸಾಧ್ಯವೇ? ಆದರೂ ಅವರು ಒಪ್ಪಿಕೊಂಡದ್ದು ಮಾತ್ರವಲ್ಲ, ಸಾವಿರಾರು ವರುಷಗಳಿಂದ ಅಂಥ ಬದುಕನ್ನೇ ಬಾಳಿದರು. ಕಾರಣ, ರಾಜಪ್ರಭುತ್ವದ ಬಲದ ಭಯ ಹಾಗೂ ಧರ್ಮಪ್ರಭುತ್ವದ ಪಾಪಪ್ರಜ್ಞೆಯ ಭಯ. ಹೀಗಾಗಿ ಮನುಷ್ಯರ ಬಗೆಗಾಗಲೀ ಬದುಕಿನ ಬಗೆಗಾಗಲೀ ಈ ರಾಷ್ಟ್ರದ ಜನಸಮುದಾಯ ಆಲೋಚಿಸುವ ವಿಧಾನವನ್ನು ಕೂಡಾ ಧರ್ಮ ಹಾಗೂ ಪ್ರಭುತ್ವಗಳೇ ನಿರ್ಧರಿಸಿವೆ.

"ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನ ಇಂಪುಗಳ್ಗಾಗರಮಾದ ಮಾನಿಸರೇ ಮಾನಸರ್" ಎನ್ನುತ್ತಾನೆ ಪಂಪ. ತುಳಿಯಲ್ಪಟ್ಟ ಬಡಪಾಯಿ ಜನಾಂಗಕ್ಕೆ ತ್ಯಾಗ, ಭೋಗ, ವಿದ್ಯೆ, ಗೋಷ್ಠಿಗಳು ಗುಣಗಳಾಗಲು ಸಾಧ್ಯವೇ ಇಲ್ಲ. ಪಂಪನ ದೃಷ್ಟಿಯಲ್ಲವರು ಮನುಷ್ಯರೇ ಅಲ್ಲ. ಈ ಮನುಷ್ಯರಲ್ಲದ ನಿಜವಾದ ಮನುಷ್ಯರ ವಾಸ್ತವ ಬದುಕು ಬಹುಜನರ ಸಂವೇದನೆ ಅವರ ಕಲ್ಪನೆಗಳು ಸಾಹಿತ್ಯವಾಗಲಿಲ್ಲ.

ಭಾರತ ಕೃಷಿಪ್ರಧಾನ ದೇಶ. ನೂರಕ್ಕೆ ಎಂಬತ್ತರಷ್ಟು ಜನ ಗ್ರಾಮದಲ್ಲಿಯೇ ವಾಸಿಸುತ್ತಾರೆ. ಗ್ರಾಮೀಣ ಮನುಷ್ಯ ಸಾಹಿತ್ಯದ ನಾಯಕನಾಗಬೇಕಾದದ್ದು ಈ ದೇಶದ ಸಾಮಾಜಿಕ ರಚನೆಯ ಹಿನ್ನೆಲೆಯಲ್ಲಿ ಸಹಜ. ಗ್ರಾಮೀಣ ಸಮುದಾಯದ ಸಾಮಾಜಿಕ ರಚನೆ, ಉತ್ಪಾದನಾ ಕ್ರಮಗಳು ಹಾಗೂ ಅವುಗಳನ್ನಾಧರಿಸಿ ವ್ಯಕ್ತಿ–ವ್ಯಕ್ತಿಗಳ ನಿಸರ್ಗದ ಮಧ್ಯೆ ವ್ಯಕ್ತಿ ಸಮಾಜದ ಮಧ್ಯೆ ಜರುಗುವ ಎಲ್ಲಾ ಸಂಬಂಧಗಳು ಸಾಹಿತ್ಯವನ್ನು ಹರಿಹರ, ಕುಮಾರ ವ್ಯಾಸರಂತಹ ಭಕ್ತ ಕವಿಗಳು, ಬೇಂದ್ರೆ, ಕುವೆಂಪು ಮುಂತಾದ ಸಾಹಿತಿಗಳು, ಅಡಿಗ–ಅನಂತಮೂರ್ತಿಯವರಂತಹ ನವ್ಯ ಸಾಹಿತಿಗಳು ಆಳುವ ವರ್ಗದ ಇಲ್ಲವೇ ಭಕ್ತ ಸಮೂಹದ ಇಲ್ಲವೇ ಮಧ್ಯಮ ವರ್ಗದ ಒಟ್ಟಾರೆ ಶಿಷ್ಟವೆನ್ನಬಹುದಾದ ಒಂದು ಸೀಮಿತ ವರ್ಗದ ಅನುಭವಗಳನ್ನು ಸಾಹಿತ್ಯವನ್ನಾಗಿಸಿದ್ದಾರೆ.

ವಿಜಯನಗರದ ಇತಿಹಾಸವನ್ನು ಚರಿತ್ರಕಾರರು ಕೀರ್ತಿಸುವ ರೀತಿ ನಿಜವಾದ ವಿಜಯನಗರದ ಇತಿಹಾಸ ಹಾಗೂ ಕೀರ್ತನ ಸಾಹಿತ್ಯಗಳ ಸಂಬಂಧವನ್ನು ಕುರಿತು ಡಾ. ಕೆ. ಎಲ್. ಗೋಪಾಲಕೃಷ್ಣಯ್ಯನವರು ಗಂಭೀರವಾಗಿ ಆಲೋಚಿಸಿರುವುದನ್ನಿಲ್ಲಿ ಉಲ್ಲೇಖಿಸಬಹುದು. ಅರಸೊತ್ತಿಗೆಯ ವಿಜೃಂಭಣೆ, ದಂಡಾಧಿಕಾರಿಗಳ ಸುಖಲೋಲುಪ್ತಿ, ವರ್ತಕರ ಕಾಂಚಾಣ ಝಣತ್ಕಾರಗಳ ಮಧ್ಯೆ ಕೇಳದೇ ಹೋದ ಸಾಮಾನ್ಯನ ಮೂಕ ಮರ್ಮರವನ್ನವರು ಪತ್ತೆ ಹಚ್ಚಿದ್ದಾರೆ. "ವಿಜಯನಗರ ಸಾಮ್ರಾಜ್ಯದ ಮೂರು ಶತಮಾನಗಳ ಅವಧಿಯಲ್ಲಿ ಸಣ್ಣ ದೊಡ್ಡ ಪ್ರಮಾಣದ ಮೂವತ್ತು ಯುದ್ಧಗಳು ನಡೆದಿವೆ. ತಾಳಿಕೋಟೆಯ ಘೋರ ಸಂಗ್ರಾಮ ನಡೆದದ್ದು ೧೫೬೫ರಲ್ಲಿ. ಒಂದು ಕಡೆ ಯುದ್ಧಕ್ಕೆ ಹೋದ ಜೀವ ಹೇಗೂ ಮನೆಗೆ ಮರಳುವುದು ಅನಿಶ್ಚಿತ. ಆದುದರಿಂದ ಸಾಲ ಮಾಡಿಯಾದರೂ ತುಪ್ಪ ತಿನ್ನೋಣ ಎಂದು ಚಾರ್ವಾಕರನ್ನು ಮೀರಿಸುವ ದಂಡಾಧಿಕಾರಿಗಳು, ಯುದ್ಧ ಸಿದ್ಧತೆಗಾಗಿ ವರ್ತಕ ಶ್ರೇಣಿಗಳ ಒಲವು ಗಳಿಸುವುದಕ್ಕಾಗಿ

ಪ್ರಜಾಕೋಟಿಯನ್ನು ಸುಲಿಯುವ ಮಾಂಡಲೀಕ ಮಹಾಶಯರು, ಯುದ್ಧಕಾಲವೇ ತಮಗೆ ಸುಗ್ಗಿ ಎಂದು ದ್ರೋಹ ಚಿಂತಿತ ವ್ಯಾಪಾರ ನಡೆಸುವ ಪಟ್ಟಣ ಸ್ವಾಮಿಗಳು, ಮತ್ತೊಂದೆಡೆ ಕ್ರೂರ ಸಾಮಾಜಿಕ ಪದ್ಧತಿಗಳು, ಇವುಗಳ ನಡುವೆ ಸಿಕ್ಕ ಸಾಮಾನ್ಯ ಗಂಡು ಹೆಣ್ಣುಗಳ ಬಡ ಜೀವನವು "ಏಕೆನ್ನನೀ ರಾಜ್ಯಕ್ಕೆಳೆತಂದೆ ಹರಿಯೇ" ಎಂದು ಮೊರೆಯಿಟ್ಟಿದ್ದರೆ ಆಶ್ಚರ್ಯವೇನು? ಇಂತಹ ಸಾಮಾಜಿಕ ಸಂದರ್ಭದಲ್ಲಿ ಕೀರ್ತನಕಾರರು ಕಾಮ ಕ್ರೋಧಾದಿಗಳನ್ನು ಜಯಿಸುವುದರಲ್ಲಿ ಅಂದಿನ ಸಾಮಾಜಿಕ ಮನುಷ್ಯನ ಸಮಸ್ಯೆಗಳಿಗೆ ಉತ್ತರವನ್ನು ಕಂಡುಹಿಡಿಯಲು ಪ್ರಯತ್ನಿಸಿದರು. "ಪೂರ್ವಜನ್ಮದ ಕರ್ಮ ಹಣೆಯಲ್ಲಿ ಬರೆದಿಹುದು, ತಲ್ಲಣಿಸದಿರು ಕಂಡ್ಯ ತಾಳು ಮನವೇ" ಎಂಬ ಆಧ್ಯಾತ್ಮಿಕ ಶರಣಾಗತಿಯೆಡೆಗೆ ತುಡಿದರು. ಸಾಮಾಜಿಕ ಮನುಷ್ಯನ ಬದುಕು ಮತ್ತು ಸಾಹಿತ್ಯಗಳ ಮಧ್ಯದ ಕಂದರವನ್ನು ಕಾಣಬಹುದು.

ವಿಜಯನಗರ ಸಾಮ್ರಾಜ್ಯ ಕಾಲಕ್ಕೆ ಭಕ್ತಿಯುಗ ಆರಂಭವಾಗಿ ಎರಡು ಶತಮಾನಗಳೇ ಕಳೆದು ಹೋಗಿದ್ದರೂ ಯುದ್ಧದ ಭೀಕರತೆಯಿಂದ ಮನುಷ್ಯನ ಬದುಕು ಅಷ್ಟೊಂದು ತತ್ತರಿಸಿ ನಲುಗಿ ಹೋಗಿರಬೇಕಾದರೆ ಇನ್ನು ವೀರಯುಗದ ಚರಿತ್ರೆಯನ್ನು ನೋಡಿದರೆ ಇಲ್ಲಿ ತುಂಬಿರಬಹುದಾದ ಕ್ರೌರ್ಯ ಹತಾಶೆಗಳು ಎದೆ ನಡುಗಿಸುತ್ತವೆ. ವೀರಯುಗದಲ್ಲಿ ನಡೆಸಲಾದ ವೀರಗಲ್ಲುಗಳು ಹಾಗೂ ಮಾಸ್ತಿ ಕಲ್ಲುಗಳು ಆ ಕಾಲದಲ್ಲಿ ಹುಗಿದ ಸಾಮಾನ್ಯ ಮನುಷ್ಯನ ಹೆಣಗಳಾಗಿವೆ. ವೀರಯುಗವೆಂದರೆ ಸಾಮ್ರಾಜ್ಯಕ್ಕಾಗಿ ಅಧಿಕಾರ ಲಾಲಸೆಗಾಗಿ ಯುದ್ಧ ನಿರತರಾಗುತ್ತಿದ್ದ ರಾಜರ ಸಲುವಾಗಿ ಪ್ರಾಣ ತೆತ್ತ ಸೈನಿಕರ ಹಾಗೂ ಅವರ ಪತ್ನಿಯರ ಶವಾಗಾರವಾಗಿದೆ.

"ಜಿತೇನ ಲಭ್ಯತೆ ಲಕ್ಷ್ಮಿ ಮೃತೇನಾಪಿ ಸುರಾಂಗನಾ ಕ್ಷಣವಿಧ್ವಂಸಿನಿ ಕಾಯೇ ನಚಿಂತಾ ಮರಣೇ ರಣೇ"[೧] ಎಂಬಲ್ಲಿ ಯಾವಾಗಲೂ ವಿಜಯಲಕ್ಷ್ಮಿಯನ್ನು ರಾಜರೂ, ಸುರಾಂಗನೆಯರನ್ನು ಸೈನಿಕರೂ ಅಪ್ಪಿಕೊಳ್ಳುತ್ತಿದ್ದರು. ಕನ್ನಡ ಮಾರ್ಗಕವಿಗಳ ಕೃತಿಗಳು ಇಂಥ ಸಾಮ್ರಾಜ್ಯಶಾಹಿ ಯುಗದಲ್ಲಿ ರಚಿತವಾಗಿದ್ದರಿಂದ ಲೌಕಿಕವಾಗಿರಲಿ, ಆಗಮಿಕವಾಗಿರಲಿ ಅರಸರ ವೈಭವೋಪೇತ ಜೀವನ, ಭೋಗಲಾಲಸೆ, ಶೌರ್ಯ ಪ್ರದರ್ಶನಗಳನ್ನು ಕುರಿತಾದ ಅದ್ಭುತ ಕಲ್ಪನೆಗಳಿಂದ ತುಂಬಿಕೊಂಡಿವೆಯೇ ಹೊರತು ಈ ನಾಡಿನ ಮಣ್ಣಿನ ಮಕ್ಕಳ ಅನುಭವದ ಬಾಗಿಲನ್ನು ತಟ್ಟಲಿಲ್ಲ. ಅವರ ಹಸಿವು, ಬಯಕೆ, ನೋವು-ನಲಿವುಗಳ ಅನಿಸಿಕೆಗೆ ಕಿವಿದೆರೆಯಲಿಲ್ಲ.

ಹನ್ನೆರಡನೆಯ ಶತಮಾನದ ಚಳವಳಿಗೆ ಹಿನ್ನೆಲೆಯಾಗಿ ಸಾಮಾಜಿಕ, ರಾಜಕೀಯ ಕಾರಣಗಳನ್ನು ಡಾ. ಚಿದಾನಂದಮೂರ್ತಿಯವರು ಹೀಗೆ ಗುರುತಿಸಿದ್ದಾರೆ. "ಮನುಷ್ಯನಿಗೆ ಸಾಮಾಜಿಕ ಸ್ಥಾನ, ಅಧಿಕಾರ, ಹಣ ಈ ಮೂರು ಬೇಕು. ಇವುಗಳನ್ನು ಪಡೆಯಲು ಒಂದಲ್ಲ ಒಂದು ರೀತಿಯ ಸೂಕ್ಷ್ಮವೂ ಕೆಲವೆಡೆ ಸ್ಪಷ್ಟವೂ ಆದ ಶೋಷಣೆಗೆ ಕೈ ಹಾಕಿ ಈ ಮೂರನ್ನೂ ಗಳಿಸಿಕೊಂಡವರೆಂದರೆ ಶಿಷ್ಟ ಸಮಾಜದ ಭಾಗವೆನ್ನಿಸಿಕೊಂಡಿರುವವರು ಬ್ರಾಹ್ಮಣರು, ದೊರೆಗಳು ಹಾಗೂ ವರ್ತಕರು".[೨] ಕರ್ನಾಟಕದ ಸಾವಿರಾರು ಶಾಸನಗಳನ್ನು ನೋಡಿದರೆ ಅಲ್ಲಿ ತುಂಬಿರುವುದು ಈ ಮೂರು ವರ್ಗಗಳ ಕತೆ. ಬೌದ್ಧಿಕ ಹಾಗೂ ಧಾರ್ಮಿಕ ಚಟುವಟಿಕೆಗಳಿಂದ, ಅಧಿಕಾರ ಐಶ್ವರ್ಯಗಳಿಂದ ದೂರವಾದ ಸಾಮಾನ್ಯ ಮನುಷ್ಯ ಬದುಕಿದ್ದು ಯಾರಾದರೂ ಶ್ರೀಮಂತರು ಗುಡಿ ಗುಂಡಾರ ಕಟ್ಟಿದರೆ ದತ್ತಿ ಕೊಡಲಿಕ್ಕೆ, ದೇಶದ ಸಂಪತ್ತನ್ನು ಹೆಚ್ಚಿಸುವುದಕ್ಕೆ

ಹೋರಾಡಿ ಸಾಯುವುದಕ್ಕೆ, ಈ ಜನಪದ ದೇಶದ ಆಸ್ತಿ, ಅದರ ಸೌಲಭ್ಯಗಳನ್ನು ತಮ್ಮ ಸುಖಕ್ಕೆ ಹಾರಿಸಿಕೊಂಡ ರಾಜರ, ದಂಡನಾಯಕರ, ಮಂತ್ರಿಗಳ, ವರ್ತಕರ, ಪುರೋಹಿತರ ಕತೆಗಳನ್ನು, ದಾನ ಶಾಸನಗಳನ್ನು ಸುದೀರ್ಘವಾಗಿ ಬಣ್ಣಿಸುತ್ತವೆ.

"ಮಾರ್ಗಕೃತಿಗಳು ಇವಕ್ಕಿಂತ ಭಿನ್ನವಾದುದನ್ನು ಮಾಡಲಿಲ್ಲ. ಆದರೆ ವಚನಕಾರರು ಈ ಎಲ್ಲಾ ಅಸಮಾನತೆಗಳನ್ನು ಗ್ರಹಿಸಿ ಅವುಗಳ ವಿರುದ್ಧ ಸಾಮೂಹಿಕ ಪ್ರತಿರೋಧವನ್ನು ಚಳವಳಿ ಹಾಗೂ ವಚನಗಳ ಮೂಲಕ ಒಡ್ಡಿದ್ದರಿಂದ ಅಂದಿನ ಸಮಾಜದ ಪ್ರತಿ ವರ್ಗದ, ಪ್ರತಿ ಜಾತಿಯ ಮನುಷ್ಯನೂ ತನ್ನ ವಾಸ್ತವ ರೂಪದೊಂದಿಗೆ ಸಾಹಿತ್ಯದಲ್ಲಿ ಅವತರಿಸಿದೆ. ಕನ್ನಡ ಸಾಹಿತ್ಯದಲ್ಲಿ ಸಾಮಾಜಿಕ ಮನುಷ್ಯ ಮೊತ್ತ ಮೊದಲ ಬಾರಿ ಗಂಟಲು ಬಿಚ್ಚಿದ್ದು ವಚನ ಸಾಹಿತ್ಯದಲ್ಲಿ. ಅಲ್ಲಮ, ಜೇಡರ ದಾಸಿಮಯ್ಯ, ಬಸವಣ್ಣ, ಸಿದ್ಧರಾಮ, ಆಯ್ದಕ್ಕಿ ಮಾರಯ್ಯ, ತುರುಗಾಹಿ ರಾಮಣ್ಣ, ಉರಿಲಿಂಗಿದೇವ, ಢಕ್ಕೆಯ ಬೊಮ್ಮಯ್ಯ, ನುರಿಯ ಚಂದಯ್ಯ, ಮಾದರ ಚನ್ನಯ್ಯ, ಬಹುರೂಪಿ ಚೌಡಯ್ಯ, ನೀಲಾಂಬಿಕೆ, ಅಕ್ಕನಾಗಮ್ಮ, ಅಕ್ಕಮಹಾದೇವಿ, ಮುಕ್ತಾಯಕ್ಕ, ಅಮುಗೆರಾಯಮ್ಮ, ಆಯ್ದಕ್ಕಿ ಲಕ್ಕಮ್ಮ ಮೊದಲಾದ ಹೆಸರುಗಳನ್ನು ಪಟ್ಟಿ ಮಾಡುತ್ತಾ ಹೋದರೂ ಸಾಕು ಹಿಂದಿನ ಸಾಹಿತ್ಯ ಪರಂಪರೆಯನ್ನು ಅಪ್ಪಿತಪ್ಪಿ ಕೂಡಾ ಕಣ್ಣಿಗೆ ಕಾಣದ ಸಮಾಜದ ಸಮಗ್ರ ಚಿತ್ರಣವೊಂದು ಕಣ್ಣಿಗೆ ಕಟ್ಟುತ್ತದೆ. ಬದುಕು ಮತ್ತು ಸಾಹಿತ್ಯಗಳ ಮಧ್ಯೆ ಇಂಥ ಅನನ್ಯ ಸಂಬಂಧ ಕನ್ನಡ ಸಾಹಿತ್ಯದಲ್ಲಿ ಮತ್ತೊಮ್ಮೆ ಏರ್ಪಟ್ಟದ್ದು ದಲಿತ-ಬಂಡಾಯ ಸಾಹಿತ್ಯದಲ್ಲಿ. ಸಮಾಜ ನಿರ್ಮಾಣದ ಸಂಕಲ್ಪದಿಂದ ಸಮೂಹಗೊಂಡು ಸಾಹಿತ್ಯ ಸೃಷ್ಟಿಸಿದ್ದು ಕನ್ನಡದಲ್ಲಿ ಇದೇ ಮೊದಲು. ಕನ್ನಡ ಸಾಹಿತ್ಯದ ಚರಿತ್ರೆಯಲ್ಲಿ ತಲೆದೋರಿದ ಈ ಭಕ್ತಿ ಹಿನ್ನೆಲೆಯ ಚಳವಳಿ ಆಳುವ ವರ್ಗ ಹಾಗೂ ಪುರೋಹಿತ ವರ್ಗಗಳ ವಿರುದ್ಧ ದನಿಯೆತ್ತಿ ನಿರ್ಲಕ್ಷಿತ ಬದುಕಿಗೆ ಸಾಹಿತ್ಯದಲ್ಲಿ ಪಟ್ಟ ಕಟ್ಟುತ್ತಲೇ ಸಮಸ್ಯೆಗಳ ಆಧ್ಯಾತ್ಮೀಕರಣಗೊಳಿಸುವತ್ತ ತುಡಿಯಿತು.

ಮತನಿಷ್ಠ ದೇಶೀ ಸಾಹಿತ್ಯ ಪರಂಪರೆಯ ಕುಮಾರ ವ್ಯಾಸ, ಲಕ್ಷ್ಮೀಶ, ಚಾಮರಸ, ರಾಘವಾಂಕ ಮೊದಲಾದವರು ದೇಸಿ ಮಟ್ಟುಗಳನ್ನು ಉಪಯೋಗಿಸಿದ್ದಲ್ಲದೆ ಅಲ್ಲಲ್ಲಿ ಜನಸಂಸ್ಕೃತಿಯನ್ನು ಸಾಂದರ್ಭಿಕವಾಗಿ ಚಿತ್ರಿಸಿದರೂ ಮತನಿಷ್ಠ ಹಾಗು ಆಧ್ಯಾತ್ಮನಿಷ್ಠ ಉನ್ಮಾದದಲ್ಲಿ ಆ ಧೋರಣೆ ಸ್ಪಷ್ಟಗೊಳ್ಳಲಿಲ್ಲ. "ಅರಸುಗಳಿಗಿದು ವೀರ, ದ್ವಿಜರಿಗೆ ಪರಮವೇದದ ಸಾರ - ಸತ್ತವರ ಕತೆಯಲ್ಲ ಜನನದ ಕುತ್ತದಲ್ಲಿ ಕುದಿಕುದಿದು ದೇವರ... "ಪುಣ್ಯಮಿದು ಕೃಷ್ಣಚರಿತಮೃತ" ಎಂಬ ಪದಗಳು ಒಟ್ಟಾರೆ ಅದರ ಸಾಹಿತ್ಯ ಸೃಷ್ಟಿಯ ಪ್ರಣಾಳಿಕೆಗಳಾಗಿವೆ. ಹರಿಹರ ಜನಪದರನ್ನು ರಗಳೆಯ ನಾಯಕರನ್ನಾಗಿಸಿಕೊಂಡರೂ ಅದರ ಪಾಲಿಗೆ ಅವರು ಭಕ್ತ ವ್ಯಕ್ತಿತ್ವಗಳೇ ಹೊರತು ಸಾಮಾನ್ಯ ಸಾಮಾಜಿಕರಲ್ಲ. ಈ ಸಂದರ್ಭದಲ್ಲಿ ಜನಸಂಸ್ಕೃತಿಯನ್ನು ತ್ರಿಪದಿಯಲ್ಲಿ ಕಡೆಯಲೆತ್ನಿಸಿದ ಸರ್ವಜ್ಞ ಜನತೆಯ ಮಹಾಕವಿ. ಹೀಗೆ ಪ್ರಭುನಿಷ್ಠ ಧರ್ಮನಿಷ್ಠ ಕಾವ್ಯಗಳೂ, ಪುರಾಣಗಳು ಚಾರಿತ್ರಿಕವಾಗಿ ಬಹುಸಂಖ್ಯಾತ ಅನಕ್ಷರಸ್ಥ ಸಮಗ್ರ ವರ್ಗದ ವಾಸ್ತವ ಬದುಕು ಹಾಗು ಸಂವೇದನೆಗಳನ್ನು ಅವುಗಳ ಮೂಲಸತ್ವದೊಂದಿಗೆ ತಮ್ಮ ತೆಕ್ಕೆಗೆ ತೆಗೆದುಕೊಳ್ಳಲಿಲ್ಲ. ಒಟ್ಟಾರೆಯಾಗಿ ಪ್ರಾಚೀನ ಕನ್ನಡ ಸಾಹಿತ್ಯ ಸಮಾಜವನ್ನು ಸಮಗ್ರವಾಗಿ ಗ್ರಹಿಸುವ ಅವರ ಸಮಗ್ರತೆಗೆ ಭಂಗವನ್ನುಂಟುಮಾಡುವ ಅಂಶಗಳನ್ನು ಪರಿಶೀಲಿಸುವ ಅಸಮಾನತೆಯ ಆಧಾರದ ಮೇಲೆ ನಿಂತ ವ್ಯವಸ್ಥೆಯ ಮಾರ್ಪಾಡಿಗೆ ಅವಶ್ಯವಿರುವ ತತ್ವಗಳನ್ನು

ಪ್ರತಿಪಾದಿಸುವ ಸಾಮಾಜಿಕ ಪ್ರಜ್ಞೆಯ ಕೊರತೆಯಿಂದ ನರಳುತ್ತದೆ. ಇದು ಸಾಮ್ರಾಜ್ಯಶಾಹಿಯಿಂದ ಸೃಜನಶೀಲತೆಗೆ ಬಂದೊದಗಿದ ವಿಪತ್ತಿನ ಪರಿಣಾಮ.

ಸಾಮ್ರಾಜ್ಯಶಾಹಿ, ವಸಾಹತುಶಾಹಿ, ಬಂಡವಾಳಶಾಹಿ ವ್ಯವಸ್ಥೆಗಳಿಗಿಂತ ಭಿನ್ನವಾದ, ಏನಿಲ್ಲದಿದ್ದರೂ ಅಭಿವ್ಯಕ್ತಿ ಸ್ವಾತಂತ್ರ್ಯವನ್ನಾದರೂ ಮುಕ್ತವಾಗಿ ಅನುಭವಿಸುತ್ತಿರುವ ಪ್ರಜಾರಾಜ್ಯದಂತಹ ರಾಜಕೀಯ ವ್ಯವಸ್ಥೆಯಡಿಯಲ್ಲಿಯೂ ನಮ್ಮ ಸಾಹಿತ್ಯ ಸಾಮಾಜಿಕ ಮನುಷ್ಯನ ಜೊತೆಗೆ ಏರ್ಪಡಿಸಿಕೊಂಡ ಸಂವಾದ ತೀರಾ ಕಡಿಮೆ. ಡಾ. ಡಿ. ಆರ್. ನಾಗರಾಜ್ ಗುರುತಿಸುವಂತೆ "ನಗರದ ದಾರಿದ್ರ್ಯಗ್ರಸ್ಥ ಕೊಂಪೆಗಳು, ಕುಡಿಯುವ ನೀರಿಲ್ಲದ, ದೀಪವಿಲ್ಲದ ಹಳ್ಳಿಗಳು, ಅನ್ನಾಂಶವಿಲ್ಲದೆ ಸೊರಗುವ ಮಕ್ಕಳು, ಕೋಟಿ-ಕೋಟಿ ನಿರುದ್ಯೋಗಿಗಳು, ಪಂಚತಾರಾ ಹೊಟೇಲ್‌ಗಳು, ದುಡಿಯುವ ವರ್ಗದ ದುರ್ಬಲ ಹೋರಾಟಗಳು, ವಿದೇಶೀ ಕಾರುಗಳು, ಆಮದು ಮಾಡಿಕೊಳ್ಳುವ ಭೋಗವಿಲಾಸ ವೈಭವ ಸಾಮಾಗ್ರಿಗಳು, ವಿಫಲ ಯೋಜನೆಗಳು ಇವೆಲ್ಲಾ ಇವತ್ತಿನ ಇಂಡಿಯಾದ ವಿಷಾದಕರ ಸತ್ಯಗಳು. ಈ ಎಲ್ಲಾ ವೈಷಮ್ಯಗಳು ನಾಡಿನ ಸಂಪತ್ತನ್ನು ಸೃಷ್ಟಿಸುವ ಸಾಮಾನ್ಯ ಮನುಷ್ಯನ ಬದುಕಿನೊಂದಿಗೆ ಹೆಣೆದುಕೊಂಡಿವೆ. ಈ ಭಯಂಕರ ವಾಸ್ತವ ಮತ್ತು ಸಾಹಿತ್ಯದ ನಡುವೆ ಇಂದು ಯಾವುದೇ ತರಹದ ಅರ್ಥಪೂರ್ಣ ಸಂವಾದವಿಲ್ಲ".[೨]

ನವೋದಯ ಸಾಹಿತ್ಯದಲ್ಲಿ ಸಾಮಾಜಿಕ ಮನುಷ್ಯನ ಅನುಭವಗಳು, ಸಂವೇದನೆಗಳು ಸಮಗ್ರವಾಗಿ ಚಿತ್ರಿತಗೊಂಡಿವೆ ಅನ್ನಿಸಿದರೂ ಆದರ್ಶ ಉದಾರವಾದಿ ಧೋರಣೆ, ಹುಸಿ ಮಾನವಿಯತೆ, ಆಧ್ಯಾತ್ಮಿಕತೆ, ರಾಷ್ಟ್ರೀಯತೆ, ಭಾವುಕತೆಗಳ ಹಿನ್ನೆಲೆಯಲ್ಲಿ ಬದುಕಿನ ವಾಸ್ತವದ ಬಗೆಗಿನ ಅವರ ನಿಲುವುಗಳು ಮೇಲ್‌ಸ್ತರದ ಗ್ರಹಿಕೆಗಳೇ ಆಗಿವೆ. ಆ ಕಾಲದ ಪ್ರಮುಖ ಕಾದಂಬರಿಗಳಾದ 'ಮಲೆಗಳಲ್ಲಿ ಮದುಮಗಳು', 'ಕಾನೂರು ಹೆಗ್ಗಡತಿ', 'ಗ್ರಾಮಾಯಣ', 'ನಿಸರ್ಗ', 'ಮರಳಿ ಮಣ್ಣಿಗೆ', 'ಚೋಮನ ದುಡಿ' ಮೊದಲಾದ ಕೃತಿಗಳಿಗೆ ವಾಸ್ತವವಾಗಿ ನೆಲೆ ದಕ್ಕಿದರೂ ಪೂರ್ವನಿರ್ಧಾರಿತ ಮೌಲ್ಯಗಳನ್ನು ಪ್ರತಿಪಾದಿಸಲು ಸಾಮಾಜಿಕ ಮನುಷ್ಯನ ಬದುಕನ್ನು ದುಡಿಸಿಕೊಂಡಿದ್ದಾರೆಯೇ ಹೊರತು ಸಾಮಾಜಿಕ ಬದುಕಿನ ಮೂಲಕವೆ ಮೌಲ್ಯಗಳ ಅನ್ವೇಷಣೆಗೆ ತೊಡಗಿಲ್ಲ. ಬೇಂದ್ರೆಯವರ ಅನ್ನಾವತಾರ, ತುತ್ತಿನ ಚೀಲ, ಹೆಣದ ಹಿಂದೆ, ಕುವೆಂಪುರವರ ಕಲ್ಕಿ, ಪಾಂಚಜನ್ಯ ಮೊದಲಾದ ಕವಿತೆಗಳು ಸಾಮಾನ್ಯ ಮನುಷ್ಯನ ಆಶಯಗಳಿಗೆ ದನಿ ನೀಡಿದರೂ ಅವರ ಒಟ್ಟು ಸೃಜನಶೀಲತೆಯ ಕೇಂದ್ರ ಕಾಳಜಿ ಸಾಂಪ್ರದಾಯಿಕ, ಆನಂದಾತ್ಮಕ, ಸೌಂದರ್ಯಾತ್ಮಕ ಹಾಗೂ ಆಧ್ಯಾತ್ಮನಿಷ್ಠ ದೃಷ್ಟಿಕೋನದಲ್ಲಿತ್ತು.

ಪ್ರಗತಿಶೀಲ ಸಾಹಿತ್ಯದ ಕಲಾತ್ಮಕ ಸಾಧನೆ ಏನೇ ಇರಲಿ ಅದು ಸಮಕಾಲೀನ ಕಾಳಜಿ ಹಾಗು ಮನುಷ್ಯನ ಸಾಮಾಜಿಕ ವಾಸ್ತವಗಳಿಗೆ ನೀಡಿದ ಮಹತ್ವ ವಿಶಿಷ್ಟವಾದದ್ದು. ವಿಶೇಷವಾಗಿ ನಿರಂಜನ, ಬಸವರಾಜ ಕಟ್ಟೀಮನಿಯವರ ಕಥೆ-ಕಾದಂಬರಿಗಳು ಆರ್ಥಿಕ, ಸಾಮಾಜಿಕ, ವಿಷಮತೆ-ಅಸಮಾನತೆಗಳ ಮೂಲಕ ತಲೆದೋರಿದ ಶೋಷಣೆಯ ಸ್ಥಿತಿಯನ್ನು ಕಲಾತ್ಮಕವಾಗಿ ಚಿತ್ರಿಸಿದವು. ಪ್ರಗತಿಶೀಲ ಸಾಹಿತ್ಯದ ಮೂಲಕ ಆರ್ಥಿಕ ಸಮಾನತೆಯನ್ನು ಪ್ರತಿಪಾದಿಸುವ ಮಾರ್ಕ್ಸ್‌ವಾದ ಕನ್ನಡ ಸಾಹಿತ್ಯವನ್ನು ಪ್ರವೇಶಿಸಿತು. ಕಟ್ಟಿಮನಿಯವರ 'ಜ್ವಾಲಾಮುಖಿಯ ಮೇಲೆ', 'ಗಿರಿಜಾ ಕಂಡ ಕನಸು', 'ಕಾರವಾನ್', 'ಬೂಟ್‌ಪಾಲೀಸ್' ಹಾಗೂ ನಿರಂಜನರ 'ಚಿರಸ್ಮರಣೆ',

'ವಿವೇಚನೆ', 'ಕೊನೆಯ ಗಿರಾಕಿ' ಯಂತಹ ಕತೆ ಕಾದಂಬರಿಗಳು ಪ್ರಗತಿಶೀಲ ಸಾಹಿತ್ಯದ ಪ್ರಾತಿನಿಧಿಕ ಹೆಜ್ಜೆಗಳಾಗಿವೆ. ನಿರಂಜನ ಹಾಗೂ ಕಟ್ಟಿಮನಿಯವರ ಕೃತಿಗಳು ಕನ್ನಡ ಸಾಹಿತ್ಯದಲ್ಲಿ ಮಹತ್ತ್ವದವೆಂಬುದನ್ನು ಮರೆಯುವಂಥದ್ದಲ್ಲ.

ನವೋದಯ ಸಾಹಿತ್ಯದ ಭಾವಾತಿರೇಕದ ಕೋಲಾಹಲಗಳನ್ನು ಸಂಗೀತ ಪಾರದರ್ಶಕದಿಂದ ಬರುವ ಶಬ್ದಜಾಲದ ಕಣ್ಕಟ್ಟನ್ನು ಸೋಗಿನ ಆಧ್ಯಾತ್ಮ, ಹುಸಿ ಮಾನವೀಯತೆಗಳನ್ನು ಧಿಕ್ಕರಿಸುತ್ತಾ, ಮಣ್ಣಿನ ವಾಸನೆಯನ್ನೊಳಗೊಳ್ಳುವ ಘೋಷಣೆಯೊಂದಿಗೆ ಹುಟ್ಟಿಕೊಂಡ ನವ್ಯ ಸಾಹಿತ್ಯ ಪರಕೀಯತೆ, ವ್ಯಗ್ರತೆ, ವಿಕ್ಷಿಪ್ತತೆಗಳ ಅಂತರಂಗದ ತೊಳಲಾಟ, ಇಬ್ಬಂದಿತನಗಳ ತೀರ ವೈಯಕ್ತಿಕ ನೆಲೆಯಲ್ಲಿ ಮೈದಾಳುತ್ತಾ ಅನುಭವದ ಸೂಕ್ಷ್ಮತೆ ಅಭಿವ್ಯಕ್ತಿಯ ಜಟಿಲತೆಯಿಂದ ಕನ್ನಡ ಭಾಷೆಗೆ ಹೊಸತನವನ್ನು ನೀಡಿದರೂ ಸಮುದಾಯದ ಅನುಭವಗಳಿಗೆ ದನಿ ನೀಡುವಲ್ಲಿ ಸೋತಿತು.

ಬಂಡವಾಳಶಾಹಿ ವ್ಯವಸ್ಥೆ ವ್ಯಕ್ತಿಯನ್ನು ಬಲಿತೆಗೆದುಕೊಳ್ಳುವ ಕ್ರೌರ್ಯದ ಕತೆಯಾದ 'ಶಿಕಾರಿ' ನವ್ಯದ ಶ್ರೇಷ್ಠ ಕೃತಿ. ಆದರೆ ಅದರ ಅನುಭವವಲಯ ಜನಸಾಗರದ ಮಧ್ಯದ ಮಧ್ಯಮ ವರ್ಗವೆಂಬ ದ್ವೀಪ ಮಾತ್ರ. ಅಡಿಗರ ಕಾವ್ಯ ಅನಂತಮೂರ್ತಿಯವರ ಗದ್ಯ ಸಮಾನತೆಯ ಸಮಾಜವೊಂದರ ಅಸ್ತಿತ್ವವನ್ನು ಎತ್ತಿ ಹಿಡಿಯುತ್ತದೆ ಹಾಗೂ ಮನುಷ್ಯನ ಶೋಷಣೆಯ ಸ್ಥಿತಿ ನಿವಾರಣೆಯಾಗಬೇಕೆಂಬ ನಿಲುವನ್ನು ತಾಳುವುದರ ಮೂಲಕ ಪ್ರಗತಿಪರವಾಗಿ ಬಿಡುತ್ತದೆ. ರಾಮಚಂದ್ರ ಶರ್ಮ ಹಾಗೂ ರಾಮನುಜನ್‌ರ ಪಾಲಿಗೆ ಕಾವ್ಯ ಪ್ರತಿಮೆ ರೂಪಕಗಳ ಸೂಕ್ಷ್ಮ ವ್ಯವಹಾರವಾಯ್ತು. ಪರಕೀಯತೆ, ವ್ಯಗ್ರತೆ, ವಿಕ್ಷಿಪ್ತತೆ, ಆಂತರಿಕ ತೊಳಲಾಟ, ಇಬ್ಬಂದಿತನಗಳ ವೈಯಕ್ತಿಕ ನೆಲೆಯ ಶೋಷಣೆಯಲ್ಲಿಯೇ ಬೌದ್ಧಿಕ ಕಸರತ್ತಾದ ನವ್ಯ ಕಾವ್ಯದ ಒಡಲಲ್ಲಿ ಸಾಮಾಜಿಕ ಮನುಷ್ಯನ ಪ್ರಾಧಾನ್ಯತೆಯನ್ನು ಪ್ರತಿಪಾದಿಸುವ ದಲಿತ ಬಂಡಾಯ ಸಾಹಿತ್ಯ ಹುಟ್ಟಿಕೊಂಡಿತು.

ದೇಶದಲ್ಲಿ ಬಡತನ, ದಾರಿದ್ರ್ಯ, ನಿರುದ್ಯೋಗ, ಅಜ್ಞಾನ, ಅನ್ಯಾಯ, ಶೋಷಣೆ ತಾಂಡವವಾಡುತ್ತಿರುವಾಗ ನವ್ಯ ಸಾಹಿತ್ಯ ಪರಂಪರೆಯ ಆಳವಾದ ಶೋಧನೆಯಲ್ಲಿ ಮುಳುಗಿತ್ತು. ಈ ಸಂದರ್ಭದಲ್ಲಿ ಸಾಮಾಜಿಕ ಜವಾಬ್ದಾರಿಯನ್ನು ಪ್ರತಿಪಾದಿಸುವ ಗುಂಪೊಂದು ಹುಟ್ಟಿಕೊಂಡಿತು. ಚಂದ್ರಶೇಖರ ಪಾಟೀಲರ 'ಬಾ ಎನ್ನ ದೇಶಬಾಂಧವರೇ', 'ಗಾಂಧಿ ಸ್ಮರಣೆ', ಸಿದ್ಧಲಿಂಗಯ್ಯನವರ 'ಹೊಲೆಮಾದಿಗರ ಹಾಡು'. ದೇವನೂರು ಮಹಾದೇವರ 'ದ್ಯಾವನೂರು', ಲಂಕೇಶ್, ತೇಜಸ್ವಿಯವರ ಕತೆಗಳು ದಲಿತ-ಬಂಡಾಯ ಸಾಹಿತ್ಯವು ಚಳವಳಿಯಾಗಿ ಗಟ್ಟಿಗೊಳ್ಳುವಂತಹ ಪರಿಸರವನ್ನು ನಿರ್ಮಿಸಿತು. ಅಸಮಾನತೆಯನ್ನು ಹೋಗಲಾಡಿಸಿ, ಶೋಷಣಾರಹಿತ ಸಮಾಜವೊಂದನ್ನು ನಿರ್ಮಿಸಬೇಕೆಂಬ ಸಮಾನ ಮನಸ್ಕರಾದ ಮಾರ್ಕ್ಸ್, ಲೋಹಿಯಾ. ಅಂಬೇಡ್ಕರ್ ವಾದಗಳು ಪ್ರಗತಿಪರ ಆಶಯದ ಗೆಳೆಯರು ಕಟ್ಟಿದ ಸಾಹಿತ್ಯಕ, ಸಾಂಸ್ಕೃತಿಕ ಸಂಘಟನೆಯಿದು. ಮಾರ್ಕ್ಸ್, ಲೋಹಿಯಾ, ಅಂಬೇಡ್ಕರ್, ಜೆ. ಪಿ. ಮೊದಲಾದ ಸಾಹಿತ್ಯ ಚಳವಳಿಗಳ, ಹೋರಾಟಗಳ, ವಿಚಾರಧಾರೆಗಳ ಪ್ರಭಾವ ಕನ್ನಡ ಬಂಡಾಯ ಸಾಹಿತ್ಯಕ್ಕಿದೆ.

ಚಂದ್ರಶೇಖರ ಪಾಟೀಲರು ಹೇಳುವಂತೆ "ಬಂಡಾಯ ಒಂದು ಮನೋಧರ್ಮ, ವ್ಯಕ್ತಿಯ ಅಂತೆಯೇ ಇಡೀ ಸಮಾಜದ ಕ್ರಿಯಾಶೀಲತೆಯನ್ನೇ ಕಮರಿಸುತ್ತಿರುವ ವ್ಯವಸ್ಥೆ ಇರುವ ತನಕವೂ ಬರಹಗಾರನ ಅನಿವಾರ್ಯ ಮನೋಧರ್ಮವಾಗುತ್ತದೆ". ಸಾಮಾಜಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ, ಧಾರ್ಮಿಕವಾಗಿ ಹೀಗೆ ಯಾವುದೇ ನಿಟ್ಟಿನಿಂದ ಅನ್ಯಾಯ-ಶೋಷಣೆಗೆ ತುತ್ತಾದ ಜನರ (ಜನಾಂಗದ) ಪ್ರತಿಭಟನೆಯ ಕೂಗು ಬಂಡಾಯ. ಹೀಗಾಗಿ ಬಂಡಾಯದ ವಿಶಾಲ ವೇದಿಕೆಯಲ್ಲಿ ಸಾಮಾಜಿಕವಾಗಿ ದಮನಕ್ಕೊಳಗಾದ ದಲಿತರೂ ಸೇರಿದ್ದಾರೆ. "ಎಲ್ಲಾ ಪ್ರಗತಿಪರ ದಲಿತ ಸಾಹಿತಿಗಳು ಬಂಡಾಯ ಸಾಹಿತಿಗಳು. ಆದರೆ ಎಲ್ಲಾ ಬಂಡಾಯ ಸಾಹಿತಿಗಳು ದಲಿತ ಸಾಹಿತಿಗಳಲ್ಲ" ಎಂಬ ಬರಗೂರು ರಾಮಚಂದ್ರಪ್ಪನವರ ಮಾತು ಗಮನಾರ್ಹವಾದುದು.

"ಶೋಷಿತ ಜನತೆಯ ಪರವಾದ ನಿಲುವುಗಳನ್ನು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಭದ್ರ ಮಾಡಿ ನೆಲೆಗೊಳಿಸುವುದು ನಮ್ಮ ಮುಖ್ಯ ಗುರಿಗಳಲ್ಲೊಂದಾಗಬೇಕು. ನಮ್ಮ ಹೋರಾಟ ಪ್ರಧಾನವಾಗಿ ಸಾಂಸ್ಕೃತಿಕ ಕ್ಷೇತ್ರಕ್ಕೆ ಸಂಬಂಧಿಸಿದ್ದು. ದೇಶದ ರಾಜಕೀಯ ಮತ್ತು ಸಾಂಸ್ಕೃತಿಕ ಸಂಬಂಧಗಳು ಪರಸ್ಪರ ಸಂಬಂಧವುಳ್ಳವು ಎಂಬ ನಿಲುವಿನಿಂದ ಹೊರಟದ್ದು. ಸಾಹಿತಿಗೆ ಸಾಮಾಜಿಕ, ರಾಜಕೀಯ ಪ್ರಜ್ಞೆ ಇರಬೇಕೆಂಬ ಆಶಯ ಇಲ್ಲಿ ಮುಖ್ಯವಾದದ್ದು. ಅಸ್ಪೃಶ್ಯತೆ, ಜಾತಿ ಪದ್ಧತಿ, ಲಿಂಗಭೇದ ಮತ್ತು ವರ್ಗಭೇದ ನೀತಿಯ ವಿರುದ್ಧ ಹೋರಾಟವನ್ನು ಕಟ್ಟುವುದು ನಮ್ಮ ಮುಖ್ಯ ಉದ್ದೇಶಗಳಲ್ಲಿ ಒಂದು. ಎಲ್ಲಾ ಜನಪರ ನಿಲುವುಗಳಿಗೆ ನಮ್ಮ ಬೆಂಬಲ, ಜನಪರವಾದ ಸಾಂಸ್ಕೃತಿಕ ಹೋರಾಟ ನಮ್ಮ ಮುಖ್ಯ ನೆಲೆ. ಇಂತಹ ಒಲವಿನ ಸಾಹಿತ್ಯ ಸೃಷ್ಟಿ ನಮ್ಮ ಹೋರಾಟದ ಮುಖ್ಯ ದಾಖಲೆ". ಬಂಡಾಯ ಸಂಘಟನೆಯ ಪ್ರಣಾಳಿಕೆ ಆ ಸಾಹಿತ್ಯದ ಸ್ವರೂಪವನ್ನು ಸ್ಪಷ್ಟಪಡಿಸುತ್ತದೆ. ಈ ಹಿನ್ನೆಲೆಯಿಂದ ಹುಟ್ಟಿದ ಬಂಡಾಯ ಸಾಹಿತ್ಯದಲ್ಲಿ ಸಾಮಾಜಿಕ ಮನುಷ್ಯ ಶೋಷಕ ಹಾಗು ಶೋಷಿತ ರೂಪದಲ್ಲಿ ವ್ಯಕ್ತವಾಗಿದ್ದಾನೆ.

ನವೋದಯ ಹಾಗೂ ನವ್ಯ ಸಾಹಿತಿಗಳು ಇದ್ದ ವ್ಯವಸ್ಥೆಯಲ್ಲಿಯೇ ಮನುಷ್ಯನನ್ನು ಹುಡುಕಿದರೆ, ಬಂಡಾಯ ಸಾಹಿತಿಗಳು ಬದಲಾದ ವ್ಯವಸ್ಥೆಯಲ್ಲಿ ಮನುಷ್ಯನ ಕನಸು ಕಾಣುತ್ತಾರೆ. ಹೀಗಾಗಿ ವರ್ತಮಾನದ ಸಾಮಾಜಿಕ ಸಂದರ್ಭದಲ್ಲಿ ವಾಸ್ತವವಾಗಿ ಇರುವ ಮನುಷ್ಯ ಹಾಗೂ ಭವಿಷ್ಯದಲ್ಲಿ ರೂಪುಗೊಳ್ಳಬೇಕಾದ ಮನುಷ್ಯನ ಬಗ್ಗೆ ನವೋದಯ, ನವ್ಯ, ದಲಿತ-ಬಂಡಾಯ ಸಾಹಿತಿಗಳು ಚಿಂತಿಸುವ ಕ್ರಮ ಭಿನ್ನವಾಗಿದೆ. ಬಂಡಾಯ ಸಾಹಿತ್ಯ ಜನಪರವಾದದ್ದು, ಪ್ರಗತಿಪರವಾದದ್ದು, ಜನವಿರೋಧಿ ಪ್ರತಿಗಾಮಿ ಮೌಲ್ಯಗಳನ್ನುಳ್ಳ ಸಾಹಿತ್ಯವನ್ನು ತಿರಸ್ಕರಿಸುವಂಥದ್ದು. ಕ್ರಿಯೆ ಮತ್ತು ಅಕ್ಷರಗಳ ಆಯಾಮವುಳ್ಳದ್ದು.

ಅಸಮಾನತೆಯಿಂದ ತುಂಬಿದ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಬದಲಾಯಿಸಬೇಕೆಂಬ ಹೋರಾಟ, ಸಮಾನ ಸಮಾಜವೊಂದರ ನಿರ್ಮಾಣದ ಕನಸು, ಬಂಡಾಯ ಕೇಂದ್ರ ಕಾಳಜಿಗಳಾಗಿರುವುದರಿಂದ ಇಲ್ಲಿ ಶೋಷಣೆಯ ಎಲ್ಲಾ ಕ್ರೂರ, ವಿಕೃತ ಮುಖಗಳೂ ಶೋಷಣಾರಹಿತ ಸಮಾಜದ ರೋಮ್ಯಾಂಟಿಕ್ ಆದ ಕನಸುಗಾರಿಕೆಯೂ ಏಕಕಾಲದಲ್ಲಿ ಪ್ರಕಟಗೊಳ್ಳುತ್ತದೆ. ಇಲ್ಲಿಯವರೆಗೆ ಸಾಹಿತ್ಯದಲ್ಲಿ ನಿರ್ಲಕ್ಷಿಸಲ್ಪಟ್ಟಂಥ ಗ್ರಾಮೀಣ ಬದುಕಿನ ಜೀವನ ವಿಧಾನ, ಅನುಭವ ದ್ರವ್ಯಗಳ ಮೂಲಕ ಬಂಡಾಯ ಸಾಹಿತಿಗಳು ತಮ್ಮ ಆಶಯಗಳಿಗೆ ರೂಪ ಕೊಡುತ್ತಿರುವುದರಿಂದ ಕನ್ನಡ ಸಾಹಿತ್ಯ ಹೊಸ ಆಯಾಮವನ್ನು ಪಡೆಯುತ್ತಿದೆ. ದಲಿತರ-

ಒಡವರ, ಮಹಿಳೆಯರ ಹಾಗೂ ಭಾರತದಲ್ಲಿ ಅಸ್ಪೃಶ್ಯರೆಂದೇ ಪರಿಗಣಿಸಲ್ಪಟ್ಟ ಮುಸ್ಲಿಂ ಸಂವೇದನೆಗಳನ್ನು ವಿಶಿಷ್ಟ ಅನುಭವಗಳನ್ನು ನೀಡುತ್ತಿವೆ. ಈ ಹಿನ್ನೆಲೆಯಲ್ಲಿ ದಲಿತ ಬಂಡಾಯ ಸಾಹಿತ್ಯದಲ್ಲಿ ವ್ಯಕ್ತವಾದ ಸಾಮಾಜಿಕ ಮನುಷ್ಯನ ಪ್ರಮುಖ ಮುಖಗಳನ್ನು ಕೆಲವು ಪ್ರಾತಿನಿಧಿಕ ಕೃತಿಗಳ ಹಿನ್ನೆಲೆಯಲ್ಲಿ ವಿವೇಚಿಸಬಹುದು.

ಭಾರತದ ಮಟ್ಟಿಗೆ ಚರಿತ್ರೆಯೆಂದರೆ ರಾಜಮಹಾರಾಜರ ಲೀಲಾವಿನೋದಗಳ ವೈಭವಯುತ ಬದುಕಿನ ಜಯಾಪಜಯಗಳ ಇತಿಹಾಸವಾಗಿದೆ. ಚರಿತ್ರೆಯನ್ನು ನಿರ್ಮಿಸಿದವರನ್ನೇ ಚರಿತ್ರೆ ಮರೆತಿದೆ. ಯಾರ ದುಡಿತ ಬೆವರುಗಳಿಂದ ಪಟ್ಟಣಗಳು, ಅರಮನೆಗಳು, ಕೋಟೆ-ಕೊತ್ತಲ ಬುರುಜುಗಳು ಕಟ್ಟಲ್ಪಟ್ಟವೋ, ಯಾರ ಶ್ರಮದಿಂದ ಈ ನಾಡಿನ ಸಂಸ್ಕೃತಿಯ ದ್ಯೋತಕಗಳೆಂದು ಗುರುತಿಸಲ್ಪಡುವ ಭವ್ಯ ಶಿಲ್ಪಕಲೆಗಳು, ಇಮಾರತ್ತುಗಳು, ಗುಡಿಗಳು, ಮಠಮಾನ್ಯಗಳು ನಿರ್ಮಾಣವಾದವೋ, ಯಾರ ಬೆವರಿನ ಬಲಿದಾನದಿಂದ ಸಾಮ್ರಾಜ್ಯಗಳು ವೈಭವಯುತವಾಗಿ ಮೆರೆದವೋ ಅಂಥ ಚರಿತ್ರೆಯ ನಿರ್ಮಾಪಕರನ್ನು ಚರಿತ್ರೆ ಮರೆತಿದೆ. ಬಂಡಾಯ ಸಾಹಿತ್ಯ ಸಾಮಾಜಿಕ ಮನುಷ್ಯನನ್ನು ತನ್ನ ನಾಯಕನನ್ನಾಗಿಸಿಕೊಂಡಿದ್ದರಿಂದ ಇತಿಹಾಸವನ್ನು ನಿರ್ಮಿಸಿ ಚರಿತ್ರೆಯಲ್ಲಿ ದಾಖಲಾಗದವರ ಇತಿಹಾಸವನ್ನು ನಿರ್ಮಾಣ ಮಾಡುತ್ತಿದೆ.

ಈ ಕೆಳಗಿನ ಉದಾಹರಣೆಗಳನ್ನು ಗಮನಿಸಬಹುದು:

೧. ಯಾರು ಕಟ್ಟಿದರಯ್ಯ? ಯಾರು ಕಟ್ಟಿದರು?
ಎಡೆದೊರೆ ನಾಡಿನ ಅಂದವಾದ ಈ ಅಂಗಣದಲ್ಲಿ
ದೂರ ದೂರ ಹರಡಿದ ದುರ್ಗಮವಾದ ಕೋಟೆ
ರಕ್ತಸಿಕ್ತವಾದ ಏಳು ಸುತ್ತಿನ ಕೋಟೆ
ಯಾರು ಕಟ್ಟಿದರಯ್ಯಾ ಯಾರು ಕಟ್ಟಿದರು?
ಬೆಟ್ಟಗಳ ಹತ್ತಿ ಹೆಬ್ಬಂಡೆ ಕೆಡೆದು
ಆನೆ ಗಾತ್ರದ ಕಲ್ಲೆತ್ತಿ ಅಡ್ಡಾಡಿ ನಿಲಿಸಿದರು
ರಟ್ಟೆಯ ಸತುವ ಸವೆಸಿ ಬಿರುಕನ್ನು ಮೆತ್ತಿ
ಕಂದಕಗಳ ತೋಡಿ ಕಣ್ಣೀರು ತುಂಬಿದರು.[೩]

೨. ನೇಗಿಲ ಮೊನೆಯಿಂದ ಇತಿಹಾಸ
ಕೊರೆಯಲ್ಪಟ್ಟಿತು
ಆದರೆ ಕೀರೀಟದೊಜ್ರದ ಮೊನೆಯಿಂದ
ಎಂದು ಕಲಿಸಿದವರು ನಮಗೆ
ಗೆಯ್ಮೆಯ ಕೈಯಿಂದ
ಇತಿಹಾಸ ನಿರ್ಮಾಣವಾಯಿತು
ಆದರೆ ಪುರೋಹಿತರ ಮಂತ್ರದಿಂದ
ಎಂದು ಕಲಿಸಿದರು ನಮಗೆ.[೪]

೩. ಈ ಚರಿತ್ರೆ ನಮ್ಮದಲ್ಲ
ಇದು ನಮಗಲ್ಲ
ರಾಜಾಧಿರಾಜ ಮಾರ್ತಾಂಡ ಬಿರುದೆಂತೆಂಬರ ಗಂಡ
ಬಿರುದು ಹೊತ್ತ ಈ ದೇಶದ ಧರಿತ್ರಿ ಪಾಲನ ಚರಿತ್ರೆ
ಕೀವು ತುಂಬಿಕೊಂಡು ಬದುಕು ಮುದುಡಿಕೊಂಡು
ನೆಲದ ಬಾಂಡಲೆ ಮೇಲೆ ಪತಪತನೆ ನಲುಗಾಡಿ
ಬಾಳಹಳಿದುಕೊಂಡು ಅತ್ತವರ, ಸತ್ತವರ
ಇತಿಹಾಸವಲ್ಲವಿದು.[೫]

ಇಂತಹ ವಿಶಿಷ್ಟ ಚಾರಿತ್ರಿಕ ಪ್ರಜ್ಞೆಯಿಂದ ಬಂಡಾಯ ಸಾಹಿತ್ಯ ಹೊಸತನವನ್ನು ಮೈಗೂಡಿಸಿಕೊಳ್ಳುತ್ತಿದೆ. ವರ್ತಮಾನದಲ್ಲಿ ಮುಂದುವರಿಯುತ್ತಿರುವ ಚರಿತ್ರೆಯ ಕ್ರೌರ್ಯವನ್ನು ಅದರೆಲ್ಲ ವಿಕೃತಿಯೊಂದಿಗೆ ಕಟ್ಟಿಕೊಂಡರೆ ಭವಿಷ್ಯತ್ತಿನ ಇತಿಹಾಸಕ್ಕೆ ಹೊಸದಾರಿಗಳು ತೆರೆಯುತ್ತವೆ.

ದಲಿತ-ಬಂಡಾಯ ಸಾಹಿತ್ಯದ ಪ್ರಾತಿನಿಧಿಕ ಕೃತಿಗಳ ನಾಯಕರು ಹಸಿದ ಮನುಷ್ಯರು. ಅವರ ಒಡಲಾಳದ ಕಿಚ್ಚು, ಹಾಹಾಕಾರ, ಅದಕ್ಕಾಗಿ ತೋರ್ಪಡಿಸುವ ಪ್ರತಿಭಟನೆ ಕಲಾತ್ಮಕವಾಗಿ ಮೂಡಿ ಬಂದಿದೆ. ಕುಂ. ವೀರಭದ್ರಪ್ಪನವರ 'ಕತ್ತಲನು ತ್ರಿಶೂಲ ಹಿಡಿದ ಕಥೆ' ಹಾಗು ದೇವನೂರ ಮಹಾದೇವರ 'ಒಡಲಾಳ' ಈ ನಿಟ್ಟಿನಲ್ಲಿ ಮಹತ್ವದ ಕೃತಿಗಳು.

ಗೌಡರ ಮನೆಯಲ್ಲಿ ತನ್ನ ಜೀವಮಾನದ ಬಹುಕಾಲವನ್ನು ಜೀತದಾಳಾಗಿ ದುಡಿದು ಈಗ ದುಡಿಯುವ ತಾಕತ್ತಿಲ್ಲದ ಕಾರಣ ಹೊರದೂಡಲ್ಪಟ್ಟ ಕತ್ತಲ ಹಲವಾರು ರೀತಿಯಿಂದ ಗೌಡರ ದೌರ್ಜನ್ಯಕ್ಕೆ ಒಳಗಾದವ. ತನಗೆ ಹುಟ್ಟಿದ ಮಕ್ಕಳು ತನ್ನವಲ್ಲವೆಂಬ ಕಾರಣಕ್ಕೆ ಹುಟ್ಟುತ್ತಲೇ ಕೊಂದು ಹಾಕಿದರೂ ಹೆಂಡತಿ ಸಂಕುಲಿಯನ್ನು ಗಾಢವಾಗಿ ಪ್ರೀತಿಸುತ್ತಾನೆ. ತನ್ನ ಬೆವರಿನ ಫಲವಾಗಿ ಹೊಡೆ ಹಿರಿದು ಕಾಳಾಗಿ ನಿಂತ ನಾಲ್ಕು ಜೋಳದ ತೆನೆಗಳನ್ನು ಕದ್ದು ತಂದ ತಪ್ಪಿಗೆ ಹಸಿದಂಟಿನಿಂದ ಹೊಡೆತ ತಿಂದದ್ದನ್ನಾತ ಮರೆಯಲಾರ.

ಯುಗಾದಿಯ ದಿನ ಊರೆಲ್ಲಾ ಹಬ್ಬದ ಸಂಭ್ರಮ ತುಂಬಿ ತುಳುಕುವಾಗ ಭಯಂಕರ ಹಸಿವಿನಿಂದ ಬಳಲುವ ಕತ್ತಲ ಗೌಡರ ಮನೆಯ ಮುಂದೆ ಎಷ್ಟು ಹೊತ್ತು ನಿಂತರೂ ತುತ್ತು ಅನ್ನ ಸಿಗುವುದಿಲ್ಲ. ಹಳಸಿದನ್ನವನ್ನು ತಿಪ್ಪೆಗೆಸೆದ ಗೌಡತಿ, ಬಿಸಿ ಅನ್ನವನ್ನು ನಾಯಿಗೆಸೆವ ಗೌಡರ ಮಗ ಕತ್ತಲನ ಹಸಿವನ್ನು ಹೆಚ್ಚಿಸುತ್ತಾರೆ. ಪೂಜಾರಿಯನ್ನು ದೂಡಿ, ಗುಡಿಯನ್ನು ಪ್ರವೇಶಿಸಿ ಹೊಟ್ಟೆ ತುಂಬಾ ತಿಂದ ತನ್ನನ್ನು ದಂಡಿಸಲು ಹೊರಗೆ ಕೂಡಿದ ಜನರಿಗೆ ತ್ರಿಶೂಲದ ಉತ್ತರ ನೀಡುವ ಕತ್ತಲನ ಪ್ರತಿಭಟನೆಗೆ ಆ ಕ್ಷಣದ ಹಸಿವಿನ ಭಯಾನಕತೆಯ ಜೊತೆಗೆ ಆತ ಕೆದರುವ ಅವನ ಜೀವಿತದ ಕತೆ ಮತ್ತಷ್ಟು ಧೈರ್ಯ ನೀಡುತ್ತದೆ. ಏಕಕಾಲದಲ್ಲಿ ಜಮೀನ್ದಾರಿ ವ್ಯವಸ್ಥೆ, ಅಸ್ಪೃಶ್ಯತೆ ಹಾಗೂ ಧಾರ್ಮಿಕ ಅಸಮಾನತೆಗಳ ವಿರುದ್ಧ ಕತ್ತಲ ತೋರುವ ಪ್ರತಿಭಟನೆ ಅನಿರೀಕ್ಷಿತವೆನಿಸದೆ ಅನಿವಾರ್ಯವೆನಿಸುತ್ತದೆ.

ದೇವನೂರು ಅವರ ಪಾತ್ರಗಳು ಮಾನವ ನಿರ್ಮಿತ ನರಕವನ್ನು ಅನುಭವಿಸುವಲ್ಲಿಯೇ ಹೆಚ್ಚಿನ ಆಸ್ಥೆಯನ್ನು ತೋರಿವರೆ ಕುಂ. ವೀರಭದ್ರಪ್ಪನವರು ಸೃಷ್ಟಿಸಿದ ಪಾತ್ರಗಳ ನಾಯಕರು

ಅನುಭವಿಸುವುದರೊಂದಿಗೆ ಧಿಕ್ಕರಿಸುವ ಪ್ರಕ್ರಿಯೆಯಲ್ಲಿ ಅನನ್ಯವಾಗಿ ತೊಡಗಿಕೊಳ್ಳುತ್ತಾರೆ. ಈ ಕಾರಣದಿಂದಲೇ 'ಒಡಲಾಳ' ಕಥೆಗಿಂತ 'ಕತ್ತಲನು ತ್ರಿಶೂಲ ಹಿಡಿದ ಕಥೆ' ಹೆಚ್ಚು ಮಹತ್ವದ್ದೆನಿಸುತ್ತದೆ.

ಹಸಿವಿನ ಭೀಕರತೆಯನ್ನು ಕಟ್ಟಿಕೊಡುವ ಅಶೋಕ್ ಶೆಟ್ಟರ್ ಅವರ ಕವಿತೆಯ ಸಾಲುಗಳನ್ನು ನೋಡಬಹುದು:

"ಈ ಸಾವುಗಳು
ಊರು ಕೇರಿ ಬಿಟ್ಟು ದೂರ ಹೋಗಿ ಚೀತ್ಕರಿಸಿ
ಸೌಧಗಳ ನಿದ್ರೆ ಕೆಡಿಸುವುದಿಲ್ಲ
ರಾಜಧಾನಿಯ ರಾಜರ ಕಿವಿಗೆ ಮುಟ್ಟುವುದಿಲ್ಲ
ಮುಟ್ಟಿ ಹೃದಯ ತಟ್ಟುವುದಿಲ್ಲ
ತಲೆ ಒಡೆಯದೆ ಗುಂಡಿಕ್ಕದೆ ರಕ್ತ ಹರಿಸದೆ
ಸತ್ತು ಹೋಗುವ ವಿಚಿತ್ರ ಸಾವು
ಎಲ್ಲದರ ಸಮ್ಮಿಶ್ರಿತ ಅಮೃತ ಪೂರೈಕೆ
ಇಂಡಿಯಾದ ಹಸಿವಿನ ಸಾವು"[1]

ಜಾತಿ ವ್ಯವಸ್ಥೆ ಸೃಷ್ಟಿಸಿದ ದೊಡ್ಡ ಪಿಡುಗು ಅಸ್ಪೃಶ್ಯತೆ. ಮಾನವ ಘನತೆಗೆ ಬಂದೊದಗಿದ ವಿಪತ್ತಿದು. ಸಮಾಜದಲ್ಲಿ ಮನುಷ್ಯನ ಸ್ಥಾನಮಾನಗಳನ್ನು ಅವನ ಶಕ್ತಿ ಸಾಮರ್ಥ್ಯ ಪ್ರತಿಭೆಗಿಂತ ಹೆಚ್ಚಾಗಿ ಹಣ ಮತ್ತು ಜಾತಿ ನಿರ್ಧರಿಸುತ್ತವೆ. ಒಬ್ಬ ಮನುಷ್ಯ ಮತ್ತೊಬ್ಬನನ್ನು ಗೌರವಿಸಲಾರದಂತಹ ಅನಾಗರಿಕ ಬೆಳವಣಿಗೆ ಇದು. ವಿಷ್ಣುವಿನ ತಲೆಯಿಂದ ಹುಟ್ಟಿದ ಬ್ರಾಹ್ಮಣರು, ತೋಳುಗಳಿಂದ ಹುಟ್ಟಿದ ಕ್ಷತ್ರಿಯರು, ತೊಡೆಯಿಂದ ಹುಟ್ಟಿದ ವೈಶ್ಯರು ಒಟ್ಟಾಗಿಯೇ ಪಾದದಿಂದ ಹುಟ್ಟಿದ ದಲಿತರನ್ನು ಮುಟ್ಟಿಸಿಕೊಳ್ಳದೆ ಊರ ಹೊರಗೆ ಬೇರೆಯದೇ ಆದ ಕೇರಿಗಳನ್ನು ಸೃಷ್ಟಿಸಿದರು. ಯಾರು ತಲೆ, ತೋಳು, ತೊಡೆ, ಪಾದಗಳಿಂದ ಹುಟ್ಟುವುದಿಲ್ಲವೆಂಬ ಸತ್ಯ ಗೊತ್ತಿದ್ದರೂ ಸಾವಿರಾರು ವರುಷಗಳಿಂದ ದಲಿತರನ್ನು ಅಸ್ಪೃಶ್ಯರನ್ನಾಗಿಸಲಾಯಿತು. ಹೇಸಿಗೆ ತಿನ್ನುವ ನಾಯಿಗಳನ್ನು ತುಟಿಯಿಂದ ಮುದ್ದಿಸುವ, ದನಕರುಗಳನ್ನು ಪ್ರೀತಿಯಿಂದ ಮಾತನಾಡಿಸಿ ಮೈ ತಿಕ್ಕುವ ಮೇಲ್ಜಾತಿಯ ಜನ ತಮ್ಮ ಹಾಗೆಯೇ ಹುಟ್ಟಿದ ಒಂದು ಜಾತಿಯ ಸಮೂಹವನ್ನು ಪ್ರಾಣಿಗಿಂತಲೂ ಕಡೆಯಾಗಿ ನಡೆಸಿಕೊಂಡು ಬಂದರು. ದಲಿತರ ಸ್ವಾಭಿಮಾನವನ್ನೇ ನಂದಿಸಿದ ಮೌಲ್ಯವಿದು. ಸಾಮಾಜಿಕ ಬದುಕಿನಲ್ಲಿ ಅಸ್ಪೃಶ್ಯರೆಂದು ಪರಿಗಣಿಸಲ್ಪಟ್ಟವರನ್ನು ನಮ್ಮ ಸಾಹಿತ್ಯ ಪರಂಪರೆ ಕೂಡಾ ಸ್ಪರ್ಶಿಸಿದ್ದು ತೀರಾ ಕಡಿಮೆ. ಭಾರತದ ಹಳ್ಳಿಹಳಿಗಳಲ್ಲಿ ಊರ ಹೊರಗಿನ ಕೇರಿಗಳಲ್ಲಿ ವಾಸಿಸುವ ಮೇಲ್ಜಾತಿಯ, ಮೇಲ್ವರ್ಗದ ಜನರಿಗೆ ಮೆಟ್ಟು ಹೊಲಿದು ಕೊಡುವ ದ್ಯಾಮ, ದುರುಗ, ಕಾಳ, ಗುರುವ, ಚೋಮ, ಪರತ, ಚಲುವ ಮೊದಲಾದವರು ತಮ್ಮ ಅಸ್ಪೃಶ್ಯತೆಯ ಅನುಭವದೊಂದಿಗೆ ದಲಿತ-ಬಂಡಾಯ ಸಾಹಿತ್ಯದಲ್ಲಿ ಮೈದಾಳಿದ್ದಾರೆ.

"ಹುಟ್ಟಬಾರದಪ ಹುಟ್ಟಬಾರದು
ಏಳೇಳ್ಳ ಜಲಮದಾಗ ಈ ಭೂಮಿಮ್ಯಾಗ
ಹೊಲಿಮಾದಿಗ್ರಾಗಿ ಹುಟ್ಟಬಾರ್ದು"[2]

ದಲಿತ ಜನಾಂಗ ಅನುಭವಿಸುತ್ತಾ ಬಂದ ಅಸ್ಪೃಶ್ಯತೆಯ ಭೀಕರ ಅನುಭವಗಳ ತೀವ್ರ ಅಭಿವ್ಯಕ್ತಿಗಳಿವು. ಆ ನೋವಿಗೆ ಪ್ರತೀಕಾರವಾಗಿ ಅಷ್ಟೆ ಗಡುಸಾದ ಪ್ರತಿಭಟನೆಯ ಗಟ್ಟಿ ದನಿಗಳನ್ನು ನೋಡಬಹುದು:

"ಅಯವ್ವ ಹಡದವ್ವ
ಎಡಗೈಯಾಗ ಝುಂಡಾ ಹಿಡಕೊಂಡ
ಬಲಗೈ ಹಸ್ತ ಎಲ್ಲರ ತಲಿಮ್ಯಾಲ ಸಮಕ ಯಾಕ ಇಡ್ತೀ?
ಇವ್ರು ನಮಗ ನೋಡಿದರ
ಅಂಗಾಲಿಗೆ ಹೇಸಿಗೆ ಹತ್ತಿದೆಂಗ ಮಾಡ್ತಾರ
ಯಾಕ? ನಾವು ನಿನ್ನ ಮಕ್ಕಳಲ್ಲ?
ಎನ ನಿನ್ನ ಸವತಿಗಿ ಹುಟ್ಟಿದ ಮಕ್ಕಳಾ?
ಇಲ್ಲ ನಿನ್ನ ಮಿಂಡ್ರಿಗೆ ಹೊಟ್ಟಿದೋರಾ?"[೬]

ಸಾಮಾಜಿಕ ಅವಮಾನದಲ್ಲಿ ಬೆಂದು ಹೋದ ದಲಿತನ ನೋವು, ರೊಚ್ಚು ಆಡು-ನುಡಿಯಲ್ಲಿ ಸಹಜವಾಗಿ ರೌದ್ರದ ರೂಪ ತಾಳಿದೆ.

ಈ ನಾಡಿನ ಹಸಿವು-ಬಡತನ-ದರಿದ್ರಗ್ರಸ್ಥ ಸ್ಥಿತಿಗೆ ಮೂಲ ಕಾರಣ ಆರ್ಥಿಕ ಅಸಮಾನತೆ. ಭೂಮಿಯ ಒಡೆತನ ಮೇಲ್ವರ್ಗದವರಿಗೆ ಮಾತ್ರ ಇದ್ದು ಭೂಹೀನ ಜನತೆ ಕೂಲಿಕಾರಶಾಹಿ, ಜೀತದಾಳುಗಳಾಗಿ ಜೀವ ತೇಯುತ್ತಿದ್ದಾರೆ. ಆರ್ಥಿಕ ಅಸಮಾನತೆಯ ಮೊದಲ ಹೆಜ್ಜೆಯಾಗಿ ಆ ಜನತೆಯ ಅಂತರ್ಯದಿಂದ ಬರುವ ಕೂಗು ಹಾಗೂ ಸಹಜ ಆಕಾಂಕ್ಷೆಯೆಂದರೆ ಭೂಮಿಯ ಒಡೆತನಕ್ಕೆ ಸಂಬಂಧಿಸಿದ್ದು.

"ಉಕ್ಕಿನ ಮೈಯಿ ಹೂವಿನ ಮನಸು
ಮೂಡುವ ಭೂಮಿಯ ಗೇಣಿಯ ಕನಸು
ಭೂತಾಯಿಯ ಮಲಮಕ್ಕಳು ನಾವು
ನೋವಲೆದ್ದವರು"[೭]

ಭೂತಾಯಿಯ ಸ್ವಂತ ಮಕ್ಕಳಾಗುವ ಬಯಕೆ ಅವರದ್ದು. ತಮ್ಮ ಬೆವರಿನ ಹೊಳೆಯನ್ನು ಚಿಲ್ಲರೆ ಕಾಸಿಗೆ ಮಾರಾಟ ಮಾಡಿ ಸೇರುಗಳಲ್ಲಿ ಬಿತ್ತಿ ಪಲ್ಲಗಳಲ್ಲಿ ಬೆಳೆದುಕೊಡುವ ಜನತೆಯ ಬದುಕಿನಲ್ಲಿ 'ಉಳುವವನಿಗೆ ಭೂಮಿ'ಯಂತಹ ಕಾನೂನು ಬಂದಾಗ ಹೊಸ ಆಶಾಕಿರಣಗಳು ಮೂಡಿದವು.

ಪ್ರಜಾರಾಜ್ಯ ವ್ಯವಸ್ಥೆ ಸಾಮಾನ್ಯನಿಗೆ ಕೊಡ ಮಾಡುವ ಅಲ್ಪ ಸೌಲಭ್ಯಗಳಲ್ಲಿ ಭೂಮಿಯ ಹಂಚಿಕೆ ಕೂಡಾ ಒಂದು. ಭೂಮಿಯ ಒಡೆತನಕ್ಕಾಗಿ ಹೋರಾಡಲು ಕಾಯಿದೆಯ ಸಹಾಯ ಸಿಕ್ಕಿತಾದರೂ ಪ್ರಾಯೋಗಿಕವಾಗಿ ಅದು ಸೃಷ್ಟಿಸಿದ ಸಮಸ್ಯೆಗಳು ಹಲವಾರು. ಬಂಡವಾಳಶಾಹಿಯ ಪ್ರಭಾವದಿಂದ ತಮ್ಮ ಸ್ಥಾನಮಾನ, ದರ್ಪ ಕುಗ್ಗತೊಡಗಿದಾಗ ಮೊದಲೇ ಗರ್ವಿಷ್ಠರಾಗಿದ್ದ ಭೂಮಾಲಿಕರು ಮತ್ತಷ್ಟು ಕ್ರೂರಿಗಳಾದರು. ಚೋಮನ ಗೇಣಿಯ ಕನಸು ಅಲ್ಪ ಮಟ್ಟಿಗಾದರೂ

ನನಸಾಗುವ ಸಂದರ್ಭದಲ್ಲಿ ಈ ನೆಲ ಕುಡಿದ ರಕ್ತ, ತಿಂದ ದೇಹಗಳು ದಲಿತ-ಬಂಡಾಯ ಸಾಹಿತ್ಯದಲ್ಲಿ ಮರುಹುಟ್ಟು ಪಡೆದಿವೆ.

ರಾಜ-ಮಹಾರಾಜರು ಅಳಿದು ಪ್ರಜೆಗಳ ಸರಕಾರ ಹುಟ್ಟಿಕೊಂಡರೂ ಈ ದೇಶದ ದುಡಿಯುವ ಜನತೆಯ ಬದುಕಿನಲ್ಲಿ ಹೇಳಿಕೊಳ್ಳುವಂತಹ ಬದಲಾವಣೆಗಳೇನೂ ಸಂಭವಿಸಲಿಲ್ಲ. ಹಿಂದಿನ ಸ್ಥಿತಿಯೇ ಮತ್ತೊಂದು ರೂಪದಲ್ಲಿ ಮುಂದುವರೆದಿದೆ. ಚೋಮನ ಗೇಣಿಯ ಕನಸು ಪರತನಲ್ಲಿಯೂ ಕೈಗೂಡದೇ ಹೋಯಿತು.

ಕುಲಕರ್ಣಿ ಸೋಮಿಯಿಂದ ತನಗೆ ಭೂಮಿ ಸಿಗುವ ಸೂಚನೆ ಸಿಕ್ಕಾಗ ಪರತ ಸೂರ್ಯನಿಗೆ ಸವಾಲು ಹಾಕೋ ರೀತಿಯಲ್ಲಿ ನಗುತ್ತಾನೆ. ತಲತಲಾಂತರದಿಂದ ತಗ್ಗಿಸಿಕೊಂಡು ಬಂದ ತಲೆಯನ್ನು ಮೇಲೆತ್ತಲೂ ತೊಂದರೆಯಾದರೂ ಎದೆ ಸೆಟೆಸಿಕೊಂಡು ನಡೆಯುತ್ತಾನೆ. ಕುಲಕರ್ಣಿ ಕೇಳಿದ ಇಪ್ಪತ್ತು ರೂಪಾಯಿಗೆ ಮಗನನ್ನೂ ಶೆಟ್ಟರಲ್ಲಿ ದುಡಿಯಲು ಒಪ್ಪಿಸಿ ಐನೂರಕ್ಕೆ ಹೆಬ್ಬೆಟ್ಟೊತ್ತುತ್ತಾನೆ. ಗೌಡ ಹೊಲ ಬೇಡವೆಂದು ಬರೆದು ಕೊಡಲು ಗದರಿಸಿದಾಗ ಪ್ರತಿಭಟಿಸುತ್ತಾನೆ. ಗೌಡ ಕುಲಕರ್ಣಿ ಶಾಮೀಲಾಗಿ ತನ ಕನಸನ್ನು ಅಪಹರಿಸಿದಾಗ ಹುಚ್ಚನಾಗುತ್ತಾನೆ. ದಲಿತ ಮಂತ್ರಿಯ ಸಮಾರಂಭದಲ್ಲಿ ತನಗಾದ ಅನ್ಯಾಯ ತಿಳಿಸಲು ಹೋಗಿ ಜನರ ಕಾಲಿಗೆ ಸಿಕ್ಕು ಸಾಯುತ್ತಾನೆ. ವ್ಯವಸ್ಥೆಯ ಬೇರುಗಳೇ ಆದ ಗೌಡ, ಕುಲಕರ್ಣಿ, ಮಂತ್ರಿ ಸೇರಿ ಪ್ರಜಾಪ್ರಭುತ್ವದ ಕಾನೂನುಗಳನ್ನು ಭ್ರಷ್ಟಾಚಾರವಾಗಿಸಿ ಪರತನನ್ನು ಕೊಲ್ಲುತ್ತದೆ.

ಚೋಮನಿಗೂ ಪರತನಿಗೂ ಇರುವ ವ್ಯತ್ಯಾಸ ಸ್ಪಷ್ಟ. ಚೋಮ ಭೂಮಿಯನ್ನು ಕಳೆದುಕೊಂಡಿದ್ದಕ್ಕೆ ಮುಖ್ಯ ಕಾರಣ ಆತ ಅತಿಯಾದ ಕುಡುಕನಾಗಿರುವುದು. ಪರತ ಭೂಹೀನನಾಗಲು ಕಾರಣ ಪುರೋಹಿತಶಾಹಿ ಹಾಗೂ ಜಮೀನ್ದಾರಿ, ವಂಚನೆ ಹಾಗೂ ದರ್ಪ. ಪರತನ ದುರಂತದ ಕಾರಣಗಳನ್ನು ಲೇಖಕರು ಸಮಾಜ ವ್ಯವಸ್ಥೆಯ ರಚನೆಯಲ್ಲಿಯೇ ಕಂಡುಕೊಂಡಿದ್ದಾರೆ. ಚೋಮ, ಪರತ, ಚಲುವ ಎಲ್ಲರೂ ಒಂದೇ ವ್ಯಕ್ತಿತ್ವದ ಬೆಳವಣಿಗೆಯಾಗಿದ್ದಾರೆ. ಕೋಟಿಗಟ್ಟಲೆ ಚೋಮರು, ಲಕ್ಷಗಟ್ಟಲೆ ಪರತರು ಈ ಮಣ್ಣಲ್ಲಿ ಮಣ್ಣಾಗಿ ಹೋದಾಗ ಅದರ ಫಲವನ್ನು ಚಲುವನಂಥ ಒಬ್ಬೊಬ್ಬರು ಅನುಭವಿಸುತ್ತಾರೆ. ಬೆಸಗರ ಹಳ್ಳಿ ರಾಮಣ್ಣನವರ 'ಚಲುವನ ಪರಂಗಿ ತೋಟಗಳು' ಕತೆಯ ನಾಯಕ ಮೂಗೂರ ಸಂಘರ್ಷಕ್ಕೆ ಸಿದ್ಧನಾದ ಮನುಷ್ಯ ತನ್ನ ಪ್ರಾಣವನ್ನು ಕಳೆದುಕೊಂಡಾದರೂ ತನಗೆ ದೊರೆತ ಪರಂಗಿ ಗಿಡಗಳನ್ನು ಉಳಿಸಿಕೊಳ್ಳಲು ಹಿಂದೆ ಮುಂದೆ ನೋಡುವುದಿಲ್ಲ. ಚೋಮ ಮೂಢ, ಅಜ್ಞಾನಿ, ಕುಡುಕ, ಪರತ ಸಂಘರ್ಷಹೀನ ಮೂಗೂರ ಪ್ರತಿಭಟನೆಯ ಅಪರಾವತಾರ. ಚಲುವ ಇವರ ಪ್ರತಿಭಟನೆ ಹೋರಾಟಗಳ ಫಲವನ್ನು ಅನುಭವಿಸುವಾತ. ಈ ಸರಪಳಿ ಶತಮಾನಗಳ ಭಾರತೀಯ ಬದುಕಿನ ಬೆಳವಣಿಗೆಯನ್ನು ಒಳಗೊಂಡಿದೆ.

ಜಮೀನ್ದಾರಿ ವ್ಯವಸ್ಥೆ ಸೃಷ್ಟಿಸಿದ ಅಮಾನವೀಯ ಸಮಸ್ಯೆಗಳಲ್ಲಿ ಜೀತ ಪದ್ಧತಿಯೂ ಒಂದು. ಶತಮಾನಗಳಿಂದ ರಾಷ್ಟ್ರದ ನಿಸರ್ಗ ಸಂಪತ್ತನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿರುವ ಕೆಲವೇ ಕೆಲವು ಜನ ದಲಿತರ, ಬಡವರ ಬೆವರಿನಲ್ಲಿ ಬದುಕುತ್ತಿದ್ದಾರೆ. 'ಅನ್ನದ ಸಮಸ್ಯೆ' ಮನುಷ್ಯನಲ್ಲಿ ತುಂಬಿದ ಗುಲಾಮಗಿರಿ ಹತಾಶೆಯ ಸ್ಥಿತಿಯನ್ನು ಬೆಸಗರ ಹಳ್ಳಿ ರಾಮಣ್ಣನವರ

'ಜೀತ' ಕಥೆಯಲ್ಲಿ ಕಾಣಬಹುದು. ದಲಿತ, ಬಂಡಾಯ ಸಾಹಿತ್ಯದಲ್ಲಿ ವ್ಯಕ್ತವಾದ ಸಾಮಾಜಿಕ ಮನುಷ್ಯನ ಮತ್ತೊಂದು ಮುಖ ಜೀತಗಾರನದಾಗಿದೆ, ಗುಲಾಮನದಾಗಿದೆ.

'ಹಾಳು ಜೀತಕ್ಕೆ ಮಕ್ಕಳ ಇರಿಸೋದು ಅಂದ್ರೆ ನಂಗೆ ಸಂಕಟ ಬೆಟ್ಟದಷ್ಟು ಬಂದು ಎದೆ ಮೇಲೆ ಅದಿಕಂಡಾಯ್ತದೆ. ಹಾಳೂ ಜನ ಕಾಲದಿಂದ್ಲೂ ಜೀತದ ಮನೆಯೋರು, ವಂಶದೋರು ಎಂದು ಕರ್ಮ ರೂಢಿ ಇನ್ನಾದರೂ ನಿಲ್ಲಿಸಲಿ'.[೧೦]

"ನನಗೆ ದುಃಖ ಒದ್ದುಕೊಂಡು ಬರೋವಾಗ ಹೆತ್ತೋಳ್ಗೆ ಅದು ಎಷ್ಟಿರಬಹುದು ಅಂತ ನಾ ಕಾಣೆನೇ ತಡ್ಕೋ" ಎಂದು ದೀಪದ ಬೆಳಕಿಂದ ಅಪ್ಪ ಕಣ್ಣೊರೆಸಿಕೊಂಡ.[೧೧]

ಮಕ್ಕಳನ್ನು ಜೀತಕ್ಕೆ ಕಳಿಸುವಾಗ ಚಿಕ್ಕರಾಮನ ತಂದೆ-ತಾಯಿಯರು ಪಡುವ ಮಾನಸಿಕ ಯಾತನೆ ಎಲ್ಲಾ ಬಗೆಯ ಗುಲಾಮಗಿರಿಗೆ ತುತ್ತಾದವರ ತಳಮಳವನ್ನು ಸೂಚಿಸುತ್ತದೆ. ಆದರೆ ಅವರ ಬದುಕಿಗೆ ಪರ್ಯಾಯ ಮಾರ್ಗಗಳೇ ಇಲ್ಲ. ಜೀತಕ್ಕೆ ಸೇರಿದ ಚಿಕ್ಕರಾಮ ಗೆಳೆಯ ಪುಟ್ಟನಿಂಗನೊಡನೆ ದೊಡ್ಡಾಟದ ಭೀಮ-ದುಶ್ಯಾಸನರ ಪಾರ್ಟನ್ನು ಹಾಕಿ ಆನಂದಿಸುತ್ತಿರುವಾಗ ದನಗಳು ಒಡೆಯ ದಾಸಪ್ಪನ ಕಬ್ಬಿನ ಗದ್ದೆಯನ್ನು ಮೇಯುತ್ತಿರುತ್ತದೆ. ಗುತ್ತಿಗೆದಾರ ದಾಸಪ್ಪ ಕುರಿಯನ್ನೋ, ದನವನ್ನೋ ಓಡಾಡಿಸಿ ಹಿಡಿಯುವಂತೆ ಹಿಡಿದು ತಂದು ಕಬ್ಬಿನ ಗರಿಯಿಂದ ಮೂಡಿಸುವ ಬಾರಿ ಹರಿಸುವ ನೆತ್ತರು ಜಮೀನ್ದಾರಿ ವ್ಯವಸ್ಥೆಯ ಕ್ರೌರ್ಯಕ್ಕೆ ಬರೆದ ಭಾಷ್ಯೆಯಂತಿದೆ.

ಮಾನವ ಚೇತನವು ಅನ್ಯಾಯ-ಶೋಷಣೆಗಳನ್ನು ನಿರಂತರವಾಗಿ ಒಪ್ಪಿಕೊಂಡು ಹೋಗುವುದು ಅಸಾಧ್ಯ. ಪ್ರತಿಭಟನೆ ಸಹಜ ಪ್ರತಿಕ್ರಿಯೆಯಾಗಿರುತ್ತದೆ. ಚಿಕ್ಕರಾಮನ ಅಣ್ಣ ಪುಟ್ಟಸ್ವಾಮಿ ಗುತ್ತಿಗೆದಾರ ದಾಸಪ್ಪನನ್ನು ಬಾಯಿಗೆ ಬಂದಂತೆ ಬಯ್ದು, ಹೊಡೆದ ಏಟಿಗೆ ಲೆಕ್ಕ ಚುಕ್ತಾ ಆಯಿತು ಎಂಬ ದಿಟ್ಟತನವನ್ನು ತೋರಿಸುತ್ತಾನೆ. ತಮ್ಮನನ್ನು ಜೀತದಿಂದ ಮುಕ್ತಗೊಳಿಸಿ ಊರಿಗೆ ಕರೆದುಕೊಂಡು ಹೋಗಲು ಸಿದ್ಧನಾಗುತ್ತಾನೆ. ಆ ವೇಳೆಗೆ ತನ್ನ ಊರಿನಲ್ಲಿ ಮಳೆ-ಬೆಳೆಯಿಲ್ಲದೆ ಅವರ ಅಪ್ಪ-ಅಮ್ಮ ಕೂಡಾ ಈ ಕಡೆಗೆ ಬರುತ್ತಿರುವ ವಿಷಯ ತಿಳಿಯುತ್ತದೆ. ತಾವು ಅನುಭವಿಸುತಿರುವ ಸಂಕಟಕ್ಕೆ ಅದರ ಕಾರಣಕರ್ತರಿಗೆ ಧಿಕ್ಕಾರ ಹೇಳುವ ಮನಸ್ಸುಗಳು ಮತ್ತೆ ವ್ಯವಸ್ಥೆಗೆ ಸಲಾಮು ಹೊಡೆಯುವ ಅನಿವಾರ್ಯತೆಯನ್ನು ಸೃಷ್ಟಿಸುವಲ್ಲಿ ವ್ಯವಸ್ಥೆಯ ಜೊತೆ ಪ್ರಕೃತಿ ಕೂಡಾ ಶಾಮೀಲಾಗಿ ಬಿಡುವ ದುರಂತವನ್ನು ಕಲಾತ್ಮಕವಾಗಿ ನೀಡುವ ಕಥೆಯಿದು.

ರಾಜಪ್ರಭುತ್ವಕ್ಕೋ, ಪ್ರಜಾಪ್ರಭುತ್ವದ ಪ್ರಭುಗಳಿಗೋ, ಧರ್ಮಗುರುಗಳಿಗೋ, ಮೇಲ್ವರ್ಗ-ಮೇಲ್ಜಾತಿಯವರಿಗೋ ಸೇವೆ ಸಲ್ಲಿಸುತ್ತಾ ಇತಿಹಾಸದುದ್ದಕ್ಕೂ ಶೋಷಣೆಗೊಳಪಟ್ಟ, ಇಂದಿಗೂ ಶೋಷಿಸಲ್ಪಡುತ್ತಿರುವ ಸಾಮಾನ್ಯ ಮನುಷ್ಯ ಮಾನಸಿಕ ಗುಲಾಮಗಿರಿಗೆ ತುತ್ತಾಗುತ್ತಾನೆ. ಹೀಗಾಗಿ ಜನತೆಯ ಸಾಹಿತ್ಯವೆಂದು ಹೇಳಬಹುದಾದ ಜನಪದ ಸಾಹಿತ್ಯದಲ್ಲಿ ಕೂಡಾ ಬಹಳಷ್ಟು ಸಾರಿ ಮೇಲ್ವರ್ಗದ ಮೌಲ್ಯಗಳೇ ಪ್ರತಿಪಾದನೆಗೊಂಡಿವೆ. ಬರಗೂರು ರಾಮಚಂದ್ರಪ್ಪನವರ 'ಗುಲಾಮಗೀತೆ' ಸಂಕಲನದ ಹಲವಾರು ಕವಿತೆಗಳು ಗುಲಾಮಗಿರಿಗೆ ತುತ್ತಾದ ಮನಸ್ಸುಗಳ ಒಳಗುದಿಯನ್ನು ನಿರೂಪಿಸುತ್ತವೆ.

"ಬೇರು ಕಿತ್ತ ಮರ ನಾರು ನನ್ನ ನರ
ಹಗ್ಗವಾಯಿತು ನಿಮಗೆ ಉರುಲು ನನಗೆ
ಸಾವ ನೇಯುವ ನೂಲು ಭಾವ ಬತ್ತಿದ ಮಾಲು
ಬಣ್ಣಬಣ್ಣದ ನೆಯ್ದೆ ಬಿದ್ದೆ ಬಲೆಗೆ,
ನಿಮ್ಮಕನಸಿನ ಮನಸು ಸುಳ್ಳು ಹಿಂದಿನ ಸತ್ಯ
ಕಾನೂನು ಕಂಬಿಗಳ ಕರುಳು ನಾನು
ಚಳಿಗೆ ಉಣ್ಣೆಯ ಉಡುಪು ಬಿಸಿಲು ಕಾಲದ ಕೊಡೆ
ಗುಡುಗು ಸಿಡಿಲುಗಳ ಕೊರಳು ನಾನು"[೧೨]

ಗುಲಾಮಗಿರಿಯ ಕಾರಣದಿಂದ ಮಾನವ ಚೇತನ ನಾಶವಾಗಿ ಹೋದ ಅಪಾಯವನ್ನಿಲ್ಲಿ ಕಾಣಬಹುದು. ಎಸ್. ಎಸ್. ಹಿರೇಮಠ ಅವರ 'ಮನುಷ್ಯನೆಲ್ಲಿ' ಎಂಬ ಕವಿತೆ ವರ್ಗ-ವರ್ಣ-ಧರ್ಮಗಳ ಕಾರಣದಿಂದ ಮನುಷ್ಯ ತಾಳಿರುವ ವಿಕಾರ ರೂಪಗಳನ್ನು ಕಳಚಿ ನಿಜವಾದ ಮನುಷ್ಯನ ಹುಡುಕಾಟಕ್ಕೆ ತೊಡಗುತ್ತದೆ. ಮನುಷ್ಯನನ್ನು ಗುಲಾಮಗಿರಿಯಿಂದ ಮೇಲೆತ್ತುವ ಅಭೀಪ್ಸೆ ಇಲ್ಲಿ ಮುಖ್ಯವಾಗುತ್ತದೆ.

"ಓ ನನ್ನ ದೇಶ ಬಾಂಧವರೇ
ತಲೆ ಎತ್ತಿ ನೋಡಿರಿ...
ಬರಲಿದ್ದಾರೆ ಪುಷ್ಪಕ ವಿಮಾನದಲ್ಲಿ
ಅದೇ ಅದೇ ರಾಮಾಯಣದ ವಿಶ್ವಾಮಿತ್ರ ಮೇನಕೆಯರು
ಅದೇ ಅದೇ ನಮ್ಮ ಜಗದಂಬೆಯರು
ಅನ್ನ ಅನ್ನ ಅಂತ ಬಾಯ ಬಡಕೊಳ್ಳುತ್ತೀರಲ್ಲ ನೀವು
ನಿಮ್ಮ ತಲೆಯ ಮೇಲೆ ಅನ್ನದ ಪಾಕೀಟು ಸುರುವುತ್ತಾರೆ
ಸಿಕ್ಕವರು ಸಿಕ್ಕಷ್ಟು ಹೊಡಕೊಳ್ಳಿರಿ ಬಾಂಧವರೇ
ಹೊಟ್ಟೆಯ ಮುಂದೆ ಜಾತಿಗೀತೆ ಎಲ್ಲ ಮರೆಯುತ್ತದೆ"[೧೩]

ಸ್ವಾತಂತ್ರ್ಯೋತ್ತರ ಭಾರತದ ಭ್ರಷ್ಟ ರಾಜಕಾರಣ ಹಾಗೂ ಜನತಾ-ಜನಾರ್ದನರ ಬದುಕನ್ನು ಹರಿತ ವ್ಯಂಗ್ಯದಲ್ಲಿ ಹಿಡಿದಿಡಲಾಗಿದೆ. ಈ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಾಗ ಸಾಮಾಜಿಕ ಮನುಷ್ಯ ಸಂಭ್ರಮದಿಂದ ಸುಂದರ ಬದುಕಿನ ಕನಸು ಕಂಡಿದ್ದ. ಬದಲಾವಣೆ ಬಯಸಿದ್ದ. ಆದರೆ ಪ್ರಜಾಪ್ರಭುತ್ವದ ಮುಸುಕಿನೊಳಗೆ ಬಂಡವಾಳಶಾಹಿ, ಅಧಿಕಾರಶಾಹಿ, ಧರ್ಮಶಾಹಿಗಳು ವ್ಯವಸ್ಥಿತವಾಗಿ ಬೆಳೆದು ನಿಂತಾಗ ಸ್ವಾತಂತ್ರ್ಯ ಕೇವಲ ರಾಜಕಿಯ ಹಸ್ತಾಂತರವೆನಿಸತೊಡಗಿತು. ಹಸಿವು, ಬಡತನ, ನಿರುದ್ಯೋಗಗಳಂತಹ ಭೀಕರ ಸಮಸ್ಯೆಗಳಿಗೆ 'ಗರೀಬಿ ಹಠಾವೊ'ದಂತಹ ಹುಸಿ ಘೋಷಣೆಗಳು ಮೊಳಗಿದವು. ಆಳುವ ವರ್ಗದ ಸರ್ವಾಧಿಕಾರಿ ಧೋರಣೆಯ ಸಂಕೇತವೆಂಬಂತೆ ತುರ್ತುಪರಿಸ್ಥಿತಿ ಹೇರಲ್ಪಟ್ಟಿತು. ಸಾಮಾಜಿಕ, ಆರ್ಥಿಕ ಸಮಾನತೆಗೆ ಪ್ರಯತ್ನಿಸುವ ಸಮಾಜವಾದಿ ಶಕ್ತಿಗಳ ಹುಟ್ಟಡಗಿಸುವ ಪ್ರಯತ್ನ ನಿರಂತರವಾಗಿ ನಡೆಯಿತು. ಇಂಥ ವರ್ತಮಾನ, ದಲಿತ-ಬಂಡಾಯ ಸಾಹಿತ್ಯದಲ್ಲಿ ಚಿತ್ರಣಗೊಂಡಿದೆ. ಬರಗೂರು ರಾಮಚಂದ್ರಪ್ಪನವರ 'ಭರತನಗರಿ' ಈ ನಿಟ್ಟಿನಲ್ಲಿ ಅರ್ಥಪೂರ್ಣ ಕೃತಿಯಾಗಿದೆ.

ಸ್ವಾತಂತ್ರ್ಯದೇವಿಯನ್ನು ಕಾಣಲು ಬಂದ ಜನ ಸಮುದಾಯಕ್ಕೆ ಸೈನಿಕರ ಬಂದೂಕು ಹಾಗೂ ಪೋಲೀಸರ ಲಾಠಿಗಳು ದೊರೆತು ರಾಜಕಾರಣಿಗಳು, ಕಾರ್ಖಾನೆ ಮಾಲಿಕರು, ಇತರ ಶ್ರೀಮಂತರು ಎಲ್ಲಾ ಧರ್ಮ, ಎಲ್ಲಾ ಜಾತಿಗಳ ಮಠಾಧಿಪತಿಗಳು ಸೇರಿ ಸ್ವಾತಂತ್ರ್ಯದೇವಿಯನ್ನು 'ಸ್ವತಂತ್ರ ಸೌಧ' ವೆಂಬ 'ಸೆರೆಮನೆ'ಗೆ ತಳ್ಳುತ್ತಾರೆ. ಸಂವಿಧಾನ ಶಿವನ ಜಡೆ ಬೋಳಿಸಿ, ಕೈಮುರಿದು ಯುವರಾಜನಿಗೆ ಪಟ್ಟಾಭಿಷೇಕ ಮಾಡಿ, ಹೆಂಡ ದೇವತೆ, ಲಕ್ಷ್ಮೀ ದೇವತೆ, ವಸ್ತ್ರ ದೇವತೆಯರ ಸಹಾಯದಿಂದ ಚುನಾವಣೇಶ್ವರನನ್ನು ಜಾಲಿಸಿ ನಂತರ ದೇಶದ ಜನತೆಗಾಗಿ ಬೆತ್ತ ಸೇವೆ, ಗುಂಡು ಸೇವೆಗಳನ್ನು ಆರಂಭಿಸುತ್ತಾರೆ. ಈ ಎಲ್ಲಾ ಅನ್ಯಾಯಗಳನ್ನು ಪ್ರತಿಭಟಿಸುವ ಕ್ರಾಂತಿಕಾರಿ ಯುವಕ ಸಂಗಡಿಗರೊಂದಿಗೆ ಕಾರಾಗೃಹ ಸೇರಿ ಪೋಲೀಸರ ದೌರ್ಜನ್ಯಕ್ಕೆ ತುತ್ತಾಗಿ ಮರಣವನ್ನಪ್ಪುತ್ತಾನೆ. ಸ್ವಾತಂತ್ರ್ಯ ಸಿಕ್ಕಿದ್ದು ಭಾರತದ ಕೋಟ್ಯನುಕೋಟಿ ಪ್ರಜೆಗಳಿಗಲ್ಲ, ಬದಲಾಗಿ ಸ್ವಾತಂತ್ರ್ಯದ ಹೆಸರಿನಲ್ಲಿ ಭಾರತ ಸಿಕ್ಕಿದ್ದು ಕೆಲವೇ ಕೆಲವು ಬಂಡವಾಳಶಾಹಿ, ಅಧಿಕಾರಶಾಹಿ, ಧರ್ಮಶಾಹಿ ಶಕ್ತಿಗಳ ಭದ್ರಮುಷ್ಠಿಯಲ್ಲಿ ಎಂಬ ಸತ್ಯ ತಿಳಿಯುತ್ತದೆ. ಪ್ರಜಾಪ್ರಭುತ್ವವೆಂಬ ರಾಜಕೀಯ ಪರಿಕಲ್ಪನೆ ಇಲ್ಲಿ ಅಪಹಾಸ್ಯಕ್ಕೀಡಾಗಿದೆ. ಆರ್ಥಿಕ, ಸಾಮಾಜಿಕ, ರಾಜಕೀಯ ಪಾರತಂತ್ರ್ಯವನ್ನು ಆಳುವ ವರ್ಗ ಸದಾ ಪ್ರಜಾವರ್ಗದ ಮೇಲೆ ಹೇರುವಂಥದ್ದು. ಹೀಗಾಗಿ ಮನಬಂದಾಗ ತಮ್ಮ ಅಗತ್ಯಕ್ಕನುಗುಣವಾಗಿ ರಾಷ್ಟ್ರದ ಸಂವಿಧಾನವನ್ನೇ ತಿದ್ದಿ ವಿರೂಪಗೊಳಿಸುವುದು, ಚುನಾವಣೆಗಳಲ್ಲಿ ಹಣ-ಹೆಂಡಗಳ ಹೊಳೆ ಹರಿಸುವುದು ಅವರಿಗೆ ಅನಿವಾರ್ಯ. ಖಾಸಗೀ ಒಡೆತನ ಮತ್ತು ವ್ಯಕ್ತಿ ಪ್ರಧಾನ ರಾಜಕೀಯವನ್ನೊಳಗೊಂಡ ನಮ್ಮ ಗಣರಾಜ್ಯದ ಒಳರಚನೆಯಲ್ಲಿಯೇ ಇಂಥ ಅಸಮಾನತೆ, ಶೋಷಣೆ ಹಾಗೂ ಎಲ್ಲಾ ಬಗೆಯ ವಂಚನೆ, ಕಪಟತನ, ಭ್ರಷ್ಟಾಚಾರದ ಸಾಧ್ಯತೆಗಳು ಅಡಕವಾಗಿವೆ. ಹೀಗಾಗಿ ವರ್ಗಪ್ರಜ್ಞೆಯ ಹಿನ್ನೆಲೆಯಲ್ಲಿ ವ್ಯವಸ್ಥೆಯಲ್ಲಿ ಸಂಪೂರ್ಣ ಬದಲಾವಣೆ ಬಯಸುವ ಕ್ರಾಂತಿಕಾರಿ ಯುವಚೇತನಗಳನ್ನು ನಿರ್ನಾಮಗೊಳಿಸಲು ಪ್ರಜಾಪ್ರಭುತ್ವ ಸರಕಾರದ ನಾಯಕರು ಸದಾ ಸಿದ್ಧರು.

ಹೀಗೆ ಬರಗೂರರ 'ಭರತನಗರಿ'ಯಲ್ಲಿ ಚಿತ್ರಿಸಲ್ಪಟ್ಟ ಆಳುವ ವರ್ಗದ ಸರ್ವಾಧಿಕಾರಿ ಧೋರಣೆ ಪ್ರಜಾಪ್ರಭುತ್ವ ವ್ಯವಸ್ಥೆಯ ವಿಷವರ್ತುಲ ಹಾಗೂ ಅದರಲ್ಲಿ ಸಿಕ್ಕು ನರಳುವ ಪ್ರಜೆಗಳ ದುರಂತ ಬದುಕು ವರ್ತಮಾನದ ಸಾಮಾಜಿಕ ಮನುಷ್ಯನ ದುಃಸ್ಥಿತಿಯನ್ನು ಪ್ರತಿನಿಧಿಸುತ್ತದೆ.

ಭಾರತೀಯ ಸಮಾಜ ವ್ಯವಸ್ಥೆಯಲ್ಲಿ ಹೆಣ್ಣು ದಲಿತರಂತೆ ಸಾಮಾಜಿಕ ಕಟ್ಟುಕಟ್ಟಳೆ, ವಿಧಿನಿಯಮ, ಧರ್ಮ-ಆದರ್ಶಗಳ ಬಂಧನದಲ್ಲಿ ಸಿಲುಕಿ ಎಲ್ಲಾ ಸೌಲಭ್ಯಗಳಿಂದ ವಂಚಿತಳಾಗಿ ಪುರುಷನ ದಾಸಳಾಗಿ ಬೆಳೆದು ಬಂದಳು. ಮಣ್ಣು-ಹೊನ್ನುಗಳಂತೆ ಖಾಸಗಿ ಆಸ್ತಿಯೆಂದು ಪರಿಗಣಿಸಲ್ಪಟ್ಟ ಹೆಣ್ಣಿಗೆ ಅಕ್ಷರ-ವೈಚಾರಿಕತೆಗಳ ಅವಕಾಶ ಲಭಿಸಲಿಲ್ಲ. ಪ್ರಾಚೀನ ಕಾಲದಿಂದಲೂ ಮಹಿಳೆಗೆ ಸಮಾನ ಅವಕಾಶಗಳು ಲಭ್ಯವಾಗಿದ್ದರೆ ಅವಳು ಪಡೆಯಬಹುದಾಗಿದ್ದ ಬದುಕು, ಗಳಿಸಬಹುದಾಗಿದ್ದ ಅನುಭವ, ಬರೆಯಬಹುದಾಗಿದ್ದ ಸಾಹಿತ್ಯವನ್ನು ಕುರಿತು ಕಲ್ಪಿಸಿಕೊಂಡರೆ ಮಹಿಳೆ ಕಳೆದುಕೊಂಡದ್ದೆಷ್ಟೆಂಬುದು ಸ್ಪಷ್ಟವಾಗುತ್ತದೆ. ಹನ್ನೆರಡನೆಯ ಶತಮಾನದಲ್ಲಿ ಕನ್ನಡನಾಡಿನ ಮಹಿಳೆಗೆ ಅಂಥ ಅಸಮಾನತೆ ಪ್ರಾಪ್ತವಾಗಿದ್ದರಿಂದ ಆ ಪ್ರಮಾಣದಲ್ಲಿ ವಚನಕಾರ್ತಿಯರು ವಚನಕಾರರಿಗೆ ಸಮಾನವಾದ ವೈಚಾರಿಕತೆಯನ್ನು ಮೆರೆದರು. ಬಂಡಾಯ ಸಾಹಿತ್ಯದ ತಾತ್ವಿಕ ನೆಲೆಗಟ್ಟು ಮಹಿಳೆಗೆ ತಾನು ಶೋಷಿತಳೆಂಬ ಎಚ್ಚರವನ್ನೂ, ಸಮಾನ ಬದುಕಿನ ಕನಸುಗಾರಿಕೆಯನ್ನು ನೀಡಿದ್ದರಿಂದ ಹೆಣ್ಣಿನ ಅಂತರಂಗದ ಶತಮಾನಗಳ ಅಭಿವ್ಯಕ್ತಿಯ

ಹಪಹಪಿಕೆಗೆ ನಿಜವಾದ ಸ್ಪರ್ಶ ಸಿಕ್ಕಂತಾಗಿ ಈ ಕಾಲದಲ್ಲಿ ಒಮ್ಮೊಂದೊಮ್ಮೆಲೇ ಹೆಚ್ಚಿನ ಸಂಖ್ಯೆಯಲ್ಲಿ ಲೇಖಕಿಯರು ಸಾಹಿತ್ಯ ಸೃಷ್ಟಿಗಿಳಿದರು. ನವ್ಯದ ಕಾಮ ಕೇಂದ್ರಿತ ಧೋರಣೆಯಿಂದಾಗಿಯೋ, ಪರಂಪರೆಯನ್ನಪ್ಪಿಕೊಳ್ಳುವ ನಿಲುವಿನಿಂದಾಗಿಯೋ ಆ ಕಾಲದಲ್ಲಿ ಬರೆಯಲಾರಂಭಿಸಿದ ಬಹುತೇಕ ಲೇಖಕಿಯರಿಗೆ ಆಗಲೇ ಹೊಸಗನ್ನಡದ ಗಟ್ಟಿಗೊಂಡಿದ್ದ ಜನಪ್ರಿಯ ಸಾಹಿತ್ಯ ಮಾರ್ಗದಿಂದ ಬಿಡಿಸಿಕೊಳ್ಳಲಾಗಲಿಲ್ಲ. ಆದರೆ ಬಂಡಾಯ ಸಾಹಿತ್ಯ ಸಂದರ್ಭದಲ್ಲಿ ಇದು ಸಾಧ್ಯವಾಯಿತು.

"ಕ್ಷಮಿಸಿ ನಾ
ಭಾರತೀಯ ನಾರಿ
ಅನ್ನಿಸಿದ್ದನ್ನೆಲ್ಲ
ಹತ್ತಿಕ್ಕುತ್ತೇನೆ.

"ಅವನ ನಗು ನನ್ನದೆನ್ನಬೇಕು
ನನ್ನ ಗೆಲುವು ಅವನದೆನ್ನಬೇಕು
ಅವನ ಅಳುವಿಗೆ ನನ್ನಲ್ಲಿ
ಬಿಕ್ಕುಗಳ ಹಿಮ್ಮೇಳದ ತಾಳ ಬೇಕು"[೧೪]

ತನ್ನ ಭಾವನೆ ಆಸೆ ಆಕಾಂಕ್ಷೆ ಕನಸುಗಳನ್ನೆಲ್ಲಾ ಬಲಿಕೊಟ್ಟು ಗಂಡಸಿನ ವಿಚಾರಕ್ಕೆ ತಕ್ಕಂತೆ ಬದುಕನ್ನು ಸವೆಸುತ್ತಾ ಬಂದ ಗಾಢ ವಿಷಾದ ಹೇಳಬೇಕಾದ ಭಾವನೆಗಳನ್ನೆಲ್ಲಾ ಹೇಳಲಾರದ ಹಿಂಜರಿತ, ಅನ್ನಿಸಿದ್ದನ್ನೆಲ್ಲ ಹತ್ತಿಕ್ಕಿಕೊಳ್ಳಬೇಕಾದ ಅಸಹಾಯಕತೆ ಹೇಳಲೇಬೇಕೆಂಬ ಅಭಿವ್ಯಕ್ತಿ ಸ್ವಾತಂತ್ರ್ಯದ ತಹತಹಿಕೆಗಳನ್ನೊಳಗೊಂಡ ವರ್ತಮಾನದ ಪ್ರಜ್ಞಾವಂತ ಸ್ತ್ರೀಯ ಅಂತರಂಗದಲ್ಲಿ ಬಚ್ಚಿಡಲಾಗಿದೆ.

ತನ್ನ ವಾಸ್ತವದ ಸ್ಥಿತಿಯನ್ನು ಇದ್ದಂತೆ ದಾಖಲಿಸುವ ಹೆಣ್ಣು ಈ ಸ್ಥಿತಿಗೆ ಕಾರಣವಾದ ಪುರುಷ ಪ್ರಧಾನ ಮೌಲ್ಯಗಳ ಪೊಳ್ಳುತನಗಳನ್ನು ಬಯಲಿಗೆಳೆದು ಧಿಕ್ಕರಿಸುವ ಎದೆಗಾರಿಕೆಯನ್ನು ತೋರಿಸಿದ್ದಾಳೆ.

"ನಿಮ್ಮ ಕಾಮಾಗ್ನಿ ಕುಂಡಕ್ಕೆ
ನಮ್ಮ ಶೀಲವನು ಬಲಿಕೊಟ್ಟೆ
ನಿಮ್ಮ ಮಾನಾಪಮಾನವನು
ಕಾಪಾಡಲು ನಿಮ್ಮಿಂದಲೇ
ಪತಿವ್ರತೆಯ ಪಟ್ಟಕ್ಕೇರಿ
ಇಂದಿಗೂ ಉಳಿದು ನರಳುತ್ತಿರುವವರು
ನಾವು ಪತಿವ್ರತೆಯರಲ್ಲ"[೧೫]

ಈ ನಾಡಿನಲ್ಲಿ ಪರಮ ಮೌಲ್ಯವೆಂದು ನಂಬಿದ ಪಾತಿವ್ರತ್ಯ ಏನಿದ್ದರೂ ಹೆಣ್ಣಿಗೆ ಮಾತ್ರ ಸೀಮಿತ. ಗಂಡು ಎಷ್ಟು ಜನ ಹೆಂಡಂದಿರನ್ನು ಹೊಂದಿದ್ದರೂ ಪ್ರಶ್ನಿಸುವಂತಿಲ್ಲ. ಪಾತಿವ್ರತ್ಯದ

ಪರಿಕಲ್ಪನೆಯ ಒಳಗಡೆ ಅಡಗಿರುವ ಗಂಡಸಿನ ಸ್ವಾರ್ಥ-ವಂಚನೆಗಳಿಂದಲೇ ಹೆಣ್ಣು ಅಸಹಾಯಕಳಾಗುತ್ತಿದ್ದಾಳೆ, ಬಲಿಯಾಗುತ್ತಿದ್ದಾಳೆ.

ಪುರುಷ ಪ್ರಧಾನ ಸಂಸ್ಕೃತಿಯ ಕಾಲಕೆಳಗೆ ಸಿಕ್ಕು, ಹೆಣವಾದರೂ ಜೀವನದಿಯಾಗಿ ಹರಿದು ಮಾನವ ಬದುಕನ್ನು ಸಮೃದ್ಧಗೊಳಿಸುವ, ಮಣ್ಣಾಗಿ ಉದುರಿದರೂ ನೂರು ಹೂವಿಗೆ ಬೀಜವಾಗುವ ಹೆಣ್ಣಿನ ಪ್ರತಿಮೆ ಬಂಡಾಯ ಲೇಖಕರಲ್ಲಿ ಹೆಣ್ಣು ಚಿತ್ರಿತಗೊಂಡ ಬಗೆಯನ್ನು ಪ್ರತಿನಿಧಿಸುತ್ತದೆ. 'ಒಡಲಾಳದ ಸಾಕವ್ವ', ಮ. ನ. ಜವರಯ್ಯನವರ 'ಮಾಗಿಯರು'.

ಹೆಣ್ಣು ಸಾಮಾಜಿಕ ಕ್ಷೇತ್ರದಲ್ಲಿ ಅನುಭವಿಸಿದ ಹಲವಾರು ಸಮಸ್ಯೆಗಳನ್ನು ಲೇಖಕರು ಚಿತ್ರಿಸಿದ್ದಾರೆ. ಸತೀಶ ಕುಲಕರ್ಣಿಯವರ 'ಸವಾಲು' ಎಂಬ ಕವಿತೆಯಲ್ಲಿ ಹದಿನೆಂಟರ ಹರೆಯದಲ್ಲಿ ಕುಂಕುಮ ಕಳೆದುಕೊಂಡು ವಿಧವೆಯಾದ ಹೆಣ್ಣೊಬ್ಬಳ ಕರುಣಾಜನಕ ಸ್ಥಿತಿಯನ್ನು ತೆರೆದಿಡಲಾಗಿದೆ.

ಸಾಮಾಜಿಕ ಜೀವನದಲ್ಲಿ ಸ್ತ್ರೀಯರ, ದಲಿತ ಮಹಿಳೆಯರ ಸಂವೇದನೆಗಳ ಜೊತೆಗೆ ಮುಸ್ಲಿಂ ಜನಾಂಗದ ಸಂವೇದನೆಗಳು ಕನ್ನಡ ಸಾಹಿತ್ಯವನ್ನು ಪ್ರವೇಶಿಸಿದವು. ಮುಸ್ಲಿಂ ಸಂಸ್ಕೃತಿ, ಜೀವನ ವಿಧಾನ, ಧಾರ್ಮಿಕ ಮೌಢ್ಯ, ಅಜ್ಞಾನ-ಅಂಧಕಾರಗಳನ್ನು ಮುಸ್ಲಿಂ ಲೇಖಕರು ಅನಾವರಣಗೊಳಿಸಿ ಕನ್ನಡ ಸಾಹಿತ್ಯದ ಅನುಭವ ಲೋಕದ ಪರಿಧಿಯನ್ನು ಹಿಗ್ಗಿಸಿದ್ದಾರೆ. ಸಾರಾ ಅಬೂಬಕ್ಕರ್‌ರವರ 'ಚಂದ್ರಗಿರಿ ತೀರದಲ್ಲಿ' ಹಾಗೂ ಫಕೀರ್ ಮಹಮ್ಮದ್ ಕಟ್ಪಾಡಿಯವರ 'ಸರಕುಗಳು' ಮುಸ್ಲಿಮರ ಹಸಿವು ಮತ್ತು ಶೋಷಿತ ಬದುಕನ್ನು ಪರಿಚಯಿಸುತ್ತವೆ.

ಪುರುಷ ಪ್ರಧಾನ ಸಂಸ್ಕೃತಿಯ ವಕ್ತಾರನಂತಿರುವ ಮಹಮ್ಮದ್ ಖಾನ್ ತನ್ನ ಕುಟುಂಬದ ಆರ್ಥಿಕ ಭದ್ರತೆಗಾಗಿ ವೈಯಕ್ತಿಕ ಸ್ವಾರ್ಥಕ್ಕಾಗಿ ಸ್ವಂತ ಮಗಳ ಜೀವನವನ್ನು ಬಲಿಕೊಡಲು ಹೇಸುವುದಿಲ್ಲ. ತಂದೆಯ ಸ್ವಾರ್ಥದ ಅರಿವಿದ್ದೂ ಕೂಡಾ ಅವನ ದರ್ಪವನ್ನು ಎದುರಿಸಲಾಗದೆ ನದಿಗೆ ಹಾರುವ ನಾದಿರಾ ಮುಸ್ಲಿಂ ಸಮಾಜದಲ್ಲಿ ಸ್ತ್ರೀ ಅನುಭವಿಸುವ ಎಲ್ಲಾ ಪರತಂತ್ರ್ಯ, ಅಸಹಾಯಕತೆ, ಅಸಮಾನತೆ, ಶೋಷಣೆಗಳ ಸಂಕೇತವಾಗುತ್ತಾಳೆ.

ಫಕೀರ್ ಮಹಮ್ಮದ್ ಕಟ್ಪಾಡಿಯವರ 'ಸರಕುಗಳು' ಹಾಗೂ ಬೊಳುವಾರರ 'ಮುತ್ತುಚ್ಚೆರ' ಅರಬ್ ರಾಷ್ಟ್ರಗಳಲ್ಲಿ ದುಬಾರಿ ಮದುವೆಯಾಗುವ ತಾಕತ್ತಿಲ್ಲದ ಗಂಡುಗಳು ಭಾರತದಂಥ ಬಡರಾಷ್ಟ್ರಗಳಿಗೆ ಬಂದು ಅತ್ಯಂತ ಕಡಿಮೆ ಹಣದಲ್ಲಿ ನಿಕಾಹ್ ಮಾಡಿಕೊಂಡು ಒಂದೆರಡು ತಿಂಗಳು ಸಂಸಾರ ಸಾಗಿಸಿ ಕೊನೆಗೆ ತಲಾಕ್ ಹೇಳೀ ತಮ್ಮ ಪಾಪದಿಂದ ಮುಕ್ತರಾಗಿ ಹೋಗುವ ಸಮಾಜದ ಮೃಗೀಯ ಮನಸ್ಸಿನ ಮನುಷ್ಯರ ಕತೆಗಳಿವು. ಹಸಿವು ಮತ್ತು ಬಡತನಕ್ಕಾಗಿ ಅನಿವಾರ್ಯವಾಗಿ ಮುಸ್ಲಿಂ ಹೆಣ್ಣುಮಕ್ಕಳು ಧಾರ್ಮಿಕ ಚೌಕಟ್ಟಿನಲ್ಲಿಯೇ ಮೈ ಮಾರಿಕೊಳ್ಳುತ್ತಾರೆ.

ಬುರುಖಾ ತೊಡಲು ಆರಂಭಿಸುವುದರ ಮೂಲಕ ಬದುಕಿನ ಎಲ್ಲಾ ಸುಖ ಸಂತೋಷಗಳಿಗೆ ಎರವಾಗುವ ಬಾಲಿಕೆ ಮೈಮೂನಾ, ತಂದೆಯ ಕ್ರಿಯಾಕರ್ಮವನ್ನು ನಡೆಸಲು ಹಣವಿಲ್ಲದ್ದಕ್ಕಾಗಿ ಆ ಆಚರಣೆಯನ್ನೇ ಧಿಕ್ಕರಿಸುವ ಕುಡುಕ ಅಬ್ಬಾಸ್, ಗಂಡಸಿನ ಸ್ವಾರ್ಥ ಹಾಗು ಧಾರ್ಮಿಕ ಚೌಕಟ್ಟಿನ ಕಪಿಮುಷ್ಟಿಯಲ್ಲಿ ಸಿಕ್ಕು ನರಳುವ ಜುಲೇಕಾ, ಇವರೆಲ್ಲಾ ಮುಸ್ಲಿಂ ಸಮಾಜದ

ಸಾಮಾಜಿಕ ಮನುಷ್ಯರ ಕೆಲವು ಮಾದರಿಗಳಾಗಿದ್ದಾರೆ. ಕೀಚಕ ಸಂತಾನದ ವಿಕೃತ ಕಾಮುಕತೆಯಿಂದ ನೊಂದ ಹೆಣ್ಣಿನ ಹೊಟ್ಟೆಯ ಹಸಿವನ್ನು ನಿವಾರಿಸುವವರು ಕಾಣದಾಗಿದ್ದಾರೆ.

ಹೀಗೆ ಸಾಮಾನ್ಯ ಮನುಷ್ಯನಾಗಲೀ, ಸಾಮಾನ್ಯ ಹೆಣ್ಣಾಗಲೀ ಇತರರ ದೌರ್ಜನ್ಯಕ್ಕೆ, ಶೋಷಣೆಗೆ ಒಳಗಾಗಿ ಬಡತನದ ಜೊತೆಗೆ ಹಸಿವಿನ ನೋವಿನಿಂದ ಬಳಲಿ ಕೊನೆಗೆ ಶವವಾಗುವುದು ಈ ಸಮಾಜದ ಕ್ರೂರ ವ್ಯವಸ್ಥೆಗೆ ಹಿಡಿದ ಕನ್ನಡಿಯಂತಿದೆ. ಈ ಬಡತನ ಮತ್ತು ಹಸಿವೆಯೆಂಬುದು ಮನುಷ್ಯನನ್ನು ತೀರಾ ಸಣ್ಣವನನ್ನಾಗಿಸುತ್ತದೆ. ಹಸಿವಿನ ಬಾಧೆಯಿಂದ ತಪ್ಪಿಸಿಕೊಳ್ಳಲು ಅವರು ಕಂಡುಕೊಳ್ಳುವ ಮಾರ್ಗ ನಿಜಕ್ಕೂ ನಾಗರಿಕ ಸಮಾಜವೇ ತಲೆತಗ್ಗಿಸುವಂಥದ್ದು.

ಬದುಕಿನ ಸಮಗ್ರ ಚಟುವಟಿಕೆಗಳಿಗೆ ಕೇಂದ್ರವಾಗಿರುವ ಮನುಷ್ಯನ ವಿವಿಧ ಸ್ವಭಾವಗಳನ್ನು ಕಥೆಗಾರರು ಚಿತ್ರಿಸುವ ಪ್ರಯತ್ನ ಮಾಡಿದ್ದಾರೆ. ಇಂಥ ಚಿತ್ರಣದಲ್ಲಿ ಒಂದಿಷ್ಟು ಕಲ್ಪಕತೆಯ ಬಣ್ಣವಿದ್ದರೂ ಮೂಲ ಧಾತು ವಾಸ್ತವತೆಯ ಒಡಲಿನಿಂದ ಮೂಡಿ ಬಂದಿರುತ್ತದೆ. ವರ್ಣಮಯವಾಗಿರುವ ಕನಸುಗಾರಿಕೆಯ ಹಿಂದೆ ಮಿಡಿಯುವ ಜೀವಿಯ ತುಡಿತ ಗಮನಾರ್ಹವಾದುದು.

ಮನುಷ್ಯನ ಕನಸುಗಾರಿಕೆ ಕನ್ನಡ ಸಾಹಿತ್ಯದಲ್ಲಿ ಸಮೃದ್ಧವಾಗಿ ಚಿತ್ರಣಗೊಂಡಿದೆ. ವಾಸ್ತವದಲ್ಲಿ ಪಡೆಯಲಾರದ್ದನ್ನು ಕಾಲ್ಪನಿಕ ಪ್ರಪಂಚದಲ್ಲಿ ಪಡೆದುಕೊಳ್ಳುವ, ವಾಸ್ತವದ ಕಟು ಅನುಭವಗಳಿಗೆ ಮತ್ತು ಸಂದಿಗ್ಧ ಸಮಸ್ಯೆಗಳಿಗೆ ಕಾಲ್ಪನಿಕ ವಲಯದಲ್ಲಿ ಪರಿಹಾರ ಕಂಡುಕೊಳ್ಳುವ ಮನಸ್ಸು ಅದ್ಭುತ ಪ್ರಭಾವಶಾಲಿಯಾಗಿದೆ. ಹಸಿವು, ಬಡತನದ ಹಿಂಸೆ ಬಹುಸಂಖ್ಯಾತ ಜನರ ನಿತ್ಯ ಅನುಭವ. ಅದು ವರವೋ ಶಾಪವೋ ಎಂದು ನಂಬಿರುವ ಈ ಜನ ಅದರ ನಿವಾರಣೆಗೆ ಯತ್ನಿಸುವುದಿಲ್ಲ. ಹಾಗಂತ ಹಸಿವು ಮತ್ತು ಬಡತನದ ಬಿಸಿಯಿಂದಾಗಿ ನೆಮ್ಮದಿಯಿಂದಲೂ ಬದುಕಲಾರರು. ಇಂತಹ ಸ್ಥಿತಿಯಲ್ಲಿ ಅವರಿಗೆ ಒಂದಿಷ್ಟು ತಾತ್ಕಾಲಿಕ ಬಿಡುಗಡೆ ಸಿಗುವುದು ಕನಸುಗಾರಿಕೆಯಲ್ಲಿ ಮಾತ್ರ.

ಒಂದೂರಿನಲ್ಲಿ ಒಬ್ಬ ಬಡ ಬಡಿಗನಿದ್ದ. ಕಿತ್ತು ತಿನ್ನುವ ಬಡತನ, ಹಸಿವೆಯಿಂದ ಕಂಗಾಲಾಗಿದ್ದ ಹೆಂಡತಿ ಗಂಡನನ್ನು ನಿಂದಿಸಿ ಹೊರಗಟ್ಟಿದಳು. ಬಡಿಗ ಕಾಡಿಗೆ ಹೋಗಿ ಮರದ ತುಂಡುಗಳನ್ನು ತಂದು ಒಂದು ಮಂಚ ತಯಾರಿಸಿದ. ಆ ಮಂಚದ ಕಾಲುಗಳಿಗೆ ನಾಲ್ಕು ಸುಂದರ ಗೊಂಬೆಗಳನ್ನು ಮಾಡಿ ಜೋಡಿಸಿದ. ಬಡಿಗನ ಹೆಂಡತಿ ಅದನ್ನು ರಾಜನಿಗೆ ಮಾರಿ ಬಂದಳು. ಅದರ ಬೆಲೆಯೆಷ್ಟೆಂದು ರಾಜ ಕೇಳಿದರೂ ಅವಳು ಅದರ ಬೆಲೆ ಹೇಳಲಿಲ್ಲ. ನಾಳೆ ಬೆಳಗಾದ ಮೇಲೆ ನಿಮಗೆ ತಿಳಿದಷ್ಟು ಕೊಡಿರಿ ಎಂದು ಹೇಳಿ ಮನೆಗೆ ಬಂದಳು. ರಾಜ ಅಚ್ಚರಿಯಿಂದ ರಾತ್ರಿ ಮಂಚದ ಮೇಲೆ ಮಲಗಿದ. ಸ್ವಲ್ಪ ಹೊತ್ತಿನ ಮೇಲೆ ಗೊಂಬೆಗಳು ಜೀವ ತಳೆದವು. ರಾಜ ನಿದ್ರೆ ಬಂದಂತೆ ನಟಿಸುತ್ತಾ ಗೊಂಬೆಗಳ ಮಾತುಕತೆ ಕೇಳಿದ. ಒಂದು ಗೊಂಬೆ ತಾನು ಊರಲ್ಲಿ ಹೋಗಿ ಒಬ್ಬ ರಾಕ್ಷಸಿಯನ್ನು ಕೊಂದು ಬರುವುದಾಗಿ ಹೇಳಿತು. ಎರಡನೆಯ ಗೊಂಬೆ ತಾನು ಊರ ಮಧ್ಯದ ಗುಡಿಗೆ ಹೋಗಿದ್ದಾಗಿಯೂ, ಅಲ್ಲಿ ರಾಜಕುಮಾರಿ ಮತ್ತು ಮಂತ್ರಿ ಏಕಾಂತದಲ್ಲಿದ್ದುದಾಗಿಯೂ, ತಡವಾದದ್ದಕ್ಕೆ ಮಂತ್ರಿ ರಾಜಕುಮಾರಿಯನ್ನು ಹೊಡೆದಾಗ ಅವಳು ಸತ್ತು ಅಲ್ಲಿಯೇ ಬಿದ್ದಿದ್ದಾಳೆಂದೂ ಹೇಳಿತು. ಮೂರನೆಯ ಗೊಂಬೆ ಊರಿನ ಹೊರ

ವಲಯದಲ್ಲಿರುವ ದೇವಾಲಯದಲ್ಲಿ ಒಂದು ಬಡ ಕುಟುಂಬ ಹಸಿವಿನಿಂದ ಬಳಲುತ್ತಿದ್ದು ಕಂಡು ಬಂದುದಾಗಿ ಹೇಳಿತು. ನಾಲ್ಕನೆಯ ಗೊಂಬೆಯು ಒಂದು ಮಿಡಿ ನಾಗರ ಹಾವು ರಾಜನ ಬೂಟಿನೊಳಗೆ ಅಡಗಿಕೊಂಡಿದ್ದು ರಾಜನ ಪ್ರಾಣ ಹೀರಲು ಸಿದ್ಧವಾಗಿ ಕಾಯುತ್ತಿದೆ ಎಂದು ಹೇಳಿತು.

ಬೆಳಗಾದ ಮೇಲೆ ರಾಜ ಪರೀಕ್ಷಿಸಿದಾಗ ಗೊಂಬೆಗಳ ಮಾತುಗಳಲ್ಲಿ ನಿಜವಾದವು. ಮಂಚ ತಯಾರಿಸಿದ ಬಡಿಗನನ್ನು ಕರೆಸಿ ಅವನಿಗೆ ಮೂವತ್ತು ಹಳ್ಳಿಗಳನ್ನು, ಅಪಾರ ಸಂಪತ್ತನ್ನು ನೀಡಿ ಕಳುಹಿಸಿದ. ಬಡಿಗನ ಹಸಿವು ಮತ್ತು ಬಡತನ ನಿವಾರಣೆಯಾಯಿತು. ಹಸಿವು ಮತ್ತು ಬಡತನದಿಂದ ಮುಕ್ತನಾಗಲು ಬಡಿಗ ಊಹಿಸಿದ ಉಪಾಯಗಳು ಕನಸುಗಾರಿಕೆಯನ್ನು ವ್ಯಕ್ತಪಡಿಸುತ್ತವೆ.

ಇದೇ ತರಹದ ಇನ್ನೊಂದು ಕಥೆಯಲ್ಲಿ ಬಡವಿಯೊಬ್ಬಳು ಮಕ್ಕಳನ್ನು ಕಟ್ಟಿಕೊಂಡು ಅಣ್ಣನ ಮನೆಗೆ ಹೋಗುತ್ತಾಳೆ. ಅತ್ತಿಗೆ ಅವಳನ್ನು ತಿರಸ್ಕಾರದಿಂದ ಕಂಡು ಹೊರ ಹಾಕುವಳು. ದುಃಖಿಸುತ್ತಾ ಮಕ್ಕಳೊಂದಿಗೆ ಬರುವಾಗ ದಾರಿಯಲ್ಲಿ ಒಂದು ತೋಟ ಕಂಡಿತು. ಆ ತೋಟದಲ್ಲಿ ಕುಂಬಳಕಾಯಿಗಳು ಸಮೃದ್ಧವಾಗಿ ಬೆಳೆದಿದ್ದವು. ಆ ಬಡವಿಯ ಒಂದು ಮಗು ಕುಂಬಳಕಾಯಿ ಬೇಕೆಂದು ಹಠ ಹಿಡಿಯಿತು. ಅವಳು ಎಷ್ಟು ಹೇಳಿದರೂ ಕೇಳದೆ ಒಂದು ಕುಂಬಳಕಾಯಿಯನ್ನು ಹಿಡಿದುಕೊಂಡು ಕುಳಿತುಕೊಂಡು ಬಿಟ್ಟಿತು. ಇದನ್ನು ಕಂಡ ತೋಟದ ಯಜಮಾನ ಮಗು ಆಸೆ ಪಡುತ್ತಿದೆ ಇರಲಿ, ಈ ಕುಂಬಳಕಾಯಿ ಒಯ್ಯಿರಿ ಎಂದು ಹೇಳಿ ಅದನ್ನು ಕಿತ್ತು ಕೊಟ್ಟ. ಮನೆಗೆ ಹೋಗಿ ಪಲ್ಲೆ ಮಾಡಿ ತಮ್ಮ ಹಸಿವನ್ನು ನೀಗಿಸಿಕೊಳ್ಳಲೆಂದು ಕುಂಬಳಕಾಯಿ ಒಡೆದಾಗ ಅದರ ತುಂಬಾ ಮುತ್ತು ರತ್ನಗಳಿದ್ದವು. ಆ ಮುತ್ತು ರತ್ನಗಳಿಂದ ಅವರ ಹಸಿವು ಮತ್ತು ಬಡತನ ನಿವಾರಣೆಯಾಯಿತು. ಇಲ್ಲಿಯೂ ಕೂಡಾ ಹಸಿವು ಮತ್ತು ಬಡತನದ ತಾಪದಿಂದ ಪಾರಾಗಲು ಕನಸುಗಾರಿಕೆಯನ್ನು ಆಶ್ರಯಿಸಲಾಗಿದೆ.

ಹಸಿವು, ಬಡತನವನ್ನು ಹಾಸಿ ಹೊದ್ದುಕೊಂಡಿರುವ ಜನಪದರಿಗೂ ಕೂಡಾ ರಾಜ, ರಾಣಿ, ರಾಜಕುಮಾರಿ, ಅರಮನೆ ಇವು ಕಣ್ಣೆದುರಿಗಿದ್ದರೂ ತೀರಾ ಅಂತರದಲ್ಲಿದ್ದವು. ಅರಮನೆಯ ಸುಖಭೋಗ, ವಿಲಾಸಗಳನ್ನು ಕೇಳಿ ಮಾತನಾಡಿಕೊಳ್ಳುವುದರಲ್ಲಿ ಅವರು ವಿಚಿತ್ರ ರೀತಿಯ ಸಮಾಧಾನ ಪಡೆಯುತ್ತಿದ್ದರು. ಅರಮನೆಯ ಸಂಪರ್ಕ ಕನಸಿನ ಮಾತಾಗಿದ್ದರೂ ಕನಸಿನಲ್ಲಿಯಾದರೂ ಕೂಡಾ ಅದನ್ನು ಹೊಂದುವ ಕಾತರ ಅವರಿಗಿತ್ತು. ರಾಜನಿಗೆ ಬಂದ ಯಾವುದೇ ವಿಪತ್ತನ್ನು ನಿವಾರಿಸಿದಾಗ, ಅಪಾಯದಲ್ಲಿದ್ದ ರಾಜಕುಮಾರಿಯನ್ನು ಅನೇಕ ಎಡರುಗಳನ್ನೆದುರಿಸಿ ರಕ್ಷಿಸಿದಾಗ, ಮಹಾರಾಣಿಯ ಚಿಂತೆಯನ್ನು ದೂರ ಮಾಡಿದಾಗ, ಅರ್ಧ ರಾಜ್ಯವನ್ನು ಪಡೆಯುವ ಅಥವಾ ರಾಜಕುಮಾರಿಯನ್ನು ಮದುವೆಯಾಗುವ ಅವಕಾಶ ಜನಪದರ ನಾಯಕರಿಗೆ ಸಾಧ್ಯವಾಗುತ್ತಿತ್ತು. ಇದೆಲ್ಲಾ ಕನಸುಗಾರಿಕೆ.

ಅರಮನೆಯ ಸಂಪರ್ಕಕ್ಕಾಗಿ ಕಾತರಗೊಂಡು ಕಲ್ಪಿಸಿಕೊಂಡ ಬಣ್ಣದ ಕಲ್ಪನೆಗಳು ಪಾತ್ರದ ಮೂಲಕ ವ್ಯಕ್ತವಾಗುತ್ತವೆ. ಸಾಮಾನ್ಯರೆನಿಸಿಕೊಂಡ ಬಡವರು ತಾವು ಕೂಡಾ ಬುದ್ಧಿವಂತರು, ಸಾಹಸಿಗಳು ಎಂಬುದನ್ನು ವ್ಯಕ್ತಪಡಿಸುವ ಹಂಬಲವೂ ಇಲ್ಲಿ ಕಂಡು ಬರುತ್ತದೆ. ಒಬ್ಬ ರಾಜ ತನ್ನ ಮಂತ್ರಿಯೊಂದಿಗೆ ಜೂಜು ಆಡಲು ಕುಳಿತ. ಸೋತವರು ಗೆದ್ದವನಿಗೆ ಅವನು ಒಮ್ಮೆ ಮುಟ್ಟಿದ್ದನ್ನು

ನೀಡಬೇಕು ಎಂಬ ಕರಾರಿನೊಂದಿಗೆ ಆಟ ಪ್ರಾರಂಭವಾಯಿತು. ರಾಜ ಆಟದಲ್ಲಿ ಮುಟ್ಟಿದ್ದನ್ನು ಕೊಡಲು ಸಿದ್ಧನಾದ. ಮಂತ್ರಿಗೆ ರಾಣಿಯ ಮೇಲೆ ಮನಸ್ಸಿತ್ತು. ಅವಳನ್ನೇ ಮುಟ್ಟಬೇಕೆಂದು ಅವನು ಲೆಕ್ಕ ಹಾಕಿದ. ರಾಜನಿಗೆ ಇದರ ಸುಳಿವು ಗೊತ್ತಾಯಿತು. ಒಂದು ತಿಂಗಳು ಸಮಯ ಕೇಳಿ ಪಡೆದ. ಏನು ಉಪಾಯ ಮಾಡಬೇಕೆಂದು ಬಹಳ ಯೋಚಿಸಿದ. ತಿಂಗಳ ಅವಧಿ ಸಮೀಪಿಸುತ್ತಾ ಬಂದಿತು. ರಾಜನ ಚಿಂತೆ ಹೆಚ್ಚಾಯಿತು. ಆಗ ಬಡತನದ ಬೇಗೆಯಲ್ಲಿ ಬೇಯುತ್ತಿದ್ದ ಗಿಡ್ಡ ಭೀಮಣ್ಣ ಎಂಬುವನೊಬ್ಬ ನೆರವಿಗೆ ಬಂದ. ರಾಣಿಯನ್ನು ಅಟ್ಟದ ಮೇಲೆ ಕೂರಿಸಿ ಒಂದು ಏಣಿ ಇಟ್ಟ. ಮಂತ್ರಿ ಬೇಕಾದದ್ದನ್ನು ಮುಟ್ಟಲು ಸೂಚಿಸಲಾಯಿತು. ಅವನು ರಾಣಿಯನ್ನು ಮುಟ್ಟುವ ಆತುರದಿಂದ ಹುಡುಕುತ್ತಾ ರಾಣಿಯು ಕುಳಿತ ಅಟ್ಟದ ಕೆಳಗೆ ಬಂದು ನಿಂತ. ಮೇಲೆ ಹತ್ತಿ ಹೋಗಿ ರಾಣಿಯನ್ನು ಮುಟ್ಟುವ ಉದ್ದೇಶದಿಂದ ಏಣಿ ಏರಲು ಹೋಗಿ ಮೊದಲು ಅದನ್ನೇ ಮುಟ್ಟಿದ. ಆಗ ಬಡ ಗಿಡ್ಡ ಭೀಮಣ್ಣ ಮಂತ್ರಿಗೆ ನೀನು ಮೊದಲು ಮುಟ್ಟಿದ್ದು ಈ ಏಣಿಯನ್ನು, ಇದನ್ನೇ ಪಡೆದುಕೋ ಎಂದು ನ್ಯಾಯ ನಿರ್ಣಯ ಮಾಡಿದ. ಮಂತ್ರಿ ಪೆಚ್ಚಾದ. ಸಂತೋಷಗೊಂಡ ರಾಜ ಭೀಮಣ್ಣನಿಗೆ ಅಪಾರ ಆಹಾರ ಸಾಮಾಗ್ರಿ ಮತ್ತು ಸಂಪತ್ತನ್ನು ನೀಡಿದ. ಇದರಿಂದ ಬಡ ಭೀಮಣ್ಣ ಮತ್ತು ಆತನ ಕುಟುಂಬದ ಹಸಿವು ಮತ್ತು ಬಡತನ ನಿವಾರಣೆಯಾಯಿತು. ಇಂಥ ಅನೇಕ ಕತೆಗಳು ಜನಪದರ ವ್ಯವಹಾರ ಜ್ಞಾನವನ್ನು ಮತ್ತು ಕನಸುಗಾರಿಕೆಯನ್ನು ವಿಶದಪಡಿಸುತ್ತವೆ.

ಕಠೋರ ಜಾತಿ ವ್ಯವಸ್ಥೆ ಸಮಾಜದಲ್ಲಿ ಮೊದಲಿನಿಂದಲೂ ಬೇರೂರಿಕೊಂಡು ಬೆಳೆದು ಬಂದಿದೆ. ಕೆಳಜಾತಿಯವರನ್ನು ಪ್ರಾಣಿಗಳಿಗಿಂತ ಹೀನಾಯವಾಗಿ ಕಾಣುವುದನ್ನೇ ಧರ್ಮ ಎಂದು ಭ್ರಮಿಸಿದ ಮೇಲ್ವರ್ಗದವರು ತಮ್ಮ ಹೀನಾಯ ಸ್ಥಿತಿಯನ್ನು (ಹಸಿವು, ಬಡತನ) ದೇವರ ಶಾಪವೆಂದು ನಂಬಿ ಬದುಕುತ್ತಿದ್ದ ಕೆಳಜಾತಿಯವರು ಒಂದೇ ಕಡೆ ಒಟ್ಟೊಟ್ಟಿಗೆ ಬದುಕುತ್ತಿದ್ದುದೇ ಅಸಾಧ್ಯವಾಗಿತ್ತು. ಕೆಳಜಾತಿಯವರು ಮೇಲು ಜಾತಿಯವರ ಓಣಿಯಲ್ಲಿ ಓಡಾಡುವುದನ್ನೇ ನಿಷೇಧಿಸಲಾಗಿತ್ತು. ಕೆಳಜಾತಿಯವರ ನೆರಳನ್ನು ಕಂಡರೂ ಕೂಡಾ ಮೇಲ್ಜಾತಿಯವರಿಗೆ ಸಹಿಸಲು ಸಾಧ್ಯವಾಗುತ್ತಿರಲಿಲ್ಲ. ಇಂಥ ಅಮಾನವೀಯವಾದ ಪರಿಸ್ಥಿತಿಯನ್ನು ಯಾರೂ ಪ್ರಶ್ನಿಸುತ್ತಿರಲಿಲ್ಲ. ಮೇಲುನೋಟಕ್ಕೆ ಇದು ಕ್ರಮಬದ್ಧವಾಗಿ, ಸಹಜವಾಗಿ ಕಂಡರೂ ಒಳಗೊಳಗೇ ಅಸಹನೆಯ ಕೆಂಡದಂತೆ ನಿಗಿನಿಗಿ ಅನ್ನುತ್ತಿತ್ತು.

ಜಾತಿಯ ಅಡ್ಡಗೋಡೆಗಳು ಎಷ್ಟೇ ಪ್ರಬಲವಾಗಿದ್ದರೂ ಅವುಗಳನ್ನು ಮೀರಿ ಸ್ನೇಹ-ಪ್ರೀತಿಗಳು ಮಿಡಿಯುತ್ತವೆಂಬುದನ್ನು ಜನಪದ ಸಮುದಾಯ ಮನಗಂಡಿದೆ. ಜಾತೀಯತೆಯ ಕ್ರೂರ ಆಚರಣೆಗಳ ಮಧ್ಯೆ ನಲುಗುತ್ತಿದ್ದರೂ ಜಾತ್ಯತೀತ ಮನುಷ್ಯನ ಪರಿಕಲ್ಪನೆ ಜನಪದರಿಗಿತ್ತು.

ಬಡತನ ನನಗಿರಲಿ ಬಾಳ ಮಕ್ಕಳು ಇರಲಿ
ಅಡಿಗಡಿಗೆ ದುಕ್ಕ ಬರುತಿರಲಿ । ನಮ್ಮೂರ
ಅಡವಿ ಸಾಂಬನ ದಯೆ ಇರಲಿ.

ಇಲ್ಲಿ ಮನುಷ್ಯ ತಾನು ಜಾತಿಹೀನನಾಗಿದ್ದರೂ ಚಿಂತೆಯಿಲ್ಲ, ಹಾಗೆಯೇ ಭೂಲೋಕದ ಜೀವನ ಶಾಪವೆಂದು ತಿಳಿದಿರುವ ಹಸಿವು-ಬಡತನ ಅದಕ್ಕಂಟಿಕೊಂಡಿರುವ ಮಕ್ಕಳ ಸಂಖ್ಯೆ ಇವು

ವ್ಯಕ್ತಿಯನ್ನು ಬಾಧಿಸುವುದಿಲ್ಲ ಏಕೆಂದರೆ ಸಾಂಬನ ದಯೆಯ ರಕ್ಷಣೆಯಿಂದ ಎಂದು ದೈವೀಶ್ರದ್ಧೆ ಹೊಂದಿರುವ ಜನಪದ ಮನುಷ್ಯ ಎಂದು ತಿಳಿದಿದ್ದ.

ಮನುಷ್ಯನಿಗೆ ಸಿರಿ ಸಂಪತ್ತುಗಳು ಗರ್ವವನ್ನುಂಟು ಮಾಡುತ್ತವೆ. ಅಂಥ ಗರ್ವಕ್ಕೆ ಗುರಿಯಾಗದವನು ಮಾತ್ರ ಒಳ್ಳೆಯವನೆನಿಸಿಕೊಳ್ಳುತ್ತಾನೆ. ಮನುಷ್ಯ ನಿಗರ್ವಿಯಾಗಿರಬೇಕಾದುದು ಅಪೇಕ್ಷಣೀಯ. ಗರ್ವಕ್ಕೆ ಕಾರಣವಾಗುವ ಸಿರಿ-ಸಂಪತ್ತು, ಅಧಿಕಾರ, ಪದವಿ ಯಾವುದೂ ಸ್ಥಿರವಾಗಿರುವುದಿಲ್ಲ.

ಹಸಿದು ಬಂದವರಿಗೆ ಅನ್ನ ನೀಡಿ, ಬೇಡಿ ಬಂದವರಿಗೆ ದಾನ ಮಾಡಿ, ಅಧಿಕಾರ ಇದ್ದಾಗ ನೆರವು, ಸಹಾಯ ಮಾಡಿ ಮನುಷ್ಯ ಉನ್ನತಿಗೇರಬೇಕು ಎಂಬುದು ಕೂಡಾ ಜನಪದರ ಹಂಬಲವಾಗಿತ್ತು.

ಬಂಗಾರ ಬಳೆಯವಳೆ ಬಡವರ ಬೈಬ್ಯಾಡ
ಬಂಗಾರ ನಿನಗೆ ಸ್ಥಿರವಲ್ಲ। ಮದ್ದಿನದ್ಹಾಂಗ
ಬಿಸಲು ಹೊಳ್ಳೋದು ತಡವಲ್ಲ ಎಂದಿದ್ದಾರೆ.

ಬಡವರನ್ನು, ಬಡತನದ ದಾರುಣ ಸ್ಥಿತಿಯನ್ನು ನಿಂದಿಸಬೇಡ. ಬಂಗಾರ ಎಂಬುದು ಶಾಶ್ವತವಲ್ಲ. ಮಧ್ಯಾಹ್ನ ಕಳೆದ ಹಾಗೆ ಸಂಜೆಗೆ ತಿರುಗುವಂತೆ ಯಾವುದೂ ನಿತ್ಯವಲ್ಲ. ಸಾರ್ಥಕ ಬದುಕಿನ ಮೂಲಕ ಧನ್ಯತೆ ಪಡೆಯಬೇಕೆಂದು ಜನಪದರು ಬಯಸಿದ್ದರು.

ಹಾಗೆಯೇ ಧನಿಕರನ್ನು ಕುರಿತು:

ಬಡವಗೆ ಕೂಳಿಟ್ಟು ತಬ್ಲೀಗೆ ಆಸರೆಕೊಟ್ಟು
ಬಿಸಲಾಗಿದ್ದವರನ್ನು ನೆರಳಿಗೆ ಕರದರ
ಬಸರೀನ ಭಾಗ್ಯ ದೊರೆತೀತು

ಎಂಬಲ್ಲಿ ಸಂಪತ್ತು ಇರುವಾಗ ಬಡವನಿಗೆ ಅನ್ನ ಹಾಕು, ಅನಾಥರಿಗೆ ಆಸರೆ ಕೊಡು, ಕಷ್ಟದಲ್ಲಿದ್ದವರಿಗೆ ನೆರವಿನ ಹಸ್ತ ಚಾಚಬೇಕು, ಇವೆಲ್ಲಾ ಧನ್ಯತೆಯನ್ನು ಪಡೆಯುವ ಮಾರ್ಗಗಳು. ಧನಿಕ ಮನುಷ್ಯ ಮಕ್ಕಳಿಲ್ಲ ಎಂಬ ಚಿಂತೆಯಿಂದ ಊರೂರ ದೇವರ ಸೇವೆ ಮಾಡುವುದಕ್ಕಿಂತ ಬಡವರ, ನಿರ್ಗತಿಕರ ಸೇವೆ ಮಾಡಬೇಕಿದೆ. ಬಡವರಿಗೆ ಅನ್ನದ ನೈವೇದ್ಯ, ನಿರ್ಗತಿಕರಿಗೆ ಆಶ್ರಯವನ್ನು ನೀಡುವುದೇ ನಿಜವಾದ ಭಕ್ತಿ ಮತ್ತು ಸೇವೆ. ಅದರಿಂದಲೇ ಸಂತಾನ ಭಾಗ್ಯ ಒದಗುವುದೆಂದು ವಿವರಿಸಲಾಗಿದೆ. ಮಾನವೀಯತೆಯ ನೆಲೆಯಲ್ಲಿ ಮನುಷ್ಯ ಸಾಗಬೇಕಾಗಿದೆ. ಆದರ್ಶಗಳ ಪಾಲನೆಯಲ್ಲಿ ಧನ್ಯತೆಯನ್ನು ಕಂಡುಕೊಳ್ಳಬೇಕು.

ಒಬ್ಬ ಮನುಷ್ಯನು ಗೌರವಕ್ಕೆ ಪಾತ್ರನಾಗುವುದು ತನ್ನ ದುಡಿಮೆಯಿಂದ. ದುಡಿತವು ವ್ಯಕ್ತಿಗೆ ನೆಮ್ಮದಿಯನ್ನೂ, ಆರೋಗ್ಯವನ್ನೂ ತಂದು ಕೊಡುವುದು. ದುಡಿಯಲಾರದ ಸೋಮಾರಿಯನ್ನು ಯಾವ ಸಮಾಜವೂ ಗೌರವಿಸದು. ಲೌಕಿಕ ಜೀವನದ ಸುಖ-ಸಂತೃಪ್ತಿಗಳು ದುಡಿತದಿಂದ ಮಾತ್ರ ಲಭ್ಯವಾಗುವಂಥವು. "ಆಳಾಗಿ ದುಡಿ ಅರಸನಾಗಿ ಉಣ್ಣು" ಎಂದು ಹೇಳುವಲ್ಲಿ ದುಡಿತದ

ಗೌರವವನ್ನು ಮತ್ತು ಕೊನೆಯಲ್ಲಿ ಅದು ನೀಡುವ ಸುಖ-ಸೌಲಭ್ಯಗಳನ್ನು ತಿಳಿಸಲಾಗಿದೆ. "ಕೈತುಂಬ ಗೆಯ್ಮಿ, ಬಾಯಿ ತುಂಬಾ ಉಣ್ಣು" ಎಂಬ ಗಾದೆಯೂ ಇದೇ ಅಭಿಪ್ರಾಯವನ್ನು ಸಮರ್ಥಿಸುತ್ತದೆ. ಲೌಕಿಕ ಕಷ್ಟಗಳಲ್ಲಿ ಅತ್ಯಂತ ಘೋರವಾದುದೆಂದರೆ ಹಸಿವು ಮತ್ತು ಬಡತನ. ದುಡಿತವಿದ್ದಲ್ಲಿ ಬಡತನ ಸುಳಿಯದು, ಹಸಿವಿನ ಸಮಸ್ಯೆ ಕಾಣದು. ಆಲಸಿತನ ಬಡತನವನ್ನು ಆಹ್ವಾನಿಸುತ್ತದೆಂಬುದನ್ನು 'ಅಲ್ಲಿ ಕೂತು ಇಲ್ಲಿ ಕೂತು ಮಲ್ಲಕ್ಕ ಬಡವಿಯಾದಳು' ಎಂಬ ಮಾತು ತಿಳಿಸುತ್ತದೆ. ಜನಪದರಿಗೆ ದುಡಿತದ ಗೌರವ ತಿಳಿದಿತ್ತು. ದುಡಿತದಲ್ಲಿ ಮೇಲು-ಕೀಳು ಎಂಬುದಿರಬಾರದು. ಆದುದರಿಂದ "ಸುಮ್ಮನೆ ಕೂರುವುದಕ್ಕಿಂತ ಕೂಲಿ ಮಾಡುವುದು ಲೇಸು". ಸಾಮಾನ್ಯವಾಗಿ ಕೂಲಿ ಕೆಲಸವನ್ನು ಕೀಳಾಗಿ ಭಾವಿಸಲಾಗುತ್ತದೆ. ಆದರೆ ಆಲಸಿತನಕ್ಕಿಂತ ಕೂಲಿ ಶ್ರೇಷ್ಠವಾದುದು. ಆದರೆ ಮೈಮುರಿದು ದುಡಿದರೂ ಹೊಟ್ಟೆ ತುಂಬ ಅನ್ನ ಸಿಗದಿರುವುದು ಬಡವರ ದೌರ್ಭಾಗ್ಯವೇ ಸರಿ.

ದುಡಿದು ದುಡಿದು ಆಯಾಸಗೊಳ್ಳುವವರಿಗೆ ಹೊಟ್ಟೆ ತುಂಬಾ ಅನ್ನ ಸಿಕ್ಕರೆ ತಾನೇ ಶಕ್ತಿ ಬರುವುದು, ಹುರುಪಿನಿಂದ ದುಡಿಮೆ ಮಾಡಲು ಸಾಧ್ಯವಾಗುವುದು. ಧನಿಕರು ಬಡವರನ್ನು ಕೂಲಿಯಾಳುಗಳನ್ನಾಗಿ ಮಾಡಿ ದುಡಿಸಿಕೊಳ್ಳುತ್ತಾರೆ. ಅವರ ದುಡಿಮೆಗೆ ತಕ್ಕಂತೆ ಕೂಲಿಯ ಹಣವನ್ನು ಕೊಡದೇ, ಹೊಟ್ಟೆ ತುಂಬಾ ಅನ್ನ ನೀಡದೇ ನರಳುವಂತೆ ಮಾಡುತ್ತಾರೆ. ಬಡವರಿಗೆ ಹೊಟ್ಟೆ ತುಂಬಾ ಅನ್ನ ನೀಡಿದರೆ ಸುಖ ನಿದ್ರೆ ಮಾಡಿ ಮಾರನೆಯ ದಿನ ಕೆಲಸಕ್ಕೆ ಬಾರದೇ ಇದ್ದರೆ ತಮ್ಮ ಮನೆಯ, ಜಮೀನಿನ ಕೆಲಸ ಹಾಗೇ ನಿಂತು ಬಿಡುತ್ತದೆಂಬ ಚಿಂತೆ. ಶ್ರೀಮಂತರ ಸ್ವಾರ್ಥದ ಚಿಂತೆಗೆ ಬಡವರು ಬಿಸಿಲಿಗೆ ಮೈಯ್ಯೊಡ್ಡಿ ಹಗಲು ಇರುಳೆನ್ನದೆ ದುಡಿದರೂ ಹೊಟ್ಟೆ ತುಂಬಾ ಅನ್ನ, ಮೈತುಂಬಾ ಬಟ್ಟೆ ಕಾಣುವುದೇ ಸಾಧ್ಯವಾಗದೆ ಹೋದಾಗ, ಇವರನ್ನೇ ನಂಬಿಕೊಂಡು ಕಾಯುವ ಕುಟುಂಬದ ಸದಸ್ಯರ ಗೋಳನ್ನು ಕೇಳುವುದಕ್ಕಾದರೂ ಯಾರಿದ್ದಾರೆ? ಬಡವರ ಹಸಿವಿನ ಕೂಗು ಅವರ ಹಟ್ಟಿಯನ್ನು ದಾಟಿ ಮುಂದೆ ಬರುವುದೇ ಇಲ್ಲ, ಬಂದರೂ ಅದು ಧನಿಕರಿಗೆ ಕೇಳುವುದೇ ಇಲ್ಲ.

ಡಾ. ಆಶಾಬೆನಕಪ್ಪನವರ 'ಅಂತಃಕರಣ' ಎಂಬ ಲೇಖನ

"ಹಸಿವಿನಿಂದ ನರಳಾಡುವ ಬಡವರಿಗೆ ಬದುಕು ತುಟ್ಟಿ, ಸಾವು ಇನ್ನೂ ತುಟ್ಟಿ" ಎಂದು ಡಾ. ಆಶಾಬೆನಕಪ್ಪನವರ ಅಭಿಪ್ರಾಯವನ್ನು ಒಪ್ಪಬೇಕಾಗುತ್ತದೆ. 'ಅಂತಃಕರಣ' ಎಂಬ ಲೇಖನದಲ್ಲಿ ಮೇಲಿನ ಮಾತನ್ನು ಸಮರ್ಥಿಸಿಕೊಂಡಿದ್ದಾರೆ.

ಕೊಪ್ಪಳದ ಬಡ ರೈತನಾದ ಮುನಿಯಪ್ಪ ಹೃದ್ರೋಗದಿಂದ ನರಳುತ್ತಿದ್ದ ಮಗನಾದ ಹನುಮಂತನನ್ನು ಹೊಟ್ಟೆ-ಬಟ್ಟೆ ಕಟ್ಟಿ ಇದ್ದ ಕೆಲವೇ ಗುಂಟೆ ಜಮೀನನ್ನು ಮಾರಿ, ಹಣ ಹೊಂದಿಸಿಕೊಂಡು ಜಯದೇವ ಹೃದ್ರೋಗ ಚಿಕಿತ್ಸ ಕೇಂದ್ರಕ್ಕೆ ಕರೆದೊಯ್ದ. ಆದರೆ "ಹೃದ್ರೋಗ ಚಿಕಿತ್ಸೆಯಿಂದ ರೋಗ ಗುಣವಾಗುವ ಸ್ಥಿತಿ ಮೀರಿದೆ"[೬] ಎಂದು ವೈದ್ಯರು 'ಹುಡುಗ ಇನ್ನು ಕೆಲವೇ ದಿನ ಬದುಕಿರುತ್ತಾನೆ' ಎಂದು ಹೇಳಿದರು. ನಂತರ ಮುನಿಯಪ್ಪ ಆಶಾಬೆನಕಪ್ಪನವರು ಕೆಲಸ ಮಾಡುತ್ತಿದ್ದ ವಾಣಿ ವಿಲಾಸ ಆಸ್ಪತ್ರೆಗೆ ಮಗನನ್ನು ದಾಖಲು ಮಾಡಿದ್ದ.

ಮುನಿಯಪ್ಪ ಪತ್ನಿಯನ್ನು ಕಳೆದುಕೊಂಡಿದ್ದರೂ ಮತ್ತೊಂದು ಮದುವೆ ಆಗಿರಲಿಲ್ಲ. (ಕಾರಣ ತಾವೇ ಬಡತನದಿಂದ ಬಳಲುತ್ತಿರುವಾಗ ಮತ್ತೊಬ್ಬರನ್ನು ಮದುವೆಯಾಗಿ ಅವರ ಜೊತೆಗೆ ತಾವು ಕೂಡ ಮತ್ತಷ್ಟು ಬಳಲಬೇಕಾದೀತೆಂದು ಹೆದರಿರಬಹುದು) ಗೋಣಿಚೀಲದಲ್ಲಿ ಒಂದಷ್ಟು ರಾಗಿ, ಸ್ವಲ್ಪ ಸೀಮೆ ಎಣ್ಣೆ, ಒಂದು ಸ್ಟವ್ ಮತ್ತಿತರ ವಸ್ತುಗಳನ್ನು ಊರಿನಿಂದಲೇ ತೆಗೆದುಕೊಂಡು ಹೋಗಿದ್ದ ಮುನಿಯಪ್ಪ ಆಸ್ಪತ್ರೆ ಪಕ್ಕದಲ್ಲಿ ತಾನೇ ಅಡುಗೆ ಮಾಡಿಕೊಳ್ಳುತ್ತಿದ್ದ, ಮಗನಿಗೆ ಆಸ್ಪತ್ರೆಯವರು ಊಟ ಕೊಡುತ್ತಿದ್ದರಿಂದ ಸಮಸ್ಯೆ ಇರಲಿಲ್ಲ. ಮಗನನ್ನು ಉಳಿಸಿಕೊಳ್ಳಲೇಬೇಕೆಂಬ ಮುನಿಯಪ್ಪ ಕಷ್ಟ ಪಟ್ಟು ಹೊಂದಿಸಿದ ಹಣ ಕರಗತೊಡಗಿತು. ತಂದಿದ್ದ ಗೋಣಿಚೀಲದ ವಸ್ತುಗಳು ಖಾಲಿಯಾಗ ತೊಡಗಿದವು. ಮಗ ಮಾತ್ರ ಗುಣವಾಗುವ ಭರವಸೆ ಸಿಗಲಿಲ್ಲ.

ಪ್ರತೀದಿನ ವೈದ್ಯರು ಭೇಟಿ ನೀಡುವ ಹೊತ್ತಿಗೆ ಸರಿಯಾಗಿ ತೀವ್ರ ನಿಗಾ ಘಟಕದಲ್ಲಿ ತಮ್ಮ ಮಗನಿಗೆ ಮುನಿಯಪ್ಪ ಹಲ್ಲು ತಿಕ್ಕಿ, ಸ್ನಾನಮಾಡಿಸುತ್ತಿದ್ದ. ಹಿಂದಿನ ದಿನ ಒಗೆದು ಆಸ್ಪತ್ರೆಯ ಆವರಣದಲ್ಲೇ ಒಣಗಿಸಿದ ಮುದುರಿದ ಬಟ್ಟೆ ತೊಡಿಸುತ್ತಿದ್ದ. ಆ ಅಪ್ಪ-ಮಗನ ನಡುವೆ ಇದ್ದ ನಿರ್ಮಲ ಪ್ರೀತಿಯನ್ನು ಕಂಡು ಡಾಕ್ಟರ್ ಆಶಾಬೆನಕನಪ್ಪವರಿಗೆ ಆಶ್ಚರ್ಯವಾಗುತ್ತಿತ್ತು. ಬಡತನದ ಬೇಗೆಯಲ್ಲಿ ನರಳುತ್ತಿದ್ದರೂ ಪ್ರೀತಿಗೇನೂ ಕೊರತೆ ಇರಲಿಲ್ಲ. ತಾನು ಬದುಕಿ, ಮಗನನ್ನು ಬದುಕಿಸಿಕೊಳ್ಳಬೇಕೆಂಬ ಜೀವನ ಪ್ರೀತಿ ಎದ್ದು ಕಾಣುತ್ತಿತ್ತು. ಮುನಿಯಪ್ಪ ಮಗನ ಔಷಧಕ್ಕೆ ಮಾತ್ರ ಹಣ ಖರ್ಚು ಮಾಡುತ್ತಿದ್ದನೇ ಹೊರತೂ ಬೇರಾವುದಕ್ಕೂ ಅಲ್ಲ. ತನ್ನ ನೋವಿನಲ್ಲೂ, ಮಗ ಓಡಾಡುವ ಸ್ಥಿತಿಯಲ್ಲಿ ಇರುವಾಗಲೂ ಮಗನನ್ನು ಶೌಚಾಲಯಕ್ಕೆ ಕರೆದುಕೊಂಡು ಹೋಗುತ್ತಿದ್ದ. ಏಳಲು ಆಗದ ಸ್ಥಿತಿಯಲ್ಲಿ ಅವನಿದ್ದಾಗ ಹಾಸಿಗೆಯ ಪಕ್ಕದಲ್ಲೇ ನಿಂತು ಅಗತ್ಯವಿದ್ದಾಗ ತಾನೇ ಬೆಡ್‌ಪ್ಯಾನ್ ಇಡುತ್ತಿದ್ದ. ಒಮ್ಮೆಯೂ ಮುನಿಯಪ್ಪ ಗೊಣಗಿದ್ದನ್ನಾಗಲೀ, ಬೇಸರ ಪಟ್ಟುಕೊಂಡಿದ್ದನ್ನಾಗಲೀ ಯಾರೂ ನೋಡಿರಲಿಲ್ಲ, ಕೇಳಿರಲಿಲ್ಲ.

ಮಗ ಕೊನೆಯುಸಿರೆಳೆದಾಗ ಅಳಲಿಲ್ಲ, ಮಾತು ಆಡಲಿಲ್ಲ. ಅಲ್ಲಿದ್ದ ಗೋಣೀಚೀಲ ಎತ್ತಿಕೊಂಡು ಹೊರನಡೆದ ಮುನಿಯಪ್ಪ ಎರಡು ತಾಸು ಕಳೆದು ದೊಡ್ಡದೊಂದು ಟ್ರಂಕ್ ಹೊತ್ತುಕೊಂಡು ಬಂದ. ಡಾ. ಆಶಾರವರ ನೆರವಿನೊಂದಿಗೆ ಮಗನ ಶವವನ್ನು ಅದರಲ್ಲಿಟ್ಟುಕೊಂಡ, ಇದನ್ನು ಗಮನಿಸಿದ ವೈದ್ಯರಿಗೆ ಅಚ್ಚರಿಯಾಯ್ತು. ವಿಚಾರಿಸಿದಾಗ ಉತ್ತರ ಸಿಕ್ಕಿತು, ಮಗನನ್ನು ಕೊಪ್ಪಳದ 'ತಮ್ಮ ಜಾಗದಲ್ಲಿ ಮಣ್ಣು ಮಾಡುವುದು' ಮುನಿಯಪ್ಪನ ಬಯಕೆಯಾಗಿತ್ತು. ಅದಕ್ಕಾಗಿ ಟ್ಯಾಕ್ಸಿ ವಿಚಾರಿಸಿದರೆ, ಟ್ಯಾಕ್ಸಿಯವರು ಮೂರುವರೆಯಿಂದ ನಾಲ್ಕುಸಾವಿರ ಕೇಳಿದಾಗ ಮುನಿಯಪ್ಪನಿಗೆ ದಿಕ್ಕೇ ತೋಚದಂತಾಗಿತ್ತು. ಬೆಂಗಳೂರಿಗೆ ಬರುವ ಮೊದಲು ಕೆಲವೇ ಗುಂಟೆಗಳ ಜಮೀನು ಮಾರಿದಾಗ ಬಂದ ಹಣ ಕೂಡ ಅಷ್ಟಿರಲಿಲ್ಲ. ಟ್ಯಾಕ್ಸಿಗೆ ಹಣ ಹೊಂದಿಸಲಾಗದ ಕಾರಣ ಇದ್ದಷ್ಟು ಹಣದಿಂದಲೇ ನಾಲ್ಕು ನೂರು ರೂಪಾಯಿ ಕೊಟ್ಟು ಟ್ರಂಕ್ ಖರೀಸಿದ ತಂದಿದ್ದ. ಅದರಲ್ಲಿಯೇ ಮಗನ ಶವವನ್ನು ಊರಿಗೆ ಸಾಗಿಸುವುದು ಮುನಿಯಪ್ಪನ ಉದ್ದೇಶವಾಗಿತ್ತು.

ಟ್ರಂಕನ್ನು ತಲೆಮೇಲೆ ಹೊತ್ತುಕೊಂಡೇ ಹೋದ. ಅಲ್ಲಿಂದ ಬಸ್ಸಿನಲ್ಲಿ ಕೊಪ್ಪಳಕ್ಕೆ ಹೋದ. ಕೆ.ಎಸ್.ಆರ್.ಟಿ.ಸಿ ಬಸ್ಸಿನಲ್ಲಿ ಪೆಟ್ಟಿಗೆಯ ಮೂಲಕ ಶವ ಸಾಗಿಸಲು ಅನುಮತಿ ಇರದಿದ್ದರೂ,

ಮುನಿಯಪ್ಪ ಶವವನ್ನು ಬಸ್ಸಿನಲ್ಲೇ ಸಾಗಿಸಿದ್ದ. ಬಡವರಿಗೆ ಬದುಕು ದುಬಾರಿ. ಹಾಗೆಯೇ ಬದುಕಿಗಿಂತ ಸಾವು ಇನ್ನೂ ದುಬಾರಿ. ಬಡವನಾದರೂ ದುಃಖಿಸದೇ ದೃಢಸಂಕಲ್ಪದಿಂದ ಮಗನ ಶವಸಂಸ್ಕಾರ ಮಾಡಿದ.

ಸ್ವಾತಂತ್ರ್ಯ ಪಡೆದು ಏಳು ದಶಕಗಳಾದರೂ ಈಗಲೂ ಬಡವರಿಗೆ ನೆರವಾಗುವ ಯೋಜನೆಗಳಿಲ್ಲದಿರುವುದು ದುರಂತ. ಮತ ಚಲಾಯಿಸುವಾಗ ಬೇಕಾಗುವ ಬಡವರು ಬದುಕಿದ್ದಾಗ ಬೇಡವಾಗುತ್ತಾರೆ. ಅವರು ಬದುಕಿನಲ್ಲಿ ಅನುಭವಿಸುವ ನೋವಿಗಿಂತಲೂ ಸಾವಿನಲ್ಲೂ ಅನುಭವಿಸುವ ಯಾತನೆ ಬಣ್ಣಿಸಲು ಅಸಾಧ್ಯವೆಂದು ಡಾ. ಆಶಾಬೇನಕಪ್ಪ ಅಭಿಪ್ರಾಯ ಪಟ್ಟಿದ್ದಾರೆ.[೧೭] ಅಧಿಕಾರವರ್ಗ, ರಾಜಕಾರಣಿಗಳು, ಹಸಿವು-ಬಡತನದ ನಿವಾರಣೆಗೆ ಇನ್ನಾದರೂ ಕೈಜೋಡಿಸಬೇಕಾಗಿದೆ.

ಬಡವರು ಸ್ವಾಭಿಮಾನಿಗಳು. ಅವರಿಗೂ ಅವರದ್ದೇ ಆದ ರೀತಿ-ನೀತಿಗಳಿರುತ್ತವೆ. ಅದಕ್ಕೆ ಮುನಿಯಪ್ಪನಂತಹ ಪಾತ್ರಗಳೇ ಸಾಕ್ಷಿ. ತಾನು ಹಸಿವು ಬಡತನದಿಂದ ಬಳಲುತ್ತಿದ್ದರೂ, ಇದ್ದೊಬ್ಬ ಮಗನನ್ನು ಉಳಿಸಿಕೊಳ್ಳುವುದಕ್ಕಾಗಿ ಇದ್ದ ಸ್ವಲ್ಪ ಜಮೀನನ್ನು ಮಾರಿ ಬೆಂಗಳೂರಿಗೆ ಕರೆತರುತ್ತಾನೆ. ತನ್ನ ಹೊಟ್ಟೆಗಿಂತ ಮುನಿಯಪ್ಪನಿಗೆ, ತನ್ನ ಮಗನಿಗೆ ಚಿಕಿತ್ಸೆ ಕೊಡಿಸುವುದೇ ಮುಖ್ಯವಾಗುತ್ತದೆ. ಔಷಧಿಯ ಹೊರತು ಯಾವುದಕ್ಕೂ ಬಿಡಿಗಾಸನ್ನು ಖರ್ಚು ಮಾಡದ ಮುನಿಯಪ್ಪ ತನ್ನ ಮಗನ ಕಾಯಿಲೆ ವಾಸಿಯಾಗುವಂತದ್ದಲ್ಲ ಎಂದು ವೈದ್ಯರು ತಿಳಿಸಿದಾಗಲೂ, ಧೈರ್ಯಕಳೆದುಕೊಳ್ಳದೇ ಇರುವಷ್ಟು ದಿನ ಮಗನ ಆರೈಕೆ ಮಾಡುತ್ತಾನೆ. ಮಗ ಕೊನೆಯುಸಿರು ಎಳೆದಾಗ ತನ್ನೂರ ಮಣ್ಣಲ್ಲಿ ಸಂಸ್ಕಾರ ಮಾಡಲು ಬಯಸುತ್ತಾನೆ. ಮುನಿಯಪ್ಪನ ಕಷ್ಟವನ್ನು ಕಣ್ಣಿಂದ ನೋಡುತ್ತಿದ್ದರೂ ಸಮಾಜ ನೆರವು ನೀಡಲು ಮುಂದೆ ಬರದಿರುವುದು ಕುರುಡು ಸಮಾಜದಲ್ಲಿ ಬಡವರ ಕಷ್ಟಕ್ಕೆ ನೆಲೆಯಿಲ್ಲ ಎಂಬುದು ಅರಿವಾಗುತ್ತದೆ.

ಆಧುನಿಕ ವಿದ್ಯೆ ಎಂಬುದು ವಿಚಿತ್ರ ಅಹಂಕಾರವನ್ನು, ವಿದ್ಯೆ ಇಲ್ಲದಿರುವನ ಮೇಲೆ ಚಲಾಯಿಸಲು ಅಧಿಕಾರವನ್ನು, ಮನುಷ್ಯನಿಗೆ ಕೊಡುವುದುಂಟು. 'ನಿರಕ್ಷರಕುಕ್ಷಿ' ಎಂಬ ಪದ ಆಧುನಿಕನಲ್ಲದ ಹಳ್ಳಿಯ ಬಡ ರೈತನ ಅನುಭವ, ಮೌಲ್ಯ, ತಿಳುವಳಿಕೆಗಳನ್ನು ಅವಮಾನಿಸುವಂಥದು. ಆದರೆ ಬಡರೈತ ಮುನಿಯಪ್ಪನ ದೃಢತೆಯನ್ನು, ಸ್ವಾಭಿಮಾನವನ್ನು, ನಿಷ್ಕಳಂಕ ಜೀವನ ಪ್ರೀತಿಯನ್ನು ಇಲ್ಲಿ ಗೌರವಪೂರ್ಣವಾಗಿ ಚಿಂತಿಸಬೇಕು. ಅವನ ಮೌಲ್ಯಗಳು ಯಾವ ಆಧುನಿಕತೆಯಿಂದಲೂ ಬಂದಂಥವಲ್ಲ. ಕೋಟಿ ಹಣವಿದ್ದರೂ, ಕೈತುಂಬ ಸಂಬಳ ಬರುತ್ತಿದ್ದರೂ ಮತ್ತೊಬ್ಬರ ಹಣಕ್ಕೆ ಕೈಯೊಡ್ಡುವ, ದೋಚುವ ಮನೋಭಾವ ಇನ್ನೂ ಕಡಿಮೆಯಾಗದಿರುವುದು ವಿಪರ್ಯಾಸ. ಬಡವರ ಬದುಕು ಹಸನಾಗಬೇಕು. ಹಾಗೆಯೇ ಸಾವಿನಲ್ಲೂ ನೆಮ್ಮದಿ ಇರಬೇಕು. ಮುನಿಯಪ್ಪ ಕಷ್ಟ ಎಂದು ಯಾರ ಮುಂದೂ ಕೈಚಾಚುವುದಿಲ್ಲ. ಆಸ್ಪತ್ರೆಯಲ್ಲಿದ್ದಷ್ಟು ದಿನವೂ ತಾನೆ ಅಡುಗೆ ಮಾಡಿಕೊಳ್ಳುವುದು ಅವನ ಸ್ವಾಭಿಮಾನಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಅವನಂಥೆ ಆತ್ಮಗೌರವಕ್ಕೆ ಚ್ಯುತಿಬರದ ಹಾಗೆ ಎಲ್ಲರೂ ನಡೆದುಕೊಳ್ಳಬೇಕಾದುದು ಅಗತ್ಯವಾಗಿದೆ. ಶಾಂತರೀತಿಯ ಅಸಹಕಾರ ಚಳವಳಿಯಿಂದ ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಿ, ಜನತಂತ್ರ ಸರ್ಕಾರದಲ್ಲಿ ಜನತೆಯ ಆಶೋತ್ತರಗಳನ್ನು ಈಡೇರಿಸಲು ಕ್ರಾಂತಿಕಾರಕ ಬದಲಾವಣೆಗಳನ್ನು ಮಾಡಬೇಕಾಗಿದೆ.

ಈಗಿರುವ ಭ್ರಷ್ಟವ್ಯವಸ್ಥೆಯನ್ನು ಸಂಪೂರ್ಣವಾಗಿ ಬದಲಾಯಿಸುವುದು ಭಾರತದಲ್ಲಿ ಸರ್ವರೂ ಸಮನಾಗಿ ಬದುಕುವಂತೆ ಮಾಡುವುದು, ದಬ್ಬಾಳಿಕೆಯಿಂದ ಶೋಷಣೆಯಿಂದ ಮುಕ್ತರನ್ನಾಗಿಸುವುದು. ಮೌಢ್ಯ ಸಂಪ್ರದಾಯದ ಬಲೆಯಲ್ಲಿ ಸಿಕ್ಕಿ ಒದ್ದಾಡುವ, ತಿನ್ನಲು, ಉಡಲು ಬವಣೆಪಡುತ್ತಿರುವ ನೊಂದಮನಗಳಿಗೆ ಬದುಕಿನ ಭರವಸೆಯನ್ನು ನೀಡಬೇಕಾಗಿದೆ. ಗಂಡಸಿನ ದಬ್ಬಾಳಿಕೆ ನಿಲ್ಲಬೇಕು, ಹೆಣ್ಣಿನ ಅಸಹಾಯಕತೆ ದೂರವಾಗಬೇಕು. ಶಕ್ತಿ-ಸಾಮರ್ಥ್ಯವಿದ್ದರೂ ಕೂಡ-ತಮ್ಮ ಬದುಕಿನ ಅರ್ಥವನ್ನೇ ಕಳೆದುಕೊಂಡು ಬದುಕುತ್ತಿರುವ ಬಡಜನತೆಯ ಕೂಗು, ಹಸಿವಿನ ನರಳಾಟ ಕಡಿಮೆಯಾಗಬೇಕಿದೆ.

ಬಡ ಭಾರತೀಯರನ್ನು ಸಕಲ ರೋಗಗಳಿಂದ ಮುಕ್ತರಾಗಿಸಿ, ನೋವಿನಿಂದ ನರಳ್ತಾ ಇರೋರ ನೋವು ನಿವಾರಿಸೋದು, ರೋಗದ ಕ್ರಿಮಿಗಳನ್ನು ನಿರ್ಮೂಲ ಮಾಡುವುದಕ್ಕೆ ಪ್ರಯತ್ನಿಸಬೇಕು. ಈ ದೇಶದ ತುಂಬ ಹರಡಿರುವ ಗುಹ್ಯರೋಗಗಳನ್ನು, ಮಲೇರಿಯಾವನ್ನು, ಕಾಲರಾವನ್ನು, ಕುಷ್ಠರೋಗವನ್ನು, ಕ್ಷಯವನ್ನು ನಿವಾರಿಸಿ ಬಡವರನ್ನು ಶಕ್ತರನ್ನಾಗಿಸಿ, ದೇಶವನ್ನು ಬಲಿಷ್ಠಗೊಳಿಸುವುದು.

"ಓರ್ವನ ಬಳಿ ಎಷ್ಟೇ ಐಶ್ವರ್ಯವಿದ್ದರೂ ದಯೆ, ಧರ್ಮ, ದಾನಗಳ ಚೌಕಟ್ಟು ಇಲ್ಲದಿದ್ದರೆ ಅದು ಉಳಿಯುವುದೂ ಇಲ್ಲ, ಬೆಳೆಯುವುದೂ ಇಲ್ಲ. ಬಹುಸಂಖ್ಯಾತ ಜನರು ಹಸಿವು, ಬಡತನದಿಂದ ಕಣ್ಣೀರು ಸುರಿಸುವಾಗ ಐಶ್ವರ್ಯದ ಅಮಲಿನಲ್ಲಿ ಬಾಳುವವನು ಕಡುಪಾಪಿ ಎನಿಸಿಕೊಳ್ಳುತ್ತಾನೆ."[೧೮]

ಗ್ರಾಮಾಂತರ ಪ್ರದೇಶಗಳಲ್ಲಿ ಜನತೆಗೆ ಅವರ ತತ್‌ಕ್ಷಣದ ಅಗತ್ಯಗಳನ್ನು ಪೂರೈಸಬಲ್ಲ ಒಂದು ಆಸ್ಪತ್ರೆ. ಅವರ ಮಕ್ಕಳಿಗೆ ಹೈಸ್ಕೂಲ್‌ವರೆಗೆ ವಿದ್ಯೆ ನೀಡಬಲ್ಲ ಒಂದು ವಿದ್ಯಾಸಂಸ್ಥೆ. ಅವರ ಹೊಟ್ಟೆ ಬಟ್ಟೆಗೆ ನೆರವಾಗಲು ಅವರ ಕೈಗಳಿಗೆ ಕೆಲಸ ಕೊಡಬಲ್ಲ ಸಣ್ಣ ಸಣ್ಣ ಕೈಗಾರಿಕೆಗಳು ತಲೆಯೆತ್ತಬೇಕಾಗಿದೆ.[೧೯]

ಬರಗೂರು ರಾಮಚಂದ್ರಪ್ಪನವರ 'ಡಾ. ರಾಜ್‌ಕುಮಾರ್ ಎಂಬ ಬೆವರಿನ ಮನುಷ್ಯ' ಲೇಖನ

ಬರಗೂರು ರಾಮಚಂದ್ರಪ್ಪನವರು ಹಸಿವಿನ ತೀವ್ರತೆಯನ್ನು ಅರಿತವರು ಹಸಿವಿನ ಬಗ್ಗೆ ಲೇಖನ ಬರೆದಿದ್ದಾರೆ. ಹಸಿವಿನ ಬಳಲಿಕೆ ಉಳಿದೆಲ್ಲ ನೋವುಗಳಿಗಿಂತ ದೊಡ್ಡದು. ಹಾಗಾಗಿಯೇ ಎಲ್ಲರೂ ಡಾ. ರಾಜ್‌ಕುಮಾರ್‌ರವರನ್ನು 'ಬಂಗಾರದ ಮನುಷ್ಯ'ನೆಂದು ಕರೆದಿದ್ದಾರೆ. ಕಾರಣ ರಾಜ್‌ಕುಮಾರ್ ಕೂಡ ಹಸಿವನ್ನು, ಸಮಸ್ಯೆಯನ್ನು ಅನುಭವಿಸಿದವರು. ಆದ್ದರಿಂದ ರಾಜ್‌ಕುಮಾರ್‌ರವರನ್ನು ಬರಗೂರು ರಾಮಚಂದ್ರಪ್ಪನವರು 'ಬೆವರಿನ ಮನುಷ್ಯ' ಎಂದು ಕರೆದಿದ್ದಾರೆ. ಯಾಕೆಂದರೆ ಅವರು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಬೆವರಿನ ಸಂಸ್ಕೃತಿಯಿಂದ ಬಂದವರು. ಸಾಮಾಜಿಕವಾಗಿ ನಿರ್ಲಕ್ಷಿತ ನೆಲೆ, ಆರ್ಥಿಕವಾಗಿ ದುರ್ಬಲ ನೆಲೆಗಳನ್ನು ಬೆನ್ನಿಗೆ ಕಟ್ಟಿಕೊಂಡು ಬೆಳೆದವರು. ಶ್ರಮ, ಶ್ರದ್ಧೆ, ಸಂಕಲ್ಪ ಮತ್ತು ಪ್ರತಿಭಾ ಬದ್ಧತೆಗಳಿಂದ ಬಹುದೊಡ್ಡ ಸಾಧಕರಾದವರು. ಸಾಮಾನ್ಯರೂ ಅಸಾಮಾನ್ಯರಾಗಲು ಸಾಧ್ಯವೆಂದು ಸಾಧಿಸಿ ತೋರಿಸಿದವರು. ಬೆವರು ಬಸಿದು ಬದುಕುವ, ಸಾಮಾಜಿಕ ವಲಯಕ್ಕೆ ಸಾಧಕನ

ರೂಪಕವಾದವರು. ಆದ್ದರಿಂದ ಅವರು 'ಬೆವರಿನ ಮನುಷ್ಯ' ಎಂದು ಡಾ. ಬರಗೂರರು ಅಭಿಪ್ರಾಯ ಪಟ್ಟಿದ್ದಾರೆ.[೩೦]

ಬೆವರಿನ ಮನುಷ್ಯರಿಗೆ ಮೊದಲು ಬೇಕಾದದ್ದು ಹೊಟ್ಟೆಗೆ ಹಿಟ್ಟು. ರಾಜ್ ಅವರಿಗೆ ಆಹಾರದ ಬೆಲೆ ಗೊತ್ತಿತ್ತು. ಅನ್ನ ಮೌಲ್ಯದ ಅರಿವಿತ್ತು. ಈ ಅರಿವಿಗೆ ಜೀವನಾನುಭವದ 'ಒಡಲುರಿಯ' ಆಯಾಮವಿತ್ತು. ಅವರು ರಾಮಚಂದ್ರಪ್ಪನವರೊಂದಿಗೆ ಹೀಗೆ ಹೇಳಿದ್ದರಂತೆ. "ಜನರು ನಾನು ಕನ್ನಡ ಸೇವೆ ಮಾಡ್ತಿನಿ, ಕಲಾಸೇವೆ ಮಾಡ್ತಿನಿ ಅಂತಾ ಹೊಗಳ್ತಾರೆ. ನಿಜ, ಆದ್ರೆ ನಾನು ಈ ಕ್ಷೇತ್ರಕ್ಕೆ ಬಂದದ್ದು ಹೊಟ್ಟೆಪಾಡಿಗೆ. ಆ ಮೇಲೆ ಸೇವೆಗೀವೆ ವಿಷಯ"[೩೧] ಇಂಥ ವಾಸ್ತವದ ಅರಿವಿನಿಂದಲೇ ಅವರು ಹಿರಿದಾಗಿ ಬೆಳೆದರು.

ಅನ್ನವನ್ನು ಅಮೂಲ್ಯವೆಂದು ಗೌರವಿಸಿದರು. ಒಂದೇ ಒಂದು ಅಗುಳನ್ನೂ ಅಪವ್ಯಯ ಮಾಡಬಾರದೆಂದು ಭಾವಿಸಿದರು. ಅದರಂತೆ ನಡೆದುಕೊಂಡರು. ಅವರು ಊಟ ಮಾಡಿದ ಮೇಲೆ ತಟ್ಟೆಯಲ್ಲಿ ಒಂದೇ ಒಂದು ಅನ್ನದ ಅಗುಳೂ ಉಳಿಯುತ್ತಿರಲಿಲ್ಲ. ಇದು ರಾಜ್‌ಕುಮಾರರ ಅನ್ನ ತತ್ವವಾಗಿತ್ತು.

ರಾಜ್‌ಕುಮಾರ್ ಅನ್ನಕ್ಕೆ ಕೊಡುತ್ತಿದ್ದ ಗೌರವಕ್ಕೆ ಒಂದು ಘಟನೆಯನ್ನು ಬರಗೂರು ಹೀಗೆ ವಿವರಿಸಿದ್ದಾರೆ. ಆತ್ಮೀಯರೊಬ್ಬರು ರಾಜ್‌ಕುಮಾರ್ ಅವರನ್ನು ವಿವಾಹಕ್ಕೆ ಆಹ್ವಾನಿಸಿದ್ದರು. ಅಂದು ಇವರಿಗೆ ತುಂಬಾ ಕೆಲಸ. ಮುಹೂರ್ತಕ್ಕೆ ಹೋಗಲಾಗಲಿಲ್ಲ. ಹೋಗದೆ ಇರಲು ಇವರಿಗೆ ಮನಸ್ಸು ಒಪ್ಪಲಿಲ್ಲ. ಬಂಧು ಚಿನ್ನೇಗೌಡರನ್ನು ಕರೆದುಕೊಂಡು ಸಾಯಂಕಾಲದ ಸುಮಾರಿಗೆ ಕಲ್ಯಾಣ ಮಂಟಪಕ್ಕೆ ಹೋದರು. ಅಲ್ಲಿದ್ದವರಿಗೆ ಸಂಭ್ರಮವೋ ಸಂಭ್ರಮ. ಊಟ ಮಾಡಲೇಬೇಕೆಂದು ಒತ್ತಾಯ. ಅವರಿಗೆ ಅಸಂತೋಷವಾಗಬಾರದೆಂದು ರಾಜ್‌ಕುಮಾರ ಊಟಕ್ಕೆ ಕುಳಿತರು. ಪಕ್ಕದಲ್ಲಿ ಬಂಧುವನ್ನು ಕೂರಿಸಿಕೊಂಡರು. ಬಾಳೆಲೆಯ ಮೇಲೆ ಪಲಾವ್, ಅನ್ನ, ಅಲಂಕಾರಗೊಂಡಿತ್ತು. ರಾಜ್‌ಕುಮಾರ್ ಆನಂದದಿಂದ ತಿನ್ನುತ್ತಾ 'ಚೆನ್ನಾಗಿದೆ, ರುಚಿಕಟ್ಟಾಗಿದೆ' ಎನ್ನುತ್ತಿದ್ದರು. ಬಂಧು ಚಿನ್ನೇಗೌಡರಿಗೆ ಪೀಕಲಾಟ, ಯಾಕೆಂದರೆ ಅನ್ನ ಹಳಸಿ ಹೋಗಿತ್ತು. ಹಳಸಿದ ಅನ್ನ ತಿನ್ನೋದು ಹೇಗೆ? ಆದರೆ ರಾಜ್‌ಕುಮಾರ 'ಚೆನ್ನಾಗಿದೆ, ಅಲ್ವಾ ಚಿನ್ನಪ್ಪ' ಎನ್ನುತ್ತಿದ್ದಾರೆ. ಚಿನ್ನೇಗೌಡರು 'ಹೌದು ಮಾಮ' ಎಂದು ಹೇಗೋ ತಿಂದರು. ವಾಪಾಸ್ ಬರುವಾಗ ರಾಜ್ ಹೇಳಿದರು 'ನೋಡು ಚಿನ್ನಪ್ಪ, ಅನ್ನ ಹಳಸಿತ್ತು ಅಂತ ನನಗೆ ಗೊತ್ತಿತ್ತು. ಆದರೆ ಹಾಗಂತ ಹೇಳಿ ನಾವು ಅನ್ನ ಬಿಟ್ಟು ಎದ್ದಿದ್ರೆ ಅವ್ರಿಗೆ ಬೇಜಾರಾಗೋದು. ಹಳಸಿದ ಅನ್ನ ಬಡಿಸಿದ ಬೇಜಾರು. ನಾವೇನು ಬೇಜಾರು ಮಾಡ್ಕೊಂಡೆವೂ ಅನ್ನೋ ಬೇಜಾರು – ಎರಡೂ ಆಗೋದು, ಇಷ್ಟಕ್ಕೂ ನಾವೇನ್ ಅನ್ನದ ತಪ್ಪಲೇಲಿ ಹುಟ್ಟಿ ಬೆಳೆದೋರ? ಅನ್ನಕ್ಕೆ ಅಗೌರವ ಆಗಬಾರದು. ಅವ್ರಿಗೂ ಬೇಜಾರ್ ಆಗ್ಬಾರ್ದು. ಅದಕ್ಕೆ ತಿಂದು ಬಿಟ್ಟೆ. ರಾಜ್ ಮಾತು ಬದುಕಿನ ವಾಸ್ತವತೆಯನ್ನು ಹೇಳಿಬಿಟ್ಟಿದೆ.

ಹಸಿವೆಯಿಂದ ಬಳಲಿದವರಿಗೆ ಮಾತ್ರ ಹಸಿವಿನ ಸಮಸ್ಯೆ ಅರ್ಥವಾಗಬಲ್ಲದು. ಹಾಗೂ ಅನ್ನದ ಮಹತ್ವ ತಿಳಿದಿರುವುದು. ಹಸಿದವರಿಗೆ ಹಳಸಿದನ್ನವೂ ಅಮೃತವಾಗಬಲ್ಲದೆಂಬುದಕ್ಕೆ ರಾಜ್‌ಕುಮಾರ್‌ರವರ ಮೇಲಿನ ಘಟನೆ ಉತ್ತಮ ನಿದರ್ಶನ.

ಡಾ. ಬರಗೂರರು ಮತ್ತೊಂದು 'ರಾಜ್' ಬದುಕಿನ ನಿಜ ಪ್ರಸಂಗವನ್ನು ತಿಳಿಸಿದ್ದಾರೆ. ಸಂಜೆ ಹೊತ್ತು ರಾಜ್ ನಿತ್ಯವೂ ವಾಕಿಂಗ್ ಹೋಗುತ್ತಿದ್ದರು. ಜೊತೆಗೆ ಬಂಟ ಚೆನ್ನ ಇರುತ್ತಿದ್ದರು. ಎಂದಿನಂತೆ ಒಂದು ದಿನ ತಮ್ಮ ಸದಾಶಿವ ನಗರದ ಮನೆಯಿಂದ ಚೆನ್ನನ ಜೊತೆ ಹೊರಟರು. ಒಂದು ಕಡೆ ನಿರ್ಮಾಣ ಹಂತದಲ್ಲಿದ್ದ ಕಟ್ಟಡ ಕಾಣಿಸಿತು. ಅದಕ್ಕೆ ಅಂಟಿಕೊಂಡಂತೆ ಮುರುಕು ಗುಡಿಸಲಿತ್ತು. ಆ ಗುಡಿಸಲಿನಿಂದ ಕೋಳಿಸಾರಿನ ವಾಸನೆ ಹೊರಹೊಮ್ಮತ್ತಿತ್ತು. ಮೊದಲೇ ಕೋಳಿ ಸಾರು ಪ್ರಿಯರಾದ ರಾಜ್‌ಕುಮಾರ್‌ಗೆ ವಾಸನೆ ಹೊಕ್ಕಿಬಿಟ್ಟಿತು. "ಚೆನ್ನಾ ಅವ್ರು ಕೋಳಿಸಾರು ಮುದ್ದೆ ಹಾಕ್ತಾರೇನೋ ಕೇಳಿ ಬಾ" ಎಂದರು. ಅದಕ್ಕೆ ಆಶ್ಚರ್ಯಗೊಂಡ ಚೆನ್ನ "ಅಣ್ಣಾ, ಅವ್ರ್ ಮನೇಲಿ? ನೀವು ಊಟಮಾಡೋದಾ?" ಎಂದು ತಡವರಿಸಿದಾಗ "ಯಾಕ್ರಿ ಅವರೇನ್ ನಮ್ಮಂಗೆ ಮನುಷ್ಯರಲ್ಲ? ನೀವ್ ಹೋಗಿ ಕೇಳಿಬನ್ನಿ" ಎಂದು ರಾಜ್‌ಕುಮಾರ್ ಹೇಳಿದಾಗ, ಚೆನ್ನ ಗುಡಿಸಲೊಳಗೆ ಹೋಗಿ ಕೇಳಿದಾಗ ಅಲ್ಲಿದ್ದ ಕೂಲಿಯಾಳು ಸಂಸಾರಕ್ಕೆ ಸಂಭ್ರಮ ಮತ್ತು ಆತಂಕ. ರಾಜ್‌ಕುಮಾರ್ ತಮ್ಮ ಗುಡಿಸಲಿಗೆ ಊಟಕ್ಕೆ? ಕಲ್ಪಿಸಿಕೊಳ್ಳಲಾಗಲಿಲ್ಲ. ಅಷ್ಟರಲ್ಲಿ ರಾಜ್ ಒಳಗೆ ಬಂದೇ ಬಿಟ್ಟರು. ನೆಲದ ಮೇಲೆ ಕುಳಿತು "ಕೋಳಿಸಾರು ಮುದ್ದೆ ಕೊಡ್ತೀಯೇನವ್ವ" ಎಂದಾಗ ಆ ಹೆಣ್ಣು ಮಗಳು ಲಗುಬಗನೆ ಹಳೆಯ ತಟ್ಟೆಯಲ್ಲಿ ಊಟಕ್ಕೆ ಬಡಿಸಿದಾಗ ರಾಜ್ ಆನಂದದಿಂದ ಊಟ ಮಾಡಿ, ಕೈಮುಗಿದು ಹೊರಟರು. ವಾಪಾಸು ಮನೆಗೆ ಬಂದ ಕೂಡಲೇ ಚೆನ್ನನ ಕೈಗೆ ಒಂದಷ್ಟು ಹಣಕೊಟ್ಟು "ಅವ್ರಿಗೆ ಕೊಟ್ಟು ಬನ್ರಿ, ನನ್ನಿಂದ ಅವ್ರ ಒಂದು ಊಟಕ್ಕೆ ಕತ್ತರಿ ಬಿದ್‌ಬಿಟ್ಟಿದೆ". ಎಂದು ಕಳುಹಿಸಿಕೊಟ್ಟರು. ಇದು ರಾಜ್ ಬದುಕಿನ ಕ್ರಮ ಮತ್ತು ಜೀವನದ ಶಿಸ್ತು. ಅನ್ನವೇ ಪ್ರಾಣದೇವರೆಂದು ನಂಬಿ ಜೀವನ ಪರ್ಯಂತ ನಂಬಿಕೊಂಡೇ ನಡೆದರು.[೨೨] ಹೀಗೆ ಹಸಿವೆಂಬುದು ಅನ್ನದ ಮಹತ್ತ್ವವನ್ನು ಮನವರಿಕೆ ಮಾಡಿ ಕೊಡುತ್ತದೆ.

೨.೨ ಹಸಿವಿನ ಅರ್ಥ ಮತ್ತು ವಿಧಗಳು

ಅನ್ನ ಎಂಬುದು ಮನುಷ್ಯನ ಮೂಲಭೂತ ಅವಶ್ಯಕತೆಗಳಲ್ಲಿ ಮೊದಲನೆಯದು.

ಹಸಿವು ಎಂದರೆ ಒಡಲಿನ ಕೂಗು, ಒಡಲಿನ ಕರೆ, ಒಡಲಿನ ನೋವು. ಹಸಿವು ಎಂಬ ಪದಕ್ಕೆ ಪರ್ಯಾಯವಾಗಿ ಬಳಸುವ ಪದಗಳು. ಹಸಿವು ಎಂದರೆ ಆಹಾರ ಬಯಸುವ ಸ್ಥಿತಿ, ಆತುರ, ಹಂಬಲ, ಬಯಕೆ. ಒಡಲ ಹಸಿವಿನಿಂದ ಬಳಲುವವನಿಗೆ ಜಗತ್ತೇ ಕ್ಷುಲ್ಲಕವೆಂಬಂತೆ ಕಾಣಿಸುತ್ತದೆ. ದೊಡ್ಡ ಕರುಳಿನಿಂದ ಹೊರಟು ಧಮನಿ ಧಮನಿಗಳಲ್ಲಿ ಹರಿದಾಡುವ ಹಸಿವಿನ ನರಳಾಡುವಿಕೆ ಮನುಷ್ಯನ ಒಳಗನ್ನು ಇಂಚಿಂಚಾಗಿ ಶುದ್ಧೀಕರಿಸುತದೆ.

'ಹಸಿವು' ಎಂಬ ಪದಕ್ಕಿರುವ ಪಡೆನುಡಿಗಳನ್ನು ರೆ. ಫಾ. ಪ್ರಶಾಂತ್ ಮಾಡ್ತಾರವರು ತಮ್ಮ 'ಪದನಿಧಿ' ಎಂಬ ನಿಘಂಟಿನಲ್ಲಿ ತಿಳಿಸಿದ್ದಾರೆ.

೧. ಹೊಟ್ಟೆಯಲ್ಲಿ ಕರಕರವೆನ್ನು, ೨. ಹೊಟ್ಟೆಯಲ್ಲಿ ಕಾಗೆ ಕೂಗುತ್ತಿರು, ೩. ಹೊಟ್ಟೆ ಕುಟುಕುಟುವೆನ್ನು, ೪. ಹೊಟ್ಟೆ ಚುರುಗುಟ್ಟುತ್ತಿರು, ೫. ಹೊಟ್ಟೆ ತಾಳ ಹಾಕು, ೬. ಹೊಟ್ಟೆಯ ಮೇಲೆ ಒದ್ದೆ ಬಟ್ಟೆ ಹಾಕಿಕೋ, ೭. ಹೊಟ್ಟೆಗೆ ಬೆಂಕಿ ಬೀಳು, ೮. ಹೊಟ್ಟೆಗೆ ಬೆನ್ನು ಹತ್ತಿರು, ೯. ಹೊಟ್ಟೆ ಮಾತನಾಡುತ್ತಿರು, ೧೦. ಹೊಟ್ಟೆಯಲ್ಲಿ ರಣರಣವೆನ್ನು.

೧೧. ಹೊಟ್ಟೆಯಲ್ಲಿ ತಾಳಮದ್ದಲೆ ನಡೆಯುತ್ತಿರು, ೧೨. ಹೊಟ್ಟೆಯಲ್ಲಿ ತೋಳ ಕೂತಿರು, ೧೩. ಹೊಟ್ಟೆಯಲ್ಲಿ ಹೇನು ಕುಕ್ಕು, ೧೪. ಹೊಟ್ಟೆಯಲ್ಲಿ ಡೊಂಬರಾಟವಾಗು, ೧೫. ಹೊಟ್ಟೆಯಲ್ಲಿ ದೋಸೆ ಹುಯ್ಯು, ೧೬. ಹೊಟ್ಟೆಯಲ್ಲಿ ಬರಮಾರಿ ಸೇರಿಕೊಂಡಿರು, ೧೭. ಹೊಟ್ಟೆ ಹಪಹಪಗುಡು, ೧೮. ಹೊಟ್ಟೆಯಲ್ಲಿ ಹುಳ ಸಾಯುತ್ತಿರು, ೧೯. ಹೊಟ್ಟೆಯಲ್ಲಿ ಭೂತ ಕೂತಿರು.[೨೩]

'ಹಸಿವು' ಎಂದರೆ ಬಯಸುವ ಸ್ಥಿತಿ, ಆತುರ, ಅಪೇಕ್ಷೆ, ಹಂಬಲ, ತೀವ್ರತೆ. ಹಸಿವಿನಲ್ಲಿ ಹಲವಾರು ವಿಧಗಳಿವೆ. ಒಡಲ ಹಸಿವು (ಅನ್ನ, ಆಹಾರ) ಜ್ಞಾನದ ಹಸಿವು, ಸಂಪತ್ತಿನ ಹಸಿವು, ಅಧಿಕಾರದ ಹಸಿವು, ಸಾಹಸದ ಹಸಿವು, ಸಂಚಾರದ ಹಸಿವು, ಉತ್ಪಾದನೆಯ ಹಸಿವು, ಪ್ರಶಸ್ತಿಯ ಹಸಿವು, ಕೀರ್ತಿಯ ಹಸಿವು, ಸಂಗೀತದ ಹಸಿವು, ದೇಹದ ಹಸಿವು (ಲೈಂಗಿಕ ಕಾಮನೆ), ಸಂಗ್ರಹದ ಹಸಿವು, ಕೃಷಿಯ ಹಸಿವು, ಸಾಕಣಿಕೆಯ ಹಸಿವು, ವಾಹನದ ಹಸಿವು, ಹಣದ ಹಸಿವು, ವಸ್ತ್ರದ ಹಸಿವು, ವಸತಿಯ ಹಸಿವು, ಮುಂತಾದವು.

ಈ ಮೇಲ್ಕಂಡ ಹಸಿವಿಗಿಂತಲೂ ತೀವ್ರವಾದುದು, ಮಹತ್ವದ್ದು, 'ಒಡಲ ಹಸಿವು' (ಅನ್ನದ ಬಯಕೆ, ಆಹಾರದ ಹಂಬಲ). ಅದಕ್ಕೆಂದೇ ಕನ್ನಡದ ಆದ್ಯ ವಚನಕಾರ ಜೇಡರ ದಾಸಿಮಯ್ಯ

ಒಡಲುಗೊಂಡವ ಹಸಿವ
ಒಡಲುಗೊಂಡವ ಹುಸಿವ
ಒಡಲುಗೊಂಡವನೆಂದು ನೀನೆನ್ನ
ಜಡಿದೊಮ್ಮೆ ನುಡಿಯದಿರಾ।
ನೀನು ಎನ್ನಂತೊಮ್ಮೆ
ಒಡಲುಗೊಂಡು ನೋಡು

ಎಂದು ರಾಮನಾಥನಿಗೆ ಸವಾಲು ಹಾಕುತ್ತಾನೆ. ಒಡಲನ್ನುಳ್ಳವರು (ದೇಹ, ಹೊಟ್ಟೆ) ಹಸಿಯುವುದು, ಹುಸಿಯುವುದು ಸಹಜ. ಒಡಲುಳ್ಳವನೆಂದು ನನ್ನನ್ನು ನಿಂದಿಸಿ ದಂಡಿಸಬೇಡಿ. ಒಡಲುಳ್ಳವರ ಸಮಸ್ಯೆಯನ್ನರಿಯಬೇಕಾದರೆ ನೀನು ನನ್ನಂತೆ ಒಮ್ಮೆಯಾದರೂ ದೇಹವನ್ನು ಹೊತ್ತು ನೋಡು ಎಂದಿದ್ದಾನೆ ಜೇಡರ ದಾಸಿಮಯ್ಯ.[೨೪]

ನೊಂದವರ ನೋವು ನೊಂದವರಿಗೆ ಮಾತ್ರ ಗೊತ್ತು. ಅದಕ್ಕೆಂದೇ ನೋವನ್ನು ಅರಿತವರ ಬರಹ ನೊಂದವರಿಗೆ ಸಾಂತ್ವನವನ್ನು ನೀಡಬಲ್ಲದು.

ನಾವು ಮುಖ್ಯವಾಗಿ ಮನಗಾಣಬೇಕು: ಬರಹ ಎಂಬುದು ಬದುಕಿನ ಬಣ್ಣದ ಬಟ್ಟೆಯಾಗಬಾರದು; ಬದುಕಿನ ಚರ್ಮವಾಗಬೇಕು. ಬಟ್ಟೆ ಆಕರ್ಷಣೆಯವಾಗಿದ್ದರೂ ಬಣ್ಣ ಬಿಟ್ಟುಕೊಳ್ಳುವ ಸಂದರ್ಭಗಳೂ ಇರುತ್ತವೆ. ಮತ್ತೆ ಮತ್ತೆ ಬದಲಾಯಿಸುವ ತುರಿಕೆಯೂ ಇರುತ್ತದೆ. ಬಟ್ಟೆಯಾಗುವ ಸಾಹಿತ್ಯ ಬದುಕಿನ ಭಾಗವಾಗುವುದಿಲ್ಲ, ಬದುಕಿನ ಹೊದಿಕೆಯಾಗುತ್ತದೆ. ಸಾಹಿತ್ಯ ಬದುಕಿನ ಚರ್ಮವಾದಾಗ ಅವಿನಾಭಾವ ಸಂಬಂಧ ಸಾಧ್ಯವಾಗುವುದಷ್ಟೇ ಅಲ್ಲ, ನಮ್ಮ ಸಂದರ್ಭದಲ್ಲಿ ಚರ್ಮಕ್ಕೆ ಒಂದು ಸಾಮಾಜಿಕ ಚರಿತ್ರೆಯಿರುವುದರಿಂದ ಅದು ಸಾಹಿತ್ಯಕ್ಕೂ

ಅನ್ವಯಿಸುತ್ತದೆ. ಚರ್ಮ ಕಪ್ಪಾಗಿರಬಹುದು, ಕೆಂಪಾಗಿರಬಹುದು, ಎಣ್ಣೆಗೆಂಪಾಗಿರಬಹುದು. ಕಪ್ಪು ಚರ್ಮಕ್ಕೆ ಕರಾಳ ಚರಿತ್ರೆಯನ್ನು ಕೊಟ್ಟ ಸಮಾಜ ನಮ್ಮದು. 'ಕಪ್ಪಿಟ್ಟ ಮುಖ' ವೆಂಬ ಕಲ್ಪನೆ ಈ ಕರಾಳ ಚರಿತ್ರೆಯ ಕೊಡುಗೆಯೇ ಆಗಿದೆ. ಇದಕ್ಕಿಂತ ಮುಖ್ಯವಾಗಿ ನಮ್ಮ ಸಾಮಾಜಿಕ ಸಂದರ್ಭದಲ್ಲಿ ಚರ್ಮಕ್ಕೆ ಸ್ಪರ್ಶದ ಸಮಸ್ಯೆಯೂ ಇದೆ. ಈ ಸಮಾಜದಲ್ಲಿ ಅನೇಕರ ಚರ್ಮವನ್ನು ಮುಟ್ಟಬಾರದೆನ್ನುವ 'ಮೌಲ್ಯ'ಗಳು ಮನುಷ್ಯನೊಳಗೆ ಮನೆಮಾಡಿವೆ. ಅಸ್ಪೃಶ್ಯರ ಚರ್ಮವನ್ನಷ್ಟೇ ಅಲ್ಲ, ಬಹುಸಂಖ್ಯಾತ ಶ್ರಮಜೀವಿಗಳ ಚರ್ಮವನ್ನು ಮುಟ್ಟದೆ ಮೂಗು ಮುಚ್ಚಿಕೊಂಡು ಮಾರುದ್ದ ಹಾರುವ ಮನುಷ್ಯರು ನಮ್ಮಲ್ಲಿದ್ದಾರೆ. ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಬಲಾಢ್ಯರಾದ ಇವರು ಮೇಲ್ವರ್ಗ ಮತ್ತು ಮೇಲ್ವರ್ಗವಾಗಿ ದೂರವೇ ಉಳಿಯುತ್ತಾರೆ. ಇತರರ ಚರ್ಮವನ್ನು ಮುಟ್ಟದೆ ತಮ್ಮ ಚರ್ಮವನ್ನು ಮುಟ್ಟಿಸಿಕೊಳ್ಳದೆ ಇರುವ ಇಂಥವರು ಸಾಮಾಜಿಕ, ಆರ್ಥಿಕ ಅಂತರವನ್ನು ಕಾಯ್ದುಕೊಳ್ಳುತ್ತಾ ತಾವು ಮಾತ್ರ ಶ್ರೇಷ್ಠರೆಂಬ ಆತ್ಮರತಿಯಲ್ಲಿ ಇರಬಯಸುತ್ತಾರೆ.[೨೫]

ಹಸಿವು ಮತ್ತು ಬಡತನ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಹಸಿವಿಗೆ ಕಾರಣವೇ ಬಡತನ. ಹಸಿವು ಮತ್ತು ಬಡತನದ ಬಗ್ಗೆ ಕವಿಗಳು, ಕಾದಂಬರಿಕಾರರು ತಮ್ಮದೇ ಆದಂತಹ ವ್ಯಾಖ್ಯಾನಗಳನ್ನು ನೀಡಿದ್ದಾರೆ.

ಚನ್ನಣ್ಣ ವಾಲೀಕರರು ತಮ್ಮ 'ಬಡತನದ ಬಡಬಾಗ್ನಿ' ಎಂಬ ಕವಿತೆಯಲ್ಲಿ ಹೀನತನ ಬಡತನವು ಇದ್ದಾಗ ಹುಲುಶಕ್ತಿ; ಹೇಗೆ ಬರುವುದು ಪುಟಿದು ಜೀವಗಾನ?

'ಬಡತನದ ಬವಣೆಯಲಿ ಪ್ರೇಮಕರ್ಥವೇ ಇಲ್ಲ
ಹೊಟ್ಟೆಗಿಲ್ಲದೆ ಹಿಟ್ಟು ರಟ್ಟೇಗೆಂತೈ ಬಲವು' ಎಂದು ಹೇಳಿದ್ದಾರೆ.[೨೬]

ಬಡತನವನ್ನು 'ಬಡಬಾಗ್ನಿ' ಎಂದು ಕರೆದಿರುವ ಚನ್ನಣ್ಣ ವಾಲೀಕರರು ಹಾಗೆಯೇ ಮನುಷ್ಯನ ಹೀನತನವೂ ಬಡತನ ಎಂದಿದ್ದಾರೆ. ಬಡತನವೆಂಬ ಹುಲುಶಕ್ತಿಯನ್ನಿಟ್ಟುಕೊಂಡು ಜೀವಗಾನ ಪುಟಿದು ಬರಲು ಸಾಧ್ಯವಿಲ್ಲ ಎಂಬುದು ಅವರ ಅಭಿಪ್ರಾಯ. ಬಡತನದ ಕಷ್ಟದಲ್ಲಿ ಮುಳುಗಿದವರ ಪ್ರೀತಿ ಪ್ರೇಮಕ್ಕೆ ಯಾವುದೇ ಅರ್ಥವೂ ಇಲ್ಲ. ಹೊಟ್ಟೆಗೆ ಅನ್ನವಿಲ್ಲದೆ ತೋಳಲ್ಲಿ ಬಲವನ್ನು ಪಡೆಯುವುದಾದರೂ ಹೇಗೆ ಎಂಬುದು ಕವಿಯ ಪ್ರಶ್ನೆ ಮತ್ತು ವ್ಯಾಖ್ಯಾನವಾಗಿದೆ.

ಯಾವ ಕಾಲಕ್ಕೂ ಜಗವು ಉಳ್ಳವಗೆ ಬಾಗಿದ್ದು
ಅವರು ಮಾಡಿದುವೆಲ್ಲಾ ಚೆಲುವು
ಅದಕಾಗಿ ಹೇಳುವುದು ಹಣವ ಗಳಿಸೋಣವೆಂದು,

ಇಲ್ಲದಿರೆ ನಮ್ಮದೆಲ್ಲ ಹೆಣವು – ಎಂಬ ಸಾಲುಗಳಲ್ಲಿ ಈ ಸಮಾಜ ಅಸಮಾನತೆಯಿಂದ ಕೂಡಿದ್ದಾಗಿದೆ. ಅವರು ಏನು ಮಾಡಿದರೂ ಸೊಗಸು. ಅಂತೆಯೇ ಬಡವರು ಕೂಡಾ ಈ ಅಸಮಾನತೆಯ ಸಮಾಜದಲ್ಲಿ ಮನ್ನಣೆ ಪಡೆಯಬೇಕೆಂದರೆ ಹಣ ಸಂಪಾದನೆ ಮಾಡುವುದೊಂದೇ ಮಾರ್ಗ, ಇಲ್ಲದಿದ್ದರೆ, ಅಂದರೆ ಹಣವಿಲ್ಲದಿದ್ದರೆ (ಬಡವರು) ಹೆಣಗಳಿದ್ದ ಹಾಗೆ, ಯಾವ ಬೆಲೆಯೂ ಇಲ್ಲ.

ಮುದ್ದಾನಕೂಡು ಚಿನ್ನಸ್ವಾಮಿಯವರು ತಮ್ಮ 'ಬೆಳಕಿನ ಕೂಲಿ' ಕವಿತೆಯಲ್ಲಿ ಬಡವರ ದೈಹಿಕ ಶ್ರಮಕ್ಕಿಂತ ಬೌದ್ಧಿಕ ವೃತ್ತಿ ಶ್ರೇಷ್ಠ ಎನ್ನುವ ಗ್ರಹಿಕೆ ಸಮಾಜದಲ್ಲಿ ಹುದುಗಿದೆ. ಬಡವರ ಶ್ರಮದ (ಬೆವರಿನ) ದುಡಿಮೆಯಲ್ಲೂ ಬೆಳಕನ್ನು ಕಾಣಲು ಸಾಧ್ಯವಿದೆ ಎಂಬುದು ಅವರ ವ್ಯಾಖ್ಯಾನವಾಗಿದೆ.[೨೭]

ಡಿವಿಜಿಯವರು 'ಮಂಕುತಿಮ್ಮನ ಕಗ್ಗ'ದಲ್ಲಿ 'ಅನ್ನದಾತುರಕ್ಕಿಂತ ಚಿನ್ನದಾತುರ ತೀಕ್ಷ್ಣ'ವಾಗಿದೆ ಎಂದಿದ್ದಾರೆ. ಮನುಷ್ಯ ಅನ್ನಕ್ಕಿಂತ ಚಿನ್ನಕ್ಕೆ ಮಹತ್ವ ನೀಡುತ್ತಿದ್ದಾನೆ. ಮನುಷ್ಯನ ಹಸಿವನ್ನು ನೀಗಿಸುವುದು ಅನ್ನವೇ ಹೊರತು ಚಿನ್ನವಲ್ಲ. ಅನ್ನಕ್ಕೆ ಜೀವ ಚೈತನ್ಯ ತುಂಬುವ ಶಕ್ತಿ ಇದೆ, ಆದರೆ ಚಿನ್ನಕ್ಕೆ ಅನ್ನಕ್ಕೆ ಇಲ್ಲಿ ಅಂತರ ತುಂಬಾ ಇದೆ ಎಂಬುದು ಕವಿಯ ಅಳಲಾಗಿದೆ. ಅನ್ನವೇ ಪ್ರಾಶಸ್ತ್ಯ ಪಡೆಯಬೇಕು. ಅನ್ನದ ಶ್ರೇಷ್ಠತೆಯನ್ನು, ಜ್ಯೇಷ್ಠತೆಯನ್ನು ಹಸಿದವರು ಮಾತ್ರ ಬಲ್ಲರೆಂಬುದು ಕವಿಯ ತಿಳುವಳಿಕೆಯಾಗಿದೆ.[೨೮]

ಮನುಷ್ಯನ ದೌರ್ಬಲ್ಯಗಳಾದ ಅತಿಯಾಸೆ, ಅಸಹಕಾರ, ಜಡತ್ವ, ಪರಾವಲಂಬನೆ, ಸೋಗಲಾಡಿತನ, ಚಪಲತೆ ಇವುಗಳನ್ನು ಮೀರಿ ನಿಂತಾಗ ಬದುಕು ಸಾರ್ಥಕವಾಗುತ್ತದೆಂದು ಹೇಳುವ ಕವಿ ಎಸ್. ವಿ ಪರಮೇಶ್ವರ ಭಟ್ಟರು ತಮ್ಮ 'ಬಾಳೊಂದು ವಿಜಯದ ಬೀಡು' ಕವಿತೆಯಲ್ಲಿ ಸಮಾಜದ ಬಡತನಕ್ಕೆ ಕಾರಣ ಶ್ರೀಮಂತರು ಹಣ ಮತ್ತು ಧಾನ್ಯಗಳ ಸಂಗ್ರಹಣೆ ಮಾಡುವುದು. ಆದ್ದರಿಂದ "ಕೂಡಿಡಬಾರದು, ಕೊಡಬೇಕು ಹಣವನು, ಕೊಟ್ಟು ತಾನುಣಬೇಕು ನರನು" ಎಂದು ಹೇಳಿ ಮರಣಕ್ಕೆ ಸಮನಾದ ಭಯವಿಲ್ಲ, ಬಡತನಕೆಣೆಯಾದ ಪರಾಭವವಿಲ್ಲ, ಹಸಿವಿಗೆ ಸಮನಾದ ನೋವಿಲ್ಲ, ಅಜ್ಞಾನಕ್ಕೆಣೆಯಾದ ಭೇದವಿಲ್ಲ, ಮರಣಕ್ಕಿಂತ ಭಯವನ್ನು ಹುಟ್ಟಿಸುವುದು, ಬಡತನಕ್ಕಿಂತ ಅಪಮಾನಕಾರಿಯದುದು, ಹಸಿವಿನ ನೋವಿಗಿಂತ ಮಿಗಿಲಾದದ್ದು, ಅಜ್ಞಾನಕ್ಕಿಂತ ದೊಡ್ಡ ವ್ಯತ್ಯಾಸವೆಂಬುದು ಈ ಜಗತ್ತಿನಲ್ಲಿ ಯಾವುದೂ ಇಲ್ಲ ಎಂಬುದು ಕವಿಯ ಅನಿಸಿಕೆಯಾಗಿದೆ. ಮರಣ ಭಯುವನ್ನುಂಟು ಮಾಡುತ್ತದೆ. ಬಡತನ ಅಪಮಾನಕ್ಕೀಡು ಮಾಡುತ್ತದೆ, ಹಸಿವು ಸಹಿಸಲಸಾಧ್ಯವಾದ ವೇದನೆಯನ್ನು ತಂದೊಡ್ಡುತ್ತದೆ, ಅಜ್ಞಾನದ ಅಂತರವನ್ನು ಹೆಚ್ಚು ಮಾಡಿ ಸಮಾಜದಿಂದಲೇ ದೂರ ಮಾಡುತ್ತದೆ.[೨೯]

ಹಸಿವು ಮತ್ತು ಬಡತನವು ಅಂತರರಾಷ್ಟ್ರೀಯ ಮಟ್ಟದ ಸಮಸ್ಯೆಯಾದರೂ ಅದರ ಕಾರಣ, ರೂಪ, ಸ್ವರೂಪಗಳು ಒಂದೇ ಬಗೆಯಾಗಿಲ್ಲ. ಎಲ್ಲಾ ಸಂಸ್ಕೃತಿಗಳಿಗೆ, ದೇಶಗಳಿಗೆ ಮತ್ತು ಕಾಲಮಾನಕ್ಕೆ ಸರಿಯಾಗಿ ಅನ್ವಯಿಸಬಹುದಾದ ಸಾರ್ವತ್ರಿಕ ವ್ಯಾಖ್ಯೆ ಹಸಿವು ಮತ್ತು ಬಡತನದ ವಿಷಯದಲ್ಲಿ ಕಷ್ಟಸಾಧ್ಯ. ಆದುದರಿಂದ ಹಸಿವು ಮತ್ತು ಬಡತನ ಒಂದು ಸಾಪೇಕ್ಷ ಕಲ್ಪನೆಯೇ ಹೊರತು ಸಮಗ್ರ ಕಲ್ಪನೆಯಲ್ಲ. ಈ ಗ್ರಹಿಕೆಯ ನೆಲೆಯಿಂದ ಹಸಿವು ಮತ್ತು ಬಡತನದ ಪರಿಕಲ್ಪನೆಯನ್ನು ಒಂದು ಸಾಂಸ್ಕೃತಿಕ ಚೌಕಟ್ಟಿನಲ್ಲಿ ಮತ್ತು ಅಲ್ಲಿಯ ಸಂಪನ್ಮೂಲಗಳ ದೊರೆಯುವಿಕೆ ಮತ್ತದರ ಬಳಕೆಯ ಆಧಾರದ ಮೇಲೆ ಅರ್ಥೈಸುವುದು ಸರಿಯಾಗುತ್ತದೆ. ಈ ನೆಲೆಯಲ್ಲಿ ಕನ್ನಡದ ಪ್ರಾತಿನಿಧಿಕ ಸಣ್ಣ ಕಥೆಗಳನ್ನು ಅಧ್ಯಯನ ಮಾಡಿ ಅಲ್ಲಿ ಕಂಡು ಬರುವ ಹಸಿವು ಮತ್ತು ಬಡತನಗಳ ಕಥೆಗಳ ಪರಿಶೀಲನೆಯನ್ನು ಮಾಡಲಾಗಿದೆ.

"ಬಡತನ ಎಂಬುದು ಮಾನವ ಅಸ್ತಿತ್ವದ ಜೊತೆಜೊತೆಗೆ ಇರುವ ವಿಶ್ವವ್ಯಾಪಿ ಸಮಸ್ಯೆ. ವೈಯಕ್ತಿಕ, ಸಾಮಾಜಿಕ ಮತ್ತು ಆಡಳಿತದ ಕಾರಣಗಳಿಂದ ಆರ್ಥಿಕ ಸ್ಥಿತಿ ಹದಗೆಡುವುದು

ಬಡತನಕ್ಕೆ ಮೂಲ. ಮನುಷ್ಯನ ಮೂಲಭೂತ ಅಗತ್ಯಗಳನ್ನು ಪೂರೈಸಿಕೊಳ್ಳಲಾಗದ ಅನಿವಾರ್ಯ ಸ್ಥಿತಿಯೇ ಬಡತನ. ಮನುಷ್ಯ ಬದುಕಲು ಬೇಕಾದ ಅಗತ್ಯಗಳನ್ನು, ಎಂದರೆ ಅನ್ನ, ಬಟ್ಟೆ, ಆಸರೆ, ಇವು ಕಾಲ, ದೇಶ ಪರಿಸರಕ್ಕೆ ಬದಲಾಗುತ್ತಾ ಹೋಗುವುದರಿಂದ ಬಡತನದ ಅಧ್ಯಯನ ಮೇಲುನೋಟಕ್ಕೆ ಸರಳವೆಂಬಂತೆ ಕಂಡರೂ ಸಂಕೀರ್ಣ ಸಮಸ್ಯೆಯಾಗಿದೆ".[೩೦]

'ಹಸಿವು, ಬಡತನ ಮನುಷ್ಯನ ಬದುಕಿಗೆ ಅನ್ವಯವಾಗುವ ಒಂದು ಸ್ಥಿತಿ. ಅದು ಸಾಮಾಜಿಕ ಸವಲತ್ತುಗಳಿಂದ ವಂಚಿತರಾದ ಜನರ ರಿಕ್ತ ಸ್ಥಿತಿ. ಅಧ್ಯಯನದ ಉದ್ದೇಶದಿಂದ ಇದು ಒಂದು ಪರಿಕಲ್ಪನೆಯಾಗಿ ಬಳಕೆಗೊಂಡಿದೆ. 'ಬಡ' ಎಂಬುದು ಸೊರಗಿದ, ಧನವಿಲ್ಲದ, ನಿರಾಶ್ರಿತ ಎಂಬರ್ಥ ಹೊರಡಿಸುತ್ತದೆ. ಆರ್ಥಿಕ ಶೋಷಣೆ, ನಿರುದ್ಯೋಗ, ಅನಕ್ಷರತೆ, ಭ್ರಷ್ಟಾಚಾರ, ಬೆಲೆಯೇರಿಕೆ, ಮುಂತಾದವು ಹಸಿವು ಮತ್ತು ಬಡತನದ ಸಮಸ್ಯೆಯನ್ನು ಮತ್ತಷ್ಟು ಗಂಭೀರಗೊಳಿಸಿವೆ' ಎಂಬ ವೆಂಕಟೇಶ್‌ರವರ ಮಾತು ನಿಜವಾಗಿದೆ.[೩೧]

'ಬಡತನ ಆರ್ಥಿಕ ಸಂಕಷ್ಟದ ಜೊತೆಗೆ ಮಾನಸಿಕ ಕಿರಿಕಿರಿಯನ್ನು ತರುತ್ತದೆ. ಹಾಗೆಯೇ ಬಡತನ ಮತ್ತು ಅವಲಂಬನೆ ಒಂದೇ ಅಲ್ಲ ಎಂಬುದನ್ನು ಸ್ಪಷ್ಟಪಡಿಸುವುದು ಕೂಡಾ ಮುಖ್ಯ. ಕುಟುಂಬದ ಸದಸ್ಯರು ತಂದೆ ತಾಯಿಯನ್ನು ಅವಲಂಬಿಸಿರುವುದು, ತಂದೆ ತಾಯಿ ಇರದ ಅವಿವಾಹಿತ ಸಹೋದರಿಯರು ಸೋದರರನ್ನು ಅವಲಂಬಿಸಿರುವುದು ಬಡತನವಲ್ಲ, ಅವಲಂಬನೆ ಮಾತ್ರ, ಆದರೆ ಜೀವನದಲ್ಲಿ ಯಾವ ಆಧಾರವೂ ಇರದೆ ಅನಿವಾರ್ಯವಾಗಿ ಇತರರ ನೆರವನ್ನೇ ನೆಚ್ಚಿಕೊಂಡು ಬದುಕುವ ಭಿಕ್ಷುಕರು, ವಿಧವೆಯರು, ವೃದ್ಧರು, ಅನಾಥ ಮಕ್ಕಳು ಬಡವರಾಗುತ್ತಾರೆ ಎಂಬಲ್ಲಿ ಸಂಶಯವಿರಬಾರದು' ಎಂಬ ಎಚ್. ಕೆ. ವೆಂಕಟೇಶ್‌ರವರ ಮಾತು ಉಲ್ಲೇಖಾರ್ಹ.[೩೨]

'ವ್ಯಕ್ತಿಯೋರ್ವರು ತನ್ನ ಜೀವನದಲ್ಲಿ ಪಡೆದು ಅನುಭವಿಸುತ್ತಿರುವ ವಸ್ತುಗಳು, ಸೌಲಭ್ಯಗಳು ಹಾಗೂ ಮನೋರಂಜನೆಗೆ ಸಂಬಂಧಿಸಿದ ಸಾಧನಗಳ ಆಧಾರದ ಮೇಲೆ ಆತನು ಶ್ರೀಮಂತನೇ ಅಥವಾ ಬಡವನೇ ಎಂಬುದನ್ನು ನಿರ್ಧರಿಸಬಹುದು' ಎಂದು ಆಡಮ್ ಸ್ಮಿತ್ ಹೇಳಿದ್ದಾರೆ.[೩೩]

'ಅತ್ಯಲ್ಪ ವರಮಾನದಿಂದ ಅಥವಾ ವಿವೇಚನಾರಹಿತವಾದ ವೆಚ್ಚದಿಂದ ವ್ಯಕ್ತಿ ತಾನು ಸದಸ್ಯನಾಗಿರುವ ಸಮಾಜದಲ್ಲಿ ತನ್ನ ಮತ್ತು ತನ್ನನ್ನು ಅವಲಂಬಿಸಿದವರ ಶಾರೀರಿಕ ಹಾಗೂ ಮಾನಸಿಕ ಸಾಮರ್ಥ್ಯವನ್ನು ಕಾಪಾಡಿಕೊಳ್ಳಲು ಸಾಧ್ಯವಾಗದ ಜೀವನ ಮಟ್ಟವನ್ನು ಬಡತನ ಎನ್ನಬಹುದು' – ಶಿಲಿನ್ ಮತ್ತು ಶಿಲಿನ್.[೩೪]

'ಗ್ರಾಮೀಣ ಪ್ರದೇಶಗಳಲ್ಲಿ ಪ್ರತಿದಿನ ೨೪೦೦ ಕ್ಯಾಲರಿ ಮತ್ತು ನಗರ ಪ್ರದೇಶಗಳಲ್ಲಿ ೨೧೦೦ ಕ್ಯಾಲರಿ ಆಹಾರಕ್ಕಿಂತ ಕಡಿಮೆ ಆಹಾರ ಸೇವಿಸುವವರು ಬಡವರು'.[೩೫]

ಹಸಿವಿನ ಸಮಸ್ಯೆಗೆ ಕಾರಣವಾಗುವ ಬಡತನದ ವಿಧಗಳು

ಬಡತನವನ್ನು ಅದರ ವಿವಿಧ ರೂಪಗಳಿಗೆ ಅನುಸಾರವಾಗಿ ವಿಂಗಡಿಸಬಹುದು.

೧. **ಪುನರಾವರ್ತಿತ ಬಡತನ:** ತಾತ್ಕಾಲಿಕ ಆಹಾರದ ಕೊರತೆ, ನೈಸರ್ಗಿಕ ವಿಕೋಪಗಳು, ಕೆಳಮಟ್ಟದ ವ್ಯವಸಾಯ ಯೋಜನೆ, ಈ ಕಾರಣಗಳಿಂದ ಪುನರಾವರ್ತಿತ ಬಡತನ ಎಲ್ಲಾ ವರ್ಗಗಳ ಜನರಲ್ಲಿ ನಿರ್ದಿಷ್ಟ ಸಮಯದಲ್ಲಿ ಕಂಡು ಬರುತ್ತದೆ. ವಿಶ್ವ ಆರ್ಥಿಕ ಮುಗ್ಗಟ್ಟು ಇದಕ್ಕೆ ಉತ್ತಮ ನಿದರ್ಶನ. ಮೊದಲ ಮಹಾಯುದ್ಧದ ನಂತರದ ತೆರಿಗೆ ನೀತಿ, ಜರ್ಮನಿಯ ವಿರುದ್ಧದ ಕ್ರಮ, ಅಮೆರಿಕಾದ ಮಿತ್ರ ದೇಶಗಳ ಸಾಲದ ಹೊರೆ, ಈ ಕಾರಣಗಳಿಂದ ಸೀಮಿತ ಆದಾಯ ಗಳಿಸುತ್ತಿದ್ದ ಸಾಮಾನ್ಯ ಕಾರ್ಮಿಕ ವರ್ಗದ ಮೇಲೆ ದುಷ್ಪರಿಣಾಮ ಉಂಟು ಮಾಡಿತು.

೨. **ಸಾಮಾನ್ಯ ಬಡತನ:** ಇದು ಪುನರಾವರ್ತಿತ ಬಡತನದ ವಿರುದ್ಧ ಸ್ಥಿತಿ. ಜನರು ಶಾಶ್ವತವಾಗಿ ತಮ್ಮ ಮೂಲಭೂತ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲಾಗದ ಸ್ಥಿತಿಯೇ ಸಾಮಾನ್ಯ ಬಡತನ. ಅನುವಂಶಿಕವಾಗಿ ಮುಂದುವರಿದಿರುವ ದುಷ್ಟತನ ಈ ಬಗೆಯ ಬಡತನದ್ದು. ಏಷ್ಯಾದ ದೇಶಗಳು, ಆಫ್ರಿಕಾದ ದೇಶಗಳು, ದಕ್ಷಿಣ ಮತ್ತು ಮಧ್ಯ ಅಮೆರಿಕಾದಲ್ಲಿ ತೀವ್ರ ಸ್ವರೂಪದ ಬಡತನ ಕಂಡು ಬರುತ್ತದೆ. ಕಡಿಮೆ ಜೀವಿತಾವಧಿ, ಅಧಿಕ ಸಂಖ್ಯೆಯಲ್ಲಿ ತಾಯಿ ಮತ್ತು ಮಕ್ಕಳ ಮರಣ, ಪೌಷ್ಟಿಕಾಂಶದ ಕೊರತೆ, ಆರೋಗ್ಯ ಹೀನತೆ ಇದರ ದುಷ್ಪರಿಣಾಮಗಳು. ಈ ರೀತಿಯ ಬಡತನ ದೇಶದ ಆರ್ಥಿಕತೆಯೊಡನೆ ನೇರ ಸಂಬಂಧ ಹೊಂದಿದ್ದು ದೇಶದ ಪ್ರಗತಿಯ ಮೇಲೆ ಮಹತ್ವದ ಪರಿಣಾಮ ಬೀರುತ್ತದೆ. ಮುಂದುವರಿದ ದೇಶಗಳ ಹಿಂದುಳಿದ ಪ್ರದೇಶಗಳಲ್ಲೂ ಈ ರೀತಿಯ ಬಡತನ ಕಾಣಿಸಿಕೊಳ್ಳುತ್ತದೆ. ಈ ಸ್ಥಳಗಳಲ್ಲಿ ಹಿಂದುಳಿದ ದೇಶಗಳ ಜನರ ಪರಿಸ್ಥಿತಿಗಿಂತ ಭಿನ್ನವಾದ ಬೆಳವಣಿಗೆಯೇನೂ ಕಂಡು ಬರುವುದಿಲ್ಲ. ಒಟ್ಟಾರೆ ಸಾಮಾನ್ಯ ಬಡತನ ಅತ್ಯಂತ ಕ್ರೂರವಾದುದು.

೩. **ಸಾಂದರ್ಭಿಕ ಬಡತನ:** ಈ ಸಾಂದರ್ಭಿಕ ಬಡತನ ವ್ಯಕ್ತಿಗತ ದೃಷ್ಟಿಕೋನಕ್ಕೆ ಹೆಚ್ಚು ಹತ್ತಿರವಾಗಿದೆ. ಕಡಿಮೆ ಗುಣಮಟ್ಟದ ವಿದ್ಯಾಭ್ಯಾಸ, ದೈಹಿಕ-ಮಾನಸಿಕ ದೌರ್ಬಲ್ಯ, ಕೆಳಮಟ್ಟದ ತಾಂತ್ರಿಕತೆ ಇವು ಈ ಬಗೆಯ ಬಡತನಕ್ಕೆ ಮೂಲ ಕಾರಣಗಳು. ಸಾಮಾಜಿಕ ಪರಿಸರದಲ್ಲಿ ತೀರಾ ಅಪಮಾನಕ್ಕೊಳಗಾಗಬೇಕಾದ ಪರಿಸ್ಥಿತಿ ಇಂಥವರಿಗೆ ಎದುರಾಗುತ್ತದೆ. ಹೀಗೆ ಬಡತನದ ಬಹುಮುಖ ವ್ಯಾಪ್ತಿ ಹಲವು ವಸ್ತು, ವಿಷಯಗಳನ್ನು ತನ್ನ ತೆಕ್ಕೆಗೆ ಒಳಗು ಮಾಡಿಕೊಳ್ಳುತ್ತದೆ.

ಹಸಿವಿನ ಸಮಸ್ಯೆಗೆ ಕಾರಣವಾದ ಬಡತನದ ಬಗೆಗಿನ ವಿವಿಧ ದೃಷ್ಟಿಕೋನಗಳು

ಸಾಂಪ್ರದಾಯಿಕ ದೃಷ್ಟಿಕೋನ: ಬಡತನ ಅಥವಾ ಸಿರಿತನಗಳು ದೈವ ನಿಯಮಗಳು. ಇವು ಪೂರ್ವ ಜನ್ಮದ ಪಾಪದ ಫಲಗಳೆಂದು ಕರ್ಮ ತತ್ವದ ನಂಬಿಕೆ. ಇದನ್ನೇ ಬಳಸಿಕೊಂಡು ಶ್ರೀಮಂತರು

ಬಡವರನ್ನು ನಿರಂತರವಾಗಿ ಶೋಷಣೆ ಮಾಡುತ್ತಿರುವುದು ಸಾಂಪ್ರದಾಯಿಕ ಸಮಾಜದಲ್ಲಿ ಅಸ್ತಿತ್ವದಲ್ಲಿದೆ.

ವೈಯಕ್ತಿಕ ದೃಷ್ಟಿಕೋನ: ಬಡತನ ಮೂಢತೆಯ ಫಲ, ಎಂದರೆ ಸೋಮಾರಿತನ, ನಿರಾಸಕ್ತಿ, ಅಶಿಸ್ತು, ಜೂಜು, ಕುಡಿತ ಮೊದಲಾದ ವ್ಯಕ್ತಿಗತ ದೌರ್ಬಲ್ಯಗಳಿಂದ ಬಡತನ ಎರಗಿ ಬಿಡಬಹುದು. ಇವು ವ್ಯಕ್ತಿತ್ವವನ್ನು ನಾಶ ಮಾಡುವುದರ ಜೊತೆಗೆ ವ್ಯಕ್ತಿಗಳು ಹಸಿವು ಮತ್ತು ಬಡತನದಿಂದ ನರಳುವಂತೆ ಮಾಡುತ್ತವೆ.

ಬಡತನವು ಸಾಮಾಜಿಕ ಭೂತ ಎಂಬ ದೃಷ್ಟಿಕೋನ: ವ್ಯಕ್ತಿಗಳು ದೈಹಿಕವಾಗಿ ಮತ್ತು ಮಾನಸಿಕವಾಗಿ ಸಮರ್ಥರಾಗಿದ್ದರೂ ವ್ಯವಸ್ಥೆಯ ಅಸಾಮರ್ಥ್ಯ ಅವರ ಹಸಿವು ಮತ್ತು ಬಡತನಕ್ಕೆ ಕಾರಣ. ಇದು ಬಡತನ ಸಾಮಾಜಿಕ ಭೂತ ಎನ್ನುವವರ ನಿಲುವು. ಸಾಮಾಜಿಕ ವ್ಯವಸ್ಥೆಯ ಅಸಮಂಜಸ, ತಾರ್ಕಿಕ ನೀತಿ–ನಿಯಮ–ನಂಬಿಕೆಗಳು ಬಡತನದ ನಿರ್ಮಾಣಕ್ಕೆ ಕಾರಣವೆಂಬುದು ಈ ದೃಷ್ಟಿಕೋನದವರ ತಿಳುವಳಿಕೆ.

೨.೩ ಪ್ರಾತಿನಿಧಿಕ ಕವಿಗಳ ಪ್ರಕಾರ ಹಸಿವು

ಮಾಸ್ತಿ ಪ್ರಕಾರ ಹಸಿವು

ಮಾಸ್ತಿ ಕನ್ನಡದ ಆಸ್ತಿ ಎಂಬುದು ನಿಜ. ಏಕೆಂದರೆ ಸಮಾಜದೊಡನೆ ಮಾಸ್ತಿ ಸ್ಪಂದಿಸುವ ರೀತಿ ನೀತಿಯುತವಾದುದು. ಬಾಲ್ಯದ ಬದುಕಿನಲ್ಲಿ ಕಷ್ಟ ಪರಂಪರೆ ಎದುರಿಸಿ ಬೆಳೆದು ಬಂದ ಮಾಸ್ತಿ, ಕಷ್ಟದಲ್ಲಿರುವವರಿಗೆ ಮುಕ್ತವಾಗಿ ಸಹಾಯಹಸ್ತ ಚಾಚಿದರು. "ಹೊಸ ನಾಗರಿಕತೆಯ ಧರ್ಮಬಾಹಿರ ಧನದಾಹವನ್ನು ಮಾಸ್ತಿಯವರು ಖಂಡಿಸುತ್ತಾರಾದರೂ ಒಟ್ಟಿನಲ್ಲಿ ಇವರ ಸಂಬಂಧ ಸಮಾಜದೊಡನೆ ಅನ್ಯೋನ್ಯವಾದುದು. ನಮ್ಮ ಧರ್ಮದ ಉತ್ತಮ ಮೌಲ್ಯಗಳನ್ನು ಹೃತ್ಪೂರ್ವಕವಾಗಿ ಸ್ವೀಕರಿಸಿ, ಸಹಿಷ್ಣುತೆಯನ್ನು ತಮ್ಮ ಅಂತರಾಳದ ಅವಿಭಾಜ್ಯಾಂಶವನ್ನಾಗಿ ಮಾಡಿಕೊಂಡು, ಈ ಪ್ರಪಂಚವೆಲ್ಲವೂ ಪರಮಾತ್ಮನ ಲೀಲೆ ಎಂಬ ಶ್ರದ್ಧೆಯ ಭದ್ರ ಬುನಾದಿಯ ಮೇಲೆ ಇವರು ತಮ್ಮ ಭಾವ–ವಿಚಾರಗಳ ಹಂದರವನ್ನು ಹಬ್ಬಿಸುತ್ತಾರೆ" ಎಂಬುದನ್ನು ಅಡಿಗರು ಗುರುತಿಸಿದ್ದಾರೆ.[೩೭]

ಮಾಸ್ತಿ ಬಾಲ್ಯದ ಉದ್ದಕ್ಕೂ ಬಡತನ ಕಂಡವರು. ಆದರೆ ತಮ್ಮ ಪ್ರತಿಭೆ, ಸಾಮರ್ಥ್ಯಗಳಿಂದ ಮುಂದೆ ಬಂದು ಆಡಳಿತದ ಉನ್ನತ ಸ್ಥಾನವನ್ನು ಪಡೆದು ದಕ್ಷ ಅಧಿಕಾರಿಯಾಗಿ ಹೆಸರು ಪಡೆದರು. ಅತ್ಯುನ್ನತ ಸ್ಥಾನದ ಗೌರವ ದೊರೆಯದಿದ್ದಾಗ ಸ್ವಯಂ ನಿವೃತ್ತಿ ಪಡೆದುಕೊಂಡು ನೈತಿಕ ಹಿರಿಮೆ ಮೆರೆದರು. ತಡವಾಗಿ ಪ್ರಶಸ್ತಿ ಬಂದಾಗಲೂ ಕೂಡಾ ಬೇಸರಿಸದೆ ಸಂತೋಷದಿಂದ ಸ್ವೀಕರಿಸಿದ ಮಾಸ್ತಿ ಸಹನೆಗೆ ಹೆಸರಾದವರು.

ಇವರು ಹಸಿವು ಮತ್ತು ಬಡತನದ ಕುರಿತು ಹಲವು ಕವನಗಳನ್ನು ಬರೆದಿದ್ದಾರೆ. ಇವೆಲ್ಲವನ್ನು ಬರೆಯಲು ಕಾರಣ ಅವರ ಬದುಕಿನ ಘಟನೆಗಳೇ ಆಗಿವೆ. ಬಡತನ ಎಂಬುದು ಮೇಲುಜಾತಿ, ಕೀಳುಜಾತಿ ಎನ್ನದೆ ಎಲ್ಲರನ್ನೂ ಆವರಿಸಿ ಬಿಡುವ ಒಂದು ಸಾಮಾಜಿಕ ಸಮಸ್ಯೆ.

ಹಿಂದುಳಿದ ಜಾತಿಗಳಲ್ಲಿರುವವರು ಮಾತ್ರ ಬಡವರಲ್ಲ. ಮುಂದುವರಿದ ಜಾತಿಗಳಲ್ಲೂ ಬಡವರಿರುತ್ತಾರೆ ಎಂಬ ಸತ್ಯವನ್ನು ಅರಿಯಬೇಕು. ಮಾಸ್ತಿಯವರೇ ಇದಕ್ಕೆ ಉತ್ತಮ ನಿದರ್ಶನ.

"ಮಾಸ್ತಿಯವರಿಗೆ ಏಳು ವರ್ಷಗಳಲ್ಲಿಯೇ ಬಡತನದ ದಾರುಣತೆ ಕಾಡಿತು. ಬಡತನವೊಂದೇ ಆಗಿದ್ದರೆ ಆ ಪರಿಸ್ಥಿತಿ ಬೇರೆಯಾಗಿರುತ್ತಿತ್ತೋ ಏನೋ? 'ಪರಿಯಾತ್' ಅನ್ನಿಸಿಕೊಂಡ ಕುಟುಂಬಕ್ಕೆ ಸೇರಿದವರೆಂಬ ಸಾಮಾಜಿಕ ಭಾವನೆ ಸೂಕ್ಷ್ಮ ಸಂವೇದಿಯಾದ ಮಾಸ್ತಿಯವರ ಎಳೆಯ ಮನಸ್ಸಿನ ಮೇಲೆ ಮೂಡಿಸಿದ ಭಾವನೆಗಳು ಒಂದರ್ಥದಲ್ಲಿ ಅವರನ್ನು ಬದುಕಿನುದ್ದಕ್ಕೂ ನಡೆಸಿಕೊಂಡು ಬಂದ ನೇರ ನಡೆಗೆ ಪ್ರೇರಕವಾದವು".[೩೮] ಎಂದು ಜಿ. ಎಸ್. ಸಿದ್ಧಲಿಂಗಯ್ಯ ಹೇಳಿದ್ದಾರೆ.

ಮಾಸ್ತಿಯವರ ಪೂರ್ವಿಕರು ಸುಲ್ತಾನರಲ್ಲಿ ದಿವಾನರಾಗಿದ್ದರು. ಆದರೆ ತಾತಂದಿರ ಕಾಲಕ್ಕೆ ಕಾಲಚಕ್ರದ ಸುಳಿಗೆ ಸಿಕ್ಕ ಅವರ ಕುಟುಂಬ ಸಾಮಾನ್ಯ ಸ್ಥಿತಿಗೆ ಇಳಿಯಿತು. "ತಂದೆಯವರ ಕಾಲಕ್ಕೆ ಮನೆತನ ಬಡತನವೇ ಆಯಿತು. ಆ ವೇಳೆಗೆ ನಾನು ಹುಟ್ಟಿದೆ. ಲೆಕ್ಕದಲ್ಲಿ ಹೆಚ್ಚು ಕಡಿಮೆ ಆಗಿದ್ದ ಹಣವನ್ನು ಸರಕಾರಕ್ಕೆ ಕೊಡುವುದಕ್ಕಾಗಿ ನಮ್ಮ ತಂದೆ ಒಬ್ಬ ಬಂಧುವಿನಿಂದ ಸ್ವಲ್ಪ ಹಣ ಸಹಾಯ ಪಡೆದರು. ಮನೆಯ ವರಮಾನ ಮತ್ತಷ್ಟು ಕಡಿಮೆಯಾಯಿತು. ಹೀಗೆ ನಾನು ಹುಟ್ಟಿದ ಸಮಯಕ್ಕೆ ಸರಿಯಾಗಿ ನಮ್ಮ ತಂದೆ ತಮ್ಮ ಅಧಿಕಾರ ಕಳೆದುಕೊಂಡರು. ನನ್ನ ಅಣ್ಣ ಒಬ್ಬ ತೀರಿಕೊಂಡ. ನಮ್ಮ ಮನೆತನ ಎಂದೂ ಕಾಣದ ಒಂದು ಮಟ್ಟದ ಬಡತನವನ್ನು ಮುಟ್ಟಿತು" ಎಂದು ಮಾಸ್ತಿಯವರೇ ಹೇಳಿಕೊಂಡಿದ್ದಾರೆ.[೩೯]

ಇಂಥ ಪರಿಸ್ಥಿತಿಯಲ್ಲಿ ಮಾಸ್ತಿಯವರ ಬಾಲ್ಯದ ದಿನಗಳನ್ನು ಕಳೆದರು. ಈ ದಿನಗಳಲ್ಲೇ ಮಾಸ್ತಿಯವರು ದಾನಕ್ಕೂ ಕೈಚಾಚಿದ್ದುಂಟು. ಆದರೆ ದಾನ ಸಿಗದಿದ್ದಾಗ ನೊಂದುಕೊಂಡರು. ಈ ಸಂಗತಿಯನ್ನು ಮಾಸ್ತಿಯವರೇ ಹೇಳಿಕೊಂಡಿದ್ದಾರೆ. "ನಾವು ಬಡವರು ಸರಿ, ಇದೂ ನಮ್ಮ ಮನೆತನ ದೊಡ್ಡದು ಎಂಬ ಕೆಚ್ಚು. ಆಮೇಲೆ ನನ್ನ ಬಡತನದ ದಿನದಲ್ಲಿ ನನ್ನ ನಡತೆಗೆ ಒಂದು ವಾರೆಯಾಗಿ ನಿಂತಿತು. ಬಡತನ ಅಡಸಿದರೂ ದೊಡ್ಡ ಮನೆಯ ಮರ್ಯಾದೆ ನಡೆಸಬೇಕು ಎಂಬ ಆ ಜನರ ಭಾವನೆ ತುಂಬಾ ಆತ್ಮಗೌರವಕ್ಕೆ ಕಾರಣವಾಯಿತು".[೪೦]

ಮಾಸ್ತಿಯವರು ಬಹಳ ಸಂಕಷ್ಟದ ದಿನಗಳಲ್ಲೂ ಶಿಕ್ಷಣವನ್ನು ಮಾತ್ರ ತೊರೆಯಲಿಲ್ಲ. ವಾರಾನ್ನ ಮಾಡಿಯಾದರೂ ಓದಿ ಮುಂದೆ ಬರಬೇಕೆಂಬ ಹಂಬಲ ಹೊಂದಿದ್ದರು. ವಾರಾನ್ನ ನಡೆಯುವಾಗ ಮಾಸ್ತಿಯವರ ಮನಸ್ಸಿಗೆ ಬೇಸರವಾಗದೇ ಇರಲಿಲ್ಲ. "ನಾನು ಒಬ್ಬ ದೊಡ್ಡ ಮನೆತನದ ಮಗ; ನಮ್ಮ ಹಿರಿಯರು ಬಹುಜನಕ್ಕೆ ಅನ್ನ ಹಾಕಿ ಹೆಸರು ಗಳಿಸಿದವರು. ಈಗ ನನಗೆ ಇತರರು ಅನ್ನ ಹಾಕಬೇಕಾಗಿ ಬಂದಿತು".[೪೧]

ಇಂಥ ಪರಿಸ್ಥಿತಿಯಿಂದ ಬೇಗ ಹೊರಬರಬೇಕು ಎಂದು ಮಾಸ್ತಿಯವರು ನಿರ್ಧರಿಸಿದರು. "ಹೀಗೆ ಬಾಳುವುದು ಬಡತನಕ್ಕೆ ತಪ್ಪಿದ್ದಲ್ಲ ಎನ್ನುವ ಭಾವನೆಯೂ ಮೂಡಿತು". ಎಂದು ಮಾಸ್ತಿಯವರು ಹೇಳಿಕೊಂಡರು.[೪೨]

ಬಡತನದ ಜೀವಕ್ಕೆ ತಾಳ್ಮೆ ಹೆಚ್ಚು. ಅಂತೆಯೇ ಮಾಸ್ತಿ ವಾರಾನ್ನದ ಸಂದರ್ಭದಲ್ಲಿ ತಮಗೊದಗಿದ ಎಡರು ತೊಡರುಗಳ ನೋವನ್ನು ಸಹಿಸಿಕೊಂಡರು. 'ಬಡತನದ ಕಹಿ ಎಷ್ಟಿದ್ದರೂ ಅದನ್ನು ಸಹಿಸಿಕೊಳ್ಳುವ ಶಕ್ತಿಯನ್ನು ನಾನೇ ಕಾಣದೆ ಗಳಿಸಿಕೊಂಡೆ' ಎನ್ನುತ್ತಾರೆ ಮಾಸ್ತಿಯವರು.

"ಆ ವರ್ಷಗಳಲ್ಲಿ ನನ್ನ ಗುರಿ ಒಂದೇ ಒಂದು. ಚೆನ್ನಾಗಿ ಓದಬೇಕು, ಚೆನ್ನಾಗಿ ಪಾಸು ಮಾಡಬೇಕು. ಮುಂದಕ್ಕೆ ಯಾವುದೋ ಒಂದು ಕೆಲಸಕ್ಕೆ ಸೇರಿ ಊರಲ್ಲಿ ಕಷ್ಟದಲ್ಲಿ ಸೊರಗುತ್ತಿದ್ದ ತಂದೆ-ತಾಯಿಗೆ ಅನ್ನ ಹಾಕಬೇಕು".[೪೩]

ವಾರಾನ್ನದ ದಿನಗಳಲ್ಲಿ ಮಾಸ್ತಿಯವರು ಈ ರೀತಿ ಚಿಂತಿಸಿ ಮನಸ್ಸನ್ನು ಗಟ್ಟಿ ಮಾಡಿಕೊಳ್ಳುತ್ತಿದ್ದರು. ಭಾರತದ ಸ್ವಾತಂತ್ರ್ಯ ಹೋರಾಟ ಅಂದು ಹಲವು ನಾಯಕರ ಪ್ರವೇಶದಿಂದ ಹೊಸ ಹೊಸ ರೂಪ ಪಡೆದು ಮಾಸ್ತಿಯವರ ಮನಸ್ಸನ್ನು ಆಕರ್ಷಿಸಿದುದು ನಿಜ. ಆದರೆ ಮಾಸ್ತಿಯವರ ಇಂತಹ ವೈಯಕ್ತಿಕ ಬದುಕು ಅವರ ಮನಸ್ಸನ್ನು ಚಳವಳಿಗಳ ಕಡೆಗೆ ಹರಿಯಬಿಡಲಿಲ್ಲ. ಮಾಸ್ತಿಯವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳದಿರುವುದಕ್ಕೆ ಇದು ಕಾರಣವಾಯಿತು.

ಮಾಸ್ತಿಯವರು ಓದಿನಲ್ಲಿ ಎಂದೂ ಮುಂದೆ ಇರುತ್ತಿದ್ದರು. ಶಾಲೆ ಕಾಲೇಜುಗಳಲ್ಲಿ ಮೊದಲ ಸ್ಥಾನ ಗಳಿಸಿ ಆ ಮೂಲಕ ಸೌಲಭ್ಯ ಪಡೆದು ಓದನ್ನು ಮುಂದುವರೆಸುತ್ತಿದ್ದರು. ಇಲ್ಲಿ ಉಲ್ಲೇಖಿಸುವ ಸಂಗತಿ ಮಾಸ್ತಿಯಂಥ ಪ್ರತಿಭಾವಂತ ಬಡ ವಿದ್ಯಾರ್ಥಿಯ ಬದುಕಿನ ಪುಟಗಳನ್ನು ಅನಾವರಣಗೊಳಿಸುತ್ತದೆ. "ವಾರಾನ್ನ ಇಂದು ತರಗತಿಗೆ ಬರಬೇಕಾಗಿದ್ದ ಮಾಸ್ತಿಯವರು ಹತ್ತು ಗಂಟೆಯವರೆಗೆ ವಾರದ ಮನೆಯ ಊಟವಾಗದೆ ಹಸಿವಾದಾಗ, ಏನನ್ನಾದರೂ ತಿನ್ನಬೇಕೆಂದರೆ ದೋಸೆ ತಿನ್ನುವಾಸೆ. ಆದರೂ ಅದಕ್ಕಾಗಿ ಹದಿನೈದು ಹದಿನಾರು ನಿಮಿಷ ಕಾಯಬೇಕಾದಾಗ, ಬೇಗ ಹೋಗಿ ಎರಡು ಕಾಸಿಗೆ ಮಿಠಾಯಿ ಮತ್ತು ಕಡಲೆಕಾಯಿ ತಿಂದು ಇನ್ನೇನು ಅರ್ಧ ಮುಗಿದಿದೆ ಎನ್ನುವಾಗಲೇ ತರಗತಿಯೊಳಗೆ ಹೋಗಿಬಿಡಬೇಕಾಗುತ್ತಿತ್ತು. ತರಗತಿಯೊಳಗೆ ತಿನ್ನುವಂತಿಲ್ಲ; ಹಸಿವು ತಡೆಯುವಂತಿಲ್ಲ; ಸಾಲದ್ದಕ್ಕೆ ಇನ್ನೂ ಹಸಿವು ತಡೆಯಲಾರದ ಬಾಲಿಶ ಅವಧಿ. ಮೆಲ್ಲನೆ ಒಂದೊಂದೇ ಕಡಲೆಕಾಯಿ ಸುಲಿದು ಬಾಯಿಗೆ ಹಾಕಿಕೊಳ್ಳುತ್ತಿದ್ದರು. ಹಾಳಾದ ಕಡಲೆಕಾಯಿ ಸುಲಿಯುವಾಗ ಶಬ್ದವಾಗಿ ಒಮ್ಮೆ ಅಧ್ಯಾಪಕರು ಗದರಿದರು. ಈ ಹಸಿವು ತಡೆಯಲಾರದೆ ಮತ್ತೆ ಕಡಲೆಕಾಯಿಯೊಂದನ್ನು ಸುಲಿದರು. ಅಧ್ಯಾಪಕರು ಮಾಸ್ತಿಯನ್ನು ಬೆತ್ತದಿಂದ ಕೈ ಮೇಲೆ ಬಾರಿಸಿಬಿಟ್ಟರು. "ಅಯ್ಯೋ" ಎಂದು ಮುಖ ಮುಚ್ಚಿಕೊಂಡು ಗೋಳಿಟ್ಟರು. 'ಹೋಗು, ತಿರುಗಿ ಹೀಗೆ ಶಬ್ದ ಮಾಡಬೇಡ' ಎಂದದ್ದಕ್ಕೆ ಹುಡುಗನ ಸಾತ್ವಿಕತೆ ಕೋಪವಾಗಿ ಉರಿದಿರಬೇಕು, "ಇಷ್ಟಕ್ಕೆಲ್ಲ ಹೀಗೆ ಶಿಕ್ಷೆ ಮಾಡಿದರೆ ನಿಮ್ಮ ಕ್ಲಾಸ್ ಹಾಳಾಗುತ್ತೆ, ನಿಮ್ಮ ಸ್ಕೂಲ್ ಹಾಳಾಗುತ್ತೆ" ಎಂದು ಬಿಟ್ಟ ಘಟನೆ[೪೪] ಮೇಲುನೋಟಕ್ಕೆ ಬಾಲಕನ ಅವಿವೇಕದಂತೆ ಕಾಣಿಸಿದರೂ, ಬಡತನದ ಇಕ್ಕಟ್ಟಿಗೆ ಸಿಕ್ಕಿ ಹಸಿವಿನಿಂದ ನರಳಿದ ಪ್ರತಿಭಾವಂತ ವಿದ್ಯಾರ್ಥಿಯ ಅಂತರಾಳದ ಅದಮ್ಯವಾದ ಕೆಚ್ಚು ಅನ್ನಿಸದೇ ಹೋಗುವುದಿಲ್ಲ. ಪಠ್ಯ ಪುಸ್ತಕಗಳನ್ನು ಕೊಳ್ಳುವುದಕ್ಕೆ ಹಣವಿಲ್ಲದ ಸ್ಥಿತಿಯಲ್ಲಿ ತಮ್ಮ ಶಾಲೆಯ ಆಳೊಬ್ಬ ವಿದ್ಯಾರ್ಥಿಗಳು ಮರೆತು ಶಾಲೆಯಲ್ಲಿ ಬಿಟ್ಟು ಹೋದ ಪುಸ್ತಕಗಳನ್ನು ಸುಲಭ ಬೆಲೆಗೆ ಮಾರುತ್ತಿದ್ದರೂ ಅಂಥವನ್ನು ಕೊಳ್ಳಲಿಚ್ಛಿಸದ ಶುಚಿತ್ವ ಅವರ

ವ್ಯಕ್ತಿತ್ವದ ವಿಕಾಸದ ದಿಕ್ಕನ್ನು ಸೂಚಿಸುತ್ತದೆ. ಮೆಟ್ರಿಕ್ ಪರೀಕ್ಷೆಗೆ ಅವರು ಕಟ್ಟಬೇಕಾದ ಹಣ ಪ್ರಾಪ್ತವಾದ ರೀತಿ ಒಂದು ರೀತಿಯ ಅದೃಷ್ಟವೇ. "ಸಿವಿಲ್ ಪರೀಕ್ಷೆಯನ್ನು ಪಾಸು ಮಾಡಿ ಅಸಿಸ್ಟೆಂಟ್ ಕಮಿಷನರಾಗಿ ತಮ್ಮ ನಿಸ್ಪೃಹತೆಯಿಂದ ಹೆಸರು ಮಾಡಿದ್ದ ಅದೇ ಶಾಲೆಯ ವಿದ್ಯಾರ್ಥಿಯಾಗಿದ್ದ ದಾಸಪ್ಪ ಅವರು ಹೊಳೆಯಲ್ಲೀಜುವಾಗ ಮುಳುಗಿ ಸತ್ತರು. ಅವರ ನೆನಪಿಗಾಗಿ ಅವರ ಮಾವ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಿದರು. ಲಾಂಗ್‌ಫೆಲೋನ 'ಇವ್ಯಾಂಜಲೀಸ'ನ್ನು ಸ್ಪರ್ಧೆಗೆ ಗೊತ್ತುಪಡಿಸಲಾಗಿತ್ತು. ಬಹುಮಾನದ ಮೊತ್ತ ಇಪ್ಪತ್ತೈದು ರೂಪಾಯಿಗಳು. ರಜೆಯ ದಿನಗಳಲ್ಲಿ ಆ ಕಾವ್ಯವನ್ನು ಎರಡು ಮೂರು ಸಲ ವಿವರವಾಗಿ ಅಧ್ಯಯನ ಮಾಡಿದರು. ಸಾಧ್ಯವಾದಷ್ಟು ಪುಸ್ತಕಗಳನ್ನು ಬಾಯಿಪಾಠ ಮಾಡಿದರು. ಕೊನೆಗೆ ಸ್ಪರ್ಧೆಯಲ್ಲಿ ಗೆದ್ದರು. ಆ ಬಹುಮಾನದ ಹಣ ಅವರು ಪರೀಕ್ಷೆಗೆ ಕಟ್ಟಬೇಕಾದ ೧೨ ರೂಪಾಯಿಗಳ ಹೊರೆ ತಗ್ಗಿಸಿತು. ಉಳಿದ ಹಣದಿಂದ ಮುಂದಿನ ವರ್ಷದ ಎಫ್. ಎ. ತರಗತಿಯ ಪುಸ್ತಗಳನ್ನು ಕೊಳ್ಳಲು ಅನುಕೂಲವಾಯಿತು".[೪೫]

ಹೀಗೆ ಮಾಸ್ತಿಯವರು ಉನ್ನತ ಅಧಿಕಾರಿಯಾದಾಗಲೂ ಬಡತನದಲ್ಲಿಯೇ ಜೀವಿಸಿದರು. ಹಣದ ಬಗ್ಗೆ ಎಂದೂ ಮೋಹಗೊಳ್ಳಲಿಲ್ಲ. ಈ ಹಸಿವಿನ ಬದುಕೇ ಅವರ ಸಾಹಿತ್ಯದ ಮೇಲೆ ದಟ್ಟ ಪ್ರಭಾವ ಬೀರಿತು. ಸಾಮಾನ್ಯ ಜನರ ಬದುಕಿನ ಚಿತ್ರಣವನ್ನು ನೀಡಲು ಇಂಥ ಅಂಶಗಳೇ ಕಾರಣವಾದವು.

ಮಾಸ್ತಿಯವರ 'ನೀಲಗಾರ ಮಾದ' ಎಂಬ ಕಥನ ಕವನದಲ್ಲಿ ಹಣವುಳ್ಳವರು ಬಡವರ ಮೇಲೆ ತುಳಿದು ಶೋಷಣೆ ಮಾಡಬಾರದು. ಉಳ್ಳವರಿರಲಿ, ಇಲ್ಲದವರಿರಲಿ ಅವರವರನ್ನು ಸ್ವತಂತ್ರವಾಗಿ ಬದುಕಲು ಬಿಡಬೇಕೆಂಬುದು ಇಲ್ಲಿ ಸ್ಪಷ್ಟ.

ಮಾಸ್ತಿಯವರು ಹಸಿವು ಮತ್ತು ಬಡತನದಿಂದ ಬಳಲುವ ಸಮಾಜದ ಅತೀ ಸಾಮಾನ್ಯ ಮನುಷ್ಯನನ್ನು ಸಾಹಿತ್ಯದ ಮೂಲಕ ಪ್ರಧಾನ ಧಾರೆಗೆ ತಂದಿದ್ದು. ಕಥೆಗಳಲ್ಲೂ ಸಾಮಾನ್ಯನಿಗೆ ನ್ಯಾಯ ಸಿಗುವಂತೆ ಮಾಡಿದ್ದಾರೆ. ಬಡತನಕ್ಕೆ ಮತ್ತು ಹಸಿವಿಗೆ ದೈವದಲ್ಲಿ ಮತ್ತು ಕೆಲವೊಮ್ಮೆ ಮಾನವೀಯತೆಯಲ್ಲಿ ಉತ್ತರ ಹುಡುಕುವ ಪ್ರಯತ್ನ ಮಾಡಿದ್ದಾರೆ.

"ಹಸಿವು ಮತ್ತು ಬಡತನದಲ್ಲಿ ನೊಂದ ವ್ಯಕ್ತಿ ವೈಭೋಗದ ಜೀವನ ನಡೆಸಲಾರನು. ಹಿಂದಿನ ಅವನ ಜೀವನದ ಕಷ್ಟದ ಅನುಭವ ಅವನನ್ನು ಜೀವನದುದ್ದಕ್ಕೂ ತಿದ್ದಿ ತೀಡಿ ಬೆಳೆಸುತ್ತದೆ. ಸಾಮಾನ್ಯ ಬಡಜನರ ಬಗ್ಗೆ ಆಸಕ್ತಿ ತಳೆಯುತ್ತಾ ಸಾಮಾನ್ಯರಾಗೇ ಬದುಕುವುದು ಅವರ ಶುದ್ಧ ವ್ಯಕ್ತಿತ್ವವನ್ನು ಸ್ಪಷ್ಟಪಡಿಸುತ್ತದೆ" ಎಂದು ಮಾಸ್ತಿಯವರು ಟಿ. ಎಸ್. ವೆಂಕಣ್ಣಯ್ಯನವರ ಬಗ್ಗೆ ಅಭಿಮಾನದ ಮಾತುಗಳನ್ನಾಡಿದ್ದಾರೆ.[೪೬]

ಬದುಕೆಂದರೆ ಕೇವಲ ಕಷ್ಟದ ಸರಮಾಲೆಯಲ್ಲ. ಇಲ್ಲಿ ಸುಖವೂ ಉಂಟು, ಅಂತೆಯೇ ದುಃಖವೂ. ಕಷ್ಟ ಬಂದಾಗ ಹೆದರುವುದೇಕೆ? ಬಾಳಿನಲ್ಲಿ ಏನೇ ಬರಲಿ ಅದನ್ನು ಎದುರಿಸೋಣ. ನಮ್ಮ ಶಕ್ತಿ ಇರುವಷ್ಟು ಈ ಕಷ್ಟಗಳ ಎದುರಿಗೆ ಬಾಳೋಣ. ಆಗ ಕಷ್ಟವೂ ನಮಗೆ ಒಲಿದು ನಮ್ಮ ಜೊತೆ ಸಿಹಿಯಾಗಿ ಬಾಳುವೆ ಮಾಡುವುದು ಎಂಬುದು ವಿ. ಸೀತಾರಾಮಯ್ಯನವರ ನಿಲುವು. ವಿ.

ಸೀ. ಯವರು ಕೂಡಾ ಹಸಿವು-ಬಡತನದಿಂದ ನರಳಿ ಬೆಳೆದು ಬಂದವರು ಎಂದು ಎಚ್. ಕೆ. ವೆಂಕಟೇಶ್ ಹೇಳಿದ್ದಾರೆ.[೪೭]

ಹಸಿವು-ಬಡತನವು ತೀವ್ರತರವಾದ ಸಮಸ್ಯೆ. ಜೀವನಕ್ಕೆ ಬೇಕಾದ ಕನಿಷ್ಠ ಅವಶ್ಯಕತೆಗಳೂ ಸಿಗಲಾರದ ಸ್ಥಿತಿ. ಬದುಕನ್ನು ದುಃಖಮಯವಾಗಿಸುತ್ತದೆ.

"ಒಂದು ಊರಲಿ ಇವರ ಶಿಷ್ಯರಲಿ
ಒಬ್ಬಾತ ತೀರ ಬಡವ, ಒಂದು ದಿನ ಇವರು
ತನ್ನ ವಸತಿಗೆ ಕರೆಯಲೆಳಸಿಹರು ಕರೆದರೋ
ಏನಿರಲಿ ಬಿಡಲಿ ಸಾರೂ ಅನ್ನ ಇಲ್ಲದೆಯೆ
ಊಟವಾಗುವುದೇ! ಆತನಿಗೋ ಅದಕೂ ಕಷ್ಟ"[೪೮]

ಇಂಥ ಕಷ್ಟದ ಬದುಕು ಬಡವರಿಗೆ ಸಾಮಾನ್ಯವಾಗಿ ಹೋಗಿದೆ. ಈತ ಬಡ ಭಕ್ತ. 'ನಾ ಬಡವ, ಸಂತರ್ಪಣೆಗೆ ಬೇರೆ ಏನೂ ಮಾಡಲಾರೆ' ಎನ್ನುವನು. ಇಂಥ ದೀನಸ್ಥಿತಿ ಈತನದು. ಆದರೆ ಇಲ್ಲಿನ ಸಾಧುಗಳು ಕಷ್ಟಗಳನ್ನು ಅರ್ಥ ಮಾಡಿಕೊಳ್ಳಬಲ್ಲಂಥವರು ಭಕ್ತರು ಪ್ರೀತಿಯಿಂದ ಏನು ಮಾಡುವರೋ ಅದನ್ನೇ ಸ್ವೀಕರಿಸುವರು. ಭಕ್ತರಲ್ಲಿ ಬಡವ-ಬಲ್ಲಿದ ಎಂಬ ಭೇದವನ್ನು ಎಣಿಸದೆ ಬಡವರ ಮನೆಯ ಹಿಟ್ಟು, ಹುಳಿಯನ್ನು ಪ್ರೀತಿಯಿಂದಲೇ ತೃಪ್ತಿಯಿಂದ ಊಟ ಮಾಡುವರು ಅಗಡಿಯ ಸಾಧುಗಳು.

ಮಾಸ್ತಿಯವರು 'ದೊರೆ-ದಳಪತಿ' ಕವನದಲ್ಲಿ ಸಾಮಾನ್ಯರನ್ನು ಧನಿಕರು ನಿರ್ಲಕ್ಷ್ಯದಿಂದ ನೋಡಬಾರದು. ಅವರೂ ಕೂಡಾ ತಮ್ಮಂತೆಯೇ ಎಂದು ತಿಳಿಯಬೇಕು. ಅಕಸ್ಮಾತ್ತಾಗಿ ಆ ತಿರಸ್ಕಾರ ಭಾವದಿಂದ ನೋಡಿದರೆ ಅದರ ಪ್ರತಿಫಲವಾಗಿ ಮುಂದೆ ನಮಗೆ ಕೆಡುಕಾಗಬಹುದು ಎಂದಿದ್ದಾರೆ.

141333
ಅಕ್ಷರ ಗ್ರಂಥಾಲಯ
ಕನ್ನಡ ವಿ.ವಿ. ಹಂಪಿ

"ಹಿರಿತನದ ಕೋಟೆಯಲಿ ಕುಳಿತು ಕೆಡುನುಡಿಯಿಂದ
ಇವರೆಮ್ಮ ಎದುರಿಸರು ಎಂದು,
ಬಡತನದ ಬಯಲಿನಲಿ ನಿಂತವರ ಹೊಡೆಯದಿರು
ತಿರುಗಿಬಹುದೊಂದಲ್ಲ ಒಂದು"[೪೯]

ದೊರೆ-ದಳಪತಿ ಇಬ್ಬರೂ ಒಬ್ಬರನ್ನೊಬ್ಬರು ಹೋಲುತ್ತಿದ್ದರು. ದೊರೆಗೆ ಇದನ್ನು ಸಹಿಸಿಕೊಳ್ಳಲು ಆಗುತ್ತಿರಲಿಲ್ಲ. ಒಮ್ಮೆ ದೊರೆ ಇದನ್ನು ಪರೀಕ್ಷಿಸಲು ದಳಪತಿಯಿದ್ದಲ್ಲಿಗೆ ಬಂದ. ನೀನು ನನ್ನಂತೆಯೇ ಇದ್ದೀಯ, 'ನಿಮ್ಮ ತಾಯಿ, ನಮ್ಮ ತಾಯವರ ಪರಿವಾರದಲಿ ಅರಮನೆಯಲ್ಲಿದ್ದರೇ ಎಂತು?' ಎಂದು ಕೇಳಿದ. ಇಂಥ ಮಾತಿಗೆ ಹೆದರದೆ ದಳಪತಿ ಹೇಳುವ ಮಾತು ಸಾಮಾನ್ಯರು, ಬಡವರು ಕೀಳಲ್ಲ ಎಂಬುದನ್ನು ತಿಳಿಯ ಹೇಳುತ್ತದೆ. 'ತಾಯಲ್ಲ, ತಂದೆ ಇದ್ದರು' ಎಂದು ದಳಪತಿ ಹೇಳಿದಾಗ ದೊರೆ ಪೆಚ್ಚು ಮೋರೆ ಹಾಕಿ ಮುಂದೆ ಹೋದನು. ತಾನು ದೊರೆ, ಹಣ-ಅಧಿಕಾರ ಬಲವುಳ್ಳವನು ಎಂದು ಅಹಂನಿಂದ ನಡೆದುಕೊಳ್ಳದೆ, ಇತರರು ಬಡವರಾದರೂ ಅವರನ್ನು ಮಾನವೀಯತೆಯಿಂದ ನೋಡಿದರೆ ಸಾಮಾಜಿಕ ವ್ಯವಸ್ಥೆಗೆ ಧಕ್ಕೆ

ಬರುವುದಿಲ್ಲ ಎಂಬುದು ಕವಿಯ ನಿಲುವು. "ಶ್ರೀಮಂತರು ಬಡವರನ್ನು ಸಣ್ಣದಾಗಿ, ಕೀಳಾಗಿ ಕಾಣಬಾರದೆಂಬ ನೀತಿ ಇಲ್ಲಿದೆ" ಎಂದು ಸಿ. ಪಿ. ಸಿದ್ಧಾಶ್ರಯ ಹೇಳಿದ್ದಾರೆ.[೫೦]

ಮಾಸ್ತಿಯವರ ಕೃತಿಗಳಲ್ಲಿ ಸಮಾಜಸುಧಾರಣೆಯ ತವಕವನ್ನು, ಸಮಾಜದ ಅನ್ಯಾಯವನ್ನು ಕಂಡು ತೀವ್ರವಾಗಿಯಲ್ಲದಿದ್ದರೂ ಮೃದು ಪ್ರತಿಭಟನೆಯ ಧ್ವನಿಯನ್ನು ಗುರುತಿಸಬಹುದು. ಅಧಿಕಾರಿಗಳ ಸಮೂಹ ನಿತ್ಯ ನಿರಂತರ ಬಡವರನ್ನು, ರೈತರನ್ನು ಶೋಷಿಸುತ್ತಲೇ ಇರುತ್ತದೆ. ಇಂಥ ಶೋಷಣೆ ನಿಂತರೆ ಮಾತ್ರ ಬಡವರ ಉದ್ಧಾರ ಸಾಧ್ಯ ಎಂಬುದು ಮಾಸ್ತಿಯವರ ಇಂಗಿತ.

ಬೇಂದ್ರೆ ಪ್ರಕಾರ ಹಸಿವು

ಬೇಂದ್ರೆಯವರು ಜನಮಾನಸ ಸರೋವರದಲ್ಲಿ ಬದುಕಿ ಬಾಳಿದ ಕವಿ. ಬದುಕಿನಲ್ಲಿ ತಾವು ಕಂಡುಂಡ ಸುಖ ದುಃಖಗಳನ್ನು, ತಮ್ಮ ಪಾಡನ್ನು ಹಾಡಾಗಿ ಹೇಳಿಕೊಂಡವರು. ಬೇಂದ್ರೆಯವರ ಸಾಹಿತ್ಯದಲ್ಲಿ ಬಡತನದ ಬಗೆಗೆ ಅವರ ಧೋರಣೆ ಏನೆಂಬುದು ಸ್ಪಷ್ಟವಾಗುತ್ತದೆ. ಜೀವನದುದ್ದಕ್ಕೂ ಬೇಂದ್ರೆ ಬಡತನವನ್ನು ಅನುಭವಿಸಿದವರು. ಬಡತನದ ಬಗೆಗೆ ಅವರದ್ದು ಅನುಭವಜನ್ಯ ಸಾಹಿತ್ಯ.

ಬೇಂದ್ರೆಯವರು ಬಡತನ ಮತ್ತು ಹಸಿವಿನ ಕುರಿತು ಕವನವನ್ನು ಏಕೆ ಬರೆದರೆಂಬುದನ್ನು ಒಳಹೊಕ್ಕು ಶೋಧಿಸಿದರೆ ತಿಳಿಯುವುದು. "ಮಾನವತಾವಾದಕ್ಕೆ ಸಂಬಂಧಿಸಿದ ಇನ್ನೊಂದು ಪ್ರಶ್ನೆ ಮೌಲ್ಯಗಳದ್ದು. ಮನುಷ್ಯ ಮನುಷ್ಯನಾಗಿ ಬಾಳುವುದಕ್ಕೆ ಅವಶ್ಯಕವಾದ ಮೌಲ್ಯಗಳನ್ನು ಸ್ಪಷ್ಟವಾಗಿ ನಿರ್ದೇಶಿಸದ ಹೊರತು ಮಾನವತಾವಾದದ ಕಲ್ಪನೆಗೆ ಬಲ ಬರಲಾರದು. ಬೇಂದ್ರೆಯವರ ಸಾಹಿತ್ಯ ಈ ಕಾರ್ಯವನ್ನು ಯಶಸ್ವಿಯಾಗಿ ನೆರವೇರಿಸುತ್ತದೆ. ಅವರ ಮೌಲ್ಯ ವ್ಯವಸ್ಥೆಯಲ್ಲಿ ಶ್ರೇಷ್ಠ ಸ್ಥಾನವಿರುವುದು 'ಅನ್ನ'ಕ್ಕೆ. "ಮಾನವನ ದೀನತೆಯೂ, ಧರ್ಮದ ಅತಂತ್ರತೆಯೂ ಅನ್ನದ ಅವ್ಯವಸ್ಥೆಯ ಮೂಲಕವಾಗಿಯೇ ಇದೆ" ಎಂದು 'ಅನ್ನ' ಎಂಬ ಲೇಖನದಲ್ಲಿ ಅವರು ಹೇಳಿದ್ದಾರೆಂದು ಎಚ್. ಕೆ. ವೆಂಕಟೇಶ್ ಗುರುತಿಸಿದ್ದಾರೆ.[೫೧] ಬೇಂದ್ರೆಯವರ ದೃಷ್ಟಿಯಲ್ಲಿ 'ಹಸಿವು' ಎಂಬುದು ಮಾನವನ ಅತಿ ದೊಡ್ಡ ಸಾಮಾಜಿಕ ಸಮಸ್ಯೆ. ಬಡತನವನ್ನು ಅವರು ಯಾವ ಕಾರಣಕ್ಕೂ ಸಮರ್ಥಿಸಲಿಲ್ಲ. 'ಬಡತನವು ಪಾಪವೆಂದು ತಿಳಿಯದ ಹೊರತು ಮನುಷ್ಯ ಹಸಿವಿನಿಂದ ಬಳಲುವುದು ತಪ್ಪುವುದಿಲ್ಲ. ಮುಂದೆ ಗತಿಯಿಲ್ಲ' ಎನ್ನುವುದು ಅವರ ಸ್ಪಷ್ಟ ನಿಲುವಾಗಿತ್ತು. 'ಅನ್ನ'ವನ್ನು ಕುರಿತು ಅನೇಕ ಕವನಗಳನ್ನು ಬರೆದಿದ್ದಾರೆ. 'ಕೆಲಸವಿಲ್ಲದ ಹಾಡು', 'ತುತ್ತಿನ ಚೀಲ', 'ಬೈರಾಗಿಯ ಹಾಡು', 'ಯಜ್ಞ', 'ಅನ್ನಾವತಾರ', 'ಅನ್ನ ಯಜ್ಞ', 'ದರಿದ್ರ ನಾರಾಯಣ' 'ಅನ್ನ ಬೇಕು', 'ಅನ್ನ ಬಕಾಸುರ ರಾಜ್ಯದಲ್ಲಿ', ಮುಂತಾದವು.

"ಬಡತನ ಬೇಂದ್ರೆಯವರು ತೀವ್ರವಾಗಿ ಅನುಭವಿಸಿದ ಅವಸ್ಥೆ. ಕೇವಲ ಚಿಂತನದ ಅಥವಾ ಮಾನವೀಯ ಅನುಕಂಪದ ವಿಷಯವಾಗಿರಲಿಲ್ಲ ಎನ್ನುವುದನ್ನು ವಿಮರ್ಶಕರು ಮರೆಯಬಾರದು" ಎಂಬುದು ಜಿ. ಎಸ್. ಆಮೂರರ ಬಹು ಸ್ಪಷ್ಟ ನುಡಿ.[೫೨]

ಬೇಂದ್ರೆ ಸಾಹಿತ್ಯ ಜನಮುಖಿ ನೆಲೆಯದ್ದು. ಜನಜೀವನ ಸ್ಪಂದನೆ ಇವರ ಕಾವ್ಯದ ಪ್ರಧಾನ ಗುರಿ. "ಬೇಂದ್ರೆ ದರ್ಶನವು ಜೀವನದ ಮೂಲಭೂತವಾದ ನೋವಿನ ನೆಲೆ ಹುಡುಕಲು

ಪರ್ಯಟನೆ ಮಾಡಿದೆ. ನೋವಿನ ಅನಿವಾರ್ಯತೆಯನ್ನು, ಅನಂತ ಮುಖಿತ್ವವನ್ನು ಪ್ರಾಯಶಃ ಬೇಂದ್ರೆ ಅರಿತಷ್ಟು ವಾಸ್ತವ ದೃಷ್ಟಿಕೋನದಿಂದ ಅವರ ಸಮಕಾಲೀನ ಕವಿಗಳು ಅರ್ಥ ಮಾಡಿಕೊಂಡಿಲ್ಲ".[೫೩]

ಬೇಂದ್ರೆಯವರ 'ತುತ್ತಿನ ಚೀಲ' ತನ್ನ ಸಾಮಾಜಿಕಾಂಶದಿಂದ ಗಮನ ಸೆಳೆವ ಕವನ. ಹಸಿವಿನ ಸಮಸ್ಯೆ ಇಡೀ ಮಾನವ ಜನಾಂಗದ ಸಮಸ್ಯೆ. ಇದು ಜಗತ್ತನ್ನೇ ನುಂಗುವ ರಾಕ್ಷಸ ರೂಪಿಯದು. ಹಸಿದಾತ ಮಾತ್ರ ಹಸಿದವರ ನೋವನ್ನು ಸಮಗ್ರವಾಗಿ ಗ್ರಹಿಸಬಲ್ಲ. 'ತುತ್ತಿನ ಚೀಲ'ದಲ್ಲಿ ವಿಶ್ವವನ್ನೇ ತುತ್ತುಗೊಳ್ಳಲು ಹೊಂಚುತ್ತಿರುವ ಬಡಬಗ್ಗರ ಹಸಿವೆಯ ಭೀಷಣ ಘರ್ಜನೆಯಿದೆ".[೫೪]

ಅನ್ನಬ್ರಹ್ಮನ ದೇಗುಲದಲ್ಲಿ ವಿಚಿತ್ರ ಪರಿಸ್ಥಿತಿಯು ನಿರ್ಮಾಣವಾಗಿದೆ. ವೈದಿಕ ಸಂಸ್ಕೃತಿಯ ವಿಡಂಬನೆ, ವ್ಯಂಗ್ಯವಿಲ್ಲಿ ತೀಕ್ಷ್ಣವಾಗಿದೆ. "ಅನ್ನಕ್ಕಾಗಿ ಕಚ್ಚಾಡುವ ವ್ಯವಹಾರ ಈ ಕಗ್ಗಿವಿಯಲ್ಲಿ ಮೌನದ ವೀಣೆಗೆ ಕರುಳಿನ ತಂತಿ ಮಿಡಿದೂ ಮಿಡಿದೂ ಬೆರಳು ಮುರಿದುವಂತೆ. ಬಡತನದ ಮೂಕವೇದನೆಯನ್ನು, ದುಃಖ ದುಮ್ಮಾನವನ್ನು ವ್ಯಕ್ತಪಡಿಸಲು ಇದಕ್ಕೂ ಸಮರ್ಥ ಪದಗಳಾವುವು?"[೫೫] ಬಡತನ ಮತ್ತು ಹಸಿವು ಇಲ್ಲದವರ ಸಮಸ್ಯೆಯೇ ಹೊರತು ಉಳ್ಳವರದ್ದಲ್ಲ. ಬಡತನದಲ್ಲಿ ಬೆಂದು ಅತ್ತಿತು, ಕೂಗಿತು, ಚೀರಿತು ಜೀವ. ತುತ್ತಿನ ಚೀಲ ಸಾಮಾಜಿಕ ನೆಲೆಯಲ್ಲಿ ನಿಂತು ಸಂಸ್ಕೃತಿಗೆ ಮತ್ತು ಸಮಾಜಕ್ಕೆ ಸವಾಲನ್ನೆಸೆಯುವ ಶಕ್ತಿಪೂರ್ಣ ಕವನ.[೫೬]

ಬಿಡುಗಣ್ಣವರಿಗೆ
ಕಾಣುವದಿಲ್ಲ
ಅಮೃತದ ತೇಗಿನ
ಮದುವಂತಹದು
ಹಸಿದವ ಬಲ್ಲ
ಹಸಿವೆಯ ಮೂಲ[೫೭]

ಬಾಳಿಗಿಂತ ಕೂಳೇ ಮೇಲೋ? ಎಂಬಂಥ ಸ್ಥಿತಿ. ಸಿರಿವಂತ–ಬಡವರ ನಡುವಣ ಅಂತರ ಒಡೆದು ಕಾಣುತ್ತದೆ. "ಇತಿಹಾಸದುದ್ದಕ್ಕೂ ಉಳ್ಳವರು ಇಲ್ಲದವರನ್ನು ತುಳಿದ ಒಂದು ವಿಧಾನ ಇಲ್ಲಿ ಉಕ್ತವಾಗಿದೆ. ಉತ್ತಮರು ಎನಿಸಿಕೊಂಡವರು ವೇದಶಾಸ್ತ್ರ, ಪುರಾಣ, ಪಾಪ–ಪುಣ್ಯ, ಧರ್ಮ–ಕರ್ಮಗಳ ಬಲೆಯಲ್ಲಿ ಸಾಮಾನ್ಯರನ್ನು ಸಿಕ್ಕಿಸಿ ಶೋಷಿಸಿದವರಲ್ಲವೇ? ಅಧ್ಯಾತ್ಮ ನಮ್ಮೆಲ್ಲ ಸುಲಿಗೆಯ ಸಾಧನವಾಯಿತು. ಆದ್ದರಿಂದಲೇ ವಿವೇಕಾನಂದರು ಮೊದಲು ಹೊಟ್ಟೆ, ಅನ್ನ. ಆಮೇಲೆ ವೇದಾಂತ ಎಂದದ್ದು. 'ನೇತಿದೆ ಜೋತಿದೆ' ಎಂಬಲ್ಲಿ ಬಡವರನ್ನು ನೇಣು ಹಾಕಿದ, ಶಿಲುಬೆಗೇರಿಸಿದ ಚಿತ್ರ ಸ್ಫುರಿಸುತ್ತದೆ".[೫೮]

ಬಡವರ ಬದುಕು ಶೋಚನೀಯವಾಗಿದೆ. "ನಮ್ಮವರ ದಾರಿದ್ರ್ಯ, ದೀನತೆ, ಹಸಿವು ಇವರ ಬಗೆಯನ್ನು ಕದಡಿವೆ. ಬಡವರ, ಹೊಟ್ಟೆಗಿಲ್ಲದವರ ಸಂಕಟ ಇವರ ಕಾವ್ಯವಾಣಿಯನ್ನು ಕೆರಳಿಸಿದೆ. ಧನಿಕರ ಔದ್ಧತ್ಯದಿಂದ ಇವರು ಔಡುಗಚ್ಚಿದ್ದಾರೆ. ದೈವುಳ್ಳವರಿಗೆ ದಯವೇ ಇಲ್ಲ, ತಿತ್ತಿರಿ ತುಂಬಿದೆ ಬೊಕ್ಕಸದೊಡಲು".[೫೯]

ಬರಿದೋ ಬರಿದು
ತೆರವೋ ತೆರವೂ
ಬಡವರ ಬಗ್ಗರ ತುತ್ತಿನ ಚೀಲಾ[೬೦]

ಬಡವರ ಪರಿಸ್ಥಿತಿ ಹದಗೆಟ್ಟಾಗ ಅವರ ಆಕ್ರೋಶ ಮಾತಿಗೆ ಮೀರಿದ್ದು. "ಬೇಂದ್ರೆಯವರು ನಮ್ಮ ಸಮಾಜವನ್ನು ಬರಿಯ ಒಂದು ಸುಂದರವಾದ ಸ್ವಪ್ನವಾಗಿ ಕಂಡಿಲ್ಲ. ಅವರು ಅದರ ವಾಸ್ತವಿಕತೆಯ ನೋವನ್ನು, ದುಃಖವನ್ನು ಅನುಭವಿಸಿದ್ದಾರೆ... ಅವರು ಆಧ್ಯಾತ್ಮಿಕ ವಾದಕ್ಕೆ ಬಡಬಗ್ಗರ ಹೊಟ್ಟೆಯ ಸವಾಲನ್ನು ಬಹಳ ಪ್ರಚಂಡ ರೂಪದಲ್ಲಿ ಹಾಕುತ್ತಾರೆ.[೬೧]

ಬಡತನದ ಪರಿಣಾಮವಿಲ್ಲಿ ಅತ್ಯಂತ ಸ್ಪಷ್ಟ. "ಈ ಕಡೆಯಿಲ್ಲದ ಹಸಿವಿನ ಪರಿಣಾಮ ಏನಾದೀತು ಎಂಬುದರ ಕಡೆಗೆ ಕವಿಯ ಮನ ಹರಿಯುತ್ತದೆ. ಇದು ಕಮ್ಯುನಿಸಮ್ಮಿಗೆ ಆಹ್ವಾನವಲ್ಲವೇ? ಅದು ಬಂದಾಗ ದೇವರು, ಧರ್ಮ ಎಲ್ಲಾ ಧ್ವಂಸಗೊಳ್ಳುತ್ತವೆ. ವಿನಾಶ ತಾನೇ ತಾನಾಗುತ್ತದೆ. ಹಸಿವಿಗೆ ಎಲ್ಲಾ ಬಲಿಯಾಗುತ್ತದೆ".[೬೨]

'ತುತ್ತಿನ ಚೀಲ'ದ ಪ್ರತಿಮೆ ಬೇಂದ್ರೆಯವರಿಗೆ ಸರ್ವಜ್ಞನಿಂದ ದೊರೆಯಿತೆಂದು ಜಿ. ಎಸ್. ಆಮೂರರು ಗುರುತಿಸಿದ್ದಾರೆ.

ಸಾಲವನು ಮಾಡುವದು! ಹೇಲ ತಾ ಬಳಿಸುವುದು!
ಕಾಲಿನಾ ಕೆಳಗೆ ಕೆಡಹುವುದು ತುತ್ತಿನಾ ಚೀಲ ನೋಡಯ್ಯ ಸರ್ವಜ್ಞ[೬೩]

ಬಡವರ ಪರವಾದ ಬೇಂದ್ರೆಯವರ ಧ್ವನಿ ಪರಿಣಾಮಕಾರಿಯಾಗಿದೆ. 'ತುತ್ತಿನ ಚೀಲ' ಕವನದ ಅರ್ಥವ್ಯಾಪ್ತಿ ಬೇಂದ್ರೆಯವರ ಕಾವ್ಯಶಕ್ತಿಯಂತೆ ಅಗಾಧ, ಅಪಾರ. "ಬಡವರ ಬಗ್ಗರ ತುತ್ತಿನ ಚೀಲದ ಒಳಗಿನ ಒಳದನಿ" ಯನ್ನು ಕವಿ ಕಿವಿಗೊಟ್ಟು ಕೇಳಿ ಅದರ ದಾರುಣತೆಯನ್ನು ಎದೆ ಎದೆಗೂ ತಾಗಿಸಿದ್ದಾನೆ".[೬೪]

'ಹತ್ತು ಕಟ್ಟುವುದಕ್ಕಿಂತ ಒಂದು ಮುತ್ತು ಕಟ್ಟು' ಇದು ಗಾದೆ. ಹಾಗೆಯೇ ಹತ್ತು ಅವತಾರಗಳಿಗಿಂತ ಒಂದು ಮುತ್ತಿನಂಥ ಅವತಾರ ಸಾಕು. ಉಳ್ಳವರ ಶೋಷಣೆ ಇಲ್ಲದವರ ಪರದಾಟದಂತ್ಯಕ್ಕೆ ಅನ್ನದ ಅವತಾರ ಅವಶ್ಯಕ. 'ಅನ್ನಾವತಾರ' ಸಂದರ್ಭದ ಬೇಂದ್ರೆಯವರದೇ ಮಾತು. "ಅನ್ನದ ಅವತಾರವಾಗದೆ ಪ್ರಾಣದ ಉದ್ಧಾರವಾಗುವಂತೆ ಇಲ್ಲ. ಈ ಅವತಾರವಾಗಬೇಕಾಗಿದೆ ಮಾನವನ ಮನೋಲೋಕದಿಂದ. ಆದರೆ ಅಲ್ಲಿ ಭಾವ ಕಷಾಯದಿಂದ ಜ್ಞಾನ ಕರ್ಮಗಳ ಹಾದಿ ಹೀನವಾಗಿಬಿಟ್ಟಿದೆ. ಅನ್ನದ ವಿಚಾರದಲ್ಲಿ ಮಾನವನಿಗಿದ್ದ ದುರ್ಬುದ್ಧಿ ಅವನ ಮನೋದೌರ್ಬಲ್ಯದ ಪರಮಾವಧಿ. ಇಂದಿನ ರಾಜ್ಯ ನೀತಿಯ ದುರ್ವಿಪಾಕದ ಒಂದು ಭಾಗ ಎಂದರೆ ಜಗತ್ತಿನ ಅನ್ನವನ್ನು ಬೆಳೆಸುವ ಒಕ್ಕಲಿಗನಿಗೆ ಒಂದು ಸಾಮಾನ್ಯ ಸುಖಜೀವನವನ್ನು ನಡೆಸಲು ಎಲ್ಲರ ಮುಖ ನೋಡಬೇಕಾಗುತ್ತದೆ. ಇಂಥ ದುಷ್ಕಾಲದಲ್ಲಿ ಜೀವನಕ್ಕಿಂತ ಮರಣದ ಮಹತಿಯನ್ನು ವರ್ಣಿಸುವ ತತ್ವಜ್ಞಾನದ ಭಾಸ ಹುಟ್ಟುತ್ತದೆ".[೬೫]

ನೀರದೇವ, ತೀರದೇವ, ದುಡುಕುದೇವ, ಮಿಡುಕುದೇವ... ದೇವರು ಹತ್ತು ಅವತಾರಗಳ ರೂಪದಲ್ಲಿ ಬಂದಿದ್ದಾನೆ, ಹೋಗಿದ್ದಾನೆ, ಆದರೆ ಬಡವರ ಹೊಟ್ಟೆ ತಣ್ಣಗಿರಲಿಲ್ಲ, ತಣ್ಣಗಿರಲಿಲ್ಲ.[೬೬]

ಬಡವರ ಹಸಿವು ಜಗತ್ತನ್ನೇ ಸುಡುತ್ತದೆ. ಈ ಹಸಿವನ್ನು ಆರಿಸದ ದೇವರುಗಳಿಂದ ತಾನೇ ಪ್ರಯೋಜನವೇನು? ಅವತಾರಗಳಿಂದ ತಾನೇ ಪ್ರಯೋಜನವೇನು? ಪ್ರಾಣ ದೇವರು ನಿತ್ರಾಣನಾಗಿ ಒಂದು ಕಡೆ ವಸುಂಧರೆ, ಮತ್ತೊಂದು ಕಡೆ ರತ್ನಾಕರ, ಇವರ ನಡುವೆ ಬಿದ್ದು ನರಳುತ್ತಿದ್ದಾನೆ. ಸಿಡುಕುದೇವ, ಮಿಡುಕುದೇವ ಬಂದರೂ ಅನ್ನದೇವರು ಮಾತ್ರ ಇನ್ನೂ ಬರಲಿಲ್ಲೋ ಇನ್ನೂ ಬರಲಿಲ್ಲ"[೭೭]

"ಮಾನವೀಯತೆ ಮೂಡದ ಅವತಾರ ಪ್ರಕ್ರಿಯೆ ವ್ಯರ್ಥವೆಂಬುದು ಕವಿಯ ಇಂಗಿತ. ಯಾವ ದೇವರು ಬಂದರೂ ಬಡವರ ಹೊಟ್ಟೆ ತಣ್ಣಗಾಗದು. ಬಡವರ ಹಸಿವು ಜೀವಂತವಾಗಿಯೇ ಇದೆ"

"ಎಲ್ಲಾ ದೇವರು ಬಂದು ತಲ್ಲಣಗೊಂಡರೂ ಅನ್ನ ದೇವರು ಮಾತ್ರ ಇನ್ನೂ ಬರಲಿಲ್ಲಾ ಎಂಬ ಆಕ್ರಂದನ ನಮ್ಮ ಕಿವಿಗಳಲ್ಲಿ ಇನ್ನೂ ಪಡಿನುಡಿಯುತ್ತಿದೆ" ಎಂಬ ಚೆನ್ನವೀರ ಕಣವಿಯವರ ಮಾತು ಮುಖ್ಯ.[೭೮]

ಸ್ವಲ್ಪ ಅನ್ನ ಸಿಕ್ಕರೂ ಸಾಕು ಬಗೆಬಗೆದು ತಿನ್ನುವ ಬಡಬಾಗ್ಗಿಗಳು ಒಂದೆಡೆಯಾದರೆ ತಿಂದ ಅನ್ನ ಜೀರ್ಣವಾಗದೆ ಸಾಯುವವರು ಮತ್ತೊಂದೆಡೆ. ಈ ಅಸಮತೆಯು ಸೃಷ್ಟಿಯ ವಿಚಿತ್ರ ವೈಶಿಷ್ಟ್ಯ. ಹಲವು ಶ್ರೀಮಂತರು ತಮ್ಮ ಅಹಂನಿಂದ ಬಡವರು ತಿನ್ನುವ ಅನ್ನಕ್ಕೆ ಮಣ್ಣು ಹಾಕುವುದು ಸರ್ವೇಸಾಮಾನ್ಯ ಸಂಗತಿ. ಅನ್ನವನ್ನು ಸೂರೆ ಮಾಡಿ, ಆದರೆ ಮಣ್ಣು ಹಾಕಬೇಡಿ ಎಂಬಲ್ಲಿ ಕವಿಗಿರುವ ಬಡವರ ಹಸಿವಿನ ಮೇಲಿನ ಕಾಳಜಿ ಮನವರಿಕೆಯಾಗುತ್ತದೆ.

'ಅನ್ನವೆಲ್ಲವೂ ಆಯಿತು ಚಿನ್ನ ತಿನ್ನುವುದೇನನ್ನು' ಎಂದು ಪ್ರಶ್ನಿಸುವ ಬೇಂದ್ರೆ ಅನ್ನಕ್ಕೆ ಪ್ರಾಮುಖ್ಯತೆ ನೀಡಬೇಕೆಂಬ ಅಪೇಕ್ಷೆ ಅವರದ್ದು. ಆರ್ಥಿಕ ವ್ಯವಹಾರದಲ್ಲಿ ಪ್ರಕೃತಿ ಮೀರಿದ ಮನುಷ್ಯರ ವಿಕೃತಿ ವಿಜೃಂಭಿಸಿದೆ.

ಬತ್ತಿತು ಅನ್ನ ಹೊತ್ತಿತು ಚಿನ್ನ
ಚಂಚಲ ಲಕ್ಷ್ಮಿಯ ಕಟಾಕ್ಷದನ್ನ
ಹುಟ್ಟಿದ ಕೂಡಲೇ ಹಾರಿತೋ ಅಣ್ಣ[೭೯]

ಚಿನ್ನ ಸಿರಿವಂತಿಕೆಗೂ, ಅನ್ನ ಬಡತನಕ್ಕೂ ಇಲ್ಲಿ ಸಂಕೇತ. ಚಿನ್ನದ ಅಮೂಲ್ಯತೆ ಅನ್ನದ ಮುಂದೆ ನಿಲ್ಲಲಾರದು. ಜೀವಕ್ಕೆ ಅನ್ನ ಅನಿವಾರ್ಯ. ಅನ್ನಕ್ಕೆ ಪ್ರಾಮುಖ್ಯತೆ ಬರುವುದು ಅದು ಇಲ್ಲದಾದಾಗ. ಅದು ಅಥವಾ ಅವರು ನಮ್ಮಿಂದ ದೂರವಾದಾಗ. ಚಿನ್ನವನ್ನು ತಿನ್ನಲಾಗುವುದಿಲ್ಲವೆಂಬುದನ್ನು ಹಲವು ದೃಷ್ಟಾಂತಗಳ ಮೂಲಕ ವಿಶದಪಡಿಸಿದ್ದಾರೆ.

ಅನ್ನ ಅನ್ನ ಪ್ರಾಣದ ಕೂಗು
ಪ್ರಳಯ ಔತಣ ಹಾಗೂ ಹೀಗೂ
ಈ ಹಸಿವೆಯ ಕೊಲ್ಲುವ ಸುತ್ರಾಣ
ಎಲ್ಲಿದೆ? ಎಲ್ಲಿದೆ ಬಿಲ್ಲೂ ಬಾಣ?
ಚಿನ್ನದ ಸೆರೆಯನು ಮೊದಲೇ ಬಿಡಿಸಿ!

ಅನ್ನ ಕಲ್ಪವೃಕ್ಷದ ಚಿಗುರಿಡಿಸಿ
ಅಲ್ಲಿಯವರೆಗೂ ಅನ್ನ, ಅನ್ನ
ಒಂದೇ ಹಾಡು ಕೇಳಲೇ ಚಿನ್ನ[೭೦]

"ಮನುಷ್ಯನ ದುರಾಸೆಯ ಸಂಕೇತವಾಗಿ ಬಳಕೆಯಾಗುವ ಚಿನ್ನದ ಜೊತೆ ಜೊತೆಗೆ ಅನ್ನದ ಬೆಲೆ ಗಗನಕ್ಕೇರಿದುದರ ದೃಢ ವಾಸ್ತವದ ದುಃಸ್ಥಿತಿಯನ್ನು ಹೇಳುತ್ತದೆ. ಎಲ್ಲಾ ಜೀವಿಗಳ ಮೂಲಭೂತ ಅವಶ್ಯಕತೆಯಾದ ಅನ್ನ, ಚಿನ್ನವಾದುದು ಮಾನವ ಸಮಾಜದ ದುರಂತ".[೭೧]

ದುಡಿದವರ ಉಸಿರಿಗೆ ದಣಿವಿಲ್ಲ
ಕೊನೆಗೂ ತಣಿವಿಲ್ಲ
ಹಸಿವೆಯ ಕೂಗಿನ ಕಹಳೆಯ ಕೇಳಿ
ಜೀವವು ನಡುಗುವುದು.[೭೨]

ಈ ಮೇಲಿನ ಸಾಲುಗಳು ಹಸಿವಿನ ಕೂಗಿನ ಕಹಳೆಯನ್ನು ಕೂಗುತ್ತವೆ. ದುಡಿವ ಶ್ರಮಜೀವಿ ವರ್ಗಕ್ಕೆ ದುಡಿಮೆಯಿಂದ ಮುಕ್ತಿಯಿಲ್ಲ. ಆದರೆ ಹೀಗೆ ದುಡಿದ ಸಂಪತ್ತೆಲ್ಲವೂ ಸಿರಿವಂತರ ಪಾಲು. ಹಸಿದ ಮಕ್ಕಳ ಬಾಡಿದ ಮೊಗದಂತೆ ಬರದ ಭೂಮಿ ಇದೆ. ಸಾವು ಪ್ರಿಯವೆನಿಸುವಷ್ಟು ಬದುಕು ಬೇಸರ ತರಿಸುತ್ತದೆ.

ಸರ್ವರಿಗೂ ಅನ್ನ ದೊರೆಯುವಂತಾಗಬೇಕು. ಮುಖ್ಯವಾಗಿ ಅನ್ನ ಬೆಳೆಯುವ ನಾಡಿಗೇ ಅನ್ನ ಸಂತರ್ಪಣೆಗೈವ, ಭಾರತದ ಬೆನ್ನೆಲುಬಾದ ಒಕ್ಕಲು ಮಕ್ಕಳಿಗೆ ಮೊದಲು ಅನ್ನ ಲಭ್ಯವಾಗಬೇಕು. ಇದು ಮಾತ್ರ ಧರ್ಮ, ಇನ್ನುಳಿದುದು ಕವಿಯ ದೃಷ್ಟಿಯಲ್ಲಿ ಅಧರ್ಮ. ಬೇಂದ್ರೆ ಅನ್ನಕ್ಕೆ ಬಹಳಷ್ಟು ಮಹತ್ವ ಕೊಟ್ಟಿರುವುದು ಗಮನಿಸಬೇಕಾದ ಸಂಗತಿ. ಅನ್ನ ಪ್ರತಿಯೊಂದು ಜೀವಿಯ ಮೂಲಭೂತ ಅವಶ್ಯಕತೆ. ಭಾರತದಂಥ ನಾಡಿನಲ್ಲಿ ಈ ಅನ್ನದ ಸಮಾನ ಹಂಚಿಕೆಯಾಗಬೇಕು. ಬಡವ-ಸಿರಿವಂತ, ಇಲ್ಲದವ-ಉಳ್ಳವರೆಂಬ ಭೇದಭಾವ ನಶಿಸಬೇಕೆಂಬ ಆಶಯ ಬೇಂದ್ರೆಯವರದ್ದು.

ದಿನನಿತ್ಯದ ಅನ್ನಕ್ಕಾಗಿ ಕಲೆಯನ್ನು ಆಧಾರ ಮಾಡಿಕೊಂಡು ಬದುಕುವವರು ಬಹಳ ಮಂದಿ ಇದ್ದಾರೆ. ಅಂದಿನ ದುಡಿಮೆ ಅಂದಿನ ಅನ್ನಕ್ಕಾಗಿ. ಉಳಿತಾಯದ ಪ್ರಶ್ನೆ ಬಾರದು. ಅಂದೇನಾದರು ಪ್ರದರ್ಶನವಿಲ್ಲದಿದ್ದರೆ ಅಂದು ಉಪವಾಸವೇ ಗತಿ. ಇಂಥವರು ಪ್ರತಿದಿನ ಸಾವು ಬದುಕಿನೊಡನೆ ಅತ್ಯಂತ ತೀವ್ರ ಹೋರಾಟ ಮಾಡುವವರಾಗಿರುತ್ತಾರೆ. ಉಳ್ಳವರ ಜೀವನದ ಉತ್ತಮ ಸ್ಥಿತಿ ಮತ್ತು ಇಲ್ಲದವರ ಜೀವನದ ದೈನ್ಯ ಸ್ಥಿತಿ ಎಂಬುದು ಬೇಂದ್ರೆಯವರಿಗೆ ಚೆನ್ನಾಗಿ ಗೊತ್ತು. ಬಡತನ ಮಹಾಶಾಪ. ಅಂತೆಯೇ ಅಸ್ಪೃಶ್ಯತೆಯೂ. ಈ ಎರಡೂ ಕೈ ಜೋಡಿಸಿದರೆ ಅಂಥವರ ಬದುಕು ನರಕ. ಇವುಗಳ ಮುಲೋಚ್ಚಾಟನೆ ಮಾಡಬೇಕು. ಅಸ್ಪೃಶ್ಯರ ಉದ್ಧಾರಕ್ಕಿಂತ ಅಸ್ಪೃಶ್ಯತೆಯ ಮೂಲ ಬೇರುಗಳನ್ನು ಕಿತ್ತೆಸೆಯಬೇಕೆಂದ ಗಾಂಧಿ, ಬಡವರ ಉದ್ಧಾರಕ್ಕಿಂತ ಬಡತನದ ಮೂಲ ಬೇರುಗಳನ್ನು ಕಿತ್ತೊಗೆಯಬೇಕೆಂದ ಬೇಂದ್ರೆ, ಇಬ್ಬರೂ ಇತರರಿಗಿಂತ ಭಿನ್ನವಾಗಿ ಕಾಣುತ್ತಾರೆ.

ಕುವೆಂಪು ಪ್ರಕಾರ ಹಸಿವು

೨೦ನೆಯ ಶತಮಾನದ ದಾರ್ಶನಿಕ ಕವಿ ಕುವೆಂಪು ಅವರು ಬಡವರ, ಹಸಿದವರ, ಶೋಷಿತರ ಪರವಾಗಿ, ಕೆಳವರ್ಗದವರ ಧ್ವನಿಯಾಗಿ ಯಾವ ನಿಲುವು ತಳೆದಿದ್ದರು ಎಂಬುದನ್ನು ಅವರ ಸಾಹಿತ್ಯಾವಲೋಕನದಿಂದಲೇ ತಿಳಿಯುತ್ತದೆ. ಕುವೆಂಪು ಸಾಮಾಜಿಕ ಕಳಕಳಿಯುಳ್ಳ ನವೋದಯ ಕವಿ ಎಂಬುದರಲ್ಲಿ ಎರಡು ಮಾತಿಲ್ಲ. 'ಮಹಾಛಂದಸ್ಸು', 'ಪಕ್ಷಿಕಾಶಿ' ಮೊದಲಾದ ಪಾರಿಭಾಷಿಕ ಪದಗಳನ್ನು ಕನ್ನಡಕ್ಕೆ ಕೊಟ್ಟ ಕುವೆಂಪು ಅವರ ಅರ್ಥಪೂರ್ಣ ಕೊಡುಗೆ 'ಶ್ರೀಸಾಮಾನ್ಯ'. 'ಶ್ರೀ'ಯನ್ನು ಸಾಮಾನ್ಯವಾಗಿ ಗೌರವಸೂಚಕವಾಗಿ ಸಿರಿವಂತರಿಗೆ, ಸಮಾಜದ ಮೇಲುವರ್ಗದಾರಿಗೆ ಬಳಸುವುದು ರೂಢಿ. ಆದರೆ ಮಾನವ ಸಮಾನತೆಯ ಬಗೆಗೆ ಅಹರ್ನಿಶಿ ಆಲೋಚನೆ ನಡೆಸಿದ ಕುವೆಂಪು, 'ಶ್ರೀ'ಯನ್ನು ಸಾಮಾನ್ಯನಿಗೆ ಸೇರಿಸಿ 'ಶ್ರೀಸಾಮಾನ್ಯ' ಎಂಬ ಪದವಿ ಕೊಟ್ಟು ಮಾನ್ಯ ಮಾಡಿದರು. ಕವಿ ಕುವೆಂಪು ಶತಶತಮಾನಗಳಿಂದ ಮೂಕನಾಗಿದ್ದವನಿಗೆ ಮಾತು ಕೊಟ್ಟು ನೆಲೆ-ಬೆಲೆ ದೊರಕಿಸಿದರು. ಪ್ರತಿಯೊಂದನ್ನೂ ಮಾನವೀಯ ನೆಲೆಯಲ್ಲಿ ನೋಡುವ ಕವಿ ಕುವೆಂಪು ಎಂಬುದು ಗಮನಾರ್ಹವಾದುದು.

ಕುವೆಂಪು ಸಮಕಾಲೀನ ಪರಿಸ್ಥಿತಿಯೊಡನೆ ತೀವ್ರ ಪ್ರತಿಕ್ರಿಯೆಗೆ ತೊಡಗುತ್ತಿದ್ದರು. "ಬಂಡವಾಳದ ಜಿಗಣೆಗಳಿಂದ ನೆತ್ತರು ಹೀರಿಸಿಕೊಂಡು ಬಿಳಿಚಿ ಹೋಗಿರುವ ಸ್ವತಂತ್ರ ದೇಶಗಳು, ಕೆಲಸ ಮಾಡುವವರಿಗೆ ಹೊಟ್ಟೆಗೆ ಹಿಟ್ಟು, ಮೈಗೆ ಬಟ್ಟೆ ದೊರೆಯುವಂತೆ ಮಾಡುವ ಸರಕಾರದ ಸ್ಥಾಪನೆಗೆ ಹಲ್ಲು ಕಚ್ಚಿಕೊಂಡು ಹೋರಾಡುತ್ತಿವೆ. ಸ್ವಾತಂತ್ರ್ಯವನ್ನು ಕಳೆದುಕೊಂಡು ಪ್ರಬಲವಾದ ಪರಕೀಯ ಪದಾಘಾತಕ್ಕೆ ಸಿಕ್ಕಿ ನರಳುತ್ತಿರುವ ದೇಶಗಳು ಸ್ವಾತಂತ್ರ್ಯ ಸಂಪಾದನೆಗಾಗಿ ಹಗಲಿರುಳು ಹಾರೈಸಿ ದುಡಿಯುತ್ತಿವೆ"[೨೩] ಎಂಬಲ್ಲಿ ಕುವೆಂಪು ಅವರು ಹೊರ-ಒಳ ಶುದ್ಧಿಯ ಮಾತನಾಡುವುದು ಬಹು ಮುಖ್ಯ. ಕವಿಯಾದವನಿಗೆ ಸಾಮಾಜಿಕ ಜವಾಬ್ದಾರಿಯು ತುರ್ತು ಅಗತ್ಯ, ಅನಿವಾರ್ಯ. ಜನಶಕ್ತಿಯ ಪರವಾಗಿ ಅವನು ದುಡಿಯಬೇಕು.

ರೈತರು ಭಾರತದ ಬೆನ್ನೆಲುಬು ಇದ್ದ ಹಾಗೆ. ಅದರಲ್ಲೂ ಭಾರತ ಕೃಷಿ ಪ್ರಧಾನ ದೇಶ. ಹಳ್ಳಿಗಳನ್ನೇ ಅಧಿಕವಾಗಿ ಹೊಂದಿರುವ ನಾಡು ನಮ್ಮದು. ಶೇಕಡಾ ೭೫ರಷ್ಟು ಜನರು ಇಂದಿಗೂ ಹಳ್ಳಿಗಳಲ್ಲಿ ವಾಸವಾಗಿರುವವರು. ಹಳ್ಳಿಗಳ ಉದ್ಧಾರವಾಗದೆ ಭಾರತದ ಅಭಿವೃದ್ಧಿ ಅಸಾಧ್ಯ. ಮನುಷ್ಯನಿಗೆ ಬದುಕಲು ಆಹಾರ ಅಗತ್ಯ. ದೇಶದ ಸಮಸ್ತ ಜನರಿಗೆ ಬೇಕಾಗುವ ಅನ್ನ ನೀಡುವ ಅನ್ನದಾತ ರೈತ. ಇಂಥ ಆಧಾರ ಸ್ತಂಭ ಸಾಕಷ್ಟು ಬಲಯುತವಾಗಬೇಕಾದುದು. ಅತೀ ಅಗತ್ಯ. ಆದರೆ ನಮ್ಮ ರೈತರು ಸಾಮಾನ್ಯವಾಗಿ ಅಂದಿನಿಂದಲೂ ಜಮೀನ್ದಾರರಿಂದ, ಬಂಡವಾಳಶಾಹಿಗಳಿಂದ, ರಾಜರಿಂದ, ಮೇಲ್ವರ್ಗದವರಿಂದ ನಿರಂತರವಾಗಿ ಶೋಷಣೆಗೊಳಗಾಗುತ್ತಲೇ ಬಂದಿದ್ದಾರೆ.

ನಾಗರಿಕತೆಯಾಗಲೀ, ಏನೇ ಆಗಲಿ, ಅದು ಸಮೃದ್ಧವಾಗಿ ನೂರಾರು ಕಾಲ ಬಾಳಬೇಕಾದ್ರೆ ಅದಕ್ಕೆ ಅನ್ನವೆಂಬ ಅಮೃತವನೀಯುವ ರೈತನ ಅವಶ್ಯಕತೆ ಅನಿವಾರ್ಯ. 'ಯೋಗಿ' ಸಾಮಾನ್ಯವಾಗಿ ಸ್ವಾರ್ಥರಹಿತವಾಗಿ ಜಗದೇಳ್ಗೆಗೆ ದುಡಿಯುವ ಆತ್ಮೋನ್ನತಿ ಪಡೆದ ವ್ಯಕ್ತಿ. ಕುವೆಂಪು ರೈತರನ್ನು 'ನೇಗಿಲಯೋಗಿ' ಎಂದು ಕರೆದಿರುವುದು ಬಹಳ ಔಚಿತ್ಯಪೂರ್ಣವಾಗಿದೆ.

"ರಾಜ ಸಾಮ್ರಾಜ್ಯಗಳ ಏಳುಬೀಳಿನ ನಡುವೆ ಸದ್ದಿಲ್ಲದೆ ತನ್ನ ದುಡಿಮೆಯಿಂದ ಲೋಕಕ್ಕೆ ಅನ್ನವನ್ನು ಬೆಳೆಯುವ ರೈತನ ಕಾಯಕ, ಯಾವ ರೀತಿಯಲ್ಲೂ ಯೋಗಿಯಾದವನು ಕೈಗೊಳ್ಳುವ ಲೋಕ ಕಲ್ಯಾಣಕರವಾದ ತಪಸ್ಸಿಗೆ ಕಡಿಮೆಯಾದುದೇನಲ್ಲ ಎನ್ನುವುದು ಕುವೆಂಪು ಅವರ ನಿಲುವು. ಕುವೆಂಪು ಅವರ ಸಾಮಾಜಿಕ ವೈಚಾರಿಕತೆ ಈ ಬಗೆಯ ಸಾಮಾನ್ಯತೆಯನ್ನು ಕುರಿತ ಗೌರವದಿಂದ ಪ್ರಾರಂಭವಾಗುತ್ತದೆ. ರೈತನನ್ನು 'ನೇಗಿಲ ಯೋಗಿ' ಎಂದು ಕರೆದು ಗೌರವಿಸಿದ ಮೊದಲ ಕವಿ ಕುವೆಂಪು. ಹಾಗೆಯೇ ಸ್ವಾತಂತ್ರ್ಯೋತ್ತರ ಭಾರತದ ಸಾಮಾನ್ಯ ಜನಸಮುದಾಯವನ್ನು ಶ್ರೀಸಾಮಾನ್ಯರೆಂದು ಹೊಸ ಹೆಸರಿನಿಂದ ಕರೆದು ಅವರೊಂದಿಗೆ ತಮ್ಮನ್ನು ಸಮೀಕರಿಸಿಕೊಂಡವರು ಕುವೆಂಪು. ಈ ನೇಗಿಲಯೋಗಿಯಾದ ರೈತ ಮತ್ತು ಈ ದೇಶದ ಅಸಂಖ್ಯಾತ ಶ್ರೀಸಾಮಾನ್ಯರು ಶತಶತಮಾನಗಳ ಕಾಲ ಶೋಷಣೆಗೆ ಗುರಿಯಾದ ಪರಿಯನ್ನು ಶೂದ್ರವರ್ಗದ ರೈತನ ಮನೆತನದಿಂದ ಬಂದ ಕುವೆಂಪು ತಮ್ಮ ಅನೇಕ ಕವಿತೆಗಳಲ್ಲಿ ಅಭಿವ್ಯಕ್ತಿಸಿದ್ದಾರೆಂಬುದು ಗಮನಿಸಬೇಕಾದ ಸಂಗತಿಯಾಗಿದೆ"[೭೪] ಎಂಬ ಜಿ. ಎಸ್. ಶಿವರುದ್ರಪ್ಪನವರ ಮಾತು ಗಮನಾರ್ಹವಾದುದು.

ಹೀಗೆ ರೈತ ಪರವಾದ ಕವನಗಳಲ್ಲಿ ಕುವೆಂಪು ತಮ್ಮ ಅಂತಃಸತ್ವವನ್ನು ತೋರ್ಪಡಿಸಿದ್ದಾರೆ. ಅವರ ಕಾವ್ಯದಲ್ಲಿ ಬರುವ ರೈತ ಸಾಮಾನ್ಯ ಜೀವಿ. ಬದುಕಿಗಾಗಿ ಬಹಳ ಕಷ್ಟ ಪಡುತ್ತಿರುವವನು. ಬಡತನದಲ್ಲಿ ನರಳುತ್ತಿರುವವನು. ಆದುದರಿಂದ ಇವರ ಬದುಕು ಸುಧಾರಿಸಬೇಕೆಂಬುದು ಕವಿಯ ಪ್ರಧಾನ ಆಶಯ. ಭಾರತ ಬೆಳೆಯಬೇಕಾದರೆ ಹಳ್ಳಿಗಳ ಏಳ್ಗೆ ಅವಶ್ಯಕ. ಹಳ್ಳಿಗಳು ಅಭಿವೃದ್ಧಿಗೆ ಸ್ಪಂದಿಸಬೇಕಾದರೆ ರೈತರೆಲ್ಲರ ಬದುಕು ಹಸನಾಗಬೇಕು. ಕುವೆಂಪು ಅವರ 'ನೇಗಿಲಯೋಗಿ' ಅಂತಹ ಬಾಳಿಗಾಗಿ ಸದಾ ತುಡಿಯುತ್ತಿರುವ ಜೀವಂತ ಜೀವಿ. ಹಾಗೆಯೇ ಉಳ್ಳವ–ಇಲ್ಲದವ, ಬಲ್ಲಿದ–ಬಡವರ ನಡುವಣ ಅಂತರ ಬಹಳ ಕಾಲದಿಂದಲೂ ಇದೆ. ಇದು ಸಾಮಾಜಿಕ ಸುವ್ಯವಸ್ಥೆಗೆ ಭಂಗ ತರುವುದು. ಇಂಥ ಸಂಕಷ್ಟ ಸ್ಥಿತಿಯಲ್ಲಿ ಪ್ರಜ್ಞಾವಂತ ಕವಿ ಮಾಡಬೇಕಾದ ಕೆಲಸವನ್ನು ಕುವೆಂಪು 'ಜಡವಾದಿ' ಕವಿತೆಯಲ್ಲಿ ಹೇಳಿದ್ದಾರೆ.[೭೫] ಆ ಮೂಲಕ ಶತಶತಮಾನಗಳಿಂದ ಮೇಲುವರ್ಗದವರಿಂದ ಆಗುತ್ತಿರುವ ಶೋಷಣೆ ನಿಂತು ಬಡಜನರು ಸೆರೆಮನೆಯಿಂದ ಹೊರಬಂದು ಸ್ವತಂತ್ರವಾಗಿ ಬದುಕುವಂತಾಗಬೇಕೆಂಬ ತುಡಿತವಿದೆ. ಶತಶತಮಾನಗಳಿಂದ ಹಸಿವು, ದುಃಖ, ದುಮ್ಮಾನ, ಶೋಷಣೆ ಮೊದಲಾದವುಗಳಿಂದ ಬಳಲಿ ಬೆಂಡಾದ ಬಡವರು ಅಡ್ಡ ಗೋಡೆಗಳನ್ನು ದಾಟಿ 'ನಡೆ ಮುಂದೆ' ಎಂದು ಕರೆ ಇತ್ತಿದ್ದಾರೆ.

ಲೋಕದಲ್ಲಿ ಬಡವ–ಸಿರಿವಂತರ ನಡುವೆ ಬೃಹದಂತರವಿದೆ. ಇದು ಕಡಿಮೆಯಾಗದೆ ಬೆಳೆಯುತ್ತಾ ಹೋಗಿ ಸಮಾಜ ವಿಷಮಸ್ಥಿತಿಗೆ ತಲುಪಿದಾಗ ಇಂಥ ಸಮಾಜದ ಉದ್ಧಾರಕ್ಕೆ ಕಾಲಪುರುಷರು ಅವತಾರ ಎತ್ತಿ ಬರುತ್ತಾರೆ. ಇಂಥ ಹಿನ್ನೆಲೆಯಲ್ಲೇ 'ಕಲ್ಕಿ' ಕವನ ರೂಪುಗೊಂಡಿದೆ.

ಧನಿಕರ ಮನೆಗಳು ಒಂದೆಡೆ ನಿಂತಿವೆ
ಬಡವರ ಗುಡಿಸಲು ಒಂದೆಡೆ ನಿಂತಿವೆ
ಜ್ಯೋತಿಯ ಮಣಿದೀಪಗಳಲ್ಲಿ
ಕತ್ತಲು, ಕಣ್ಗತ್ತಲು ಇಲ್ಲಿ

ಹಾಡಿನ ಮಣ್ಣನಿಯತ್ತ
ಗೋಳಿನ ನೀಳ್ದನಿಯತ್ತ
ಕೂಳನು ಹೆಮ್ಮೆಗೆ ಬಿಸುಡುವರಲ್ಲಿ
ಆ ಕಡೆ ಉದ್ಯಾನ
ಈ ಕಡೆ ಸ್ಮಶಾನ
ಪೀತಾಂಬರಗಳ ಹೊದೆಯುವರಲ್ಲಿ
ಕೌಪೀನಕೆ ಚಿಂದಿಯು ಸಿಗದಿಲ್ಲಿ[೭]

'ಬಡವರ ಹಸಿವಿಗೆ ಮೌಢ್ಯವ ಕೊಟ್ಟು' ಬಡತನದ ಕಾರಣಗಳನ್ನು ಹೇಳುವ ಈ ಸಾಲು ಬಡತನದ ಪರಿಣಾಮ ಅಂದರೆ ಸಾಮಾಜಿಕ ಅಸಮಾನತೆಗೆ ಕೊಂಡಿಯಾಗಿ ನಿಂತಿದೆ. ಬಡವರ ಬಡಬಾಗ್ನಿಗೆ ಶೋಷಕರು, ಶೋಷಿತರು, ಹುಡುಗರು, ಮುದುಕರು, ಕುಂಟರು, ಕಿವುಡರು, ಸಿರಿವಂತರು ಎಂಬ ಭೇದಭಾವವಿಲ್ಲ. ಅದು ಎಲ್ಲರನ್ನೂ ಆಹುತಿಯಾಗಿ ತೆಗೆದುಕೊಳ್ಳುತ್ತದೆ. ಇದರಿಂದ ಹರಿಯಿತು ರಕ್ತದ ಜಲಪಾತ, ಗಗನವು ರಕ್ತ, ಭೂಮಿಯು ರಕ್ತ, ಎಲ್ಲಿ ನೋಡಲಿ ಅಲ್ಲೆಲ್ಲಾ ರಕ್ತ, ಶ್ರೀಮಂತರು, ಸುಂದರಿಯರ ದೇಹ, ಪಾಪದ ದೇಹ, ಪುಣ್ಯದ ದೇಹ, ಗುಡಿಗೋಪುರ, ದೇವರು, ಧರ್ಮ ಎಲ್ಲವೂ ಈ ರಕ್ತ ಜಲಪಾತದಲ್ಲಿ ತುಂಬಿಕೊಂಡಿದೆ. ಎಲ್ಲವೂ ಸರ್ವನಾಶವಾಗಿದೆ. ಶೋಷಣೆಯಿಂದ ನೊಂದ ಜನರು ಉಳ್ಳವರ ಆಪೋಶನ ತೆಗೆದುಕೊಳ್ಳುವುದು ಸರಿ. ಆದರೆ ಏನೂ ಅರಿಯದ ಮಕ್ಕಳು, ಕೈಲಾಗದ ಬಾಣಂತಿಯರನ್ನೂ ಬಲಿಯಾಗಿ ಸ್ವೀಕರಿಸುವುದು ಹಸಿದವರ ಆಕ್ರೋಶ ಯಾರನ್ನೂ ಬಿಡುವುದಿಲ್ಲ ಎಂಬುದನ್ನು ಧ್ವನಿಸುತ್ತದೆ. 'ಅಸ್ಥಿಪಂಜರದ ಅಶ್ವವನೇರಿ' ಧಾವಿಸಿ ಬರುವ ಕಲ್ಕಿಯು ಬಡವರ ಪ್ರತಿನಿಧಿಯಾಗಿ ಶತಶತಮಾನಗಳಿಂದ ತನ್ನವರಿಗಾದ ಶೋಷಣೆಯಿಂದ ನೊಂದು ಪ್ರತೀಕಾರವಾಗಿ ರಕ್ತದಾಹವನ್ನಿಟ್ಟುಕೊಂಡು ಮುಂಬರಿಯುತ್ತಾನೆ. 'ಹಸಿವೇ, ದಾಹ' ಎನ್ನುತ್ತಾ ಚೀರುತ್ತಾ ಧಾವಿಸುತ್ತಾನೆ.

ರಕ್ತವ ಮೊಗೆಮೊಗೆದು ಕುಡಿದರೂ, ತಲೆಗಳ ತೆಗೆತೆಗೆದು ತಿಂದರೂ ಕಲ್ಕಿಯ ದಾಹ ಮಾತ್ರ ಇಂಗಿಲ್ಲ. ಹೆಣಗಳು ಮುಗಿದಿವೆ. ದಾಹ ಮಾತ್ರ ಹಾಗೆ ಇದೆ. ಅರ್ಥಾತ್ ಬಡವರ ಹಸಿವೆಯ ಬೇಗೆಯ ಪ್ರತಿರೂಪವಿದು. "ಶೋಷಿತರ ಶತಶತಮಾನದ ಹಸಿವನ್ನು ಪ್ರತಿಮಿಸಲು ಕಲ್ಕಿಯ ದಾಹ-ಹಸಿವೆಯ ವಿವರಗಳು ಇಲ್ಲಿ ಬಂದಿವೆ. ಇದು ದೇವನೂರ ಮಹಾದೇವರ 'ಒಡಲಾಳ'ದ ಸಾಕವ್ವನ ಕುಟುಂಬದ ಕಡಲೆಕಾಯಿ ಯಜ್ಞದ ಹಸಿವಿನಲ್ಲಿ ಮತ್ತೆ ಪುನರ್‌ಸೃಷ್ಟಿಯಾಗುವುದನ್ನು ಗಮನಿಸಿದಾಗ 'ವಾಚಾಳಿ' ಎನ್ನಿಸುವ ವಿವರಗಳು ಕುವೆಂಪು ಅವರ ದರ್ಶನವನ್ನು ಸೂಚಿಸುವ ಅರ್ಥಪೂರ್ಣತೆಯನ್ನು ಪಡೆದುಕೊಂಡು ಬಿಡುತ್ತವೆ"[೭೭] ಹಸಿವಿನಿಂದ ನೊಂದ ಬಡವನೇ ಕಲಿಯುಗದಂತ್ಯದ ಕವಿ' ಎಂದು ಕವಿ ಅರ್ಥಪೂರ್ಣವಾಗಿ ಧ್ವನಿಯುಕ್ತವಾಗಿ ಸಾರಿರುವರು.

ಸಮಾಜದಲ್ಲಿ ಸಮಾನತೆಯನ್ನು ತರುವುದು ಕಮ್ಯುನಿಸ್ಟರ ಪ್ರಧಾನೋದ್ದೇಶವಾಗಿತ್ತು. ಬಂಡವಾಳಶಾಹಿ ಪ್ರಭುತ್ವದ ತೀರಾ ವಿರೋಧಿಗಳಾಗಿದ್ದ ಕಮ್ಯುನಿಸ್ಟರು ಜಗತ್ತಿನಾದ್ಯಂತ ತಮ್ಮ ತತ್ವ ಪ್ರಚಾರ ಮಾಡಿ ಸಮಾನತೆಯನ್ನು ಎಲ್ಲೆಡೆ ಬಿತ್ತುತ್ತಿದ್ದರು. "ನನ್ನ ಜೀವನದೃಷ್ಟಿ ಒಂದು ರೀತಿಯಲ್ಲಿ

ಸಮಾನತಾವಾದಿಯ ದೃಷ್ಟಿ. ನೀವು ಸಮಾಜವಾದಿ, ಸಮತಾವಾದಿ ಎಂದೆಲ್ಲಾ ವ್ಯಾಖ್ಯಾನ ಮಾಡಬಹುದು. ಆದರೆ ನಾನು ಸಮಾನತಾವಾದಿ"[೭೮] ಎಂಬ ಕುವೆಂಪುರವರ ಮಾತನ್ನಿಲ್ಲಿ ನೆನೆಯಬಹುದು. ರಷ್ಯಾ ಕಮುನಿಸ್ಟರ ತಾಯಿ ಭೂಮಿಯಂತಾಗಿತ್ತು. ಬಡವರ ಏಳಿಗೆಗಾಗಿ ದುಡಿವವರಿಗೆ ನಾಯಕಸ್ಥಾನ ಹೊಂದಿತ್ತು. ಭಾರತಕ್ಕೂ ಸ್ವಾತಂತ್ರ್ಯಪೂರ್ವದಲ್ಲಿಯೇ ಕಮ್ಯುನಿಸ್ಟರ ಆಗಮನವಾಗಿತ್ತು.

ಕುವೆಂಪುರವರು ಹೇಳಿರುವಂತೆ, "ಸ್ವತಂತ್ರವಾದ ದೇಶದಲ್ಲಿ ಯಾವ ವೃತ್ತಿಯೂ ಮೇಲಲ್ಲ, ಯಾವುದೂ ಕೀಳಲ್ಲ. ಈ ವಿಚಾರದಲ್ಲಿ ಸೋವಿಯತ್ ಯೂನಿಯನ್ ನಮಗೆ ಮಾದರಿಯಾಗಬೇಕು. ಅಲ್ಲಿ ಮಹಾ ಕಾದಂಬರಿಕಾರನಿಗೆ, ಮಹಾಕವಿಗೆ, ಮಹಾ ಸಂಶೋಧಕನಿಗೆ, ಮಹಾ ಜಿಜ್ಞಾಸುವಿಗೆ ರಾಷ್ಟ್ರೀಯ ಬಹುಮಾನವನ್ನು ಕೊಡುವಂತೆಯೇ ಕೋಳಿ ಸಾಕುವವನಿಗೆ, ಜೋಳ ಬೆಳೆಯುವವನಿಗೆ, ಹಸು ಕಾಯುವವನಿಗೆ ಅದೇ ಬಹುಮಾನ ಕೊಡುತ್ತಾರೆ. ಯಾವ ಕೆಲಸದ ಬಗೆಗೂ ಕೀಳು ಭಾವನೆಯಿಲ್ಲ. ಕಾಯಕದಲ್ಲಿ ಸಮಾನತೆ ಮತ್ತು ಗೌರವಗಳನ್ನು ಅವರು ಕಂಡುಕೊಂಡಿದ್ದಾರೆ. ನಮ್ಮ ದೇಶದಲ್ಲಿ ಆ ದೃಷ್ಟಿ ಬೆಳೆಯಲು ಬಹಳ ಕಾಲ ಬೇಕಾಗುತ್ತದೇನೋ? ಅದು ಬೆಳೆಯದಿದ್ದರೆ ದೇಶದ ಕ್ಷೇಮ ಸಾಧ್ಯವಾಗದು"[೭೯] ಕಮ್ಯುನಿಸ್ಟರ ಸಮಾಜದ ಸಮತೆಯ ಬಗೆಗಿನ ಕಾಳಜಿಯನ್ನು ಮೆಚ್ಚುತ್ತಿದ್ದ ಕವಿ ಅಂಥ ಸಮಾಜೋದ್ಧಾರಕ ಕಾರ್ಯಕ್ರಮವನ್ನು ಸ್ವಾಗತಿಸುತ್ತಿದ್ದರು. ಕುವೆಂಪು ಮತ್ತೊಂದು ಅದ್ಭುತ ಲೋಕವನ್ನು ತೆರೆದಿಟ್ಟಿದ್ದಾರೆ. ಆ ಲೋಕದಲ್ಲಿ ಶ್ರೀಮಂತರಿರಲಿಲ್ಲ, ಅರಸರಿರಲಿಲ್ಲ, ಮೇಲು-ಕೀಳುಗಳಿರಲಿಲ್ಲ, ಕೆಲಸವಿಲ್ಲದ ಸೋಮಾರಿಗೆ ಅಲ್ಲಿ ಕೂಳೇ ಸಿಗುತ್ತಿರಲಿಲ್ಲ. ಶ್ರಮಿಕರಿಗೇ ಶ್ರಮದ ಪ್ರತಿಫಲ ದೊರೆಯುತ್ತಿತ್ತು.

ಪು. ತಿ. ನ. ಪ್ರಕಾರ ಹಸಿವು

ಗಾಂಧೀಜಿಯವರ ದಟ್ಟವಾದ ಪ್ರಭಾವ ಮಡಿವಂತಿಕೆಯಿಂದ ಕೂಡಿದ್ದ ಪು. ತಿ. ನ. ಅವರಲ್ಲಿ ವಿಚಾರಧಾರೆಯ ದೀಪ ಹಚ್ಚಿತು. ತಕ್ಕ ಮಟ್ಟಿನ ಬದಲಾವಣೆಯೂ ಆಯಿತು. ಪು. ತಿ. ನ. ಬಹಳ ಕಾಲದವರೆಗೂ ತಮ್ಮ ಮನೆತನದ ಸಂಪ್ರದಾಯಗಳನ್ನು ಚಾಚೂ ತಪ್ಪದೆ ಮುಂದುವರೆಸಿಕೊಂಡು ಬಂದವರು. ಸಂಪ್ರದಾಯಗಳನ್ನು 'ಬುದ್ಧಿಗೆ ವಿಶ್ರಾಂತಿ ಕೊಡಲು ಇವೆಲ್ಲಾ ಬೇಕು' ಎಂದು ಅವರೇ ಹೇಳುತ್ತಿದ್ದರು. ಇಂಥ ಸಂಪ್ರದಾಯಗಳಲ್ಲಿ ನಂಬಿಕೆ ಇದ್ದರೂ ಜಾತಿ ವ್ಯವಸ್ಥೆಯ ಭೀಕರತೆಯನ್ನು ಅರಿತು ಅದರಿಂದ ದೂರ ಉಳಿದು, ವೈಚಾರಿಕವಾಗಿ ಚಿಂತಿಸುವ ಅವರ ನಿಲುವು ಅವರ ವ್ಯಕ್ತಿತ್ವದ ಬೆಳವಣಿಗೆಯನ್ನು ಸ್ಪಷ್ಟಪಡಿಸುತ್ತದೆ.

ಹಸಿವು, ಬಡತನ, ದಾರಿದ್ರ್ಯದ ಬಗ್ಗೆ ಪು. ತಿ. ನ. ರವರ ದೃಷ್ಟಿಕೋನದ ಅರಿವು ಮೊದಲ ಅಗತ್ಯ. "ದಾರಿದ್ರ್ಯ ಮನುಷ್ಯನ ಪ್ರಥಮ ಮತ್ತು ಪರಮ ಶತ್ರು. ಅದು ಮನುಷ್ಯನ ಸರ್ವ ಅಪರಾಧ ಮತ್ತು ಅತೃಪ್ತಿಗಳಿಗೂ ಕಾರಣ. ದಾರಿದ್ರ್ಯ, ದುಃಖಗಳನ್ನು ಯಾರು ತಾನೇ ಬಯಸುತ್ತಾರೆ?" ಎಂಬ ಪು. ತಿ. ನ. ರವರ ಮಾತನ್ನು ಗೊರೂರು ರಾಮಸ್ವಾಮಿ ಅಯ್ಯಂಗಾರರು[೮೦] ಉಲ್ಲೇಖಿಸಿದ್ದಾರೆ. "ಸರ್ವಶಕ್ತನಾದ ರಾವಣ, ಭೂಮಿಯ ನಾಗರಿಕತೆ, ವೈಜ್ಞಾನಿಕ ವೈಭವ ಇವುಗಳನ್ನೆಲ್ಲಾ ಕೇಳಿ ಮತ್ತೆ ಆಕ್ರಮಿಸಿಕೊಂಡು ಆಳೋಣವೆಂದು ಭೂಮಿಗೆ ಬಂದ. ಇಲ್ಲಿನ ಹಸಿವು, ದಾರಿದ್ರ್ಯ, ಕಾರ್ಪಣ್ಯ, ಅಸಾದಾರ್ಯ ಆಹಾರ ಅಭಾವವನ್ನು ನೋಡಿ ಈ

ದೇಶ ನಮಗೆ ಬೇಡವೆಂದು ಮತ್ತೆ ಅಸುರಲೋಕಕ್ಕೆ ಹೋದ ಎಂದು ಒಂದು ಯಕ್ಷಗಾನ ಪ್ರಬಂಧದಲ್ಲಿ ನರಸಿಂಹಾಚಾರ್ಯರು ಹೇಳಿದ್ದಾರೆ".[೮೧]

ದಾರಿದ್ರ್ಯದ ಬಗೆಗಿನ ಪು. ತಿ. ನ. ಅವರ ನವೀನದೃಷ್ಟಿ ಕ್ರಿಯಾಶೀಲವಾಗಿದೆ. ಬಡತನದ ಭೀಕರ ಪರಿಣಾಮ ಮತ್ತು ಬಡತನ ಕುರಿತ ವಿಡಂಬನೆಯು ಅವರ ಸಾಹಿತ್ಯದಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಬಂದಿದೆ. ಪು. ತಿ. ನ. ಅವರು ಸಮಾಜಕ್ಕೆ ಸ್ಪಂದಿಸುವ ತೀವ್ರತೆಯಲ್ಲಿ ಅವರ ಬದುಕಿನ ಅನುಭವವನ್ನು ಗುರುತಿಸಬಹುದು.

ಕಷ್ಟ ಪರಂಪರೆಯಲ್ಲಿ ಬದುಕಿ ಬಂದ ಗಟ್ಟಿ ಜೀವ ಇವರದು. ಗೊ. ರಾ. ಅಯ್ಯಂಗಾರ್ ಅವರ ಮಾತಿನಲ್ಲಿ ಪು. ತಿ. ನರಸಿಂಹಾಚಾರರ ಬಡತನದ ನೆನಪು ಇದೆ. ಜೊತೆಗೆ ಗೊರೂರರು ಕಷ್ಟದಿಂದ ಬೆಳೆದು ಬಂದ ಪರಿಯನ್ನು ನೋಡಬಹುದು. ಅವರಿಬ್ಬರ ಈ ಬಡತನ ಅವರ ಜೀವನ ದೃಷ್ಟಿಯ ನಿರ್ಧಾರಕ ಅಂಶವಾಗಿದೆ. "ಇಬ್ಬರೂ ಬಡವರಾಗಿದ್ದೆವು. ಒಂದು ದಿನ ಜೊತೆಯಲ್ಲಿದ್ದ ನನ್ನ ತಮ್ಮ ಬಿ. ಎಸ್ಸಿ. ಮಾಡಿದ. ಧಾರವಾಡಕ್ಕೋ, ಬೆಳಗಾಂಗೋ ನೌಕರಿ ಸಂದರ್ಶನಕ್ಕೆ ಹೋಗಬೇಕಾಗಿತ್ತು. ರೈಲು ಛಾರ್ಜಿಗೆ ನರಸಿಂಹಾಚಾರ್ಯರಲ್ಲಿ ತೆಗೆದುಕೊಂಡು ಹೋಗು ಎಂದು ಹೇಳಿ ಕಳಿಸಿದೆ. ಅದು ತಿಂಗಳ ಕೊನೆ, ನರಸಿಂಹಾಚಾರ್ಯರಲ್ಲೂ ಹಣವಿರಲಿಲ್ಲ. ಆದರೆ ನನ್ನ ತಮ್ಮ ಉದ್ಯೋಗದ ಸಂದರ್ಶನಕ್ಕೆ ಹೋಗಬೇಕಾಗಿರುವುದನ್ನು ಕೇಳಿದ ಅವರು, "ಇಲ್ಲಿ ನೋಡು, ನೆನ್ನೆ ಕಂಟೋನ್ಮೆಂಟಿನ ಅಂಗಡಿಯಲ್ಲಿ ಕಾಫಿ ಗ್ರೈಂಡರ್ ತಂದೆ. ಬಿಲ್ ಇಲ್ಲಿದೆ. ಮನೆಯವರು ಬೇಡವೆಂದರೆ ಇವತ್ತಿನೊಳಗೆ ಹಿಂದೆ ಕೊಡುತ್ತೇನೆಂದು ಹೇಳಿದ್ದೆ. ಈ ಬಿಲ್ಲನ್ನೂ, ಗ್ರೈಂಡರನ್ನೂ ತೆಗೆದುಕೊಂಡು ಹೋಗಿ ಅಂಗಡಿಯವನಿಗೆ ಕೊಡು, ಅವನು ಹಣವನ್ನು ಕೊಡುತ್ತಾನೆ. ನಿನ್ನ ಕೆಲಸಕೆ ನೀನು ಹೋಗು" ಎಂದು ಕಳುಹಿಸಿದರು. ನನ್ನ ತಮ್ಮ ಹಾಗೆಯೇ ಮಾಡಿ ಹಣವನ್ನು ತೆಗೆದುಕೊಂಡು ಬಂದ. ನನಗೆ, ಹಣವನ್ನು ಹುಟ್ಟಿಸಿದ ಅವರ ಮಾರ್ಗಕ್ಕಾಗಿ ನಗು, ಪ್ರೀತಿಯಿಂದ ತರಿಸಿದ್ದ ಕಾಫಿ ಮಿಶನನ್ನು ಮಾರಿದ್ದಕ್ಕಾಗಿ ಎದುರಿಸಬೇಕಾದ ಅವರ ಹೆಂಡತಿಯವರ ಕ್ರೋಧ ನೋಟ, ಹೃದಯದ ಅಂತರಾಳದಲ್ಲಿ ಹುದುಗಿರುವ ಕರುಣೆ, ಔದಾರ್ಯ, ಸಹಾಯಕ ಬುದ್ಧಿ ಈ ಮುಪ್ಪರಿಗೊಂಡ ಭಾವಗಳನ್ನು ನೆನೆದು "ಹೇಳುವುದೂ ಕಾವ್ಯ, ಮಾಡುವುದೂ ಕಾವ್ಯ, ಇದು ಸಮರಸ ಯೋಗ' ಎನಿಸಿತು.[೮೨] ಕವಿಯಾಗಲೀ, ಲೇಖಕನಾಗಲೀ, ಸಾಹಿತಿಯಾಗಲೀ ಅವನು ಸಮಾಜದ ಶಿಶು. ಸಮಾಜದ ಆಗು-ಹೋಗುಗಳಿಗೆ ಸ್ಪಂದಿಸುವುದು ಅವನ ಸಹಜ ಮನೋಧರ್ಮ. ಅವನು ಸೌಂದರ್ಯೋಪಾಸಕನಾಗಿರುವಂತೆ, ಸಮಾಜದ ನೋವು-ನಲಿವು, ಸುಖ-ದುಃಖಗಳಿಗೆ ತನ್ನದೇ ರೀತಿಯಲ್ಲಿ ಸ್ಪಂದಿಸುತ್ತಾನೆ. ಈ ಸ್ಪಂದನೆ ಒಬೊಬ್ಬರಲ್ಲೂ ಒಂದೊಂದು ಬಗೆ. ಕುವೆಂಪು, ಬೇಂದ್ರೆ, ಮಾಸ್ತಿಯವರಂತೆ ಪು. ತಿ. ನ. ರವರು ಸಹ ದೇಶದ ದುಸ್ಥಿತಿಯ ಬಗ್ಗೆ, ಉಳ್ಳವರ ದರ್ಪದ ಬಗ್ಗೆ, ಜನರ ದೀನದರಿದ್ರ ಸ್ಥಿತಿಯ ಬಗ್ಗೆ, ಶೋಷಣೆ, ಬಡತನದ ಬಗ್ಗೆ ಕವನಗಳ ಮೂಲಕ ಅಭಿವ್ಯಕ್ತಿ ನೀಡಿದ್ದಾರೆ.

ಪು. ತಿ. ನ. ರವರು ಸಂಸಾರ ಸೌಖ್ಯದಿಂದ ಎಲ್ಲವನ್ನೂ ಗಳಿಸಿದ್ದರು. ಗುಮಾಸ್ತನಾದರೂ, ಬಡತನವಿದ್ದರೂ ಅವರ ಸಂಸಾರಿಕ ಜೀವನ ನೆಮ್ಮದಿಯಿಂದ ಕೂಡಿತ್ತು. ಕೈಗೆ ಬರುತ್ತಿದ್ದ ಹಣ ಕಡಿಮೆ. ದೊಡ್ಡ ಸಂಸಾರದ ಅವಶ್ಯಕತೆ ಪೂರೈಕೆ ಕಡು ಕಷ್ಟ. ಹೆಣ್ಣು ಮಕ್ಕಳು ಏಳು. ಅವರ ಮದುವೆಯಾಗಬೇಕು. ಆದ್ದರಿಂದ ಸಾಲಸೋಲ ಅನಿವಾರ್ಯವಾಗಿತ್ತು. ಇಷ್ಟಾದರೂ ಪು. ತಿ ನ

ಅವರದು ದಿವ್ಯ ನಿರ್ಲಿಪ್ತ ನಿಲುವು. ಸತಿ-ಪತಿಯರಲ್ಲಿನ ಪ್ರೀತಿ, ಅನುಕೂಲ ದಾಂಪತ್ಯ, ಬಡತನದ ಬದುಕನ್ನು ಗೆಲ್ಲಲು ಸಾಧ್ಯವಾಯಿತು. ಪು. ತಿ. ನ. ಅವರ ಇಂಥ ಅನುಭವ ಅವರ ಕಾವ್ಯಗಳಲ್ಲಿ ಮೈದಾಳಿರುವುದನ್ನು ನೋಡಬಹುದು. "ಕವಿ ಸೌಂದರ್ಯೋಪಾಸಕ ಮಾತ್ರವಲ್ಲ, ತನ್ನ ಸುತ್ತಣ ಆಗುಹೋಗುಗಳಿಗೆ ತೀವ್ರವಾಗಿ ಸ್ಪಂದಿಸುವ ಹೃದಯವೂ ಅವನಿಗುಂಟು. ಅದು ಕಾವ್ಯವಾಗಿ ಅಭಿವ್ಯಕ್ತಿಗೊಂಡೂ ಇದೆ. ಅದರಲ್ಲೂ ನವೋದಯ ಸಾಹಿತ್ಯದ ಪ್ರಮುಖ ಕವಿಗಳು ದೇಶದ ದುಃಸ್ಥಿತಿಯ ಬಗ್ಗೆ, ನಮ್ಮ ಜನತೆಯ ದೀನ ದರಿದ್ರ ಸ್ಥಿತಿಯ ಬಗ್ಗೆ, ಉಳ್ಳವರ ದರ್ಪ, ದೌರ್ಜನ್ಯ, ಶೋಷಣೆಯ ಬಗ್ಗೆ ಶಕ್ತಿಪೂರ್ಣವಾದ ಕವನಗಳನ್ನು ರಚಿಸಿದ್ದಾರೆ. ಪು. ತಿ. ನ. ರವರು ಕೆಲವೇ ಕವನಗಳಲ್ಲಿ ತಮ್ಮ ಸಾಮಾಜಿಕ ಪ್ರಜ್ಞೆಯನ್ನು ಮೆರೆದಿದ್ದಾರೆ"[೮೨] ಎಂಬ ಪ್ರಭುಶಂಕರರವರ ಮಾತು ನಿಜವಾಗಿಯೂ ಗಮನಾರ್ಹವಾದುದು.[೮೩]

ಪು. ತಿ. ನ. ರವರ 'ಮುನಿದ ಭಾರತವನ್ನು ಕುರಿತು', 'ವಿಶ್ವ ಕುಟುಂಬಿಯ ಕಷ್ಟ', 'ನವಭಾರತದ ತರುಣರಾವು', 'ಬಡ ಸೂಳೆಗೆ ಅವಳ ಗೆಳತಿ', 'ರೂಪಾಯಿ-ಶೀಪಾಯಿ', 'ಮಣ್ಣಿನ ಮಕ್ಕಳು', 'ಹೆಸರು ಇಲ್ಲದವರು', 'ಉಳ್ಳವ-ಇಲ್ಲದವ', 'ಸಾಕು-ಬೇಕು' ಮುಂತಾದ ಕವನಗಳು ಬಡತನದ ವಿಷಯದ ಬಗೆಗೆ ಮಾತನಾಡುತ್ತವೆ. ಆಂಶಿಕವಾಗಿ ಸೈನಿಕರ ಹಾಡು, ಅವನು-ಅವಳು, ನನ್ನ ತಾಯಿ, ಸಿರಿಯಿಹಳೆಲ್ಲಿ, ಬಿಡುಗಡೆಯ ಹಿರಿಮೆ ದಿನ, ಬಡವನ ಹಂಬಲ, ಮಾನಿಷ್ಟ ಬಡವನ ನಿರಾಸೆ, ನಾಡಿನ ಮೊಗ, ಹೊಸ ವರುಷ ಬಹುದೆಂದಿಗೆ ಮುಂತಾದ ಕವನಗಳು ಬಡತನದ ವಸ್ತುವನ್ನು ಒಳಗೊಂಡಿವೆ.

'ವಿಶ್ವಕುಟುಂಬಿಯ ಕಷ್ಟ' ಕವಿತೆಯಲ್ಲಿ ಬಡ ಸಂಸಾರದ ಚಿತ್ರಣವಿದೆ. ಈ ಕವನದಲ್ಲಿ ಸಾಮಾನ್ಯ ಹೆಣ್ಣೊಬ್ಬಳ ಹೃದಯ ವೈಶಾಲ್ಯ, ಇಹ-ಪರದ ಬಗೆಗಿನ ತಿಳುವಳಿಕೆ ವ್ಯಕ್ತವಾಗಿದೆ. ನಾಗಿ ಮನೆಯ ಕೆಲಸದವಳು. ಗೋದವೆ ಬೀಸುತ್ತಾ ಬೀಸುವ ಕಲ್ಲಿನ ಮುಂದೆ ಕುಳಿತ ನಾಗಿಗೆ ಸಂಸಾರದ ಕಷ್ಟ, ಬಡತನ, ಹಸಿವು, ಬವಣೆಯ ಚಿಂತೆಗಳು ಮುತ್ತುತ್ತವೆ. ಬಿಸಿಲಿನ ತಾಪದಿಂದಾಗುವ ಆಯಾಸವನ್ನು ಶಮನಗೊಳಿಸಿಕೊಳ್ಳಲು ಕೆಲವರು ವಿಶ್ರಾಂತಿ ಬಯಸುವವರು ವಿರಮಿಸಿಕೊಳ್ಳುತ್ತಿದ್ದಾರೆ. ಎಲ್ಲರಿಗೂ ಬಿಡುವು ದೊರೆತರೂ ನಾಗಿಗೆ ಮಾತ್ರ ಬಿಡುವಿಲ್ಲ, ಸೃಷ್ಟಿಯೆಲ್ಲಾ ಜಡವಾಗಿದೆ. ನಾಗಿಗೆ ತನ್ನ ಮಕ್ಕಳ ಹಸಿವು ಮತ್ತು ದೈನ್ಯ ಕುಟುಂಬದ ಬಡತನ ನೆನೆದು ದುಃಖ ಉಮ್ಮಳಿಸುತ್ತದೆ".[೮೪]

ನಾಗಿ ಗಂಡನಿರದ ಬಡವೆ, ಅನಾಥೆ. ವರುಷದ ಕೂಸೆದ್ದು ಅಳುತ್ತಿರಬಹುದೇನೋ? ನರಸೀಗೆ ಹಸಿವೆಯೇನೋ? ಭಯವೋ ಸರಿಹಗಲಚ್ಚೇರು ಬೀಸುವುದುಳಿದಿದೆ. ಇರುಳೀಗೆ ತುಸು ಹಿಟ್ಟೂ ಇಲ್ಲ ಎಂಬುದು ಅವಳ ಚಿಂತೆ. ಇದು ಅವಳನ್ನು ದಿನಾದಿನಾ ಕೊರೆಯುತ್ತದೆ. ನಾಗಿಗೆ ತನ್ನ ಮಕ್ಕಳ ದೈನ್ಯ ಕುಟುಂಬದ ದಾರಿದ್ರ್ಯ ನೆನೆದು ದುಃಖ ಉಮ್ಮಳಿಸುತ್ತದೆ. ವಿಶ್ರಾಂತಿಯ ನಿದ್ರೆಯಲ್ಲಿದ್ದ ಮುದುಕಿ ನಾಗಿಯ ದುಗುಡಕ್ಕೆ ಎಚ್ಚರಗೊಂಡು ನಾಗಿಯನ್ನು ಪರಿಪರಿಯಾಗಿ ವಿಚಾರಿಸುತ್ತಾಳೆ".[೮೫]

ನಾಗಿಯ ಕಣ್ಣಲ್ಲಿ ನೀರು ಬರುವುದು ಆಕೆಗೆ ಗಂಡ ತೀರಿ ಹೋದುದನ್ನು ನೆನೆದಲ್ಲ.

ಏನೇ ಹೇಳಿ ನಮ್ಮವ್ವ ಇರುವ್ವೋರು ಮೂವ್ವೋರು
ನಾನು ನಮ್ಮೆಣ್ಣು ಮೊಲೆಗೂಸು
ಕಾಣಿರಾ, ಒಪ್ಪತ್ತು ದುಡಿಯದೆ ಕೂತರೂ
ಪ್ರಾಣಾವ ನೀಸೋದು ಕಷ್ಟ[೮೬]

ನಾಗಿಯ ಬಡತನಕ್ಕೆ ಕಾರಣವನ್ನು ಹೇಳುತ್ತಲೇ ಇದು ಅದರ ಪರಿಣಾಮವನ್ನು ತಿಳಿಸುತ್ತದೆ. ತಲೆತಲೆಮಾರಿನವರೆಗೆ ದುಡಿಯದಿದ್ದರೂ ಚಿನ್ನದ ತಟ್ಟೆಯಲ್ಲಿ ತಿನ್ನಬಹುದಾದಷ್ಟನ್ನು ಸೇರಿಸಿಕೊಂಡಿರುವವರು ಒಂದೆಡೆಯಾದರೆ, ಅನಾರೋಗ್ಯವೋ, ಆಯಾಸವೋ? ಯಾವುದೋ ಕಾರಣದಿಂದ ಒಂದು ಹೊತ್ತು ದುಡಿಯದೆ ಕುಳಿತರೆ ಅಂದಿನ ಊಟಕ್ಕೆ ಗತಿಯಿಲ್ಲದ ಜೀವನ ಇನ್ನೊಂದು ಕಡೆ. ನಾಗಿ ಬದುಕಿನ ಸಂಕಷ್ಟದ ನಡುವೆಯೂ ವಿಶಾಲ ಮನೋಭಾವದ ಗುಣದವಳು ಎಂಬುದು ತಿಳಿಯುತ್ತದೆ. ವಿಶ್ವಕುಟುಂಬಿಯಾದ ಭಗವಂತನಿಗೆ ಈ ಲೋಕವನ್ನು ನಡೆಸುವುದು ಎಷ್ಟು ಕಷ್ಟವಿರಬೇಕು ಎಂದು ನಾಗಿ ಅಳುವ ಪರಿಯನ್ನು ಕಂಡರೆ ನಿಜಕ್ಕೂ ಸೋಜಿಗವಾಗುತ್ತದೆ. ತನ್ನ ಕಷ್ಟಕ್ಕಿಂತ ಭಗವಂತನ ಕಷ್ಟವೇ ದೊಡ್ಡದು ಎಂದು ತಿಳಿಯುವ ನಾಗಿಯ ಹೃದಯ ಸುಸಂಸ್ಕೃತವಾದುದು. ಪು. ತಿ. ನ. ಅವರು "ಪ್ರಕೃತಿ ಸೌಂದರ್ಯವನ್ನು ಹೇಗೋ, ಮಾನವ ಜನ್ಮದ ರಹಸ್ಯವನ್ನು ಹಾಗೆ ಮರೆಯಲಾಗದ ಮಾತುಗಳಲ್ಲಿ ಹೇಳಬಲ್ಲರು".[೮೭]

"ಮುನಿದ ಭಾರತವನ್ನು ಕುರಿತು" ಕವನದಲ್ಲಿ ಭಾರತ ಜನಾಂಗದ ದೈನ್ಯ ದುರ್ದೆಸೆಗಳನ್ನು ಬಣ್ಣಿಸಲಾಗಿದೆ. ನಮ್ಮ ರಾಷ್ಟ್ರವು ಅತುಳೈಶ್ವರ್ಯಪೂರ್ಣವಾದ ರಾಷ್ಟ್ರ. ಎಲ್ಲ ವಿಧದಲ್ಲಿಯೂ ಈ ದೇಶ ಸಮೃದ್ಧವಾದುದು. ಆದರೆ ನಮ್ಮ ದೇಶದ ಜನಾಂಗವು ನೈತಿಕವಾಗಿ ಪತನ ಹೊಂದಿ ಬಹುದೊಡ್ಡ ಪಾತಕ ಮಾಡಿದ್ದರಿಂದ, ಶಾಪಗ್ರಸ್ತರಂತೆ ಬದುಕನ್ನು ನಡೆಸುತ್ತಿದೆ. ಸ್ವಾರ್ಥ, ಕುಹಕ, ಕುಟಿಲತೆಗಳಲ್ಲಿ ತೊಡಗಿ, ಆತ್ಮಪ್ರತಿಭೆಯನ್ನು ಕಳೆದುಕೊಂಡು ಬಾಳುವ ರೀತಿಯನ್ನು ಈ ಪದ್ಯದಲ್ಲಿ ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಜ್ಯುಪಿಟರನ ಅಣುಗನು ಮಾಡಿದ ಪಾಪಕ್ಕೆ ಅವನಿಗೆ ದೊರೆತ ದುರವಸ್ಥೆಯನ್ನು ವರ್ಣಿಸಿ, ಅದನ್ನೇ ಭಾರತದ ಜನಜೀವನಕ್ಕೆ ಅನ್ವಯಿಸಿದ ರೀತಿಯನ್ನು ಇಲ್ಲಿ ಗಮನಿಸಬೇಕು. ಪಾತಕಿಯನ್ನು ಹೆಡೆಮುರಿಗೆ ಬಿಗಿದಿದ್ದಾರೆ. ಅವನ ಕಣ್ಣಳತೆಯಲ್ಲಿ ಹಣ್ಣು ಗೊಂಚಲುಗಳಿವೆ. ಜುಳು ಜುಳು ನೀರು ಹರಿಯುತ್ತಿದೆ. ಆದರೆ ಅವನ ಹಸಿವಿಗೆ ಅಂತವಿಲ್ಲ, ನೀರಡಿಕೆಗೆ ಪಾರವಿಲ್ಲ. ಅದನ್ನು ನೋಡಿದಷ್ಟು ಅವು ಹೆಚ್ಚಾಗುತ್ತವೆ. ಹಸಿವು-ನೀರಡಿಕೆಗಳನ್ನು ಹಿಂಗಿಸಿಕೊಳ್ಳೋಣವೆಂದರೆ ಹೆಡೆಮುರಿಗೆ ಬಿಗಿದಿದ್ದಾರೆ. ಈ ಮಾತು ಭರತವರ್ಷದ ದಾಸ್ಯವನ್ನು ಧ್ವನಿಪೂರ್ಣವಾಗಿ ವಿವರಿಸುತ್ತದೆ. ಈ ಕಲ್ಪನೆಯ ಸೊಗಸೂ, ಅರ್ಥಸಂಪತ್ತೂ ಭಾರತದ ಜನಜೀವನದ ದೈನ್ಯ ದುರ್ದೆಸೆಗಳನ್ನು ಕರುಳು ಕರಗುವಂತೆ ಚಿತ್ರಿಸಿದೆ. ಈ ಶಾಪದಿಂದ ಬಿಡುಗಡೆ ಹೊಂದಿ, ಜನಜೀವನ ಸಮೃದ್ಧವಾಗಿ ಬಾಳುವಂತೆ ಅನುಗ್ರಹಿಸಬೇಕೆಂದು ಕವಿ ಭಾರತಮಾತೆಯಲ್ಲಿ ಪ್ರಾರ್ಥಿಸಿಕೊಂಡಿದ್ದಾನೆ".[೮೮]

ಜನಸಾಮಾನ್ಯರ, ಬಡವರ ನೋವು, ಶೋಷಣೆ "ಹೆಸರೇ ಇಲ್ಲದವರು ನಾವು" ಕವನದಲ್ಲಿ ಚಿತ್ರಣಗೊಂಡಿದೆ. ಕಸವನ್ನು ರಸವನ್ನಾಗಿಸುವ ಕಾಯಕ ಇವರದು. ಹಸುರು ಚೆಲ್ಲಬೇಕಾದರೆ ಇವರ ಬೆವರ ಹನಿ ಹರಿಯಬೇಕು. ಉಬ್ಬಿ ಮೆರೆಯುವವರು, ಕೊಬ್ಬಿ

ಕೊಲ್ಲುವವರು, ಅಬ್ಬಾ ಎನ್ನುತ್ತ ಬೆರಗಾಗಿ ನೋಡುವವರು ಇವರೆಲ್ಲರು ಸುಖ-ಸಂತೋಷದಲ್ಲಿರಲು 'ಹೆಸರೇ ಇಲ್ಲದವರು' ನಿತ್ಯ ದುಡಿಯಬೇಕು.

ಹುಲ್ಲು ತಡಿಕೆ ಜೋಪಡೀಯೊಳು ಹುಟ್ಟಿ
ಕಲ್ಲನೆಬ್ಬಿ ಕಟ್ಟಡಗಳ ಕಟ್ಟಿ
ಜಲ್ಲಿ ಹರಡಿ ಕರಿಹಾದಿಯ ಮಾಡುತ
ಹಲ್ಲು ಕಿರಿದು ತೇರೋಟವ ನೋಡುವ
ಹೆಸರೇ ಇಲ್ಲದವರು ನಾವು[೮೯]

ಜನಸಾಮಾನ್ಯರ, ಶೋಷಿತರ, ನೊಂದವರ ನೋವು, ಅವರ ಕಾಯಕ, ಅದರ ಪ್ರತಿಫಲಕ್ಕೆ ಅವರ ಪ್ರತಿಕ್ರಿಯೆಯನ್ನು ಈ ಪಂಕ್ತಿಗಳು ಕಣ್ಣಿಗೆ ಕಟ್ಟುವಂತೆ ಹೇಳುತ್ತವೆ. ಹುಟ್ಟುವಾಗ ಚಿನ್ನದ ಚಮಚ ಬಾಯಿಯಲ್ಲಿಟ್ಟುಕೊಂಡು ಹುಟ್ಟಿ ಬಂದವರು ಇವರಲ್ಲ. ಹುಲ್ಲಿನ ಮನೆಯಲ್ಲಿ ಹುಟ್ಟಿದವರಿವರು. ಕಲ್ಲುಗಳ ಹೊತ್ತು, ಜಲ್ಲಿ ಹರಡಿ ಹಾದಿ ನಿರ್ಮಿಸಿದವರು ಇವರು. ಈ ಹಾದಿಯಲ್ಲಿ ಸಾಗುವವರು ಇವರಲ್ಲ. ಅಲ್ಲಿ ಏನಿದ್ದರೂ ಉಳ್ಳವರ ಓಡಾಟ.ಇವರದೇನಿದ್ದರೂ 'ಹಲ್ಲು ಕಿರಿದು ತೇರೋಟವ ನೋಡುವ ಕೆಲಸ'.

ಶತಶತಮಾನಗಳಿಂದ ದುಡಿಮೆಯನ್ನೇ ತಮ್ಮ ಕಾಯಕ ಮಾಡಿಕೊಂಡು ಬಂದಿದ್ದರೂ ಇವರಿಗೆ ಇದರಲ್ಲಿ ಬೇಸರವಿಲ್ಲ. ಮತ್ತೆ ಮತ್ತೆ ದುಡಿಯುವ ಮತ್ತು ಅದಕ್ಕಾಗಿ ತುಡಿಯುವ ಇವರು ಕಾಯಕಯೋಗಿಗಳು. ಆದರೆ ಇವರು ಹೆಸರೇ ಇಲ್ಲದವರು. ತಮ್ಮ ಬೆವರಿನ ಶಕ್ತಿಯಿಂದ ತಮ್ಮ ರಕ್ತದಿಂದ ಇಡೀ ಸಮಾಜದ ಮೂಲ ರಚನೆಗೆ ಕಾರಣರಾದರೂ ಹೆಸರಾಸೆಗೆ ಆಸೆಯನ್ನು ಪಡದೆ ಮರೆಯಲ್ಲೇ ಉಳಿದು ಬಿಡುತ್ತಾರೆ. ಪು. ತಿ. ನ. ರವರ ಒಟ್ಟು ನಿಲುವು ಹೆಸರಿಲ್ಲದವರಿಗೆ ಹಸಿದಾಗ ಅನ್ನ, ವಸತಿ ಒದಗಿಸಿ ಸಮಾಜದಲ್ಲಿ ಅವರಿಗೊಂದು ಗೌರವಯುತ ಸ್ಥಾನ ಕೊಡಬೇಕೆಂಬುದೇ ಆಗಿದೆ.

ಪು. ತಿ. ನ. ರವರ ಇನ್ನೊಂದು ಕವನ 'ಸೈನಿಕರ ಹಾಡು' ಇದು ಬಡತನದಲ್ಲಿ ಬೆಂದು ಬಂದ ಸೈನಿಕರ ಒಳತೋಟಿಯನ್ನು ಅನಾವರಣಗೊಳಿಸುವ ಕವನ.

ಮನೆಯೊಳಗೆ ಏನೈತೋ ಬರಿಗೋಳು
ಉಣ್ಣೋದಕ್ಕೆ ಇಲ್ಲವಲ್ಲೋ ಹಿಡಿಕೂಳು
ಕುಯ್ಯೊ ಮೊರೆಯಾ ಅಳುತಾರೆ ಮಡದಿ ಮಕ್ಕಳು
ನೋಡಿ ಅಯ್ಯೋ ಅಂತಾರೆ ನೆರೆಯೊಕ್ಕಲ್[೯೦]

ಸೈನಿಕರ ಸಂಸಾರದ ದುಗುಡ-ದುಮ್ಮಾನಗಳನ್ನು ಹೇಳುತ್ತದೆ. ಸೈನಿಕ ಸೈನ್ಯಕ್ಕೆ ಸೇರಲು ಕಾರಣ ಅವನ ಮನೆಯ ಹೀನಸ್ಥಿತಿ, ಅಪ್ಪ ಮಾಡಿದ ಸಾಲದ ಹೊರೆ, ಮಡದಿ ಮಕ್ಕಳ ಕೂಳಿಲ್ಲದ ಸ್ಥಿತಿ – ಇವು ಅವನನ್ನು ಸೈನ್ಯಕ್ಕೆ ಸೇರುವಂತೆ ಒತ್ತಾಯ ಮಾಡುವ ಅಂಶ. ಸೈನಿಕನ ಸಂಸಾರದ ಉಳುಮೆ, ಜಮೀನ್ದಾರರ ಹಿಡಿತ, ಬದುಕು ಬರ್ಬರತೆಯ ಹಾದಿ ಹಿಡಿದಿರುವ ಅರಿವು ಎಲ್ಲವೂ ಇಲ್ಲಿ ಸ್ಪಷ್ಟ. ಆದುದರಿಂದಲೇ ಸೈನಿಕ ಅನಿವಾರ್ಯವಾಗಿ ಸೈನ್ಯಕ್ಕೆ ಸೇರಿರುವುದು. ನಾಯಕ ಹೇಳಿದ

ಹಾಗೆ ಕೇಳಬೇಕು. ಕಂಡಾಗಲೆಲ್ಲಾ ಸಲಾಮು ಹೊಡಿಯಬೇಕು. ಇಂಥ ಮನಸ್ಸಿಗೆ ನೋವುಂಟು ಮಾಡುವ ಕಾಯಕ ಮಾಡಿದರೂ ಇವನಿಗೆ ಬೇಸರವಿಲ್ಲ. ಅಲ್ಲಿ ಊರಿನಲ್ಲಿ ಮಡದಿ-ಮಕ್ಕಳ ಸಪ್ಪೆ ಮೋರೆಯನ್ನು ನೋಡುವ ಬದಲು ಇಲ್ಲಿ ಸೈನಿಕನಾಗಿ ಹೊಟ್ಟೆ-ಬಟ್ಟೆಗೆ ಒಂದಿಷ್ಟು ನೇರ ಮಾಡಿಕೊಳ್ಳುವ ಇವನ ಪರಿ ಎಂಥವರ ಮನಸ್ಸನ್ನೂ ಹಿಂಡುತ್ತದೆ.

ಪು. ತಿ. ನ. ರವರ ಇನ್ನೊಂದು ಕವಿತೆ 'ಬಡ ಸೂಳೆಗೆ ಅವಳ ಗೆಳತಿ' ಇದು ವೇಶ್ಯೆಯ ಜೀವನದ ನೋವನ್ನು ಹೇಳುವ ಕವಿತೆ. ವೇಶ್ಯೆಗೆ ಸಮಾಜದಲ್ಲಿ ಎಂಥ ಸ್ಥಾನವಿದೆ ಎಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಭೋಗದ ವಸ್ತುವಾಗಿ ಬಳಕೆಯಾಗುವ ಈಕೆಗೂ ಮನಸ್ಸಿದೆ ಎಂಬುದು ಅಂಥ ಕ್ರೂರಿಗೂ ಅರ್ಥವಾಗದು. ಪ್ರಾಣಿಯಂತೆ ಆಕೆಯನ್ನು ಹೇಗೆ ಬೇಕೋ ಹಾಗೆ ಬಳಸಿಕೊಳ್ಳುತ್ತಾರೆ. ಇಂಥ ವೇಶ್ಯೆಗೆ ನಾಲ್ಕು ಮಕ್ಕಳೆಂದರೆ ಹೇಗೆ? ಅವಳ ಬದುಕಿನ ಸ್ಥಿತಿ ಏನು? ತಾನೇ ಹೊಟ್ಟೆ ಹೊರೆಯುವುದಕ್ಕಾಗಿ ಇಂಥ ಕೆಲಸಕ್ಕೆ ಇಳಿದಿದ್ದಾಳೆ. ತನ್ನ ಜೊತೆಗೆ ಈ ನಾಲ್ಕು ಮಕ್ಕಳ ಹೊಟ್ಟೆಯನ್ನು ತುಂಬಿಸಬೇಕು. ಆದರೆ ಈಕೆ ಬಡವಿ. ಇದರಿಂದ ಹೊಟ್ಟೆಗನ್ನವಿಲ್ಲದೆ ಮಕ್ಕಳು ಸೊರಗಿವೆ.

ಈ ವೇಶ್ಯೆಯ ಒಳಬದುಕು ಹೀಗೆ ನೋವಿನಿಂದ ತುಂಬಿದೆ. ಆದರೆ ಹೊರಗೆ ನಕ್ಕು, ನಗಿಸಿ ಬೇರೆಯವರ ಸೆಳೆಯಬೇಕು. ಬದುಕಿಗಾಗಿ ಹೀಗೆ ಮಾಡಲೇಬೇಕಾದ ಅನಿವಾರ್ಯತೆ ಇದೆ. ಅವಳಿಗಾಗಿಯೇ ಹಾತೊರೆಯುವವರು ಅವಳ ರಕ್ತ ಹೀರುವ ಕ್ರಿಮಿಗಳಂತೆ. ನೋವೆಂದರೂ, ಸಾವೆಂದರೂ ಅವಳ ದೇಹ ಮಾತ್ರ ಅವರಿಗೆ ಬೇಕು. ಅದು ಕೆಲ ಕ್ಷಣ. ತಮ್ಮ ಸ್ವಾರ್ಥದ ಬಯಕೆ ತೀರುವವರೆಗೆ. ಆದರೆ ಅವಳ ಹಸಿವು ಮತ್ತು ಬಡತನ ಮಾತ್ರ ಅವಳಿಗೊಬ್ಬಳಿಗೆಯೇ. ಇಲ್ಲಿ ಬಡ ಸೂಳೆಯ ಬದುಕಿನ ಮೇಲೆ ಚಿಂತನೆಯ ಬೆಳಕು ಬೀರಿದ್ದಾರೆ. ಮೃಗ ಸ್ವರೂಪಿ ಮಾನವರ ಆಕ್ರಮಣ ನಡವಳಿಕೆಯ ಸ್ವರೂಪವು ಇಲ್ಲಿ ಚಿತ್ರಿತಗೊಂಡಿದೆ. ಬಡತನದ ಜೊತೆಗೆ ಅಸ್ಪೃಶ್ಯತೆ ಒಂದು ಸಮಸ್ಯೆ ಎನಿಸಿದರೆ ಬಡತನದ ಜೊತೆ ವೇಶ್ಯೆಯ ದುರಂತ ಜೀವನವೂ ನರಕವೇ ಸರಿ. ಇಲ್ಲಿ ಬಡ ಸೂಳೆ ಮತ್ತವಳ ಮನೆ ಮಕ್ಕಳ ಹಸಿವು, ಬಡತನ ಪ್ರಧಾನವಾಗಿ ಕಾಣುವಂಥದ್ದು.

'ಪತಿತಪಾವನ' ವಿಧವೆಯೊಬ್ಬಳ ಗೋಳಿನ ವಸ್ತುವುಳ್ಳ ಕವನ. ದುರ್ಬಲಳಾದ, ವಿಧವೆಯಾದ, ಬಡವಿಯಾದ ಸ್ತ್ರೀಯೊಬ್ಬಳಿಗೆ ಸಮಾಜ ನೀಡುವ ಚಿತ್ರಹಿಂಸೆಯ ಪರಿಯನ್ನು ವಿವರಿಸುವುದಾಗಿದೆ. ದೇವರ ಗುಡಿಗೆ ಬಂದ ಆಕೆಯನ್ನು ಎಲ್ಲರೂ ಸೇರಿ ಕ್ರೂರತನದಿಂದ ಹೊರದೂಡಿದರು. ಮೊದಲೇ ವಿಧವೆ, ಬಡವಿ ಬೇರೆ. ಅವಳ ಸಮಸ್ಯೆ ಕ್ಷೀಣಿಸದೆ ಹೆಚ್ಚುತ್ತಲೇ ಹೋಗುತ್ತದೆ. ಹುಲ್ಲಿನ ಜೋಪಡಿಯಲ್ಲಿ ವಾಸಿಸುವ ಇವಳಿಗೆ ದಿನಕ್ಕೆ ಒಂದು ಹೊತ್ತು ಹಿಟ್ಟು ಸಿಕ್ಕರೆ ಸಾಕು. ಅವಳಿಗೆ ಅದೇ ಹಬ್ಬ. ಒಟ್ಟಾರೆ ಈ ಕವಿತೆಯಲ್ಲಿ ವಿಧವೆಯಾದ ಬಡ ಸ್ತ್ರೀಯೊಬ್ಬಳು ತನ್ನ ಬಡತನದ ಕಾರಣದಿಂದಲೇ ವೇಶ್ಯೆಯಾಗಬೇಕಾದದ್ದು ಈ ಕ್ರೂರ ಸಮಾಜಕ್ಕೆ ಹಿಡಿದ ಕನ್ನಡಿಯಾಗಿದೆ ಎಂಬುದು ಪು. ತಿ. ನ. ರವರ ಅಭಿಪ್ರಾಯ. ಹೆಣ್ಣಿನ ಗೋಳಿಗೆ, ಹಸಿವೆಗೆ, ಬಡತನಕ್ಕೆ ಪರಿಹಾರ ಸೂಚಿಸದೇ ಆಕೆಯನ್ನು ಕೇವಲ ತಮ್ಮ ಭೋಗದ ವಸ್ತುವನ್ನಾಗಿಸಿಕೊಳ್ಳುವುದಲ್ಲದೆ, ದೂಷಣೆಯನ್ನು ಮಾಡುವುದು ಸರಿಯೇ?

ಅಸಹಾಯಕ ಹೆಣ್ಣು ಹಸಿದು ಬಂದಾಗ ಅನ್ನ ಕೊಡದೆ ಆಕೆಯ ದೇಹವನ್ನು ಸೂರೆಗೊಳ್ಳುವುದರ ಮೂಲಕ ವೇಶ್ಯೆಯ ಪಟ್ಟವನ್ನು ಕಟ್ಟಿದ್ದು ಕೂಡಾ ಮಾನವೀಯತೆಯನ್ನೇ ಮರೆತು ಮೃಗವಾಗಿರುವ ಈ ಪುರುಷಪ್ರಧಾನ ಸಮಾಜವೇ ಆಗಿರುವುದು ದುರಂತ.

'ನಾರಾಯಣನ ಕತೆ' ಕವನದಲ್ಲಿ ಬಡ ಸಂಸಾರದ ಚಿತ್ರಣವಿದೆ. 'ಹಸಿವು ತನ್ನ ತಿನ್ನುತಿರಲು, ತಿನ್ನಲನ್ನ ಕೈಯಲಿರಲು ದೇವನೈವೇದ್ಯಕಿದನು ಒಪ್ಪಿಸುವನು ಎಂಬಲ್ಲಿ ತನ್ನ ಹಸಿವಿನ ನಡುವೆಯೂ ಇನ್ನೊಬ್ಬರ ಹಸಿವನ್ನು ಕಂಡು ಕನಿಕರಿಸುವವನು ಹಸಿದ ಮನುಷ್ಯನೇ ಎಂದು ಹೇಳುತ್ತಾ ಹಸಿದವರಿಗಿರುವ ಅಂತಃಕರಣ ಹೊಟ್ಟೆ ತುಂಬಿದ ಧನಿಕರಿಗಿಲ್ಲ ಎಂಬ ಧ್ವನಿ ಇಲ್ಲಿ ವ್ಯಕ್ತವಾಗಿದೆ.

ಪು ತಿ. ನ. ದೇಶದ ಸಮಸ್ಯೆಗಳ ಬಹುಮುಖ ರೂಪವನ್ನು 'ನಾಡಿನ ಪಾಡು' ಕವನದಲ್ಲಿ ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾರೆ. ಭಾರತದ ತುಂಬ ದುರ್ಬಲತೆ, ದೀನತೆಯೇ ತುಂಬಿದೆ. ಬಡವರ, ದೀನದಲಿತರ ಸಂಖ್ಯೆ ದಿನೇದಿನೇ ಊರ್ಧ್ವಮುಖಿಯಾಗಿ ಸಾಗುತ್ತಿದೆ. ಹಾಗೆಯೇ 'ಹೊಸವರುಷಬಹುದೆಂದಿಗೆ' ಕವನದಲ್ಲಿ ಸಹ ಕವಿ ಸಮತೆಯ ನಿರ್ಮಾಣದೆಡೆಗೆ ತುಡಿಯುವ ಪ್ರಯತ್ನ ಮಾಡಿರುವುದು ಸ್ಪಷ್ಟವೇ ಆಗಿದೆ. ಪು. ತಿ. ನ. ಅವರ ದೃಷ್ಟಿಯಲ್ಲಿ ಹೊಸ ವರುಷ ವಿಶಾಲ ಅರ್ಥವುಳ್ಳದ್ದು. ವಿಶೇಷ ಅರ್ಥ ಹೊಂದಿರುವುದು. ಬಡವರ, ದುರ್ಬಲರ, ದೀನದಲಿತರ ಸಮಸ್ಯೆಗಳೆಲ್ಲಾ ನೀಗಿ ಇವರುಗಳೆ ಪ್ರಮುಖವಾಗಿರುವ, ಪ್ರಭುಗಳಾಗಿರುವ ಸಮಾಜ ನಿರ್ಮಾಣವಾದಾಗ ಮಾತ್ರ ಅದು ನಿಜವಾದ ಅರ್ಥದಲ್ಲಿ ಹೊಸ ವರುಷವಾಗುತ್ತದೆ.

"ಕುವೆಂಪು, ಬೇಂದ್ರೆಯವರಂತೆ ಪು. ತಿ. ನ. ಬಡತನದ, ಅಸಮತೆಯ ದಾರುಣತೆಯನ್ನು ತೀವ್ರವಾಗಿ, ಹೃದಯವಿದ್ರಾವಕವಾಗಿ ಓದುವವರ ರಕ್ತ ಕುದಿಯುವಂತೆ, ಉದ್ರೇಕಗೊಳ್ಳುವಂತೆ ವರ್ಣಿಸುವುದರಲ್ಲಿ ಯಶಸ್ವಿಯಾಗಿಲ್ಲ. ಅದು ಅವರ ಉದ್ದೇಶವೂ ಆಗಿರುವಂತೆ ತೋರುವುದಿಲ್ಲ" ಎಂಬ ಪ್ರಭುಶಂಕರರ ಮಾತು ಇಲ್ಲಿ ಮುಖ್ಯವಾಗುತ್ತದೆ.[೧] ಒಟ್ಟಾರೆಯಾಗಿ ಪು. ತಿ. ನ. ರವರ ಸಾಹಿತ್ಯದಲ್ಲಿ ಸಮಾಜದಲ್ಲಿ ನೊಂದವರ, ಹಸಿದವರ, ಬಡವರ, ದೀನ–ದಲಿತರ ಸಮಸ್ಯೆಗಳನ್ನು ಚಿತ್ರಿಸಿ, ಅವುಗಳನ್ನು ಸಾತ್ವಿಕ ಆಕ್ರೋಶದಿಂದಲೇ ಪ್ರಶ್ನಿಸುತ್ತಾ, ಪ್ರತಿಭಟಿಸುತ್ತಾ, ಕುರುಡಾಗಿರುವ ಸಮಾಜ ಕಣ್ಣು ತೆರೆದು ಆರೋಗ್ಯಕರವಾದ ಸಮಾನತೆಯ ನಾಡಿನ ನಿರ್ಮಾಣಕ್ಕೆ ಕೈಜೋಡಿಸಿ ಸಮಾಜದ ತಾತ್ಸಾರಕ್ಕೆ ಗುರಿಯಾಗಿರುವವರ ಬಾಳು ಬೆಳಗುವಂತಾಗಬೇಕು ಎಂಬ ಆಶಯವಿದೆ.

"ಸಮಾಜದಲ್ಲಿ ಬೋಧಕರು ಬಹಳ ಮಂದಿ. ಒಳಗೆ ಏನೂ ಸತ್ವವಿಲ್ಲದಿದ್ದರೂ ತಾವೇ ಮಹಾಪ್ರಾಜ್ಞರೆಂದು ಹಸಿದವರ ಮುಂದೆ ಉಪನ್ಯಾಸ ಮಾಡುವ ಜನಕ್ಕೇನು ಕೊರತೆ? ಇಂತಹ ವ್ಯಕ್ತಿಗಳ ಚಿತ್ರವನ್ನು ಕವಿ ಹೊಸತೊಂದು ರೀತಿಯಲ್ಲಿ ಕೊಡುತ್ತಾನೆ".[೨]

"ಇಂದಿನ ಬಡತನದ ಸಮಸ್ಯೆಯ ಎದುರು ಹಿಂದಿನ ದರ್ಶನ, ಪುರಾಣಗಳ ಘನತೆ ಏನು ಎಂಬ ವ್ಯಂಗ್ಯವೇ ಕವಿಯ ನೈಜ ಸ್ವರವಾಗಿದೆ".[೩]

ಇತರೆ ಕವಿಗಳ ಪ್ರಕಾರ ಹಸಿವು

ಅಡಿಗರು 'ಇದು ಮೊದಲು' (ಪು. ೧೦೪) ಕವಿತೆಯಲ್ಲಿ ಹಸಿವು ಮತ್ತು ಬಡತನದ ವ್ಯಾಖ್ಯಾನವನ್ನು ಕಾವ್ಯರೂಪದಲ್ಲಿ ನೀಡಿದ್ದಾರೆ.

ಹಸಿದಿಹುದು ಹೊಟ್ಟೆ; ಕೊಡು ಅನ್ನವನು ನನ್ನ ತನು
ಕೋಡುತಿದೆ ಚಳಿಗೆ; ಕೊಡು ಬಟ್ಟೆಗಳನು
ಗಾಳಿ ಬೆಳಕಿನ ಗೋರಿಯಲ್ಲಿ ಹೂತಿರುವೆನಿದೋ;
ಕೊಡು ನನಗೆ ಸುವಿಶಾಲ ವಸತಿಗಳನು
ಇದು ಮೊದಲು ಆಮೇಲೆ ಉಳಿದುದೆಲ್ಲ

ಬಡತನದಿಂದ ಕಂಗೆಟ್ಟು ಹಸಿದು ಬೇಯುತ್ತಿರುವವರಿಗೆ ಮೊದಲು ಅತ್ಯಗತ್ಯವಾಗಿ ಬೇಕಿರುವುದು ಆಹಾರ, ವಸ್ತ್ರ, ವಸತಿ. ಮೊದಲು ಇದು; ಉಳಿದುದೇನಿದ್ದರೂ ಅನಂತರದ್ದು. ಇಡೀ ಕವಿತೆ ಬಡತನದ, ಬಡವರ ಪರಿಸ್ಥಿತಿಯ ಪ್ರತಿಬಿಂಬ. "ಶೋಷಿತರ ಪರ ಸಹಾನುಭೂತಿ ಬೆಳೆಸುವ, ಅವರಿಗಾದ ಅನ್ಯಾಯವನ್ನು ಖಂಡಿಸುವ, ಅವರ ಹಕ್ಕುಗಳನ್ನು ಎತ್ತಿ ಹಿಡಿಯುವ ವಿಚಾರಗಳ ಪದ್ಯ ಗದ್ಯ ರೂಪಗಳು. ನೀತಿಯುತವಾದ ಒಂದು ಸಾಮಾಜಿಕ ನಿಲುವಿಗಾಗಿ ದುಡಿಯುತ್ತಿರುವ ಈ ವಿಚಾರಗಳು ಮೌಲಿಕವಾದುವು. ಯಾರೂ ಒಪ್ಪಬೇಕಾದಂಥವು".[೯೪]

ಹೊಟ್ಟೆಗಿಲ್ಲದೆ ಅವಳು ಮಗುವ ಬಾವಿಗೆ ನೂಕಿ
ಹಾರಿದಳನಾಥೆ ಈ ಜನ್ಮ ರೋಸಿ[೯೫]

ಹಾಗೆಯೇ ಜಿ. ಎಸ್. ಶಿವರುದ್ರಪ್ಪನವರು 'ಪ್ರತಿಮೆಗಳು' ಕವಿತೆಯಲ್ಲಿ[೯೬]

ಕಣ್ಣೀರಲ್ಲಿ ನೆನೆದ
ಹಸಿದ ಹೊಟ್ಟೆಯೊಳಗುರಿವ ಸಿಟ್ಟಿನಲಿ
ನಾಳಿನ ಕ್ರಾಂತಿಯ ಜ್ವಾಲಾಮುಖಿಗಳು ಹೊಗೆಯಾಡುತ್ತಿವೆ
ಹಸಿದ ಹೊಟ್ಟೆಯೊಳಗುರಿವ ಸಿಟ್ಟಿನಲಿ

ಹಸಿದ ಹೊಟ್ಟೆಯೊಳಗಿನ ಆಕ್ರೋಶದ ಮಾತು ಇಲ್ಲಿ ಸ್ಫುಟ. ಹೀಗೆ ನೊಂದ ಜನವರ್ಗ ಉಳ್ಳವರ ವಿರುದ್ಧ ಕ್ರಾಂತಿಯ ಮಾತನಾಡುವುದು ಬದಲಾವಣೆಯೆಡೆಗಿನ ತುಡಿತವೇ ಆಗಿದೆ. 'ಸ್ವಾತಂತ್ರ್ಯೋತ್ಸವ – ೧೯೪೭' ಕವನ ಸ್ವಾತಂತ್ರ್ಯಾನಂತರದ ದೇಶದ ಪರಿಸ್ಥಿತಿಗೆ ಪ್ರತಿಬಿಂಬ. ಸ್ವಾತಂತ್ರ್ಯ ಕಾಲದಲ್ಲಿದ್ದ ಭರವಸೆಗಳೆಲ್ಲಾ ಅನಂತರದಲ್ಲಿ ಭ್ರಮ ನಿರಸನಕ್ಕೊಳಗಾಗಿರುವುದು ಎದ್ದು ಕಾಣುವ ಅಂಶ.

ಎಷ್ಟು ದುಡಿದರೂ ಏನು ಪಡೆದರು
ಬೆನ್ನಿಗಂಟಿರುವ ಹೊಟ್ಟೆಗಳು
ಬಾರಿ ಮಹಲುಗಳ ಚರಂಡಿಯಂಚಿಗೆ
ತತ್ತರಿಸುವ ಕೊಳೆಗೇರಿಗಳು[೯೭]

ಬಡವರ ಬದುಕಿನ ನೋವಿನೆಡೆಗೆ ಈ ಸಾಲುಗಳು ಬೆರಳು ಮಾಡಿ ತೋರಿಸುತ್ತವೆ. ಹಸಿದವರ, ಅಸ್ಪೃಶ್ಯರ, ದೀನ ದುರ್ಬಲರ, ಬಡವರ ಶೋಚನೀಯ ಬದುಕು ಎಂಥವರ ಎದೆಗೂ ನಾಟುತ್ತದೆ. 'ಬರಿಯ ಮಾತಿನ ಜಾಲದಲ್ಲಿ ಶೋಷಣೆಗಳ ಶೂಲದಲ್ಲಿ, ವಂಚನೆಗಳ ಸಂಚಿನಲ್ಲಿ ಹಸಿದ ಹೊಟ್ಟೆ ನರಳುವಲ್ಲಿ ಯಾವ ಹಾಡ ಹಾಡಲಿ' ಜಿ. ಎಸ್. ಎಸ್. ಸಮಾಜದ ಬಗೆಗೆ ಆಳವಾಗಿ ಚಿಂತಿಸಿದುದರಿಂದ ಮೂಡಿದ ಕವಿತೆ 'ಯಾವ ಹಾಡ ಹಾಡಲಿ'. ಕವಿಗೆ ಬಡವರ ಬದುಕು ಕಾಡಿರುವುದಿಲ್ಲಿ ವ್ಯಕ್ತವಾಗಿದೆ. ರಾಜಕೀಯ, ಸಾಮಾಜಿಕ, ಸಾಹಿತ್ಯಿಕ ಕ್ಷೇತ್ರಗಳ ಇಂತಹ ದಮನೀಯ ಪರಿಸ್ಥಿತಿಯನ್ನು ಇವರ ವಿಡಂಬನಾತ್ಮಕ ಕವನಗಳು ಬಯಲು ಮಾಡುತ್ತವೆ. ಆದರೆ ಇಲ್ಲಿ ನಾವು ಮರೆಯಬಾರದ ಒಂದು ಅಂಶವೆಂದರೆ ಸಾಧಾರಣವಾಗಿ ವಿಡಂಬನಕಾರ ತಾನು ವಿಡಂಬಿಸುವ ಸಮಾಜದಿಂದ/ಸಮುದಾಯದಿಂದ ಹೊರಗೆ ತನ್ನನ್ನು ಗುರುತಿಸಿಕೊಳ್ಳುತ್ತಾನೆ. ಆದರೆ ಜಿ. ಎಸ್. ಎಸ್. ಅವರಿಗೆ ತಾವು ಅಂತಹ ಸಮಾಜದ/ ಸಮುದಾಯದ ಒಂದು ಭಾಗವೇ ಎಂಬ ಅರಿವು ಸರ್ವದಾ ಜಾಗೃತವಾಗಿರುತ್ತದೆ".[೯೮]

ಗೇಟಾಚೆ ತಿರುಪೆಯ ಮುದುಕಿ
ಅನ್ನಕ್ಕೆ ಅರಚುವ ಹೊತ್ತು
ನಾ ಹೇಗೆ ಊಟ ಮಾಡಲಿ ಹೇಳು?
ಆ ಕೂಗು
ಮನುಷ್ಯರದೋ ಪ್ರಾಣಿಯದೋ
ಅಥವಾ ಶತಶತಮಾನಗಳ ಹಸಿವು ತಾಳಿದಾಕಾರವೋ
ಹೇಗೆ ಕೇಳಲಿ ನಾನು
ಕೇಳಿಯೂ ಹೇಗೆ ಸುಮ್ಮನಿರಲಿ[೯೯]

ಕವಿಗೆ ಸಮಾಜದ ನೊಂದವರ ನೋವು (ಧ್ವನಿ) ನುಂಗಲಾರದ ತುತ್ತಾಗಿದೆ. ಕವಿಯನ್ನು ಸಮಾಜದ ಅಸಮಾನ ವ್ಯವಸ್ಥೆ ಬಹುವಾಗಿ ಕಾಡಿರುವುದನ್ನು ಗಮನಿಸಬಹುದು. ದಲಿತ-ಬಂಡಾಯ ಕಾವ್ಯಯುಗದಲ್ಲಿ ಅನೇಕ ಸಾಹಿತಿಗಳು ತಮ್ಮ ಕವಿತೆ, ಕಥೆ, ಕಾದಂಬರಿ, ಆತ್ಮಕಥೆ ಮೊದಲಾದ ಪ್ರಕಾರಗಳಲ್ಲಿ ತಮ್ಮ ನೋವನ್ನು, ಸಮಾಜದ ನೋವನ್ನು ಅತ್ಯಂತ ಸಹಜ ಭಾಷೆಯಲ್ಲಿ ಹೇಳಿರುವರು. ಸಿದ್ಧಲಿಂಗಯ್ಯ, ಅರವಿಂದ ಮಾಲಗತ್ತಿ, ಮನಜ, ದೇವನೂರ ಮಹಾದೇವ, ಬರಗೂರು ರಾಮಚಂದ್ರಪ್ಪ ಮೊದಲಾದವರ ಸಾಹಿತ್ಯದಲ್ಲಿ ಜನಸಾಮಾನ್ಯೋದ್ಧಾರದ ತುಡಿತವಿದೆ. ಸಿದ್ಧಲಿಂಗಯ್ಯನವರ ಕಾವ್ಯದಲ್ಲಿ ಬಡವರ ಹಸಿವಿನ, ಅಸ್ಪೃಶ್ಯತೆಯ ನೋವನ್ನು ಗುರುತಿಸಲಾಗಿದೆ. "ಶತಶತಮಾನಗಳ ಕಾಲ ತುಳಿತಕ್ಕೊಳಗಾದ ದಲಿತ ವರ್ಗದ ರೋಷದ ಕಿಡಿ ಕವನವಾಗಿ ಮೂಡಿ ಕನ್ನಡ ಕಾವ್ಯಕ್ಕೆ ಹೊಸ ಆಯಾಮ ನೀಡಿ ಇತಿಹಾಸ ಸೃಷ್ಟಿಸಿದ ಕವಿ ಸಿದ್ಧಲಿಂಗಯ್ಯ".[೧೦೦]

ಸಿದ್ಧಲಿಂಗಯ್ಯನವರ 'ನನ್ನ ಜನಗಳು' ಕವಿತೆಯಲ್ಲಿ ಹಸಿವಿನಿಂದ ಸತ್ತೋರು ಸೈಜುಗಲ್ಲು ಹೊತ್ತೋರು ವದೆಸಿಕೊಂಡು ವರಗಿದೋರು ನನ್ನ ಜನಗಳು.[೧೦೧]

ಈ ಕವಿತೆ ಒಂದು ಕಡೆ ಆರ್ಥಿಕ, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕವಾಗಿ ಶೋಷಣೆಗೆ ಒಳಗಾದವರನ್ನು ಚಿತ್ರಿಸುತ್ತಾ ಇನ್ನೊಂದು ಕಡೆ ಆ ಕರ್ಮದ ಕಡೆ ಹಿಂದಿರಬಹುದಾದ ಕರ್ತೃ ಶೋಷಕನನ್ನು ಓದುಗರಿಗೆ ಊಹಿಸಲು ಬಿಡುತ್ತದೆ".[೧೦೩]

ಸಾಮಾನ್ಯ ಜನರ ಶೋಚನೀಯ ಸ್ಥಿತಿ, ಸಿರಿವಂತರ ಆಡಂಬರದ ಸ್ಥಿತಿಗಳನ್ನು ಕವನ ಕಟ್ಟಿ ಕೊಡುತ್ತದೆ.

ಚಿನ್ನವನ್ನು ತೆಗೆಯೋರು ಅನ್ನವನ್ನು ಕಾಣದೋರು
ಬಟ್ಟೆಯನ್ನು ನೇಯೋರು ಬರಿಮೈಯಲಿ ಹೋಗೋರು
ಹೇಳಿದಂತೆ ಕೇಳುತಾರೆ ನನ್ನ ಜನಗಳು
ಗಾಳಿಯಲ್ಲೆ ಬಾಳುತಾರೆ ನನ್ನ ಜನಗಳು[೧೦೪]

ಬಡತನದ ಬಗೆಗಿನ ಈ ಸಾಲು ಮುಖ್ಯ. ಅನ್ನವನ್ನು ಕಾಣದಿರುವುದು, ಬರಿಮೈಲಿ ಹೋಗುವುದು, ಗಾಳಿಯಲ್ಲಿ ಬಾಳುವುದು, ಶೂದ್ರರ ಅತಂತ್ರ, ಅಸ್ಥಿರ, ತೀರ ರಿಕ್ತ ಸ್ಥಿತಿಯನ್ನು ಪರಿಣಾಮಕಾರಿಯಾಗಿ ಕಟ್ಟಿಕೊಟ್ಟಿದೆ. ಬಡತನದಲ್ಲಿ ಬೇಯುವಂಥವರಿಗೆ ಅಸ್ಪೃಶ್ಯತೆಯ ನೋವು ಬರೆ ಮೇಲೆ ಬರೆ ಎಳೆದಂತೆಯೇ ಆಗುತ್ತದೆ. ಜಮೀನ್ದಾರರು, ಬಂಡವಾಳಶಾಹಿಗಳು, ಸಾಲ ಕೊಡುವವರು, ಧರ್ಮದ ಹೆಸರು ಹೇಳಿ ಜೀವಿಸುವ ದೈತ್ಯರು ಹೇಗೆ ಬಡವರ-ದುರ್ಬಲರ ರಕ್ತ ಹೀರಿ ಅಸ್ತ್ರವನ್ನು ಬಳಸದೆಯೇ ಹಸಿವೆಯಿಂದಲೇ ಸಾಯುವಂತೆ ಮಾಡುತ್ತಾರೆ ಎಂಬುದು ತುಂಬಿ ಬಂದಿದೆ.

ಹಸಿವಿನ ಕುರಿತ ಸಣ್ಣ ಕತೆಗಳಿಗೆ ಪೂರಕವಾಗಿ ನವೋದಯ ಕಾವ್ಯಗಳಲ್ಲಿಯೂ ಹಸಿವು ಮತ್ತು ಬಡತನ ವಸ್ತುವಾಗುವುದರ ಜೊತೆಗೆ ಕವಿಗಳಿಗಿರುವ ಸಾಮಾಜಿಕ ಕಳಕಳಿ ಇಲ್ಲಿ ವ್ಯಕ್ತವಾಗಿದೆ. ನವೋದಯ ಕವಿಗಳು ಪಾಶ್ಚಾತ್ಯರಿಂದ ಪ್ರಭಾವಿತರಾದರೂ, ಅವರ ಕವನಗಳು ಆದರ್ಶವನ್ನು ಎತ್ತಿ ಹಿಡಿದರೂ ಭಾರತೀಯ ಪರಂಪರೆಯ ದರ್ಶನವನ್ನು ಪಡೆದ ಈ ಯುಗದ ಕವಿಗಳು ಸಾಮಾಜಿಕ ಜವಾಬ್ದಾರಿಯನ್ನು ಹೊಂದಿರುವುದರ ಜೊತೆಗೆ ಸಮಾಜಮುಖಿ ಚಿಂತನೆಯನ್ನು ಹೊಂದಿದ್ದರು ಎಂಬುದು ನಿರ್ವಿವಾದ.

'ಶ್ರೀ' ಯವರಿಂದ ಪ್ರಾರಂಭವಾದ ಸಾಮಾನ್ಯನಿಗೆ ಸಾಹಿತ್ಯ ತಲುಪಿಸುವ ಕಾರ್ಯ ಮುಂದೆ ಕುವೆಂಪುರವರಿಂದ ಮುಂದುವರಿಯಿತು. ಅನಂತರದಲ್ಲಿ ಸಿದ್ಧಲಿಂಗಯ್ಯನವರಲ್ಲಿ ಇದು ನಿಜರೂಪದಲ್ಲಿ ಜನಸಾಮಾನ್ಯರ ಹತ್ತಿರ ಪ್ರಕಟವಾಯಿತು. ಹೀಗೆ ಕನ್ನಡ ಕಾವ್ಯ ಅರಮನೆಯ ಮೆಟ್ಟಿಲಿಳಿದು ಬಂದು ಗುಡಿಸಲ ಬಡಯೋಗಿಗಳ ದುಡಿಮೆಗೆ ದನಿಯಾಯಿತು. ಪಂಡಿತ ಮಂಡಲಿಯ ಕವಚ ಕಳಚಿ ಜನಸಾಮಾನ್ಯರೊಡನೆ ಮಣ್ಣಿನಲ್ಲಿ ಬಿದ್ದು ಒದ್ದಾಡಿತು. ಮಣ್ಣಿನ ವಾಸನೆಯುಕ್ತ ಕಂಪನ್ನು ಸುತ್ತಮುತ್ತಲೂ ಹರಡಿತು. ಆ ಮೂಲಕ ನಿಜವಾಗಿಯೂ ಜನರ ಕಾವ್ಯವಾಯಿತು.

ಬಿ. ಎಂ. ಶ್ರೀ. ಯವರ 'ಇಂಗ್ಲಿಷ್ ಗೀತಗಳು' ಕವನ ಸಂಕಲನದಲ್ಲಿರುವ 'ಮುದಿಯ ರಾಮಗೌಡ' ಅನುವಾದವಾದರೂ ಇಲ್ಲಿನ ನೆಲದ ಸೊಗಡುಳ್ಳ ಸ್ವತಂತ್ರ ಕೃತಿಯೇ ಎನ್ನುವಷ್ಟು ಸತ್ವಪೂರ್ಣವಾಗಿದೆ. ಬಡ ಸಂಸಾರದ ಬಡ ಪ್ರೀತಿಯ ತಾಕಲಾಟದ ಬದುಕು ಇಲ್ಲಿ ಚಿತ್ರಿತವಾಗಿದೆ.

ಅಪ್ಪ ಹೊರಗೆ ಗೆಯ್ಯಲಾರ, ಅವ್ವ ಒಳಗೆ ನೆಯ್ಯಲಾರಳು
ಹಗಲು ಇರುಳು ನಾನು ದುಡಿದೂ ನಮಗೆ ಹಿಟ್ಟು ಹುಟ್ಟದು[೧೦೪]

ಬಡ ಸಂಸಾರದ ದುಃಸ್ಥಿತಿ ಇಂಥದ್ದು. ಹಗಲು-ರಾತ್ರಿ ನಿರಂತರವಾಗಿ ದುಡಿದಾದರೂ ಹಸಿವನ್ನು ನೀಗಿಸಿಕೊಂಡು ಬದುಕೋಣವೆಂದರೆ ಅದು ಸಾಧ್ಯವಾಗುತ್ತಿಲ್ಲ. ದುಡಿದದ್ದು ಹೊಟ್ಟೆಗೆ (ಅನ್ನಕ್ಕೆ) ಸಾಕಾಗುವುದಿಲ್ಲವೆಂದಾದರೆ ಇನ್ನು ಬಟ್ಟೆ, ಸಂಸಾರ, ವಸತಿಗೇನು ಗತಿ. ಹೀಗೆ ಸಾಮಾನ್ಯರ ಬದುಕು ನವೋದಯ ಕಾಲಘಟ್ಟದ ಕನ್ನಡ ಕವಿಗಳ ಕಾವ್ಯ ವಸ್ತುವಾಯಿತು. ಈ ನೆಲದ ಮಣ್ಣಿನ ಘನ ರೂಪ ಪಡೆದು ಇಂಥ ಕವನಗಳು ರಚನೆಯಾದವು.

'ಇಂಗ್ಲಿಷ್ ಗೀತಗಳು' ಕವನ ಸಂಕಲನದ 'ಬಡವನ ಹುರುಡು' (ಪು. ೩೨) ಕವನ:

ಮೌನವಾಗಿ ತಾನು ಬದುಕಿ
ಹೀನ ಬಡತನವೇನೇ ಇರಲಿ
ನಾಚಿಕೊಳುವ ನೀಚ ತೊತ್ತ
ಆಚೆ ನೂಕು, ಏನೆ ಇರಲಿ

ಎಂದು ಹೇಳುವ ಕವಿ ಕವನದ ಕೊನೆಯಲ್ಲಿ ಹೇಳುವ ಮಾತುಗಳು ಭರವಸೆಯ ಕಿರಣಗಳಾಗಿವೆ. ಹೊಟ್ಟೆಗೆ ಹಸಿದಾಗ ಹಿಟ್ಟು, ಗಂಜಿ ಇರಲಿ, ಚಿಂದಿ ಬಟ್ಟೆಯು ಇರಲಿ, ಬಡತನ, ಸಿರಿತನ ಇರಲಿ, ಕಷ್ಟ-ಸುಖಗಳಿರಲಿ ಎಂದು ಹೇಳುತ್ತಲೇ ಏನೇ ಇರಲಿ, ಏನೇ ಇರಲಿ, ಬಂದೇ ಬರುವುದು, ಏನೇ ಇರಲಿ ಅಣ್ಣತಮ್ಮಂದಿರಾಗಿ ಎಲ್ಲಾ ಇರುವ ಕಾಲ ಏನೇ ಇರಲಿ ಎಂದು ಹೇಳುವಲ್ಲಿ ಅಮೂಲ್ಯವಾದ ಅರ್ಥ ಹೊರಹೊಮ್ಮುತ್ತದೆ.

ಹಾಗೆಯೇ ಡಿ. ವಿ. ಜಿ. ಯವರು ಸಾಮಾನ್ಯ ಜನರಿಗಾಗಿ ದುಡಿದ ದುಡಿಮೆ ಅಪಾರ. ಇವರು ಸಾಮಾನ್ಯ ಜನರಂತೆ ಬದುಕಿದರು. ಇವರು 'ಕಷ್ಟಕರವಾದದ್ದೇ ಶ್ರೇಯಸ್ಕರ' ಎಂದುಕೊಂಡು ಬದುಕಿದವರು.

ಮನುಷ್ಯನ ಮೂಲಭೂತ ಅಗತ್ಯತೆಗಳನ್ನು ಹೇಳುವ ಕಗ್ಗದ ಪದ್ಯ ಹೀಗಿದೆ:

ಹೊಟ್ಟೆರಾಯನ ನಿತ್ಯದಟ್ಟಹಾಸವೋ ಬಾಳು
ದುಷ್ಟ ಧಣಿಯೂಳಿಗಕೆ ಸೊಟ್ಟು ಮೈಬಾಗು
ಹಿಟ್ಟಿಗಗಲಿದ ಬಾಯಿ, ಬಟ್ಟೆಗೊಡ್ಡಿದ ಕೈಯಿ
ಇಷ್ಟೆ ನಮ್ಮೆಲ್ಲ ಕಥೆ-ಮಂಕುತಿಮ್ಮ (ಪದ್ಯ ೩೫೨)

ಬಡತನದ ಸ್ವರೂಪದ ಕುರಿತು ಹೇಳುವ ಡಿ. ವಿ. ಜಿ., ಬಡತನದ ಪರಿಹಾರದ ಬಗ್ಗೆ 'ಹೊಟ್ಟೆಪಾಡಿನ ದುಡಿಮೆ ಸೃಷ್ಟೀಶಪದದೊಲುಮೆ' (ಪು. ೬೭೮), 'ಹೊಟ್ಟೆಪಾಡಿಗೊಂದೊಂದು

ಸದ್ಯ ದುಡಿವುದ್ಯೋಗ (ಪು. ೭೬೬) ಎಂದು 'ಮರುಳ ಮುನಿಯನ ಕಗ್ಗ'ದಲ್ಲಿ ಹೇಳುವುದು ಅತ್ಯಂತ ಮುಖ್ಯವಾಗುತ್ತದೆ.

ಸಮಾಜದಲ್ಲಿರುವ ಶೋಷಣೆ, ಅನ್ಯಾಯಗಳನ್ನು ಕ್ರೂರ ವಿಷಜಂತುಗಳಂತೆ. ಇವು ಸಾಮಾನ್ಯ ಜನರ ರಕ್ತ ಕುಡಿದೇ ಬದುಕುವ ಪಿಶಾಚಿಗಳು. ಇಂಥ ಕ್ರೂರವಾದ ಶೋಷಣೆ, ಅನ್ಯಾಯಗಳ ಜನನಕ್ಕೆ ಕಾರಣವೇನು? ಬಡತನದ ಮೂಲ ಎಲ್ಲಿದೆ ಎಂಬುದನ್ನು ಶೋಧಿಸುವ ಪ್ರಯತ್ನವನ್ನು ವಿ. ಸೀತಾರಾಮಯ್ಯ ತಮ್ಮ ಕವನದಲ್ಲಿ ಮಾಡಿದ್ದಾರೆ.

'ನೂರು ಹಸಿವು ಬೇನೆ ನಾವಿಲ್ಲಿ ತುಂಬೇವು' ಎಂಬ ಆದರ್ಶನೆಲೆಯ ಸ್ವಾತಂತ್ರ್ಯದ ಸಂಭ್ರಮದಲ್ಲೇ ಮೂಡಿ ಬಂದ 'ನಿನಗಾಗಿ' ಎಂಬ ವಿ. ಸೀ. ಯವರ ಕವನ ಹಲವು ದೃಷ್ಟಿಯಿಂದ ಮುಖ್ಯ.

ವಿ. ಸೀ. ಯವರು ಕಂಡ ಸಾಮಾನ್ಯ ಜನರ ನೋವು ಎಷ್ಟು ಭೀಕರವಾದುದು ಎಂಬುದು 'ಕ್ರೋಧಕೇತನ' ಕವನದಲ್ಲಿ ಮಡುಗಟ್ಟಿ ನಿಂತಿದೆ. ಈ ಕವನವು ಬಂಡವಾಳಶಾಹಿಯ ಮೇಲೆ ದೇಶದ ಸಹಸ್ರ ದೀನದಲಿತ ವರ್ಗದವರು ಕೈಯೆತ್ತಿ ಸಮಾಜದಲ್ಲಿ ಒಂದು ಆರ್ಥಿಕ ಕ್ರಾಂತಿಯನ್ನು ನಡೆಸಿ ಸಮತೆಯನ್ನು ಬಿತ್ತುವರೆಂಬ ತತ್ವವನ್ನು ಪ್ರತಿಪಾದಿಸುತ್ತದೆ. ಬಡವರು ಹಗಲಿರುಳು ವಿಶ್ರಾಂತಿಯು ಕೂಡಾ ಇರದೆ ದುಡಿಯುವವರು, ರಕ್ತ ಸುರಿಸಿ ಚಿನ್ನದ ಬೆಳೆ ತೆಗೆಯುವವರು. ಆದರೆ ಹೊಟ್ಟೆಗನ್ನವಿಲ್ಲದೇ ಹಸಿವೆಯೆಂದಲೇ ಬಳಲುವವರು. ಬಡವರು ದುಡಿದದ್ದು ಮಾತ್ರ ಧನಿಕರ ಮನೆ ಸೇರುವುದು, ಬಡವರ ಮನೆಯ ಸ್ಥಿತಿ

ಹಾಲಿಲ್ಲದೆ ಹಸುಳೆಗಳಳಿಯುವುವು ದಿನಕೆ ಸಾವಿರವಿದಿರಲಿ
ರೋಗಕೌಷಧಿ ಪಥ್ಯ ದೊರೆಯದೆ ಸಾವು ತಿಂಬುದು ಜನರನು[೧೦೫]

ಒಂದು ಹೂವು ಅರಳಬೇಕಾದರೆ ಅಥವಾ ಒಂದು ಸಸಿ ಹಣ್ಣು ಬಿಡಬೇಕಾದರೆ ಅದರ ಹಿಂದೆ ಬಡವನ ದುಡಿಮೆಯ ಶಕ್ತಿ ಅಡಗಿರುತ್ತದೆ. ಬಡವನ ನೆತ್ತರು ಧನಿಕನ ಮನೆಯನ್ನು ಉದ್ಧರಿಸುತ್ತದೆ. ಆದರೆ ಜಗತ್ತು ನೋಡುವುದು ತಾಜಮಹಲನ್ನು, ಧನಿಕರ ಅರಮನೆಯನ್ನು, ಹಬ್ಬ-ಜಾತ್ರೆಗಳನ್ನು, ಹೂವಿನ ಸೊಗಸನ್ನು, ಹಣ್ಣಿನ ಸವಿಯನ್ನು. ಇವುಗಳನ್ನು ಮಾತ್ರ ಮೆಚ್ಚಿ ಹೊಗಳಿ ಹಾಡುತ್ತಾರೆ. ಆದರೆ ನಿಜಗೌರವ ಸಲ್ಲಬೇಕಿರುವುದು ದುಡಿದ ಈ ಶ್ರಮಜೀವಿಗೆ. ದುಡಿಮೆಗೆ ತಕ್ಕ ಗೌರವವಿಂದು ಕಾಣೆಯಾಗಿರುವುದು ವಿಷಾದನೀಯವೂ, ಆತಂಕಕಾರಿಯೂ, ಆಘಾತಕಾರಿಯೂ ಆದುದಾಗಿದೆ.

ಧನಿಕರ ಮನೆಯಲ್ಲಿ ಬಡವರ ಜೀತ ವಂಶಪಾರಂಪರ್ಯವಾಗಿದೆ. ಸಾಲದ ಸುರುಳಿ ದೀನರನ್ನು, ಬಡವರನ್ನು ಸುಲಿಯಿತು, ನಿರಂತರ ದುಡಿಮೆಯಿಂದ ಒಡಲು ಬಾಗಿತು, ಭುಜವು ಸೋತಿತು. ತೊಡೆಯು ಶಕ್ತಿಗುಂದಿತು, ಗುಂಡಿಗೆ ಬತ್ತಿತು. ಎಷ್ಟು ಪ್ರಭಾವಶಾಲಿಯಾದ ಮಾತಿದು. ಪೌರುಷ, ಪುರುಷತನವನ್ನೇ ಹೀರಿಬಿಡುವಷ್ಟು ಶಕ್ತಿಯುತವಾದ ಸಿರಿವಂತರ ಹಣದ ದಾಹ ಇಲ್ಲಿನದು.

ಕೋಟಿ ಖಂಡುಗ ಧಾನ್ಯವನ್ನು ಬಡವರು ಬೆಳೆಯುವರು. ಆದರೆ ಕೋಟಿ ಬಡಮಕ್ಕಳು ಅನ್ನ ಸಿಗದೇ ಸಾಯುವರು. ಇದು ಎಂಥ ವಿಪರ್ಯಾಸ. ಕೈಯಲ್ಲೇ ಅಮೃತವಿದ್ದರೂ ಅದನ್ನು ಕುಡಿಯಲಾಗದ ಸ್ಥಿತಿ, ವಿಷ ಕುಡಿದು ಸಾಯಬೇಕಾದ ಹೀನಸ್ಥಿತಿ. ಇದರ ಕಾರಣ ಸಿರಿವಂತರ ವ್ಯವಸ್ಥಿತ ಶೋಷಣೆಯ ಚಕ್ರವ್ಯೂಹ. ಬಡವರಾರೂ ಚಕ್ರವ್ಯೂಹ ಭೇದಿಸಲಾರರು. ಭೇದಿಸ ಹೊರಟರೆ ಸಾವನ್ನು ಬೆನ್ನಿಗೆ ಕಟ್ಟಿಕೊಂಡು ಹೊರಟಂತೆ. ಅಪರೂಪಕ್ಕೆ ಯಾರಾದರೂ ಭೇದಿಸಿದರೆ ಅವರು ಜೀವಂತವಾಗಿ ಹಿಂದಿರುಗಿ ಬರುವಂತಿಲ್ಲ. ಸಿರಿವಂತರ, ಅಧಿಕಾರಿಗಳ, ದೊರೆಗಳ ಆಪ್ತ ಸಂಬಂಧದ ಚಕ್ರವ್ಯೂಹ ಬಡವರನ್ನು ಬಡವರಾಗೇ ಮಾಡಿ ಬಿಡುತ್ತದೆ.

ಯಾರೋ ಉಳುವರು ಯಾರೋ ದಣಿವರು
ಯಾರೋ ಕೊಯ್ವರು ತಿಂಬರು ಯಾರೊ
ನಗುವರು ಯಾರೊ ಕುಣಿವರು
ಯಾರೋ ಬೆವರನು ಬಸಿದವರು![೧೦೬]

ದುಡಿದದ್ದು, ದಣಿದದ್ದು, ಬೆವರು ಹರಿಸಿದ್ದು, ರಕ್ತ ಸುರಿದದ್ದು, ಮಡದಿ, ಮಕ್ಕಳು, ಮೊಮ್ಮಕ್ಕಳು ಎಲ್ಲರೂ ಸೇರಿ ದಾಸ್ಯ ಮಾಡಿದ್ದು ಎಲ್ಲವೂ ಆಯಿತು. ಮೋಡದಂತೆ ಸೌಮ್ಯವಾಗಿ ಎಲ್ಲವನ್ನೂ ತಾಳ್ಮೆಯಿಂದ ಕೇಳಿ ಸಹಿಸಿದ್ದು ಆಯಿತು. ಮೋಡ ಎಂದೂ ತಂಪಾಗಿರುವುದು ಸಹಜ. ಆದರೆ ಬಡವರ ತಾಳ್ಮೆಗೂ ಒಂದು ಮಿತಿ ಉಂಟು. ಆ ಗೆರೆ ದಾಟಿದಾಗ ಬಡವರ ಕೋಪ, ಸೇಡನ್ನು ಹೇಳುವ ಅತ್ಯುತ್ತಮ ಪದ 'ಮೋಡವೂ ಉರಿಯ ಕಾರು'ವುದು. ಬಡವರ ಬಡಬಾಗ್ನಿ ಎಂಥದ್ದು ಎಂಬುದಿಲ್ಲಿ ಸ್ಪಷ್ಟವಾಗಿದೆ.

ವಿ. ಸೀ. ಯವರ 'ಸಾಲ' ಕವಿತೆ ಬಡವನೊಬ್ಬನ ಸಾಲ ತೀರಿಸಲಾಗದೆ ತನ್ನ ಜೀವದಂತಿದ್ದ ದನಗಳನ್ನೇ ಕಟುಕರಿಗೆ ಮಾರುವ ದುಃಖದ ಸಂಗತಿ ಹೇಳುವುದಾಗಿದೆ. 'ಮುಗಿಲದೀವಿಗೆ' ಮನುಷ್ಯನ ಒಳತೋಟಿಗಳನ್ನು ಪ್ರಕಟಪಡಿಸುವ ಕವನ. ಕುಯಿದು ಚೆಲ್ಲಿದ ಚಿಗುರಿನಂತೆ ಎಳೆಯ ಮೊಗಗಳು ಸೊರಗಿವೆ, ಮಳೆ ಬಾರದು, ಆದುದರಿಂದ ನೇಗಿಲುಗಳು ಉಪವಾಸ ಕುಳಿತಿವೆ. ಬೆಳೆಯೂ ಬಾರದು. ಜನರ ಪರಿಸ್ಥಿತಿಯ ಪರಿಣಾಮಕಾರಿ ಚಿತ್ರಣ ಮೇಲಿನಂತಿದೆ.

ಒಂದು ಹೊತ್ತಿನ ಊಟಕ್ಕಿಂತಲೂ ಒಂದು ಜೀವವೇ ಅಗ್ಗವಾಗಿದೆ. 'ಯುದ್ಧವೂ ಕೊಲ್ಲಲಾರದಷ್ಟು ಜನರನ್ನು ಹಸಿವು ಕೊಂದಿದೆ'. ಇಂಥ ಚಿಂತಾಜನಕ ಸ್ಥಿತಿಯಿಂದ ದೇಶ ಮುಕ್ತವಾಗಬೇಕೆಂಬ ಆಶಯ ಕವಿಯದ್ದಾಗಿದೆ.

ಹಬ್ಬ ಎಂದರೆ ಸಡಗರ, ಸಂತೋಷ ಸಾಗರ. ಆದರೆ ಬಡವರಿಗೆ ಹಬ್ಬ ವಿಶೇಷ ಸಂಭ್ರಮವಲ್ಲ. ಪ್ರತಿ ವರ್ಷ ಬರುವ ದೀಪಾವಳಿ ದಿವಾಳಿಯಾಗಿದೆ ಎಂಬುದಿಲ್ಲಿ ಇಂಗಿತವಾಗಿದೆ.

ಅನ್ನಕ್ಕಾಗಿ ಹಸಿದ ಹೊಟ್ಟೆ ಬ್ರಹ್ಮನನ್ನು ಶಪಿಸಿದೆ
ಜೀವಕಿಂತ ಜೀವನದ ವೆಚ್ಚವೇ ಬಿಗಿದಿರೆ

ನಾಳೆಗಿನ್ನಾವ ಗಾಸಿಬಹುದೋ ಎಂದು ನಡುಗಿಸುತ್ತೆ
ಬಾಳ್ ದಿವಾಳಿಯಾಗಿದೆ.[೧೦೭]

'ಯೋಜನೆಯ ಕರೆ' ಇಹ-ಪರಗಳ ಸಮೃದ್ಧಿಯನ್ನು ಇಳೆಯ ಮೇಲೆಯೇ ತರುವ ಕವನ. ರಾಮರಾಜ್ಯದ ಪರಿಕಲ್ಪನೆಯೇ ಆದರ್ಶಯುತವಾದುದು. ರಾಮರಾಜ್ಯದ ಸಮೃದ್ಧಿಯನ್ನು ಮತ್ತೆ ತರಲು ಯೋಜನೆ ಕರೆ ಕೊಟ್ಟಿದೆ. ಎಲ್ಲವೂ ದೊರೆಯಲಿವೆ ದುಡಿಯುವವರಿಗೆ ಯಾವುದಿದೆ ಮಿತಿಯಿಂದು - ಭಾರತದ ಬಾಳ್ಗೆ? ಎಲ್ಲೆಲ್ಲೂ ಸಮೃದ್ಧಿ. ಅನ್ನಪೂರ್ಣೆ ತಾಯಿಯಾಗಿರಲು ಬಿಕನಾಸಿಗಳು ನಾವೇ? ಕಾಮಧೇನು ಕರೆಯುತ್ತಿರಲು ನಮಗೆ ಬೇರೆಯವರ ಹಂಗು ಬೇಕಿಲ್ಲ. ಮಾಸಿದ ಮುಖ, ಸಣಕಲಾದ ಒಡಲು ಇನ್ನು ಜನರಿಗೆ ಬೇಡ. ಮನೆಮನೆಯಲ್ಲಿ ಸಿರಿವಂತಿಕೆಯಿರಲು ಪಾಯಸ ಪೊಂಗಲುಗಳೇ ದಿನನಿತ್ಯದ ಭೋಜನವಾಗಲಿ. ಈ ಸಿರಿಯ ಹಾಡು ನೂರು ಕಾಲದವರೆಗೂ ಬಾಳಲಿ ಮತ್ತು ಹತ್ತು ಲೋಕಕೆಲ್ಲ ಹಂಚಲಿ, ಸುಖದಿಂದ ಬಾಳಲಿ.

'ಬಿಡಿನುಡಿಗಳು' ತನ್ನದೇ ಆದ ವಿಶಿಷ್ಟ ಧಾಟಿಯಿಂದ ಸೊಗಸಾಗಿದೆ.

ಹಸಿದ ಕೋಟಿಗೆ ಬೇಕಾದುದು ಒಂದೇ ಕವಿತೆ
ಬಲವೀಯುವ ಅನ್ನ, ಆಹಾರ-ಗಾಂಧಿ[೧೦೮]

ಬತ್ತಿದ ಮೊಲೆಗಾತಿದೆ ಮಗು
ಇನ್ನೊಂದಿದೆ ಕೊರಲನು ಸುತ್ತಿ, ಒಡೆಯುತ್ತಿದೆ ಒಂದೇ ಸಮನೆ
ತಾಯ್ ಸುತ್ತಿಗೆ ಕೂಲಿಗೆ ಕಲ್ಲ

'ಕಿರುಕುಳ' ಕವನದ ತುಂಬ ಕದನ, ಬರದ ಭೀತಿ ತುಂಬಿದೆ. ಶಾಂತಿ ಬರುವುದೆಂದು ಬಯಸಿದರೂ ಇಲ್ಲಿನ ಕಿರುಕುಳದಿಂದ ಬಿಡುಗಡೆಯೆ ಇಲ್ಲದಂತಾಗಿದೆ.

ಅನ್ನವಸನವೇ? ಸಾಲಶೂಲವೇ? ಒಡೆಯರಬ್ಬರತೆ?
ಬಡತನವೆ? ಬಾಳ್ ನಟ್ಟ ವಿಧಿಯ ವಿಷದಲಗೆ?
ರಾಜ್ಯ ಸಾಮ್ರಾಜ್ಯಗಳು ರಕ್ಕಸತೆ ನೆಗೆಪುತ್ತ
ಕೊಲೆಯ ಮಾರಿಗೆ ನೆಲದಿ ಮೈತೊಳೆವ ಚಲವೆ?
(ಕಿರುಕುಳ, ಪು. ೫೧೩)

ಸಿರಿವಂತರು ಕೈತೊರೆದೀಯದಿರೆ ಬಡವರ್ಕಳದೇ ಪರಿ ಬಾಳುವರೇ? 'ಅರ್ತೆ' ಕವನ ಬಡತನದ ಪರಿಹಾರದ ಕುರಿತು ಮಾತನಾಡುತ್ತದೆ. ಉಳ್ಳವರು ತಮ್ಮಲ್ಲಿರುವುದನ್ನು ಪ್ರತಿಫಲಾಪೇಕ್ಷೆ ಇಲ್ಲದೆ ದಾನ ಮಾಡಬೇಕು. ಆಗ ಮಾತ್ರ ಬಡವರ ಸ್ಥಿತಿಗತಿಯೂ ಸುಧಾರಿಸಿ ಸಮಾಜದಲ್ಲಿ ಸಮಾನತೆ ಶಾಂತಿ ನೆಲೆಸಲು ಸಾಧ್ಯ ಎಂಬುದು ಇಲ್ಲಿ ವ್ಯಕ್ತವಾಗಿದೆ.

ಮಧುಚೆನ್ನರ 'ಸಿಡಿಲು' ಕವಿತೆ ಈ ಸಂದರ್ಭದಲ್ಲಿ ಮುಖ್ಯವಾಗುತ್ತದೆ. ಇಂದ್ರವನದ ಹಣ್ಣು ಎಲ್ಲೆಂದರಲ್ಲಿ ಬಿತ್ತು ಎನ್ನುವ ಕವಿ ಮುಂದೆ ಹೇಳುವ ಮಾತು ಮುಖ್ಯ.

ಬೇಡದವರ ಮೇಲೆ ಬಿತ್ತು
ಬೇಡಿದವರಿಗೆ ಇಲ್ಲ ತುತ್ತು
ಹಸಿಯದವರು ಹಲವು ಮಂದಿ
ಹಸಿದ ಜನರು ಕೆಲವು ಮಂದಿ
ಹಸಿಯದವರಿಗೆ ಅಮೃತ ವಿಷವು
ಹಸಿಯೇ ವಿಷವೇ ಅಮೃತರಸವು[೧೦೯]

ಮಧುರ ಚೆನ್ನರ ಗೆಳೆಯರ ಗುಂಪಿನವರಲ್ಲೊಬ್ಬರಾದ ಕಾಪಸೆ ರೇವಪ್ಪನವರ 'ತುತ್ತು ರೊಟ್ಟಿ' ಕವನವನ್ನು ಇದೇ ಸಂದರ್ಭದಲ್ಲಿ ಗಮನಿಸಬಹುದು.

ನನ್ನ ಹಸಿವೆಯ ಕಿಚ್ಚು ದಗದಗಿಸಿ ಹೊತ್ತಿಹುದು
ಎಲ್ಲಿಹುದು ತುತ್ತುರೊಟ್ಟಿ?
ನನ್ನ ಬಾಳಿನ ಹೊಂಡ ಕೆಂಡವಾಗಿಹುದಯ್ಯಾ
ಎಲ್ಲಿಹುದು ತುತ್ತುರೊಟ್ಟಿ?
ಅನ್ನದಾ ಹೊಳೆಯಲ್ಲಿ ಈಜುವವರ ಸುಡುತಿಹುದು.[೧೧೦]

ಬಡವನ ಹಸಿವೆಯ ತಳಮಳ ಈ ಕವಿತೆಯಲ್ಲಿ ಪ್ರಖರವಾಗಿಯೇ ವ್ಯಕ್ತವಾಗಿದೆ. ಕೊನೆಯ ಸಾಲು 'ಅನ್ನದಾ ಹೊಳೆಯಲ್ಲಿ ಈಜುವರ ಸುಡುತಿಹುದು' ಎಂಬುದು ಸಾಮಾಜಿಕ ವಿಷಮತೆಯನ್ನು ಸೂಚಿಸುವ, ಬಡವರ ಪ್ರತಿಕ್ರಿಯೆಯನ್ನು ವ್ಯಕ್ತಗೊಳಿಸುವ ಅತ್ಯಂತ ಧ್ವನಿಪೂರ್ಣ ಚರಣವಾಗಿದೆ.

ಅನ್ನ, ವಸತಿ, ವಸ್ತ್ರಗಳು ಜೀವನಾವಶ್ಯಕ, ಅನಿವಾರ್ಯ. ಜಿ. ಪಿ. ರಾಜರತ್ನಂರವರು ಹೇಳುವ ಹಸಿವು, ದಾರಿದ್ರ್ಯ ತುಸು ಭಿನ್ನ. ಜೀವನಾವಶ್ಯಕಗಳ ಬಡತನ ಇದ್ದರೂ ಇರಲಿ, ಮಾನಸಿಕ ಬಡತನ ಮಾತ್ರ ಇರಬಾರದು. ರತ್ನ ನಂಜಿಗೆ ಹೇಳುವಲ್ಲಿ ಈ ಭಾವ ತುಂಬಿ ಬಂದಿದೆ.

ಮನೆಯಾಗ್ ಒಂದು ದಿನ ತಿನ್ನಾಕ್ ಇಲ್ದೆ
ನನಗ್ ಇಲ್ಲಾಂತ ನೀನೂ ಒಲ್ದೆ
ಕರದೋರ್ ಅಟ್ಟಿಗ್ ಓಗೋಲ್ಲೇಂದದ್
ನಿಂಗೆ ನೆಪ್ಪೈತ ನಂಜಿ?
ಆವೊತ್ತೆಲ್ಲ ಯಿಟ್ಟೇ ಇಲ್ದೆ
ಸಾಯ್ತಿದ್ರೂನೆ ನೆಗ್ತ ಸೋಲ್ದೆ
ಬದುಕೋದ್ ತಿನ್ನಾಕ್ ಅಲ್ಲಾಂತ್ ಅಂದದ್
ನಿಂಗೆ ನೆಪ್ಪೈತ ನಂಜಿ?
ಬಟ್ಟೇ ಒಟ್ಟೇಗ್ ಇಲ್ದಿದ್ರೂನೆ
ನಂ ನಂ ಪ್ರೀತಿ ಇರೋವರ್ಗೂನೆ
ದೇಹ ಓದ್ರೂ ಮನಸೋಗಾಲ್ಲ
ನಿಂಗ್ ನೆಪ್ಪಿರ್ಲಿ ನಂಜಿ[೧೧೧]

ಒಟ್ಟಿನಲ್ಲಿ ರಾಜರತ್ನಂ ಬಡತನವನ್ನು ಕಂಡವರು, ಉಂಡವರು, ಹಸಿವಿನಿಂದ ನೊಂದಿರುವುದರಿಂದ ಇವರ ಕವನಗಳಲ್ಲಿ ಹಸಿವು-ಬಡತನದ ಆಳವಾದ ನೋಟವಿದೆ. ನೊಂದ ಸಾಮಾನ್ಯ ಜನರ ನೈಜ ಚಿತ್ರಣವನ್ನು ಇದರಲ್ಲಿ ಕಾಣಬಹುದು.

ಭಾರತ ಬಡತನ ಮತ್ತು ಹಸಿವಿನ ಸಮುದ್ರದಿಂದ ಸುತ್ತುವರಿದಿದೆ. ಭಾರತ ಪ್ರಕಾಶಿಸುತ್ತಿದೆ ನಿಜ, ಆದರೆ ಅದು ಕಾಗದದಲ್ಲಿ ಮಾತ್ರ. ಗುಡಿಸಲುಗಳ ನೊಂದ ಜನರ ಸ್ಥಿತಿಗತಿ ಶೋಚನೀಯವಾಗಿದೆ. ಭಾರತ 'ಬಡಭಾರತ' ಎಂಬ ಪದಮೌಲ್ಯವನ್ನು ಸಾರುವಂತಿದೆ. ಸದಾ ಚಲನಶೀಲತೆಯ ಲೋಹಿಯಾರವರು ಪ್ರಜಾಪ್ರಭುತ್ವ ಸರಕಾರವು ಅಂತಿಮವಾಗಿ ಮನುಕುಲ ಪರವಾದ ಹಾಗೂ ಸಮುದಾಯ ಪರವಾದ, ಸಮುದಾಯದಿಂದ ರಚಿತವಾದ ಸರಕಾರವಾಗಿ ಬೆಳೆದು ಹೊಸ ನಾಗರಿಕತೆಯ ಉಗಮವಾಗಬೇಕೆಂದು ಸಾಮಾಜಿಕ ಕಳಕಳಿ ಹೊಂದಿದ್ದರು. ಇದೇ ಕಳಕಳಿಯಿಂದ ನವೋದಯ ಕಾಲಘಟ್ಟದ ಕವಿಗಳು ಹಸಿವು, ಬಡತನದಿಂದ ಸಾಮಾನ್ಯರು ಅನುಭವಿಸಿದ ಚಿತ್ರಣಗಳನ್ನು ತಮ್ಮ ಕವಿತೆಗಳಲ್ಲಿ ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಅಂದರೆ ಒಂದು ದೇಶದ ನಿಜವಾದ ಪ್ರಗತಿ ಹಸಿವು ಮತ್ತು ಬಡತನದ ನಿರ್ಮೂಲನೆಯೇ ಆಗಿದೆ.

೨.೪ ಹಸಿವಿನ ವ್ಯಾಖ್ಯಾನಗಳು

"ಬಡವನೊಂದಾಡಿದರೆ ಕೆಡೆಹೋಗೆಂಬರು
ಒಡವೆ ಉಳ್ಳವರು ಬಳ್ಳುಟ್ಟು ಬಗುಳಿದರೆ
ನುಡಿಯ ಲೇಸೆಂಬ ಸರ್ವಜ್ಞ"

ಸರ್ವಜ್ಞನ ಮಾತುಗಳಲ್ಲಿ ಬಡವರಿಗೊಂದು ನ್ಯಾಯ, ಧನಿಕರಿಗೊಂದು ನ್ಯಾಯವೆಂಬುದು ತಿಳಿಯುತ್ತದೆ. ಬಡವರೇನು ಮಾಡಿದರೂ ಮಾತಾಡಿದರೂ ತಪ್ಪು, ಧನಿಕ ಕೆಟ್ಟದ್ದನ್ನು ನುಡಿದರೂ, ಮಾಡಿದರೂ ಅದು ಒಳ್ಳೆಯದೇ ಎಂಬುದು ಸಾಮಾನ್ಯವಾದ ಲೋಕರೂಢಿ.

- ತಿನ್ನಲು ತುತ್ತು ಅನ್ನವೂ ಸಿಗದ ಜನಸಮುದಾಯ ಹಸಿವೆಯಿಂದ ಬಳಲುವಾಗ ನಗುವುದಾದರೂ ಹೇಗೆ ಮತ್ತು ಎಂದು?

- ಸಾಮಾಜಿಕ ಅಸಮಾನತೆಯು ಬಡವರನ್ನು ಹಸಿವಿನ ಸುಳಿಯಲ್ಲಿ ಸಿಲುಕಿಸಿ ನರಳಿಸುತ್ತಿದೆ.[೧೧೨]

- ಬಡಜನರ ಬಳಿ ಇರುವ ಏಕೈಕ ಶಕ್ತಿ ಎಂದರೆ ಅವರ ಹಸಿವು ಮಾತ್ರ - ಬೆನ್ ಓಕ್ರಿ.[೧೧೩]

- ಆಹಾರ ಮತ್ತು ಹಸಿವುಗಳ ಪರಿಭಾಷೆಯನ್ನು ಬಳಸಿಕೊಂಡಾಗ ಮಾತ್ರ ಯಾವುದೇ ವ್ಯವಸ್ಥೆಯ ಸಾರ್ಥಕ್ಯವನ್ನು ನಿರ್ಣಯಿಸಲು ಸಾಧ್ಯವೆಂದು ತೋರುತ್ತದೆ.[೧೧೪]

- ಹೊಟ್ಟೆಯ ಮೇಲೆ ಕಟ್ಟೋಗರದ ಮೊಟ್ಟೆಯ ಕಟ್ಟಿದರೇನು ಹಸಿವು ಹೋಹುದೇ? - ಅಲ್ಲಮ ಪ್ರಭು.

- ಬಡತನದ ಬವಣೆಯಲಿ ಪ್ರೇಮಕರ್ಥವೇ ಇಲ್ಲ; ಹೊಟ್ಟೆಗಿಲ್ಲದೆ ಪಿಟ್ಟು ರಟ್ಟೆಗೆಂತೈ ಬಲವು.[೧೧೫]

- ಅನ್ನದಾತುರಕ್ಕಿಂತ ಚಿನ್ನದಾತುರ ತೀಕ್ಷ್ಣ.[೧೧೬]

- ಕೂಡಿಡಬಾರದು, ಕೊಡಬೇಕು ಹಣವನು, ಕೊಟ್ಟು ತಾನುಣಬೇಕು ನಾನು – ಎಸ್. ವಿ. ಪರಮೇಶ್ವರ ಭಟ್ಟ, ಬಾಳೊಂದು ವಿಜಯದ ಬೀಡು.[೧೧೭]

- ಹಸಿವಿಗೆ ಸಮನಾದ ನೋವಿಲ್ಲ; ಅಜ್ಞಾನಕೆಣೆಯಾದ ಭೇದವಿಲ್ಲ.[೧೧೮]

- ಹಸಿವಿನ ಬಣ್ಣ ಕೆಂಪು, ಬಡತನದ ಬಣ್ಣವೂ ಕೆಂಪು – ಗಾದೆ ಮಾತು.

- ಹಡಗು ತುಂಬಿಸಲು ಹೋದವ ಬಂದ, ಹೊಟ್ಟೆ ತುಂಬಿಸಲು ಹೋದವನು ಬರಲೇ ಇಲ್ಲ – ಗಾದೆ ಮಾತು.

- ಹಸಿದು ಕುಳಿತವನಿಗೆ ಅದನ್ನು ಬಣ್ಣಿಸುವ ಅಗತ್ಯವಾಗಲೀ, ಅಷ್ಟು ಶಕ್ತಿಯಾಗಲೀ ಇರುವುದಿಲ್ಲ. ಹಸಿವನ್ನು ಅದರ ಎಲ್ಲ ಬಗೆಗಳೊಂದಿಗೆ ಅನುಭವಿಸಿದವನಿಗೆ ಮಾತ್ರ ಇನ್ನೊಬ್ಬನ ಹಸಿವು ಅರ್ಥವಾಗಬಹುದು.

- ಒಡಲುಗೊಂಡವ ಹುಸಿವ, ಒಡಲುಗೊಂಡವ ಹಸಿವ – ಜೇಡರ ದಾಸಿಮಯ್ಯ.

- ಹಸಿವೆಂಬ ಹೆಬ್ಬಾವು ಬಸಿರ್ವ ಬಂದು ಹಿಡಿದೆಡೆ ವಿಷವೇರಿತ್ತಯ್ಯಾ. ಆಪಾದ ಮಸ್ತಕಕ್ಕೆ ಹಸಿವಿಗನ್ನವನ್ನಿಕ್ಕಿ ವಿಷವನು ಇಳುಹಬಲ್ಲಡೆ ವಸುಧೆಯೊಳಗಾತನೇ ಗಾರುಡಿಗ ಕಾಣಾ ರಾಮನಾಥಾ – ಜೇಡರ ದಾಸಿಮಯ್ಯನ ವಚನ.

- ಮನುಷ್ಯನಿಗೆ ಎರಡು ಕಣಿವೆ ಸಂಪತ್ತು ಸಿಕ್ಕಿದರೂ ಮೂರನೆಯದಕ್ಕಾಗಿ ಹಾತೊರೆಯುತ್ತಾನೆ. ಅವನ ಹೊಟ್ಟೆಯನ್ನು ಅನ್ನ ಮಾತ್ರ ತುಂಬಬಲ್ಲದು ಎನ್ನುವ ಪ್ರವಾದಿ ಮಹಮ್ಮದನ ವಚನ ಹೊಟ್ಟೆಯ ಮಹತ್ವವನ್ನು ತಿಳಿಸುತ್ತದೆ.[೧೧೯]

- ಹೊಟ್ಟೆ ತುಂಬಿದವನಿಗೆ ಜಗತ್ತಿನ ಎಲ್ಲಾ ಭೋಗ ಭಾಗ್ಯಗಳು ಸಂತೋಷವನ್ನು ನೀಡುತ್ತವೆ. ಹೊಟ್ಟೆ ಖಾಲಿ ಇದ್ದವನಿಗೆ (ಹಸಿದವನಿಗೆ) ಇಡೀ ಜಗತ್ತೇ ಕ್ಷುಲ್ಲಕವೆಂಬಂತೆ ಕಾಣಿಸುತ್ತದೆ.[೧೨೦]

ದೊಡ್ಡ ಕರುಳಿನಿಂದ ಹೊರಟು ಧಮನಿ–ಧಮನಿಗಳಲ್ಲಿ ಹರಿದಾಡುವ ಹಸಿವಿನ ನರಳುವಿಕೆ ಮನುಷ್ಯನ ಒಳಗನ್ನು ಇಂಚಿಂಚಾಗಿ ಶುದ್ಧೀಕರಿಸುತ್ತದೆ.

'ಎಲ್ಲರಿಗೂ ಓಟ ಅನಿವಾರ್ಯ. ಬಡವನ ಓಟಕ್ಕೆ ಹಸಿವು ಕಾರಣವಾದರೆ, ಶ್ರೀಮಂತನಿಗೆ ಅಜೀರ್ಣ ಕಾರಣ'[೧೨೧] ಎಂಬ ಮಾತು ಬಡವ ತುತ್ತಿನ ಚೀಲವನ್ನು ತುಂಬಿಸಿಕೊಳ್ಳಲು ಓಡುತ್ತಿದ್ದಾನೆ. ಶ್ರೀಮಂತ ತಿಂದ ಅನ್ನವನ್ನು ಜೀರ್ಣಗೊಳಿಸಲು ಓಡುತ್ತಾನೆಂಬುದನ್ನು ಹೇಳುತ್ತಲೇ ಸಮಾಜದ ಅಸಮಾನತೆಯನ್ನು ಬಿಂಬಿಸುತ್ತದೆ. ಪ್ರಾಣಿಗಳ ಹಸಿವು ಸೀಮಿತವಾದದ್ದು. ಮನುಷ್ಯನ ಹಸಿವು ಎಂದೆಂದಿಗೂ ತಣಿಸಲಾರದ್ದು[೧೨೨] ಎಂಬುದು ದೇಹದಲ್ಲಿ ಉಸಿರಿರುವವರೆಗೂ ಹಸಿವಿನ ಕಾಟ ತಪ್ಪಿದ್ದಲ್ಲ, ಅದಕ್ಕೆಂದೇ ಜೇಡರ ದಾಸಿಮಯ್ಯನವರು 'ಒಡಲುಗೊಂಡವ ಹಸಿವ, ಒಡಲುಗೊಂಡವ ಹುಸಿವ' ಎಂದಿರುವುದು.

ಹಸಿದ ಹೊಟ್ಟೆಯ ಸಂಕಟ ಪ್ರಪಂಚದಲ್ಲೇ ಅತೀ ಕ್ರೂರವಾದ ಯಾತನೆ. ಹಸಿದ ಹೊಟ್ಟೆಗೆ ತತ್ತ್ವ, ಆದರ್ಶ ಬೋಧಿಸಬೇಡಿ. ಮೊದಲು ಅವರಿಗೆ ರೊಟ್ಟಿ ನೀಡಿ ಎಂದರು ತೇಜಸ್ವಿ ಸಂತ ಸ್ವಾಮಿ ವಿವೇಕಾನಂದ. 'ದುಡಿಯುವುದೇ ಗೇಣು ಹೊಟ್ಟೆಗಾಗಿ, ತುಂಡು ಬಟ್ಟೆಗಾಗಿ' ಎಂಬ ಮಾತು ಅನುರಣಿಸಿಕೊಳ್ಳುತ್ತಲೇ ಇರುತ್ತದೆ. ಆದರೂ ಪ್ರಪಂಚದಲ್ಲಿ ಅತೀ ಹೆಚ್ಚು ಜನ ಸಾಯುವುದು ಯಾವ ಕಾರಣಕ್ಕಾಗಿ ಎಂದು ಅವಲೋಕಿಸಿದರೆ ಏಡ್ಸ್, ಕ್ಯಾನ್ಸರ್, ಮಲೇರಿಯಾ ಇತ್ಯಾದಿ ರೋಗಗಳಿಂದಾದರೂ ಈ ಎಲ್ಲಾ ರೋಗಗಳಿಗಿಂತ ಹಸಿವಿನಿಂದಲೇ ಹೆಚ್ಚು ಜನ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ ಎಂಬ ವಾಸ್ತವಾಘಾತ ಗೋಚರಿಸಿದಾಗ ನಾವು ಉಣ್ಣುವ ತಟ್ಟೆಯಲ್ಲಿ, ಉಳ್ಳವರು ಮಾಡುವ ವೀಕೆಂಡ್ ಪಾರ್ಟಿ, ಭರ್ಜರಿ ಔತಣಕೂಟಗಳಲ್ಲಿ ಪೋಲಾಗುವ ಆಹಾರ ಕಣ್ಣೆದುರು ಬಂದು ಹೃದಯ ಸಂಕಟದಿಂದ ಹಿಂಡಿದಂತಾಗುವುದು ಸುಳ್ಳಲ್ಲ. ಆಶ್ಚರ್ಯ ಎನಿಸಬಹುದು ಇಂದಿಗೂ ಭಾರತದಲ್ಲಿ ೨೦ ಕೋಟಿ ಜನರು ಹಸಿದ ಹೊಟ್ಟೆಯಲ್ಲೇ ಮಲಗುತ್ತಾರೆ.[೧೨೩]

ಈ ಸಂಖ್ಯೆ ಫ್ರಾನ್ಸ್‌ನ ಜನಸಂಖ್ಯೆಗಿಂತ ಮೂರು ಪಟ್ಟು ಹೆಚ್ಚು. ಅಪೌಷ್ಟಿಕತೆಯ ಪರಿಣಾಮವೇ ಪ್ರತಿ ವರ್ಷ ಭಾರತದಲ್ಲಿ ಮರಣವನ್ನಪ್ಪುತ್ತಿರುವ ಮಕ್ಕಳ ಸಂಖ್ಯೆ ೧೩ ಲಕ್ಷ.[೧೨೪] ಇದು ಒಂದು ಕಡೆಯಾದರೆ ಇನ್ನೊಂದು ಕಡೆ ಭಾರತದಲ್ಲಿ ದಿನನಿತ್ಯ ತಯಾರಿಸುವ ಆಹಾರದ ಪೈಕಿ ಶೇಕಡಾ ೪೦ ರಷ್ಟು ಪೋಲಾಗುತ್ತಿದೆ. ತಜ್ಞರೇ ಲೆಕ್ಕಾಚಾರ ಹಾಕಿರುವಂತೆ ವಾರ್ಷಿಕವಾಗಿ ಪೋಲಾಗುವ ಆಹಾರದ ಮೌಲ್ಯ ೫೮ ಸಾವಿರ ಕೋಟಿ ರೂಪಾಯಿ. ಅಂದರೆ ಒಂದು ಕಡೆ ಹಸಿವಿನಿಂದ ಕಂಗಾಲಾಗಿ ಅನ್ನಕ್ಕಾಗಿ ಹಾಹಾಕಾರವಿದ್ದರೆ, ಮತ್ತೊಂದೆಡೆ ಅದರ (ಅನ್ನದ) ಮಹತ್ವ ಅರಿಯದೇ ವ್ಯರ್ಥವಾಗುತ್ತಿರುವ ದಾರುಣ ಸ್ಥಿತಿ.

ಹವಾಮಾನ ಬದಲಾವಣೆ ಆಹಾರೋತ್ಪಾದನೆಯ ಮೇಲೆ ಪರಿಣಾಮ ಬೀರುತ್ತದೆ. ಇತ್ತೀಚಿನ ದಿನಗಳಲ್ಲಿ ರೈತರಿಗೆ ಇದು ಸಮಸ್ಯೆಯಾಗಿ ಪರಿಣಮಿಸಿದೆ. ಭಾರತದಲ್ಲಿ ಒಟ್ಟು ಜನಸಂಖ್ಯೆ ೧.೨೦ ಕೋಟಿ ಮಿಕ್ಕಿದ್ದರೂ ಎಲ್ಲರಿಗೂ ಸಾಕಾಗುವಷ್ಟು ಆಹಾರೋತ್ಪಾದನೆ ಇದೆ. ಅಲ್ಲದೆ ವಿಶ್ವದಾದ್ಯಂತ ೨೭ ಮಿಲಿಯನ್ ಜನಕ್ಕೆ ನೀಡುವಷ್ಟು ಆಹಾರ ನಮ್ಮಲ್ಲಿದೆ. ಆದರೂ ದೇಶದಲ್ಲಿ ಅನೇಕರು ಹಸಿವಿನಿಂದ ಬಳಲುತ್ತಿರುವುದನ್ನು ಕಾಣುತ್ತೇವೆ. ಆಹಾರವನ್ನು ಸರಿಯಾಗಿ ಉಪಯೋಗಿಸದೆ ಹಾಳು ಮಾಡುವುದು ಕೂಡಾ ಇದಕ್ಕೆ ಕಾರಣ. ಅಂದರೆ 'ಆಹಾರ ಬಳಕೆಯ ಲೋಪವೇ ಹಸಿವಿಗೆ ಕಾರಣ' ಎಂದು ೧೮.೧೦.೨೦೧೬ರಂದು ಸಂತ ಅಲೊಶಿಯಸ್

ಕಾಲೇಜಿನಲ್ಲಿ ಜರುಗಿದ ವಿಶ್ವ ಆಹಾರ ದಿನಾಚರಣೆಯನ್ನು ಉದ್ಘಾಟಿಸಿ ಫೆರ್ನಾಂಡಿಸ್ ಕ್ಯಾಶ್ಯೂಸ್‌ನ ವಾಲ್ಟರ್ ಡಿ'ಸೋಜಾ ಹೇಳಿದ್ದಾರೆ.[೧೨೫]

'ಒಂದು ಅನ್ನದ ಅಗುಳಿನ ಮಹತ್ವ ಹಸಿದವನಿಗಷ್ಟೇ ಗೊತ್ತು' ಎಂಬ ಅರವಿಂದ ನಾವಡರ ಮಾತು ದಿಟವಾದದ್ದು. ಜಾಗತಿಕ ತಾಪಮಾನ, ಹವಾಮಾನ ವೈಪರೀತ್ಯ ಇತ್ಯಾದಿ ಹಲವು ಕಾರಣಗಳಿಂದ ಆಹಾರ ಸ್ವಾವಲಂಬನೆಗೆ ಧಕ್ಕೆಯಾಗಿದೆ. ಆಹಾರ ಬೆಳೆಗಳ ಇಳುವರಿಯ ಮೇಲೆ ಅಗಾಧ ಪ್ರಮಾಣ ಬೀರುತ್ತಿವೆ ಎಂದು ಹೇಳುತ್ತಿವೆ ಸಂಶೋಧನೆಗಳು. ಕನಿಷ್ಠ ಶೇ ೨೫ ರಷ್ಟು ಇಳುವರಿ ಇವುಗಳ ಕಾರಣದಿಂದ ಕುಸಿಯುತ್ತಿದೆ ಎಂಬ ಅಂದಾಜನ್ನು ಮಾಡಲಾಗಿದೆ. ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆ ಅಂದಾಜು ಮಾಡಿರುವಂತೆ ಶೇ. ೫೦ರಷ್ಟು ಹೆಚ್ಚಳವಾಗದಿದ್ದರೆ ಆಹಾರ ಕೊರತೆ ದೊಡ್ಡ ಸಮಸ್ಯೆಯಾಗಿ ಉದ್ಭವಿಸಲಿದೆ ಎಂದು ಹೇಳುತ್ತದೆ. ಇಂಥ ಸಂದರ್ಭದಲ್ಲಿ ಒಂದು ಅನ್ನದ ಅಗುಳಿನ ಮಹತ್ವವನ್ನು ನೆನಪಿಸಿಕೊಳ್ಳಬೇಕಾಗಿದೆ.

'ಒಂದು ಅಗುಳಿನ ಉಳಿತಾಯ ನೂರು ಅಗುಳುಗಳ ಉತ್ಪಾದನೆಗಿಂತಲೂ ದೊಡ್ಡದು' ಎಂಬ ಮಾತಿನ ಅರ್ಥವನ್ನು ಅರಿತುಕೊಳ್ಳುವಷ್ಟೇ ಅಲ್ಲ, ಅನುಷ್ಠಾನಗೊಳಿಸಬೇಕು. ನಾಲ್ಕು ಅಗುಳು ಕಡಿಮೆ ತಿಂದರೂ ಪರವಾಗಿಲ್ಲ; ಹತ್ತು ಅಗುಳು ಹೆಚ್ಚಾಗಿ ತ್ಯಾಜ್ಯವಾಗದಂತೆ ಪ್ರಜ್ಞಾಪೂರ್ವಕ ತೀರ್ಮಾನಗಳನ್ನು ಜಾರಿಗೊಳಿಸಬೇಕು. ಅಲ್ಲಿಂದ ಈ ಆಹಾರ ಉಳಿತಾಯ ಆಂದೋಲನ ಆರಂಭವಾಗಬೇಕು.

ಭಾರತೀಯರೊಬ್ಬರು ಜರ್ಮನಿಗೆ ಹೋಗಿದ್ದರು. ಅಲ್ಲಿ ಅವರ ಗೆಳೆಯರೊಂದಿಗೆ ಸ್ಥಳೀಯ ಕಂಪೆನಿಯೊಂದರಲ್ಲಿ ದುಡಿಯುತ್ತಿದ್ದರು. ಒಮ್ಮೆ ಅಲ್ಲಿಯ ಹೊಟೇಲಿನಲ್ಲಿ ಗೆಳೆಯರೊಬ್ಬರ ಹುಟ್ಟುಹಬ್ಬವನ್ನು ಆಚರಿಸಲು ಸಿದ್ಧತೆ ನಡೆದಿತ್ತು. ಅದರಂತೆ ರಾತ್ರಿ ಇವರು ಆ ಹೊಟೇಲಿಗೆ ಹೋದರಂತೆ. ಅಲ್ಲಿ ಒಂದು ದಂಪತಿ ಊಟ ಮಾಡುತ್ತಿದ್ದರು. ಒಂದು ಸಣ್ಣ ಪಾತ್ರೆಯಲ್ಲಿ ಒಂದಿಷ್ಟು ಆಹಾರ ಇಟ್ಟುಕೊಂಡು ಇಬ್ಬರು ಸವಿಯುತ್ತಿದ್ದರು. ಮತ್ತೊಂದು ತುದಿಯಲ್ಲಿ ಕೆಲವು ಹಿರಿಯ ಮಹಿಳೆಯರು ಊಟ ಮಾಡುತ್ತಿದ್ದರು. ಭಾರತೀಯರು ಮತ್ತು ಅವರ ಗೆಳೆಯರು ತಮಗೆ ಬೇಕಾದ ತಿಂಡಿಯನ್ನು ಆದೇಶಿಸಿದರು. ತುಸು ಹೆಚ್ಚೆನಿಸುವಷ್ಟೇ ಆದೇಶಿಸಿದರು.

ಸ್ವಲ್ಪ ಹೊತ್ತಿನ ಬಳಿಕ ಅವರು ಹೇಳಿದ ತಿನಿಸುಗಳನ್ನು ನೀಡಲಾಯಿತು. ಅವರು ಒಂದಿಷ್ಟು ತಿಂದು ಉಳಿದದ್ದನ್ನು ಹಾಗೆಯೇ ತಟ್ಟೆಯಲ್ಲಿ ಬಿಟ್ಟರು. ಅಷ್ಟರಲ್ಲಿ ಮಹಿಳೆಯರು ಬಂದು 'ತಟ್ಟೆಯಲ್ಲಿ ಆಹಾರವನ್ನು ಬಿಡಬಾರದು' ಎಂದು ಹೇಳಿದರು. ಆಗ ಭಾರತೀಯರಿಗೆ ಸಿಕ್ಕಾಪಟ್ಟೆ ಸಿಟ್ಟು ಬಂತು. ಅಷ್ಟೂ ಆಹಾರಕ್ಕೆ ಈಗಾಗಲೇ ದುಡ್ಡು ಕೊಟ್ಟಿದ್ದೇವೆ. ನಾವೆಷ್ಟು ತಿಂದರೇನು? ಬಿಟ್ಟರೇನು? ಎಂದು ಕೇಳಿದಾಗ, ಕೋಪಗೊಂಡ ಮಹಿಳೆ ಕೂಡಲೇ ಯಾವುದೋ ನಂಬರಿಗೆ ಫೋನ್ ಮಾಡಿದಳು. ಕೆಲವೇ ಕ್ಷಣಗಳಲ್ಲಿ ಅಧಿಕಾರಿಯೊಬ್ಬರು ಬಂದರು. ಪರಿಸ್ಥಿತಿಯನ್ನು ಅವಲೋಕಿಸಿದ ಅವರು ದಂಡ ವಿಧಿಸಿದರು. ಈ ಬಗ್ಗೆ ಪ್ರಶ್ನಿಸಿದಾಗ ಆ ಅಧಿಕಾರಿ, "ದುಡ್ಡು ನಿಮ್ಮದೇ, ಸಂಪನ್ಮೂಲ ಸಮಾಜದ್ದು. ನೀವು ಎಷ್ಟಾದರೂ ತಿನ್ನಿ, ಅದು ನಿಮ್ಮ ಹಕ್ಕು. ಆದರೆ ಆಹಾರವನ್ನು ಪೋಲು ಮಾಡುವುದಕ್ಕೆ ನಿಮಗೆ ಯಾವ ಅಧಿಕಾರವಿಲ್ಲ. ಲಕ್ಷಾಂತರ ಮಂದಿ

ಆಹಾರವಿಲ್ಲದೆ ಒದ್ದಾಡುತ್ತಿರುವಾಗ ಈ ರೀತಿ ಪೋಲು ಮಾಡುವುದು ಸರಿಯಲ್ಲ' ಎಂದು ಬುದ್ಧಿ ಹೇಳಿದರಂತೆ. ಒಬ್ಬರು ಉಳಿಸಿದ ಅನ್ನ ಇನ್ನೊಬ್ಬರ ಹಸಿದ ಹೊಟ್ಟೆಯನ್ನು ತುಂಬಬಲ್ಲದು.[೧೨೬]

ಪರಿಹಾರದಾಸೆಗೆ ಹೆತ್ತ ಮಕ್ಕಳ ಕ್ರೌರ್ಯ ವೃದ್ಧರನ್ನೇ ಹುಲಿಗಳ ಬಾಯಿಗೆ ನೂಕುವಷ್ಟರ ಮಟ್ಟಿಗೆ ಪ್ರಕಟವಾಗಿದೆ. ಪಿಲಿಬಿತ್‌ನಲ್ಲಿ ಅರಣ್ಯರೋದನ. ಹಣದಾಸೆಗೆ ಬಡತನದಿಂದ ಬೇಸತ್ತು ಹಸಿದ ಹೊಟ್ಟೆಯನ್ನು ತುಂಬಿಸಿಕೊಳ್ಳುವುದಕ್ಕಾಗಿ ಉತ್ತರ ಪ್ರದೇಶದ ಪಿಲಿಬಿತ್‌ನಲ್ಲಿರುವ ರಕ್ಷಿತಾರಣ್ಯಗಳ ಅಂಚಿನಲ್ಲಿ ಫೆಬ್ರವರಿ ೧೬ (೨೦೧೭) ರಿಂದೀಚೆಗೆ ಬೆಳಕಿಗೆ ಬಂದಿರುವ ಇಂತಹ ಏಳು ಪ್ರಕರಣಗಳು ದೇಶವನ್ನೇ ತಲ್ಲಣಗೊಳಿಸಿವೆ. ಮನೆಯ ವೃದ್ಧರನ್ನು ಅಮಾನವೀಯವಾಗಿ ಕಾಡಿಗಟ್ಟುವ ಕುಟುಂಬ ಸದಸ್ಯರು ಅವರು ಹುಲಿ ಬಾಯಿ ಸೇರಿದ ಬಳಿಕ ಸಿಕ್ಕ ಅಳಿದುಳಿದ ಮೃತ ದೇಹ ತಂದು ಸರಕಾರದಿಂದ ಪರಿಹಾರ ಪಡೆದುಕೊಳ್ಳುವುದನ್ನೇ ವೃತ್ತಿ ಮಾಡಿಕೊಂಡಿದ್ದಾರೆ.

ಹಿರಿಯರ ಸಮ್ಮತಿ ಪಡೆದೇ ಇಲ್ಲಿ ಎಲ್ಲವೂ ನಡೆಯುತ್ತಿದೆ. ಅರಣ್ಯ ಉತ್ಪನ್ನಗಳಿಂದ ಹಣ ಮಾಡಲು ಸಾಧ್ಯವಾಗುತ್ತಿಲ್ಲವಾದ್ದರಿಂದ ಬಡತನದಿಂದ ಪಾರಾಗಲು ಇದೊಂದೇ ಮಾರ್ಗ ಎಂದುಕೊಂಡು ಕುಟುಂಬಗಳು ಈ ನಿರ್ಧಾರಕ್ಕೆ ಬಂದಿವೆ (ಜರ್ನೈಲ್ ಸಿಂಗ್, ಕೃಷಿಕ).

ಹುಲಿ ಸೇರಿದಂತೆ ಯಾವುದೇ ವನ್ಯ ಮೃಗಗಳಿಂದ ದಾಳಿಗೀಡಾಗಿ ಮೃತಪಡುವವರ ಕುಟುಂಬಕ್ಕೆ ಅರಣ್ಯ ಇಲಾಖೆಯ ವತಿಯಿಂದ ಲಕ್ಷಾಂತರ ರೂಪಾಯಿ ಪರಿಹಾರ ಸಿಗುತ್ತದೆ. ಅರಣ್ಯ ಕಾಯಿದೆಗಳು ಬಲಗೊಂಡ ಬಳಿಕ ಅರಣ್ಯದಂಚಿನ ಜನರ ಜೀವನ ದುಸ್ತರವಾಗಿದೆ. ಹೀಗಾಗಿ ಹೊಟ್ಟೆ ತುಂಬಿಸಿಕೊಳ್ಳುವುದಕ್ಕಾಗಿ ಪರಿಹಾರದ ಆಸೆಯಲ್ಲಿ ಮನೆಯಲ್ಲಿರುವ ವೃದ್ಧರನ್ನೇ ಹುಲಿ ಬಾಯಿಗೆ ದೂಡುತ್ತಿದ್ದಾರೆ.[೧೨೭]

ಮಾನವರು ತಮ್ಮ ಹಸಿದ ಹೊಟ್ಟೆಯನ್ನು ತುಂಬಿಸಿಕೊಳ್ಳುವುದಕ್ಕಾಗಿ ನಾನಾ ರೀತಿಯ ವೃತ್ತಿ ಕೈಗೊಳ್ಳುತ್ತಾರೆ. ಆದರೆ ಹೊಟ್ಟೆಪಾಡಿಗಾಗಿ ಸಮಾಜಬಾಹಿರ ಕೆಲಸಗಳಲ್ಲಿ ತೊಡಗಿಕೊಂಡು ಇಡೀ ಮನುಕುಲವೇ ತಲೆತಗ್ಗಿಸುವಂತಾಗಿದೆ. ಕೆಲವರು ನೇತ್ರ ಮಾರಾಟ, ಕಿಡ್ನಿ ಮಾರಾಟ, ದೇಹ ಮಾರಾಟ, ಹೆಣ್ಣು ಮಕ್ಕಳ, ಹಸುಗೂಸುಗಳ ಮಾರಾಟ ಮಾಡಿ ರಕ್ತ ಮಾರಾಟ ಮಾಡಿ ಹೊಟ್ಟೆ ತುಂಬಿಸಿಕೊಳ್ಳುವುದು ಒಂದು ಕಡೆಯಾದರೆ, ವಯಸ್ಸಾದ ವೃದ್ಧರನ್ನು ಕೊಲೆ ಮಾಡುವುದೋ, ಕ್ರೂರ ಜಂತುಗಳ, ಪ್ರಾಣಿಗಳ ಬಾಯಿಗೆ ದೂಡುತ್ತಿರುವುದು, ನಿಧಿಯಾಸೆಗೆ ಬಲಿ ಕೊಡುವುದು ಮನುಷ್ಯನ ಕ್ರೌರ್ಯದ ಪರಮಾವಧಿಯಾಗಿದೆ.

ಆಹಾರ ಹಸಿವನ್ನು ನೀಗಿಸುತ್ತದೆ, ಕಸುವನ್ನು ನೀಡುತ್ತದೆ, ರೋಗವನ್ನು ನಿವಾರಿಸುತ್ತದೆ[೧೨೮] ಎಂಬುದು ನಿಜ.

ಗ್ರೀಸ್‌ನಲ್ಲಿ ಮುಖ್ಯ ತಿನಿಸು ಸ್ಯಾಂಡ್‌ವಿಚ್. ಅದ್ರ ಬೆಲೆ ೧೪೦ ರೂಪಾಯಿ. ಆರ್ಥಿಕ ಪರಿಸ್ಥಿತಿ ಹದಗೆಟ್ಟ ಸಂದರ್ಭದಲ್ಲಿ ಅಲ್ಲಿನ ಮಹಿಳೆಯರು ಹಸಿವನ್ನು ನೀಗಿಸುವ ಒಂದು ಸ್ಯಾಂಡ್‌ವಿಚ್‌ಗಾಗಿ ವೇಶ್ಯಾವಾಟಿಕೆಗೆ ಇಳಿಯುತ್ತಿದ್ದಾರೆಂಬ ಸುದ್ದಿ ನಿಜಕ್ಕೂ ಘೋರವಾಗಿದೆ.[೧೨೯]

ಜೀವ ಜಗತ್ತಿನ ಎಲ್ಲಾ ಪ್ರಭೇದಗಳಲ್ಲೂ ಹಸಿವು ಮತ್ತು ಕಾಮವನ್ನು ಈಡೇರಿಸಿಕೊಳ್ಳುವಾಗ ನಾಚಿಕೆ, ಭಯ ಅಡ್ಡ ಬರಲಾರವೆಂಬುದು ಪ್ರಕಟಗೊಂಡ ಸತ್ಯ. ಮನುಷ್ಯ

ಜಾತಿಯಲ್ಲಂತೂ ಇದು ಮತ್ತಷ್ಟು ಜಾಸ್ತಿ. ಹಸಿವನ್ನು ಇಂಗಿಸಿಕೊಳ್ಳುವುದು ಮತ್ತು ಕಾಮವನ್ನು ತೀರಿಸಿಕೊಳ್ಳುವುದು ಜೀವ ಸಂಕುಲದ ಅನಿವಾರ್ಯ ಕರ್ಮಗಳಾಗಿವೆ. ನೈಸರ್ಗಿಕ ಸಿದ್ಧಾಂತಗಳ ಎದುರು ಮನುಷ್ಯ ಸೃಷ್ಟಿಸಿಕೊಂಡ ಸಿದ್ಧಾಂತಗಳು, ಕಟ್ಟುಪಾಡುಗಳು, ಸಂಪ್ರದಾಯಗಳು, ಪರಿಮಿತಿಗಳು ಅನೇಕ ಬಾರಿ ಪೊಳ್ಳಾಗಿರುವುದು ಜಗತ್ತಿನೆಲ್ಲೆಡೆ ಅನಾವರಣಗೊಂಡಿದೆ. ಎಂತಹ ಸತ್ಪುರುಷರಾಗಲಿ, ಮೇಧಾವಿಗಳಾಗಲಿ, ಜ್ಞಾನಿಗಳಾಗಲಿ, ಘನ ವಿಚಾರವಂತರಾಗಿರಲಿ, ಮಠಾಧಿಪತಿಗಳಾಗಲಿ, ವಿನಯವಂತರಾಗಲಿ, ಮಡಿವಂತರಾಗಲಿ ಹಸಿವು ಮತ್ತು ಕಾಮದ ಎದುರು ವಿಚಲಿತರಾಗಿ ಬಿಡುತ್ತಾರೆ.[೧೩೦]

'ಹಸಿವು ಮತ್ತು ಬಡತನವು ಕಲಿಸುವ ಪಾಠವನ್ನು ಬೇರ್ಯಾವ ವಿಶ್ವವಿದ್ಯಾಲಯವೂ ಕಲಿಸುವುದಿಲ್ಲ' – ಬಡತನದ ಬವಣೆಯಲಿ ಪ್ರೇಮಕರ್ಥವೇ ಇಲ್ಲ, ಹೊಟ್ಟೆಗಿಲ್ಲದೆ ಹಿಟ್ಟು ರಟ್ಟೆಗೆಂತೈ ಬಲವು.[೧೩೧]

ಹಸಿವಿನ ನೋವು ಹೊಟ್ಟೆ ತುಂಬಿದವರಿಗೆ ಗೊತ್ತಾಗದೆ ಇರಲು ಕಾರಣ ಅವರು ಹಸಿವೆಯಾಗುವವರೆಗೆ ಕಾಯುವುದಿಲ್ಲ.[೧೩೨]

ಕೊನೆ ಟಿಪ್ಪಣಿಗಳು

೧. ಕನ್ನಡ ಸಾಹಿತ್ಯದಲ್ಲಿ ಮನುಷ್ಯ ಪರಿಕಲ್ಪನೆ, (ಸಂ) ಬರಗೂರು ರಾಮಚಂದ್ರಪ್ಪ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩, ಪು. ೨೦೬.

೨. ಅದೇ, ಪು. ೨೦೭.

೩. ಬಂಡಾಯ ಕಾವ್ಯ, ಸಂ. ಬರಗೂರು ರಾಮಚಂದ್ರಪ್ಪ, 'ಕೋಡೆ' ಜಂಬಣ್ಣ ಅಮರಚಿಂತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಪು. ೧೨೪.

೪. ಅದೇ, ಪು. ೧೯೫.

೫. ಅದೇ, ಪು. ೪೧೯.

೬. ವಿಶ್ವವಿದ್ಯಾಲಯದ ವಾಚನಾಲಯದೊಳಗೆ, ಅಶೋಕ ಶೆಟ್ಟರ್, ಶಾಂತಿಸಾಗರ ಪ್ರಕಾಶನ, ಧಾರವಾಡ, ೧೯೯೨, ಪು. ೭.

೭. ಮೂಕನಿಗೆ ಬಾಯಿ ಬಂದಾಗ, ಅರವಿಂದ ಮಾಲಗತ್ತಿ, ಕುತ್ತ, ಶೈಲ ಪ್ರಕಾಶನ, ಧಾರವಾಡ.

೮. ಅದೇ, ಪು. ೭.

೯. ಸಾವಿರಾರು ನದಿಗಳು, ಸಿದ್ಧಲಿಂಗಯ್ಯ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ಪು. ೨೩, ೨೦೦೫.

೧೦. ದಲಿತ ಬಂಡಾಯ ಸಾಹಿತ್ಯದಲ್ಲಿ ಸಾಮಾಜಿಕ ಮನುಷ್ಯ, ಬರಗೂರು, ೧೯೯೩, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪು. ೨೨೦.

೧೧. ಅದೇ, ಪು. ೨೨೧.

೧೨. ಅದೇ, ಪು. ೨೨೩.

೧೩. ಅದೇ, ಪು. ೨೨೪.

೧೪. ನಾನು ನನ್ನವರು, ಸುಕನ್ಯಾ ಮಾರುತಿ, ಸಂಗ್ರಾಮ ಪ್ರಕಾಶನ, ಧಾರವಾಡ, ಪು. ೩೦.

೧೫. ನಾನು ಮತ್ತು ಅವನು, ಎಚ್. ಎಸ್. ಮುಕ್ತಾಯಕ್ಕ, ಪ್ರಶಾಂತ ಪ್ರಕಾಶನ, ರಾಯಚೂರು, ಪು. ೫೫.

೧೬. ಅದೇ.

೧೭. ಅದೇ, ಪುಟ ೨೨.

೧೮. ಬೆಸಗರಹಳ್ಳಿ ರಾಮಣ್ಣ, 'ನೂರು ರೂಪಾಯಿ ನೋಟು', ಪುಟ ೫೬೯. ಸಮಗ್ರ ಕಥೆಗಳು, ಕನ್ನಡ ಸಾಹಿತ್ಯ ಪರಿಷತ್ತು ೨೦೧೫.

೧೯. ಆಶಾ ಜೆನಕಪ್ಪ, ತಂದೆಯ ಅಂತಃಕರಣ, ತಿಜೋರಿ, (ಸಂ ಪ್ರೊ. ಸಬೀಹಾ ಭೂಮಿಗೌಡ) ಪ್ರಸಾರಾಂಗ, ಮಂಗಳೂರು ವಿ. ವಿ., ಪುಟ ೩೦, ೨೦೧೪.

೨೦. ಅದೇ, ಪುಟ ೯.

೨೧. ಅದೇ, ಪುಟ ೯.

೨೨. ಡಾ. ರಾಜ್‌ಕುಮಾರ್ ಎಂಬ ಬೆವರಿನ ಮನುಷ್ಯ – ಡಾ ಬರಗೂರು ರಾಮಚಂದ್ರಪ್ಪ – ಪಾತರಗಿತ್ತಿ, ಪುಟ ೧೦, ಪ್ರೊ ಬಿ. ಶಿವರಾಮ ಶೆಟ್ಟಿ (ಸಂ) – ಪ್ರಸಾರಾಂಗ ಮಂಗಳೂರು ವಿ.ವಿ – ೨೦೧೭

೨೩. ತಿಜೋರಿ, ಪ್ರೊ. ಸಬಿಹಾ, ಪ್ರಸಾರಾಂಗ, ಮಂಗಳೂರು ವಿ. ವಿ., ೨೦೧೪, ಪು. ಸಂ. ೨೧೫.

೨೪. ಬೇರು ಬಳ್ಳಿ, ಪ್ರಸಾರಾಂಗ, ಮಂ. ವಿ. ವಿ., ಪು. ಸಂ. ೫೦, ಅಭಯಕುಮಾರ್ (ಸಂ), ೨೦೧೩.

೨೫. ಕನ್ನಡ ಸಾಹಿತ್ಯ ಪುನರ್ಮೌಲ್ಯೀಕರಣ, ಬರಗೂರು, ಪು. ೨೫.

೨೬. ಕೆಂದಾವರೆ, ಡಾ. ಅಭಯ ಕುಮಾರ್ (ಸಂ), ಪ್ರಸಾರಾಂಗ, ಮಂ. ವಿ. ವಿ., ೨೦೧೩, ಪು. ಸಂ. ೫೪.

೨೭. ಮೂಡ್ನಾಕೂಡು ಚಿನ್ನಸ್ವಾಮಿ, ಪಯಸ್ವಿನಿ (ಸಂ), ಸಬಿಹಾ ಭೂಮಿಗೌಡ, ಪ್ರಸಾರಾಂಗ ಮಂ. ವಿ. ವಿ. ೨೦೧೪, ಪು. ಸಂ. ೪೬.

೨೮. ಇನಿವಾಲು, ಕೆ. ಚಿನ್ನಪ್ಪ ಗೌಡ (ಸಂ), ಪ್ರಸಾರಾಂಗ, ಮಂ. ವಿ. ವಿ., ೨೦೦೭, ಪು. ಸಂ. ೫೭.

೨೯. ಐಕ್ಯಗಾನ, ಡಾ. ಅಭಯ ಕುಮಾರ್ (ಸಂ), ಪ್ರಸಾರಾಂಗ, ಮಂ. ವಿ. ವಿ., ೨೦೧೩, ಪು. ಸಂ ೨೦, ೨೧.

೩೦. ವೆಂಕಟೇಶ್ ಎಚ್. ಕೆ., ಉರಿಯ ಕಾರುವ ಮೋಡ, ಜ್ಯೋತಿ ಪ್ರಕಾಶನ, ಮೈಸೂರು, ೨೦೧೩, ಪು. ಸಂ. ೧೭

೩೧. ಉರಿಯ ಕಾರುವ ಮೋಡ, ಎಚ್. ಕೆ. ವೆಂಕಟೇಶ್, ೨೦೧೩, ಜ್ಯೋತಿ ಪ್ರಕಾಶನ, ಮೈಸೂರು, ಪು. ಸಂ. ೧೭

೩೨. ಉರಿಯ ಕಾರುವ ಮೋಡ, ಎಚ್. ಕೆ. ವೆಂಕಟೇಶ್, ೨೦೧೩, ಜ್ಯೋತಿ ಪ್ರಕಾಶನ, ಮೈಸೂರು, ಪು. ಸಂ. ೧೮.

೩೩. ಚ. ನ. ಶಂಕರ ರಾವ್, ಭಾರತದ ಸಾಮಾಜಿಕ ಸಮಸ್ಯೆಗಳು, ೨೦೦೩, ಪು. ಸಂ. ೧೧೪.

೩೪. ಚ. ನ. ಶಂಕರ ರಾವ್, ಭಾರತದ ಸಾಮಾಜಿಕ ಸಮಸ್ಯೆಗಳು, ೨೦೦೩, ಪು. ಸಂ. ೧೧೫.

೩೫. ಭಾರತದ ಯೋಜನಾ ಆಯೋಗ: ಎಚ್ಚಾರ್ಕೆ, ಭಾರತದ ಆರ್ಥಿಕ ವ್ಯವಸ್ಥೆ, ೨೦೦೫, ಪು. ಸಂ. ೯೫.

೩೬. ಅದೇ ಪುಟ ೧೦೭.

೩೭. ಗೋಪಾಲಕೃಷ್ಣ ಅಡಿಗ, ರಾಮನವಮಿ, ಶ್ರೀನಿವಾಸ (ಸಂ. ಮಾವಿನಕೆರೆ ರಂಗನಾಥನ್), ೧೯೯೨, ಪು. ಸಂ. ೧೬೪-೬೫.

೩೮. ಸಿದ್ಧಲಿಂಗಯ್ಯ ಜಿ. ಎಸ್. ಶ್ರೀನಿವಾಸ, ೨೦೦೫, ಪು. ಸಂ. ೧೩.

೩೯. ತಿ. ತಾ. ಶರ್ಮ, ಜೀವನದರ್ಶನ, ಶ್ರೀನಿವಾಸ (ಸಂ), ಮಾವಿನಕೆರೆ ರಂಗನಾಥನ್, ೧೯೯೨, ಪು. ೫.

೪೦. ಮಾಸ್ತಿ ವೆಂಕಟೇಶ ಅಯ್ಯಾಂಗಾರ್, ಭಾವ ಸಂ. ೧, ೧೯೬೮, ಪು. ೨೬.

೪೧. ಮಾಸ್ತಿ, ಭಾವ, ಸಂ. ೧, ೧೯೬೮, ಪು. ೧೩೪.

೪೨. ಅದೇ, ಪು. ೧೩೬.

೪೩. ಅದೇ, ಪು. ೧೫೪.

೪೪. ಅದೇ, ಪು. ೨೦೪.

೪೫. ಜಿ ಎಸ್. ಸಿದ್ಧಲಿಂಗಯ್ಯ, ಶ್ರೀನಿವಾಸ, ೨೦೦೫, ಪು. ೨೦-೨೧.

೪೬. ಮಾಸ್ತಿ, ನವರಾತ್ರಿ, ಭಾಗ ೧, ಪು. ೧೮.

೪೭. ಎಚ್. ಕೆ. ವೆಂಕಟೇಶ್, ಉರಿಯ ಕಾರುವ ಮೋಡ, ೨೦೧೩, ಜ್ಯೋತಿ ಪ್ರಕಾಶನ, ಮೈಸೂರು, ಪು. ೧೨೧.

೪೮. ಮಾಸ್ತಿ, ನವರಾತ್ರಿ, ಭಾಗ ೪, ಪು. ೮೯.

೪೯. ಚೆಲುವು ಸುನೀತ, ದೊರೆ-ದಳಪತಿ, ಪು. ೧೯.

೫೦. ಸಿ. ಪಿ. ಸಿದ್ಧಾಶ್ರಮ, ಮಾಸ್ತಿಯವರ ಕಾವ್ಯ – ಒಂದು ಅಧ್ಯಯನ, ೧೯೯೨. ಪು. ೬೨.

೫೧. ಉರಿಯ ಕಾರುವ ಮೋಡ, ಎಚ್. ಕೆ. ವೆಂಕಟೇಶ, ೨೦೧೩, ಜ್ಯೋತಿ ಪ್ರಕಾಶನ, ಮೈಸೂರು, ಪು. ಸಂ. ೧೨೯.

೫೨. ಜಿ. ಎಸ್. ಆಮೂರ, ಭುವನ ಭಾಗ್ಯ, ೧೯೯೯, ಪು. ಸಂ. ೧೬೫.

೫೩. ಶೇಷ ನವರತ್ನ, ದಾರ್ಶನಿಕ ಕವಿ ಬೇಂದ್ರೆ, ಇಳಿದು ಬಾ ತಾಯಿ, ಬುದ್ದಣ್ಣ ಹಿಂಗಮಿರೆ (ಸಂ), ೧೯೭೭, ಪು. ೨೬೭

೫೪. ತೀ. ನಂ. ಶ್ರೀಕಂಠಯ್ಯ, ಗರಿ: ವಿಮರ್ಶೆ, ಬೇಂದ್ರೆ ಕಾವ್ಯ (ಸಂ. ಜಿ. ಎಸ್. ಆಮೂರ), ೨೦೦೩, ಪು. ೨೮೫.

೫೫. ಎಸ್. ಪಿ. ಪಾಟೀಲ, ಅಂಬಿಕಾತನಯದತ್ತರ ಗರಿ, ಇಳಿದು ಬಾ ತಾಯಿ (ಸಂ. ಬುದ್ದಣ್ಣ ಹಿಂಗಮಿರೆ), ೧೯೭೭, ಪು. ೨೫೮.

೫೬. ಸುಮತೀಂದ್ರನಾಥ ನಾಡಿಗ, ಬೇಂದ್ರೆಯವರ ಕಾವ್ಯದ ವಿಭಿನ್ನ ನೆಲೆಗಳು, ೧೯೯೮, ಪು. ೯೦.

೫೭. ವಾಮನ ಬೇಂದ್ರೆ (ಸಂ), ಬೇಂದ್ರೆಯವರ ಸಮಗ್ರ ಕಾವ್ಯ (ಸಂ. ೪), ತುತ್ತಿನ ಚೀಲ, ಪು. ೮೬, ೨೦೦೩.

೫೮. ಸಿ. ಪಿ. ಕೆ. ಬೇಂದ್ರೆಯವರ ಕೆಲವು ಕವನಗಳು, ಇಳಿದು ಬಾ ತಾಯಿ (ಸಂ. ಬುದ್ಧಣ್ಣ ಹಿಂಗಮಿರೆ), ೧೯೭೭, ಪು. ೪೦೩.

೫೯. ಗೊರೂರು ರಾಮಸ್ವಾಮಿ ಅಯ್ಯಂಗಾರ್, ಬೇಂದ್ರೆಯವರ ವ್ಯಕ್ತಿತ್ವ, ಇಳಿದು ಬಾ ತಾಯಿ (ಸಂ. ಬುದ್ಧಣ್ಣ ಹಿಂಗಮಿರೆ) ೧೯೭೭, ಪು. ೫೯೭–೫೯೮.

೬೦. ವಾಮನ ಬೇಂದ್ರೆ (ಸಂ), ಬೇಂದ್ರೆಯವರ ಸಮಗ್ರ ಕಾವ್ಯ, ತುತ್ತಿನ ಚೀಲ, ಪು. ೮೭, ೨೦೦೩.

೬೧. ಕೆ. ರಾಘವೇಂದ್ರ ರಾವ್, ಬೇಂದ್ರೆಯವರ ಕಾವ್ಯದಲ್ಲಿ ಸಮಾಜ ಪ್ರಜ್ಞೆ, ಇಳಿದು ಬಾ ತಾಯಿ (ಸಂ. ಬುದ್ಧಣ್ಣ ಹಿಂಗಮಿರೆ), ೧೯೭೭, ಪು. ೨೧೦.

೬೨. ಸಿ. ಪಿ. ಕೆ. ಬೇಂದ್ರೆಯವರ ಕೆಲವು ಕವನಗಳು, ಇಳಿದು ಬಾ ತಾಯಿ, ಸಂ. ಬುದ್ಧಣ್ಣ ಹಿಂಗಮಿರೆ, ೧೯೭೭, ಪು. ೪೦೩.

೬೩. ಉದ್ಧೃತ, ಜಿ. ಎಸ್. ಆಮೂರ, ಭುವನದ ಭಾಗ್ಯ, ೧೯೯೬, ಪು. ೧೬೩.

೬೪. ಚೆನ್ನವೀರ ಕಣವಿ, ಬೇಂದ್ರೆಯವರ ಕಾವ್ಯದಲ್ಲಿ ಭಾವ ಸಂಪತ್ತು, ಇಳಿದು ಬಾ ತಾಯಿ (ಸಂ. ಬುದ್ಧಣ್ಣ ಹಿಂಗಮಿರೆ), ೧೯೭೭, ಪು. ೨೦೩.

೬೫. ನಿ. ಶ್ರೀತ ಬಲ್ಲಾಳ, ಅಂಬಿಕಾತನಯರ ಕವನಗಳಲ್ಲಿ ಮಾನವ ಭವಿಷ್ಯ ದರ್ಶನ, ಇಳಿದು ಬಾ ತಾಯಿ (ಸಂ. ಬುದ್ಧಣ್ಣ ಹಿಂಗಮಿರೆ) ೧೯೭೭, ಪು. ೭೬೨.

೬೬. ಬೇಂದ್ರೆ, ಸಮಗ್ರ ಕಾವ್ಯ, ಅನ್ನಾವತಾರ, ಪು. ೯೦.

೬೭. ಗೊರೂರು, ಬೇಂದ್ರೆಯವರ ವ್ಯಕ್ತಿತ್ವ, ಇಳಿದು ಬಾ ತಾಯಿ (ಸಂ. ಬುದ್ಧಣ್ಣ ಹಿಂಗಮಿರೆ, ೧೯೭೭, ಪು. ೫೯೮.

೬೮. ಚೆನ್ನವೀರ ಕಣವಿ, ಬೇಂದ್ರೆಯವರ ಕಾವ್ಯದಲ್ಲಿ ಭಾವ ಸಂಪತ್ತು, ಇಳಿದು ಬಾ ತಾಯಿ, ಸಂ. ಬುದ್ಧಣ್ಣ ಹಿಂಗಮಿರೆ, ೧೯೭೭, ಪು. ೨೦೨.

೬೯. ವಾಮನ ಬೇಂದ್ರೆ (ಸಂ), ಬೇಂದ್ರೆ ಸ. ಕಾ. (ಸಂ. ೪) ಕೆಲಸವಿಲ್ಲದವರ ಹಾಡು, ಪು. ಸಂ. ೯೮, ೨೦೦೩.

೭೦. ಅದೇ, ಪು. ಸಂ. ೧೦೦.

೭೧. ವಾಮನ ಬೇಂದ್ರೆ (ಸಂ), ಮಂಗಳಾ ಪ್ರಿಯದರ್ಶಿನಿ, ಬೇಂದ್ರೆ, ೨೦೦೩, ಪು. ೩೮.

೭೨. ವಾಮನ ಬೇಂದ್ರೆ (ಸಂ), ಬೇಂದ್ರೆ ಸ. ಕಾ., ಸಂ. ೪, ಮನುವಿನ ಮಕ್ಕಳು, ಪು. ೧೦೨, ೨೦೦೩.

೭೩. ಕೆ. ಸಿ. ಶಿವಾರೆಡ್ಡಿ (ಸಂ.), ಕುವೆಂಪು ಸಮಗ್ರ ಗದ್ಯ, ಸಂ. ೧, ೨೦೦೩, ಪು. ೪೫–೪೬.

೭೪. ಕುವೆಂಪು, ಕುವೆಂಪು ಸಮಗ್ರ ಕಾವ್ಯ, ಸಂ. ೧ ಪ್ರಸ್ತಾವನೆ, ಜಿ. ಎಸ್. ಶಿವರುದ್ರಪ್ಪ, ೨೦೦೦, ಪು. ೩೧.

೭೫. ಕು. ಸ. ಕಾ., ಸಂ. ೧, ಜಡವಾದಿ, ಪು. ೧೩೫.

೭೬. ಕು. ಸ. ಕಾ., ಸಂ. ೧, ಕಲ್ಕಿ, ಪು. ೧೬೮, ೬೯.

೭೭. ನರಹಳ್ಳಿ ಬಾಲಸುಬ್ರಹ್ಮಣ್ಯ, ಕುವೆಂಪು ಕಾವ್ಯ: ಸಂಸ್ಕೃತಿ ಮತ್ತು ಚರಿತ್ರೆಯ ರೂಪಕ, ೨೦೦೪, ಪು. ೬೧.

೭೮. ಕೆ. ಸಿ. ಶಿವಾರೆಡ್ಡಿ, ಸಂ. ಕುವೆಂಪು ಸಮಗ್ರ ಗದ್ಯ, ಸಂ. ೨, ೨೦೦೪, ಪು. ೪೭೯.

೭೯. ದೇ. ಜ. ಗೌ. (ಸಂ) ಗಂಗೋತ್ರಿ, ೧೯೬೮, ಪು. ೧೦೨೩.

೮೦. ಉದ್ಧೃತ್ತ ಗೊ. ರಾ. ಅಯ್ಯಂಗಾರ್, ಪು. ತಿ. ನ. ಸಮೀಪ ದೃಷ್ಟಿ, ಭೃಂಗಮಾರ್ಗ, ಸಂ. ಎಚ್. ಎಸ್. ರಾಘವೇಂದ್ರ ರಾವ್, ೨೦೦೫, ಪು. ೧೬.

೮೧. ಉದ್ಧೃತ್ತ ಗೋ. ರಾ. ಅಯ್ಯಂಗಾರ್, ಪು. ತಿ. ನ. ಸಮೀಪದೃಷ್ಟಿ, ಭೃಂಗಮಾರ್ಗ, ಸಂ. ಎಚ್. ಎಸ್. ರಾಘವೇಂದ್ರರಾವ್, ೨೦೦೫, ಪು ೧೭.

೮೨. ಗೊ. ರಾ. ಅಯ್ಯಂಗಾರ್ ಪು. ತಿ. ನ. ಸಮೀಪದೃಷ್ಟಿ, ಭೃಂಗಮಾರ್ಗ, ಸಂ. ಎಚ್. ಎಸ್. ರಾಘವೇಂದ್ರ ರಾವ್, ೨೦೦೫, ಪು. ೨೦.

೮೩. ಪ್ರಭುಶಂಕರ, ಪು. ತಿ. ನ., ನವಕರ್ನಾಟಕ, ೨೦೦೨, ಪು ೩೮.

೮೪. ಎಂ. ಎಲ್. ನರಸಿಂಹಮೂರ್ತಿ, ಪು. ತಿ. ನ. ಅವರ ಕೆಲವು ಕವನಗಳು, ಪು. ತಿ. ನ. ನೂರರ ನೆನಪು, (ಸಂ. ಕಮಲಾ ನರಸಿಂಹ), ೨೦೦೫, ಪು. ೧೬೭.

೮೫. ಜೆ. ಆರ್. ನಂಜುಂಡೇಗೌಡ, ಹಣತೆ, ಯದುಗಿರಿ, (ಸಂ. ದೇ. ಜವರೇಗೌಡ), ೧೯೮೧, ಪು. ೧೪೪.

೮೬. ಪು. ತಿ. ನ. ಸಮಗ್ರ ಕಾವ್ಯ, ವಿಶ್ವಕುಟುಂಬಿಯ ಕಷ್ಟ, ಪು. ೬೧, ೧೯೫೭.

೮೭. ಎಡ್ವರ್ಡ್ ನೊರೋನ್ಹಾ 'ಅತಿಥಿ'ಯಲ್ಲಿ ಒಲವಿನ ಕೆಲವು ಮುಖಗಳು, ಯದುಗಿರಿ (ಸಂ. ದೇ. ಜ. ಗೌಡ), ೧೯೮೧, ಪು. ೨೫೨.

೮೮. ಸು. ರಂ. ಎಕ್ಕುಂಡಿ, ಪು ತಿ. ನರಸಿಂಹಾಚಾರ್, ೧೯೫೭, ಪು. ೧೮, ೧೯.

೮೯. ಹೆಸರೇ ಇಲ್ಲದವರು, ಪು. ತಿ. ನ., ಪು. ೫೯೧, ೧೯೫೭.

೯೦. ಪು. ತಿ. ನ. ಸ. ಕಾ., ಸೈನಿಕರ ಹಾಡು, ಪು. ೧೬೧, ೧೯೫೭.

೯೧. ಪ್ರಭುಶಂಕರ, ಪು. ತಿ. ನ., ೨೦೦೨, ಪು. ೪೦.

೯೨. ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ, ಚಂದನ, ೧೯೭೨, ಪು. ೭೫.

೯೩. ಕೀರ್ತಿನಾಥ ಕುರ್ತಕೋಟಿ, ನವ್ಯಕಾವ್ಯ ಪ್ರಯೋಗ, ೧೯೯೬, ಪು. ೬೮.

೯೪. ಲಕ್ಷ್ಮೀನಾರಾಯಣ ಭಟ್ಟ, ಚಿಂತಾಮಣಿಯಲ್ಲಿ ಕಂಡ ಮುಖ, ಮುನ್ನುಡಿ ಗೋಪಾಲಕೃಷ್ಣ ಅಡಿಗ ಸಮಗ್ರ ಕಾವ್ಯ, ೨೦೦೦, ಪು. ೬೦೫.

೯೫. ಗೋ. ಅ. ಸ. ಕಾ., ಹಿಮಗಿರಿಯ ಕಂದರ, ಪು. ೨೨೮, ೨೦೦೦.

೯೬. ಪು. ೩೬, ಜಿ. ಎಸ್. ಎಸ್. ಸಮಗ್ರ ಕಾವ್ಯ; ಪ್ರತಿಮೆಗಳು, ೧೯೯೭.

೯೭. ಜಿ. ಎಸ್. ಎಸ್. ಸ. ಕಾ., ಸ್ವಾತಂತ್ರ್ಯೋತ್ಸವ–೧೯೮೪, ಪು. ೩೬೯.

೯೮. ಸಿ. ಎನ್. ರಾಮಚಂದ್ರನ್, ಪರಂಪರೆ, ಪ್ರತಿರೋಧ, ೨೦೦೨, ಪು. ೫೮.

೯೯. ಜಿ. ಎಸ್. ಎಸ್. ಸ. ಕಾ., ಅವಸ್ಥೆ, ಪು. ೨೮೬, ೧೯೯೭.

೧೦೦. ಸಮುದ್ರಗುಪ್ತ, ಹೋರಾಟಗಳ ಮಧ್ಯೆ ಮೊಳಗಿದ ದಲಿತ ಕಾವ್ಯ ಧ್ವನಿ, ಬಡವರ ನಗುವಿನ ಶಕ್ತಿ, ಸಂ. ಎಚ್. ದಂಡಪ್ಪ, ೨೦೦೧, ಪು. ೧೨.

೧೦೧. ಸಿದ್ಧಲಿಂಗಯ್ಯ, ನನ್ನ ಜನಗಳು ಮತ್ತು ಇತರೆ ಕವಿತೆಗಳು, ನನ್ನ ಜನಗಳು, ಪು. ೧, ೨೦೦೫.

೧೦೨. ಲಿಂಗದೇವರು ಹಳೆಮನೆ, ಸಿದ್ಧಲಿಂಗಯ್ಯನವರ ಕಾವ್ಯ, ಬಡವರ ನಗುವಿನ ಶಕ್ತಿ, ಸಂ. ಎಚ್. ದಂಡಪ್ಪ, ೨೦೦೧, ಪು. ೭೬.

೧೦೩. ಅದೇ, ಪು. ೭೬.

೧೦೪. ಬಿ. ಎಂ. ಶ್ರೀ., ಇಂಗ್ಲಿಷ್ ಗೀತಗಳು, ಮುದಿಯ ರಾಮಗೌಡ, ಪು. ೫೨, ೧೯೬೬.

೧೦೫. ವಿ. ಸೀ. ಯವರ ಸಮಗ್ರ ಕಾವ್ಯ, ಕ್ರೋಧನಿಕೇತನ, ಪು. ೧೯೭, ೧೯೯೦.

೧೦೬. ಅದೇ, ಪು. ೧೯೯.

೧೦೭. ದೀಪಾವಳಿ, ದೀಪಾವಳಿ, ಪು. ೨೮೮, ೧೯೯೦.

೧೦೮. ಬಿಡಿನುಡಿಗಳು, ಪು. ೬೩, ಪು. ೪೬೭.

೧೦೯. ಸಿಂಪಿ ಲಿಂಗಣ್ಣ, ನನ್ನ ನಲ್ಲ ಹಾಗೂ ಇತರ ಕವನಗಳು, ಸಿಡಿಲು, ಪು. ೮೪, ೧೯೫೫.

೧೧೦. ಬಿಲ್ವದಳ, ಕಾಪಸೆ ರೇವಪ್ಪ, ಪು. ೬೧.

೧೧೧. ರಾಜರತ್ನಂ ಜಿ. ಪಿ., ನಮ್ಮ ರಾಜರತ್ನಂ: ರತ್ನನ ಪದಗಳು, ಪು. ૩೨, ೧೯೬೯.

೧೧೨. ಸುಕನ್ಯಾ ಮಾರುತಿ, 'ಸಾಹಿತ್ಯ ಸಂಪದ' ದ್ವಿತೀಯ ಪಿ. ಯು. ಕನ್ನಡ ಪಠ್ಯ ಪುಸ್ತಕ, ೨೦೧೬, ಒಮ್ಮೆ ನಗುತ್ತೇವೆ.

೧೧೩. ಡಾ. ಎಚ್. ಎನ್. ಮುರಳೀಧರ, ಬೆನ್ ಓಕ್ರಿ ಪ್ರಸಿದ್ಧ ನೈಜೀರಿಯಾದ ಕವಿ, ಕಾದಂಬರಿಕಾರ, ೧೫.೩.೧೭ರ ವಿಜಯವಾಣಿ, 'ಕಡಲು' II.

೧೧೪. ಡಾ. ಎಚ್. ಎನ್. ಮುರಳೀಧರ (೧೫.೩.೨೦೧೭ರ ವಿಜಯವಾಣಿ).

೧೧೫. ಚೆನ್ನಣ್ಣ ವಾಲೀಕರ (ಕೆಂದಾವರೆ, ಪು. ಸಂ. ೫೧ (ಅಭಯ ಕುಮಾರ್), ಪ್ರಸಾರಾಂಗ, ಮಂ. ವಿ. ವಿ., ೨೦೧೩.

೧೧೬. ಡಿ. ವಿ. ಜಿ. ಮಂಕುತಿಮ್ಮನ ಕಗ್ಗ (ಶ್ರೀಮದ್ಭಗವದ್ಗೀತೆ ಮತ್ತು ಕಗ್ಗ ತಾತ್ಪರ್ಯ, ಶ್ರೀಕಾಂತ, ಪು. ೪೨೫).

೧೧೭. ಡಾ. ಅಭಯ ಕುಮಾರ್, ಐಕ್ಯಗಾನ, ಪ್ರಸಾರಾಂಗ ೨೦, ೨೧, ಮಂ. ವಿ. ವಿ., ೨೦೧೩.

೧೧೮. ಎಸ್. ವಿ. ಪರಮೇಶ್ವರ ಭಟ್ಟ, ಐಕ್ಯಗಾನ ೨೦, ೨೧ (ಅಭಯ ಕುಮಾರ್), ಬಾಳೊಂದು ವಿಜಯದ ಬೀಡು, ಪ್ರಸಾರಾಂಗ, ಮಂ. ವಿ. ವಿ., ೨೦೧೩.

೧೧೯. ಪ್ರಜಾವಾಣಿ, ೧೩.೭.೨೦೧೪, ತನುವಿನೊಳಗನುದಿನವಿದ್ದು, ಸಂಪಾದಕೀಯ.

೧೨೦. ಪ್ರಜಾವಾಣಿ, ತನುವಿನೊಳಗನುದಿನವಿದ್ದು, ೧೩.೭.೨೦೧೪, ಸಂಪಾದಕೀಯ.

೧೨೧. ೧೨.೫.೨೦೧೭ರ ವಿಜಯವಾಣಿ, ಪು. ೮.

೧೨೨. ಶ್ರೀಮದ್ಭಗವದ್ಗೀತೆ ಮತ್ತು ಕಗ್ಗ ತಾತ್ಪರ್ಯ, ಶ್ರೀಕಾಂತ, ಪು. ೪೪೫.

೧೨೩. ವಿಜಯವಾಣಿ,, ಸಂಪಾದಕೀಯ, ೧೨.೭.೨೦೧೭

೧೨೪. ವಿಜಯವಾಣಿ, ೧೨.೭.೨೦೧೭.

೧೨೫. ೧೯.೧೦.೨೦೧೬ರ ಉದಯವಾಣಿ.

೧೨೬. ಉದಯವಾಣಿ, ೪.೩.೨೦೧೭, ಅರವಿಂದ ನಾವಡ.

೧೨೭. ವಿಜಯವಾಣಿ, ೫.೭.೨೦೧೭.

೧೨೮. ದು. ಸರಸ್ವತಿ, ಕರ್ನಾಟಕ ವಿ. ವಿ., ವಿಜಯ ಕರ್ನಾಟಕ, ೨.೨.೨೦೧೫.

೧೨೯. ಉದಯವಾಣಿ, ೩೦.೧೧.೨೦೧೫.

೧೩೦. ಹಸಿವು ಮತ್ತು ಕಾಮ ವ್ಯಾಖ್ಯಾನಿಸಲಾರದಂತಹ ಜ್ವಲಂತ ಅಗ್ನಿಕುಂಡಗಳು, ನೆಲದ ಕಣ್ಣು, ಕೇಶವ ರೆಡ್ಡಿ ಹಂದ್ರಾಳ, ಕನ್ನಡಪ್ರಭ, ೦೧.೦೧.೨೦೧೭.

೧೩೧. ಚನ್ನಣ್ಣ ವಾಲೀಕರ, ಕೆಂದಾವರೆ, ಪು. ೫೪, ೨೦೧೩, ಪ್ರಸಾರಾಂಗ, ಮಂಗಳೂರು ವಿ. ವಿ.

೧೩೨. ೭.೦೧.೨೦೧೭, ಸಂಪಾದಕೀಯ, ವಿಜಯವಾಣಿ.

ಅಧ್ಯಾಯ ೩: ಹಸಿವಿನ ಸಮಸ್ಯೆಗೆ ಕಾರಣಗಳು

೩.೧ ಸಾಮಾಜಿಕ ಕಾರಣಗಳು

೩.೨ ಆರ್ಥಿಕ ಕಾರಣಗಳು

೩.೩ ಧಾರ್ಮಿಕ ಕಾರಣಗಳು

೩.೪ ರಾಜಕೀಯ ಕಾರಣಗಳು

೩.೫ ಪ್ರಾಕೃತಿಕ ಕಾರಣಗಳು

ಅಧ್ಯಾಯ ೩.

ಹಸಿವಿನ ಸಮಸ್ಯೆಗೆ ಕಾರಣಗಳು

ಶತಶತಮಾನದಿಂದಲೂ ಬಡವರ ಮೇಲೆ, ದೀನ-ದಲಿತರ ಮೇಲೆ ಶೋಷಣೆ ನಡೆಯುತ್ತಲೇ ಬಂದಿದೆ. ಸ್ವಾತಂತ್ರ್ಯವನ್ನು ಪಡೆದ ಮೇಲೂ ಕೂಡಾ ಬಡವರು, ದೀನ-ದಲಿತರ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗಿಲ್ಲ ಎಂಬುದೇ ಸೋಜಿಗದ ಸಂಗತಿ. ದೀನ-ದಲಿತರು, ಬಡವರು ವಿವಿಧ ಸಂಘ-ಸಂಸ್ಥೆಗಳ ಮೂಲಕ ಜಾಗೃತರಾಗಿ ತಮ್ಮ ಸ್ವಾಯತ್ತತೆಯ ಕುರಿತು ಚಿಂತನೆ ನಡೆಸುತ್ತಿದ್ದಾರೆ. ಆದ್ದರಿಂದ ಈ ಸಂದರ್ಭದಲ್ಲಿ ಹಸಿವು ಮತ್ತು ಬಡತನದಂಥ ಸಮಸ್ಯೆಯ ಕುರಿತು ಅಧ್ಯಯನ ಮಾಡಬೇಕಾದ ಅಗತ್ಯವಿದೆ. ಆ ಮೂಲಕ ಮಾನವೀಯ ಮೌಲ್ಯಗಳನ್ನು ಪುನರ್‌ವಿಮರ್ಶಿಸಿ ಮಾನವ ಕುಲದಲ್ಲಿ ಸಮಾನತೆಯನ್ನು ತರಬೇಕಾಗಿದೆ.

ಬಡವರ ಮೇಲಿನ ದೌರ್ಜನ್ಯವನ್ನು ನಿರ್ಮೂಲನಗೊಳಿಸಿದರೆ ಹಸಿವಿನ ಸಮಸ್ಯೆಯನ್ನು ನಿವಾರಿಸಲು ಸಾಧ್ಯವಿಲ್ಲ. ಬದಲಾಗಿ ಸಾಮಾಜಿಕ ವ್ಯವಸ್ಥೆಯಲ್ಲಿ ಅವು ಪಡೆದುಕೊಂಡ ರೂಪಗಳನ್ನು ಪ್ರಶ್ನಿಸಬೇಕಾಗಿದೆ, ಅವುಗಳ ಕಾರಣವನ್ನು ಹುಡುಕಬೇಕಾಗಿದೆ. ಶೋಷಣೆಯ ವಿರುದ್ಧ ಪ್ರತಿಭಟಿಸುವ ಮತ್ತು ತಮ್ಮ ನೋವಿಗೆ ಕಾರಣವನ್ನು ಹುಡುಕುವುದಿರಲಿ, ಧ್ವನಿಯಿದ್ದೂ ಕೂಡಾ ಮೌನವಾಗಿ ಎಲ್ಲವನ್ನೂ ಸಹಿಸಿಕೊಂಡು ಬಂದ ಹಸಿವಿನಿಂದ ನೊಂದ ಬಡವರ, ದೀನ-ದಲಿತರ ಯಾತನೆಗಳಿಗೆ ಮುಕ್ತಿ ಕಂಡುಕೊಳ್ಳುವುದಕ್ಕಾದರೂ ಅದರಿಂದ ಜಾಗೃತರಾಗುವ ನಿಟ್ಟಿನಲ್ಲಿ ಪ್ರಯತ್ನ ಮಾಡಬಹುದಾಗಿದೆ.

ಭಾರತೀಯ ಇತಿಹಾಸದುದ್ದಕ್ಕೂ ತಮ್ಮ ಮೇಲೆ ನಡೆದ ದೌರ್ಜನ್ಯ, ದಬ್ಬಾಳಿಕೆ ಕುರಿತು ಬಡವರು, ದೀನ-ದಲಿತರು ಏಕೆ ಸುಮ್ಮನಿದ್ದರು ಎಂಬ ಪ್ರಶ್ನೆ ಹುಟ್ಟುತ್ತಲೇ ಅವರ ನಿಗೂಢ ಮೌನದ ಹಿಂದಿರುವ ಕಾರಣಗಳನ್ನು ವಿಸ್ತೃತವಾಗಿ ನೋಡಬಹುದಾಗಿದೆ. ಸಾಮಾಜಿಕ ಸಮಸ್ಯೆಯ ಸಂಚನ್ನು ಕಂಡುಕೊಳ್ಳಬೇಕಾದರೆ ಒಳಗೆ ಹುದುಗಿ ಹೋದ ಚಾರಿತ್ರಿಕ ಸತ್ಯಕ್ಕೆ ಕನ್ನಡಿ ಹಿಡಿಯಬೇಕಾಗಿದೆ. ಉಳ್ಳವರೇ ಕೇಂದ್ರವಾಗಿರುವ ಈ ಭಾರತೀಯ ಸಮಾಜದಲ್ಲಿ ಉದ್ದೇಶಪೂರ್ವಕವಾಗಿ, ಪೂರ್ವಯೋಜಿತವಾಗಿ ಹೆಣೆಯಲ್ಪಟ್ಟ, ಹೇರಲ್ಪಟ್ಟ ಅದೆಷ್ಟೋ ಆಚರಣೆಗಳು, ಸಂಪ್ರದಾಯಗಳು ಬಡವರ, ದೀನ-ದಲಿತರ ಶೋಷಣೆಗೆ ದಾರಿ ಮಾಡಿ ಕೊಟ್ಟಿದೆ. ಭಾರತೀಯ ಇತಿಹಾಸವನ್ನು ಗಮನಿಸುತ್ತಾ ಹೋದರೆ ವರ್ಗ, ವರ್ಣ, ಜನಾಂಗ, ಲಿಂಗ ತಾರತಮ್ಯದ ಕುರಿತು ಗಂಭೀರವಾದ ಚಿಂತನೆ ನಡೆದಿದ್ದರೂ ಕೂಡಾ ಹಸಿವಿನ ಸಮಸ್ಯೆಯ ಕುರಿತ ಅಧ್ಯಯನ-ಚಿಂತನೆ ನಡೆದಿಲ್ಲ. ಎಲ್ಲೋ ಒಂದು ಹಂತದಲ್ಲಿ ನಡೆದರೂ ಅದನ್ನು ಗಂಭೀರವಾಗಿ ಪರಿಗಣಿಸದಿರುವುದು ಕಂಡು ಬಂದಿದೆ.

ಸಮಾಜದಲ್ಲಿ ಮಾನವ ಕೇಂದ್ರಿತ ವ್ಯವಸ್ಥೆಯನ್ನು ಗಮನದಲ್ಲಿರಿಸಿಕೊಂಡಾಗ ಮಾತ್ರ ಬಡವರ ಬದುಕಿಗೂ ಬೆಲೆಯನ್ನು ಕೊಡಲು ಸಾಧ್ಯ. ಪ್ರಪಂಚದ ಇತಿಹಾಸವನ್ನು ನೋಡುತ್ತಾ ಹೋದರೆ ಬದಲಾವಣೆ ಎನ್ನುವಂಥದ್ದು ರಾತ್ರಿ ಕಳೆದು ಹಗಲಾಗುವಷ್ಟರಲ್ಲಿ ಆಗುವಂಥದ್ದಲ್ಲ ಎನ್ನುವುದು ಸತ್ಯ. ಈ ಬದಲಾವಣೆಗೆ ಹಲವು ವರ್ಷಗಳೇ ಕಾಯಬೇಕಾಗುತ್ತದೆ. ಹಾಗೆಯೇ

ಶತಮಾನದುದ್ದಕ್ಕೂ ಪ್ರಧಾನ ಪಂಕ್ತಿಯಲ್ಲಿದ್ದ ಧನಿಕ ಕೇಂದ್ರಿತ ವ್ಯವಸ್ಥೆಯನ್ನು ಏಕಾಏಕಿಯಾಗಿ ಬದಲಾಯಿಸಿ ಬಿಡುವುದು ಅಷ್ಟು ಸುಲಭವೂ ಅಲ್ಲ. ಆದರೆ ಅದರ ಬಗ್ಗೆ ಚರ್ಚಿಸಿ ಚಿತ್ರಿಸುವುದರ ಮೂಲಕ ಮುಂದೊಂದು ದಿನ ಆಗಬಹುದಾದ ಪರಿವರ್ತನೆಗೆ ವೇದಿಕೆ ನಿರ್ಮಿಸಿ ಕೊಡುವ ಪ್ರಯತ್ನ ಮಾಡಬಹುದು.

ಧನಿಕ ಕೇಂದ್ರಿತ ಸಮಾಜ ಇರುವವರೆಗೂ ಈ ರೀತಿಯ ಚರ್ಚೆ ಹಾಗೂ ಆ ಮೂಲಕ ಜಾಗೃತಿ ಅವಶ್ಯಕವಾಗಿರುತ್ತದೆ. ಉಳ್ಳವರ ಸಮಾಜ ವ್ಯವಸ್ಥೆಯನ್ನು ನಿರ್ಮೂಲನಗೊಳಿಸಿ ಮಾನವತಾವಾದದ ಮೇಲೆ ಸಮಾಜ ನಿರ್ಮಾಣ ಮಾಡಬೇಕು. ಅಂತೆಯೇ ೧೯೨೦ ರಿಂದ ೪೦ರ ವರೆಗೆ ಇದ್ದಂತಹ (ಗುರುತಿಸಿಕೊಂಡ) ನವೋದಯ ಕಾಲಘಟ್ಟದಲ್ಲಿ ಪ್ರಕೃತಿ, ಭಕ್ತಿ, ಪ್ರೀತಿ, ಪ್ರೇಮ, ಪ್ರಣಯ, ದೇವರು, ಧರ್ಮ ಹೀಗೆ ಅನುಭಾವದ ಹಿನ್ನೆಲೆಯಲ್ಲಿ ಮುಖ್ಯವಾದ ಚಿಂತನೆಗಳು ನಡೆದವು. ಅದೇ ಸಂದರ್ಭದಲ್ಲಿ ಕುವೆಂಪು, ಬೇಂದ್ರೆ, ಮಾಸ್ತಿ, ಪು. ತಿ. ನ., ಜಿ. ಪಿ. ರಾಜರತ್ನಂ, ಡಿ. ವಿ. ಜಿ. ಯಂಥವರು ವಾಸ್ತವದ ನೆಲೆಯಲ್ಲಿ ನಿಂತು ಹಸಿವು, ಬಡತನ, ನಿರುದ್ಯೋಗ, ಅನಕ್ಷರತೆ, ಕೌಟುಂಬಿಕ ಸಮಸ್ಯೆ ಈ ರೀತಿಯ ಸಾಮಾಜಿಕ ಸಮಸ್ಯೆಗಳನ್ನು ಚಿತ್ರಿಸಲು ಮುಂದಾದುದು ಗಮನಿಸಬೇಕಾದ ಸಂಗತಿ. ಅನುಭಾವದ ನೆಲೆಯಿಂದ ಅನುಭವದ ನೆಲೆಗೆ ಬಂದರು. ಅದರಲ್ಲೂ ಮುಖ್ಯವಾಗಿ ಪ್ರಪಂಚದಾದ್ಯಂತ ಚಾಚಿಕೊಂಡಿರುವ ಹಸಿವೆಯಂತಹ ಸಮಸ್ಯೆಯ ಗಂಭೀರ ವಿಷಯವನ್ನು ತಮ್ಮ ಸಾಹಿತ್ಯದ ವಸ್ತುವನ್ನಾಗಿರಿಸಿಕೊಂಡು ಆ ಮೂಲಕ ಕನ್ನಡದ ಕೆಲವು ಕಥೆಗಾರರು ಸಮಾಜವನ್ನು ಚಿಕಿತ್ಸಕ ದೃಷ್ಟಿಯಿಂದ ನೋಡಿದರು.

ಹಸಿವು ಮತ್ತು ಬಡತನಕ್ಕೆ ಪ್ರಮುಖ ಕಾರಣ ಧಾರಣಾ ಸಾಮರ್ಥ್ಯ ಕ್ಷೀಣವಾಗಿರುವುದು, ಅನಕ್ಷರತೆ, ನಿರುದ್ಯೋಗ, ಆಲಸ್ಯ, ಅನಾರೋಗ್ಯ, ಅತಿಯಾದ ಜನಸಂಖ್ಯೆ, ದುಶ್ಚಟಗಳು, ಅರಿವಿನ ಕೊರತೆ, ನಿರಾಧಾರ, ಮದ್ಯಪಾನಾಸಕ್ತಿ, ಮುಂತಾದವು.

"ಅಭಿವೃದ್ಧಿಯು ಮಾನವೀಯವಾಗಿರದೆ ಮತ್ತೇನಾಗಿರಲು ಸಾಧ್ಯ? ಮಾನವ ಅಭಿವೃದ್ಧಿ ಎಂಬ ಪರಿಭಾವನೆಗೆ ಸಂಬಂಧಿಸಿದಂತೆ ನಮಗೆ ಎದುರಾಗಬಹುದಾದ ಸಾಮಾನ್ಯ ಪ್ರಶ್ನೆ ಇದಾಗಿದೆ. ಮಾನವ ಅಭಿವೃದ್ಧಿಯನ್ನು ಮಾನವೀಯ ಅಭಿವೃದ್ಧಿ ಎಂದು ತಪ್ಪಾಗಿ ಅರ್ಥ ಮಾಡಿಕೊಳ್ಳುವ ಸಾಧ್ಯತೆಯಿದೆ. ಮಾನವ ಅಭಿವೃದ್ಧಿ, ಮಾನವ ಬಡತನ ಮತ್ತು ಮಾನವ ಹಕ್ಕುಗಳು ಎಂಬಲ್ಲಿ 'ಮಾನವ' ಎಂಬುದು ಮನುಷ್ಯರು ಎಂಬ ಕಾರಣಕ್ಕೆ ಅವರಿಗೆ ಸಮೃದ್ಧ ಬದುಕು ಸಾಧ್ಯವಾಗಬೇಕು. ಮನುಷ್ಯರು ಎಂಬ ಕಾರಣಕ್ಕೆ ಅವರು ಬಡತನದಿಂದ ಮುಕ್ತರಾಗಿರಬೇಕು ಮತ್ತು ಮನುಷ್ಯರು ಎಂಬ ಕಾರಣಕ್ಕೆ ಅವರಿಗೆ ಕೆಲವು ಹಕ್ಕುಗಳಿರುತ್ತವೆ ಎಂಬುದನ್ನು ಸೂಚಿಸುತ್ತದೆ. ಮಾನವ ಅಭಿವೃದ್ಧಿ, ಮಾನವ ಬಡತನ ಮತ್ತು ಮಾನವ ಹಕ್ಕು ಎಂಬ ನುಡಿಗಳಲ್ಲಿ 'ಮಾನವ' ಎಂಬುದು ಮಾನವೀಯತೆಗೆ ಸಂಬಂಧಿಸಿದ್ದಲ್ಲ. ಅಭಿವೃದ್ಧಿಗೆ ಮಾನವೀಯ ಮುಖವಿರುತ್ತದೆ. ಆದರೆ ಮಾನವೀಯತೆಯೇ ಮಾನವ ಅಭಿವೃದ್ಧಿಯಲ್ಲ. ಮನುಷ್ಯರು ಎಂಬ ಕಾರಣಕ್ಕೆ ಅವರು ಹಸಿವಿನಿಂದ ಸ್ವಾತಂತ್ರ್ಯವನ್ನು ಪಡೆಯುವಂತಾಗಬೇಕು" ಎಂದು ಟಿ. ಆರ್. ಚಂದ್ರಶೇಖರ್ ಹೇಳಿದ್ದಾರೆ.[೧]

"ರಾಷ್ಟ್ರವೊಂದರ ನಿಜವಾದ ಸಂಪತ್ತು ಎಂದರೆ ಅಲ್ಲಿನ ಜನರು ಆರೋಗ್ಯ ಕಾಯರಾಗಿ, ದೀರ್ಘಕಾಲ ಬದುಕಲು ಮತ್ತು ಬದುಕನ್ನು ಸೃಜನಶೀಲವಾಗಿ ಸಾಗಿಸಲು ಜನರಿಗೆ

ಸಾಧ್ಯವಾಗುವಂತೆ ಮಾಡುವುದು ಅಭಿವೃದ್ಧಿಯ ಮೂಲ ಉದ್ದೇಶವಾಗಿದೆ. ಇದು ತುಂಬಾ ಸರಳವಾದ ಸಂಗತಿಯಾಗಿ ಕಾಣಬಹುದು. ಆದರೆ ಸರಕು ಸಾಮಾಗ್ರಿಗಳನ್ನು ಮತ್ತು ಹಣಕಾಸನ್ನು ಗುಡ್ಡೆ ಹಾಕಿಕೊಳ್ಳುವ ಭರದಲ್ಲಿ ಮೇಲಿನ ಸಂಗತಿಗಳನ್ನು ಸಾಮಾನ್ಯವಾಗಿ ಮರೆತುಬಿಡುವ ಸಾಧ್ಯತೆಯಿದೆ".[೨]

ಅರಿಸ್ಟಾಟಲ್‌ನ ಪ್ರಕಾರ ಒಂದು ಸಮಾಜ ಎಷ್ಟರ ಮಟ್ಟಿಗೆ ಆದರ್ಶಪ್ರಾಯವಾಗಿದೆ ಎಂಬುದನ್ನು ನಿರ್ಧರಿಸುವ ಮಾನದಂಡವೆಂದರೆ ಅದು ಎಷ್ಟರ ಮಟ್ಟಿಗೆ 'ಮಾನವ ಒಳಿತ'ನ್ನು ಸಾಧಿಸಿದೆ ಎಂಬುದಾಗಿದೆ. ಅವನ ಪ್ರತಿಪಾದನೆಯಂತೆ ಜನರು ಜೀವನದಲ್ಲಿ ಸಾಧಿಸಿಕೊಳ್ಳಬೇಕಾಗಿರುವುದು ಸಂಪತ್ತಿನ ಸಂಗ್ರಹವಲ್ಲ ಏಕೆಂದರೆ ಅದು ಉತ್ತಮ ಬದುಕನ್ನು ಸಾಧಿಸಿಕೊಳ್ಳಲು ಇರುವ ಒಂದು ಸಾಧನ.

"ದೀರ್ಘವಾದ, ಆರೋಗ್ಯಕರವಾದ ಮತ್ತು ಸೃಜನಶೀಲವಾದ ಬದುಕನ್ನು ಸಾಧಿಸಿಕೊಳ್ಳಲು, ಜನರು ಯಾವುದು ಮೌಲ್ಯಯುತವಾದುದೆಂದು ಪರಿಗಣಿಸುತ್ತಾರೋ ಅವುಗಳನ್ನು ಸಾಧಿಸಿಕೊಳ್ಳಲು ಹಾಗೂ ನಾವೆಲ್ಲರೂ ಪಾಲುಗಾರರಾಗಿರುವ ನಮ್ಮ ವಿಶ್ವದಲ್ಲಿ ಸಮಾನತೆ ಮತು ಸುಸ್ಥಿರಗತಿ ಆಧಾರದಲ್ಲಿ ಅಭಿವೃದ್ಧಿಯನ್ನು ರೂಪಿಸಲು ಅಗತ್ಯವಾದ ಜನರ ಸ್ವಾತಂತ್ರ್ಯಗಳೇ ಮಾನವ ಅಭಿವೃದ್ಧಿ. ಜನರು ವೈಯಕ್ತಿಕವಾಗಿ ಮತ್ತು ಸಮಷ್ಟಿಯಾಗಿ ಅಭಿವೃದ್ಧಿಯ ಫಲಾನುಭವಿಗಳೂ ಹೌದು ಮತ್ತು ಅದರ ಚಾಲಕ ಶಕ್ತಿಯೂ ಹೌದು".[೩]

ಮಾನವ ಅಭಿವೃದ್ಧಿಯು ಕೆಳಗಿನ ಗುರಿಗಳನ್ನು ಇಟ್ಟುಕೊಂಡಿದೆ:

೧. **ಸುಖಕರವಾದ ಬದುಕು:** ಸಮೃದ್ಧ ಬದುಕನ್ನು ಸಾಧಿಸಿಕೊಳ್ಳಲು ಅಗತ್ಯವಾದ ಜನರ ಸ್ವಾತಂತ್ರ್ಯಗಳನ್ನು ವಿಸ್ತೃತಗೊಳಿಸುವುದು.

೨. **ಸಶಕ್ತೀಕರಣ ಮತ್ತು ಕರ್ತೃತನ:** ಜನರು ಯಾವುದನ್ನು ಮೌಲ್ಯಯುತವಾದುದೆಂದು ಪರಿಗಣಿಸುತ್ತಾರೋ ಅವುಗಳನ್ನು ಸಾಧಿಸಿಕೊಳ್ಳಲು ಮತ್ತು ಪಡೆದುಕೊಳ್ಳಲು ಅವರು ಪ್ರಯತ್ನಿಸುವಂತೆ ಮಾಡುವುದು.

೩. **ಸಾಮಾಜಿಕ ನ್ಯಾಯ:** ಸಮಾನತೆಯ ವ್ಯಾಪ್ತಿಯನ್ನು ವಿಸ್ತರಿಸುವುದು, ಫಲಗಳು ಸುಸ್ಥಿರಗತಿಯಲ್ಲಿ ದೊರೆಯುವಂತೆ ಮಾಡುವುದು ಮತ್ತು ಮಾನವ ಹಕ್ಕುಗಳಿಗೆ ಗೌರವ ನೀಡುವುದು ಹಾಗೂ ಆದರ್ಶ ಸಮಾಜ ಎನಿಸಿಕೊಳ್ಳುವುದಕ್ಕೆ ಅಗತ್ಯವಾದ ಸಂಗತಿಗಳಿಗೆ ಒತ್ತು ನೀಡುವುದು.

ಹಸಿವಿನ ಸಮಸ್ಯೆಗೆ ಪ್ರಾತಿನಿಧಿಕವಾಗಿ ಈ ಕಾರಣಗಳನ್ನು ಪಟ್ಟಿ ಮಾಡಿಕೊಳ್ಳಬಹುದು:

೧. ಸಾಮಾಜಿಕ ಕಾರಣಗಳು

೨. ಆರ್ಥಿಕ ಕಾರಣಗಳು

೩. ಧಾರ್ಮಿಕ ಕಾರಣಗಳು

೪. ರಾಜಕೀಯ ಕಾರಣಗಳು

೫. ಪ್ರಾಕೃತಿಕ ಕಾರಣಗಳು

೩.೧ ಸಾಮಾಜಿಕ ಕಾರಣಗಳು

ನಮ್ಮದು ಶ್ರೇಣೀಕೃತ ಸಮಾಜ ವ್ಯವಸ್ಥೆಯ ತಳಪಾಯ. ಅನೇಕ ಅಸಮಾನತೆಗಳ ಮೇಲೆ ನಿಂತಿದೆ. ವರ್ಣಾಧಾರಿತ, ಅರ್ಥಾಧಾರಿತ ಭೇದಗಳ ಮೇಲೆ ನಿಂತಿದೆ. ಈ ಎಲ್ಲವುಗಳಿಗೂ ಕಾರಣವಾಗಿರುವ ಆ ಸಿಟ್ಟು, ಕ್ರೌರ್ಯ, ವಂಚನೆ, ನೋವು ನಮ್ಮ ಬದುಕಿನ ಕರಾಳ ಮುಖದ ಅವಿಭಾಜ್ಯ ಅಂಗವಾಗಿದ್ದರೂ ಆಧುನಿಕ ಪೂರ್ವದಲ್ಲಿ ಇದಕ್ಕೆ ಹೆಚ್ಚು ಸ್ಪಂದಿಸಲಿಲ್ಲ. ಪರರ ನೆರಳಿನಡಿಯಲ್ಲಿಯೋ, ಸಿಂಹಾಸನದಡಿಯಲ್ಲಿಯೋ ತಮ್ಮ ತಮ್ಮ ಲೇಖನಿಗಳನ್ನು ಓಡಿಸಬೇಕಾಗಿ ಬಂದ ಆ ಲೇಖಕರಿಗೆ ಈ ರೀತಿಯ ಅಸಮಾನತೆಯನ್ನು ಕೆದಕಲಿಕ್ಕೆ ಹೋಗಲು ಅವಶ್ಯಕವಾದ ಬೌದ್ಧಿಕ, ಬೌದ್ಧಿಕ-ಸಂದರ್ಭ, ಸಿದ್ಧತೆಗಳು ಇರಲಿಲ್ಲ. ಇದ್ದರೂ ಅನ್ನದ ಋಣ, ಮುಲಾಜಿನ ಮೂಟೆಯೊಳಗೆ ತಮ್ಮನ್ನು ತಾವೇ ಬಂಧಿಸಿಕೊಳ್ಳುತ್ತಿದ್ದರು, ಬಂಧಿಸಿಕೊಂಡರು.

ಈ ರೀತಿಯಲ್ಲಿ "ಸಾಮಾಜಿಕ ಅಸಮಾನತೆಯನ್ನು ಪರಿಹರಿಸಿಕೊಳ್ಳುವಲ್ಲಿ ಆಯಾ ಸಂದರ್ಭದಲ್ಲಿ ಸಿಗಬಹುದಾದ ಕೆಲವು ಸಾಧ್ಯತೆಗಳು ಸೂಚಿತವಾಗುತ್ತವೆ. ಈ ಎಲ್ಲಾ ಸಮಸ್ಯೆಗಳು ಕೇವಲ ಅವರವರ ಜೀವನ ಸಂದರ್ಭದಿಂದಷ್ಟೇ ಸೃಷ್ಟಿಯಾದವುಗಳಲ್ಲ. ಅನೇಕ ಶತಮಾನಗಳಲ್ಲಿ ಸಾಗಿ ಬಂದ ನಮ್ಮ ಕೌಟುಂಬಿಕತೆ, ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಧಾರ್ಮಿಕ ಕ್ಷೇತ್ರಗಳ ಇತಿಹಾಸದಲ್ಲಿ ಅವುಗಳ ಬೇರುಗಳಿವೆ. ಆದುದರಿಂದಲೇ ಹಸಿವಿನ ಸಮಸ್ಯೆಯನ್ನು ಮೂಲೋತ್ಪಾಟನೆ ಮಾಡಬೇಕಾದ ಮೂಲಭೂತ ಅಗತ್ಯವಿದೆ" ಎಂಬ ಶ್ರೀಪತಿ ಹಳಗುಂದರ ಮಾತು ಉಲ್ಲೇಖಾರ್ಹವಾದುದು.[೪]

ಮೇಲು-ಕೀಳು ಎಂಬ ಅಸಮಾನತೆಯು ಸಮಾಜದಲ್ಲಿ ದೊಡ್ಡವರು ಎಂದರೆ ಹಣವಂತರು, ಮೇಲು ಜಾತಿಯವರು, ಅಕ್ಷರಜ್ಞಾನ ಬಲ್ಲವರು, ದೊಡ್ಡ ವಾಹನಗಳಲ್ಲಿ ಸಂಚರಿಸುವವರು ಎಂಬುದಾಗಿ, ಬಡವರೆಂದರೆ ಕೀಳು ಜಾತಿಯವರು, ಕೆಳಸ್ತರದವರು, ಧಾರಣಾ ಸಾಮರ್ಥ್ಯ ಕಡಿಮೆ ಇರುವವರು, ಕೂಲಿಕಾರರಾಗಿ, ಮೇಲ್ಜಾತಿಯವರ ಮನೆಯಲ್ಲಿ ಜೀತ ಮಾಡಿಕೊಂಡು ಬದುಕುವವರು ಎಂಬ ನಂಬಿಕೆ ಬೆಳೆದು ಬಂದಿದೆ.

ಈ ರೀತಿಯ ತಾರತಮ್ಯದಿಂದಾಗಿ ಜಾತಿ ಗೋಡೆಯ ವಿಷವರ್ತುಲದಿಂದಾಗಿ ಸಮಾಜದ ಇಂಥ ಕಟ್ಟುಪಾಡುಗಳಿಂದ ಕೆಳಸ್ತರದವರು ಶೋಚನೀಯವಾದ ಬದುಕು ನಡೆಸುತ್ತಿದ್ದಾರೆ. ಸಮಾಜದಲ್ಲಿ ಮೇಲ್ಜಾತಿಯವರಿಗೆ ಅಗ್ರಸ್ಥಾನ, ಕೆಳಜಾತಿ (ಕೆಳವರ್ಗ) ಯವರಿಗೆ ಅಂತಿಮ ಸ್ಥಾನ. ಈ ಶ್ರೇಣೀಕೃತ ವ್ಯವಸ್ಥೆಯು ಕೆಳಜಾತಿಯವರು ಮೈಮುರಿದು ದುಡಿದರೂ ಅವರ ಹೊಟ್ಟೆ ತುಂಬದಂತೆ, ಹಸಿವೆಯಿಂದ ನರಳಿ ನರಳಿ ಸಾಯುವಂತೆ ಮಾಡಿದೆ. ಸಮಾಜದಲ್ಲಿ ಸರ್ವರೂ ಸಮಾನರು. ಸರ್ವರಿಗೆ ಸಮಬಾಳು, ಸರ್ವರಿಗೆ ಸಮಪಾಲು ದೊರೆಯುವಂತಾಗಬೇಕು. ಆದರೆ ಶತಶತಮಾನಗಳಿಂದ ನಡೆದುಕೊಂಡು ಬಂದಿರುವ ಉಚ್ಚ-ನೀಚ ಎಂಬ ಅಂತರವು ಹಲವರನ್ನು ಹಸಿವೆಯಿಂದ ಒದ್ದಾಡುವಂತೆ ಮಾಡಿದೆ. ಬೆವರು ಸುರಿಸಿ, ಭೂಮಿ ಅಗೆದು, ರಾಶಿ ರಾಶಿ

ಧಾನ್ಯವನ್ನು ತುಂಬಿಸಿದರೂ ತಮ್ಮ ಒಂದು ಗೇಣು ಹೊಟ್ಟೆಯನ್ನು ತುಂಬಿಸಲು ಮುಷ್ಠಿ ಅನ್ನ ಸಿಗದಿರುವುದು ದುರಂತವೇ ಸರಿ. ಈ ವರ್ಗ, ವರ್ಣ, ಲಿಂಗ ತಾರತಮ್ಯಗಳು ಸಮಾಜದಿಂದ ತೊಲಗದ ಹೊರತು ಸ್ವಸ್ಥ ಸಮಾಜದ ನಿರ್ಮಾಣ ಅಸಾಧ್ಯ. ಗಾಂಧಿ, ಅಂಬೇಡ್ಕರ್‌ರವರು ಸಮಾಜದಲ್ಲಿ ಎಲ್ಲರಿಗೂ ಸಮಾನ ಅವಕಾಶ ಸಿಗಬೇಕು; ಅನ್ನ, ವಸ್ತ್ರ, ವಸತಿ ಎಲ್ಲರಿಗೂ ಸಿಗಬೇಕು; ಮಾನವತೆಯ ಆಧಾರದಲ್ಲಿ ಆರೋಗ್ಯವಂತ ಸಮಾಜದ ನಿರ್ಮಾಣಕ್ಕೆ ಮಹನೀಯರು ಕರೆ ನೀಡಿದರೂ ಈ ಅಸಮಾನತೆಯ ವಿಷದ ಬೇರು ಭೂಮಿಯೊಳಕ್ಕೆ ಹರಡಿಕೊಂಡಿರುವುದರಿಂದ ಇದರ ನಿವಾರಣೆ ಅಸಾಧ್ಯವಾಗಿದೆ. ಇದು ತಮ್ಮ ಹಣೆಬರಹ, ತಾವು ಕೈಲಾಗದವರು, ತಾವು ಅಸಹಾಯಕರು, ದೇವರ ಶಾಪ ಎಂದುಕೊಂಡು ಶ್ರಮಿಕ ವರ್ಗ ಸಮಾಜದಲ್ಲಿ ಶೋಷಣೆಗೆ ತುತ್ತಾಗುತ್ತಲೇ ಹಸಿವೆಯಿಂದ ಬಳಲಿದರೂ ಇವರ ಕೂಗು ಮಾತ್ರ ಪ್ರಜ್ಞಾವಂತ ಸಮಾಜಕ್ಕೆ ಕೇಳದಿರುವುದು ವಿಪರ್ಯಾಸ.

೩.೨ ಆರ್ಥಿಕ ಕಾರಣಗಳು

ಹಸಿವು ಮತ್ತು ಬಡತನಕ್ಕೆ ಕಾರಣವೇ ಆರ್ಥಿಕತೆ. ಒಂದು ದೇಶದ ಜನರು ವಾಸಿಸುತ್ತಿರುವ ಮಟ್ಟ ಎಂದು ಹೇಳುವುದಾದರೆ ಸಮಾಜದಲ್ಲಿ ಅತ್ಯಂತ ಶ್ರೀಮಂತರಿದ್ದಾರೆ, ಬಡವರಿದ್ದಾರೆ, ಕಡು ಬಡವರಿದ್ದಾರೆ. ಎಲ್ಲವೂ ಆ ದೇಶದ ಆರ್ಥಿಕ ಸ್ಥಿತಿಯನ್ನು ಅವಲಂಬಿಸಿರುತ್ತದೆ. ಈ ನಿಟ್ಟಿನಲ್ಲಿ ಮುಂದುವರಿಯುತ್ತಿರುವ ಭಾರತದಂತಹ ದೇಶಗಳಲ್ಲಿ ಸದಾ ಕಾಡುತ್ತಿರುವ ಸಮಸ್ಯೆ ಎಂದರೆ ಆರ್ಥಿಕ ಸಮಸ್ಯೆ. ಆರ್ಥಿಕ ಅಸಮತೋಲನವೇ ಈ ಸಮಸ್ಯೆಗಳ ಕೇಂದ್ರ ಬಿಂದು.

ಆರ್ಥಿಕ ಸಮಸ್ಯೆಗಳಿಗೆ ಹಲವು ಆಯಾಮಗಳಿವೆ. ಬರಗಾಲ, ಅತಿವೃಷ್ಟಿ, ಅನಾವೃಷ್ಟಿ, ಪ್ರವಾಹ ಇವುಗಳು ಪುರುಷರನ್ನು ಭಯೋತ್ಪಾದಕರನ್ನಾಗಿ, ದರೋಡೆಕೋರರನ್ನಾಗಿ, ಕಳ್ಳರನ್ನಾಗಿ ಮಾಡಿದರೆ ಸ್ತ್ರೀಯರನ್ನು ವೇಶ್ಯಾವೃತ್ತಿಗೆ ಇಳಿಸಿ ಬಿಡುತ್ತವೆ. ಭಾರತ ವಿಸ್ತೀರ್ಣದಲ್ಲಿ ವಿಶಾಲವಾದರೂ ವಿಶಾಲ ಮನಸ್ಸಿನ ಕೊರತೆಯಿದೆ. ಸಂಪತ್ತಿನ ಕೇಂದ್ರೀಕರಣ ಇವೆಲ್ಲವೂ ಒಂದು ವರ್ಗಕ್ಕೆ ಪ್ರತಿಕೂಲವಾಗಿ ಪರಿಣಮಿಸುತ್ತವೆ. ಆರ್ಥಿಕ ಸಮಸ್ಯೆಯನ್ನು ನೀಗಿಸಿಕೊಳ್ಳಲು ಅಡ್ಡದಾರಿಗಿಳಿಯುವುದು ನಿಜಕ್ಕೂ ಆರೋಗ್ಯವಂತ ಸದೃಢ ಸಮಾಜಕ್ಕೆ ಶೋಭೆ ತರುವಂಥದ್ದಲ್ಲ.

ಕೆಲವು ಕಥೆ-ಕಾದಂಬರಿಗಳಲ್ಲಿನ ಪಾತ್ರಗಳನ್ನು ಗಮನಿಸಿದಾಗ ಹಸಿವಿನ ಸಮಸ್ಯೆಗೆ ಹೇಗೆ ಆರ್ಥಿಕತೆ ಕಾರಣವಾಗುತ್ತದೆ ಎಂಬ ಅಂಶ ಮನವರಿಕೆಯಾಗದೇ ಇರದು. ಒಬ್ಬೊಬ್ಬರೂ ಈ ಸಮಾಜದ ಅನಿಷ್ಟ ಪಿಡುಗನ್ನು ಮೆಟ್ಟಿ ನಿಲ್ಲಬೇಕೆನ್ನುವ ದಿಸೆಯಲ್ಲಿದ್ದು ಅನಂತರ ಇವರೇ ಅನಿಷ್ಟ ಪಿಡುಗಿಗೆ ಬಲಿಯಾಗಿ ಪೀಡೆಯಾಗುವುದು ಇಂದಿನ ಸಾಮಾಜಿಕ ಅವ್ಯವಸ್ಥೆಗೆ ಮತ್ತು ಶೋಷಣೆಗೆ ಸಾಕ್ಷಿಯಾಗುತ್ತದೆ. ಎಲ್ಲವೂ ಹೊಟ್ಟೆಗಾಗಿ. ಬದುಕಿನ ಬೇಕು-ಬೇಡಗಳ ನಡುವೆ ಇವರಿಗೆ ಸ್ವಾತಂತ್ರ್ಯವೇ ಇಲ್ಲ. ಹೆಣ್ಣುಗಳಿಗೆ ಕೊನೆಯಲ್ಲಿ ಇರುವ ಆಸ್ತಿ ಎಂದರೆ ಅವರವರ ಶೀಲವೇ. ಇದೇ ಹೆಣ್ತನದ ಶಾಪವಾಗಿರುವುದು ಕೂಡಾ ವಿಪರ್ಯಾಸ. ದಯೆ-ದಾಕ್ಷಿಣ್ಯವಿಲ್ಲದ ಈ ಅಸಮಾನತೆಯ ಸಮಾಜ ಹಂತಹಂತವಾಗಿ ಆರ್ಥಿಕವಾಗಿ ತುಂಬಾ ಕೆಳಗಿರುವವರನ್ನು ಸುಲಿಯುವುದನ್ನು ನೋಡುತ್ತೇವೆ. ಎಲ್ಲವೂ ಹಣಕ್ಕಾಗಿ, ಹಣದ ಋಣಕ್ಕಾಗಿ. ಆರ್ಥಿಕ ಅಭದ್ರತೆ ಇಂತಹ ಸ್ಥಿತಿಗೆ

ತಂದೊಡ್ಡುತ್ತಿದೆ. ಇವರ ಧರ್ಮದ ಮುಂದೆ ಮಾನವೀಯ ಧರ್ಮ ಮೂಲೆಗುಂಪಾಗಿರುವುದು ಶೋಚನೀಯ.

೩.೩ ಧಾರ್ಮಿಕ ಕಾರಣಗಳು

ದೇವರ ಭಯವೇ ಜ್ಞಾನದ ಆರಂಭ
ಜ್ಞಾನದ ಅಭಾವವೇ ದೇವರ ಆರಂಭ[೫]

ಹಸಿವು ಮತ್ತು ಬಡತನಕ್ಕೆ ಧಾರ್ಮಿಕತೆಯೂ ಪ್ರಮುಖ ಕಾರಣ. 'ಮೇಲೊಬ್ಬ ದೇವರಿದ್ದಾನೆ. ಅವನು ನಮ್ಮನ್ನು ಕಾಪಾಡುತ್ತಾನೆ' ಎಂಬುದು ಎಲ್ಲರ ನಂಬಿಕೆ. 'ಹುಟ್ಟಿಸಿದ ದೇವರು ಹುಲ್ಲು ಮೇಯಿಸುತ್ತಾನೆಯೇ' ಎಂದು ಅಂದುಕೊಳ್ಳುವ ಆಶಾವಾದಿಗಳು ನಾವು. ಒಳ್ಳೆಯದಾದಾಗ ದೇವರ ದಯೆ ಎನ್ನುತ್ತೇವೆ. ಕೆಟ್ಟದಾದಾಗ ನಮ್ಮ ಕರ್ಮಕ್ಕೆ ದೇವರೇನು ಮಾಡುತ್ತಾನೆ. ಯಾರನ್ನೋ ನಂಬಿ ಮೋಸ ಹೋದಾಗ ಅವನನ್ನು ದೇವರೇ ನೋಡಿಕೊಳ್ಳಲಿ ಎಂದು ಹಿಡಿಶಾಪ ಹಾಕುತ್ತೇವೆ. 'ದೇವರನ್ನು ನಂಬಿ ಕೆಟ್ಟವರಿಲ್ಲವೋ' ಎಂಬ ದಾಸವಾಣಿಯ ಮೇಲೆ ಭಾರ ಹಾಕಿ, ಎಲ್ಲಾ ಹಣೆಬರಹ, ಯಾವ ಜನ್ಮದಲ್ಲಿ ಯಾರಿಗೆ ಏನು ಮಾಡಿದ್ದೆವೋ, ಈ ಜನ್ಮದಲ್ಲಿ ತೀರಿಸುತ್ತಿದ್ದೇವೆಂಬ ವೇದಾಂತಿಯ ಮಾತನ್ನು ನಾವೇ ಆಡುತ್ತೇವೆ.[೬]

"ದೇವರಿದ್ದಾನೋ? ಇಲ್ಲವೋ? ಒಳ್ಳೆಯವನೋ? ಕೆಟ್ಟವನೋ? ಗೊತ್ತಿಲ್ಲ. ಆದರೆ ದೇವರಿದ್ದಾನೆಂಬ ನಂಬಿಕೆಯಿಂದ ಮಾನವ ನೆಮ್ಮದಿಯನ್ನು, ಸಮಾಧಾನವನ್ನು ಪಡೆಯುತ್ತಿದ್ದಾರೆ"[೭] ಎಂದು ಜಯದೇವಪ್ಪ ಜೈನಕೇರಿಯವರು ಅಭಿಪ್ರಾಯಪಟ್ಟಿದ್ದಾರೆ. ಆದರೆ ದೇವರನ್ನು ನಂಬಿ ಕೆಲವೇ ಕೆಲವು ವರ್ಗದವರು ಅದರ ಲಾಭವನ್ನು ಪಡೆಯುತ್ತಾರೆ. ಆದರೆ ಸಮಾಜದ ಹಲವು ವರ್ಗಗಳು ಅದರಿಂದ ಶೋಷಿತರಾಗುವುದು ವಾಸ್ತವ ಸತ್ಯ. ಹೀಗಿರುವಾಗ ಒಂದು ವರ್ಗದವರಿಗೆ ದೇವರು ಪೋಷಕ, ಉಳಿದ ವರ್ಗಕ್ಕೆ ಇದೇ ದೇವರು ಶೋಷಕ.

'ಕಲ್ಲನಾಗರ ಕಂಡರೆ ಹಾಲನೆರೆಯೆಂಬರು
ದಿಟದ ನಾಗ ಕಂಡರೆ ಕೊಲ್ಲೆಂಬರಯ್ಯಾ'

ಎಂಬ ಬಸವಣ್ಣನವರ ವಚನದಲ್ಲಿ ಕಲ್ಲಿನ ನಾಗರ ದೇವರಾದರೆ, ನಿಜದ ನಾಗರ ದುಷ್ಟ ಜಂತು. ಕಲ್ಲಿನ ನಾಗರಕ್ಕೆ ಹಾಲನ್ನೆರೆಯುವವರು ದಿಟದ ನಾಗರ ಕಂಡಕೂಡಲೇ ಕೊಲ್ಲಲು ಹವಣಿಸುತ್ತಾರೆ.

ಕಲ್ಲಿನ ಮೂರ್ತಿಗೆ ನೈವೇದ್ಯವಿಡುವ ಜನ ಹಸಿದು ಬಂದ ಜೀವಂತ ಮನುಷ್ಯನನ್ನು ದೂರ ತಳ್ಳುತ್ತಾರೆ. ನಿಜವಾದ ನೈವೇದ್ಯ ಬೇಕಾಗಿರುವುದು ಕಲ್ಲಿನ ದೇವರಿಗೋ ಅಥವಾ ಹಸಿದು ಬಂದ ಜೀವಂತ ಮನುಷ್ಯರಿಗೋ ಎಂಬುದನ್ನು ಅರಿಯದ ಜನ ಧರ್ಮಾಂಧತೆಯಿಂದ ಹಸಿದವರನ್ನು ಶೋಷಣೆ ಮಾಡುವುದು ನಿಜಕ್ಕೂ ನಾಗರಿಕ ಸಮಾಜವೇ ತಲೆತಗ್ಗಿಸುವಂಥದ್ದು. ಹಸಿದು ಬಂದವರನ್ನು ದೂರ ತಳ್ಳಿ, ಹೊಟ್ಟೆ ತುಂಬಿದವರಿಗೆ ಮೃಷ್ಟಾನ್ನವನ್ನಿಕ್ಕುವ ಪರಿಯು ನಿಜಕ್ಕೂ ವಿಪರ್ಯಾಸವೇ ಸರಿ.

ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಧರ್ಮದ ಹೆಸರಿನಲ್ಲಿ ನಡೆದ ಶೋಷಣೆ ಮತ್ತಾವ ರೀತಿಯಲ್ಲೂ ಆಗಿಲ್ಲ. ಭಾರತೀಯರಿಗೆ ದೇವರ ಬಗ್ಗೆ ಭಯವಿದೆ. ಅದೇ ಭಯವನ್ನು ಬಳಸಿಕೊಂಡು ಒಂದು ವರ್ಗ ಇನ್ನೊಂದು ವರ್ಗದ ಪಾಲಿಗೆ ಭಯೋತ್ಪಾದಕರಾದದ್ದು ವಿಪರ್ಯಾಸ. ಅದರಲ್ಲೂ, ಸ್ತ್ರೀ ಅಂತಹ ಶೋಷಣೆಯ ಪ್ರತೀಕವಾಗಿದ್ದಾಳೆ – ಮತ್ತು ದೇವರ ಹೆಸರಿನಲ್ಲಿ ಆಕೆಗಾದ ಅವಮಾನ, ಅತ್ಯಾಚಾರ ಹೇಳತೀರದು. ಎಲ್ಲವೂ ದೇವರಿಗಾಗಿ, ಧರ್ಮಕ್ಕಾಗಿ, ಪುರುಷ ಪ್ರಧಾನ ವ್ಯವಸ್ಥೆಯ, ಪುರೋಹಿತಶಾಹಿಯ ವ್ಯವಸ್ಥೆಯ ಸಮಾಜಕ್ಕಾಗಿ. ಈ ನಿಟ್ಟಿನಲ್ಲಿ ಧರ್ಮದ ಹೆಸರಿನಲ್ಲಿ ಸ್ತ್ರೀಯರಿಗೆ 'ದೇವದಾಸಿ' ಎಂಬ ಪಟ್ಟ ಕಟ್ಟಿ ಆಕೆಗೆ ನೀನು ದೇವರ ಭಕ್ತೆ, ದೇವರ ಸೇವಕಿ, ದೇವರ ದಾಸಿ ಎಂಬೆಲ್ಲಾ ಸಂಚುಗಳಿಂದ ಆಕೆಯ ಚಾರಿತ್ರ್ಯವನ್ನು ವಧೆ ಮಾಡಿ ಆಕೆಗೆ ಅದು ತುಂಬಾ ಶ್ರೇಷ್ಠ ಎಂದು ನಂಬಿಸುವುದು ವ್ಯವಸ್ಥಿತ ಸಂಚು. ಇದು ಇನ್ನೂ ಭಾರತದಂತಹ ರಾಷ್ಟ್ರಗಳಲ್ಲಿ ರೂಢಿಯಿರುವುದು ಆತಂಕವನ್ನು ಹುಟ್ಟಿಸುತ್ತದೆ.

ದೇವರ ಹೆಸರಿನಲ್ಲಿ ಹಸಿದವರು ಮತ್ತಷ್ಟು ಹಸಿವೆಯಿಂದ ಬಳಲುವಂತೆ ಮಾಡುವುದು, ಹಾಗೆಯೇ ದೇವರಿಗೂ ಸ್ತ್ರೀಗೂ, ದೇವಾಲಯಕ್ಕೂ ಸ್ತ್ರೀಗೂ ನಂಟನ್ನು ಹಾಕಿ ಆಕೆಯನ್ನು ಅರೆಬೆತ್ತಲೆಯಾಗಿ, ಬೆತ್ತಲೆಯಾಗಿ ಪಾತರದವರು, ದೇವದಾಸಿ, ಸೂಳೆ, ವೇಶ್ಯೆ ಎಂದು ಕರೆದಿರುವುದನ್ನು ಇತಿಹಾಸದಲ್ಲಿ ಕಾಣುತ್ತೇವೆ. ವೈದಿಕ ಸಂಸ್ಕೃತಿಯಲ್ಲಿ ಜನ್ಮ ಪಡೆದ ಪಾತರದ ಪರಂಪರೆಯನ್ನು ಜೈನಧರ್ಮವೂ ಅನುಸರಿಸಿತು. ಅಷ್ಟೇ ಅಲ್ಲ, ಮುಸ್ಲಿಂ ಧರ್ಮವೂ ಅನುಸರಿಸಿದ ಅಪರೂಪದ ಹೆಜ್ಜೆಗುರುತು ಹುಕ್ಕೇರಿಯಲ್ಲಿ ಕಂಡು ಬಂದಿದೆ. ಜೈನಧರ್ಮ ಮೂಲದಲ್ಲಿದ್ದು ತನ್ನ ವಿಶಾಲತೆಯನ್ನು ಕಳೆದುಕೊಂಡು ವೈದಿಕದಂತೆ ಪರಿಮಿತಾರ್ಥವನ್ನು ಕಲ್ಪಿಸಿ ಪ್ರಚಾರಪ್ರಿಯತೆಯತ್ತ ವಾಲಿತು. ಹೀಗಾಗಿ ಅದು ವೈದಿಕ ದೇವಾಲಯಗಳಲ್ಲಿಯ ಪಾತರದ ಪರಂಪರೆಯನ್ನು ಸ್ವೀಕರಿಸಿತು. ನಾಗಮಂಗಲದ ಮಂಣೆಯಲ್ಲಿಯ ಕ್ರಿ. ಶ. ೮೦೨ರ ತಾಮ್ರಪಟದಲ್ಲಿ ಜೈನ ಬಸದಿಯಲ್ಲಿ ವಾರವಿಲಾಸಿನಿ ವಿರಚಿತ ನೃತ್ಯ–ಗೀತ ವಾದ್ಯಕ್ಕೆ ದಾನ ನೀಡಿದ ಉಲ್ಲೇಖವಿದೆ"[೮] ಎಂದು ಶೈಲಜಾ ಹಿರೇಮಠ ಹೇಳಿದ್ದಾರೆ.

"ಸಂಗೀತಗಾರ್ತಿಯರನ್ನು, ನೃತ್ಯಗಾರ್ತಿಯರನ್ನು ದೇವಾಲಯಕ್ಕೆ ದಾನ ನೀಡಿದರೆ ಸ್ವರ್ಗ ಪ್ರಾಪ್ತಿಯಾಗುತ್ತದೆ"[೯] ಎಂದು ಅನೇಕ ಪುರಾಣ ಪುಣ್ಯ ಕತೆಗಳು "ಜನಸಾಮಾನ್ಯರನ್ನು ಪ್ರಚೋದಿಸಿ ಕೂಪಕ್ಕೆ ತಳ್ಳಿದ ಕಾರಣ ಅದನ್ನು ನಂಬಿದ ಇತರರು ತಮ್ಮ ಸ್ವರ್ಗ ಪ್ರಾಪ್ತಿಗೋಸ್ಕರ ಪಾತರದಂತಹ ಸ್ತ್ರೀ ವರ್ಗವನ್ನು ನಿರ್ಮಿಸಿ ಅವರನ್ನು ನರಕಕ್ಕೆ ತಳ್ಳಿದ ಐತಿಹಾಸಿಕ ಉದಾಹರಣೆಗಳಿವೆ".[೧೦]

ನಮ್ಮ ಭಾರತೀಯ ಸಮಾಜದ ನೀತಿ–ನಿಯಮ, ಆಚಾರ–ವಿಚಾರ, ಸಂಪ್ರದಾಯ ಇವೆಲ್ಲವೂ ಬಡವರ–ದೀನದಲಿತರ ಹಾಗು ಸ್ತ್ರೀಯರ ಬದುಕಿಗೆ ಮುಳುವಾದದ್ದು ಅವರ ದುರ್ದೈವ. ಗ್ರೀಸ್‌ನಲ್ಲಿ ವೀನಸ್ ದೇವತೆಯ ಪೂಜೆ ಬಹಳ ಕಾಲದ ಹಿಂದೆಯೇ ನಡೆದು ಬಂದಿತ್ತು. ವೀನಸ್ ದೇವತೆಗೆ ಭಕ್ತರು ಹೂ–ಹಣ್ಣು, ಪ್ರಾಣಿಗಳನ್ನು ಅರ್ಪಿಸಬೇಕಿತ್ತು. ಅದಕ್ಕೆ ಪ್ರತಿಯಾಗಿ ಅವರಿಗೆ ಉಪ್ಪು, ಶಿಶ್ನ ಸಂಕೇತ ಕೊಡಲ್ಪಡುತ್ತಿತ್ತು. ವೇಶ್ಯೆಗೆ ಹಣ ಕೊಟ್ಟಂತೆ ವೀನಸ್ ದೇವರಿಗೆ ಹಣ ಕೊಡಬೇಕಾಗಿತ್ತು. ವೀನಸ್ ವೇಶ್ಯೆಯರ ಆರಾಧ್ಯ ದೇವತೆ".[೧೧]

ಹೀಗೆ ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಸಂಗತಿಗಳು ಬಡವರನು ಇನ್ನಷ್ಟು ಹಸಿವೆಯಿಂದ ಬಳಲುವಂತೆ ಮಾಡಿದೆ. ದೀನ-ದಲಿತರು, ಸ್ತ್ರೀಯರೂ ಕೂಡ ಈ ಮೇಲಿನ ಕಾರಣಗಳಿಂದ ನಲುಗುವಂತಾಗಿದೆ. ಬಡವರು ತಮ್ಮ ಹೊಟ್ಟೆ ತುಂಬಿಸಿಕೊಳ್ಳಲು ಕಳ್ಳತನ, ದರೋಡೆ, ಕೊಲೆ-ಸುಲಿಗೆಯಂತಹ ಸಮಾಜಬಾಹಿರ ದುಷ್ಕೃತ್ಯಗಳಲ್ಲಿ ತೊಡಗುವುದಕ್ಕೆ ಕಾರಣವಾದಂತೆ ಸ್ತ್ರೀಯರೂ ಕೂಡಾ ಸಮಾಜದ ಶೋಷಣೆಗೆ ಒಳಗಾಗಿ, ಬಡ ತಂದೆ-ತಾಯಿ-ಮಕ್ಕಳನ್ನು ಸಾಕುವ ಸಲುವಾಗಿ, ನಿರಾಧಾರದ ಕಾರಣದಿಂದಾಗಿ, ನಿರ್ಗತಿಕರಾಗಿ, ವೇಶ್ಯೆಯರಾಗಿ ಬಾಳು ನಡೆಸುವಂತಾದದ್ದು ದುರ್ದೈವವೇ ಸರಿ. ಬಡವರ-ಸ್ತ್ರೀಯರ ಉದ್ಧಾರವಾಗದ ಹೊರತು ದೇಶ ಅಭಿವೃದ್ಧಿಯನ್ನು ಕಾಣಲು ಸಾಧ್ಯವಿಲ್ಲ ಎಂಬ ಮಾತು ಬರೀ ಮಾತಾಗಿ ಉಳಿದಿದೆ.

೩.೪ ರಾಜಕೀಯ ಕಾರಣಗಳು

ಕನ್ನಡ ಸಾಹಿತ್ಯದಲ್ಲಿನ ಕಥೆ-ಕಾದಂಬರಿ ಕ್ಷೇತ್ರವನ್ನು ಗಮನಿಸುತ್ತಾ ಹೋದರೆ ಭಾರತೀಯ ವಾಸ್ತವ ಸಮಸ್ಯೆಯ ಪ್ರತಿಬಿಂಬವಾಗಿ ಮೂಡಿ ಬಂದುದು ಸತ್ಯ. ಅದರಲ್ಲೂ ದಲಿತ-ಬಂಡಾಯ ಲೇಖಕರು ಹೆಚ್ಚಾಗಿ ಮೈಗೂಡಿಸಿಕೊಂಡಿದ್ದರು. ಸ್ವಾತಂತ್ರ್ಯೋತ್ತರ ಭಾರತವನ್ನು ಕಾಡುತ್ತಿರುವ ಸಮಸ್ಯೆಗಳಲ್ಲಿ ಒಂದಾದ ಹಸಿವೆಯ ಸಮಸ್ಯೆಯ ಚಿತ್ರಣವನ್ನು ಪ್ರಧಾನವಾಗಿಟ್ಟುಕೊಂಡು ಅದರ ಪ್ರಯತ್ನದ ಜೊತೆಗೆ ಪ್ರಜ್ಞಾವಂತರನ್ನಾಗಿಸಲು ಪ್ರಯತ್ನಿಸುತ್ತಾರೆ.

ಹಸಿವಿನಂತಹ ಮೂಲಭೂತ ಸಮಸ್ಯೆಗೆ ಕಾರಣಗಳು ಹಲವು. ಹಸಿವಿನ ಸಮಸ್ಯೆಗೆ ಸಾಮಾಜಿಕ, ಆರ್ಥಿಕ, ಧಾರ್ಮಿಕ ಅಂತೆಯೇ ರಾಜಕೀಯ ಕಾರಣವೂ ಇದೆ. ಸುಮಾರು ಇನ್ನೂರು ವರ್ಷಗಳ ಕಾಲ ಬ್ರಿಟಿಷರ ಹಿಡಿತದಲ್ಲಿದ್ದ ನಮಗೆ ಅವರಿಂದ ಬಿಡುಗಡೆ ಪಡೆದ ಮೇಲೂ ಶೋಷಣೆ ಮಾತ್ರ ತಪ್ಪುತ್ತಿಲ್ಲ. ಶೋಷಕ ವರ್ಗ ಬದಲಾಯಿತೇ ಹೊರತು ಶೋಷಿತರು ಬದಲಾಗದಿರುವುದು ದುರಂತ.

ಕೆಲವೊಂದು ವರ್ಗಗಳು ಅನ್ಯ ವರ್ಗಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವ ಒಂದು ಅಗತ್ಯವನ್ನು ಮನಗಂಡಾಗಲೇ ಪ್ರಭುತ್ವವು ಅಸ್ತಿತ್ವಕ್ಕೆ ಬರಲು ಕಾರಣವಾಯಿತು. ವಿವಿಧ ವರ್ಗಗಳಲ್ಲಿನ ಸಂಘರ್ಷಣೆಯಿಂದಾಗಿ ಪ್ರಭುತ್ವವು ಆರ್ಥಿಕ ಪ್ರಾಬಲ್ಯವುಳ್ಳ ವರ್ಗದ ಸಾಧನ ಯಂತ್ರವಾಗಿ ಪರಿಣಮಿಸಿ, ಪ್ರಭುತ್ವದ ಸಹಕಾರದಿಂದ ಆ ವರ್ಗವು ರಾಜಕೀಯವಾಗಿ ಪ್ರಬಲ ಶಕ್ತಿಯಾಗಿ ಸಂಘಟಿಸಲ್ಪಟ್ಟು ಪೀಡಿತ ವರ್ಗಗಳನ್ನು ಹತ್ತಿಕ್ಕಲು ಮತ್ತು ಅವುಗಳನ್ನು ನಿರಂತರವಾಗಿ ಶೋಷಿಸಲು ಮತ್ತೆ ಸಾಧಕವಾಗಿ ಪರಿಣಮಿಸಿತು. ಸಮಾಜದಲ್ಲಿ ಮೊದಲು ವರ್ಗ ವಿಭಜನೆಯಾದಾಗ, ಆಳುವ ವರ್ಗಕ್ಕೆ ತನ್ನ ಹಿತಾಸಕ್ತಿಗಳನ್ನು ಸಂರಕ್ಷಿಸಿಕೊಂಡು ಬರಲು ಒಂದು ವಿಶೇಷ ಸಾಧನದ ಅಗತ್ಯ ಉಂಟಾಯಿತು. ಮೊತ್ತಮೊದಲು ಗುಲಾಮರನ್ನು ಹೊಂದಿದ್ದ ಸಾಮಾಜಿಕ ವ್ಯವಸ್ಥೆಯಲ್ಲಿ ದುಡಿಯುವ ಜನರನ್ನು ಪೀಡಿಸಿ ಮತ್ತು ಅಸಹಾಯಕರನ್ನು ಕಾಡಿಸಿ ಅವರ ಶೋಷಣೆಯನ್ನು ನಡೆಸಲು ಈ ಬಗೆಯ ಸಾಧನ ಯಂತ್ರವು ಅಸ್ತಿತ್ವದಲ್ಲಿ ಬಂತು. ಪಟೇಲ, ಗೌಡ, ಕುಲಕರ್ಣಿ ಇವರುಗಳ ರೂಪದಲ್ಲಿ ಸಮಾಜದಲ್ಲಿನ ವಿವಿಧ ಕಾರಣಗಳಿಂದ ಅಸಹಾಯಕತೆಯಲ್ಲಿರುವವರ ಲಾಭವನ್ನು ತೆಗೆದುಕೊಂಡು ಅದೆಷ್ಟೋ ಬಡವರು ಮತ್ತು ಹೆಣ್ಣು ಮಕ್ಕಳನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡ ಉದಾಹರಣೆಗಳನ್ನು ಕನ್ನಡದ ಕಥೆಗಳಲ್ಲಿ ಕಾಣಬಹುದು.

ಹಸಿವೆಯ ನೋವಿನಿಂದ ಕೊರಗುವ, ನರಳುವ ಬಡಜನತೆ ತಮ್ಮ ಅಸ್ತಿತ್ವವನ್ನು ಕಾಯ್ದುಕೊಳ್ಳಲು ಸಾಧ್ಯವಿಲ್ಲದೇ ಇದ್ದಾಗ ಪುರುಷರು ಮತ್ತು ಮಹಿಳೆಯರು ಹೀನ ವೃತ್ತಿಗಿಳಿಯುವುದು ಅನಿವಾರ್ಯವಾಗುತ್ತದೆ. ಇದರಲ್ಲಿ ರಾಜಕೀಯ ಕಾರಣ ಪ್ರಮುಖ ಪಾತ್ರ ವಹಿಸುತ್ತದೆ. ಪ್ರಭುತ್ವ ಮತ್ತು ಧರ್ಮ ಎರಡೂ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಅನ್ನಕ್ಕಾಗಿ, ಹಣಕ್ಕಾಗಿ, ದೈಹಿಕ ಕಾಮನೆಗಾಗಿ, ಸೇಡಿಗಾಗಿ, ಹೀಗೆ ಯಾವುದೋ ಒಂದು ಬಗೆಯ ಕಾರಣಕ್ಕೆ ಯಾರದೋ ಕೈಗೊಂಬೆಯಾಗಿ, ಯಾರದೋ ಋಣವನ್ನು ತೀರಿಸಲಿಕ್ಕಾಗಿ, ಮುಲಾಜಿಗಾಗಿ ಕಾಲಿಡುತ್ತಾರೆ. ಹೀಗೆ ರಾಜಕೀಯವೂ ಸಹ ದೇವರು–ಧರ್ಮದ ಹೆಸರಿನಲ್ಲಿ ಹಲವು ವರ್ಗಗಳನ್ನು ವಂಚಿಸುತ್ತಾ ಬಂದಿದೆ. ಬಡವರು ಸ್ವಾವಲಂಬಿಗಳಾಗಿ ದುಡಿದರೂ ಕೂಡಾ ಹೊಟ್ಟೆ ತುಂಬುತ್ತಿಲ್ಲ. ತಮ್ಮ ಬಡ ಹೊಟ್ಟೆಯನ್ನು ತುಂಬಿಸಿಕೊಳ್ಳುವುದಕ್ಕಾಗಿ ಅವರು ಪರಾವಲಂಬಿಯಾಗಿರುವುದು ಧಾರ್ಮಿಕ ವಿಧಿವಿಧಾನ ರೀತ್ಯಾ ಸ್ಥಾಪಿತವಾದುದು. ಇಂಥ ಸಮಾಜದ ಹೆಣ್ಣು–ಗಂಡು ಎಂಬ ಭೇದವಿಲ್ಲದೆ ಎಲ್ಲರೂ ಶಿಕ್ಷೆ ಅನುಭವಿಸಬೇಕಾಗುತ್ತದೆ. ಶಿಕ್ಷಣ ಎಂದರೆ ಅದೇ. ಆದ್ದರಿಂದಲೇ ರಾಜಕೀಯ ಯಾವಾಗಲೂ ಶಿಕ್ಷಣಕ್ಕೆ ತನ್ನ ಮುಖ್ಯ ಗಮನ ಕೊಡುತ್ತದೆ. ತನ್ನ ಉದ್ದೇಶಕ್ಕೆ ತಕ್ಕಂತೆ ವ್ಯಕ್ತಿಯ ವ್ಯಕ್ತಿತ್ವವನ್ನು ಪಳಗಿಸುವುದು ಶಿಕ್ಷಣ ಮತ್ತು ಧರ್ಮದ ದೊಡ್ಡ ಪಾಲಾಗಿದೆ. ಈ ಶಿಕ್ಷಣ ಮತ್ತು ಧರ್ಮವೆನ್ನುವುದು ಆರ್ಥಿಕ ಪಾಲಾಗಿದೆ.

ಈ ಶಿಕ್ಷಣ ಮತ್ತು ಧರ್ಮವೆನ್ನುವುದು ಆರ್ಥಿಕ ರಚನೆಗೆ ಸಂಬಂಧಿಸಿದ್ದು. ಆದರೆ ಮನುಷ್ಯನ ಪ್ರಜ್ಞೆಯಲ್ಲೇ ಮಿಳಿತಗೊಳ್ಳುವ ಭಾವಶಕ್ತಿ ಬಹಳ ಸಂಕೀರ್ಣವಾದುದು. ಪ್ರಾಚೀನ ಸಮಾಜವೇ ಇರಲಿ, ಊಳಿಗಮಾನ್ಯವಿರಲಿ, ಪ್ರಸ್ತುತ ಬಂಡವಾಳಶಾಹಿಯ ವ್ಯವಸ್ಥೆಯಿರಲಿ, ಬಡವರ ಮತ್ತು ಸ್ತ್ರೀಯರ ಮೇಲೆ ಶೋಷಣೆ ನಡೆಯುತ್ತಲೇ ಇದೆ. ಕಾರಣಗಳು ಸಾಮಾಜಿಕ, ಆರ್ಥಿಕ, ಧಾರ್ಮಿಕ, ರಾಜಕೀಯ ಎಂದು ಏನಾದರೂ ಇರಲಿ, ಸ್ವರೂಪ ಬೇರೆ ಬೇರೆ ಹೊರತು ತಿರುಳು ಒಂದೇ. ಆದರೂ ಇಂದಿನ ವೈಜ್ಞಾನಿಕ ಮನೋಭಾವದ ಹಿನ್ನೆಲೆಯಿಂದಾಗಿ ಬಿಡುಗಡೆಯ ದಾರಿಯನ್ನು ಬೇರೆ ಬೇರೆ ನೆಲೆಯಲ್ಲಿ ಹುಡುಕಬೇಕಾಗುತ್ತದೆ. ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಆರ್ಥಿಕ ಅಸಹಾಯಕತೆ ಬಹಳ. ಈ ಹಿನ್ನೆಲೆಯಲ್ಲಿ ದಾರಿಕಾಣದೆ ಬಡವರು, ದೀನ–ದಲಿತರು, ಹೆಣ್ಣುಮಕ್ಕಳು ತಮ್ಮ ತಮ್ಮ ಹೊಟ್ಟೆಯನ್ನು ಹೊರೆದುಕೊಳ್ಳಲು ಮುಂದಾಗುತ್ತಾರೆ.

೩.೫ ಪ್ರಾಕೃತಿಕ ಕಾರಣಗಳು

ಒಲೆ ಹತ್ತಿ ಉರಿದರೆ ನಿಲಬಹುದಲ್ಲದೆ
ಧರೆ ಹತ್ತಿ ಉರಿದೆಡೆ ನಿಲಬಹುದೇ?

ಎಂದಿರುವ ಬಸವಣ್ಣ ಮಾನವ ನಿರ್ಮಿತ ಸಮಸ್ಯೆಗಳಿಂದ ಹೇಗಾದರೂ ಪಾರಾಗಬಹುದು. ಅಂದರೆ ಬಡವರು ಹಸಿವೆಯಿಂದ ಬಳಲುವುದಕ್ಕೆ ಸಾಮಾಜಿಕ, ಆರ್ಥಿಕ, ಧಾರ್ಮಿಕ, ರಾಜಕೀಯ ಕಾರಣಗಳೂ ಮುಖ್ಯವಾಗುವುದು ಒಂದು ಕಡೆಯಾದರೆ, ಪ್ರಾಕೃತಿಕ ವಿಕೋಪಗಳಿಂದಲೂ ಬಡಜನತೆ, ನಿರ್ಗತಿಕರು, ಅಸಹಾಯಕ ಹೆಣ್ಣು ಮಕ್ಕಳು ಅನುಭವಿಸುವ ನರಕದ ಸ್ಥಿತಿಯನ್ನು ಹೇಳಲು ಸಾಧ್ಯವಿಲ್ಲ.

ಇವರೆಲ್ಲಾ ಮೇಲ್ಜಾತಿಯವರ, ಮೇಲ್ವರ್ಗದವರ, ಪುರೋಹಿತಶಾಹಿಗಳ, ಬಂಡವಾಳಶಾಹಿಗಳು ನಿರ್ಮಿಸಿದ ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ರಾಜಕೀಯ ಕಾರಣಗಳಿಂದ ಬವಣೆಗೊಳಪಟ್ಟರೂ ಹೇಗೂ ಕಷ್ಟ ಪಟ್ಟಾದರೂ ಅಲ್ಪಸ್ವಲ್ಪ ಬೇಡಿಯಾದರೂ, ಕಿತ್ತುಕೊಂಡಾದರೂ, ದುಡಿದಾದರೂ, ಮೈಮಾರಿಕೊಂಡಾದರೂ, ಬೆವರು ಹರಿಸಿಯಾದರೂ ಹೊಟ್ಟೆ ತುಂಬಿಸಿಕೊಳ್ಳುವ ಪ್ರಯತ್ನ ಮಾಡಿಯಾರು. ಆದರೆ ಈ ಎಲ್ಲಾ ಕಾರಣಗಳಿಗಿಂತ ಭಯಂಕರವಾದ, ಸಹಿಸಿಕೊಳ್ಳಲು ಅಸಾಧ್ಯವಾದ ಅಂಶವೆಂದರೆ, ಪ್ರಾಕೃತಿಕ ಕಾರಣ, ಪ್ರಕೃತಿ ವಿಕೋಪಗಳಾದ ಬರಗಾಲ, ಅತಿವೃಷ್ಟಿ, ಅನಾವೃಷ್ಟಿ, ಭೂಕಂಪ, ಸುನಾಮಿ, ಪ್ರವಾಹ, ಮಾರಕ ರೋಗಗಳ ಹರಡುವಿಕೆಗಳಿಂದ ದೀನ-ದಲಿತರು, ಬಡವರು ಮತ್ತಷ್ಟು ಕುಗ್ಗಿ ಹೋಗುತ್ತಾರೆ.

ಬರಗಾಲದಿಂದ ಉಳ್ಳವರೇ ಕಂಗಾಲಾಗುತ್ತಾರೆಂದ ಮೇಲೆ ಬಡವರ ಗತಿಯೇನು? ಹಸಿದ ಹೊಟ್ಟೆಗೆ ಅನ್ನವ ನೀಡುವವರು ಯಾರು? ಅನಾವೃಷ್ಟಿಯಿಂದ ಬರಗಾಲ ಬಂದರೆ ಅತಿವೃಷ್ಟಿಯಿಂದ ಬೆಳೆದ ಬೆಳೆ ಕೈಗೆ ಬರದೆ, ಅನ್ನದಾತ ರೈತನೂ ಹಸಿವಿನಿಂದ ನರಳಬೇಕಾಗುತ್ತದೆ. ರೈತನದು ಈ ಪಾಡಾದರೆ ಬಡವರು ಹಸಿವೆಯಿಂದ ಪಾರಾಗುವುದು ಕಷ್ಟವೇ ಸರಿ. ಅಸಹಾಯಕ, ನಿರ್ಧಾರದ, ನಿರ್ಗತಿಕ ಹೆಣ್ಣುಗಳು ದೇಹ ಮಾರುವ ಮೂಲಕ ತಮ್ಮ ಬಡ ಹೊಟ್ಟೆಯನ್ನು ತುಂಬಿಸಿಕೊಳ್ಳಲು ಅನಿವಾರ್ಯವಾಗಿ ವೇಶ್ಯೆಯರಾಗಬೇಕಾಗುತ್ತದೆ. ಪ್ರಕೃತಿ ವಿಕೋಪಗಳಿಂದ ಕಿತ್ತು ತಿನ್ನುವ ಕೊಲೆ, ಸುಲಿಗೆ, ದರೋಡೆಗಳು ಹೆಚ್ಚಾಗಿ ಸ್ವಾರ್ಥ ಮನೆ ಮಾಡುತ್ತದೆ. ಉಳ್ಳವರು ಆಹಾರಧಾನ್ಯಗಳನ್ನು ಹಣದಾಸೆಗೆ ಸಂಗ್ರಹಿಸಿಟ್ಟುಕೊಂಡು ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಾರೆ. ಹಣ ಕೊಟ್ಟು ಕೊಂಡುಕೊಳ್ಳಲು ಸಾಧ್ಯವಾಗದ ಬಡಜನತೆ ಹಸಿವೆಯಿಂದಲೇ ಸಾಯಬೇಕಾಗುತ್ತದೆ.

ಪ್ರತಿಯೊಬ್ಬ ಮನುಷ್ಯನ ಮೂಲಭೂತ ಅವಶ್ಯಕತೆಗಳೆಂದರೆ ಅನ್ನ, ವಸ್ತ್ರ, ವಸತಿ, ನಂತರ ಉಳಿದವು. ಆದರೆ ಸಮಾಜದಲ್ಲಿನ ಉಳ್ಳವರು ಮತ್ತು ಉಳ್ಳದವರು, ಮೇಲ್ಜಾತಿ-ಕೆಳಜಾತಿ ಎಂಬ ಸಾಮಾಜಿಕ ಅಂತರದಿಂದಾಗಿ , ಉಳ್ಳವರು, ಮೇಲ್ಜಾತಿಯವರು ಸ್ವಾರ್ಥಿಗಳಾಗಿ, ದುರಾಸೆಯುಳ್ಳವರಾಗಿ ಉಳ್ಳದವರನ್ನು ಮತ್ತು ಕೆಳ ಜಾತಿಯವರನ್ನು ಶೋಷಣೆ ಮಾಡುತ್ತಾರೆ. ಮೇಲ್ಜಾತಿಯವರ-ಉಳ್ಳವರ ದೌರ್ಜನ್ಯ, ದಬ್ಬಾಳಿಕೆ, ತುಳಿತಕ್ಕೆ, ಶೋಷಣೆಗೆ ತಳ ಸಮುದಾಯ, ಶ್ರಮಿಕ ವರ್ಗ ತತ್ತರಿಸಿ ಹೋಗುತ್ತಿದೆ.

ಬಡತನದ ಕಾರಣದಿಂದ, ಹೊಟ್ಟೆಗೆ ಹಿಟ್ಟಿಲ್ಲವೆಂದು ಬೇಡಲು ಬಂದವರನ್ನು ಶ್ರೀಮಂತವರ್ಗದವರು ಮತ್ತಷ್ಟು ಕುಗ್ಗಿಸಿ ಅಟ್ಟಹಾಸದಿಂದ ಮೆರೆದಾಡುತ್ತಾರೆ. ಬಡವರನ್ನು ತಮ್ಮ ಶಾಶ್ವತ ಸೇವಕರನ್ನಾಗಿ ಮಾಡಿಕೊಂಡು ಅವರನ್ನು ಹಂತಹಂತವಾಗಿ ತುಳಿಯುತ್ತಲೇ ಇರುತ್ತಾರೆ. ಅವರೆಂದೂ ಪ್ರಶ್ನೆ ಕೇಳದಂತೆ, ಮಾತನಾಡದಂತೆ, ಪ್ರತಿಭಟಿಸದಂತೆ, ಶಿಕ್ಷಣ ಪಡೆಯದಂತೆ ಅವರ ಉದ್ಧಾರಕ್ಕೆ ಮಾರಕವಾಗುವಂತಹ ಅಡ್ಡಗೋಡೆಯನ್ನು ನಿರ್ಮಿಸಿ ಬಿಡುತ್ತಾರೆ. ಸಾಮಾಜಿಕ, ಆರ್ಥಿಕ, ಧಾರ್ಮಿಕ, ರಾಜಕೀಯ ಕಾರಣಗಳನ್ನು ನೀಡಿ ಶ್ರಮಿಕವರ್ಗವನ್ನು ಮತ್ತಷ್ಟು ಶೋಷಣೆಗೆ ಒಳಗು ಮಾಡುತ್ತಾರೆ.

ಬಡ ಪುರುಷವರ್ಗದ ಸ್ಥಿತಿ ಹೀಗಾದರೆ ಬಡ ಹೆಣ್ಣುಮಕ್ಕಳ ಪರಿಸ್ಥಿತಿ ತುಂಬಾ ಶೋಚನೀಯವಾಗಿರುತ್ತದೆ. ಬಡತನದಿಂದ ಬೇಸತ್ತು ಹಾಳುಹೊಟ್ಟೆಯನ್ನು ದುಡಿದಾದರೂ ತುಂಬಿಸಿಕೊಳ್ಳೋಣವೆಂದು ಪಣತೊಟ್ಟ, ದಿಟ್ಟ ಹೆಣ್ಣುಮಕ್ಕಳನ್ನು ತಮ್ಮ ಕಾಮತೃಷೆಗೆ

ಬಳಸಿಕೊಂಡು, ಕೊನೆಗೆ ಅವರಿಗೆ ವೇಶ್ಯೆಯರೆಂಬ ಪಟ್ಟ ಕಟ್ಟಿ, ತಾವು ಸಜ್ಜನರೆಂದು ನಗರದ ತುಂಬಾ ಓಡಾಡುವ ಇವರ ಸ್ವಾತಂತ್ರ್ಯ ಹೆಣ್ಣುಮಕ್ಕಳಿಗೆ ಸಿಗುವುದಿಲ್ಲ. ಬಡವರ ಬಳಿ ಇರುವುದೆಲ್ಲ ತಮಗೆ ಸೇರಿದ್ದು, ಬಡವರ ಶಕ್ತಿ, ಬಡ ಹೆಣ್ಣುಮಕ್ಕಳ ಸೌಂದರ್ಯ ತಮ್ಮ ಸುಖ ಸಂತೋಷಕ್ಕಾಗಿಯೇ ಇರುವುದೆಂದು ಭಾವಿಸಿ ಸಂದರ್ಭ ಸಿಕ್ಕಾಗಲೆಲ್ಲಾ ಅವರ ಮೇಲೆ ಆಕ್ರಮಣ ಮಾಡುತ್ತಾರೆ. ಇವುಗಳ ಜೊತೆಗೆ ಪ್ರಕೃತಿ ವಿಕೋಪಗಳು ಬಡ, ದೀನ-ದಲಿತ, ಶ್ರಮಿಕ ವರ್ಗವನ್ನು, ಹೆಣ್ಣುಗಳನ್ನು ದಿಗ್ಭ್ರಾಂತರನ್ನಾಗಿ ಮಾಡುತ್ತದೆ. ಬಡವರು ಬದುಕಿರುವವರೆಗೂ ಜೀತದಾಳುಗಳಾಗಿ ದುಡಿದು ನಲಿವನ್ನು ನೋವಿನಲ್ಲೇ ಕಳೆಯುವಂತಾಗುತ್ತದೆ.

ಗೋಪಾಲಕೃಷ್ಣ ಅಡಿಗರು ತಮ್ಮ 'ಬತ್ತಲಾರದ ಗಂಗೆ' ಎಂಬ ಕವನದಲ್ಲಿ ಹೇಳಿರುವಂತೆ,

ಕುರುಕ್ಷೇತ್ರ ಚಾಚುತ್ತಲಿದೆ ದೇಶದುದ್ದಕ್ಕೂ; ಪಾತ್ರಗಳೇನೂ
ಅವೇ; ಪಾತ್ರಧಾರಿಗಳು ಬೇರೆ ಬೇರೆ;
ದುರ್ಯೋಧನನಿಗೆ ಯುಧಿಷ್ಠಿರ ವೇಷ, ಶಕುನಿಯು
ಶ್ರೀಕೃಷ್ಣ; ಪಾರ್ಥನ ವೇಷ ಉತ್ತರನಿಗೆ"[೨]

ಈ ಸಮಾಜದಲ್ಲಿ ಪ್ರತಿಷ್ಠಿತರು ಎನಿಸಿಕೊಂಡವರು ಬಾಹ್ಯವಾಗಿ ಮಾತ್ರ ಪ್ರತಿಷ್ಠಿತರೆನಿಸಿಕೊಂಡಿದ್ದಾರೆ. ದುರ್ಯೋಧನನ ಮನಸ್ಸು ಆದರೆ ಧರ್ಮರಾಯನ ಮುಖವಾಡ, ಉತ್ತರನ ಮನಸ್ಸು, ಅರ್ಜುನನ ಮುಖವಾಡ, ಶಕುನಿಯ ಮನಸ್ಸು, ಶ್ರೀಕೃಷ್ಣನ ಮುಖವಾಡ ಎಂದು ಮಾರ್ಮಿಕವಾಗಿ ನುಡಿದಿದ್ದಾರೆ.

ಸಮಾಜದಲ್ಲಿ ವರ್ಗ, ವರ್ಣ, ಜಾತಿ, ಲಿಂಗ ತಾರತಮ್ಯವಿರುವವರೆಗೂ ಆರೋಗ್ಯವಂತ ಸದೃಢ ಸಮಾಜ ನಿರ್ಮಾಣ ಅಸಾಧ್ಯ. ಅಸಮಾನತೆ ತೊಲಗಿ ಸಮಾನತೆಯ ಸಮಾಜ ನಿರ್ಮಾಣಕ್ಕೆ ಕರೆ ನೀಡುವ ಪಟ್ಟಭದ್ರ ಹಿತಾಸಕ್ತಿಗಳು ಬಾಹ್ಯವಾಗಿ ಈ ರೀತಿ ಕರೆ ನೀಡುವರು, ಆದರೆ ಆಂತರ್ಯದಲ್ಲಿ ಈ ಅಸಮಾನತೆಯನ್ನೇ ಗಟ್ಟಿಗೊಳಿಸುತ್ತಾ ಹೋಗುತ್ತಾರೆ.

ಹಸಿವಿನ ಸಮಸ್ಯೆಗೆ ಕಾರಣವಾಗುವಂತಹ ಬಡತನ, ಅಜ್ಞಾನ, ಅನಕ್ಷರತೆ, ಆಲಸ್ಯ, ನಿರ್ಗತಿಕತನ, ನಿರಾಧಾರ, ನಿಶ್ಶಕ್ತಿ, ಅಂಗವೈಕಲ್ಯ, ನಿರುದ್ಯೋಗ, ಅತಿ ಜನಸಂಖ್ಯೆ, ತಿಳುವಳಿಕೆಯ ಕೊರತೆ, ಮೂಢನಂಬಕೆ, ಧಾರ್ಮಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಕಾರಣಗಳನ್ನು ಬೇರುಸಹಿತ ಕಿತ್ತು ಹಾಕಿ ಹಸಿದ ಹೊಟ್ಟೆ ತೃಪ್ತಿಯಾಗುವಂತೆ ಮಾಡಬೇಕಾದ ಅಧಿಕಾರಶಾಹಿಗಳು, ರಾಜಕಾರಣಿಗಳು, ಬಂಡವಾಳಶಾಹಿಗಳು, ಪುರೋಹಿತಶಾಹಿಗಳು, ಧನಿಕರು ಸ್ವಾರ್ಥದ ಕಾರಣದಿಂದ ಲೋಕದ ಚಿಂತೆ ತಮಗೇಕೆಂದು ಸಮಸ್ಯೆಯನ್ನು ಕಂಡೂ ಕೂಡಾ ಕಾಣದಂತೆ ಜಾಣಕುರುಡರಾಗಿ ವರ್ತಿಸುತ್ತಿದ್ದಾರೆ. ಸಮಸ್ಯೆಯನ್ನು ನಿವಾರಿಸುವುದಿರಲಿ, ಸಮಸ್ಯೆಯ ಹೆಚ್ಚಳಕ್ಕೆ ನೆರವಾಗಿ, ಬೆಂಬಲ ನೀಡಿ, ಹಸಿದವರು ಮತ್ತಷ್ಟು ಹಸಿವೆಯಿಂದ ನರಳಿ ಒದ್ದಾಡುವುದನ್ನು ಕಂಡು ಖುಷಿಪಡುತ್ತಾರೆ. ಬಹಿರಂಗದಲ್ಲಿ ಕರುಣೆ ವ್ಯಕ್ತಪಡಿಸಿ ಅಂತರಂಗದಲ್ಲಿ ದ್ವೇಷವನ್ನೇ ಬೆಳೆಸಿಕೊಳ್ಳುತ್ತಿದ್ದಾರೆ.

ಹಸಿವಿನ ಸಮಸ್ಯೆಗೆ ಇತರೆ ಕಾರಣಗಳು

ಭಾರತದಲ್ಲಿ ಬಡತನ ಸಾಮಾನ್ಯ ಸಂಗತಿ. ವ್ಯಕ್ತಿಗತ ಅಸಮರ್ಥತೆಯಿಂದ ದೇಶದ ರಾಜಕೀಯ ದುರಸ್ಥಿಯವರೆಗೆ ಹಲವಾರು ಅಂಶಗಳು ಬಡತನದ ಸಮಸ್ಯೆಗೆ ಪ್ರಚೋದನೆ ನೀಡುತ್ತವೆ. ಆದುದರಿಂದ ಬಡತನ ಇಂದು ದೊಡ್ಡ ಸವಾಲಾಗಿ ಬೆಳೆದಿದೆ. ಆಹಾರ ಉತ್ಪಾದನೆಯ ಏರಿಕೆಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಜನಸಂಖ್ಯೆಯು ಏರುತ್ತಾ ಹೋಗುವುದರಿಂದ ಹಸಿವು ಮತ್ತು ಬಡತನ ಅನಿವಾರ್ಯವಾಗಿ ಹುಟ್ಟಿಕೊಂಡಿದೆ.

ಭೂಮಾಲಿಕರು ಮತ್ತು ಬಂಡವಾಳಶಾಹಿಗಳು ಕೂಲಿಕಾರರನ್ನು ಮತ್ತು ಕಾರ್ಮಿಕರನ್ನು ಶೋಷಣೆ ಮಾಡಿದ್ದರಿಂದಲೇ ಹಸಿವು ಮತ್ತು ಬಡತನ ಬೇರೂರಲು ಕಾರಣವಾಯಿತೆಂದು ಕಾರ್ಲ್ ಮಾರ್ಕ್ಸ್ ಮತ್ತು ಎಂಗೆಲ್ಸ್ ಅಭಿಪ್ರಾಯಪಟ್ಟಿದ್ದಾರೆ. ಇದರಿಂದಾಗಿ ಹಸಿವಿನ ಸಮಸ್ಯೆ ಉಲ್ಬಣಿಸಿದೆ.

ಪ್ರಮುಖ ಕಾರಣಗಳು

ವೈಯಕ್ತಿಕ ಅಸಮರ್ಥತೆ, ಜನಸಂಖ್ಯೆಯ ತೀವ್ರ ಏರಿಕೆ.

ಆರ್ಥಿಕ ಕಾರಣಗಳು: ಅಸಮರ್ಪಕವಾದ ಆರ್ಥಿಕ ಬೆಳವಣಿಗೆ, ಬಂಡವಾಳದ ಕೊರತೆ, ಹೆಚ್ಚುತ್ತಿರುವ ನಿರುದ್ಯೋಗ, ಕೃಷಿಯ ಅತೀ ಅವಲಂಬನೆ, ಪ್ರಾದೇಶಿಕ ಅಸಮಾನತೆ, ಪೂರ್ಣ ಫಲ ನೀಡದ ಪಂಚವಾರ್ಷಿಕ ಯೋಜನೆಗಳು, ಹಣದುಬ್ಬರ, ಅಸಮರ್ಪಕ ವಿತರಣಾ ವ್ಯವಸ್ಥೆ.

ಸಾಮಾಜಿಕ ಕಾರಣಗಳು: ಅಜ್ಞಾನ ಮತ್ತು ಅನಕ್ಷರತೆ, ಭಾರತದ ಜಾತಿ ವ್ಯವಸ್ಥೆ, ಸಾಂಪ್ರದಾಯಿಕತೆ, ಅವಿಭಕ್ತ ಕುಟುಂಬಗಳ ಪ್ರಾಬಲ್ಯ.

ಬಡತನದ ಪ್ರಮುಖ ಕಾರಣದಿಂದ ಹಸಿವಿನ ಸಮಸ್ಯೆ ನಮ್ಮ ದೇಶದಲ್ಲಿ ತಲೆದೋರಿದೆ. ಹಸಿವಿನ ಸಮಸ್ಯೆಗೆ ಹಲವು ಕಾರಣಗಳಿದ್ದರು, ಪ್ರಮುಖವಾದದ್ದು ಬಡತನವೇ. ವೈಯಕ್ತಿಕ, ಸಾಮಾಜಿಕ, ಆಡಳಿತದ ಕಾರಣಗಳಿಂದ ಆರ್ಥಿಕ ಸ್ಥಿತಿ ಹದಗೆಡುವುದು ಬಡತನಕ್ಕೆ ಮೂಲ. ಮನುಷ್ಯನ ಮೂಲಭೂತ ಅಗತ್ಯಗಳಾದ ಅನ್ನ, ಬಟ್ಟೆ, ವಸತಿ ಇವುಗಳನ್ನು ಪೂರೈಸಿಕೊಳ್ಳಲಾಗದ ಅನಿವಾರ್ಯ ಸ್ಥಿತಿಯೇ ಬಡತನ. ಇವು ಕಾಲ, ದೇಶ, ಪರಿಸರಕ್ಕೆ ತಕ್ಕಂತೆ ಬದಲಾಗುತ್ತಾ ಹೋಗುವುದರಿಂದ ಬಡತನವೆಂಬುದು ಮೇಲ್ನೋಟಕ್ಕೆ ಸರಳವೆಂಬಂತೆ ಕಂಡರೂ ಅದು ಸಂಕೀರ್ಣ ಸಮಸ್ಯೆಯಾಗಿದೆ.

ಧನವಿಲ್ಲದವರು, ನಿರಾಶ್ರಿತ, ಸೊರಗಿದ ಇತ್ಯಾದಿ ಅರ್ಥ ಹೊಂದಿರುವ 'ಬಡ'ತನವೆಂಬುದು ಬರಿದಲ್ಲ (ಶೂನ್ಯವಲ್ಲ). ಆದರೆ ಶೂನ್ಯಕ್ಕೆ ಹತ್ತಿರವಾದ ಮಾನವನ ಹೀನ (ದೀನ) ಸ್ಥಿತಿ. ಭ್ರಷ್ಟಾಚಾರ, ನಿರುದ್ಯೋಗ, ಬೆಲೆಯೇರಿಕೆ, ಆರ್ಥಿಕ ಶೋಷಣೆ ಮುಂತಾದವು ಬಡತನದ ಸಮಸ್ಯೆಯನ್ನು ಹೆಚ್ಚಿಸಿರುವುದರಿಂದ ಹಸಿವಿನ ಸಮಸ್ಯೆ ಗಂಭೀರವಾದ ಸ್ವರೂಪವನ್ನು ಹೊಂದಿದೆ. ಬಡತನವನ್ನು ಒಂದು ಸಾಂಸ್ಕೃತಿಕ ಚೌಕಟ್ಟಿನಲ್ಲಿ ಒಂದು ನಿರ್ದಿಷ್ಟ ಕಾಲಘಟ್ಟದಲ್ಲಿ

ಜೀವಿಸುವ ಜನರ ಜೀವನದ ಗುಣಮಟ್ಟ ಮತ್ತು ಅಲ್ಲಿಯ ಸಂಪನ್ಮೂಲಗಳ ದೊರೆಯುವಿಕೆ ಮತ್ತದರ ಬಳಕೆಯ ಆಧಾರದ ಮೇಲೆ ಅರ್ಥೈಸುವುದು ಸರಿ ಕಾಣುತ್ತದೆ.

ಭಾರತದ ಮೇಲುಸ್ತರದ ಮಧ್ಯಮ ವರ್ಗದಲ್ಲಿರುವವರು ಅಮೇರಿಕಾದ ವರ್ಗ ವ್ಯವಸ್ಥೆಯಲ್ಲಿ ಕೆಳಗಿನ ಸ್ತರದವರಿಗೆ ಸಮನಾಗಿರಬಹುದು. ಭಾರತದಲ್ಲಿ ಕೆಳವರ್ಗಕ್ಕೆ ಸೇರಿದವರೆಂದು ಪರಿಗಣಿಸಲ್ಪಟ್ಟವರು ಇಂಗ್ಲೆಂಡ್‌ನ ಸನ್ನಿವೇಶದಲ್ಲಿ ದಟ್ಟದರಿದ್ರರ ಮಟ್ಟಕ್ಕೆ ಸಮನಾಗಿರಬಹುದು. ಭಾರತದ ಮಧ್ಯಮವರ್ಗದ ಜನರು ಆಫ್ರಿಕನ್ ದೇಶಗಳ ಸನ್ನಿವೇಶದಲ್ಲಿ ಅತ್ಯಂತ ಸಿರಿವಂತ ಜನರೇ ಆಗಿರಬಹುದು. "ಹಾಗೆಯೇ ಗುಪ್ತರ ಆಳ್ವಿಕೆಯ ಕಾಲದ ಅಥವಾ ವಿಜಯನಗರ ಸಾಮ್ರಾಜ್ಯ ಕಾಲದ ಸಾಮಾನ್ಯರ ಜನರ ಸ್ಥಿತಿಗತಿಗೆ ಹೋಲಿಸಿದರೆ ೧೯೯೦ರ ಭಾರತದ ಸಾಮಾನ್ಯ ಜನರ ಸ್ಥಿತಿಗತಿ ಬಹಳ ಕೀಳುಮಟ್ಟದ್ದಾಗಿತ್ತೆಂದು" ಚ. ನ. ಶಂಕರ್ ರಾವ್ ತಮ್ಮ 'ಭಾರತದ ಸಾಮಾಜಿಕ ಸಮಸ್ಯೆ' ಎಂಬ ಕೃತಿಯಲ್ಲಿ ತಿಳಿಸಿ ಮೇಲಿನ ಮಾತುಗಳು ಐತಿಹಾಸಿಕ ನಂಬಿಕೆಯಿಂದ ಮೂಡಿ ಬಂದಿವೆ ಹೊರತು ಸ್ಪಷ್ಟ ಆಧಾರಗಳ ಹಿನ್ನೆಲೆಯಿಂದಲ್ಲ, ಇತಿಹಾಸ ಮರುಸೃಷ್ಟಿಯಾಗಬಹುದೆಂದು ಅಭಿಪ್ರಾಯಪಟ್ಟಿದ್ದಾರೆ.

ಆಡಂ ಸ್ಮಿತ್ ಒಂದು ಕಡೆ, "ವ್ಯಕ್ತಿಯೋರ್ವನು ತನ್ನ ಜೀವನದಲ್ಲಿ ಪಡೆದು ಅನುಭವಿಸುತ್ತಿರುವ ಅವಶ್ಯಕ ಆಹಾರಧಾನ್ಯಗಳು, ವಸ್ತುಗಳು, ಸೌಲಭ್ಯಗಳೂ ಮತ್ತು ಮನೋರಂಜನೆಗೆ ಸಂಬಂಧಿಸಿದ ಸಾಧನಗಳ ಆಧಾರದ ಮೇಲೆ ಆತನು ಶ್ರೀಮಂತನೇ ಅಥವಾ ಬಡವನೇ ಎಂದು ನಿರ್ಧರಿಸಬಹುದು" ಎಂದು ತಿಳಿಸಿದ್ದಾರೆ.

ಗಿಲಿನ್ ಮತ್ತು ಗಿಲಿನ್, "ಅತ್ಯಲ್ಪ ವರಮಾನದಿಂದ ಅಥವಾ ವಿವೇಚನಾರಹಿತವಾದ ವೆಚ್ಚದಿಂದ ವ್ಯಕ್ತಿಯು ತಾನು ಸದಸ್ಯನಾಗಿರುವ ಸಮಾಜದಲ್ಲಿ ತನ್ನ ಮತ್ತು ತನ್ನನ್ನು ಅವಲಂಬಿಸಿದವರ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯವನ್ನು ಕಾಪಾಡಿಕೊಳ್ಳಲಾಗದ ಜೀವನಮಟ್ಟವನ್ನು ಬಡತನವೆಂದು ಕರೆಯಬಹುದು" ಎಂದು ಅಭಿಪ್ರಾಯಪಟ್ಟಿದ್ದಾರೆ.

ಗ್ರಾಮೀಣ ಪ್ರದೇಶದಲ್ಲಿ ವಾರ್ಷಿಕ ರೂ. ೧೮೦ ಮತ್ತು ನಗರಪ್ರದೇಶಗಳಲ್ಲಿ ವಾರ್ಷಿಕ ರೂ. ೨೭೦ ಕ್ಕಿಂತಲೂ ಕಡಿಮೆ ವೆಚ್ಚ ಮಾಡುವವರು ಬಡತನ ರೇಖೆಗಿಂತಲೂ ಕೆಳಗಿರುವವರೆಂದು ದಾಂಡೇಕರ್ ಮತ್ತು ರಾಥೆ ಅಭಿಪ್ರಾಯಪಟ್ಟಿದ್ದಾರೆ. ಇವರ ಪ್ರಕಾರ ೧೯೬೦-೬೧ರಲ್ಲಿ ಗ್ರಾಮೀಣ ಪ್ರದೇಶದಲ್ಲಿ ಶೇಕಡಾ ೪೦ರಷ್ಟು ಹಾಗೂ ನಗರ ಪ್ರದೇಶಗಳಲ್ಲಿ ಶೇಕಡಾ ೫೦ರಷ್ಟು ಜನರು ಬಡತನದ ರೇಖೆಗಿಂತಲೂ ಕೆಳಗಿನವರಾಗಿದ್ದರು.

'೧೯೬೦-೬೧ರ ಪ್ರಕಾರ ತಿಂಗಳಿಗೆ ಗ್ರಾಮೀಣ ಪ್ರದೇಶದಲ್ಲಿ ರೂ. ೧೬ ಮತ್ತು ನಗರ ಪ್ರದೇಶಗಳಲ್ಲಿ ರೂ. ೧೯ಕ್ಕಿಂತಲೂ ಕಡಿಮೆ ಹಣವನ್ನು ಅನುಭೋಗದ ಮೇಲೆ ಖರ್ಚು ಮಾಡುವವರು ಬಡಜನರು' ಎಂದು ಬರ್ಧಾನ್ ಅಭಿಪ್ರಾಯಪಟ್ಟಿದ್ದಾರೆ. ಇವರ ಪ್ರಕಾರ ೧೯೬೮-೬೯ರಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಶೇಕಡಾ ೫೫ ಮತ್ತು ನಗರ ಪ್ರದೇಶಗಳಲ್ಲಿ ಶೇಕಡಾ ೪೧ರಷ್ಟು ಜನರು ಬಡತನ ರೇಖೆಗಿಂತಲೂ ಕೆಳಗಿದ್ದರು (ಎಚ್ಚಾರ್ಕೆ, ಭಾರತದ ಆರ್ಥಿಕ ವ್ಯವಸ್ಥೆ).

೧೯೬೦-೬೧ರ ಬೆಲೆಯಲ್ಲಿ ಮಾಸಿಕ ರೂ. ೧೫ನ್ನು ಅನುಭೋಗ ವೆಚ್ಚವೆಂದು ಪರಿಗಣಿಸಿದರೆ, ೧೯೫೬-೫೭ರಲ್ಲಿ ಶೇಕಡಾ ೫೪.೧, ೧೯೬೦-೬೧ರಲ್ಲಿ ಶೇಕಡಾ ೩೮.೯ರಷ್ಟು, ೧೯೬೬-೬೭ರಲ್ಲಿ ಶೇಕಡಾ ೫೬.೫ ರಷ್ಟು ಮತ್ತು ೧೯೭೩-೭೪ರಲ್ಲಿ ಶೇಕಡಾ ೪೬.೧ರಷ್ಟು ಗ್ರಾಮೀಣ ಜನರು ಬಡತನದ ರೇಖೆಗಿಂತಲೂ ಕೆಳಗಿದ್ದರೆಂದು ಮೊಂಟೇಕ್ ಸಿಂಗ್ ಅಹ್ಲುವಾಲಿಯಾ ಅಭಿಪ್ರಾಯಪಟ್ಟಿದ್ದಾರೆ.

ಗ್ರಾಮೀಣ ಪ್ರದೇಶಗಳಲ್ಲಿ ಪ್ರತಿದಿನ ೨೪೦೦ ಕ್ಯಾಲೊರಿ ಮತ್ತು ನಗರ ಪ್ರದೇಶಗಳಲ್ಲಿ ೨೧೦೦ ಕ್ಯಾಲೊರಿ ಆಹಾರಕ್ಕಿಂತ ಕಡಿಮೆ ಆಹಾರ ಸೇವಿಸುತ್ತಿರುವವರು ಬಡವರು (ಭಾರತದ ಯೋಜನಾ ಆಯೋಗ).

ಒಟ್ಟಾರೆಯಾಗಿ ಮೂಲಭೂತ ಸಮಸ್ಯೆಗಳನ್ನು (ಆಹಾರ, ವಸ್ತ್ರ, ವಸತಿ) ನಿವಾರಿಸಿಕೊಳ್ಳಲಾಗದ ಸ್ಥಿತಿಯೇ ಬಡತನ. ಮಾನವನು ಬದುಕಲು ಬೇಕೇ ಬೇಕಾದ ಕನಿಷ್ಠ ಪೌಷ್ಟಿಕಾಂಶಗಳನ್ನು ಪಡೆಯಲು ಬೇಕಾದ ಆಹಾರವನ್ನು ಸೇವಿಸಲು ಸಾಧ್ಯವಾಗದ ಪರಿಸ್ಥಿತಿಗೆ ಬಡತನ ರೇಖೆ ಎಂದು ಹೇಳಲಾಗಿದೆ. ಜನರ ಜೀವನಮಟ್ಟ, ದೈನಂದಿನ ಜೀವನದ ಅಗತ್ಯಗಳು, ಮೂಲಭೂತ ವಸ್ತುಗಳು ಮತ್ತು ಸೌಲಭ್ಯಗಳು ಮುಂತಾದ ಅಂಶಗಳು ಸಂಸ್ಕೃತಿಯಿಂದ ಸಂಸ್ಕೃತಿಗೆ ಭಿನ್ನವಾಗಿರುತ್ತವೆ. ಈ ಅಂಶಗಳು ಅಭಿವೃದ್ಧಿ ಹೊಂದಿದ, ಅಭಿವೃದ್ಧಿ ಹೊಂದುತ್ತಿರುವ ಮತ್ತು ಹಿಂದುಳಿದ, ಹಾಗೆಯೇ ಆಧುನಿಕ ಮತ್ತು ಆದಿವಾಸಿ ಸಮಾಜಗಳಲ್ಲಿ ಬದಲಾವಣೆ ಹೊಂದುವುದನ್ನು ಗುರುತಿಸಬಹುದಾಗಿದೆ. ಉದಾಹರಣೆಗೆ, ಅಮೆರಿಕಾದಂತಹ ದೇಶದಲ್ಲಿ ಸ್ವಂತ ಮನೆಯಿಲ್ಲದ, ಹಾಗೆಯೇ ಕಾರು, ಟೆಲಿಫೋನ್, ಟೆಲಿವಿಷನ್, ರೆಫ್ರಿಜರೇಟರ್ ಮುಂತಾದ ಸೌಲಭ್ಯಗಳಿಲ್ಲದ ಸ್ಥಿತಿ ಬಡತನದ ಸಂಕೇತವಾಗಿದ್ದರೆ, ಭಾರತದಂತಹ ರಾಷ್ಟ್ರಗಳಲ್ಲಿ ಇವುಗಳಲ್ಲಿ ಕೆಲವುಗಳನ್ನು ಹೊಂದಿರುವುದೇ ಶ್ರೀಮಂತಿಕೆಯ ಸಂಕೇತವಾಗಿದೆ. ಬುಡಕಟ್ಟು ಜನಾಂಗಗಳಲ್ಲಿ ಅವು ಕಲ್ಪನೆಗೆ ಎಟುಕದ ವಸ್ತುಗಳಾಗಿರುತ್ತವೆ. ಹೀಗೆ ಹಸಿವು ಮತ್ತು ಬಡತನ ಕೆಲವು ಜನರ ಜೀವನಶೈಲಿಯೊಡನೆ ನಿಕಟ ಸಂಬಂಧ ಹೊಂದಿದ್ದು ಅದನ್ನು ಸ್ಪಷ್ಟವಾಗಿ ಬಿಂಬಿಸುತ್ತದೆ.

ಹೀಗೆ ಬಡತನದ ಬಹುಮುಖ ವ್ಯಾಪ್ತಿ ಹಲವು ವಸ್ತು ವಿಷಯಗಳನ್ನು ತನ್ನ ತೆಕ್ಕೆಗೆ ಒಳಗು ಮಾಡಿಕೊಳ್ಳುತ್ತದೆ.

ಹಸಿವಿನ ಸಮಸ್ಯೆಗೆ ಕಾರಣವಾಗುವ ಬಡತನವನ್ನು ಅಳೆಯುವ ಮಾಪಕಗಳು

ಭಾರತ ಹಳ್ಳಿಗಳ ದೇಶ. ಇಲ್ಲಿ ಬಡವರನ್ನು ಗುರುತಿಸುವುದು ಕಷ್ಟವೇನೂ ಅಲ್ಲ. ವಿವಿಧ ದೇಶಗಳ ಜನಜೀವನದ ರೀತಿ-ನೀತಿಗಳು ಬಡತನವನ್ನು ಗುರುತಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಬಡತನವನ್ನು ಗುರುತಿಸಲು ಸಹಾಯಕವಾಗುವ ಮತ್ತು ಎಲ್ಲಾ ಪರಿಸರದ ಜನರಿಗೂ ಅನ್ವಯವಾಗುವ ಕೆಲವು ಪ್ರಮುಖ ಲಕ್ಷಣಗಳನ್ನು ಹೀಗೆ ಪಟ್ಟಿ ಮಾಡಬಹುದು.

- **ವ್ಯಕ್ತಿಗಳ ಹಂತದಲ್ಲಿ:** ಅಪರಿಪೂರ್ಣವಾದ ಆಹಾರ, ಕನಿಷ್ಠತಮ ವೈಯಕ್ತಿಕ ಖರ್ಚು, ನಿರಂತರವಾದ ಅನಾರೋಗ್ಯ, ತೀರಾ ಕನಿಷ್ಠತಮ (ಮಟ್ಟದ) ಅನಕ್ಷರತೆ, ನಿರುದ್ಯೋಗ, ವಸತಿವಿಹೀನತೆ.

- **ಕುಟುಂಬಗಳ ಮಟ್ಟದಲ್ಲಿ:** ಕುಟುಂಬದಲ್ಲಿ ದುಡಿದು ತರುವವರು ಇಲ್ಲದಿರುವುದು, ಕುಟುಂಬದ ಜವಾಬ್ದಾರಿ ಹೊತ್ತಿರುವ ಪುರುಷರು ೬೦ ವರ್ಷಗಳನ್ನು ದಾಟಿರುವುದು, ಸ್ತ್ರೀಯೊಬ್ಬಳು ಕುಟುಂಬದ ಯಜಮಾನತಿಯಾಗಿರುವ ಸ್ಥಿತಿ, ೧೮ ವರ್ಷಕ್ಕಿಂತ ಕಡಿಮೆ ವಯಸ್ಸುಳ್ಳ ೬ ಮಂದಿಗೂ ಹೆಚ್ಚಿನ ಮಕ್ಕಳನ್ನು ಪಡೆದಿರುವ ವಿಭಕ್ತ ಕುಟುಂಬ. ಕುಟುಂಬದ ಹಿರಿಯರು ದಿನಗೂಲಿಯನ್ನು ಆಧರಿಸಿ ಜೀವನ ನಡೆಸುವ ಸ್ಥಿತಿ, ಪ್ರಾಥಮಿಕ ಮಟ್ಟಕ್ಕಿಂತಲೂ ಕಡಿಮೆ ಮಟ್ಟದ ಶಿಕ್ಷಣವನ್ನು ಪಡೆದ ಸದಸ್ಯರನ್ನು ಹೊಂದಿರುವ ಕುಟುಂಬ, ದುಡಿಮೆಯ ಅನುಭವವನ್ನು ಹೊಂದಿರದೇ ಇರುವ ಸದಸ್ಯರುಗಳಿಂದ ಕೂಡಿದ ಕುಟುಂಬ ಮತ್ತು ಕೇವಲ ತಾತ್ಕಾಲಿಕ ಉದ್ಯೋಗವನ್ನು ಮಾತ್ರ ಪಡೆದಿರುವ ಸದಸ್ಯರುಗಳಿಂದ ಕೂಡಿದ ಕುಟುಂಬ.

- **ಸಮಾಜ ಮಟ್ಟದಲ್ಲಿ:** ಕನಿಷ್ಠತಮ ಸಂಪನ್ಮೂಲಗಳೂ, ಕಡಿಮೆ ರಾಷ್ಟ್ರೀಯ ಆದಾಯ, ಅಲ್ಪ ಪ್ರಮಾಣದ ತಲಾ ಆದಾಯ, ಸಂಪತ್ತಿನ ಹಂಚಿಕೆಯಲ್ಲಿ ಅಗಾಧ ತಾರತಮ್ಯ ಮತ್ತು ಬಹಳ ದುರ್ಬಲವಾದ ರಕ್ಷಣಾ ವ್ಯವಸ್ಥೆ. ಇವುಗಳ ಪರಿಗಣನೆಯ ಜೊತೆಗೆ ಜನಸಾಮಾನ್ಯರ ದೈನಂದಿನ ಜೀವನದ ರೀತಿ, ಅವರ ಆಹಾರಕ್ರಮ, ವಾಸಿಸುವ ಸ್ಥಳ, ಅವರ ಆರೋಗ್ಯದ ಸ್ಥಿತಿ, ಸಾಕ್ಷರತೆಯ ಪ್ರಮಾಣ, ಅವರು ಮಾಡುವ ವೈಯಕ್ತಿಕ ಖರ್ಚು, ಇವು ಭಾರತದ ಬಡತನವನ್ನು ಪ್ರತಿಬಿಂಬಿಸುವ ಪ್ರಮುಖ ಅಂಶಗಳಾಗಿವೆ.

ಭಾರತ ಇಂದು ಜಗತ್ತಿನಲ್ಲಿ ತೀವ್ರಗತಿಯಲ್ಲಿ ಮುಂದುವರಿಯುತ್ತಿರುವ ರಾಷ್ಟ್ರಗಳಲ್ಲಿ ಒಂದೆಂದು ಪರಿಗಣಿತವಾಗಿದ್ದರೂ ಇಂದಿಗೂ ೨೫೦ ರಿಂದ ೨೭೦ ದಶಲಕ್ಷ ಜನರು ಹಸಿವು, ಬಡತನದ ಕರಾಳಕೂಪದಲ್ಲಿ ನರಳುತ್ತಿದ್ದಾರೆ. ಭಾರತದಲ್ಲಿ ಗ್ರಾಮ ಮತ್ತು ನಗರಗಳೆರಡರಲ್ಲೂ ಹಸಿವು, ಬಡತನ ತಾಂಡವವಾಡುತ್ತಿದೆ.

ಗ್ರಾಮೀಣ ಭಾಗದ ಜನರು ಮತ್ತು ನಗರ ಪ್ರದೇಶದ ಬಡವರನ್ನು ಸ್ಥೂಲವಾಗಿ ಗುರುತಿಸಬಹುದು. ಭೂರಹಿತ ಖಾಯಂ ನೆಲೆಯ ಕೃಷಿ ಕಾರ್ಮಿಕರು, ದಿನಗೂಲಿ ಶ್ರಮಿಕರು, ಅತಿ ಚಿಕ್ಕ ರೈತರು, ಪೂರ್ಣ ಪ್ರಮಾಣದ ಉದ್ಯೋಗವಿಲ್ಲದ ಕಮ್ಮಾರರು, ಬಡಗಿಗಳು, ಚಮ್ಮಾರರು, ಕ್ಷೌರಿಕರು, ಕೋಳಿ-ಕುರಿ ಸಾಕಣಿಕೆದಾರರು ಮುಂತಾದವರು ಗ್ರಾಮೀಣ ಪ್ರದೇಶದ ಬಡವರಾಗಿದ್ದಾರೆ. ಅಸಂಘಟಿತ ಕೈಗಾರಿಕಾ ಕಾರ್ಮಿಕರು, ಕೂಲಿ ಮತ್ತು ಹಮಾಲಿ ಕೆಲಸದವರು, ದಿನಗೂಲಿ ಸಂಬಳದವರು, ತರಕಾರಿ, ಹಣ್ಣು-ಹೂವು ಮುಂತಾದವುಗಳನ್ನು ತಲೆಯ ಮೇಲೆ ಹೊತ್ತು ಮಾರುವವರು, ಮನೆಗೆಲಸದವರು, ಚಿಕ್ಕಪುಟ್ಟ ಗೂಡಂಗಡಿ ಹಾಗೂ ಟೀ ಅಂಗಡಿ ನಡೆಸುವವರು ಮತ್ತು ಭಿಕ್ಷುಕರು ಮುಂತಾದವರು ನಗರಪ್ರದೇಶದ ಬಡವರಾಗಿದ್ದಾರೆ.

ಕೊನೆ ಟಿಪ್ಪಣಿಗಳು

೧. ಮಾನವ ಅಭಿವೃದ್ಧಿ, ಮಾನವ ಬಡತನ, ಮಾನವ ಹಕ್ಕುಗಳು, ಪ್ರಸಾರಾಂಗ, ಹಂಪಿ ಕನ್ನಡ ವಿ. ವಿ., ೨೦೧೪, ಪು. ೧೪.

೨. ಮೆಹಬೂಬ್ ಉಲ್ ಹಕ್, ೧೯೯೦, ಮಾನವ ಅಭಿವೃದ್ಧಿ, ಮಾನವ ಬಡತನ, ೨೦೧೪, ಪು. ೧೫.

೩. ಯು. ಎನ್. ಡಿ. ಪಿ., ೨೦೧೦.

೪. ಕನ್ನಡ ಕಾದಂಬರಿಗಳಲ್ಲಿ ವೇಶ್ಯಾ ಜೀವನ, ಶ್ರೀಪತಿ ಹಳಗುಂದ, ಕನ್ನಡ ಸಾಹಿತ್ಯ ಪರಿಷತ್ತು, ೨೦೦೮, ಪು. ೬೧.

೫. ಜಯದೇವಪ್ಪ ನೈಜಕೇರಿ, ಸಂಸ್ಕೃತಿ ಚಂದನ, ೨೦೦೨, ಪು. ೭೦-೭೧.

೬. ಶ್ರೀಪತಿ ಹಳಗುಂದ, ಕನ್ನಡ ಕಾದಂಬರಿಗಳಲ್ಲಿ ವೇಶ್ಯಾಜೀವನ, ಕ. ಸಾ. ಪ., ಪು. ೭೬, ೨೦೦೮.

೭. ಜಯದೇವಪ್ಪ ಜೈನಕೇರಿ, ಸಂಸ್ಕೃತಿ ಚಂದನ, ಪು. ೭೦-೭೧, ೨೦೦೨.

೮. ಪಾತರದವರು, ಶೈಲಜಾ ಹಿರೇಮಠ, ಪು. ೭೦-೭೧, ೧೯೯೯.

೯. ಅದೇ.

೧೦. ಅದೇ.

೧೧. ಅ. ನ. ಕೃ. ಸಾಹಿತ್ಯ ಮತ್ತು ಕಾಮಪ್ರಚೋದನೆ, ಪು. ೧೪೮.

೧೨. ಗೋಪಾಲಕೃಷ್ಣ ಅಡಿಗ, ಸಾಹಿತ್ಯ ತರಂಗ, ದ್ವಿತೀಯ ಪಿ. ಯು. ಸಿ. ಪಠ್ಯ ಪುಸ್ತಕ, ಪು. ೪೭.

ಅಧ್ಯಾಯ ೪: ಪ್ರಾತಿನಿಧಿಕ ಕನ್ನಡ ಸಣ್ಣ ಕತೆಗಳಲ್ಲಿ ಹಸಿವು

೪.೧ ಸಾಮಾಜಿಕ ಕಾರಣದ ಹಸಿವಿನ ಕತೆಗಳು

೪.೨ ಆರ್ಥಿಕ ಕಾರಣದ ಹಸಿವಿನ ಕತೆಗಳು

೪.೩ ಧಾರ್ಮಿಕ ಕಾರಣದ ಹಸಿವಿನ ಕತೆಗಳು

೪.೪ ರಾಜಕೀಯ ಕಾರಣದ ಹಸಿವಿನ ಕತೆಗಳು

೪.೫ ಪ್ರಾಕೃತಿಕ ಕಾರಣದ ಹಸಿವಿನ ಕತೆಗಳು

ಅಧ್ಯಾಯ ೪

ಪ್ರಾತಿನಿಧಿಕ ಕನ್ನಡ ಸಣ್ಣ ಕತೆಗಳಲ್ಲಿ ಹಸಿವು

ಕನ್ನಡದಲ್ಲಿ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರಿಗಿಂತ ಹಿಂದೆ ಮತ್ತು ಸಮಕಾಲೀನ ಕಥೆಗರರಾಗಿ ಕೆರೂರು ವಾಸುದೇವಾಚಾರ್ಯರು, ಪಂಜೆ ಮಂಗೇಶ ರಾಯರು, ಕಡೆಂಗೋಡ್ಲು ಶಂಕರ ಭಟ್ಟರು, ಎ. ಆರ್. ಕೃಷ್ಣಶಾಸ್ತ್ರಿ, ಅ. ನ. ಕೃ., ತ. ರಾ. ಸು. ಇಂಥವರೆಲ್ಲರೂ ಇದ್ದಾರೆ. ಆದರೆ ಪಾಶ್ಚಾತ್ಯ ಸಾಹಿತ್ಯವಲ್ಲದೆ ಕನ್ನಡ ಮತ್ತು ಸಂಸ್ಕೃತ ಪರಂಪರೆಯನ್ನು ಸ್ಪಷ್ಟವಾಗಿ ಬಲ್ಲವರಾಗಿದ್ದ ಮಾಸ್ತಿಯವರು ಕನ್ನಡ ಕಥಾ ಪರಂಪರೆಗೆ ಭದ್ರ ಬುನಾದಿ ಹಾಕಿದರು. ಮಾಸ್ತಿಯವರ ನಂತರದ ಮತ್ತೊಬ್ಬ ಪ್ರಮುಖ ಕಥೆಗಾರರಾದ ಯು. ಆರ್. ಅನಂತಮೂರ್ತಿಯವರು ಪ್ರಾಯಕ್ಕೆ ಬರುತ್ತಿರುವ ಮಕ್ಕಳಿಗೆ ಯಾವನಾದರೂ ಒಬ್ಬ ಕನ್ನಡ ಲೇಖಕನನ್ನು ಓದಲು ಕೊಡಬೇಕೆಂದು ಅನ್ನಿಸುವುದಾದರೆ ಅದು ಮಾಸ್ತಿ ಎಂದು ನನ್ನ ಭಾವನೆ. ಜೀವನದ ನಿಜಗಳೇನು? ನೋವುಗಳೇನು? ತಾಳುವುದೆಂದರೇನು? ಗೆಲ್ಲುವುದೆಂದರೇನು? ಎಂಬ ಕಷ್ಟಗಳನ್ನು ಭಾವಾತಿರೇಕವಿಲ್ಲದೆ, ಸೋಗಿಲ್ಲದೆ ಎದುರಿಸಲು ಖಂಡಿತಾ ಮಾಸ್ತಿ ಕಲಿಸುತ್ತಾರೆ ಎಂದಿದ್ದಾರೆ. ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ ಕನ್ನಡದ ಆರಂಭಿಕ ಪ್ರಮುಖ ಕಥೆಗಾರರಾದ ಮಾಸ್ತಿಯವರ ಬಗ್ಗೆ ಹಾಗೆ ಹೇಳಿದ ಅನಂತಮೂರ್ತಿಯವರಿಂದಲೇ ಕನ್ನಡ ಕಥಾ ಪರಂಪರೆ ಎರಡನೆಯ ಮುಖ್ಯ ತಿರುವನ್ನು ಪಡೆಯಿತು.

ಸಮಾಜದ ಬಾಹ್ಯ ವಿಷಮತೆಗಳ ಬಗ್ಗೆ ಹೆಚ್ಚು ಗಮನ ಹರಿಸುತ್ತ ಬಂದ ಮಾಸ್ತಿ, ಕುವೆಂಪು. ಅ. ನ. ಕೃ., ತ. ರಾ. ಸು. ಈ ಲೇಖಕರ ಭಾವುಕ ಬರವಣಿಗೆಯ ಪರಂಪರೆ ಮುಗಿದು ಪಾಶ್ಚಾತ್ಯ ಜಗತ್ತಿನ ಮನಃಶಾಸ್ತ್ರಜ್ಞರು ಮತ್ತು ಸುಪ್ರಸಿದ್ಧ ಚಿಂತಕರ ಲೇಖಕರ ಓದಿನ ಹಿನ್ನೆಲೆಯಲ್ಲಿ ಅನಂತಮೂರ್ತಿಯವರು ಮತ್ತು ಅವರ ವಾರಿಗೆಯಲ್ಲೇ ಬಂದ ಚಿತ್ತಾಲರು ಮನುಷ್ಯನ ಅಂತರಂಗದ ವಿಲಕ್ಷಣತೆ ಮತ್ತು ವಿಷಣ್ಣತೆಗಳ ಕಡೆಗೆ ಕಥಾಹಂದರದ ಸೂಕ್ಷ್ಮತೆಗಳನ್ನು ಕೊಂಡೊಯ್ದರು.

ಬದುಕಿನ ಸಮಸ್ಯೆಗಳಿಗೆ ಮಾಸ್ತಿಯವರು ಪರಿಹಾರವನ್ನು ಪ್ರಕೃತಿಯಲ್ಲೇ ಹುಡುಕಿದರೆ ಅನಂತಮೂರ್ತಿಯವರು ಮನುಷ್ಯನ ಬಹಿರಂಗ ಮತ್ತು ಅಂತರಂಗದ ಒಂಟಿತನ ಮತ್ತು ವ್ಯಾಕುಲತೆಗೆ ಅಗತ್ಯವೆನಿಸುವ ಶಸ್ತ್ರಚಿಕಿತ್ಸೆ ಯಾವ ಬಗೆಯದು ಎಂದು ಪರಿಶೀಲಿಸತೊಡಗಿದರು. ಈ ಮಾದರಿಯ ಹೊಸ ಬರವಣಿಗೆ ಎಪ್ಪತ್ತು-ಎಂಬತ್ತರ ದಶಕದಲ್ಲಿ ತನ್ನ ತುತ್ತತುದಿಯನ್ನು ಮುಟ್ಟಿತು. ಆಗಲೇ ಬಂದ ಮತ್ತೊಬ್ಬ ಪ್ರಮುಖ ಕಥೆಗಾರ ಪೂರ್ಣಚಂದ್ರ ತೇಜಸ್ವಿಯವರು ತಾವು ಬರೆಯಲು ಕೈಗೆತ್ತಿಕೊಂಡ ಕಥನಕ್ರಮವೇ ಬೇರೆಯಾಗಿತ್ತು. ಸ್ವಾತಂತ್ರ್ಯಾನಂತರದಲ್ಲಿ ನಾಗರಿಕ ಮತು ಗ್ರಾಮ ಸಮೂಹಕ್ಕಿದ್ದ ಭರವಸೆಗಳು ಕರಗುತ್ತಾ ಹಳ್ಳಿಗಾಡಿನ ವಾತಾವರಣ ಅವನತಿಯತ್ತ ಸಾಗುತ್ತಿದ್ದುದನ್ನು ತಮ್ಮ ಪರಿಸರದಲ್ಲಿ ಕಾಣುತ್ತಿದ್ದರು.

ನವ್ಯ ಮಾದರಿಗಳನ್ನು ತೇಜಸ್ವಿಯವರು ಸ್ವೀಕರಿಸಲೇ ಇಲ್ಲ. ನವ್ಯರು ಪ್ರತಿಪಾದಿಸುತ್ತಿದ್ದ ಎಲ್ಲಾ ಆಧುನಿಕತೆಯ ದುರಂತಗಳು ತೇಜಸ್ವಿಯವರ ಎಲ್ಲಾ ಕಥೆಗಳಲ್ಲಿ ಪ್ರವೇಶ ಪಡೆಯುತ್ತಿದ್ದರೂ

ಗ್ರಾಮಶಕ್ತಿ ಮತ್ತು ಅದರ ಜೀವಂತಿಕೆಯ ಉಳಿಯುವಿಕೆಯನ್ನು ಸಕಾರಾತ್ಮಕವಾಗಿಯೇ ಪ್ರತಿನಿಧಿಸುತ್ತಿದ್ದರು.

ನವ್ಯ ಪರಂಪರೆಯ ಇಳಿಗಾಲದ ಹೊತ್ತಿಗೆ ದಲಿತ ಬಂಡಾಯ ಲೇಖಕರು ಕನ್ನಡ ಕಥಾಪರಂಪರೆಗೆ ಮತ್ತೊಂದು ದಿಕ್ಕು ಕಾಣಿಸಿದರು. ಶತಮಾನಗಳ ಕಾಲದಿಂದ ತಮ್ಮ ಬಡತನದ ಹಿನ್ನೆಲೆಯ ದುಡಿಮೆ, ಅದರ ಹಿಂದಿನ ಹತಾಶೆ ಮತ್ತು ಶೋಷಣೆಯನ್ನು ತಮ್ಮದೇ ನುಡಿಗಟ್ಟುಗಳಲ್ಲಿ ಅಭಿವ್ಯಕ್ತಿಸತೊಡಗಿದರು. ಈ ದಿಸೆಯಲ್ಲಿ ಮಾಸ್ತಿ ಮತ್ತು ಅನಂತಮೂರ್ತಿಯವರ ಕಥಾ ಜಗತ್ತಿನ ಪಾತ್ರ ಮತ್ತು ಸನ್ನಿವೇಶಗಳಿಗಿಂತ ಸಂಪೂರ್ಣ ಬೇರೊಂದು ಸಮೂಹದವರ ಒಡಲಾಳದ ಕಥೆಗಳನ್ನು ಹೇಳಿದವರು ದೇವನೂರ ಮಹಾದೇವ, ಮೊಗಳ್ಳಿ ಗಣೇಶ ಮತ್ತು ಕುಂ. ವೀರಭದ್ರಪ್ಪರವರು. ಮೂರು ತಿರುವುಗಳಲ್ಲಿ ಪ್ರವಹಿಸಿದ ಕನ್ನಡ ಕಥಾ ಪರಂಪರೆಯಲ್ಲಿ ಅನೇಕಾನೇಕ ಉತ್ತಮ ಕಥೆಗಾರರು ಕಾಣಿಸಿಕೊಂಡರು. ಕಥಾ ಪ್ರಕಾರದಲ್ಲಿ ಮಹಿಳಾ ಲೇಖಕಿಯರು ಮತ್ತು ಮುಸ್ಲಿಂ ಲೇಖಕರು ಹೆಚ್ಚಾಗಿಯೇ ಗುರುತಿಸಿಕೊಂಡಿರುವುದು ಗಮನಾರ್ಹ ಅಂಶವೇ ಆಗಿರುತ್ತದೆ.

ಮನುಷ್ಯ ಮನುಷ್ಯರ ಮಧ್ಯೆ ಪರಸ್ಪರ ಅನುಭವಗಳನ್ನು ಹೇಳಿಕೊಳ್ಳುವಂಥ ಕ್ರಿಯೆಯಲ್ಲಿ ಕಥೆ ಹುಟ್ಟಿಕೊಳ್ಳುತ್ತದೆ. ನಿಜವಾಗಿಯೂ ಕಥೆ ಹೇಳುವ-ಕೇಳುವ ಪ್ರಕ್ರಿಯೆಯಲ್ಲಿಯೇ ಒಂದು ಬಗೆಯ ಆಕರ್ಷಣೆ, ತಾದಾತ್ಮ್ಯತೆ ಇರುತ್ತದೆ. ಬೇರೆಯವರ ಅನುಭವಗಳನ್ನು ತಮ್ಮದಾಗಿಸಿಕೊಳ್ಳುವ, ತಿಳಿಯದ ಲೋಕವೊಂದನ್ನು ಪರಿಚಯಿಸಿಕೊಳ್ಳುವ, ಅಪರಿಚಿತರನ್ನು ತಮ್ಮವರೇ ಎಂದು ತಿಳಿದುಕೊಳ್ಳುವ ಭಾವನೆ ಹುಟ್ಟುವಂತೆ ಮಾಡಲು ಪ್ರೇರೇಪಿಸುವ ಗುಣ ಕಥೆಗಳಲ್ಲಿ ಅಡಕವಾಗಿರುತ್ತದೆ. ಮೌಖಿಕವೆನಿಸುವ ಜನಪದ ಕಥೆಗಳು ಬಾಯಿಯಿಂದ ಬಾಯಿಗೆ ಹರಿದು ಹೋಗುವಾಗ ಬದಲಾಗುತ್ತಾ ಹೋಗಬಹುದು. ಆಗ ಕಥೆಗಾರನು ಮಾತ್ರ ಕಥೆಗಾರನಾಗಿ ಉಳಿಯುವುದಿಲ್ಲ. ಕೇಳುಗನು ಕೂಡಾ ಕಥೆಗಾರನಾಗುತ್ತಾನೆ. ಒಟ್ಟು ಕನ್ನಡ ಸಾಹಿತ್ಯ ಪರಂಪರೆಯ ನಡುವೆ ಕಥಾ ಬರಹ ಒಂದು ಜನಪ್ರಿಯ ಪ್ರಕಾರವಾಗಿ ಬೆಳೆದಿರುತ್ತದೆ.

ಮೌಖಿಕ ಕಥೆಗಳ ಕಾಲಾನಂತರ ಬಂದ ಬರಹ ರೂಪದ ಕಥೆಗಳು ದಾಖಲೆಗಳಾಗತೊಡಗಿದವು. ಪ್ರಪಂಚದಾದ್ಯಂತ ಬರಹ ರೂಪದ ಕಥೆಗಳು ಹುಟ್ಟಿಕೊಂಡು ಜನಪ್ರಿಯವಾಗುತ್ತಾ ಕಥೆಗಳ ಜೊತೆಗೆ ಕಥೆಗಾರನ ವೈಯಕ್ತಿಕ ಛಾಪು ಕೂಡಾ ದಾಖಲಾಗುತ್ತಾ ಹೋಯಿತು. ಕಾಲ ಕಳೆದಂತೆ ಸಣ್ಣ ಕಥೆಗಳು ಮನುಷ್ಯನ ಭಾವನೆಗಳು, ಬದುಕಿನ ಏರಿಳಿತಗಳು, ನಂಬಿಕೆಗಳನ್ನು ವ್ಯಕ್ತಪಡಿಸುವ ಪ್ರಬಲ ಮಾಧ್ಯಮವಾಗಿ ಬೆಳೆದವು.

ದೇಶದ ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ಹುಟ್ಟಿಕೊಂಡ ನವೋದಯ ಸಾಹಿತ್ಯ ಬಹುಮಟ್ಟಿಗೆ ಇಂಗ್ಲಿಷ್ ಸಾಹಿತ್ಯದ ಅಭ್ಯಾಸದ ಪ್ರೇರಣೆಯೊಡನೆ ಕನ್ನಡದಲಿ ನೆಲೆಯೂರಿತು. ಪಂಜೆ ಮಂಗೇಶರಾಯರು, ಕೆರೂರು ವಾಸುದೇವಾಚಾರ್ಯ ಅಲ್ಲದೆ ತದನಂತರದ ಕಥೆಗಾರರು ಈ ಕಾಲಘಟ್ಟದಲ್ಲಿ ಬರುತ್ತಾರೆ. ಇವರ ಕಥೆಗಳಲ್ಲಿ ಆದರ್ಶವಾದ, ಧಾರ್ಮಿಕತೆ, ಆಧ್ಯಾತ್ಮಿಕ ಮೌಲ್ಯಗಳ ಉದಾತ್ತತೆ, ಸಹಿಷ್ಣುತೆ ಮುಂತಾದ ಗುಣಗಳನ್ನು ಎತ್ತಿ ಹಿಡಿಯುವ ಸಂಗತಿಗಳನ್ನು ಕಾಣಬಹುದು. ಆದರೆ ೧೯೫೦ರ ನಂತರ ಈ ಬಗೆಯ ಧ್ಯೇಯ ಧೋರಣೆಗಳನ್ನು ದಾಟುವ

ಪ್ರಕ್ರಿಯೆಯ ಪ್ರಗತಿಶೀಲ ಪರಂಪರೆ ಹುಟ್ಟಿಕೊಂಡು ಅವು ಎಡಪಂಥೀಯ ರಾಜಕೀಯ ಪ್ರಭಾವದೊಂದಿಗೆ ತಮ್ಮ ಬರವಣಿಗೆಯ ಮಾದರಿಗಳನ್ನು ಕಂಡುಕೊಂಡವು.

ಆರ್ಥಿಕ, ಸಾಮಾಜಿಕ, ಧಾರ್ಮಿಕ ಅಸಮಾನತೆ ಪ್ರಗತಿಶೀಲ ಪಂಥದವರ ಕಥೆಗಳಲ್ಲಿ ನಿಚ್ಚಳವಾಗಿ ಕಾಣಿಸಿಕೊಂಡ ಪ್ರಮುಖ ಅಂಶಗಳು. ಇವೆಲ್ಲವನ್ನೂ ಮೀರಿದ ಸಂಗತಿಗಳು ಕೂಡಾ ಅಗೋಚರವಾಗಿದ್ದು ಅವೂ ಮನುಷ್ಯ ಸಮೂಹವನ್ನು ಆಟವಾಡಿಸುತ್ತವೆಂಬ ವಿಚಾರವನ್ನು ತಮ್ಮ ಬರವಣಿಗೆಯಲ್ಲಿ ತಂದದ್ದು ನವ್ಯ ಪಂಥ. ವ್ಯಕ್ತಿನಿಷ್ಠ ಬರವಣಿಗೆ ಅಂದರೆ ವೈಯಕ್ತಿಕ ನೆಲೆಯಲ್ಲಿ ಮನುಷ್ಯನ ಅನುಭವಗಳು, ಅವನ ಒಳತುಡಿತಗಳು, ಅನಾಥಪ್ರಜ್ಞೆ, ಕಾಮವಾಂಛೆ ಮುಂತಾದ ವಿಷಯಗಳನ್ನೊಳಗೊಂಡ ಅಂತರ್ಮುಖಿ ಅನುಭವಗಳಿಗೆ ತೆರೆದಿಡುವ ಬರಹಗಳು ನವ್ಯಸಾಹಿತ್ಯ ಮಾರ್ಗವೆಂದು ಗುರುತಿಸಲ್ಪಟ್ಟವು.

ವಿ. ಕೃ. ಗೋಕಾಕ್, ಗೋಪಾಲಕೃಷ್ಣ ಅಡಿಗ, ಯು. ಆರ್. ಅನಂತಮೂರ್ತಿ, ಲಂಕೇಶ್, ಯಶವಂತ ಚಿತ್ತಾಲ ಮುಂತಾದವರು ನವ್ಯ ಪಂಥದ ಪ್ರಮುಖ ಲೇಖಕರೆಂದು ಗುರುತಿಸಲ್ಪಟ್ಟವರು. ಅವರು ಬರೆದ ಕಥೆಗಳಲ್ಲಿ ಕಂಡುಬಂದ ಸೂಕ್ಷ್ಮತೆ, ಮಾನವೀಯ ಸಂಬಂಧಗಳು, ಅನ್ವೇಷಣೆ, ಪ್ರತಿಮೆ, ಸಂಕೇತಗಳ ಬಳಕೆ, ದ್ವಂದ್ವಗಳು, ಸಂದಿಗ್ಧ ಭಾವದ ಪಾತ್ರಸೃಷ್ಟಿ ಇವೇ ಮುಂತಾದ ವಿಶಿಷ್ಟ ಗುಣಗಳಿಂದ ನವ್ಯ ಪಂಥದ ಕಾಲಘಟ್ಟದಲ್ಲಿ ಹಲವು ಕನ್ನಡದ ಅತ್ಯುತ್ತಮ ಕೃತಿಗಳು ಹುಟ್ಟಿಕೊಂಡವು.

ನವ್ಯರ ಪರಿಪೂರ್ಣ ಅಥವಾ ಶ್ರೇಷ್ಠ ಸಾಹಿತ್ಯದ ಪರಿಕಲ್ಪನೆಯನ್ನು ಬೌದ್ಧಿಕ ಮಟ್ಟದಲ್ಲಿ ಉಳಿಸುವಂಥ ಪರಿಶ್ರಮವನ್ನು ಕಂಡುಕೊಂಡ ಹಲ ಕೆಲವು ಪ್ರಮುಖ ಲೇಖಕರು, ಅದರಲ್ಲೂ ಮುಖ್ಯವಾಗಿ ಪೂರ್ಣಚಂದ್ರ ತೇಜಸ್ವಿ, ಲಂಕೇಶ್ ಮುಂತಾದವರು ರಾಜಕೀಯವಾಗಿ, ಸಾಮಾಜಿಕವಾಗಿ ಬದುಕಿನ ಬಹುಮುಖ್ಯ ತಾತ್ವಿಕ ಹಿನ್ನೆಲೆಯೊಂದಿಗೆ ಇನ್ನಾದರು ಸಾಹಿತ್ಯ ಒಂದು ಹೊಸ ಮಾರ್ಗ ಕಂಡುಕೊಳ್ಳಬೇಕೆಂಬ ಆಲೋಚನೆಯ ಹಿನ್ನೆಲೆಗೆ ದಲಿತ ಬಂಡಾಯ ಚಳವಳಿಯೂ ಸೇರಿಕೊಂಡಿತು. ಶ್ರೇಷ್ಠತೆಯ ಮಾನದಂಡವನ್ನು ಸಂಶಯದಿಂದ ನೋಡತೊಡಗಿದ ದಲಿತರು, ದುರ್ಬಲ ವರ್ಗದವರು, ಶೋಷಿತರು, ಅಲ್ಪಸಂಖ್ಯಾತರನ್ನೊಳಗೊಂಡ ಒಂದು ಮುಗ್ಧ ಸಮೂಹ ತಮ್ಮ ದುಗುಡ-ದುಮ್ಮಾನಗಳನ್ನು ವಸ್ತುನಿಷ್ಠವಾಗಿ ಅಕ್ಷರ ರೂಪಕ್ಕಿಳಿಸತೊಡಗಿದರು. ಅಲ್ಲಿಯವರೆಗೆ ಕಾಣದ ಒಂದು ಅವ್ಯಕ್ತ ಲೋಕ ಬರಹ ರೂಪದಲ್ಲಿ ಚಿತ್ರಣಗೊಂಡಿತು. ಆಡುಮಾತಿನ ಬಳಕೆ, ಹೊಸತೊಂದು ಅನುಭವ ಜಗತ್ತು, ವ್ಯವಸ್ಥೆಯ ಅನುಚಾನಾದ ಕ್ರೌರ್ಯ, ಶೋಷಿತರ ದನಿ ಇವು ತನ್ನಿಂದ ತಾನೇ ಓದುಗರ ಮುಂದೆ ಅನಾವರಣಗೊಳ್ಳತೊಡಗಿದವು. ಇಷ್ಟೆಲ್ಲದರ ಜೊತೆಗೆ ಈ ಹಿಂದೆ ಹೇಳಿದಂತೆ ಕಥಾ ಪರಂಪರೆಯ ಪ್ರಮುಖ ಘಟ್ಟಗಳಿಗೆ ಸ್ಪಂದಿಸಿಯೂ ತಮ್ಮ ಅನುಭವ, ಆಲೋಚನೆ ಮತ್ತು ಬದಲಾವಣೆಯ ಕ್ರಮವನ್ನು ಯಾವ ಪಂಥಕ್ಕೂ ಸಿಲುಕಿಸದೆ ಇವು ಕನ್ನಡದ ಕಥೆಗಳೆಂದೇ ಬರೆದ ಹಲ ಕೆಲವು ಪ್ರಮುಖ ಲೇಖಕರೂ ಕನ್ನಡದಲ್ಲಿದ್ದಾರೆ. ರಾಘವೇಂದ್ರ ಖಾಸನೀಸ, ಗೋಪಾಲಕೃಷ್ಣ ಪೈ ಇಂಥವರೆನ್ನಬಹುದು.

ಈ ಸಂಗತಿಯೆಲ್ಲವನ್ನೂ ತಿಳಿದು ಕನ್ನಡ ಕಥಾಪರಂಪರೆಯ ಬೆಳವಣಿಗೆಯ ಮುಖ್ಯ ಘಟ್ಟಗಳನ್ನು ಗುರುತಿಸಲಾಗಿದೆ. ಈ ದೃಷ್ಟಿಯಿಂದ ಅವಲೋಕಿಸಿದರೆ ಕನ್ನಡ ಕಥನ ಪರಂಪರೆ

ಹೇಗೆ ವಿಸ್ತರಿಸಿದೆ ಮತ್ತು ಮಹತ್ವ ಪಡೆದುಕೊಂಡಿದೆ ಎಂಬುದು ಅರಿವಿಗೆ ಬರುತ್ತದೆ. ಹಲವು ಸಂಗತಿ, ಘಟನೆ, ವಿಚಾರ, ಮೌಢ್ಯ, ಕಾಮ ಮುಂತಾದವುಗಳಿಗಿಂತಲೂ ಕೆಲವು ಕಥೆಗಳಲ್ಲಿ ಅನಾವರಣಗೊಂಡಿರುವ ಶ್ರಮಿಕರ ಬದುಕು, ಅನ್ನದ, ವಸ್ತ್ರದ, ಆಸರೆಯ ಮೂಲಭೂತ ಅವಶ್ಯಕತೆಯ ಕಡೆಗೆ ಗಮನಹರಿಸಬೇಕಾದದ್ದು ಅನಿವಾರ್ಯ ಎಂಬುದನ್ನು ಮನದಟ್ಟು ಮಾಡಿದರೂ ಶ್ರಮಿಕರು ಕೆಳಸ್ತರದವರು, ಬಡವರು ಅನ್ನಕ್ಕಾಗಿ ನಡೆಸಬೇಕಾದ ಹೋರಾಟ ಮನಕಲಕುವಂಥದ್ದು.

ಜನಪದ ಗೀತೆಗಳಲ್ಲೂ ಕೂಡಾ ಅನ್ನವಿಲ್ಲದೆ ಒದ್ದಾಡುವ, ಅನ್ನಕ್ಕಾಗಿ ಹಪಹಪಿಸುವ ಹೃದಯ ವಿದ್ರಾವಕತೆ ಯಾರ ಮನವನ್ನಾದರೂ ನೋಯಿಸದೇ ಇರದು. ಮಳಿಹಾಡು ಜನಪದ ಗೀತೆಯಲ್ಲಿ ಅನ್ನಕ್ಕಾಗಿ ಜನಪದರು ಏನು ಮಾಡುತ್ತಿದ್ದರು ಎಂಬುದರ ಚಿತ್ರಣವನ್ನು ನೀಡಲಾಗಿದೆ.

ಮಳೀ ಹಾಡು

ಬಣ್ಣದ ಗುಬ್ಯಾರು ಮಳಿರಾಜ ಅವರು
ಮಣ್ಣಿಗಾಗಿ ಹೋದರು ಮಳಿರಾಜ
ಬಣ್ಣದ ಗುಬ್ಯಾರು ಮಣ್ಣಾಗಿ ಹೋದರು
ಅನ್ನದ ದಿನ ಬಂದು ಮಳಿರಾಯ

ಬಣ್ಣದ ಗುಬ್ಯಾರು ಅಂದರೆ ಬರಗಾಲ ಬಂದಾಗ ಮಳೆಗಾಗಿ ಪ್ರಾರ್ಥಿಸಿ ಆಚರಣೆ ಮಾಡುವ ಮನೆಯವರು ಕೂಡಾ ಅನ್ನವಿಲ್ಲದೆ ಬದುಕಲಾರರು, ಮಳೆಯಿಲ್ಲ, ಬೆಳೆಯಿಲ್ಲ, ಬೆಳೆಯಿಲ್ಲದೆ ಬದುಕಿಲ್ಲ.

ಒಕ್ಕಲಗೇರ್ಯಾಗ ಮಳಿರಾಯ ಅವರು
ಮಕ್ಕಳ ಮಾರ್ಯಾರೆ ಮಳಿರಾಜ
ಮಕ್ಕಳ ಮಾರಿ ರೊಕ್ಕ ತಕ್ಕೊಂಡು
ಭತ್ತಂತ ತಿರುಗ್ಯಾರ ಮಳಿರಾಜ

ಕೃಷಿಕರ (ರೈತರ) ಕೇರಿಯಲ್ಲಿಯೂ ಕೂಡಾ ಅನ್ನಕ್ಕೆ ಹಾಹಾಕಾರ ಉಂಟಾಗಿದೆ. ಅನ್ನಕ್ಕಾಗಿ ಮಕ್ಕಳನ್ನೇ ಮಾರಾಟ ಮಾಡಲಾಗುತ್ತಿದೆ. ಮಕ್ಕಳನ್ನು ಮಾರಿ ಬಂದ ರೊಕ್ಕವನ್ನು ತೆಗೆದುಕೊಂಡು ಭತ್ತಕ್ಕಾಗಿ ತಿರುಗಾಡಲಾಗಿದೆ.

ಗಂಡುಳ್ಳ ಬಾಲ್ಯಾರು ಮಳಿರಾಜ ಅವರು
ಬಿಕ್ಷಾಕ ಹೊಂಟಾರ ಮಳಿರಾಜ
ಗಂಡುಳ್ಳ ಬಾಲ್ಯಾರು ಬಿಕ್ಷಾಕ ಹೋದರು
ಅನ್ನದ ದಿನಬಂದು ಮಳಿರಾಜ

ಎಂಬಲ್ಲಿ ಗಂಡನಿದ್ದರೂ ಸುಮಂಗಲಿಯರು ತಮ್ಮ ಹೊಟ್ಟೆ ತುಂಬಿಸಿಕೊಳ್ಳುವುದಕ್ಕಾಗಿ ಮನೆಯಿಂದ ಹೊರನಡೆದು ಭಿಕ್ಷೆ ಬೇಡಬೇಕಾಗಿದೆ. ಭಿಕ್ಷೆ ಬೇಡುವುದು ಅವಮಾನಕರವಾದರೂ ಹಸಿವಿನ ನಿವಾರಣೆಗೆ ಭಿಕ್ಷೆ ಬೇಡಲೇಬೇಕಾಗಿದೆ.

ಹಸಿವಿನ ಪರಿಹಾರಕ್ಕೆ ಹಸಿದವರು ತೆಗೆದುಕೊಂಡಿರುವ ತೀರ್ಮಾನ ಮನಕಲಕುವಂಥದ್ದು. ಕೊರಡ್ಕಲ್ ಶ್ರೀನಿವಾಸ ರಾವ್ ಬರೆದ ಕಥೆ 'ಧನಿಯರ ಸತ್ಯನಾರಾಯಣ' ಇಪ್ಪತ್ತನೆಯ ಶತಮಾನದ ಆರಂಭಕಾಲದ ಒಂದು ದಲಿತ ಕಥನ ಎಂಬುದಾಗಿ ಗುರುತಿಸಲಾಗಿದೆ. ಯಾರ ಶ್ರಮ ಯಾರ ಪಾಲಾಗುತ್ತಿತ್ತು ಎಂಬ ಸಂಗತಿಯನ್ನು ಸರಳವಾಗಿ ಓದುಗರ ಅಂತರಂಗಕ್ಕೆ ಮುಟ್ಟಿಸುವುದರ ಜೊತೆಗೆ ಮೇಲ್ವರ್ಗದವರು ದಲಿತರನ್ನು ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಂಡು ಅವರ ಬಳಿ ಅಪರೂಪವಾದ ವಸ್ತುವೇನಾದರೂ ಇದ್ದರೆ ಅದನ್ನು ಉಪಾಯವಾಗಿ ಧಾರ್ಮಿಕತೆಯ ನೆಪವೊಡ್ಡಿ ತಮ್ಮದಾಗಿಸಿಕೊಳ್ಳುವ ಮನೋಭಾವ ನಿಜಕ್ಕೂ ಮನಕಲಕದಿರದು.

ಧನಿಯರ ಸತ್ಯನಾರಾಯಣ ಮಾದರಿಯದೇ ಬಾಲಕನೊಬ್ಬನ ಕಥೆ ಹನೂರು ಚನ್ನಪ್ಪ ಅವರ 'ಅನ್ನ' ಕಥೆ. ಅಪ್ಪ-ಅವ್ವಂದಿರೊಡನೆ ಮಾದೇಶ್ವರನ ಬೆಟ್ಟಕ್ಕೆ ಹೊರಟ ಮಾದೇವ ಜಾತ್ರೆಯಲ್ಲಿ ಕಣ್ಣಿಗೆ ಕಾಣುವ ಆಟದ ವಸ್ತುಗಳನ್ನು ಬಯಸುತ್ತಾ ಹೋಗುತ್ತಾನಾದರೆ, ಅದ್ಯಾವುದನ್ನೂ ಕೊಡಿಸಲಾಗದ ದುಃಸ್ಥಿತಿ ಅಪ್ಪ ಚಿಕ್ಕಿಂಗನದು. ಆದರೆ ಮಾದೇವನಿಗೆ ಆನೆಯ ಗೊಂಬೆ, ಬೆರಳುಂಗುರ, ಆಡುವ ಚೆಂಡು ಇದೆಲ್ಲಾ ಬೇಕು. ಇದೇನೂ ದೊರಕದ ಮಾದೇವ ದೇವಸ್ಥಾನದ ಆನೆಗೆ ಕಾಸು ಕೊಡಲು ಹೋಗಿ ಭಯಗೊಂಡು, ತದನಂತರದಲ್ಲಿ ಅಲ್ಲಿಂದಲೇ ಬಸ್ಸು ಹತ್ತಿ ಭತ್ತದ ಗದ್ದೆಯ ಸೀಮೆಗೆ ಹೋಗಿ ಕೆಲಸಕ್ಕೆ ಸೇರಿ ನಿತ್ಯ ಅನ್ನ ಉಣ್ಣುವ ಸಂಭ್ರಮದ ಅವಕಾಶ ಪಡೆಯುತ್ತಾನೆ. ವಸ್ತು ಮತ್ತು ಪ್ರಾದೇಶಿಕ ಭಾಷಾ ಸೊಗಡಿನಿಂದ ಈ ಕಥೆ ಓದುಗರ ಮನ ಮುಟ್ಟುವಂತಿದೆ.

ಮೊಗಳ್ಳಿ ಗಣೇಶ್ ಅವರ 'ಬುಗುರಿ' ಕೂಡಾ ಒಬ್ಬ ಮುಗ್ಧ ಬಾಲಕನನ್ನೂ, ಆತನಿಗೆ ಪ್ರಿಯವಾದ ಬುಗುರಿ ಆಟಿಕೆಯನ್ನು ಕೇಂದ್ರವಾಗಿಟ್ಟುಕೊಂಡು ದಲಿತ ಜಗತ್ತಿನ ಕ್ರೌರ್ಯ ಮತ್ತು ಅಲ್ಲಿಯ ಎಲ್ಲಾ ಪಡಿಪಾಟಲುಗಳನ್ನು ಅತ್ಯಂತ ಪ್ರಬುದ್ಧವಾಗಿ ಅನಾವರಣಗೊಳಿಸುವ ಕಥೆ. ಈಗಾಗಲೇ ಈ ಕಥೆ ಓದುಗರ ಮತ್ತು ವಿಮರ್ಶಕರ ವ್ಯಾಪಕ ಗಮನ ಸೆಳೆದಿರುವ ಕಥೆಯಾಗಿದೆ.

ಹೀಗೆ ಒಂದೊಂದು ಕಥೆಯಲ್ಲಿಯೂ ಹಸಿವು, ಹಸಿವಿಗಾಗಿ ಹಸಿದವರು ತೆಗೆದುಕೊಳ್ಳುವ ತೀರ್ಮಾನ, ನಡೆದುಕೊಳ್ಳುವ ರೀತಿ ನಿಜಕ್ಕೂ ಹೃದಯವಿದ್ರಾವಕ. ಕೊರಡ್ಕಲ್ ಶ್ರೀನಿವಾಸರಾಯರ 'ಧನಿಯರ ಸತ್ಯನಾರಾಯಣ', ನಿರಂಜನರ 'ಕೊನೆಯ ಗಿರಾಕಿ', ಕುಂ. ವೀರಭದ್ರಪ್ಪನವರ 'ದೇವರ ಹೆಣ', 'ಕತ್ತಲನು ತ್ರಿಶೂಲ ಹಿಡಿದ ಕತೆ', ಪಿ. ಲಂಕೇಶ್‌ರ 'ರೊಟ್ಟಿ', ಎ.ಸ್ ದಿವಾಕರರ 'ಕ್ರೌರ್ಯ', ಹನೂರು ಚನ್ನಪ್ಪನವರ 'ಅನ್ನ' ಮುಂತಾದ ಕತೆಗಳನ್ನು ಗಮನಿಸಿದಾಗ ಹಸಿವಿನ ಕರಾಳ ಮುಖ ಪರಿಚಯವಾಗುವುದರೊಂದಿಗೆ ಹಸಿವು ತೀವ್ರತೆಯನ್ನು ಪಡೆಯಲು ಕಾರಣವಾದ ಅಂಶಗಳನ್ನು ಕಂಡುಕೊಂಡು, ಅವುಗಳ ನಿವಾರಣೆಯತ್ತ ಗಮನ ಕೊಡಬೇಕು ಎಂಬುದು ತಿಳಿಯುತ್ತದೆ.

ಭಾರತದಲ್ಲಿ ಹಸಿವಿನ ಪ್ರಮಾಣ ಹೆಚ್ಚಾಗಲು ಪ್ರಮುಖ ಕಾರಣವೇ ಬಡತನ. ಬಡತನಕ್ಕೆ ಹಲವು ಕಾರಣಗಳಿವೆ. ಆದರೂ ಕೂಡಾ ಯಾರೊಬ್ಬರೂ ಹಸಿವಿನ ಕಾರಣಕ್ಕಾಗಿ ಬಲಿಯಾಗಬಾರದು. ಹಸಿದವನಿಗೆ ಅನ್ನ ನೀಡಲೇಬೇಕು. ಆದರೆ ಧನಿಕರ ಧನ/ಧಾನ್ಯ ಸಂಗ್ರಹದ ಮನೋಭಾವದಿಂದ ದುಡಿಯುವ ಕೈಗೆ ಕೆಲಸವೂ ಇಲ್ಲ, ಇದ್ದರೂ ತಕ್ಕ ಕೂಲಿಯಿಲ್ಲ. ಸರಿಯಾದ ಕೂಲಿ ಇಲ್ಲದೆ ಹಸಿದ ಹೊಟ್ಟೆಯ ತುಂಬುಸಿಕೊಳ್ಳುವುದಾದರೂ ಹೇಗೆ? ಅದಕ್ಕೆಂದೇ

ಬೇಂದ್ರೆಯವರು ಕೂಸುಗಳಿಗೆ ಹಾಲು ಇಲ್ಲ, ಹಣದ ಹುಚ್ಚು ಹಿಡಿದಿದೆ ಅಣ್ಣಗಳಿರಾ ಅನ್ನದಲ್ಲಿ ಮಣ್ಣು ಕಲಸಬೇಡಿರಿ, 'ಅನ್ನದಾನ' 'ಮಹಾಯಜ್ಞ' ಎಂದಿರುವುದು.

ಭಾರತೀಯ ಪಾರಂಪರಿಕ ಚರಿತ್ರೆಯಲ್ಲಿ ಹಸಿವು ಮತ್ತು ಶ್ರಮವನ್ನು ಏಕರೂಪಿಯಾಗಿ ಅರ್ಥೈಸಲಾಗುತ್ತಿದೆ. ಆದರೆ ಇವೆರಡೂ ಬಹುರೂಪಿ ನೆಲೆಗಟ್ಟಿನಲ್ಲಿ ಚರ್ಚಿಸಲು ಬಯಸುತ್ತವೆ. ಹಸಿವನ್ನು ಕೇವಲ ಒಡಲಿನ ಹಸಿವೆಂದರೆ ಅದು ಸಂಕುಚಿತ ಅರ್ಥವ್ಯಾಪ್ತಿಯನ್ನು ಪಡೆದುಕೊಳ್ಳುತ್ತದೆ. ಹಾಗೆಯೇ ಶ್ರಮವನ್ನು ದೈಹಿಕ ಶ್ರಮವೆಂದರೆ ಅದು ಕೂಡಾ ತನ್ನ ವಿಸ್ತೃತ ಆಯಾಮಗಳನ್ನು ನಿರಾಕರಿಸುತ್ತದೆ. ಈ ಹಿನ್ನೆಲೆಯಿಂದ ಹಸಿವು ಮತ್ತು ಶ್ರಮಗಳನ್ನು ಸಂಸ್ಕೃತಿಯ ಬಹುತ್ವದ ನೆಲೆಗಳಲ್ಲಿ ಅರ್ಥೈಸುವ ಅನಿವಾರ್ಯತೆ ಇದೆ ವರ್ತಮಾನದ ನೆಲೆಗಟ್ಟು ಚಾರಿತ್ರಿಕ ವಿಸ್ಮೃತಿಗಳಿಗೆ ಉತ್ತರ ಹುಡುಕುವ ಕಾತುರತೆಯನ್ನು ತೋರುವುದಾಗಿದೆ. ಭಾರತೀಯ ಬಹುಸಂಖ್ಯಾತ ಶ್ರಮ ಸಂಸ್ಕೃತಿಯ ವಕ್ತಾರರು ತಮ್ಮ ಹಸಿವನ್ನು ಲೋಕದ ಎದುರು ತೆರೆದಿಡುವಲ್ಲಿ ಕಲೆ ಮತ್ತು ಸಾಹಿತ್ಯದ ಮೊರೆ ಹೋಗಿರುವುದು ನಮ್ಮ ನಡುವೆ ಸಾಕ್ಷಿಯಾಗಿದೆ. ಹಸಿವು ಮತ್ತು ಶ್ರಮವನ್ನು ಕಲೆಯಾಗಿಸಿದ ಅವರ ಸಾಂಸ್ಕೃತಿಕ ಐಸಿರಿ ಮಹತ್ವಪೂರ್ಣವಾದುದು. ಅದಲ್ಲದೇ ಹೋಗಿದ್ದರೆ, ಅಕ್ಷರಹೀನ ವಿದ್ಯಾವಂತ ಜನಪದ ಸಮುದಾಯವು ತಮ್ಮ ಶ್ರಮದ ಶಮನಕ್ಕಾಗಿ ಹಾಡು-ಹಸ್ಸೆಗಳಿಗೆ ಮೊರೆ ಹೋಗಬೇಕಾಗಿರಲಿಲ್ಲ. ಮಾರ್ಕ್ಸ್‌ವಾದಿ ಚಿಂತನಕ್ರಮ ಕೂಡಾ ಇದನ್ನು ಬೇರೆಯಾದ ರೀತಿಯಲ್ಲಿ ಅರ್ಥೈಸುತ್ತದೆ. ಶ್ರಮವು ದೇಹವನ್ನು ಮೀರಿದ ಅಭೌತಿಕ ಮತ್ತು ದ್ವಂದ್ವಾತ್ಮಕ ಚಾರಿತ್ರಿಕ ಅರ್ಥಸಾಧ್ಯತೆಗಳನ್ನು ಬಯಸುತ್ತದೆ. ಹಾಗಾಗಿಯೇ ನಮ್ಮ ಜನಪದರು ತಮ್ಮ ಪಾಡನ್ನೇ ಹಾಡಾಗಿಸಿದ್ದಾರೆ. ಅಲ್ಲಿಂದ ಮುಂದೆ ವಚನಕಾರರು ತಮ್ಮ ಕಾಯಕ ನಿಷ್ಠೆಯನ್ನು ಎಲ್ಲಿಯೂ ರಾಜಿ ಮಾಡಿಕೊಳ್ಳದೆ ದೇವಾಲಯ ಕೇಂದ್ರಿತ ಪಟ್ಟಭದ್ರ ವ್ಯವಸ್ಥೆಗೆ ತಮ್ಮ ಅಭಿವ್ಯಕ್ತಿಗಳ ಮೂಲಕ ಮಾರುನುಡಿ ನೀಡಿದ್ದಾರೆ ಎಂದು ಹೇಳಿದ್ದಾರೆ ಸಣ್ಣರಾಮ.[೧]

ದಾಸ ಪರಂಪರೆಯ ಕನಕದಾಸ ಇದೇ ಬಗೆಯ ಚಿಂತನೆಯನ್ನು ಕೀರ್ತನೆಗಳಲ್ಲಿ ಮುಂದುವರೆಸಿದ್ದಾರೆ. ಪೌರಾಣಿಕ ಪಾತ್ರವಾದ ಏಕಲವ್ಯ ಕೂಡಾ ತನ್ನ ಜ್ಞಾನದ ಹಸಿವಿಗೆ ಪ್ರಭುತ್ವದ ವಿರುದ್ಧ ಸಂಘರ್ಷಕ್ಕಿಳಿದ ಉದಾಹರಣೆಗಳಿವೆ. ಇಷ್ಟಲ್ಲದೆ ಬಸವಣ್ಣನ ಮೂಲಕ ನಡೆದ ವಚನ ಚಳವಳಿಯ ಮೈಲುಗಲ್ಲುಗಳಿಂದ ಕೆಳವರ್ಗದ ಹಾಗು ಕಾಯಕವನ್ನೇ ನಿಷ್ಠೆ ಎಂದು ಶ್ರಮವರ್ಗದ ನೆಲೆಗಟ್ಟಿನ ರೆಮ್ಮವ್ವೆ ಮತ್ತು ಸೂಳೆ ಸಂಕವ್ವೆ ಮುಂತಾದವರು ಜ್ಞಾನಿಸಿದ್ದಾರೆ. ಸಮಕಾಲೀನ ಸಾಮಾಜಿಕ ನೆಲೆಗಟ್ಟುಗಳಿಗೆ ಪ್ರತ್ಯುತ್ತರ ನೀಡುವ ಕೆಲಸವನ್ನು ಮುಂದುವರೆಸಿದ್ದಾರೆ. ಈ ಎಲ್ಲಾ ಪರಂಪರೆಯ ಮುಂದುವರಿಕೆಗಾಗಿ ಹೊಸಗನ್ನಡದ ಮಹತ್ವಪೂರ್ಣ ಲೇಖಕರಲ್ಲಿ ಮುಖ್ಯರಾದ ನಿರಂಜನ, ಬಿ. ಟಿ. ಲಲಿತಾ ನಾಯಕ್, ಪಿ. ಲಂಕೇಶ್ ಮುಂತಾದವರು ಹಸಿವು ಮತ್ತು ಶ್ರಮ ಸಂಸ್ಕೃತಿ ಈ ಎರಡನ್ನೂ ಸಾಮಾಜಿಕ ಮೌಲ್ಯಗಳೆಂದು ಪರಿಗಣಿಸಿ ಅವುಗಳ ಪರಸ್ಪರ ಸಂಬಂಧ ಮತ್ತು ವಿರೋಧಾಭಾಸಗಳನ್ನು ತಮ್ಮ ಕಥನಗಳಲ್ಲಿ ನಿರೂಪಿಸಿದ್ದಾರೆ. ಈ ಎಲ್ಲಾ ದೃಷ್ಟಿಯಿಂದ ಒಂದು ಹೊಸ ಆಖ್ಯಾನವು ಜನಸಮುದಾಯಕ್ಕೆ ದಕ್ಕಬಹುದೆಂದು ಡಾ. ಸಣ್ಣ ರಾಮರವರು ಅಭಿಪ್ರಾಯಪಟ್ಟಿದ್ದಾರೆ.[೨]

ಹಸನಾಗಿ ಬದುಕುವಡೆ । ಕುಶಲವೆಂದೆನಿಸುವಡೆ
ಪಶುಪತಿಯ ಪದವ ಪಡೆಯುವಡೆ । ಹಸಿದವರಿಗೆ
ಅಶನವನು ಇಕ್ಕು ಸರ್ವಜ್ಞ

ಹಸಿದ ಹೊಟ್ಟೆಗೆ ಅನ್ನವನ್ನು ನೀಡುವುದೇ ನಿಜವಾದ ಮನುಷ್ಯ ಧರ್ಮ ಎಂದು ಸಾರಿದವನು ಸರ್ವಜ್ಞ.

೪.೧ ಸಾಮಾಜಿಕ ಕಾರಣದ ಹಸಿವಿನ ಕತೆಗಳು

ಭಾರತೀಪ್ರಿಯರ 'ಮೋಚಿ'

ಭಾರತೀಪ್ರಿಯ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಎಸ್. ವೆಂಕಟರಾವ್‌ರವರೇ ಮೋಚಿ ಕಥೆಯ ನಿರೂಪಕರು. ಸಮಾಜ ಸುಧಾರಣ ಮನೋಭಾವದಲ್ಲಿ ಲೇಖಕರಿದ್ದಾರೆ. ಕತೆಯ ನಾಯಕ ರಾಚ. ರಾಚ ತಾನೊಬ್ಬ ಅಸ್ಪೃಶ್ಯ, ಕೀಳು ಜಾತಿಯವನು, ಇದು ತಾನು ಒಪ್ಪಿಕೊಳ್ಳಲೇಬೇಕಾದ ಪರಮಸತ್ಯ ಎಂದು ಗಾಢವಾಗಿ ನಂಬಿದವನು. ಮೋಚಿಯನ್ನು ಈ ಸ್ಥಾನದಿಂದ ಹೊರತರಲು ಪ್ರಯತ್ನಿಸಿದರೆ ಆತನೇ ಹೊರಬರಲು ಸಿದ್ಧನಿರಲಿಲ್ಲ. ಅವನ ಮನೆಗೆ ಮೇಲ್ಜಾತಿಯವರು ಬಂದರೆ ಅವರ ಜಾತಿ ಕಲುಷಿತವಾಗುವುದರ ಬಗೆಗೆ ಮೋಚಿಗೆ ಚಿಂತೆ.

ನಿರೂಪಕರು ಮೋಚಿಯ ಬಳಿ ಹಳೆಯ ಚಪ್ಪಲಿ ಹೊಲಿಯಲು ಕೊಡುತ್ತಾರೆ. ಅದಕ್ಕೆ ಎಷ್ಟು ಹಣ ಎಂಬುದನ್ನು ಕೇಳದೆ ಮೋಚಿ ನಿರೂಪಕರು ಅರ್ಧ ಆಣೆ ನೀಡಿದ್ದನ್ನು ತೆಗೆದುಕೊಳ್ಳುತ್ತಾನೆ. ಶ್ರೀಮಂತರು ಮತ್ತು ಮೇಲ್ವರ್ಗದವರನ್ನು ಕಂಡರೆ ಅಪಾರ ಗೌರವ, ಭಯಭಕ್ತಿ. ನಿರೂಪಕರ ಹೆಂಡತಿ ಕಮಲು ಮೋಚಿಯನ್ನು ಕಂಡು ರಾತ್ರಿ ನಿದ್ದೆಯಲ್ಲೂ ಮೋಚಿಯ ಬಗ್ಗೆ ಕನವರಿಸಿದರೆಂದು ನಿರೂಪಕರಿಗೆ (ತಮ್ಮ ಪತಿಗೆ) ಹೇಳಿದಾಗ ತಾನು ಹಿಂದಿನ ದಿನ ಮೋಚಿಯನ್ನು ನೋಡಿದ ನೆನಪಾಯಿತು. ಮೋಚಿ ನೆನಪಾದ ಮೇಲೆ ರಾತ್ರಿ ನಿರೂಪಕರಿಗೆ ನಿದ್ರೆಯೇ ಬರಲಿಲ್ಲ. ಹಾಗೆ ಕಣ್ಣು ಮುಚ್ಚಿ ಮಲಗಿಕೊಂಡ ನಿರೂಪಕರಿಗೆ ಆತ 'ಬನ್ನಿ ಮಾಸ್ವಾಮಿ' ಎಂದು ಕರೆದಂತಾಯಿತು. ರಾಚ ಹಸಿವೆಯಿಂದ ಬಳಲುವ ಬಡವ, ನಾನೊಬ್ಬ ಶ್ರೀಮಂತ ಎಂಬ ಚಿಂತೆ ನಿರೂಪಕರ ಮನಸ್ಸಿನಲ್ಲಿ ಆಗ ಗಾಢವಾಗಿ ಬಂತು.

ನಿರೂಪಕರು ಮೋಚಿಯನ್ನು (ರಾಚ) ಮತ್ತೆ ಕಾಣಲು ಪ್ರಯತ್ನಿಸಿದರು. ಹೋಗುವಾಗ ಹಿಂದಿನ ದಿನ ಹೊಲಿದು ಕೊಟ್ಟ ಚಪ್ಪಲಿಯನ್ನು ಹರಿದು ಹೊಲೆಯಲು ಕೊಟ್ಟಾಗ ಆತನಿಗೆ ತಾನೇ ಹೊಲೆದು ಕೊಟ್ಟು ದಿನವಾಗಿಲ್ಲ, ಹರಿದು ಹೋದದ್ದು ಹೇಗೆ ಎಂಬುದರ ಬಗ್ಗೆ ಆಶ್ಚರ್ಯವಾಯಿತು. ತನ್ನ ಕೆಲಸ ಕಳಪೆಯಾಯಿತೇ ಎಂಬ ಅನುಮಾನ ಮೂಡಿತು. ಮತ್ತೆ ಅದೇ ಚಪ್ಪಲಿಯನ್ನು ಹೊಲೆದು ಕೊಟ್ಟ ನಂತರ ನಿರೂಪಕರು ಒಂದು ರೂಪಾಯಿ ಕೊಡಲು ಮೊದಲು ಬೇಡ ಎಂದವನು ತನ್ನ ಬೆರಗುಗಣ್ಣಿನಿಂದೊಮ್ಮೆ ನೋಡಿ ತೆಗೆದುಕೊಂಡ. ನಿರೂಪಕರು ರಾಚ ಹಸಿದ ಹೊಟ್ಟೆಯನ್ನು ತುಂಬಿಸಿಕೊಳ್ಳುವುದಕ್ಕಾಗಿ ತನ್ನ ಮೂಲ ವೃತ್ತಿಯನ್ನು ಮಾಡುತ್ತಿದ್ದರೂ ಮೋಸ ಮಾಡಬೇಕು, ಸುಳ್ಳು ಹೇಳಿ ಹಣ ಸಂಪಾದನೆ ಮಾಡಬೇಕೆಂಬ ದುರಾಸೆಯವನಾಗಿರಲಿಲ್ಲ (ಗ್ರಾಹಕರು ಕೊಟ್ಟಷ್ಟನ್ನೆ ತೆಗೆದುಕೊಂಡು ತಮ್ಮ ಸಂತೋಷ ಎನ್ನುತ್ತಿದ್ದ) (ಗ್ರಾಹಕರು ಸಂತೋಷ

ಪಡಬೇಕು, ಅವರ ಸಂತೋಷವೇ ತಮ್ಮ ಸಂತೋಷವೆಂದು ಫಲಕಗಳು ನೇತಾಡುತ್ತಿದ್ದರೂ ಅದನ್ನು ಮಾತ್ರ ಪಾಲನೆ ಮಾಡುವವರು ಎಷ್ಟು ಮಂದಿ?). ರಾಚನಂತವರು ಅಪರೂಪವೇ ಸರಿ. ರಾಚನ ಮನೆ ವಿಚಾರವನ್ನು ಕೇಳಿದ ನಿರೂಪಕರು ರಾಚನ ಮನೆ ನೋಡಲು ಬಯಸಿದರು.

ಆತನ ಹೆಂಡತಿ ಸತ್ತು ಎಷ್ಟೋ ವರ್ಷಗಳಾಗಿವೆ. ಆತ ಗುಡಿಸಲಿನ ಕಡೆ ನಡೆದಾಗ ಅವನನ್ನು ಹಿಂಬಾಲಿಸಿದರು. ಆಗ ಕತ್ತಲಾಗಿತ್ತು. ದೂರದಲ್ಲಿ ಸಣ್ಣ ಮುರುಕು ಗುಡಿಸಲನ್ನು ಕಂಡರು. ರಾಚ ಗುಡಿಸಲ ಒಳಗೆ ನಿರೂಪಕರು ಬರಬಾರದೆಂದು ಹೇಳಿದ. ತಾನು 'ಎಡಕೈನವನು', ತಮ್ಮ ಮನೆಗೆ ನೀವು ಬಂದರೆ ನಿಮ್ಮ ಜಾತಿ ಕಲುಷಿತವಾಗುತ್ತದೆಂದು ತಡೆದ. ಸಣ್ಣ ಸಣ್ಣ ಐದು ಮಕ್ಕಳ ತಂದೆಯಾದ ರಾಚ ಕಿತ್ತು ತಿನ್ನುವ ಬಡತನದ ನಡುವೆ ಹಸಿದ ಹೊಟ್ಟೆಯ ಬವಣೆ ಇದ್ದರೂ ಇದಾವುದನ್ನೂ ಲೆಕ್ಕಿಸದೆ ನಿರೂಪಕರು ಹಣ ನೀಡಲು ಮುಂದಾದಾಗ ನಿರಾಕರಿಸಿದ.

ಚಾಚುವ ಕೈಗಳೇ ಹೆಚ್ಚಿರುವಾಗ ಕೊಡುವವರು ಯಾರು? ಕೊಡಲು ಮುಂದೆ ಬಂದಾಗ ನಿರಾಕರಿಸುವವರು ಯಾರು? ಹೊಟ್ಟೆ ತುಂಬಿದವರು ಬಯಸುವ (ಬೇಡುವ) ಸಂದರ್ಭದಲ್ಲಿ ಹಸಿವಿನಿಂದ ನರಳುತ್ತಿದ್ದರೂ, ನೀಡಿದರೂ ಬೇಡ ಎನ್ನುವ ರಾಚ ಇತರರಿಗಿಂತ ಭಿನ್ನನೆನಿಸುತ್ತಾನೆ. ಮನೆಗೆ ಬಂದ ನಿರೂಪಕರು ರಾಚನ ಬಗ್ಗೆ ಚಿಂತಿಸುತ್ತಾರೆ.

ಮಾರನೆಯ ದಿನ ಕತ್ತಲಾಗುತ್ತಿದ್ದಂತೆ ನಿರೂಪಕರು ರಾಚನನ್ನು ಹುಡುಕಿಕೊಂಡು ಆತನ ಗುಡಿಸಲಕಡೆ ಹೋದರು. ಗುಡಿಸಲೊಳಗೆ ಕತ್ತಲೋ ಕತ್ತಲು, ಖಾಲಿಯಾಗಿತ್ತು. ರಾಚ ಇಲ್ಲ ಎಂದು ಹೊರಗೆ ಬಂದು ನೋಡಿದರು. ರಾಚ ಗುಡಿಸಲನ್ನು ಬಿಟ್ಟು ತನ್ನ ಮಕ್ಕಳೊಂದಿಗೆ ದೂರ ಹೋಗಿ ಬಿಟ್ಟಿದ್ದ. ರಾತ್ರಿ ಮಲಗುವ ಸಮಯದಲ್ಲಿ ಕಮಲು ಹತ್ತಿರ ಬಂದು ನಿಂತಿದ್ದಳು. ರಾಚನನ್ನು ಹಸಿವು ಮತ್ತು ಬಡತನದಿಂದ ದೂರ ಮಾಡಬೇಕೆಂದು ಬಯಸಿದ ತಮಗೆ ಅವನಿಗದು ತೊಂದರೆಯಾಗುತ್ತದೆಂದು ಅನಿಸಿರಲಿಲ್ಲ. ಹಸಿವು ಮತ್ತು ಬಡತನದ ಕರಾಳ ಬದುಕಿನ ನಡುವೆ ಬದುಕುತ್ತಿದ್ದರೂ ರಾಚ ಇನ್ನೊಬ್ಬರಿಗೆ ತೊಂದರೆ ಕೊಡದ ನಿಸ್ವಾರ್ಥ, ಸ್ವಾಭಿಮಾನಿ ಜೀವಿಯೆಂದು ನಿರೂಪಕರು ಅಂದುಕೊಂಡರು. ಎಚ್ಚರವಾದಾಗ ಕಮಲು ಮಂಚವನ್ನು ಒರಗಿ ನಿಂತು ಭಾಷ್ಪಪೂರಿತ ಆಲೋಚನೆಯಲ್ಲಿದ್ದಳು. ನಿರೂಪಕರಲ್ಲಿ ಅಸಹಾಯಕತೆಯಿತ್ತು.

ಈ ಕತೆಯ ವಸ್ತು ಹಸಿವು ಮತ್ತು ಬಡತನ. ಬಡವನ ಉದ್ಧಾರ ಮಾಡಬೇಕೆಂಬ ಕಥಾನಾಯಕ (ನಿರೂಪಕ) ತನ್ನಿಂದಾಗಿ ರಾಚ ದೂರ ಹೋದ ಎಂಬ ಚಿಂತೆ ಮಾಡುತ್ತಾನೆ. ದಲಿತರು, ಬಡವರು ತಮ್ಮ ತಮ್ಮ ವೃತ್ತಿಯಲ್ಲಿ ತಲ್ಲೀನರು, ನಿಪುಣರು. ದುಡಿದದ್ದಕ್ಕೆ ಮಾತ್ರ ಸಂಬಳ ಪಡೆಯುತ್ತಾರೆ (ಅದೂ ಕೆಲಸ ಮಾಡಿಸಿಕೊಂಡವರು ಸಂತೋಷದಿಂದ ಕೊಟ್ಟಷ್ಟನ್ನು ಮಾತ್ರ). ದುಡಿಯದೇ ತಿನ್ನುವ ಸೋಮಾರಿಗಳಲ್ಲ. ಆದರೆ ಸಾಮಾಜಿಕ ವ್ಯವಸ್ಥೆ ಅದಕ್ಕೆ ಭಿನ್ನವಾಗಿದೆ. ಮೋಚಿಯ ಎದುರು ಕಥಾನಾಯಕನ 'ಬಡವರನ್ನು ಉದ್ಧಾರ ಮಾಡಿ ಅವರ ಹಸಿವಿನ ಕೂಗನ್ನು ನಿವಾರಿಸಬೇಕೆಂಬ' ಆದರ್ಶದ ಕನಸು ಸೋಲುತ್ತದೆ. ಸಾಮಾಜಿಕ ಕಾರಣದಿಂದ ಬಡವರು ಹಸಿವಿನಿಂದ ಕಂಗೆಟ್ಟಿದ್ದರೂ ದುಡಿದು ಸ್ವಾಭಿಮಾನದಿಂದ ಬದುಕುತ್ತಿರುವುದಕ್ಕೆ ರಾಚನ ಪಾತ್ರವೇ ನಿದರ್ಶನ.

ಕುಂ. ವೀ. ಯವರ 'ಕಿವುಡ ನಾಯಿಯಾದ ಪ್ರಸಂಗ'

ಬಂಡಾಯ ಸಾಹಿತ್ಯ ಸಂಘಟನೆಯ ಕ್ರಿಯಾಶೀಲ ಲೇಖಕರಲ್ಲಿ ಇವರು ಒಬ್ಬರು. ಸಮಾಜದಲ್ಲಿನ ಕ್ರೌರ್ಯ, ದಲಿತವರ್ಗದ ನೋವು-ನಲಿವುಗಳು, ಹಸಿವು ಮೊದಲಾದವುಗಳನ್ನು ತಮ್ಮ ಸಾಹಿತ್ಯಕ್ಕೆ ವಸ್ತುವಾಗಿಸಿಕೊಂಡ ಇವರು ಸಾಮಾಜಿಕ ಸಮಾನತೆಯನ್ನು ಹೊಂದಬೇಕೆಂಬ ಸಮಾಜವಾದಿ ನೆಲೆಯನ್ನು ತಮ್ಮ ಕೃತಿಗಳ ಮುಖಾಂತರ ಬಿಂಬಿಸುವ ಪ್ರಯತ್ನವನ್ನು ಮಾಡಿದ್ದಾರೆ.

'ಕಿವುಡ ನಾಯಿಯಾದ ಪ್ರಸಂಗ' ಇದೊಂದು ಹೃದಯ ವಿದ್ರಾವಕ ಘಟನೆಯುಳ್ಳ ಕಥೆ. ಮನುಷ್ಯನನ್ನು ದಾರುಣ ಸ್ಥಿತಿಗೆ ತಳ್ಳಬಲ್ಲ ಬಡತನ, ಹಸಿವು, ನಿರಾಸೆ, ಅದಕ್ಕಂಟಿಕೊಂಡೇ ಇರುವ ಕ್ರೂರ ಜಾತಿ ಪದ್ಧತಿ ಹೇಗೆ ತಳ ಸಮುದಾಯವನ್ನು ಶೋಷಣೆಗೊಳಪಡಿಸುತ್ತದೆ ಎನ್ನುವುದನ್ನು ಚಿತ್ರಿಸುತ್ತಾ ಈ ಕೌರ್ಯ ನಾಶವಾಗಬೇಕು, ಹಸಿದ ಹೊಟ್ಟೆಗೆ ಅನ್ನ ಸಿಗಬೇಕು ಎಂಬ ಆಶಯವನ್ನು ಕಥೆಗಾರರು ಧ್ವನಿಸಿದ್ದಾರೆ.

ಅಂಗಡಿ ಅಜ್ಜಪ್ಪನ ಹನ್ನೆರಡು ವರ್ಷದ ಈರಮ್ಮ ಎಂಬ ಹೆಸರಿನ ಹುಡುಗಿ ಸತ್ತಿರೋ ಸುದ್ದಿ ಕೇಳಿ ಮಾದಿಗರ ಕಿವುಡಗೆ ಎಷ್ಟು ಸಂತೋಷವಾಯಿತೆಂದರೆ, ತನ್ನ ಐವತ್ತು ವರ್ಷದ ಆಯುಷ್ಯದಲ್ಲಿ ಅಷ್ಟೊಂದು ಸಂತೋಷದಿಂದ ಆತ ಎಂದೂ ಕಂಪಿಸಿರಲಿಲ್ಲ. ಚಾದಂಗಡಿಯಲ್ಲಿ ದಿನಕ್ಕೆರಡು ಬಾರಿ ಚಾ ಕುಡಿದೂ ಅವರಿವರು ಕೊಟ್ಟ ಚೂರುಪಾರು ಬೀಡಿ ಸೇದಿ ಎರಡು ದಿನದಿಂದ ಒಂದಗುಳು ಅನ್ನವಿಲ್ಲದೆ ಹಾಗೆ ಇದ್ದ. ಅವನ ಹಟ್ಟಿಯಲ್ಲಿಯೂ ಅಷ್ಟೇ. ಅವನು ತಂದು ಹಾಕಿರಲಿಲ್ಲ. ಅವನ ಹೆಂಡತಿ ಬೇಯಿಸಿ ಹಾಕಿರಲಿಲ್ಲ. ಆತನ ನಾಲ್ಕು ಮಕ್ಕಳು ಹಸಿವೆಯಿಂದ ಅತ್ತೂ ಅತ್ತೂ ಸುಸ್ತಾಗಿ ಗುಡಿಸಲಲ್ಲಿ ಅಲ್ಲೊಂದು ಇಲ್ಲೊಂದು ಬಿದ್ದುಕೊಂಡಿದ್ದವು. 'ಉಂಬಾಕೆ' ಎಂಬ ಶಬ್ದ ಬಿಟ್ಟು ಅವರ ಬಾಯಿಂದ ಬೇರೊಂದು ಶಬ್ದ ಹೊರಡುತ್ತಿರಲಿಲ್ಲ. ಹಸಿದು ಅಸಹಾಯಕತೆಯಿಂದ, ಸಿಟ್ಟಿನಿಂದ ಕೂಗಾಡುತ್ತಿದ್ದ ಹೆಂಡತಿಯ ನಾಲ್ಕೈದು ಪ್ರಶ್ನೆಗಳಿಗೆ ಉತ್ತರ ಕೊಡಲಾಗದೆ ಕಿವುಡ ಮುಂಜಾನೆ ಹಟ್ಟಿ ಬಿಟ್ಟವನು ಹೊತ್ತು ನೆತ್ತಿ ಮೇಲೆ ಏರಿದ್ದರೂ ಕೇರಿಯ ಕಡೆ ತಿರುಗಿ ನೋಡಿರಲಿಲ್ಲ. ಕಿವುಡ ಎಂದೂ ಯಾರೂ ಹಾಕಿದ ಗೆರೆ ದಾಟಿದವನಲ್ಲ. ನಂಬಿಕೆಯ ವಿಷಯದಲ್ಲಿ ಕೆಲವರು ಅವನನ್ನು ನಾಯಿಗೆ ಹೋಲಿಸುತ್ತಿದ್ದರು. ಅದನ್ನು ಕೇಳಿದಾಗಲೆಲ್ಲಾ ಕಿವುಡ ನಾಯಿಗಿರುವ ಸವಲತ್ತು ತನಗಿಲ್ಲವಲ್ಲ ಅಂತ ಮುಖ ಸಪ್ಪಗೆ ಮಾಡಿಕೊಳ್ಳದೇ ಇರುತ್ತಿರಲಿಲ್ಲ. ಅದು ಆಷಾಢದ ಗಾಳಿ ಕಾಲವಾದ್ದರಿಂದ ಮೈಮುರಿದು ದುಡಿಯಲು ಬದುಕು ಕಡಿಮೆ. ಸ್ಥಿತಿವಂತರು ಕಟ್ಟೆಯಲ್ಲಿ ಕೂತುಕೊಳ್ಳುವರು. ಹೊಟ್ಟೆ ತುಂಬಾ ಉಂಡು, ಉಂಡ ಅನ್ನವನ್ನು ಅರಗಿಸಿಕೊಳ್ಳುವುದಕ್ಕೆ ಕಟ್ಟೆಯಲ್ಲಿ ಕೂತು ಮಾತಾಡಿ ಮಾತಾಡಿ ಕಾಲ ಕಳೆಯುವರು. ಆದರೆ ಕಿವುಡನಂತವರು ದಿನಕ್ಕೊಂದು ಬಾರಿಯಾದರೂ ಉಂಡರೆ ಅದು ಅವರ ಪುಣ್ಯ. ಹೊಟ್ಟೆ ತುಂಬಾ ಉಣ್ಣಬೇಕೆಂದರೆ, ಹಣ ಕೊಟ್ಟವರಿಗೆ ವಾಪಾಸು ಕೊಡಬೇಕೆಂದರೆ ಊರಲ್ಲಿ ಯಾರಾದರೂ ಅಥವಾ ಎತ್ತೋ ಎಮ್ಮೆಯೋ ಸಾಯಬೇಕು. ಅಂಥ ದೊಡ್ಡ ಜೀವ ಯಾವುದೂ ಇತ್ತೀಚೆಗೆ ಹೋಗಿರಲಿಲ್ಲ. ಇಂಥ ಪರಿಸ್ಥಿತಿಯಲ್ಲಿ ಅಂಗಡಿ ಅಜ್ಜಪ್ಪನ ಮಗಳು ಹೋದ ಸುದ್ದಿ ಕಿವಿಗೆ ಬಿದ್ದಾಗ ಕಿವುಡನಿಗೆ ನಿಜಕ್ಕೂ ಸಂತೋಷವಾಯಿತು.

ಕಿವುಡ ಹಟ್ಟಿ ಕಡೆ ಬಂದಾಗ ಹೆಂಡ್ತಿ ಕಂಚವ್ವ ಜೋಳದ ಕಾಳನ್ನು ಉದ್ದಿ ಕೊಡುತ್ತಿದ್ದಳು. ಮಕ್ಕಳು ಒಂದೇ ಸಮನೆ ಮುಕ್ಕುತ್ತಿದ್ದವು. ತಾನು ಒಂದು ಹಿಡಿ ಮೊರದಿಂದ ತಗೊಂಡು ಬಾಯಿಗೆ ಹಾಕಿಕೊಂಡಾಗ ಕೆಂಚಿ 'ನಿನ್ನ ನೆಚ್ಚಿಕೊಂಡ್ರೆ ಉಂಡಂಗೆ ನೋಡು' ಅಂತಾ ಮೌನ ಮುರಿದಾಗ, 'ಅಂಗಡಿ ಅಜ್ಜಪ್ಪನವರ ಮಗ್ಳು ಒಂಟೋದ್ಳಂತೆ, ಒತ್ತಳಿಯತ್ಲೆ ನಾಕು ಸಿಗಬವ್ದು' ಎಂದ. 'ಅಯ್ಯೋ ಪಾಪ' ಎಂದು ಮೂಕಿಯಂತೆ ಜೋಳದ ತೆನೆ ಉಜ್ಜತೊಡಗಿದಳು. 'ಜೋಳದ ತೆನೆ ಸಿಗದಿದ್ರ ತ್ರಾಸಿತ್ತು' ಅಂದ್ಲು. ಹಟ್ಟಿಯ ಹತ್ತಿರ ಯಾರೂ ಬಂದಿಲ್ಲಾ ಎಂಬುದನ್ನು ತಿಳಿದುಕೊಂಡ ಕಿವುಡ ಹೊರನಡೆದ.

ಅಜ್ಜಪ್ಪನ ಮನೆಮುಂದೆ ಜನ ತುಂಬಿದ್ದರು. ಈರಮ್ಮನನ್ನು ಸಾವು ನುಂಗಿದ ಪ್ರಕರಣವನ್ನು ಯಾರೂ ಕಿವುಡನಿಗೆ ವಿವರಿಸುವ ದೊಡ್ಡಸ್ತಿಕೆ ವಹಿಸಲಿಲ್ಲ. ಹೆಣ್ಣು ಮಕ್ಕಳು ಈರಮ್ಮನ ಬಾಲಲೀಲೆಗಳನ್ನು ವರ್ಣಿಸುತ್ತಾ ಅತ್ತೂ ಅತ್ತೂ ಹೊರಬರುತಿದ್ದರು. ಬೀಡಿ ಸೇದುವುದಾದ ಮೇಲೆ ಕಿವುಡ ಎಲ್ಲರಿಗೂ ಕೇಳಿಸುವಂತೆ ನಿಟ್ಟುಸಿರು ಬಿಟ್ಟು ಮಾದಿಗನಾದ ತನಗೂ ಕರುಳಿದೆ ಎಂದು ಸಾಬೀತುಪಡಿಸಿದ. ಗುದ್ದು ತೋಡಲು ಯಾರೂ ಆದೇಶ ಮಾಡಿಲ್ಲವಲ್ಲಾ ಎಂದು ಚಡಪಡಿಸಿದ. ಅಷ್ಟರಲ್ಲೇ ಹುಸೇನು ಸಾಬಿಯನ್ನು ಕಾಣುತ್ತಲೇ ಕಿವುಡ ಹದ್ದನ್ನು ಕಂಡ ಹಾವಿನಂತೆ ಕಲ್ಲು ಮರೆಗೆ ಅಡಗಿದ. ಈ ಹಿಂದೆ ಅವನು ಸಾಬಿಯ ಹತ್ತಿರ ಐದಕ್ಕೆ ಹತ್ತು ರೂಪಾಯಿ ಎಂದು ಮಾತಾಡಿ, ಐದು ಇಸಿದುಕೊಂಡು ಬಂದಿದ್ದೇ ಈ ಹೆದರಿಕೆಗೆ ಕಾರಣ. ತೊಗಲು ಕೊಡುತ್ತೇನೆಂದು ಹೇಳಿ ತಿಂಗಳಾದರೂ ತೊಗಲೂ ಇಲ್ಲ, ಹಣವೂ ಇಲ್ಲ. ಕೇವಲ ನೂರಿನ್ನೂರು ಬಂಡವಾಳದೊಡನೆ ಊರಿಗೆ ಬಂದು ಕನಿಷ್ಠ ಅಂದರೂ ನಲ್ವತ್ತೈದು ಐವತ್ತು ಸಾವಿರದ ಗಟ್ಟಿ ಕುಳವಾಗಿರುವ ಸಾಬಿಗೆ ತನ್ನ ಬಳಿ ಸಾಲ ಪಡೆದ ಗಿರಾಕಿಗಳು ಎಲ್ಲೆಲ್ಲಿ ಇರುತ್ತಾರೆಂದು ಚೆನ್ನಾಗಿ ಗೊತ್ತಿತ್ತು. ಕಿವುಡನ ಹತ್ತಿರ ಬಂದು 'ಏನ್ಲೇ ಕಿವುಡ, ತೊಗ್ಲು ಬರ್ಲಿಲ್ಲ, ರೊಕ್ಕಾನೂ ಬರ್ಲಿಲ್ಲ' ಅಂದ. ಅದಕ್ಕೆ ಕಿವುಡ ತಲೆ ಕೆರೆಯುತ್ತಾ 'ಎಲ್ಲೈತೆ ಧಣೇರ, ಒಟ್ಟೆಗೆ ಜೋಡ್ನೋದೇ ಕಸ್ಟ ಐತಿ' ಎಂದ. ಅದಕ್ಕೆ ಸಾಬಿ ಹೆಣ ಸಾಗಿಸಿದ ಮೇಲೆ ಬರುತೈತಲ್ಲಾ ರೊಕ್ಕ ಅದನ್ನು ಕೊಡಬೇಕು' ಎಂದು ಹೇಳಿ ಹೋದ.

ಬರೋ ನಾಕೈದು ರೂಪಾಯನ್ನು ಸಾಬಿಯ ಕೈಗಿಟ್ಟರೆ ಹಟ್ಟಿಯಲ್ಲಿ ಉಪವಾಸ ಬಿದ್ದಿರೋ ಮಕ್ಕಳ ಗತಿ ಏನೆಂದು ಚಿಂತಿಸಿದ. ಮೂರು ಗಂಟೆಯ ಬಸ್ಸು ನೋಡಿ ಹೆಣ ಎತ್ತೋಣ ಎಂದು ಎಲ್ಲರೂ ಒಮ್ಮತದಿಂದ ನಿರ್ಧರಿಸಿದರು. ಒಬ್ಬ ಬಂದು ಗುದ್ದು ತೋಡಲು ಕಿವುಡಗೆ ಹೇಳಿಯೇ ಬಿಟ್ಟ. ಅವನು (ಕಿವುಡ) ಹಲ್ಲು ಗಿಂಜಿದ್ದನ್ನು ನೋಡಿ ಬೆಂಕಿ ಪಟ್ಟಕ್ಕೆ ಅಂತ ಒಂದು ರೂಪಾಯನ್ನು ಮುಂದೆ ಎಸೆದು, ಗಟ್ಟಿ ನೆಲದಲ್ಲಿ ಗುದ್ದು ತೋಡಬೇಕು ಎಂದಾಗ ಆ ಒಂದು ರೂಪಾಯನ್ನು ಸೊಂಟದಲ್ಲಿ ಸಿಕ್ಕಿಸಿಕೊಳ್ತಾ 'ಆಗ್ಲೀರಿ ಎಪ್ಪಾ' ಎಂದು ಹೆಣ ಎಷ್ಟುದ್ದ ಇರಬಹುದೆಂದು ಎಗರಿ ಎಗರಿ ನೋಡಿದ. ನೋಡಿದ್ದಾಗಿ ತೃಪ್ತಿಗೊಂಡು ಅಂಗಳ ದಾಟಿದ. ರೂಪಾಯಿ ನೋಟನ್ನು ಯಾರಾದರು ಸಾಲ ಕೊಟ್ಟೋರು ನೋಡಿದರೆ ಕಸಿದುಕೊಂಡಾರೆಂದು ಹೆದರಿ ಕಿವುಡ ಬಳಸುದಾರಿ ಹಿಡಿದ.

ಹಟ್ಟಿಗೆ ಸೇರುವ ಮೊದಲು ಬೋಂಡಾ ಸಿದ್ದಪ್ಪನ ಚಾದಂಗಡಿಯಲ್ಲಿ ತಿಂಡಿ ತಿಂದು, ಒಂದು ಚಿಪ್ಪಿ ಬೆಲ್ಲದ ಚಾ ಕುಡಿದು, ಸೊಂಟದಿಂದ ರೂಪಾಯಿ ನೋಟು ತೆಗೆದು ತಿಂಡಿಯನ್ನು

'ಕಟ್ಕೊಡ್ರಿ' ಅಂದ. ಅಷ್ಟು ಖರ್ಚು ಮಾಡಿ ಉಳಿದ ಹತ್ತು ಪೈಸೆಯ ದೊಡ್ಡ ನಂಬರ್ ಬೀಡಿ ಕೊಂಡುಕೊಂಡು ಕೇರಿಯ ಕಡೆ ಹೆಜ್ಜೆ ಹಾಕಿದ. ಹಟ್ಟಿಯೊಳಗೆ ಕಾಲಿಟ್ಟಾಗ ಹುಡುಗರು ಹಸಿದು ರೊಚ್ಚಿಗೆದ್ದಿದ್ದವು. ಕೆಂಚವ್ವ ಗೋಡೆಗೊರಗಿ ಕೂತು ಆಕಳಿಸುತ್ತಿದ್ದಳು. ತಂದೆಯ ಕೈಯಲ್ಲಿದ್ದ ತಿಂಡಿ ಪೊಟ್ಟಣದ ವಾಸನೆಯನ್ನು ಕಂಡು ಓಡಿದು 'ಎಪ್ಪಾ, ಎಪ್ಪಾ ನಂಗೇ, ನಂಗೇ" ಅಂತ ಮುತ್ತಿದವು. ಅವಕ್ಕೆಲ್ಲಾ ಹಂಚಲು ಹೇಳಿ ಪೊಟ್ಟಣವನ್ನು ಹೆಂಡ್ತಿಯ ಕೈಗಿಟ್ಟು ಹಟ್ಟೀಲಿ ಗುದ್ದಲಿ, ಸಲಿಕೆ, ಪುಟ್ಟಿಯನ್ನು ಇಸಿದುಕೊಂಡು ಊರ ಸ್ಮಶಾನದ ಕಡೆಗೆ ಹೆಜ್ಜೆ ಹಾಕಿದ. ನಾಕು ಕಡೆ ನೋಡಿ ಗಟ್ಟಿಜಾಗವೆಂದು ಖಾತ್ರಿ ಮಾಡಿ ಗುದ್ದಲಿಯಿಂದ ನೆಲ ಮೀಟತೊಡಗಿದ. ಸಾಕು ಸಾಕಾಗಿ ಹೋಯಿತು. ದಂ ಆರಿಸಿಕೊಳ್ಳಲು ಸಮಯವೇ ಇಲ್ಲ. ಮಣ್ಣೆಲ್ಲಾ ತೆಗೆದ ಮೇಲೆ ತಲೆ ಇಡಲಿಕ್ಕೂ ಗೂಡು ಮಾಡಿದ. ಕುಣಿ ತೋಡುವಲ್ಲಿ ತನ್ನನ್ನು ಮೀರಿಸಿರೋರು ಇಡೀ ಕೇರಿಯಲ್ಲಿ ಯಾರಿದ್ದಾರೆ ಎಂದು ಹೆಮ್ಮೆಯಿಂದ ಬೀಗಿದ ಕಿವುಡ.

ಸ್ವಲ್ಪ ಹೊತ್ತಿನಲ್ಲಿ ಜನರ ಗುಂಪು ಹೆಣವನ್ನು ಹೊತ್ತ ನಾಲ್ವರ ಹಿಂದೆ ಮುಂದೆ ಕಾಣಿಸಿಕೊಂಡಿತು. ಹೆಣವನ್ನು ಕುಣಿಯೊಳಕ್ಕೆ ಮಲಗಿಸಿ ಅದರ ಕಾಲುಬುಡಕ್ಕೆ ಎರಡು ತೆಂಗಿನಕಾಯಿಗಳನ್ನು ಇಟ್ಟರು. ಮಣ್ಣು ಹಾಕಲು ಸೂಚಿಸಿದಾಗ ಆಕ್ರಂದನ ಗಟ್ಟಿ ಸ್ವರದಲ್ಲಿ ಸ್ಫೋಟಿಸಿತು. ಎಲ್ಲರೂ ಐದೈದು ಬೊಗಸೆ ಮಣ್ಣು ಹಾಕಿದ ಮೇಲೆ ಕಿವುಡ ಸಲಿಕೆಯಿಂದ ಮಣ್ಣು ಎಳೆದು ಕುಣಿ ತುಂಬಿಸಿದ. ನೆಲದ ಮೇಲೆ ಬುಗುಟೆಯಾಕಾರದ ದಿಬ್ಬ ಮೂಡಿತ್ತು. ನಾಯಿ-ನರಿ ಕೆದರದಂತೆ ಕಲ್ಲುಗುಂಡು ಉರುಳಿಸಿಕೊಂಡು ಬಂದು ಇಟ್ಟ. ನಂತರ ಕಿವುಡ ಮೂರು, ನಾಕು, ಐದು ಅಂತ ಮನಸ್ಸಿನಲ್ಲಿಯೇ ಲೆಕ್ಕ ಹಾಕುತ್ತಾ ಅಜ್ಜಪ್ಪನೆದುರು ನಿಂತಾಗ ಆತ ತೇವಗೊಂಡಿದ್ದ ಕಣ್ಣೊರೆಸಿಕೊಂಡು ಜೇಬಿನಿಂದ ಐದರ ಹಸಿರು ನೋಟಿನ ಜೊತೆಗೆ ಎರಡರ ಕೆಂಪು ನೋಟನ್ನು ಹಾಕಿದ.

ಅಂದುಕೊಂಡಿದ್ದಕ್ಕಿಂತ ಜಾಸ್ತಿಯೇ ಬೊಗಸೆಗೆ ಬಿದ್ದಿತ್ತು. 'ಸಲಿಕೆ, ಗುದ್ಲಿ, ಪೂಜೇದು ನಾಕೈದಾಣೆ ಕ್ವಡ್ರಿ ಧಣಿ' ಅಂತ ಕಿವುಡ ಕೇಳಿದೊಡನೆ ಮತ್ತೊಂದು ರೂಪಾಯಿ ನೋಟು ಅಜ್ಜಪ್ಪನ ಜೇಬಿನಿಂದ ಬೊಗುಸೆಗೆ ಬಿತ್ತು. ಎಲ್ಲರೂ ಹೊರಟು ಹೋದ ಮೇಲೆ ಆಖೈರಾಗಿ ಉಳಿದವನೆಂದರೆ ಕಿವುಡ ಮಾತ್ರ. ನಾಕೈದು ಬಾರಿ ನೋಟುಗಳನ್ನು ಪದೇ ಪದೇ ಎಣಿಸಿಕೊಂಡ. ಸೊಂಟದಲ್ಲಿ ಸಿಗಿಸಿಕೊಳ್ಳಲು ಮನಸ್ಸು ಬರಲಿಲ್ಲ. ಎಲ್ಲಿಯಾದರೂ ಉದುರಿ ಹೋದರೆ ಎಂಬ ಭಯ. ಮುಷ್ಠಿಯಲ್ಲೇ ಹಿಡಿದುಕೊಂಡು ಸಲಿಕೆ, ಗುದ್ದಲಿ, ಪುಟ್ಟಿಯೊಡನೆ ಅಲ್ಲಿಂದ ಊರಕಡೆ ಮುಖ ಮಾಡಿದ.

ಕೈಯಲ್ಲಿ ಕಾಸಿದ್ದರೆ ಮೈಗೆ ಆನೆ ಬಲ. ಒಂದು ಗ್ಲಾಸು ಕುಡಿದು ಜೀವ ತಂಪು ಮಾಡಿಕೊಳ್ಳಬೇಕೆಂದು ನಿರ್ಧರಿಸಿದ. ಇಷ್ಟರಲ್ಲಿ ಮೂರು ದಿನ ಹೇಗೂ ದಬ್ಬಬಹುದೆಂದು ಲೆಕ್ಕ ಹಾಕುತ್ತಾ ಕರಗಲ್ಲು ದಾಟಿದ್ದ. ಜೋಳ ಯಾವ ಅಂಗಡಿಯಲ್ಲಿ ಕೊಂಡುಕೊಳ್ಳುವುದು ಎಂಬ ಯೋಚನೆ ಮೂಡಿದಾಗ ಶಿವಶಂಕ್ರಪ್ಪನ ಅಂಗಡಿಯೇ ವಾಸಿ ಎಂದು ನಿರ್ಧರಿಸಿದ. ಜಲ್ದಿ ಜೋಳ ಒಯ್ದು ಕೊಟ್ಟರೆ ಅವನ್ನು ಬೀಸಿ ಕಾಸ್ತಾಳು ಅಂತ ಅಂಗಡಿ ಕಡೆ ನಡೆದ. ಇನ್ನೇನು ಅವನು ಲೈಟು ಕಂಬ ದಾಟುವಷ್ಟರಲ್ಲಿ ಎಲ್ಲಿಂದಲೋ ಏನೋ ಹುಸೇನ್ ಸಾಬಿ ಧುತ್ತನೆ ಪ್ರತ್ಯಕ್ಷನಾದ. ಅವನನ್ನು ನೋಡುತ್ತಲೇ ಜೀವವೇ ಅರಗಳಿಗೆ ಹೋಯಿತು. "ಇಲ್ಕೊಡು, ಇಲ್ಕೊಡು" ಅಂತ

ಸಾಬಿಯೇ ಮುಂದೆ ಬಿದ್ದು ಕಿವುಡನ ಮುಷ್ಠಿಯಲ್ಲಿದ್ದ ಕಾಸು ಕಿತ್ತುಕೊಂಡು ಎಣಿಸಿ ಜೇಬಿನಲ್ಲಿರಿಸಿಕೊಂಡು "ಇನ್ನಾರು ಬರ್ಬೇಕು ಕಿವುಡ, ಎಲ್ಡು ದಿನಗಳಲ್ಲಿ ಚುಕ್ತಾ ಮಾಡಿ ಬಿಡು" ಎಂದು ಹೇಳುತ್ತಾ ಅಲ್ಲಿಂದ ಕದಲಿದ ಸಾಬಿ. ಅದುವರೆಗೆ ಜೀವ ಕಳೆದುಕೊಂಡವನಂತೆ ನಿಂತಿದ್ದ ಕಿವುಡನ ಕಣ್ಣೀರು ದಳದಳ ಸುರಿದು ವಲ್ಲಿ ತೋಯಿಸಿತು.

ಏನು ಮಾಡಬೇಕೆಂದು ದಿಕ್ಕೇ ತೋಚದೆ, ಹಸಿದು ಕಂಗಾಲಾಗಿರುವ ಹುಡುಗರಿಗೆ ಏನು ಕೊಡುವುದು? ಇವತ್ತೇನಾದರೂ ಅವುಗಳ ಹೊಟ್ಟೆಗೆ ಬೀಳದಿದ್ದರೆ ಏನು ಗತಿ ಎಂದು ಭಯದಿಂದ ಕಂಪಿಸಿದ. ಇದ್ದಕ್ಕಿದಂತೆ ಅವನಿಗೆ ಹೊಳೆಯಿತು. ಎಲ್ಲಾ ಪಾಪ-ಪುಣ್ಯ ಕರ್ಮಕ್ಕಿಂತ ದೊಡ್ಡದು ಹೊಟ್ಟೆ. ಬಂದ ದಾರಿಯಲ್ಲೇ ಮರಳಿ ನಡೆದು ಸುಡುಗಾಡು ಮುಟ್ಟಿದ. ಸುತ್ತ ಕತ್ತಲು. ಆ ಕ್ಷಣ ದೆವ್ವವಾಗಿದ್ದ ಕಿವುಡ. ನಾಯಿಗಿಂತ ಮೊದಲು ಅವನು ಅದೇ ತಾನೇ ಅವನೇ ಮುಚ್ಚಿದ್ದ ಗುದ್ದಿನ ಮೇಲೆ ಸಲಿಕೆಯಿಂದ ಮಣ್ಣು ತೆಗೆದ. ಕ್ಷಣ ಮಾತ್ರದಲ್ಲಿ ಕುಣಿ ಖಾಲಿಯಾಯಿತು. ಕಡ್ಡಿ ಗೀರಿ ನೋಡಿದ. ಅವನಿಗೆ ಸ್ವಲ್ಪ ಭಯವಾಯಿತು. ಹೆಣದ ಕಾಲ ಬುಡದಲ್ಲಿದ್ದ ಎರಡು ತೆಂಗಿನ ಕಾಯಿಗಳಿಗೆ ತನ್ನೆರಡು ಕೈಗಳನ್ನು ಚಾಚಿದ. ಇದನ್ನು ಬಿಟ್ಟರೆ ಕಿವುಡನಿಗೆ ಬೇರೆ ಮಾರ್ಗವಿರಲಿಲ್ಲ. ಹಸಿದ ಹೊಟ್ಟೆಗಾಗಿ ಕಿವುಡ ನಾಯಿಯೇ ಆಗಬೇಕಾದ ಸಂದರ್ಭ ಕರುಳು ಮಿಡಿಯುವಂಥದ್ದು. ಸಾಮಾಜಿಕ ವ್ಯವಸ್ಥೆ ಕೆಳವರ್ಗದವರು ಮೈಮುರಿದು ದುಡಿದರೂ ಅವರ ಹೊಟ್ಟೆ ತುಂಬದಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದೆ.

ಆರ್. ವಿ. ಭಂಡಾರಿಯವರ 'ಅಂಗಡಿ ಪೂಜೆ'

ಡಾ. ರೋಹಿದಾಸ್ ವಿಠ್ಠಲ ಭಂಡಾರಿಯವರ 'ಬಂಡಾಯದ ಕತೆಗಳು' ಕೃತಿಯಿಂದ ಆರಿಸಿದ ಕತೆಯೇ 'ಅಂಗಡಿ ಪೂಜೆ'.

ಅಂಗಡಿ ಪೂಜೆ ಕತೆಯು ಸಾಮಾಜಿಕ ಅಸಮತೋಲನವನ್ನು ತೆರೆದಿಟ್ಟಿದೆ. ಸಮಾಜದಲ್ಲಿ ಮೇಲ್ಜಾತಿ ಮತ್ತು ಕೆಳಜಾತಿಗಳ ನಡುವಿನ ಅಂತರ ಎದ್ದು ತೋರುತ್ತದೆ. ಆದರೆ ಕೆಳಜಾತಿಯವರನ್ನು ಕುರಿತ ಮೇಲ್ಜಾತಿಯವರ ದೃಷ್ಟಿಕೋನವನ್ನು ಕೆಳಜಾತಿಯ ಶಂಕ್ರ ಒಪ್ಪಲಾರ. 'ಅಂಗಡಿ ಪೂಜೆ'ಯಲ್ಲಿ ಮೇಲ್ಜಾತಿಯ ಮಾಣಿಗಳಿಗೆ (ಬ್ರಾಹ್ಮಣ ಮಕ್ಕಳಿಗೆ) ಮೊದಲು ತಿಂಡಿ ನೀಡುವರು. ಶೂದ್ರ ಹುಡುಗರಿಗೆ ಆಮೇಲೆ ನೀಡುವರು. ತನ್ನ ಅಣ್ಣನ ಮಗ ಬ್ರಾಹ್ಮಣ ಮಾಣಿಗಳು ಸಿಹಿ ತಿನ್ನುವುದನ್ನು ನೋಡುತ್ತಿದ್ದಾನೆ. ಇದನ್ನು ಕಂಡ ಶಂಕ್ರನಿಗೆ ಸಿಟ್ಟು ಬರುತ್ತದೆ. ಬ್ರಾಹ್ಮಣ ಹೆಂಗಸರೂ ಆ ಹುಡುಗನಿಗೆ ಮೊದಲು ಸಿಹಿ ನೀಡಬಹುದಿತ್ತೆಂದರೂ ನೀಡುವ ಮನಸ್ಸು ಮಾಡುವುದಿಲ್ಲ. ಶಂಕ್ರ ಕೋಪಿಸಿಕೊಂಡು ಅನಿವಾರ್ಯ ಸಂದರ್ಭ ಎದುರಾಗಿ ಹೆಗ್ಡೆಯವರಿಂದ ಸಾಲ ಕೇಳಿದಾಗ, ಅವರು ಹಣವನ್ನು ನಿನಗೆ ಅನುಕೂಲವಾದಾಗ ಕೊಡು ಎಂದಾಗ ಕೋಪ ಆರಿ ಹೋಗುವುದು. ಒಂದು ಕಡೆ ಜಾತಿ-ಧರ್ಮ, ಇನ್ನೊಂದು ಕಡೆ ಅದನ್ನೂ ಮೀರಿ ಮಾನವ ಸಹಜ ಪ್ರೀತಿ. ಮಾನವ ಸಹಜ ಪ್ರೀತಿಯೇ ಮೆರೆಯುವಂತಾಗಬೇಕು ಎಂಬ ಆಶಯವನ್ನು ಹೊಂದಿರುವ ಕತೆ 'ಅಂಗಡಿ ಪೂಜೆ'.

'ಅಂಗಡಿ ಪೂಜೆ'ಯ ಕಥಾನಾಯಕ ಶಂಕ್ರು. ಈತ ತನ್ನ ಅಣ್ಣನ ಮಗನನ್ನು ತುಂಬಾ ಹಚ್ಚಿಕೊಂಡಿರುತ್ತಾನೆ. ಅಣ್ಣನ ಮಗ ಪಾಪು ಹೆಗ್ಡೆಯವರ ಅಂಗಡಿ ಪೂಜೆಗೆ ಮಕ್ಕಳೊಂದಿಗೆ

ಹೋಗಿದ್ದಾನೆ. ಅದನ್ನು ಶಂಕ್ರು ಅತ್ತಿಗೆಯಲ್ಲಿ ಪ್ರಶ್ನಿಸುತ್ತಾನೆ. ಪಾಪು ಏಕಾದರೂ ಅಂಗಡಿ ಪೂಜೆಗೆ ಹೋದನೆಂದು? ಸ್ವಲ್ಪ ವಿಶ್ರಾಂತಿಗಾಗಿ ಮನೆಯ ಹಿತ್ತಿಲಿಗೆ ಹೋದಾಗ ಮರದಲ್ಲಿ ಹಣ್ಣುಗಳನ್ನು ತಿನ್ನುವ ಹಕ್ಕಿಗಳ ಚಂದ, ಹಕ್ಕಿಗಳಿಗೆ ಹಾರಾಡುವ ಸ್ವಾತಂತ್ರ್ಯದ ಕಲ್ಪನಾಲೋಕದಲ್ಲಿ ವಿಹರಿಸುತ್ತಾನೆ.

ಅಂಗಡಿ ಪೂಜೆಗೆ ಮಕ್ಕಳೊಂದಿಗೆ ಹೋಗಿರುವ ಅಣ್ಣನ ಮಗ ಪಾಪುವನ್ನು ಕರೆದುಕೊಂಡು ಬರಲು ಮತ್ತು ಹೆಗ್ಡೆಯವರು ಪ್ರೀತಿಯಿಂದ ಪೂಜೆಗೆ ಬರಲು ಕರೆದಿರುವುದಕ್ಕಾಗಿ ಶಂಕ್ರು ತಾನೂ ಪೂಜೆಗೆ ಹೋಗುತ್ತಾನೆ. ಅಂಗಡಿಯ ಯಜಮಾನ ಲಾಭದಲ್ಲಿ ಇದ್ದಾನೆ. ಅದರ ನೆಪದಲ್ಲಿ ಹೆಗ್ಡೆ ವರ್ಷಕ್ಕೊಮ್ಮೆ ಅಂಗಡಿಗೆ ಬರುವವರನ್ನು ಕರೆದು ಅಂಗಡಿಯಲ್ಲಿ ಲಕ್ಷ್ಮೀ ಪೂಜೆ ನಡೆಸುತ್ತಾನೆ.

ಹೆಗ್ಡೆಯವರ ಅಂಗಡಿಯಲ್ಲಿ ನಡೆಯುವ ಲಕ್ಷ್ಮೀ ಪೂಜೆಗೆ ಶೂದ್ರ ಹುಡುಗರು, ಮಹಿಳೆಯರು ಒಳ್ಳೆಯ ಉಡುಪುಗಳಿಂದ ಅಲಂಕಾರಗೊಂಡು ಬಂದಿದ್ದಾರೆ. ಹುಡುಗರು ನೆಲಬಾಂಬ್ ಎಸೆಯುತ್ತಾ ಖುಷಿ ಪಡುತ್ತಿದ್ದಾರೆ. ಪಾಪುವೂ ಅವರೊಂದಿಗೆ ಸೇರಿದ್ದಾನೆ. ಪೂಜೆ ಮಂಗಳಾರತಿ ಮುಗಿಯುತ್ತದೆ. ನಂತರ ಎಲ್ಲರನ್ನೂ ಚಹಾ ಪಾರ್ಟಿಗೆ ಕರೆಯುತ್ತಾರೆ. ಬ್ರಾಹ್ಮಣ ಮಾಣಿಗಳಿಗೆ ಮೊದಲ ಪಂಕ್ತಿ ಹಾಕಿದರು. ಶೂದ್ರ ಹುಡುಗರಿಗೆ ನಂತರದ ಪಂಕ್ತಿ. ಪುಟ್ಟ ಪಾಪು ಬ್ರಾಹ್ಮಣ ಮಾಣಿಗಳು ತಿನ್ನುವ ಅವಲಕ್ಕಿ, ಲಡ್ಡನ್ನು ನೋಡಿ ಹಸಿವೆಯಿಂದ ಚಡಪಡಿಸುತ್ತಾ ಬಾಯಲ್ಲಿ ನೀರು ತುಂಬಿಸಿಕೊಳ್ಳುತ್ತಾನೆ. ಶಂಕ್ರುವಿಗೆ ಪಾಪುವನ್ನು ಕಂಡು ಬ್ರಾಹ್ಮಣರ ಈ ಪಂಕ್ತಿ ಭೇದಕ್ಕೆ ಕೋಪ-ಬೇಸರ ಎರಡೂ ಆದರೂ ಏನೂ ಮಾಡುವಂತಿಲ್ಲ. ಪಾಪುವನ್ನು ಕರೆದುಕೊಂಡು ಹೊರಗೆ ಬರಬೇಕೆಂದು ಯೋಚಿಸುತ್ತಾನೆ. ಮನೆಗೆ ಬಂದರೆ ಲಡ್ಡು, ಅವಲಕ್ಕಿ ಕೊಡಲು ತಾನು ಶಕ್ತನೇ? ಹಸಿವಾದರೂ ಕಾಯಲೇಬೇಕಲ್ಲ.

ಮನೆಗೆ ನೆಂಟರು ಬಂದಾಗ ನೆಂಟರನ್ನು ಸಂತೋಷಪಡಿಸಲು ಮನೆಯಲ್ಲಿ ಏನೂ ಇಲ್ಲದಿರುವುದು ಶಂಕ್ರನಿಗೆ ತಿಳಿಯುತ್ತದೆ. ಮತ್ತೆ ಅದೇ ಹೆಗ್ಡೆಯವರ ಅಂಗಡಿಗೆ ಬಂದು ಸಾಲ ಪಡೆದು ಲಾಡು, ಅವಲಕ್ಕಿ, ಹಲ್ವ, ಬಾಳೆಹಣ್ಣು ತೆಗೆದುಕೊಳ್ಳುತ್ತಾನೆ. ಕೋಪಿಸಿಕೊಂಡು, ವಿರೋಧಿಸಿದ್ದರೆ ಸುಲಭದಲ್ಲಿ ಸಾಲ ಪಡೆದು ನೆಂಟರನ್ನು ಸಂತೃಪ್ತಿಗೊಳಿಸಲು ಸಾಧ್ಯವಾಗುತ್ತಿತ್ತೇ?

ಹಸಿವನ್ನು ಮುಖ್ಯ ವಸ್ತುವನ್ನಾಗಿಸಿಕೊಂಡಿರುವ 'ಅಂಗಡಿ ಪೂಜೆ'ಯಲ್ಲಿ ಶೋಷಿತ ಸಮುದಾಯ ಶೋಷಕ ಸಮುದಾಯದವರಿಂದ ಮತ್ತೆ ಮತ್ತೆ ಶೋಷಣೆಗೊಳಗಾಗುತ್ತಿದೆ ಎಂಬುದನ್ನು ನಿರೂಪಿಸುತ್ತದೆ. ಪ್ರತಿಭಟಿಸಲು ಹಸಿವು ಮತ್ತು ಬಡತನ ತಡೆಯೊಡ್ಡುತ್ತದೆ. ಕಥಾ ನಾಯಕನ ಪಂಕ್ತಿಭೇದವನ್ನು ಪ್ರತಿಭಟಿಸಬೇಕೆಂಬ ಕೋಪ ಕೊನೆಗೆ ತಣ್ಣಗಾಗುತ್ತದೆ. ಪಂಕ್ತಿ ತಾರತಮ್ಯದ ಕೋಪ ಮನೆಗೆ ನೆಂಟರು ಬಂದಾಗ ಕರಗಿ ಹೋಗುತ್ತದೆ. ಬಡವ ಕೋಪಿಸಿಕೊಂಡರೆ ನಷ್ಟ ಅವನಿಗೇ. 'ಬಡವನ ಕೋಪ ದವಡೆಗೆ ಮೂಲ' ಎಂಬ ಮಾತಿನಂತೆ, ಬಡವರು ತಾಳಿದರೆ ಹೊಟ್ಟೆಗೆ ಹಿಟ್ಟು, ಇಲ್ಲದಿದ್ದರೆ ತಣ್ಣೀರೇ ಗತಿ. ಕೋಪಿಸಿಕೊಂಡು ಹೊಟ್ಟೆಗೆ ತಣ್ಣೀರು ಬಟ್ಟೆ ಕಟ್ಟಿಕೊಳ್ಳುವುದಕ್ಕಿಂತ ತಡವಾದರೂ, ಶೋಷಣೆಯಾದರೂ ಸಹಿಸಿಕೊಂಡು ಹಸಿದ ಹೊಟ್ಟೆಯನ್ನು ತುಂಬಿಸಿಕೊಳ್ಳುವುದೇ ಜಾಣ ನಡಿಗೆ. ಸಾಮಾಜಿಕ ಕಾರಣದಿಂದ

ಮೇಲ್ವರ್ಗದವರಿಂದ ಶೋಷಣೆಯಾಗುತ್ತಿದ್ದರೂ ಶೋಷಿತರು ಅದನ್ನು ಸಹಿಸಿಕೊಳ್ಳಬೇಕಾದ ಅನಿವಾರ್ಯತೆ ನಿರ್ಮಾಣವಾಗಿ ಬಿಟ್ಟಿದೆ.

ದೇವನೂರರ 'ಒಡಲಾಳ'

'ಒಡಲಾಳ' ಸಾಕವ್ವನ ಹಸಿದ ಹಟ್ಟೆಯ ಕಥೆ. ಸಾಕವ್ವ, ಕಾಳಣ್ಣ, ಪುಟಗೌರಿ, ದುಪ್ಪಿ ಕಮಿಷನರ್ ಮೊದಲಾದ ಪಾತ್ರಗಳು ದಲಿತ ಬದುಕಿನ ಜೀವಂತ ಘಟಕಗಳು. ಪ್ರತಿಯೊಬ್ಬರೂ ಸಣ್ಣತನ, ದೌರ್ಬಲ್ಯಗಳೊಂದಿಗೆ ಜೀವನೋತ್ಸಾಹವನ್ನು ವ್ಯಕ್ತಪಡಿಸುತ್ತಾರೆ. ಯಾವ ವ್ಯವಸ್ಥೆ ತನ್ನ ಮೂಲ ಬೇರುಗಳಲ್ಲಿರುವ ವಂಚನೆಯ ಮೂಲಕ ಹಸಿವನ್ನು ಸೃಷ್ಟಿಸಿದೆಯೋ ಆ ವ್ಯವಸ್ಥೆಯನ್ನು ವಂಚಿಸಿಯೇ ಸಾಕವ್ವನ ಹಟ್ಟೆಯ ಹಸಿವು ಶಮನಗೊಳ್ಳುವುದರಿಂದ ಸಾಕವ್ವನ ಹಟ್ಟಿ ಪ್ರತೀಕಾರದ ಸಂಕೇತವಾಗುತ್ತದೆ. ಕಡಲೆಕಾಯಿ ಮೂಟೆಯನ್ನು ಕಂಡು ಹಿಡಿಯಲಾಗದ ಪೋಲೀಸರ ಸೋಲು ವ್ಯವಸ್ಥೆಯ ಸೋಲಾಗುತ್ತದೆ. ಕಳೆದು ಹೋದ ಒಂದು ಹುಂಜಕ್ಕಾಗಿ ಜೀವ ಹೋದ ಹಾಗೆ ಚಡಪಡಿಸುವ ಮುದುಕಿ ಸಾಕವ್ವನ ಇನ್ನೊಂದು ಹುಂಜವನ್ನು ಇನ್ಸ್‌ಪೆಕ್ಟರ್ ಹಾರಿಸಿಕೊಂಡು ಹೋಗುವುದು ಹಾಗೂ ಪುಟಗೌರಿಯ ಗಲ್ಲಗಳ ಮೇಲೆ ಬಡಿಗೆಯನ್ನಾಡಿಸುವ ಉದ್ಧಟತನದಿಂದ ವರ್ತಿಸುವುದು ಪೋಲೀಸರ ದೌರ್ಜನ್ಯದ ಒಂದು ಮಾದರಿ.

'ಒಡಲಾಳ' ಹಸಿವಿಗೆ ಕಂಡುಕೊಳ್ಳುವ ಪರಿಹಾರ ವಾಸ್ತವಕ್ಕೆ ಹೆಚ್ಚು ಹೆಚ್ಚು ಹತ್ತಿರವಾದರೂ ಅದೊಂದು ತಾತ್ಕಾಲಿಕ ಪರಿಹಾರ ಮಾತ್ರ. ಶತಶತಮಾನಗಳಿಂದ ನಡೆದು ಬಂದದ್ದು ಕೂಡಾ. ದಲಿತರ ಬದುಕಿನ ಶತಮಾನಗಳ ವಾಸ್ತವಕ್ಕೆ ಕತ್ತಲನ ತ್ರಿಶೂಲದಂತಹ ಶಾಶ್ವತ ಪರಿಹಾರದ ತುಡಿತ ದೇವನೂರರಲ್ಲಿಲ್ಲ. ವಾಸ್ತವಗಳನ್ನು ಇದ್ದಂತೆ ದಟ್ಟವಾಗಿ ದಾಖಲಿಸುವುದರ ಮೂಲಕ ದಲಿತ ಜನಾಂಗದ ಜೀವನ ವಿಧಾನವನ್ನೇ ಕಟ್ಟಿಕೊಡುವ ದೇವನೂರರ ಕೃತಿ ಕನಸುಗಾರಿಕೆಯಿಂದ ವಂಚಿತವಾಗುತ್ತದೆ. ದೇವನೂರರ ಕಥೆಗಳ ದಲಿತರು ಸಾಮಾಜಿಕ ಕಾರಣದಿಂದ ಹಸಿವಿನ ಬವಣೆಗೊಳಗಾಗಿದ್ದರೂ ಪ್ರತಿಭಟಿಸುವುದಿಲ್ಲ. ಆದರೆ ಕುಂ. ವೀ. ಯವರ ಕಥಾ ಪಾತ್ರಗಳು ಪ್ರತಿಭಟನೆಯ ದಾರಿ ಹಿಡಿಯುತ್ತವೆ.

ದೇವನೂರರ ದಲಿತ ಬದುಕಿನ ಸಮಗ್ರತೆ, ಕುಂ. ವೀರಭದ್ರಪ್ಪನವರ ನಾಯಕರುಗಳ ಪ್ರತಿಭಟನೆಯ ಅನನ್ಯತೆಗಳು ಒಂದುಗೂಡಿದರೆ ಬಂಡಾಯ ಸಾಹಿತ್ಯದಲ್ಲಿ ಇನ್ನೂ ಮಹತ್ವದ ಕೃತಿಗಳು ನಿರ್ಮಾಣವಾಗಬಹುದು.

ದೇವನೂರರ 'ಮೂಡಲ ಸೀಮೇಲಿ ಕೊಲೆಗಿಲೆ ಮುಂತಾಗಿ'

ದೇವನೂರರ 'ಮೂಡಲ ಸೀಮೇಲಿ ಕೊಲೆಗಿಲೆ ಮುಂತಾಗಿ' ಕಥೆಯ ಸಂದರ್ಭದಲ್ಲಿ ಯಾವ ಕೊಲೆಯೂ ಅಲ್ಲಿ ನಡೆಯುವುದಿಲ್ಲ. ಆದರೆ ಪ್ರತಿನಿತ್ಯವೂ ಬೇರೊಂದು ರೀತಿಯಲ್ಲಿ ರಂಗಪ್ಪನ ಕೊಲೆಯಾಗುತ್ತಿರುತ್ತದೆ. ಪ್ರತಿನಿತ್ಯವೂ ಸಾಯುವ ಅವನ ನೋವು ಒಮ್ಮೆಗೇ ಕೊಲೆಯಾಗಿ ಸಾಯುವವನ ನೋವಿಗಿಂತ ಹೆಚ್ಚು ತೀವ್ರವಾದದ್ದು ಎಂದು ಒತ್ತಿ ಹೇಳಬೇಕಾಗಿಲ್ಲ. ಈ ಕಥೆಯಲ್ಲಿ ರಂಗಪ್ಪನ ವರ್ಣ ಮತ್ತು ವರ್ಗ ಎರಡೂ ಸ್ಥಿತಿಗಳಿಂದ ರೂಪಿತವಾದ ಅವನ ಅವಸ್ಥೆಯ ಮನೋಜ್ಞ ಚಿತ್ರಣವಿದೆ. ಕಾಡುವ ಅವನ ಬಡತನಕ್ಕೆ ಪರಿಹಾರ ಸಿಗುವುದಿಲ್ಲ. ಅವನ

ಹಸಿವು ಸವರ್ಣೀಯರಿಗೆ ಅರ್ಥವಾಗುವುದಿಲ್ಲ. ಅವನ ದೈಹಿಕ ಸ್ಥಿತಿಗೂ ಇವರು ಮಾನವೀಯವಾಗಿ ಸ್ಪಂದಿಸುವುದಿಲ್ಲ. ಒಂದಿಷ್ಟು ಜೋಳ ಕೊಡಿ ಎಂದು ಕೇಳಲು ಗೌಡರ ಮನೆಗೆ ಹೋದರೆ, ಗೌಡತಿ ಗೌರವ್ವ 'ಏನ್ಬಂದೆ ಅಂದರು, ಹಟ್ಟದಿಕ್ಕ ಅಂಗರ್ತು ಏನಿಲ್ಲ ಅಳಿ. ಏನಾರೂ ಜೋಳಗೀಳ ಅಂತ ಅವನು ಅಂದು ಮುಗಿಸೋಕೆ ಮೊದಲೆ – ಅದೊಳ್ಳೆ ಸರಿಕ ಇವ್ನೆ. ಎಲ್ಲಿಂದ ತಾನೆ ನಾವು ತರುವ? ನಾವೇ ಮಾನವಾಗಿ ಬದಿಕಂಡು ಹೋಗೋದು ಕಷ್ಟ ಆಗಿದೆ – ಎಂದು ನಿಡಿದು ಉಸುರು ಬಿಟ್ಟು ಸುಮ್ಮನಾದರು. ರಂಗಪ್ಪನಿಗೂ ಆಗ ಮಾತುಗಳು ಹೊಟ್ಟೆ ಒಳಗಿಂದ ಹೊರಕ್ಕೆ ಬರಲಿಲ್ಲ. ಸೌದೆಕೊಂಟೊಂದನ್ನ ಒಡೆದು ಕೊಡಲು ಗೌಡತಿ ಹೇಳಿದಾಗ ಮರುಮಾತಿಲ್ಲದೆ ತನ್ನ ನಿತ್ರಾಣ ಸ್ಥಿತಿಯಲ್ಲೇ ಒಡೆಯಲು ಪ್ರಾರಂಭಿಸಿ ಹಾಗೇ ಕುಸಿಯುತ್ತಾನೆ. ಇದ ಕಂಡು ಗೌರವ್ವ ಅಲ್ಲಿಂದಲೇ – ಯಾಕ? ಏನಾಯ್ತು ಇವ್ನೆ ಅಂದರು. ರಂಗಪ್ಪ ಮೆತ್ತಗಲ ದನೀಲಿ, ಅದ್ಯಾಕೊ ಆಗಕಿಲ್ಲ ಅಳಿ– ಅಂದನು ಅಷ್ಟು ಹೇಳೋಕೆ ತಾಯಿ ಹೊಟ್ಟೆ ಒಳಗಿಂದ ಇನ್ನೊಂದ್ಸಲ ಜನ್ಮ ಕಂಡಂಗಾಯ್ತು. ಗೌರವ್ವ ಎದ್ದು, 'ಅಯ್ಯೋ ಸಿವ್ನೆ, ಸೌದೇನೆ ಇಲ್ದೆ ಇವತ್ತು ಏನಪ್ಪ ಮಾಡದು. ದನ ತಿನ್ನೋ ಜೋಳದ ಕಡ್ಡಿನೆ ಗತಿಯಾಯಿತಲ್ಲ' ಎಂದು ಒಳಕ್ಕೆ ಹೋದರು. ಅವರು ಬಾಕ್ಲ ಒಳಕ್ಕೆ ಹೋಗೋವರೆಗೂ ಅವರ ಸೀರೆಯ ಸದ್ದು ಕೇಳಿಸುತ್ತಿತ್ತು. ಆಮೇಲ ಅಂಗಳ ತುಂಬ ಬಣ ಬಣ ಅಂತು. ರಂಗಪ್ಪ ನೆಲಕ್ಕೂರಿದ ಕಯ್ಯ ಬಲದಿಂದ ಮೇಲಕ್ಕೆದ್ದನು. ಹೆಜ್ಜೆಯನ್ನು ಕಿತ್ತು ಕಿತ್ತು ಇಟ್ಟಂತೆಲ್ಲ ಅವನ ಮಗ, ಅವನ ಹೆಂಡತಿ ಜೋಪಡಿ ಹತ್ತಿರ ಬಂತು. ಇದು ಕಥೆಯ ಭಾಗದ ಕೊನೆಯ ಸಾಲುಗಳು. ಏಳನೆಯ ಮತ್ತು ಕೊನೆಯ ಭಾಗದಲ್ಲಿ ಲೇಖಕರು ಅಕ್ಷರಗಳಲ್ಲಿ ಏನನ್ನೂ ನಿರೂಪಿಸುವುದಿಲ್ಲ. ಬದಲಾಗಿ ಒಂದು ಪ್ರಶ್ನಾರ್ಥಕ ಗುರುತು ಮಾತ್ರ. ಈ ಪ್ರಶ್ನಾರ್ಥಕ ಚಿಹ್ನೆಯು ಓದುಗರ ಕಲ್ಪನೆಗೂ ಅವಕಾಶ ಕೊಟ್ಟು ತನ್ನ ಮೌನದಲ್ಲೇ ಮಾತಿನಲ್ಲಿ ವಿವರಿಸುವುದಕ್ಕಿಂತ ಹೆಚ್ಚಿನದನ್ನು ಸೂಚಿಸುತ್ತದೆಂದು ಹೇಳಿರುವ ಟಿ.ಪಿ. ಅಶೋಕರ ಮಾತು ಸರಿ ಎನ್ನಿಸುತ್ತದೆ.[೨]

ದಲಿತರೆಂದರೆ ಬಡವರು, ನಿಸ್ಸಹಾಯಕರು, ಶೋಷಿತರು, ಹಸಿದ ಹೊಟ್ಟೆಯವರು, ಬೇಡುವ ಕೈಗಳು, ಕೂಗುವ ಬಾಯಿಗಳು ಎಂದು ತಿಳಿದುಕೊಂಡಿರುವ ಸವರ್ಣೀಯರ ಮನಸ್ಥಿತಿ ಬದಲಾಗಿ ಅವರು ತಮ್ಮಂತೆ ಮನುಷ್ಯರೆಂದು ಪರಿಭಾವಿಸಿದಾಗ ಅವರ ಸ್ಥಿತಿ ಬದಲಾದೀತು. ಹಸಿದ ಹೊಟ್ಟೆ ತುಂಬಬಹುದು. ನಿಶ್ಶಕ್ತರನ್ನು ಮತ್ತಷ್ಟು ನಿಶ್ಶಕ್ತರನ್ನಾಗಿಸುವ ಬದಲು ಹಸಿದ ಹೊಟ್ಟೆಗೆ ಅನ್ನ ಕೊಡುವ ಮಾನವೀಯ ಗುಣ ಪ್ರಕಟವಾಗಬೇಕು. ಮೊದಲು ಅನ್ನ ಬಳಿಕ ಉಳಿದುದೆಲ್ಲ. ಹಸಿದ ಹೊಟ್ಟೆಗೆ ಯಾವ ಒಣ ಮಾತುಗಳು ರುಚಿಸುವುದಿಲ್ಲ. ಹಾಗೆ ದುಡಿಯಲು ಸಾಧ್ಯವೂ ಆಗುವುದಿಲ್ಲ. ಹೊಟ್ಟೆತುಂಬಾ ಉಂಡರೆ ತಾನೇ ಮೈ ಮುರಿದು ದುಡಿಯಲು ಸಾಧ್ಯ. ಹೊಟ್ಟೆಗೆ ಹಿಟ್ಟಿಲ್ಲದೆ ರಟ್ಟೆಗೆ ಶಕ್ತಿಯಾದರೂ ಹೇಗೆ ಬಂದೀತು ಎಂಬುದನ್ನು ಧನಿಕರು ಅರ್ಥಮಾಡಿಕೊಳ್ಳಬೇಕಾಗಿದೆ ಎಂಬುದನ್ನು ದೇವನೂರರು ಕಥೆಯ ಮೂಲಕ ತಿಳಿಸಿದ್ದಾರೆ. ಸಾಮಾಜಿಕ ವ್ಯವಸ್ಥೆಯು ದಲಿತರನ್ನು ಅಧಃಪತನಕ್ಕೆ ತಳ್ಳಿದೆ. ಹಸಿದರೂ ಹೊಟ್ಟೆಗೆ ಅನ್ನವಿಲ್ಲ. ಅನ್ನ ಕೊಡದೇ ಅವರನ್ನು ಪ್ರತಿನಿತ್ಯ ಸತಾಯಿಸುವುದು ಕೊಲೆಯಲ್ಲದೆ ಮತ್ತೇನು? ಎಂದು ದೇವನೂರರು ಮೌನವಾಗಿ ಪ್ರಶ್ನಿಸುತ್ತಾರೆ.

ಮೊಗಳ್ಳಿ ಗಣೇಶ್ ಅವರ 'ಬುಗುರಿ' ಒಂದು ವಿಶಿಷ್ಟವಾದ ಕಥೆ. ಆರ್ಥಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ರಾಜಕೀಯವಾಗಿ ದಲಿತರು ಪಡುತ್ತಿರುವ ಬವಣೆಯನ್ನು ದಟ್ಟವಾಗಿ ಚಿತ್ರಿಸುತ್ತಾ ಬದುಕಿನ ಇತರ ಆಯಾಮಗಳನ್ನು ತೋರುವ ಎಚ್ಚರ ಅವರ ಕಥನವನ್ನು ಸಂಕೀರ್ಣಗೊಳಿಸುತ್ತದೆ ಎಂಬ ಟಿ. ಪಿ. ಅಶೋಕರ ಮಾತನ್ನು ನೆನಪಿಸಿಕೊಳ್ಳಬಹುದು.[9]

ಚೆಲುವನ ಅಪ್ಪ ಅಮ್ಮರಿಗೆ ತಮ್ಮ ಮಗ ಚೆನ್ನಾಗಿ ಓದಿ ಮುಂದೆ ಬರಬೇಕೆಂಬ ಅಭೀಪ್ಸೆಗಳು, ಮೇಲ್ವರ್ಗ-ಮೇಲ್ವರ್ಣಗಳನ್ನು ಎದುರಿಸಲು ದಲಿತರು ಹುಡುಕಿಕೊಂಡಿರುವ ಉಪಾಯಗಳು ಇವೆ. ಅಂದರೆ ಕತೆಗಾರರು ದಲಿತರ ಬಡತನ, ಹಸಿವು ಬವಣೆಗಳನ್ನು ಮಾತ್ರ ಚಿತ್ರಿಸದೆ ದಲಿತರಲ್ಲಿ ಇರುವ ಅಗಾಧ ಸಾಧ್ಯತೆಗಳನ್ನು ಸೂಚಿಸಿದ್ದಾರೆ. ದಲಿತರಲ್ಲಿ ಅಂತರ್ಗತವಾಗಿರುವ ಶಕ್ತಿ ಮತ್ತು ಪ್ರತಿಭೆಗಳು ಇನ್ನು ಸರಿಯಾದ ಅರ್ಥಪೂರ್ಣವಾದ ಅಭಿವ್ಯಕ್ತಿಯನ್ನು ಪಡೆದಿಲ್ಲವಾದರೆ ಅದಕ್ಕೆ ಕಾರಣಗಳು ನಮ್ಮ ಚರಿತ್ರೆಯಲ್ಲಿ ಇವೆ. ಈ ಚರಿತ್ರೆಯೂ ಚಲಿಸುತ್ತಿರುವುದಕ್ಕೆ ಗುಂಜಾರಯ್ಯನು ಹೋಟೆಲ್ ಇಟ್ಟಿರುವುದು, ಚೆಲುವನು ಶಾಲೆಗೆ ಹೋಗುತ್ತಿರುವುದು ಅರ್ಥಪೂರ್ಣ ಸೂಚನೆಗಳಾಗಿವೆ. ಚಿಕ್ಕಣ್ಣ ಮತ್ತು ಅತಾರಿ ಇವರಂತೆ ಗುಂಜಾರಯ್ಯ ಮತ್ತು ಚೆಲುವ ಇವರಂಥ ಪಾತ್ರಗಳನ್ನು ಚಿತ್ರಿಸುವುದರ ಮೂಲಕ ಲೇಖಕರು ದಲಿತ ಲೋಕದ ಬಹುಮುಖತೆಯನ್ನು ಅನಾವರಣಗೊಳಿಸುತ್ತಾರೆ.

ಚಿಕ್ಕಣ್ಣನಂತೆ ಅತಾರಿಯೂ ಗುಂಡಿಗೆ ಬಿದ್ದದ್ದು ಇಡೀ ಪ್ರಕರಣವನ್ನು ಇನ್ನೊಂದು ಸ್ತರಕ್ಕೆ ಒಯ್ದು ಬಿಡುತ್ತದೆ. ಬೇಕೆಂದೇ ತನ್ನನ್ನು ಗುಂಡಿಗೆ ನೂಕಿದರೆಂದು ಅತಾರಿಯು ಗುಂಜಾರಯ್ಯ ಮತ್ತು ಚಿಕ್ಕಣ್ಣನ ವಿರುದ್ಧ ದೂರು ಕೊಡುತ್ತಾನೆ. 'ಆ ಹಂದಿಯನ್ನು ಎತ್ತಿದ ನಂತರ ಬಿಸಿ ನೀರಿನಿಂದ ಮೈ ತೊಳೆದು ಕೊಯ್ದು ನಾಳಿನ ಸಾದಾರಳ್ಳಿ ಸಂತೆಯಲ್ಲಿ ಮಾರಿ ಹಣ ಹಂಚಿಕೊಳ್ಳಬೇಕೆಂದಿದ್ದ ಇಬ್ಬರ ನೀಲಿ ನಕ್ಷೆಯು ಚೂರುಚೂರಾಗಿ ಗಾಳಿಗೆ ಹಾರಿ, ಹೇಲಿನ ವಾಸನೆ ಮುಖಾಂತರ, ಅತಾರಿಯ ಅವಮಾನದ ಮೂಲಕ, ಊರಿನ ಕ್ಷುದ್ರತೆಯ ಆಳ ಒಳ ಎಳೆಯ ದುರಂತದ ಮೂಲಕ ವಿಚಿತ್ರ ಘಟನೆಯಾಗಿ ಎಲ್ಲರಿಗೂ ಮೋಜಾಗಿ ಬಿಟ್ಟಿತು. ಆದರೆ ಇದು ಊರ ನ್ಯಾಯದಕಟ್ಟೆಯಲ್ಲಿ ಬಗೆಹರಿಯದೆ ಪೋಲೀಸು ಸ್ಟೇಶನ್ನಿನ ಮೆಟ್ಟಿಲು ಏರಿಬಿಡುತ್ತದೆ. ಇಂಥ ವಿಚಿತ್ರ ಕೇಸನ್ನು ಕೇಳಿ ಪೋಲೀಸಿನವರಿಗೂ ತಮಾಷೆಯಾಗಿ ನಕ್ಕು ನಕ್ಕು ಸುಸ್ತಾಗುತ್ತಾರೆ. ಆದರೆ ಈ ಪರಿಸ್ಥಿತಿಯ ಲಾಭವನ್ನು ಪಡೆಯಲು ಉದ್ಯುಕ್ತರಾಗುತ್ತಾರೆ. ಪೋಲಿಸರು ಅವರಿಬ್ಬರಿಗೂ ಹೇಗಿದ್ರು ಇಬ್ಬರು ಕಕ್ಕಸು ಗುಂಡಿಯೊಳಗೆ ಬಿದ್ದು ಮೈಲಿಗೆ ಮಾಡ್ಕಂಡಿದ್ದೀರಿ. ಇದ್ರಲ್ಲಿ ಇಬ್ಬರದೂ ತಪ್ಪಿದೆ. ಇದನ್ನೆಲ್ಲ ಆಮೇಲೆ ನೋಡೋಣ. ಸದ್ಯಕ್ಕೆ ನಮ್ಮ ಸ್ಟೇಷನ್ನಲ್ಲೂ ಇದೇ ಪ್ರಾಬ್ಲಂ ಆಗಿದೆ. ಹಾಳಾದ್ದು ಇದು ಹಳ್ಳಿ ಪೋಲಿಸ್ ಸ್ಟೇಷನ್ ಆದ್ರಿಂದ ಸಿಟಿ ತರ ಡ್ರೈನೇಜ್ ಸಿಸ್ಟಂ ಇಲ್ಲಿಲ್ಲ. ಸೇಂ ಚಿಕ್ಕಣ್ಣನ ತರದ ಕಕ್ಕಸು ಗುಂಡಿನೇ ಇಲ್ಲೂ ಇರೋದು. ಈಗ ಅದು ಕಕ್ಕಸಿನಿಂದ ತುಂಬಿ ಹೋಗಿದೆ. ಅದನ್ನು ನೀವಿಬ್ರೂ ಸೇರಿ ಎತ್ತಿ ಹೊರಹಾಕಿ ಖಾಲಿ ಮಾಡ್ರಯ್ಯ. ನಾವೆಲ್ಲ ಯಾರೂ ಆ ಕಕ್ಕಸು ಮನೆಗೆ ಹೋಗದಂತೆ ಆಗಿ ಬಿಟ್ಟಿದೆ. ನೀವೇನಾದರೂ ಇದನ್ನು ಮಾಡ್ಲಿಲ್ಲ ಅಂದ್ರೆ ಗ್ಯಾರಂಟಿ ನಿಮ್ಮನ್ನು ಆರಾರ್ ತಿಂಗಳು ಜೈಲೊಳಗೆ ಹಾಕಿ ಸಾಯ್ಸಾಕ್ ಬಿಡ್ತೀನಿ. ದೇಶ ದೇಶದ ಏಲೆಲ್ಲನು ವರ್ರುಸವಂಗ ಮಾಡ್‌ಬಿಡ್ತೀನಿ"[10] ಎಂದು ಇನ್ಸ್‌ಪೆಕ್ಟರ್ ಹೆದರಿಸುತ್ತಾರೆ. ಚಿಕ್ಕಣ್ಣ ಮತ್ತು

ಅತಾರಿ ಹಾಗೆ ಮಾಡಬೇಕಾಗುತ್ತದೆ. ಆದರೆ ಈ ಅವಮಾನ, ಹತಾಶೆಗಳು ಅವರು ಊರಿಗೆ ಮರಳಿ ಬಂದ ಮೇಲೆ ಉಗ್ರ ರೂಪ ತಾಳಿ ಚೆಲುವನ ಮನೆಯವರೆಲ್ಲ ಹಲವು ರೀತಿಯ ಹಲ್ಲೆಗೆ ಒಳಗಾಗುತ್ತಾರೆ. ಇವೆಲ್ಲದರಿಂದಾಗಿ ಚೆಲುವನ ಬುಗುರಿಯ ಆಸೆ ಕಮರಿ ಹೋಗುತ್ತದೆ. ವಯಸ್ಕ ಪ್ರಪಂಚದ ಕ್ರೌರ್ಯ, ವಿಕೃತಿಗಳಿಂದ ಮುಗ್ಧ ಚೆಲುವ ತೀವ್ರವಾದ ಆಘಾತಕ್ಕೆ ಒಳಗಾಗುತ್ತಾನೆ. ಕತೆಯ ಕೊನೆಯ ಭಾಗದಲ್ಲಿ ಚೆಲುವನ ನೋವು ದಿಗ್ಭ್ರಮೆ, ತಲ್ಲಣಗಳನ್ನು ದಾಖಲಿಸುವ ಪರಿಯಲ್ಲಿ ಲೇಖಕರ ಜೀವನ ದೃಷ್ಟಿಯೂ ಸೂಚಿತವಾಗುವಂತಿದೆ. "ಇಡೀ ಹೊಲಗೇರಿಯ ಹೊಲಸು ಆ ಕಕ್ಕಸುಗುಂಡಿ, ಸತ್ತಹಾದಿ, ಬುಗುರಿ, ಪೋಲಿಸ್ ಠಾಣೆ, ಬಿದ್ದು ಸತ್ತ ಎಷ್ಟೋ ಜೀವಗಳೂ ಒಂದೊಂದಾಗಿ ತೆರೆದುಕೊಂಡು ಚೆಲುವನಿಗೆ ರಾತ್ರಿಯ ಪಿಶಾಚಿರೂಪದ ಹಂದಿ ರೂಪಿ ಮಾನವ ಎಲ್ಲರ ಮೆದುಳಿಗೂ ಕೊರೆದು ಏಲು ತುಂಬುತ್ತಿರುವಂತೆ ಕಂಡಿತು. ಕತ್ತಲೊಳಗೆ ಕರಗಿ ಅವ್ವನ ಕಿಬ್ಬೊಟ್ಟೆಗೆ ಮೆತ್ತಿಕೊಂಡು "ಅವ್ವೋ ನನ್ನ ನಿನ್ನೊಟ್ಟೆವೊಳಗೆ ಸೇರಿಸ್ಕ ಬುಡುವಾ" ಎಂದ.[೬]

ಚೆಲುವನ ಅವ್ವ ಕಣ್ಣೀರಲ್ಲೇ ಅಲ್ಲೇ ಕುಳಿತಳು ತಾರಕ ಸ್ವರದಲ್ಲಿ ಹೊಲಗೇರಿಯ ಬೀದಿ ಮೊಳಗತೊಡಗಿತ್ತು. ದಲಿತರು ಬಡತನ ಹಸಿವಿನಿಂದ ನೋವನ್ನು ಅನುಭವಿಸದೇ ವ್ಯವಸ್ಥೆಯ ರೌದ್ರತೆಯಿಂದಲೂ, ಶೋಷಣೆಯಿಂದಲೂ ಮತ್ತಷ್ಟು ಕುಗ್ಗಿ ಹೋಗುತ್ತಾರೆ. ಹುಟ್ಟಿ ಸಾಯುವುದಕ್ಕಿಂತ ಹುಟ್ಟದೇ ಇರುವುದೇ ಮೇಲೆಂದು ನಿಜವಾದ ಸುಖವೆಂದು ಭಾವಿಸುತ್ತಾರೆಂಬುವುದು ಚೆಲುವನ ಮಾತಿನ ಮೂಲಕ ವೇದ್ಯವಾಗುತ್ತದೆ.

ಮೊಗಳ್ಳಿ ಗಣೇಶ್ ಚೆಲುವನ ಬಣ್ಣದ ಬುಗುರಿ ಕಕ್ಕಸು ಗುಂಡಿಗೆ ಬಿದ್ದ ಸಾಮಾನ್ಯ ಘಟನೆಯ ಮೂಲಕ ದಲಿತ ಲೋಕದ ಬಡತನ, ಹಸಿವು, ನೋವು, ನಿರಾಸೆ, ಹತಾಶೆ, ಶೋಷಣೆ ಕ್ರೌರ್ಯವನ್ನು 'ಬುಗುರಿ' ಕಥೆಯ ಮೂಲಕ ಅನಾವರಣಗೊಳಿಸಿದ್ದಾರೆ.

ಹಸಿರು, ಬಿಳಿ, ಕೇಸರಿ ಬಣ್ಣದ ಬುಗುರಿ ಚೆಲುವನ ದುರಂತವೋ ಅವನ ಅಪ್ಪನ ಹಣೆಬರಹವೋ ಇಲ್ಲವೇ ಇಡೀ ಆ ಮನೆಯ ಮತ್ತು ಕೇರಿ ಜನರ ದುರಾದೃಷ್ಟವೋ ಎಂಬಂತೆ ಹಿಂದೆ ಹಿತ್ತಲಲ್ಲಿ ಮದುವೆ ಸಂದರ್ಭದಲ್ಲಿ ಕಟ್ಟಿಸಿದ್ದ ಕಕ್ಕಸು ಗುಂಡಿಯ ನರಕದಲ್ಲಿ ಬಿದ್ದು ಹೋಗಿತ್ತು. ಚೆಲುವನು ಬೇಸರದಿಂದ ಹೊಂಗೆ ಮರ ಹತ್ತಿ ಕೂತರೆ, 'ಮೇಲಿಂದ ಕಾಣುತ್ತಿರುವ ಹೊಲಗೇರಿ ಅವನ ಕಣ್ಣಿಗೆ ರಾಚಿ, ಅಸ್ತವ್ಯಸ್ತವಾಗಿ ಚಿಂದಿ ಬಟ್ಟೆಯಂತೆ ತೂತು ತೂತಾಗಿ ಕೊಳಾಕಾಗಿ ಕಾಣಿಸಿತು. ಗುಂಡಿಯಲ್ಲಿ ಬಿದ್ದ ಬುಗುರಿಯನ್ನು ಹೇಗೆ ತೆಗೆಯುವುದು ಎಂದು ಚೆಲುವ ಚಿಂತಿಸುತ್ತಿದ್ದಾಗ ಹಂದಿಯೊಂದು ತನ್ನನ್ನು ಅಟ್ಟಿಸಿಕೊಂಡು ಬರುತ್ತಿದ್ದ ನಾಯಿಗಳಿಂದ ತಪ್ಪಿಸಿಕೊಳ್ಳಲು ಅದೇ ಗುಂಡಿಗೆ ಧುಮುಕುತ್ತದೆ. ಹಂದಿಯು ತಮ್ಮ ಹಿತ್ತಲ ಗುಂಡಿಗೆ ಬಿದ್ದ ವಿಷಯವನ್ನು ಚೆಲುವನು ತನ್ನ ಅವ್ವನಿಗೆ ಹೇಳಿದಾಗ ಅವಳು ಗಾಬರಿಯಿಂದ ಅಪ್ಪನನ್ನು ಕರೆದುಕೊಂಡು ಬಾ. ಏನಾರ ಮಾಡಿ ಗುಂಡಿಯಿಂದ ಎತ್ತಾಕ್ ಬುಡ್ಲಿ ಈಚ್ಗೆ; ಬೇರೆ ಯಾರಿಗೂ ಹೇಳಬೇಡವೆಂದು ಎಚ್ಚರಿಸುತ್ತಾಳೆ.

ಚಿಕ್ಕಣ್ಣನ ಹಿತ್ತಲಲ್ಲಿ ಕಟ್ಟಿಸಿದ್ದ ಆ ಕಕ್ಕಸು ಗುಂಡಿ ಇಡೀ ಊರಲ್ಲೇ ಮೊದಲನೆಯದು. ತನ್ನ ತಮ್ಮ ಶಾಂತರಾಜನ ಮದುವೆಗೆ ಮೈಸೂರಿಂದ ಹೆಣ್ಣು ತಂದಿದ್ದಾಗ, ಆ ನೆಂಟರಿಗೆ, ಹೆಂಗಸರಿಗೆ ಕಕ್ಕಸು ಹೋಗಲು ತೊಂದರೆಯಾಗುತ್ತದೆಂಬ ಕಾರಣದಿಂದ ಯೋಚಿಸಿ ಕಟ್ಟಿಸಿದ್ದ ಈ ವ್ಯವಸ್ಥೆ

ಮದುವೆ ದಿನದಲ್ಲೇ ಕೈ ಕೊಟ್ಟಿತ್ತು. ಮುಂದೆ ಈ ಗುಂಡಿ ಹಲವು ಹಗರಣಗಳಿಗೆ ಕಾರಣವಾಗಿತ್ತು. ತಿಪ್ಪೇಗೌಡರ ಕೋಣ ಈ ಗುಂಡಿಗೆ ಬಿದ್ದು ದೊಡ್ಡ ಜಗಳವಾಗಿದ್ದರ ಜೊತೆಗೆ, ಅದನ್ನು ಹೊರ ತೆಗೆಯುವ ಭರದಲ್ಲಿ ಆ ಗುಂಡಿ ಎರಡು ಪಟ್ಟು ವಿಸ್ತಾರವಾಗಿ ದೊಡ್ಡ ಗುಂಡಿಯೇ ಆಗಿತ್ತು. ಊರವರೆಲ್ಲ ಏಲ್‌ಗುಂಡಿಯ ಮೇಲೆ ಯಾವುದಾದರೂ ತಗಡನ್ನು ಹೊದಿಸು ಇಲ್ಲವೇ ಕಲ್ಲು ಚಪ್ಪಡಿ ಹಾಕಿಸು ಎಂದು ಹೇಳಿದರೂ ತಿನ್ನಲು ಅನ್ನವೇ ಗತಿಯಿಲ್ಲದೆ ಗೋಳಾಡುತ್ತಿದ್ದ ಚಿಕ್ಕಣ್ಣನ ಕುಟುಂಬ ಅದನ್ನು ಮಾಡಿಸಲು ಹಣವೆಲ್ಲಿಂದ ತರಲು ಸಾಧ್ಯ ? ಹಾಗಾಗಿ ಯಾವುದನ್ನೂ ಮಾಡಿಸಲು ಆಗಿರಲಿಲ್ಲ. ಗೌಡರ ಆ ಕೋಣ ಆನಂತರ ಮಾದಿಗರ ಯಾಲಕ್ಕಯ್ಯ ಬಂದು ನೋಡಿ, ಚೆನ್ನಾಗಿ ಬಿಸಿನೀರಿನಿಂದ ತೊಳೆಸಿ ಕೊಯ್ದು ಮಂಕರಿ ತುಂಬ ಬಾಡು ಮಾಡಿಕೊಂಡು ಹೋಗಿದ್ದನ್ನು ಕೇಳಿ ಗೌಡರ ತಲೆ ತಿರುಗಿತ್ತು. ಈ ಹೊಲ್ ಮಾದುಗ ನನ್ ಮಕ್ಳು ಬೇಕಂತ್ಲೆ ಕೋಣನ್ನ ಏಲ್‌ಗುಂಡಿಗೆ ಬೀಳ್ಸಿ ತಿನ್ನುಕೆ ಈ ಕರಾಮತ್ ಮಾಡವರೆ ಎಂದು ಊರಲ್ಲೆಲ್ಲಾ ಮಾತಾಯಿತು.

ಆದರೂ ಈ ಕೋಣನ ಬಾಡು ಬಹಳಷ್ಟು ಜನರಿಗೆ ತಲುಪಿದ್ದರಿಂದ ಯಾರೂ ಹೆಚ್ಚಾಗಿ ಆಗ ತಲೆ ಕೆಡಿಸಿಕೊಂಡಿರಲಿಲ್ಲ. ಈಗ ಗುಂಡಿಗೆ ಹಂದಿ ಬಿದ್ದಿರುವ ಸಂಗತಿಯು ತಿಳಿದ ಮೇಲೆ, ಅವನು (ಚಿಕ್ಕಣ್ಣ) ಆನಂದಾತಿರೇಕಕ್ಕೊಳಗಾಗಿ ಬಯಸದೇ ಬಂದ ಭಾಗ್ಯ ಎನ್ನುತ್ತಾ ಆ ಬಗ್ಗೆ ಯೋಜನೆ ಹಾಕತೊಡಗಿದ. ಮನೆಯ ಹೆಂಗಸರು ಈ ಘಟನೆ ಯಾವುದೋ ಕೇಡಿನ ಸೂಚನೆ ಎನ್ನುವಂತೆ ಲೆಕ್ಕ ಹಾಕತೊಡಗಿದರು. ಚೆಲುವನ ಅವ್ವ ಯಾಕೋ ಹೆದರಿ ಮಗನನ್ನು ಕೂಗಿಕೊಂಡಳು. ಹರಿಕತೆಯಲ್ಲಿ ಹೇಳಿದ್ದ ಕತೆ ಅವಳಿಗೆ ನೆನಪಾಗಿ 'ಅಯ್ಯೋ ದೇವ್ರೆ, ಸ್ವಾಮಿ ಹಂದಿ ರೂಪ ತಾಳಿತ್ತು ಅಂತಾ ಹೇಳ್ತಿದ್ರಲ್ಲಪ್ಪಾ, ಆ ರಾಕ್ಷಸನ್ನ ಸಾಯ್ಸಕೆ ಆ ಅವುತಾರ ಎತ್ತಿ ಏಲ್ ಮನೆವೊಳ್ಗಿದ್ದೋನ ಸಿಗುದಾಕ್ತಂತಲ್ಲಾ" ಎಂದು ಅಸ್ಪಷ್ಟವಾಗಿ ನೆನಪಿಸಿಕೊಂಡಳು.[೩೭]

ಹೀಗೆ ಒಂದು ಸಂಗತಿಯನ್ನು ಹಲವು ಕೋನಗಳಿಂದ ಗ್ರಹಿಸಿ ಲೇಖಕರು ಸಂಕೀರ್ಣತೆಯನ್ನು ಸಾಧಿಸಿದ್ದಾರೆ. ಚೆಲುವನ ತಾತ ಗುಂಜಾರಯ್ಯನಿಗೆ ಈ ಸಮಸ್ಯೆಯಿಂದ ಹೊರ ಬರುವುದು ಹೇಗೆಂಬ ಆತಂಕ. ಚೆಲುವನ ಅಪ್ಪ ಚಿಕ್ಕಣ್ಣನಿಗೆ ಪರಿಸ್ಥಿತಿಯ ಲಾಭ ಪಡೆಯುವುದು ಹೇಗೆಂಬ ಯೋಚನೆ. ಮನೆಯ ಹೆಂಗಸರಿಗೆ ಇದು ಎಲ್ಲಿಗೆ ಹೋಗಿ ಮುಟ್ಟಬಹುದೆಂಬ ಭೀತಿ. ಚೆಲುವನಿಗಾದರೂ ತನ್ನ ಬುಗುರಿಯದೇ ಚಿಂತೆ. ಬೆಳಿಗ್ಗೆ ಬೀದೀಲಿ ಬುಗುರಿ ಆಡುತ್ತಿದ್ದಾಗ ಬಾರಿ ಕೋಲು ತಂದು ಚಟೀರನೇ ಹೊಡೆದು ಬುಗುರಿಯನ್ನು ಆ ಕಕ್ಕಸು ಗುಂಡಿಗೆ ಚಿಕ್ಕಣ್ಣ ಬಿಸಾಡಿದ್ದ. ಅಪ್ಪನೇ ಒಂದು ದೊಡ್ಡ ರಾಕ್ಷಸನಂತೆ ಚೆಲುವನ ಮನಸ್ಸಿಗೆ ಸುಳಿದು ಬಂದ ಹಾಗೆಯೇ ಆ ಮನೆಯ ಅವನ ಅವ್ವ ಅಜ್ಜಿಯರ ಪೇಲವ ವಿಷಣ್ಣ ಮುಖಗಳು ಎದುರಾಗಿ ಅವರು ಎಂತದೋ ಭಯಂಕರ ರೋಗಗಳಿಂದ ಬಳಲುತ್ತಿರಬೇಕೆಂದು ಭಾವಿಸಿಕೊಂಡ. ಅಪ್ಪ ಆ ಗುಂಡಿಗೆ ಹೇಗೆ ಇಳಿಯುತ್ತಾನೆ. ಹಂದಿಯನ್ನು ಹೇಗೆ ಮೇಲೆಕ್ಕೆತ್ತುತ್ತಾನೆ. ಆಗ ತನ್ನ ಬುಗುರಿ ಸಿಕ್ಕರೆ ಏನು ಮಾಡುತ್ತಾನೆ ಎಂಬ ಕುತೂಹಲ ಮತ್ತು ಆತಂಕ ಚೆಲುವನದು. ಹಂದಿಯನ್ನು ಗುಂಡಿಯಿಂದ ತೆಗೆಯುವ ಭರದಲ್ಲಿ ಸ್ವತಃ ಚಿಕ್ಕಣ್ಣನೂ ಜಾರಿಕೊಂಡು ಹೋಗಿ ಥೇಟ್ ಹಂದಿಯಂತೆ ಆ ಕಕ್ಕಸು ಗುಂಡಿಗೆ ಬಿದ್ದು ಸೊಂಟದ ತನಕ ಕಕ್ಕಸು ಮೆತ್ತಿಕೊಳ್ಳುತ್ತಾನೆ. ಇದನ್ನು ನೋಡಿ ಗುಂಜಾರಯ್ಯ ಪೂಜಾರಿಕೆಯು ತನ್ನ ವಂಶ ಊರ ದೇವರ ಪೂಜಾರಿಕೆಗೆ ಅಪವಿತ್ರವಾಯಿತು ಎಂದು ನೋವು ಪಟ್ಟ. ಚಿಕ್ಕಣ್ಣನ ಮನೆಯ ಕಷ್ಟವು ಅಷ್ಟು ಸುಲಭವಾಗಿ

ಬಗೆಹರಿಯುವಂತದ್ದಲ್ಲ. ಅದು ನಿರಂತರ. ಸಾಮಾಜಿಕವಾಗಿ ದಲಿತರ ಮೇಲಾಗುವ ದೌರ್ಜನ್ಯಕ್ಕೆ ಕೊನೆಯಿಲ್ಲದಂತಾಗಿದೆ. ನ್ಯಾಯ ಕೊಡುವ ನೆಪದಲ್ಲಿ ಹೆದರಿಸಿ ಪೋಲೀಸು ಠಾಣೆಯ ಹೇಲು ಗುಂಡಿಯನ್ನು ಸರಿಪಡಿಸಲು ಗುಂಜಾರಯ್ಯ ಮತ್ತು ಚಿಕ್ಕಣ್ಣರನ್ನು ಬಳಸಿಕೊಳ್ಳುವುದು ನಿಜಕ್ಕೂ ಹೇಯವಾದುದು.

ಬಾನು ಮುಸ್ತಾಕ್‌ರವರ 'ದೇವರು ಮತ್ತು ಅಪಘಾತ'

'ಉಪ್ಪಿಗಿಂತ ರುಚಿಯಿಲ್ಲ, ತಾಯಿಗಿಂತ ಬಂಧುವಿಲ್ಲ' ಎಂಬ ಮಾತಿನಂತೆ ಅನ್ನಕ್ಕೆ ಮಿಗಿಲಾದ ಆಹಾರವಿಲ್ಲ ಎಂಬುದನ್ನು ಸೇರಿಸಿಕೊಳ್ಳಬಹುದು. ಹಸಿದ ಒಡಲನ್ನು ತುಂಬಿಸಿಕೊಳ್ಳುವುದಕ್ಕಾಗಿ ಬಡವರು, ನಿರ್ಗತಿಕರು ಪಡುವ ಬವಣೆ ಸಾಮಾನ್ಯವಾದುದೇನಲ್ಲ ಎಂಬುದನ್ನು 'ಬಾನು ಮುಸ್ತಾಕ್'ರವರ 'ದೇವರು ಮತ್ತು ಅಪಘಾತ' ಕಥೆಯು ನಿರೂಪಿಸುತ್ತದೆ.

ಸಮಾಜಸೇವಾ ಕಾರ್ಯಕರ್ತೆಯಾಗಿ ಗುರುತಿಸಿಕೊಂಡಿರುವ ಬಾನು ಮುಸ್ತಾಕ್‌ರವರು ಬರೆದ ಕಥೆಗಳು 'ಬೆಂಕಿಮಳೆ' 'ಎದೆಯ ಹಣತೆ'ಗಳಾದರೆ 'ಬಡವರ ಮಗಳು ಹೆಣ್ಣಲ್ಲ' ಎಂಬ ಕಾದಂಬರಿಗಳು. ಈ ಶೀರ್ಷಿಕೆಗಳೇ ಬಡವರ ಬಡತನದ ಯಾತನೆಯನ್ನು ಹೆಣ್ಣಿನ ಅಸಹಾಯಕತೆಯನ್ನು ಹೇಳುವುದರ ಜೊತೆಗೆ ಹೆಣ್ಣು ಎನ್ನಿಸಿಕೊಂಡವಳು ಹೆಣ್ಣಾಗಿ ಕೂರದೆ ತನ್ನೆಲ್ಲ ಶಕ್ತಿಮೀರಿ ಗಂಡಿನಷ್ಟೇ ಸಮರ್ಥಳಾಗಿ ಬದುಕನ್ನು ಕಟ್ಟಿಸಿಕೊಳ್ಳಲು ಹೆಣಗುವ ಪರಿ, ಸಂಸಾರದ ಬಂಡಿಯನ್ನು ಮುನ್ನೆಡೆಸುವ ಸಾರಥಿತನವನ್ನು ನೋಡಿದರೆ, ಹೆಣ್ಣು ಗಟ್ಟಿಗಿತ್ತಿ ಎಂಬುದು ನಿರೂಪಿತವಾಗುತ್ತದೆ. ಹೆಣ್ಣಿನ ಕಷ್ಟವನ್ನು, ನೋವನ್ನು ಹತ್ತಿರದಿಂದ ಬಲ್ಲ ಬಾನು ಮುಸ್ತಾಕ್ ಬರೆದಿರುವ ಒಂದು ವಿನೂತನ ಕಥೆಯೇ 'ದೇವರು ಮತ್ತು ಅಪಘಾತ'.

ಈ ಕಥೆಯ ನಾಯಕಿ ಮರಿಯಮ್ ಬಿ. ಊರಿನ ತುದಿಯಲ್ಲಿ ಅಣಬೆಯಂತೆ ಮೈವೆತ್ತಿದ್ದ ಗುಡಿಸಲುಗಳಲ್ಲಿ ಕೊನೆಯದು ಇವಳದಾಗಿತ್ತು. ನಾಲ್ಕೈದು ಬಾರಿ ಮುನಿಸಿಪಾಲಿಟಿಯವರು (ನಗರಸಭೆ) ಆ ಗುಡಿಸಲನ್ನು ಕಿತ್ತು ಹಾಕಿದ್ದರೂ ಮನುಷ್ಯ ಪ್ರಾಣಿಗಳ ಸೂರಿನ ಅವಶ್ಯಕ ಬಯಕೆಯೆದುರು ಸೋತು-ಸುಮ್ಮನಾಗಿದ್ರು. ಮರಿಯಮ್ ಬಿ.ಯೇ ನಿಂತು ಮಣ್ಣಿನ ಗೋಡೆ ಸಿದ್ಧಪಡಿಸಿ ಸೂರನ್ನು ಹೊದ್ದಿಸಿದ್ದಳು. ಹೀಗಾಗಿ ಅವಳ ಉಳಿತಾಯದ ಹಣವೆಲ್ಲಾ ಗುಡಿಸಲ ರೂಪವನ್ನು ಪಡೆದಿತ್ತು. ಕೆರೆಯಲ್ಲಿ ನೀರು ಏರಿದರೆ ಅವಳ ಗುಡಿಸಲೇ ಮೊದಲು ತುತ್ತಾಗುವುದೆಂದು ಎಲ್ಲರೂ ಭವಿಷ್ಯ ನುಡಿದಿದ್ದರೂ ಮರಿಯಮ್ ಬಿ. ತಲೆಕೆಡಿಸಿಕೊಂಡಿರಲಿಲ್ಲ. ಬಾರೀ ಮಳೆಯ ಕಾರಣದಿಂದ ಗುಡಿಸಲು ಸೋರುತ್ತಿತ್ತು. ಸೋರುವ ನೀರನ್ನು ನೆಲದ ಮೇಲೆ ಹರಡಿದ್ದ ಪಾತ್ರೆ, ತಟ್ಟೆಗಳು ತಮ್ಮೊಡಲಲ್ಲಿ ತುಂಬಿಕೊಂಡಿದ್ದವು. ಇಪ್ಪತ್ತು ದಿನಗಳ ಬಾಣಂತಿಯಾಗಿದ್ದ ಅವಳ ಮಗಳು, ಕೂಸನ್ನು ಮಡಿಲಲ್ಲಿ ತುಂಬಿಕೊಂಡು ಒಂದಿಷ್ಟು ಒಣನೆಲ ಹುಡುಕುತ್ತಾ ಆ ರಾತ್ರಿಯಿಡೀ ಪರದಾಡಿದ್ದಳು.

ಮರಿಯಮ್ ಬಿ.ಯ ಮನೆಯ ಬಡತನದ ಪಾಡು ಹಾಗೂ ಆಕೆಯ ಬಾಳಿನಗೋಳು ಮೊದಲ ಭಾಗದಲ್ಲಿಯೇ ಅನಾವರಣವಾಗಿದೆ. ಹಿಂದೆ, ಬಹಳ ಹಿಂದೆ, ಅವಳಿಗೊಂದು ಹೆಸರಿತ್ತು. ಅವಳು ಲಂಗತೊಟ್ಟು ನೀರಿನ ಹನಿಗಳೊಡನೆ ಚಿಮ್ಮಿದಾಗ, ಸೀರೆಯ ಸೆರಗನ್ನು ಮೊದಲ ಬಾರಿಗೆ ಎದೆಯ ಮೇಲೆ ಹರಡಿದಾಗ ಯಾರಾದರೂ ಬೆರಳಿನಿಂದ ಅವಳ ಗದ್ದವನ್ನು ಮೇಲೆತ್ತಿದಾಗ,

ಕಣ್ಣು ಮುಚ್ಚಿಕೊಂಡು ನಾಚಿದ ವಧುವಾಗಿದ್ದಾಗ, ಅವಳ ಗಂಡನ ಬಲವಾದ ಬಾಹುಗಳಲ್ಲಿ ನಲುಗಿದಾಗ, ಅವನಿಗೆ ಕೋಪ ಬಂದು ಒದ್ದಾಗ, ಮುಂದಲೆ ಹಿಡಿದು ಗೋಡೆಗೆ ಕುಟ್ಟಿದಾಗ ಆಗೆಲ್ಲಾ ಅವಳಿಗೆ ಒಂದು ಹೆಸರಿತ್ತು. ಕಾಲ ಅವಳ ಮುಖದ ಮೇಲೆ ಸರಳ ರೇಖೆ, ತ್ರಿಕೋನ, ವಕ್ರರೇಖೆಗಳ ಜಾಮಿತ್ರಿಯ ಗುರುತು ಬಿಡಿಸಿಹೋದಂತೆ, ಕರುಳುಗಳು ನುಲಿದು, ಹೆಣೆದುಕೊಂಡು ಹಿಗ್ಗಾಮುಗ್ಗಾ ಎಳೆದಾಡಿದಾಗ, ಬಸಿರ ಕುಡಿಯು ಬಿಸಿಲು, ಚಳಿ ಮಳೆಗಾಲದ ಹೊಡೆತಕ್ಕೆ ಮುರುಟ ಹೋಗುವುದೆನಿಸಿದಾಗ ಅವಳು ಮಣ್ಣು ಹಿಡಿದ ಮಾಸಲು ಬಣ್ಣದ ಚಾದರವನ್ನು ಹೊದ್ದಳು. ಅಳುವ ಮನೆಗಳಿಗೆ ಹೊಕ್ಕಳು. ಬಿಕ್ಕುವ ದನಿಗಳಿಗೆ ಕಿವುಡಾದಳು. ಅವಳೆದುರು ಇರುತ್ತಿದ್ದ ನಿರ್ಜೀವ ದೇಹಗಳಿಗೆ ಸ್ನಾನ ಮಾಡಿಸುತ್ತಿದ್ದಳು. ಸೆಂಟು ಹಚ್ಚುತ್ತಿದ್ದಳು. ಬೆಂಕಿ ಕಡ್ಡಿಯನ್ನು ಹಿಡಿದು 'ಲಾ ಇಲಾಹ ಇಲ್ಲಲ್ಲಾ ಮಹಮ್ಮದ್ ರಸೂಲಲ್ಲಾಹ್' ಎಂದು ಚಾಚೂ ತಪ್ಪದೇ ಕಲ್ಮ ಬರೆಯುತ್ತಿದ್ದಳು (ಕಲ್ಮ ಎಂದರೆ ಕಲಿಮ, ಎಂದರೆ ಇಸ್ಲಾಮಿನ ೫ ಆಧಾರ ಸ್ತಂಭಗಳಲ್ಲಿ ಮೊದಲನೆಯದು ದೇವರು ಅಲ್ಲಾಹನೊಬ್ಬನೆ)[೭] ಹಾಗಾದಾಗ ಮಾತ್ರ ಭಗಭಗನೆ ಉರಿಯುತ್ತಿದ್ದ ಅವಳ ಒಡಲ ಹಸಿವು ಶಾಂತವಾಗುತ್ತಿತ್ತು. ಆಗಲೇ ಅವಳನ್ನು ಎಲ್ಲರೂ 'ಗಸ್ಸಾಲಿನ್ ಚಿಕ್ಕಮ್ಮ' ಎಂದು ಕರೆದದ್ದು. ಹೆಣಕ್ಕೆ ಸ್ನಾನ ಮಾಡಿಸುವ ಚಿಕ್ಕಮ್ಮ ಎಂದೇ ಹೆಸರಾದಳು.

ಮರಿಯಮ್ ಬಿ. ಕಷ್ಟವೋ ನಷ್ಟವೋ ಮನೆಯ ಚಾಕರಿಯನ್ನೇ ಮಾಡಿಕೊಂಡು ಬದುಕುವ ಸುಖವನ್ನು ಕಳೆದುಕೊಂಡಳು. ಮನೆಯ ಯಜಮಾನ ಸರಿ ಇದ್ದಿದ್ದರೆ ಮರಿಯಮ್ ಬಿ. ಎಲ್ಲ ಹೆಣ್ಣುಗಳಂತೆ ಬದುಕಬಹುದಾಗಿತ್ತು. ಆದರೆ ಕಟ್ಟಿಕೊಂಡವನು ಪಲಾಯನ ಮಾಡಿದರೆ, ಹೆಣ್ಣುತಾನೆ ಏನು ಮಾಡಿಯಾಳು? ತನ್ನ ಒಡಲನ್ನು ತುಂಬಿಸಿಕೊಳ್ಳುವುದಷ್ಟೇ ಅಲ್ಲದೇ ತನ್ನ ಬಸಿರ ಕುಡಿಯ ಹೊಟ್ಟೆ ತುಂಬಬೇಕಲ್ಲ. ಅನಿವಾರ್ಯವಾಗಿ ಅವಳು ಆಯ್ದುಕೊಂಡದ್ದು ಸತ್ತವರ ಮನೆಗೆ ಹೋಗಿ ಅವರು ಅಳುತ್ತಿದ್ದರೂ, ಅದಕ್ಕೆ ಕಿವಿಗೊಡದೆ ಹೆಣಗಳಿಗೆ ಸ್ನಾನಮಾಡಿಸುವ ಕೆಲಸವನ್ನು. ಹೀಗೆ ಮಾಡಿದರೆ ಮಾತ್ರ ಹೊಟ್ಟೆ ತುಂಬುತ್ತಿತ್ತು.

ಇಲ್ಲಿ ಬಾನು ಮುಸ್ತಾಕ್‌ರವರು ತಮ್ಮ ಜನಾಂಗದ ಒಬ್ಬ ಹೆಣ್ಣು ಮಗಳು ಬಡತನದ ಬೇಗೆಯಲ್ಲಿ ನೊಂದು-ಬೆಂದು ಕೊನೆಗೆ ತಾನೂ ಬದುಕಬೇಕೆಂಬ ಹಠದಿಂದ ಆಯ್ದುಕೊಂಡ ಕೆಲಸದ ಬಗ್ಗೆ ತಿಳಿಸಿ ಗಮನ ಸೆಳೆಯುತ್ತಾರೆ. ಮೊದಲು ಮರಿಯಮ್ ಬಿ. ಬಂಗಲೆಯಲ್ಲಿ ಅಡಿಗೆಯವಳಾಗಿದ್ದಳು. ಆಗಾಗ್ಗೆ ಸಾಹುಕಾರ್ರ ಹೆಂಡತಿ ಅಪ್ಪಣೆ ಮಾಡುವಳು. 'ಮರಿಯಮ್ ಜಮೀಲ್ ಸಾಹುಕಾರ್ರಿಗೆ ಹಾಲು ಕುಡಿಸು, ಮರಿಯಮ್ ಇಲ್ನೋಡು ಅನ್ವರ್ ಸಾವ್ಕಾರ್ರಿಗೆ ಮೂಗೊರ್ಲೋಕ್ಕಾಗೊಲ್ವಾ ನಿನ್ಗೆ? ಓ ಮರಿಯಮ್, ಅಕ್ರಮ್ ಸಾವ್ಕಾರ್ರಿಗೆ ನೋಡೋಕ್ಕಾಗೊಲ್ವ... ನ್ಯಾಪ್‌ಕಿನ್ ತುಂಬಾ ಕಕ್ಕಸು ಮಾಡಿದ್ದಾರೆ. ಅವರನ್ನು ಎತ್ಕೊಂಡ್ಹೋಗಿ ತೊಳೆಸು." ಎಂದಾಗ ಮರಿಯಮ್‌ಗೆ ದಿಗ್ಭ್ರಾಂತಿ. ಈ ಚೋಟುದ್ದವೆಲ್ಲಾ ಹುಟ್ಟುತ್ತಲೇ ಹೇಗೆ ಸಾವ್ಕಾರ್ರಾಗಿಬಿಟ್ಟು? ಎಂದು ಮತ್ತೆ ಅವರ ತಾಯಂದಿರೂ ಕೂಡ ಸಾವ್ಕರ್ರೆ. ಆಮೇಲೆ ಅವಳಿಗೆ ಅಭ್ಯಾಸವಾಗಿ ಬಿಟ್ಟಿತು. 'ಮರಿಯಮ್' ಎಂಬ ಕೂಗು ಅವಳ ಕಿವಿಯ ಮೇಲೆ ಬಿದ್ದ ಕೂಡಲೇ ಅವಳು ಯಾವುದೋ ಒಬ್ಬ ಸಾವ್ಕಾರ್ರಿಗೆ ಚಡ್ಡಿ ತೊಡಿಸಲು, ಸಿಂಬಳ ಒರೆಸಲು, ತಿಕ ತೊಳೆಸಲು ಸನ್ನದ್ಧಳಾಗಿರುತ್ತಿದ್ದಳು. ಇದೇ ಅವಳ ದಿನನಿತ್ಯದ ಕಾಯಕ.

ಬಡವರೆಂದರೆ ಧನಿಕರ ಮನೆಯ ಸೇವಕರು. ಅವರು ಹೇಳಿದ್ದನ್ನು ಚಾಚೂ ತಪ್ಪದೇ ಮಾಡಲೇ ಬೇಕು. ಹೊಟ್ಟೆ ತುಂಬಬೇಕಲ್ಲಾ!

ಮರಿಯಮ್ ಬಿ. ಇಪ್ಪತ್ತೇಳು ದಿನದಿಂದ ಕೆಲಸಕ್ಕೆ ಹೋಗಿರಲಿಲ್ಲ. ಬದುಕುವುದಾದರೂ ಹೇಗೆ? ಬರೀ ಜೀವ ಹಿಡಿಯುವುದಷ್ಟೇ ಅಲ್ಲದೇ ತನ್ನ ಮಗಳಾದ ಹಸೀನಾಳಿಗೆ ನಲವತ್ತನೆ ದಿನದ ಶಾಸ್ತ್ರಕ್ಕೆ ಒಂದು ಸೀರೆ, ಅವಳ ಮಗುವಿಗೆ ಒಂದು ಬಟ್ಟೆ, ಅಳಿಯನಿಗೇನಾದರೂ ಉಡುಗೊರೆ, ಮಗಳನ್ನು ಕರೆದೊಯ್ಯಲು ಬರುವ ಅವಳ ಅತ್ತೆಯ ಮನೆಯವರಿಗೆ ಊಟ, ತಿಂಡಿ, ಕೊನೆಗೆ ಈ ಮನೆಗೆ ಹೊದಿಸಲು ಹೆಂಚು.... ಅಯ್ಯೋ ನನ್ನ ದುರಾಸೆಗೆ ಮಿತಿ ಇಲ್ಲವೇ ಎಂದು ನಗುವಳು.

ಬಡವರಾದರೂ, ಏನೇ ಸಂಕಷ್ಟಗಳಿದ್ದರೂ ಮಾಡುವ ಕಾರ್ಯವನ್ನು ಚಾಚೂ ತಪ್ಪದೇ ಮಾಡಲೇಬೇಕು. ಬಿಡುವ ಹಾಗಿಲ್ಲ. ಅಲ್ಲದೇ ಕಳೆದ ೨೭ ದಿನಗಳಿಂದ ಆ ದೊಡ್ಡ ಪಟ್ಟಣದಲ್ಲಿ ಯಾರೂ ಸತ್ತಿರಲಿಲ್ಲವೆಂದಲ್ಲ. ಪಟ್ಟಣದ ಆ ಭಾಗದಲ್ಲಿರುವ ನೂರಾರು ಮಸೀದಿಯಿಂದ ಹಿಡಿದು ಜಾಮಿಯ ಮಸೀದಿಯ ವರೆಗಿನ ಏಳು ಮಸೀದಿಗಳ ಪ್ರದೇಶಕ್ಕೆ ಗಸ್ಸಾಲಿನ್ ಆಗಿ ನೇಮಕವಾಗಿದ್ದುದು ಜಮಾಲ್ ಬಿ. ಏನಿಲ್ಲವೆಂದರೂ ಆ ಕಡೆ ಐದಾರು ಹೆಂಗಸರ ಸಾವಾಗಿದೆ. ಆದರೆ ಈ ಮರಿಯಮ್‌ನ ಅಧಿಕಾರ ವ್ಯಾಪ್ತಿಯಲ್ಲಿರುವ ಹೆಂಗಸರೆಲ್ಲಾ ಸಾಯಲೇ ಬಾರದೆಂದು ಛಲ ಹೊತ್ತಿರುವಾಗ ಅವಳು ಬದುಕುವುದಾದರೂ ಹೇಗೆ? ಚಿಂತಾಮಗ್ನಳಾದಳು. ತನ್ನ ಮತ್ತು ಮಗಳ ಹೊಟ್ಟೆ ತುಂಬಬೇಕಾದರೆ, ಯಾರಾದರೂ ಹೆಂಗಸರು ಸಾಯಬೇಕು. ಮರಿಯಮ್‌ನ ಅಧಿಕಾರ ವ್ಯಾಪ್ತಿಯಿರುವ ಪ್ರದೇಶದಲ್ಲಿ ಯಾರಾದರೂ ಹೆಂಗಸರು ಸಾಯಲೇಬೆಕಿತ್ತು. ಒಬ್ಬರ ಸಾವು ಇನ್ನೊಬ್ಬರ ಹೊಟ್ಟೆ ತುಂಬಿಸುವ ದಾರಿಗೆ ಅವಕಾಶವನ್ನುಂಟುಮಾಡುವುದು. ಯಾರೋ ಕರೆದಂತಾಯಿತು. "ಮರಿಯಮ್ ಬೀ" ಕಂಟ್ರಾಕ್ಟರ್ ಆದಮ್ ಸಾಹೇಬರ ಮನೆಗೆ ಕೂಡಲೇ ಬರಬೇಕೆಂದು ಗಿಡ್ಡನೆಯ ವ್ಯಕ್ತಿ ನುಡಿಯಿತು. ಮರಿಯಮ್ ಬೀಗೆ ಸಂತೋಷ, ಆದರೂ ಅದನ್ನು ತೋರ್ಪಡಿಸಿಕೊಳ್ಳದೆ "ಏನಾಗಿದೆ, ಅವರ ಮನೇಲೀ?" ಎಂದು ಪ್ರಶ್ನಿಸಿದಳು. "ಅವರ ಸೊಸೆ ಸತ್ತು ಹೋದರು" ಎಂದು ಕಪ್ಪುಗಡ್ಡದ ಗಿಡ್ಡ ವ್ಯಕ್ತಿ ನುಡಿದಾಗ ಪಾಪ ಎನ್ನುವುದನ್ನು ಮರೆತುಬಿಟ್ಟಳು. ಸಾವಿನ ಸುದ್ದಿ ಕೇಳುತ್ತಿದ್ದಂತೆ ಅವಳ ಧಮನಿ ಧಮನಿಗಳಲ್ಲಿ ಹೊಸರಕ್ತ ಸಂಚಾರವಾಯಿತು. ಹೊಟ್ಟೆಯ ಸಂಕಟ ಅಡಗಿತು. ಅವಳು ಎದ್ದು ನಿಂತಳು. "ಅವರ ಮಗಳೂ ಕೂಡ" ಎಂದಾಗ, ಅವಳ ನರನಾಡಿಗಳೆಲ್ಲಾ ಲವಲವಿಕೆಯಿಂದ ಹುರಿಗಟ್ಟತೊಡಗಿದವು. ಮತ್ತೆ ಅವಳ ಮೊಮ್ಮಗಳು ಕೂಡ ಸತ್ತು ಹೋಗಿದ್ದಾಳೆ. ಆ ವ್ಯಕ್ತಿ ನುಡಿದಾಗ, ಮರಿಯಮ್ ಬೀ.ಗೆ ಆಶ್ಚರ್ಯವಾಯಿತು. ಈ ಕೈಗಳಿಗೆ ಇಷ್ಟೇಕೆ ಬಲಬಂದಿದೆ? ಅವಳ ಎದೆ ಕಾತರತೆಯಿಂದ ಬಡಿದುಕೊಳ್ಳಲಾರಂಭಿಸಿತು. ಹಳೆಯ ಚಾದರವನ್ನು ತೆಗೆದುಕೊಂಡು ಬೇಗನೆ ತಲೆಯ ಮೇಲೆ ಸುತ್ತಿಕೊಳ್ಳಲಾರಂಭಿಸಿದಳು. ಮಗಳಿಗೆ, 'ಬರೋದು ತಡವಾಗುತ್ತೆ' ಎಂದು ಹೇಳಿ ದಾಪುಗಾಲಿಡುತ್ತಾ ನಡೆದಳು. ಹೇಗೆ ಸತ್ರು ಎಂದು ಕೇಳಲಿಲ್ಲ. ನಡಿಗೆ ಮಾತ್ರ ಚುರುಕಾಯಿತು.

ಆದಮ್ ಸಾಹೇಬರ ಮನೆಗೆ ಬಂದಾಗ, ಬಿಳಿಯ ತಲೆ ವಸ್ತ್ರ ಕಟ್ಟಿದ ಗಂಡಸರ ಗುಂಪು, ಅಲ್ಲಲ್ಲೇ ಮಕ್ಕಳು ಓಡಾಡುತ್ತಿದ್ದರು. ಮನೆಯ ಮುಂಭಾಗದಲ್ಲಿ ದಾನ ಮಾಡಲು ಇಟ್ಟಿದ್ದ ಗೋಧಿ, ಅಕ್ಕಿ, ಉಪ್ಪಿನ ಮೂಟೆಗಳನ್ನು ಗಮನಿಸಿದಳು. ಒಮ್ಮೆಲೆ ನಿಂತು ತನ್ನ ಚಾದರದ ತುಂಬಾ

ಅವುಗಳನ್ನು ತುಂಬಿಸಿ ಕೊಳ್ಳಬೇಕೆನಿಸಿತು. ಆದರೆ ತನ್ನ ಸೇವೆಗೆ ಪ್ರತಿಫಲವಾಗಿ ಅಷ್ಟೇ ಏಕೆ? ಇನ್ನೂ ಹೆಚ್ಚಿಗೆ ಸಿಗುವಾಗ ತನ್ನ ಘನತೆ ತಾನು ಉಳಿಸಿಕೊಳ್ಳಬೇಕೆಂದುಕೊಂಡಳು.

ಹೊಟ್ಟೆ ತುಂಬಾ ಅನ್ನ ಕಾಣದ ಮರಿಯಮ್‌ಗೆ ಆದಮ್ ಸಾಹೇಬರ ಮನೆಯ ಮುಂಭಾಗದಲ್ಲಿ ದಾನ ಮಾಡಲು ಇಟ್ಟಿದ್ದ ದವಸಧಾನ್ಯಗಳನ್ನು ಕಂಡಾಗ ಸಹಜವಾಗಿಯೇ ಆಸೆ ಉಂಟಾಯಿತು. ತನ್ನ ಆಸೆ ತುಂಬಿದ ಕಣ್ಣುಗಳಿಂದಲೇ ವೀಕ್ಷಿಸಿದಳು. ತಟ್ಟನೆ ಎಚ್ಚರಗೊಂಡು ತನ್ನ ಸೇವೆಗೆ ಹೆಚ್ಚು ಸಿಗುವಾಗ ತಾನೇಕೆ ತನ್ನ ಘನತೆಯನ್ನು ಉಳಿಸಿಕೊಳ್ಳಬಾರದೆಂದು ಚಾಣಾಕ್ಷ ನಡಿಗೆ ನಡೆದಳು.

ಮರಿಯಮ್ ಬೀಯನ್ನು ಕರೆಯಲು ಬಂದಿದ್ದ ಗಿಡ್ಡ ವ್ಯಕ್ತಿ ಅವಳನ್ನು ಉದ್ದೇಶಿಸಿ 'ಗಸ್ಸಾಲಿನ್ ಚಿಕ್ಕಮ್ಮ, ಇವರೆಲ್ಲಾ ಆಕ್ಸಿಡೆಂಟ್‌ನಲ್ಲಿ ತೀರಿಕೊಂಡಿರೋರು. ನೆನ್ನೆ ಬೆಳಿಗ್ಗೆ ಆಕ್ಸಿಡೆಂಟಾಗಿರೋದು, ಪೋಸ್ಟ್ ಮಾರ್ಟಮ್ ಆಗಿ ನಮ್ಮ ಕೈಸೇರೋ ಹೊತ್ಗೆ ಇಷ್ಟೊತ್ತಾಗಿದೆ. ನಾವು ಜಾಸ್ತಿ ಹೊತ್ತು ಹೆಣಗಳನ್ನು ಇಟ್ಟುಕೊಳ್ಳಲಾಗುವುದಿಲ್ಲ. ನೀರು ಬಿಸಿಯಾಗಿದೆ. ಬಟ್ಟೆ ಎಲ್ಲಾ ತಂದಾಗಿದೆ. ನಿಮ್ಮ ಕೆಲಸ ಬೇಗ ಮಾಡಿ, ನಮಗೆ ಜೊಹರ್ ನಮಾಜಿನ ವೇಳೆಗೆ ಹೆಣಗಳನ್ನು ಸಿದ್ಧಮಾಡಿಕೊಟ್ಟರೆ ಆಯಿತು." ಹೆಣಗಳಷ್ಟೇ ತಣ್ಣಗೆ ಕೊರೆಯುವ ಧ್ವನಿಯಲ್ಲಿ ಮಾತುಕತೆಯಾಡಿ ಮುಗಿಸಿದ.[೮]

ಮರಿಯಮ್‌ಬೀ ಅಲ್ಲೇ ಒಂದು ಕ್ಷಣ ನಿಂತಳು. ಅವಳಿಗೆ ಆ ಮನೆಯವರು ಗೊತ್ತಿದ್ದರು. ಜೀನತ್, ರೇಹಾನ, ಅಸ್ಮ... ಎಷ್ಟು ಬೇಗ ಅವರ ಹೆಸರುಗಳು ಮಾಯವಾದವು? ಈಗ ಅವರು ಬರೀ ಹೆಣಗಳು. ಬೇಗ ರೆಡಿ ಮಾಡಿ ಮಣ್ಣು ಪಾಲು ಮಾಡೋದಕ್ಕೆ. ಆಹಾ! ತನ್ನ ಕೆಲಸವಾದರೂ ಎಂತಹುದೆಂದರೆ ಮಣ್ಣಿನಲ್ಲಿ ಮುಚ್ಚಲು ಉಗುರು ಸಂದಿನಲ್ಲಿರುವ ಕೊಳೆಯನ್ನು ಕೂಡಾ ನಾಜೂಕಾಗಿ ಬೆಂಕಿಕಡ್ಡಿಯಿಂದ ತೆಗೆಯಬೇಕು. ಹೊಸ ಕಫನ್‌ನಲ್ಲಿ ಸುತ್ತಬೇಕು. ಗಂಡಸಾದರೆ ಐದು ಸುತ್ತು ಬಟ್ಟೆ, ಹೆಂಗಸಾದರೆ ಏಳು ಸುತ್ತು ಬಟ್ಟೆ, ಗಂಡಸಿಗೆ ತೋಡಬೇಕಾಗಿರುವ ಗೋರಿ ಸೊಂಟದ ಮಟ್ಟ ಇರಬೇಕು. ಹೆಂಗಸಿಗೆ ಎದೆ ಮಟ್ಟ ತೋಡಬೇಕು. ಸಂಬಂಧಗಳು ಕೊನೆಯಾಗುವ, ಆತ್ಮೀಯರು ಅಪರಿಚಿತರಾಗುವ, ಕ್ಷಣಾರ್ಧದಲ್ಲಿ ಹೆಸರುಗಳು ಮಾಯವಾಗುವ ಮನುಷ್ಯ ದೇಹಗಳು ಕೂಡಲೇ ವಿತರಣೆಗೊಳ್ಳಬೇಕಾದ, ಅನುಪಯುಕ್ತ ವಸ್ತುಗಳಾಗುವ ಈ ಸಂದರ್ಭ ಎಷ್ಟೊಂದು ವಿಲಕ್ಷಣವಾದುದು.

ಮರಿಯಮ್ ಬೀ ಸೊಂಟದಿಂದ ಒಂದು ಉಂಡೆಯನ್ನು ತೆಗೆದು, ಬೇಗಬೇಗನೆ ಹೆಣದ ಉದ್ದವನ್ನು ಅಳತೆಮಾಡಿ ಅಲ್ಲಲ್ಲೇ ಗಂಟು ಹಾಕಿ ಗುರುತು ಮಾಡಿಕೊಂಡಳು. ಕಫನ್‌ಗೆ ಹೊಲಿಗೆಗಳಿರುವುದಿಲ್ಲ. ಅದನ್ನು ಎಷ್ಟೊಂದು ಚಾಕಚಾಕ್ಯತೆಯಿಂದ ಕತ್ತರಿಸಬೇಕೆಂದರೆ ಒಮ್ಮೆ ಕತ್ತರಿಸಿದ ಕಫನ್ ಆ ಹೆಣಕ್ಕೆ ಯಾವತ್ತೂ ಚಿಕ್ಕದಾಗಬಾರದು. ಅದಕ್ಕೆ ಮೊದಲೇ ಅಳತೆ ತೆಗೆದುಕೊಳ್ಳಬೇಕು. ಹಾಗೇನಾದರೂ ಉದ್ದ ಅಗಲಗಳಲ್ಲಿ ಕಫನ್ ಹೆಣದ ಅಳತೆಗೆ ಚಿಕ್ಕದಾದಲ್ಲಿ ಅದೊಂದು ಅಶುಭ ಸೂಚನೆ. ಆ ಮನೆಯಲ್ಲಿ ಮತ್ತೊಂದು ಸಾವಾಗಬಹುದೆಂದು ಶಂಕೆ ಇತ್ತು.

ಮರಿಯಮ್ ಬೀ ಕರಾರುವಕ್ಕಾಗಿ ಬಟ್ಟೆ ಕತ್ತರಿಸಿ, ಮಡಿಚಿಟ್ಟು ಅಂಟವಾಳ ಕಾಯಿಯನ್ನು ಕುಟ್ಟಿ, ನೆನೆಹಾಕಿ, ಧೂಪವನ್ನು ಪುಡಿ ಮಾಡಿ, ಕಣ್ಣಿಗೆ ಹಚ್ಚುವ ಸುರ್ಮವನ್ನು ಹಾಗೆಯೇ ಇಟ್ಟು,

ಯಾರೂ ಕೂಡ ಆ ಕೋಣೆಗೆ ಬರದಂತೆ ಬಾಗಿಲು ಎಳೆದು ಬಿಟ್ಟಳು. ಅಂಗಳಕ್ಕೆ ಬಂದಾಗ ಅಲ್ಲಿ ಮೂರು ಹಂಡೆಗಳಲ್ಲಿ ನೀರು ಕುದಿಯುತ್ತಿತ್ತು. ಅವಳು ಹಂಡೆಯ ಮುಚ್ಚಳವನ್ನು ಸರಿಸಿದಾಗ, ಅದರಲ್ಲಿ ದಾಳಿಂಬೆ ಎಲೆಗಳು ಹಜೆಯಾಡುತ್ತಿದ್ದವು. ನೀರೊಲೆಯ ಪಕ್ಕದಲ್ಲಿ ಸುಮಾರು ನಾಲ್ಕಡಿ ಉದ್ದ, ಒಂದೂವರೆ ಅಡಿ ಅಗಲ ಮೂರಡಿಯಷ್ಟು ಆಳದ ಗುಂಡಿಯನ್ನು ತೋಡಲಾಗಿತ್ತು. ಅದನ್ನು 'ಲಹದ್' ಎನ್ನುತ್ತಾರೆ. ಅದರ ಮೇಲೆ ಎರಡು ದಪ್ಪ ಮರದ ಹಲಗೆಗಳನ್ನು ಜೋಡಿಸಿ, ಆ ಹಲಗೆಗಳಲ್ಲಿ ಹೆಣವನ್ನಿಟ್ಟು ಸ್ನಾನ ಮಾಡಿಸಿದರೆ, ನೀರೆಲ್ಲಾ ಆ ಗುಂಡಿಯೊಳಗೆ ಬೀಳಬೇಕು. ಸ್ನಾನಕ್ಕೆ ಬಳಸಿದ ಬೇರೆ ವಸ್ತುಗಳೂ ಅಲ್ಲಿ ಬೀಳಬೇಕು. ಆ ನೀರು ಚರಂಡಿಯೊಳಗೆ ಹರಿದು ಹೋಗುವಂತಿಲ್ಲ. ಹೆಣಕ್ಕೆ ಸ್ನಾನ ಮಾಡಿಸುವಾಗ ಎಷ್ಟೊಂದು ವಿಧಿ ವಿಧಾನಗಳು. ದೇವರ ಸ್ತೋತ್ರ, ಪ್ರಾರ್ಥನೆಯೊಂದಿಗೆ ಶುದ್ಧಿಯಾಗುವಂತಹುದು.

ಮರಿಯಮ್ ಬೀ ವಿಧಿಬದ್ಧವಾಗಿ ಹೆಣಗಳ ಸ್ನಾನ ಆರಂಭಿಸಿದಳು. ಮೊದಲು ಹೆಣದ ಜನನಾಂಗ ಶುದ್ಧಿಗೊಳಿಸುವುದು. ತಲೆಗೆ ಮೈಗೆ ಅಂಟವಾಳದ ಕಾಯಿ ಚೆನ್ನಾಗಿ ಉಜ್ಜಿ ತೊಳೆಯುವುದು ಮುಖ್ಯ. ಬಿಸಿ ನೀರು ಬೀಳುತ್ತಿದ್ದಂತೆ ಹಳದಿಯಾಗಿದ್ದ ಮೈ ಬಣ್ಣ ತುಸುವೇ ನಸುಗೆಂಪು ಬಣ್ಣಕ್ಕೆ ಬಂದಂತೆ ತೋರುತ್ತಿತ್ತು. ಹೆಣವನ್ನು ಹೊತ್ತು ಹೋಗುವ ಪಲ್ಲಂಗದಲ್ಲಿ ಹೊಸಚಾಪೆಯನ್ನು ಹಾಸಿ, ಮೊದಲೇ ಪದರ ಪದರವಾಗಿ ಬಿಡಿಸಿಟ್ಟ ಕಫನ್‌ನ ಮೇಲೆ ಹೆಣವನ್ನು ವರ್ಗಾಯಿಸಿದಳು.

ನಾಡ ಹೆಂಚಿನಲ್ಲಿಟ್ಟಿದ್ದ ದಪ್ಪ ಕೆಂಡಗಳ ಮೇಲೆ ಸಾಂಬ್ರಾಣಿಯನ್ನುದುರಿಸಿ ಆ ಹೊಗೆಯಿಂದ ಆ ಹೆಣದ ಕೂದಲನ್ನು ಮೊದಲೇ ಒಣಗಿಸಿದ್ದಳು. ಮಧ್ಯದಲ್ಲಿ ಬೈತಲೆ ತೆಗೆದು ಕೂದಲನ್ನು ಇಬ್ಭಾಗ ಮಾಡಿ ಕಫನ್ನಿನೊಳಗೆ ಮುಚ್ಚಿದಳು.

ಇದನ್ನೆಲ್ಲಾ ಮಾಡುವ ಹೊತ್ತಿಗೆ ಮರಿಯಮ್ ಬಿ. ಆಯಾಸಗೊಂಡು ಬಿಡುತ್ತಿದ್ದಳು. ಹಾಗಂತ ಸುಮ್ಮನೆ ಕೂರುವ ಹಾಗಿಲ್ಲ. ಎಲ್ಲ ಕಾರ್ಯವನ್ನು ಪೂರ್ಣಗೊಳಿಸಬೇಕು. ಆದಮ್ ಸಾಹೇಬರ ಮನೆಗೆ ಅದಾಗಲೇ ಎಲ್ಲರ ಮನೆಯಿಂದ ಅನ್ನ-ಸಾಂಬಾರಿನ ಸರಬರಾಜಾಗುತ್ತಿತ್ತು. ಅನ್ನದ ಗುಡ್ಡೆಯನ್ನು ನೋಡಿ ಮರಿಯಮ್ ಬೀಯ ಕರುಳುಗಳು ಹಸಿವೆಯಿಂದ ಹಿಂಡಿದವು. ಆ ಮನೆಯ ಕೆಲಸದಾಕೆ ಕಾಫಿಯನ್ನು ಕುಡಿಯುತೀಯಾ ಎಂದಾಗ, ಬೇಡಮ್ಮ ಒಂದು ತುತ್ತು ಅನ್ನ ಬೆಳಗ್ಗಿನಿಂದ ತಿಂದಿಲ್ಲ ಎಂದಾಗ, ಒಂದು ತಟ್ಟೆಯ ತುಂಬಾ ಮಲ್ಲಿಗೆ ಮೊಗ್ಗುಗಳಂತಹ ಅನ್ನವನ್ನು ಹಾಕಿ ಬೇಳೆಯನ್ನು ಸುರಿದು, ಪಲ್ಯವನ್ನಿಟ್ಟು, ಉಪ್ಪಿನಕಾಯಿಯನ್ನು ತಟ್ಟೆಯ ಬದಿಗೆ ಅಂಟಿಸಿ, ಒಂದು ಹಪ್ಪಳವನ್ನು ಎದುರಿಗಿಟ್ಟಾಗ ಮರಿಯಮ್ ಬೀಗಾದ ಸಂತೋಷಕ್ಕೆ ಮಿತಿಯೇ ಇರಲಿಲ್ಲ. ಹಸಿದ ಹೊಟ್ಟೆಗೆ ಅನ್ನ ಸಿಗುವುದೇ ಕಷ್ಟವಾದಾಗ ಉಳಿದದ್ದನ್ನು ನೆನಪಿಸಿಕೊಳ್ಳುವುದಾದರೂ ಹೇಗೆ? ಅದೆಲ್ಲ ಈಗ ಕಣ್ಣ ಮುಂದಿರುವಾಗ ಮರಿಯಮ್ ಬೀ ಬೇಗನೇ ಕೈತೊಳೆದು ದೇವರ ಹೆಸರನ್ನು ಹೇಳುತ್ತಾ ಒಂದು ತುತ್ತನ್ನು ಬಾಯಿಗಿಟ್ಟಳು. ಅವಳಿಗೆ ಆಶ್ಚರ್ಯವೆನ್ನಿಸುವಂತೆ ಅವಳ ಮಗಳು ಹಸೀನಾ ಅವಳಿಗೆ ನೆನಪಾಗಿ ಗಂಟಲಲ್ಲಿ ಅಡ್ಡಲಾಗಿ ಸಿಲುಕಿಕೊಂಡಳು. ಪಾಪ ಹಸೀನ ಬಾಣಂತಿ, ಮಗುವಿಗೆ ಕುಡಿಸುವುದಕ್ಕೂ ಎದೆಯಲ್ಲಿ ಹಾಲಿಲ್ಲ. ಇನ್ನು ಊಟ ಬೇರೆ ಇಲ್ಲ ಅಂದರೆ ಬರೀ ಹೊಟ್ಟೆಯ ತಾಯಿಯ ಎದೆಯನ್ನು ಮಗುವು ಚೀಪಿದಾಗ ಆಗುವ ಉರಿ ಸಂಕಟ ಹೇಳುವಂತಿಲ್ಲ. ತನ್ನ ಮಗಳು ಹಸಿದು ಕುಳಿತಿರುವಾಗ ಮಗಳನ್ನು ನೆನೆದು ಬಿಕ್ಕಳಿಸುತ್ತಿರುವಾಗಲೂ

ಮರಿಯಮ್ ಬೀಯ ಹಸಿದ ಕರುಳುಗಳೇ ಗದ್ದವು. ಗಂಟಲಲ್ಲಿ ಅಡಗಿ ಕುಳಿತ ಹಸೀನಾಳನ್ನು ಮುಲಾಜಿಲ್ಲದೇ ಅವು ಕಿತ್ತೆಸೆದಿದ್ದವು. ಒಂದರ ಹಿಂದೆ ಒಂದು ತುತ್ತುಗಳನ್ನು ಬರಮಾಡಿಕೊಂಡು ನಿರಾಳವಾದವು. ಉಕ್ಕಿದ ಕಣ್ಣೀರನ್ನು ಅವಳು ತನ್ನ ಸೆರಗಿನಲ್ಲಿ ಒರೆಸಿಕೊಂಡು ತನ್ನನ್ನು ತಾನೇ ಸಂತೈಸಿಕೊಂಡಳು.

ಹೆಣಗಳನ್ನು ಸಾಗಿಸಿದ ನಂತರ ಜಮೀಲ್ ಮರಿಯಮ್ ಬೀಗೆ ಜೇಬಿನಿಂದ ಮುನ್ನೂರು ರೂಪಾಯಿಗಳನ್ನು ತೆಗೆದುಕೊಟ್ಟು ತದ ನಂತರ ಜೊತೆಗೆ ಅಕ್ಕಿ, ಗೋಧಿ, ಉಪ್ಪನ್ನು ನೀಡಿದ. ಹೊರಲಾರದ ಹೊರೆ ಹೊತ್ತು ಮರಿಯಮ್ ಬೀ ತನ್ನ ಗುಡಿಸಲಿಗೆ ಬಂದು, ಹೆಣದ ಮನೆಯಿಂದ ತಂದಿದ್ದ ಅನ್ನ, ಸಾರನ್ನು ಕಲೆಸಿ ತನ್ನ ಮಗಳು ಹಸೀನಾಳ ಬಾಯಿಗೆ ಇಟ್ಟಳು. ಹಸೀನಳಿಗೆ ನುಂಗಲು ಸಾಧ್ಯವಾಗದಿದ್ದಾಗ, ಒಂದು ಗುಟುಕು ನೀರು ಕುಡಿಸಿ, ಅನ್ನದ ಉಂಡೆಗಳನ್ನು ಅವಳ ಬಾಯಿಗಿಡುತ್ತಾ ಹಸಿದ ಹೊಟ್ಟೆಯನ್ನು ತೃಪ್ತಿಗೊಳಿಸಿದಳು.

ಹಸಿದು, ಹಸಿದು ಕಂಗಾಲಾಗಿದ್ದಾಗ ಅಮ್ಮ ತಂದ ಅನ್ನ ಸಾರು ಹೊಟ್ಟೆಗೆ ಅಮೃತಕ್ಕಿಂತಲೂ ಮಿಗಿಲಾದ ಸಂತೃಪ್ತಿ ನೀಡಿತು. ಪ್ರತಿಯೊಬ್ಬರ ಹೊಟ್ಟೆ ತುಂಬಬೇಕಾದರೂ ದೇವರ ದಯೆಬೇಕೆಂಬ ಮರಿಯಮ್ ಬೀಯ ನಂಬಿಕೆಯಾಗಿದ್ದರೂ ಆಕೆಯ ಹೊಟ್ಟೆ ತುಂಬುತ್ತಿದ್ದುದು ಮಾತ್ರ ಹೆಂಗಸರು ಸತ್ತಾಗ ಮಾತ್ರ, ದೇವರು ತನ್ನ ಹೊಟ್ಟೆ ತುಂಬಿಸುವುದಕ್ಕಾಗಿಯೇ ಅಪಘಾತ ಮಾಡುತ್ತಿದಾನೆಂಬುದು ಅವಳ ನಂಬಿಕೆಯಾಗಿತ್ತು. ಒಬ್ಬರ ಹಸಿವು ಇನ್ನೊಬ್ಬರ ಸಾವಿನಿಂದ ನಿವಾರಣೆಯಾಗುತ್ತಿತ್ತು.

ಬಡವರಿಗೆ ಹಸಿದ ಹೊಟ್ಟೆಯನ್ನು ತುಂಬಿಸಿಕೊಳ್ಳಬೇಕಾದರೆ ಅದು ಅಷ್ಟು ಸುಲಭದ ಮಾತಾಗಿರಲಿಲ್ಲ. ಅದಕ್ಕಾಗಿ ಅವರು ದೇಹದ ಶಕ್ತಿಯನ್ನೆಲ್ಲಾ ವ್ಯಯಿಸಲೇ ಬೇಕು. ಅದನ್ನು ಸಮರ್ಪಕವಾಗಿ ಮಾಡಬೇಕು. ಆಯಾಸವಾದೀತೆಂದು ಯಾರ ಬಳಿ ಹೇಳುವ ಹಾಗಿಲ್ಲ, ಹೇಳಿದರೆ ಅನ್ನಕ್ಕೂ ತೊಂದರೆಯಾದೀತೆಂದು ಹೆದರಿ ಮಾಡುವ ಕೆಲಸವನ್ನು ಶ್ರದ್ಧೆಯಿಂದ ಮಾಡಲೇಬೇಕು. 'ಹಸಿದವರಿಗೆ ಅನ್ನವನ್ನು ನೀಡಬೇಕೆಂದು' ಕನಕದಾಸರು ಹೇಳಿರುವ ಮಾತು ಅನ್ನಕ್ಕಿರುವ ಶ್ರೇಷ್ಠತೆ ಮತ್ತು ಜ್ಯೇಷ್ಠತೆಯನ್ನು ಸಾದರಪಡಿಸುತ್ತದೆ. ಆರ್ಥಿಕ ಕಾರಣ ಎಂಥವರನ್ನೂ ಹತಾಶರನ್ನಾಗಿಸಿ, ಹಸಿವೆಯಿಂದ ನರಳುವಂತೆ ಮಾಡಿ ಬಿಡುತ್ತದೆ. ಹಸಿದ ಒಡಲನ್ನು ತುಂಬಿಸಿಕೊಳ್ಳಲು ಮನುಷ್ಯ ಎಂಥ ಕೆಲಸಕ್ಕಾದರೂ ಸಿದ್ಧನಾಗಿ ಬಿಡುತ್ತಾನೆ.

ಗೀತಾ ನಾಗಭೂಷಣರವರ 'ಜ್ವಲಂತ'

ಗೀತಾ ನಾಗಭೂಷಣ ಅವರ ಜ್ವಲಂತ ಕತೆಯು 'ಸೀನಿಂಗಿ' ಎಂಬ ಮಹಿಳೆಯ ಸುತ್ತ ಹೆಣೆದುಕೊಂಡಿದೆ. ಕೆಳಜಾತಿ-ವರ್ಗಗಳಿಗೆ ಸೇರಿದ ಈ ಹೆಣ್ಣಿನ ಚೈತನ್ಯವನ್ನು ಕಾಣಿಸುವುದೇ ಈ ಕತೆಯ ಪ್ರಧಾನ ಆಶಯವೆನ್ನಬಹುದು. ಇದು ಅವಳ ಸ್ಥಿತಿಯನ್ನು ಮಾತ್ರ ವರ್ಣಿಸುವ ಕೇವಲ ಭಾವುಕ ಅನುಕಂಪದ ಕತೆ ಇದಲ್ಲ. ಬದಲಾಗಿ ಅವಳಲ್ಲಿ ಅಂತರ್ಗತವಾಗಿರುವ ಸಾಧ್ಯತೆಯನ್ನು ಅನಾವರಣಗೊಳಿಸಿ ಆ ಮೂಲಕ ಅವಳ ವೈಯಕ್ತಿಕ ಬದುಕಿನ ಚಿತ್ರವನ್ನೂ, ಅವಳು ಬದುಕುತ್ತಿದ್ದ ಸಮಾಜದ ವಿಕೃತಿ-ವೈರುಧ್ಯಗಳ ಸ್ವರೂಪವನ್ನು ಏಕಕಾಲದಲ್ಲಿ ಕಟ್ಟಿಕೊಡುವ ಉದ್ದೇಶವನ್ನು ಕತೆ ಇಟ್ಟುಕೊಂಡ ಹಾಗೆ ಕಂಡುಬರುತ್ತದೆ. 'ಜೋಡೆಲುವಿನ' ದುಂಡುಮೈಯಿನ ಗಟ್ಟಿಮುಟ್ಟಾದ,

ಕಡುಗಪ್ಪಿನ ಕಲ್ಲಿನಲ್ಲಿ ಕಡೆದಿತ್ತಂಥ ಅಂಗಾಂಗಗಳು' ಇದ್ದ ಈ ಶೂದ್ರ ಹೆಂಗಸು ಕೇವಲ ತನ್ನ ಹುಟ್ಟಿನ ಕಾರಣದಿಂದ ಅವಮಾನಕರ ಸ್ಥಿತಿಗೆ ದೂಡಲ್ಪಟ್ಟ ದುರಂತವನ್ನು ಕಾಣಿಸುವಂತೆ ಅದನ್ನು ತನ್ನ ಮಿತಿಯಲ್ಲಿ ಪ್ರತಿಭಟಿಸುವ, ಅದಕ್ಕಿಂತ ಉತ್ತಮವೆಂದು ತಾನು ಭಾವಿಸುವ ಬದುಕೊಂದನ್ನು ಕಟ್ಟಿಕೊಳ್ಳುವ ಪರಿಯನ್ನು ದಾಖಲಿಸಿ, ಕತೆಯು ಸೀನಿಂಗಿಯ ಆ ಸ್ವಭಾವವನ್ನು ಒತ್ತಿ ಹೇಳುತ್ತ ಆ ಬಗ್ಗೆ ತನ್ನ ಮೆಚ್ಚುಗೆಯನ್ನು ಧ್ವನಿಸುತ್ತದೆ. ಸೀನಿಂಗಿಯ ಹಿನ್ನೆಲೆ ಇದು. ಸೀನಿಂಗಿಯ ತೊಟ್ಟಿಲ ಹೆಸರು ಶಿವನಿಂಗವ್ವ ಎಂದಿದ್ದರೂ ಸ್ವತ ಅವಳ ಅವ್ವನಿಗೆ ಅದು ಸರಿಯಾಗಿ ಬಾಯಿಗೆ ಬರುತ್ತಿರಲಿಲ್ಲ. ಹೀಗಾಗಿ ಎಲ್ಲರೂ ಅವಳಿಗೆ ಕರೆಯುತ್ತಿದ್ದದು ಸೀನಿಂಗಿ ಎಂದೇ. ಅವಳು ಹರೆಯಕ್ಕೆ ಬಂದಾಗ ಅವಳನ್ನು ಹಡೆದವರು ಅವಳ ಕನಸುಗಳಿಗೆ ಬೆಂಕಿ ಹಚ್ಚಿ ಅವಳನ್ನು ದೇವಿ ಹೆಸರಿನ ಮೇಲೆ ಜೋಗಿತಿ ಮಾಡಿದ್ದರು. ಬಲವಂತದ ಜೋಗಿತನವನ್ನು ಅವಳು ಯಾರ ಹಂಗಿಲ್ಲದೆ ಹರಿದೊಗೆದಳು. ಕೊರಳಲ್ಲಿ ಕವಡೆಸರ, ತಲೆಯ ಮೇಲಿನ ಪರಡಿಗಳೆಲ್ಲವನ್ನು ತಾಯಿಯ ಗುಡಿಯ ಮುಂದಿನ ಬಾವಿಗೆಸೆದು ಅವಳು ಹಳ್ಳಿಬಿಟ್ಟಳು. ಇದು ಸೀನಿಂಗಿಯ ಮೊದಲ ಬಂಡಾಯ.

ಸೀನಿಂಗಿ ಕಾಡಳ್ಳಿಗೆ ಬಂದು, ಹೊಲಗದ್ದೆಗಳಲ್ಲಿ ದುಡಿಯುವ ಕೂಲಿಯಾಗಿ ಜೀವನವನ್ನು ಸ್ವತಂತ್ರವಾಗಿ ರೂಪಿಸಿಕೊಳ್ಳುತ್ತಾಳೆ. ರಟ್ಟೆ ಮುರಿದು ಹೊಟ್ಟೆ ತುಂಬಿಸಿಕೊಳ್ಳುವಲ್ಲಿ ಅವಳು ಗಟ್ಟಿಗಿತ್ತಿ. ತನ್ನದೇ ಗುಡಿಸಲು ನಿರ್ಮಿಸಿಕೊಂಡು ಒಂಟಿಯಾಗಿ ವಾಸಿಸಲು ಆರಂಭಿಸಿದ ಸೀನಿಂಗಿಗೆ ಈಗ ಕಾಡಳ್ಳಿಯ ಕಾಮಣ್ಣರ ಕಾಟ. ಅದನ್ನು ಧೈರ್ಯದಿಂದ ಎದುರಿಸುವ ಸೀನಿಂಗಿ ದುಡ್ಡಿನ ಆಸೆಗೆ ಇಂಥ ಗಂಡಸರ ಆಹ್ವಾನಕ್ಕೆ ಮಣಿಯುವುದಿಲ್ಲ. ಮೈ ಮಾರಿಕೊಂಡು ಹೊಟ್ಟೆಗೆ ರೊಟ್ಟಿಗಳಿಸುವ ಕೆಲಸ ಬೇಡ ಎಂದೇ ಕಾಡಳ್ಳಿಗೆ ಬಂದವಳು. ಅವಳ ಸೆಣಸಾಟ ಕೇವಲ ಬಹಿರಂಗದಲ್ಲಿಲ್ಲ. ಮೈಯ ಸೊಕ್ಕಿನೊಂದಿಗೆ ಅವಳದು ನಿರಂತರ ಸೆಣಸಾಟ. ಹೀಗಿರುವಾಗ ಜನರ ಬಾಯಲ್ಲಿ ರಾಗಿಂದ್ರಪ್ಪ ಕುಕ್ಕಾಣಿಯಾಗಿರುವ ರಾಘವೇಂದ್ರ ಕುಲಕರ್ಣಿ ಅವಳನ್ನು ಭೇಟಿಯಾಗಿ, ನಿನ್ನ ಇಸ್ಪರಿಯೆಲ್ಲ ನನಗ ಗೊತ್ತಾಗ್ಯಾದ, ನೀ ಜೋಗತಿ ಆಗಿದ್ದಕಿ, ನಮ್ಮೂರಾಗ ಬಂದು ಏಕದಂ ಗರತಿ ಆಗಾಕ ಹೊಂಟಿದ್ದಿ.....ಆದರೆ ಸೀನಿಂಗಿ

ನನಗ ನಿನ್ ಮೇಲೆ ಮನಸ್ಸಾಗ್ಯಾದ. ನಾನು ಈ ಊರ ಕುಲಕರ್ಣಿ. ಒಂದು ಗಳಿಗೆಯಲ್ಲಿ ನಿನ್ನ ಮ್ಯಾಲ ಅತ್ಯಾಚಾರ ಮಾಡಬೌದು. ಆದ್ರದು ನನಗೆ ಬ್ಯಾಡ. ನಾ ನಿನಗ ಪಸಂದ ಇದ್ರ ಒಪ್‌ಗಂಡು ಬಿಡು, ನೀ ಅಂತೂ ನನಗ ಭಾಳ ಪಸಂದ ಇದ್ದೀ ಎನ್ನುತ್ತಾನೆ. ಈ ಪ್ರಸಂಗವನ್ನು ನಿಭಾಯಿಸುವಲ್ಲಿ ಸೀನಿಂಗಿ ತೋರುವ ದಿಟ್ಟತನ ಆಕೆಯ ಬಡತನ, ಹಸಿವು, ಮೀರಿದ್ದು, ಒಂದು ದೃಷ್ಟಿಯಿಂದ ನೋಡಿದರೆ ಇದು ಜಮೀನ್ದಾರಿ ಕ್ರೌರ್ಯದ ಹಸಿಹಸಿರೂಪವೆ ಸೀನಿಂಗಿ ತನ್ನ ಆ ಸಂದರ್ಭದ ಸಾಮಾಜಿಕ ಪರಿಸ್ಥಿತಿಯನ್ನು ಪರಿಶೀಲಿಸಿಕೊಳ್ಳುತ್ತಾಳೆ. ತಾನೂ ಕುಲಕರ್ಣಿಯಿಂದ ಆಕರ್ಷಿತಳಾಗಿರುವುದನ್ನು ಅರಿಯುತ್ತಾಳೆ. ಅವನನ್ನು ತಿರಸ್ಕರಿಸಲಾಗದ ಅನಿವಾರ್ಯತೆಯೂ ಅವಳಿಗೆ ಗೊತ್ತು. ಇಷ್ಟಾದರೂ ಅವನೊಂದಿಗೆ ಸಂಬಂಧವನ್ನಿಟ್ಟುಕೊಳ್ಳಲು ಎರಡು ಶರತ್ತುಗಳನ್ನು ಹಾಕುತ್ತಾಳೆ. ತನ್ನನ್ನು ಬಿಟ್ಟು ಬೇರೆ ಹೆಣ್ಣಿನ ಸಹವಾಸ ಮಾಡಬಾರ್ದು, ಬೇರೆ ಮದ್ವೆ ಮಾಡ್ಕೊಳ್ಬಾರ್ದು. ಇದಕ್ಕೆ ಕುಲಕರ್ಣಿ ಒಪ್ಪಿ ಹಾಗೆ ನಡೆದುಕೊಳ್ಳುತ್ತಾನೆ. ಇಪ್ಪತ್ತು ವರ್ಷಗಳ ಅವರ ಸಂಬಂಧ ಹಣ್ಣಾಗತೊಡಗಿತ್ತು. ಇಬ್ಬರ ಹೃದಯ, ಮನಸ್ಸುಗಳು ಬೆಸೆದುಕೊಂಡಿದ್ದವು. ಶೂದ್ರ ಸಮಾಜವು ಈ ಸಂಬಂಧವನ್ನು ಒಪ್ಪಿಕೊಂಡಿತ್ತು. ಆದರೆ ಬ್ರಾಹ್ಮಣ ಸಮಾಜವು ಕುಲಕರ್ಣಿಗೆ

ಬಹಿಷ್ಕಾರ ಹಾಕಿತ್ತು. ಎಲ್ಲ ತಪ್ಪನ್ನೂ ಸೀನಿಂಗಿಯ ತಲೆಯ ಮೇಲೆಯೇ ಹಾಕಿ ಸೀನಿಂಗಿಯಿಂದಾಗಿಯೇ ಕುಲಕರ್ಣಿ ಹಾಳಾದ ಎಂಬ ನಿರ್ಧಾರಕ್ಕೆ ಬಂದಿತ್ತು.

ರಾಘವೇಂದ್ರ ಕುಲಕರ್ಣಿಯು ಸೀನಿಂಗಿಯ ಮನೆಯಲ್ಲಿ ಸತ್ತಾಗ ಈ ಬ್ರಾಹ್ಮಣರ ಎಲ್ಲಾ ಸಣ್ಣತನ ನೀಚತನಗಳು ಪರಾಕಾಷ್ಠೆಯನ್ನು ಮುಟ್ಟುತ್ತವೆ. ಬ್ರಾಹ್ಮಣರ ವಂಶದಲ್ಲಿ ಹುಟ್ಟಿ ಶೂದ್ರಳ ಮನೆಯಲ್ಲಿ ಸತ್ತ ಅವನ ಕರ್ಮದ ಬಗ್ಗೆ ಕನಿಕರವೇ ಹುಟ್ಟುತ್ತದೆ. ಮತ್ತೆ ಕೆಲವರು ಇವಳೇ ಅವನನ್ನು ಕೊಂದಿರಬಹುದೇ ಎಂಬ ಸಂಶಯವನ್ನು ವ್ಯಕ್ತಪಡಿಸುತ್ತಾರೆ. ಶೂದ್ರಳು ಬಡವಳು ಆದ ಸೀನಿಂಗಿ ದಿಟ್ಟತನದಿಂದ ದೊಡ್ಡ ಕುಲಕರ್ಣಿಯ ಮನೆಗೆ ಹೋಗಿ 'ನಾ ನಿಮ್ಮ ತಮ್ಮಗ ಇಸಾ ಹಾಕಿನೆಂತ ನಿಮಗ ಸಂಶಾ ಇದ್ದರೆ ಡಾಗದರಗ ಕರ್ಸಿ ತಪಾಸ್ಸ ಮಾಡಿಸ್ರಿ, ಸುಂ ಸುಮ್ನೆ ನನ್ನ ಮ್ಯಾಲ ಬದಲಾಮಿ ಕುಡಬ್ಯಾಡ್ರಿ. ಈಗೇನು ನೀವು ಆ ಹೆಣ್ಕ ತಂದು ನಿಂ ಕುಲದ ಆಚಾರಧಂಗ ಸುಡ್ತೀರೋ ಇಲ್ಲೋ ಹೇಳ್ರಿ ಎಂದು ಕೇಳುತ್ತಾಳೆ. ದೊಡ್ಡ ಕುಲಕರ್ಣಿ ಹೇಳ್ತಾನೆ 'ರಾಘುಗೆ ನಮ್ಮ ಮಠದಿಂದ ಎಂದೋ ಬಹಿಷ್ಕಾರ ಹಾಕೇವಿ. ಅಂದ ಮ್ಯಾಲ ಅವ ನಮ್ಮ ಕುಲದಿಂದ ಹೊರಗೆ. ಆದರೂ ನಾ ರಾಯರ ಮಠಕ್ಕೆ ಹೋಗಿ ಒಂದ್ಮಾತು ಕೇಳಿ ನಿನಗೆ ತಿಳಿಸ್ತೇನಂತ ಎಂದಾಗ, ಶೂದ್ರರ ಪ್ರತಿಕ್ರಿಯೆಯು ಇದೇ ಬಗೆಯದು. ಮುದುಕಪ್ಪ ಹೇಳ್ತಾನೆ 'ಅವರು ತಮ್ಮ ಕುಲದಲ್ಲಿಂದ ಕುಕ್ಕಣಿಗೆ ಹೊರಗಿಟ್ಟಾರ ಖರೆ ಮಗಾ. ಆದ್ರೆ ಅದರ ಅರ್ಥ ಅಂವಾ ನಮ ಕುಲದಾಗ ಬಂದಂತಲ್ಲಾ. ರಾಗಿಂದ್ರಪ್ಪ ಕುಕ್ಕಣಿ ಏನು ಹೊಲೇರಂವಾ ಆಗಿದ್ದನೇನು? ಏನು ಮಾದರ ಕುಲದಾಗ ಬಂದು ಸೇರ್ಕೊಂಡಿದ್ದನೇನು? ಅಲ್ಲ ಅಂದ ಮೇಲೆ ಹೊಲ ಮಾದರ ಹೆಣದ್ಹಾಂಗ ಅಂವನ ಹೆಣಾ ನಾವು ಹ್ಯಾಂಗ ಮಣ್ಣು ಮಾಡ್ಲಿಕ್ಕಬರ್ತದ? ಇದೇನು ಆಗಾಗಿಲ್ಲ ಹೋಗಾಣಿಲ್ಲ" ಜಾತಿ ಸಮಸ್ಯೆ ಇಲ್ಲಿ ಬಡತನ ಹಸಿವನ್ನು ಮೀರಿ ಅದು ಸತ್ತವರನ್ನೂ ಬಿಡದಿರುವ ವಿಪರ್ಯಾಸವನ್ನು ಕತೆ ಮನೋಜ್ಞವಾಗಿ ದಾಖಲು ಮಾಡುತ್ತದೆ. ಕೆಳಜಾತಿಯವರು ಕೊನೆಯ ಪಕ್ಷ ಕುಕ್ಕರ್ಣಿಯ ಹೆಣವನ್ನು ನೋಡಲು ಬಂದು ಸೀನಿಂಗಿಯ ಅವಸ್ಥೆಗೆ ಕನಿಕರವನ್ನಾದರೂ ತೋರಿಸುತ್ತಾರೆ. ಬ್ರಾಹ್ಮಣರಗಲ್ಲಿಯ ಒಂದು ನೊಣವೂ ಕುಕ್ಕರ್ಣಿಯ ಹೆಣ ನೋಡಲು ಮನೆಗೆ ಬರಲಿಲ್ಲ. ಹೆಣ ಕೊಳೆಯುತ್ತಿದ್ದಂತೆ ಸೀನಿಂಗಿಯ ಆತಂಕವೂ ಹೆಚ್ಚುತ್ತದೆ. ಈಗ ಅವಳು ಮತ್ತೊಂದು ದಿಟ್ಟ ಸಾಹಸಕ್ಕೆ ಕೈ ಹಾಕುತ್ತಾಳೆ. ಪಿಂಜಾರ ಗುಡಿಸಾಬಿಯನ್ನು ಸಹಾಯಕ್ಕಾಗಿ ಯಾಚಿಸಿ, ಕಷ್ಟಪಟ್ಟು ಅವನನ್ನು ಒಪ್ಪಿಸಿ ಹೆಣ ಎತ್ತಿಸುವ ಏರ್ಪಾಟು ಮಾಡುತ್ತಾಳೆ. 'ಹಿಂತಾ ಟೇಮದಾಗ ನಿನಗೆ ಮದತ್ ಮಾಡ್ಲಿಲ್ಲಾಂದ್ರ ಅಲ್ಲಾ ಮೆಚ್ಚಗಿಂಲ್ಲ' ಎಂದು ಗುಡಿ ಸಾಬಣ್ಣನೂ ಸಂಸ್ಕಾರಕ್ಕೆ ಬೇಕಾದ ನೆರವು ನೀಡುತ್ತಾನೆ. ಸೀನಿಂಗಿಯೇ ಹೆಣಕ್ಕೆ ಬೆಂಕಿಕೊಡುತ್ತಾಳೆ.

ಆದರೆ ಸೀನಿಂಗಿಯ ಕಷ್ಟಗಳು ಇಲ್ಲಿಗೆ ಮುಗಿಯುವುದಿಲ್ಲ ಎಂಬುದು ಮತ್ತೊಂದು ವಿಪರ್ಯಾಸ. ರಾಯರ ಮಠದಲ್ಲಿ ಬ್ರಾಹ್ಮಣರ ಪಂಚಾಯಿತಿ ಸೇರುತ್ತದೆ. ಬ್ರಾಹ್ಮಣರು ಬಹಿಷ್ಕಾರ ಹಾಕಿದ್ದ ರಾಘವೇಂದ್ರ ಕುಲಕರ್ಣಿಯ ಹೆಣವನ್ನು ಈ ಶೂದ್ರ ಹೆಂಗಸು ಸೀನಿಂಗಿ ನಿನ್ನೆ ಸಂಜೆ ಬ್ರಾಹ್ಮಣರ ಸ್ಮಶಾನದಲ್ಲಿ ತಂದು ಸುಟ್ಟಿದ್ದಾಳೆ. ಇದು ಕ್ಷಮಿಸಲಾರದ ದೊಡ್ಡ ಅಪರಾಧ. ಅದಕ್ಕಾಗಿ ಸೀನಿಂಗಿ ರಾಯರ ಮಠಕ್ಕೆ ಸಾವಿರದಾ ಒಂದು ರೂಪೈ ತಪ್ಪು ದಂಡ ಕೊಡ್ಬೇಕು. ಎಲ್ಲಾ ಬ್ರಾಹ್ಮಣರಿಗೆ ಲಾಡು ಊಟ ಹಾಕಿಸಿ ತಪ್ಪಿಗೆ ಕ್ಷಮೆ ಕೇಳಬೇಕು' ಎಂದು ತೀರ್ಮಾನವಾಗುತ್ತದೆ. ಮೊದಲೇ ಬಡತನ ಹಸಿವಿನಿಂದ ಕಂಗಾಲಾಗಿದ್ದ ಬಡ ಸೀನಿಂಗಿ ಬ್ರಾಹ್ಮಣರು ಮಾಡಬೇಕಾದ ಕಾರ್ಯವನ್ನು ತಾನು ಮಾಡಿದ್ದೆ ದೊಡ್ಡ ತಪ್ಪು ಎಂದು ಪರಿಭಾವಿಸುವ ಈ ಜನರಿಗೆ ತೋರಿಸುವ

ಪ್ರತಿಕ್ರಿಯೆಯಲ್ಲಿ ಅವಳ ಬಂಡಾಯವು ತನ್ನ ಪರಾಕಾಷ್ಠತೆಯನ್ನು ಮುಟ್ಟಿ ಬಿಡುತ್ತದೆ. ಮೊದಲೇ ಬಡತನದ ಬೇಗೆಯಿಂದ ಹೈರಾಣಾಗಿದ್ದ ಸೀನಿಂಗಿ ಮಠಕ್ಕೆ ಸಾವಿರ ರೂಪಾಯಿ ಕೊಡೋದು? ಎಲ್ಲಾ ಬ್ರಾಹ್ಮಣರಿಗೆ ಲಾಡು ಊಟ ಹಾಕಿಸೋದು ಸಾಧ್ಯವಾದ ಮಾತಾ? ಇದೆಂಥಾ ನ್ಯಾಯ? ಅವಳು ಬಿರಬಿರನೆ ಸ್ಮಶಾನಕ್ಕೆ ಹೋಗಿ ಬೂದಿ, ಎಲುಬುಗಳ ರಾಶಿಯನ್ನು ತನ್ನ ಸೆರಗಿನಲ್ಲಿ ಗಂಟುಕಟ್ಟಿಕೊಂಡು ಬಂದು ಮಠದ ಮೆಟ್ಟಲುಗಳನ್ನೇರಿ ಹೋಗಿ ಸ್ವಾಮಿಯೆಡಗೆ ತನ್ನ ಕೈಯಲ್ಲಿದ್ದ ಗಂಟನ್ನು ಬೀಸಿ ಎಸೆಯುತ್ತಾಳೆ. ಕುಕ್ಕಣಿಯ ಎಲುಬು, ಬೂದಿಗಳು ಸ್ವಾಮಿಯ ಮೈಮೇಲೆ ಚೆಲ್ಲಾಪಿಲ್ಲಿಯಾಗಿ ಬೀಳುತ್ತದೆ. ಆದೇ ಸೀನಿಂಗಿಯು ಮಠಕ್ಕೆ ಸಲ್ಲಿಸಿದ ತಪ್ಪು ದಂಡವಾಗುತ್ತದೆ. ಸಾಮಾಜಿಕ ವ್ಯವಸ್ಥೆಯಲ್ಲಿ ಜಾತಿ ಎಂಬ ಮಹಾ ಪಿಡುಗು ಕೊನೆಯಾಗದೆ ಬಡವರು, ಕೆಳಸ್ತರದವರು ನೆಮ್ಮದಿಯಿಂದ ಬದುಕುವ ಹಾಗಿಲ್ಲ. ಇದು ತೊಲಗಬೇಕು, ಸಮಾನತೆ ನೆಲೆಸಬೇಕಾಗಿದೆ.

೪.೨ ಆರ್ಥಿಕ ಕಾರಣದ ಹಸಿವಿನ ಕತೆಗಳು

ವಿಪರ್ಯಾಸದ ವಿಷಯವೆಂದರೆ, ನಮ್ಮ ನಾಡಿನಲ್ಲಿ ಅನ್ನದ ಬೆಲೆಯನ್ನು ತಿಳಿಯದವನಿಗೆ ಹೆಚ್ಚು ಅನ್ನ. ಅನ್ನದ ಬೆಲೆ ತಿಳಿಯದವರಿಗೆ ಅನ್ನವೇ ಸಿಗದಿರುವುದು ಅಥವಾ ಇಲ್ಲದಿರುವುದು. ಹೊಟ್ಟೆಗೆ ಅನ್ನವಿಲ್ಲದೇ ಎಲುಬಿನ ಹಂದರಗಳಾಗಿರುವ ಬಡಜನತೆಗೆ ಹೊಟ್ಟೆ ತುಂಬುವಷ್ಟು ಅನ್ನ ಸಿಗುವಂತಾಗಬೇಕು. ಆದರೆ ಹಸಿದವರಿಗೆ ಅನ್ನ ನೀಡದೇ ಹೊಟ್ಟೆ ತುಂಬಿದವರಿಗಷ್ಟೇ ಮತ್ತಷ್ಟು ತುಂಬಿಸುವ (ನೀಡುವ) ಮನುಷ್ಯನ ವರ್ತನೆಯನ್ನು ಕಂಡಾಗ ಬಸವಣ್ಣನವರ ವಚನವೊಂದನ್ನು ಗಮನಿಸಬಹುದು.

ಕಲ್ಲನಾಗರ ಕಂಡರೆ ಹಾಲನೆರೆಯೆಂಬರು
ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯ.

ಕಲ್ಲಿನ ನಾಗರ ಕಂಡರೆ ಹಾಲನ್ನು ಎರೆಯುವವರು ನಿಜವಾದ (ಜೀವಂತ) ಹಾವನ್ನು ಕಂಡಾಗ ಕೆಂಡ ತುಳಿದವರಂತೆ ಅದನ್ನು ಕೊಂದೇ ಬಿಡುವುದು ನಿಜಕ್ಕೂ ವಿಪರ್ಯಾಸವೇ ಸರಿ.

"ಬಡತನದ ಬೇಗೆ ಅಥವಾ ಹೊಟ್ಟೆಯ ಹಸಿವು ಮನುಷ್ಯರನ್ನು ಎಂಥೆಂಥ ಪರಿಸ್ಥಿತಿಗೆ ತಳ್ಳುತ್ತದೆ ಎಂಬುದನ್ನು ಶಿವರಾಮ ಕಾರಂತರು ಬರೆದಿರುವ 'ಹಸಿವು' ಕಥಾ ಸಂಕಲನದಲ್ಲಿ ಕಾಣಬಹುದಾಗಿದೆ" ಎಂದು ಬಿ. ಮಾಲಿನಿ ಮಲ್ಯರು ಹೇಳಿದ್ದಾರೆ.[೧೦]

ಶಿವರಾಮ ಕಾರಂತರು ಏಕಕಾಲದಲ್ಲಿ ಅನೇಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದ ಕನ್ನಡದ ಮಹತ್ವದ ಲೇಖಕರು. ಅವರು ಬರವಣಿಗೆಯ ವಿಷಯದಲ್ಲೂ ಏಕಕಾಲದಲ್ಲಿ ಕವನ, ಕಾದಂಬರಿ, ಸಣ್ಣಕಥೆ, ವಿಡಂಬನೆ, ಪತ್ರಿಕಾ ವ್ಯವಸಾಯ ಇತ್ಯಾದಿ ವಿವಿಧ ಪ್ರಕಾರಗಳಲ್ಲಿ ಕೃಷಿ ಮಾಡಿದವರು. ಸಣ್ಣ ಕಥೆಗಳ ಕ್ಷೇತ್ರಕ್ಕೆ ಕಾರಂತರ ಕೊಡುಗೆ ಗಮನಾರ್ಹವಾದುದು. ಸಣ್ಣಕಥೆಗಳ ಬಗ್ಗೆ ಅವರು ವಿಶೇಷ ಒಲವನ್ನು ತಳೆದಿರುವುದನ್ನು ಅವರ ಕಥೆಗಳ ಮೂಲಕ ಅರಿಯಬಹುದಾಗಿದೆ.

“ಸಾಮಾಜಿಕ ಸಮಸ್ಯೆಗಳನ್ನು ಬೆಟ್ಟುಮಾಡಿ ತೋರಿಸಿ, ಅವುಗಳಿಂದ ಆಗುವ ಹಾನಿಗಳ ಕುರಿತು ಸಮಾಜಕ್ಕೆ ಎಚ್ಚರಿಕೆ ನೀಡುವ ಸಲುವಾಗಿ ತಮ್ಮ ಬರವಣಿಗೆಯ ಕಾಯಕದಲ್ಲಿ ಸಣ್ಣಕಥೆಗಳ ಮಾಧ್ಯಮವನ್ನು ಬೆಳೆಸಿಕೊಂಡಿದ್ದಾರೆಂಬುದನ್ನು: ಮಾಲಿನಿ ಮಲ್ಯರವರು ಗುರುತಿಸಿಕೊಂಡಿರುವುದು ಸರಿಯಾಗಿದೆ.” ಕಾರಂತರ ಸಣ್ಣ ಕಥೆಗಳಲ್ಲಿ ಕೃತಕ ಮತ್ತು ಕಾಲ್ಪನಿಕ ಸನ್ನಿವೇಶಗಳು ತೀರಾ ಕಡಿಮೆ. ತಮ್ಮ ನೈಜ ಜೀವನಾನುಭವಗಳಿಂದಲೇ ಪಡೆದಿದ್ದ ಪ್ರೇರಣೆಯಿಂದ ಕಥೆಗಳನ್ನು ರಚಿಸಿದ್ದಾರೆ.

ಕಾರಂತರ 'ಹಸಿವು'

ಬಾಡೂರು ತೀರಾ ಚಿಕ್ಕ ಹಳ್ಳಿ. ಅಲ್ಲೊಬ್ಬ ಪಾಪದ ವೆಂಕಪ್ಪ. ಅವನ ಹೆಂಡತಿ ಸುಬ್ಬವ್ವ ಅವರಿಗೊಬ್ಬ ಮಗ ನರಸು. ವೆಂಕಪ್ಪ ಹುಟ್ಟುವಾಗಲೇ ದರಿದ್ರಲಕ್ಷ್ಮಿಯ ಆಶೀರ್ವಾದ ಪಡೆದು ಬಂದಿದ್ದರಿಂದ ಮನೆಯ ಪರಿಸ್ಥಿತಿ ಕೂಡ ದಟ್ಟದರಿದ್ರದಿಂದ ಕೂಡಿತ್ತು. ಬಡವರ ಸುಖ ಅವರ ಪಾಲಿಗಿಲ್ಲ, ದುಃಖ ಮಾತ್ರ ಇತ್ತು. ಸಂಪತ್ತಿನ ಅಧಿಕಾರವಿಲ್ಲದಿದ್ದರೂ ವಿಪತ್ತಿನ ಕರುಣೆ ಅವಳ ಮೇಲಿತ್ತು. ಬಡತನದ ಬೇಗೆಯಲ್ಲಿಯೇ ಸತ್ತು ಹೋದ. ಸಾಯುವ ಮೊದಲು ವೆಂಕಪ್ಪ ಸುಬ್ಬವ್ವನ ಪಾಲಿಗೆ ಬಿಟ್ಟುಹೋದ ಒಂದೇ ಒಂದು ಆಸ್ತಿ ಎಂದರೆ ಅವನ ಸರ್ವಸ್ವವಾಗಿದ್ದ ಮಗ ನರಸು.

ವೆಂಕಪ್ಪ ಬದುಕಿದ್ದಾಗ ಒಮ್ಮೆ ತನ್ನ ಮಗ ನರಸುವನ್ನು ಕರೆದುಕೊಂಡು ತನ್ನ ಧನಿಯವರ ಮನೆಗೆ ಹೋಗಿದ್ದ. ಧನಿಯರೆಂದರೆ ಅವನಿಗೆ ಪ್ರಾಣ. ರಾಯರ ಮನೆಯ ನಾಯಿಯೂ, ವೆಂಕಪ್ಪನೂ ಸ್ವಾಮಿಭಕ್ತಿಯಲ್ಲಿ ಸರಿಸಮ. ರಾಯರು ಎಷ್ಟೋ ಬಾರಿ **'ವೆಂಕಪ್ಪನೆಂದರೆ ನಮ್ಮ ಮನೆ ಬಾಡು ಇದ್ದಂತೆ'** (ಬಾಡು – ರಾಯರ ಮನೆಯ ನಾಯಿಯ ಹೆಸರು.) ಎಂದು ಹೇಳಿದ ಮಾತುಗಳನ್ನು ಕೇಳಿದರಂತೂ ಹೊಟ್ಟೆ ತುಂಬಿದಷ್ಟು ಅನಂದ ವೆಂಕಪ್ಪನಿಗೆ.

ಧನಿಯರು ತನ್ನನ್ನು ನಾಯಿಯನ್ನು ಪ್ರೀತಿಸುವ ಹಾಗೆ ಮಮತೆಯಿಂದ ಕಾಣುತ್ತಾರಲ್ಲ ಎಂಬ ಉತ್ಸಾಹ ಮೂಡಿತ್ತು. ಮಗನೊಂದಿಗೆ ರಾಯರ ಮನೆಗೆ ಹೋದ ಸಂದರ್ಭದಲ್ಲಿ ರಾಯರು ವೆಂಕಪ್ಪನನ್ನು ಯಾವುದೋ ಒಂದು ಕೆಲಸಕ್ಕೆ ಬೇರೆಲ್ಲಿಗೂ ಹೋಗಿ ಬಾ ಎಂದು ಹೇಳಿದಾಗ, ಮರುಮಾತಿಲ್ಲದೆ ವೆಂಕಪ್ಪ ಹೋದ. ನರಸನನ್ನು ಮರೆತೇಬಿಟ್ಟ, ತಂದೆ ಅತ್ತ ಹೋದಾಗ ಬೇಸರ ಕಳೆಯಲು ನರಸು ಅತ್ತಿತ್ತ ಸುತ್ತಾಡತೊಡಗಿದ. ಹಾಗೆ ಮನೆಯ ಜಗಲಿ ಏರಿದ. ಆ ಕೆಲಸವನ್ನು ವೆಂಕಪ್ಪ ಎಂದೂ ಮಾಡಿರಲಿಲ್ಲ. ಆದರೆ ಬಾಡುವಿಗೆ ಸಮನಾದ ವೆಂಕಪ್ಪನ ಮಗ ಮಾಡಿದ. ಕಿಟಕಿಯೊಳಗೆ ಇಣುಕಿ ನೋಡಿದಾಗ ತನ್ನ ವಯಸ್ಸಿಗಿಂತ ಒಂದೆರಡು ವರುಷ ಹಿರಿಯನೆನಿಸಿದ ಹುಡುಗನೊಬ್ಬ ಕಾಣಿಸಿದ. ಅವನಿಗೂ ನರಸುವನ್ನು ಕಂಡು ಕುತೂಹಲವಾಯಿತು. ನರುಸು ಅವನ ಕೈಯನ್ನು ಅಲುಗಾಡಿಸಿ 'ಆಡಲು ಬರುತ್ತೀಯಾ' ಎಂದು ಕೇಳಿದಾಗ ರಾಯರ ಮಗ ಗೋಪಾಲನಿಗೆ ಸ್ನೇಹದ ಬುಗ್ಗೆ ಚಿಮ್ಮಿತು. ಅವನ ಜೊತೆಯಲ್ಲಿ ಹೊರಟು ಮನೆಯ ಮುಂದಿನ ತೋಟವನ್ನು ಸೇರಿ ಆಡತೊಡಗಿದರು.

ತುಸು ಹೊತ್ತಿನಲ್ಲಿ ವೆಂಕಪ್ಪನು ಧನಿಯರ ಕೆಲಸ ತೀರಿಸಿಕೊಂಡು ಆ ಹಾದಿಯಾಗಿಯೇ ಬಂದನು. ಆದರೆ ಅವನಿಗೆ ಇವರಿಬ್ಬರ ಆಟಗಳು ಕಾಣಿಸಲಿಲ್ಲ. ನೇರವಾಗಿ ಧನಿಯರ ಬಳಿಹೋಗಿ ತನ್ನ ಕೆಲಸದ ವಿಷಯವನ್ನು ತಿಳಿಸಿ ನರಸುವನ್ನು ಹುಡುಕಲು ಹೊರಟ. ಅಷ್ಟರಲ್ಲಿ ರಾಯರು

'ವೆಂಕು, ನಮ್ಮ ಗೋಪುವೆಲ್ಲಿ, ನೋಡು' ಎಂದರು. ವೆಂಕುವು ಗೋಪಾಲನನ್ನು ಹುಡುಕಲು ಹೊರಟಾಗ ಅವನ ಹಿಂದೆಯೇ ರಾಯರೂ ಹೊರಟರು. ಇಬ್ಬರಿಗೂ ಒಂದೇ ಗಳಿಗೆಯಲ್ಲಿ ಹುಡುಗರಿಬ್ಬರು ಆಡುತ್ತಿದ್ದುದು ಕಂಡಿತು. ವೆಂಕುವಿಗೆ ಎದೆಬಿರಿಯಿತು. ರಾಯರಿಗೂ ಹಾಗೆಯೇ ಆಯಿತು. ಅವರು ವೆಂಕುವನ್ನು ನೋಡಿ, "ವೆಂಕು ಯಾವ ನಾಯಿ ಅದು?" ಎಂದು ವಿಚಾರಿಸಿದರು. ಅವನು ನಡುಗುತ್ತಾ 'ನನ್ನ ನರಸು' ಎಂದನು. ರಾಯರು "ಇನ್ನು ಮುಂದೆ ನಿನ್ನ ಮರಿಯನ್ನು ಇಲ್ಲಿಗೆ ಕರೆದು ತರಕೂಡದು" ಎಂದು ಘರ್ಜಿಸಿದರು. ಅಲ್ಲಿಗೆ ನರಸು-ಗೋಪಾಲರ ಆಟವೂ ಮುರಿಯಿತು. ಇಬ್ಬರೂ ಎಂದೂ ಮರೆಯದ ದೃಷ್ಟಿಯಿಂದ ಒಬ್ಬರಿಗೊಬ್ಬರು ಕಾಣುತ್ತಾ ಅಗಲಿದರು.

ಮಾರನೆದಿನ ವೆಂಕಪ್ಪ ಒಬ್ಬನೇ ರಾಯರ ಮನೆಗೆ ಹೋದಾಗ, ಗೋಪಾಲ "ನರಸು ಎಲ್ಲಿ?" ಎಂದು ಕೇಳಿದನು. ರಾಯರು ಅಲ್ಲೆಲ್ಲಾದರೂ ಇರಬಹುದೇ ಎಂಬ ಭಯದಿಂದ ವೆಂಕಪ್ಪ ಅತ್ತಿತ್ತ ನೋಡಿ ಅಂಜುತ್ತ "ಅವನಿಗೆ ಜ್ವರ" ಎಂದು ಬಿಟ್ಟ. ಪ್ರತೀ ದಿನ ಹೀಗೆ ನಡೆಯಿತು. ಒಂದು ದಿನ ಗೋಪಾಲನೇ "ನರಸುವನ್ನು ನೋಡಲು ನಾನು ನಿಮ್ಮ ಮನೆಗೆ ಬರಲೇ" ಎಂದಾಗ ವೆಂಕಪ್ಪ ಜ್ವರ ಬಿಟ್ಟ ಮೇಲೆ ನಾನೇ ಕರೆದುಕೊಂಡು ಬರುತ್ತೇನೆಂದು ಹೇಳಿ ಒಂದೆರಡು ದಿನದ ನಂತರ "ಧನಿಯರೇ ನರಸು ಸತ್ತು ಹೋದನು" ಎಂದ. ಗೋಪುವು ಗೊಳ್ಳೆಂದು ಅತ್ತುಬಿಟ್ಟ. ವೆಂಕುವಿಗೂ ಅಳು ಬಂತು. ಅಂದಿಗೆ ಗೋಪು-ನರಸುರವರ ಸ್ನೇಹವು ಅದೃಶ್ಯವಾಯಿತು.

ನಿಜವಾಗಿ ನರಸು ಆರೋಗ್ಯದಲ್ಲಿದ್ದನು. ರಾಯರ ಅಂಜಿಕೆಯಿಂದ ವೆಂಕಪ್ಪ ಹಾಗೆ ನುಡಿದದ್ದು. ಹೀಗೆ ಹೇಳಿದ ಕೆಲವು ದಿನಗಳಲ್ಲಿ ವೆಂಕಪ್ಪನಿಗೆ ಜ್ವರ ಬಂದು, ಅವನೇ ಸತ್ತು ಹೋದ.

ವೆಂಕಪ್ಪ ಸಾಯುವ ಮೊದಲು "ಸುಬ್ಬಿ, ಇದ್ದೊಬ್ಬ ಮಗನನ್ನು ಬಿಟ್ಟಿರಬೇಡ. ನೋಡು, ನನ್ನ ಮೇಲೆ ಪ್ರೀತಿಯಿದ್ದರೆ ನೀನು ಉಪವಾಸವಿದ್ದಾದರೂ ಅವನನ್ನು ಬೆಳೆಯಿಸು. ಏನಾದರೂ ಮಾಡಿ ನನ್ನ ಬೀಜವನ್ನು ಉಳಿಸು. ಒಂದಲ್ಲ ಒಂದು ದಿನ ನರಸುವು ಎಂಥ ಹುಡುಗನೆಂದು ತಿಳಿದೀತು" ಎಂದಿದ್ದ.[೧೨]

ಗಂಡನ ವಚನವನ್ನು ಸುಳ್ಳು ಮಾಡಬಾರದೆಂದು ಸುಬ್ಬವ್ವನು ನರಸುವನ್ನು ಎಲ್ಲಿಗೂ ಕರೆದೊಯ್ಯಲಿಲ್ಲ. ಅವನು ಹಗಲಿರುಳು ತಾಯಿಯ ಬಳಿ ಇರುವನು. ಅಷ್ಟೇ ಅವನ ಪ್ರಪಂಚವಾಗಿತ್ತು. ಸುಬ್ಬವ್ವನಿಗೆ ನರಸುವೆಂದರೆ ಜೀವ. ಒಂದು ಗಳಿಗೆಯಾದರೂ ಅವನ್ನು ಬಿಟ್ಟಿರಲಾರಳು.

ಅವಳ ಪರೀಕ್ಷೆಯ ದಿನವದು. ನರಸುವಿಗೆ ಕಠಿಣ ಕಾಯಿಲೆ. ಮನೆಯಲ್ಲಿ ಉಣಿಸಿಲ್ಲ. ಔಷಧಕ್ಕೆ ಹಣವಿಲ್ಲ. ಅಷ್ಟು ದಿನವಂತೂ ಅವಳು ಹೇಗೆ ಹೇಗೋ, ತಾನು ಅರೆಹೊಟ್ಟೆಯೋ, ಉಪವಾಸವೋ ಇದ್ದು, ಅವನನ್ನು ಕಾಪಾಡಿಕೊಂಡು ಬಂದಳು. ಆದರೆ ಆ ನಾಲ್ಕು ದಿನಗಳಿಂದಂತೂ ಅವಳ ಹೋರಾಟ ಹೇಳತೀರದು. 'ಹಸಿವಿನ ಕಾಟ ಅನುಭವಿಸಿದವರಿಗೆ ಮಾತ್ರ ಗೊತ್ತು- ಬಾಯ್ತೆರೆದು ಬಣ್ಣಿಸಬಲ್ಲವರಿಲ್ಲ' ಎಂದಿದ್ದಾರೆ ಕಾರಂತರು.[೧೩] ಏನೇನು ಮಾಡಿದಳು; ಯಾರ್‍ಯಾರ ಬಳಿಗೋಡಿ ನೋಡಿದಳು. ಸಾಲ ಕೊಡುವವರಿಲ್ಲ; ಹೆಂಗಸಿಗೆ ಕೊಟ್ಟ ಸಾಲ ಮರಳಿ

ಬರಲಾರದೆಂದು ಊರವರ ತಿಳಿವು. ಒಮ್ಮೆ ನರಸನು ಉಳಿದರೆ ಅವನು ಮರಳಿ ಸಲ್ಲಿಸುವನೋ ಏನೋ ಅದೂ ಸಂಶಯ. ಹಾಗಿಲ್ಲದೇ ಸತ್ತರೆ? ಸಾಲಕ್ಕೆ ಹೊಣೆಯಾರು? ಎಂದು ಊರವರ ಅಭಿಮತ. ಗಂಡನ ಕೊನೆಗಾಲದ ಮಾತನ್ನು ತಾನು ಮರೆಯುವ ಪ್ರಸಂಗ ಬಂದೀತೇ ಎಂದು ಸುಬ್ಬವ್ವ ಬಲುವಾಗಿ ಹಲುಬಿದಳು. ಆದರೆ ನರಸುವಿನ ಮುಂದೆ ಒಂದೇ ಒಂದು ಕಣ್ಣೀರ ಹನಿಯನ್ನು ಅವಳು ಸುರಿಸಲಿಲ್ಲ. ಅಂತೂ ಇಂತು ಸುಬ್ಬವ್ವನ ಶ್ರಮದಿಂದ (ಪ್ರಯತ್ನದಿಂದ) ನರಸುವಿನ ಜ್ವರವೇನೋ ಬಿಟ್ಟಿತು. ಆದರೆ ಹಸಿವು ಬಿಡಲಿಲ್ಲ. ಹಲವು ದಿನ ಹಸಿವಿನಿಂದ ಬಳಲಿದ, ಅತ್ತನು. ನರಸು ತಾಯಿಯ ತಳಮಳವನ್ನು ಕಂಡ ದಿನದಿಂದ ಅಳುವುದನ್ನು ನಿಲ್ಲಿಸಿ, ಚಕಿತನಾಗಿ ಮೌನ ತಾಳಿದ. ತಾಯಿಯ ಸಂಕಟವನ್ನು ಹೇಗೆ ತಗ್ಗಿಸಬಹುದೆಂದು ಚಿಂತಿಸಿದ.

ಹಗಲೆಲ್ಲ ತಪಿಸುತ್ತ ಕುಳಿತ ಸುಬ್ಬವ್ವ ನರಸು ಹಸಿವೆಯಿಂದ ಸಾಯುತ್ತಿರುವನೆಂದು ತಿಳಿದಿತ್ತು. ಆದರೆ ನಾಲ್ಕು ದಿನಗಳ ಹಿಂದೆ ಕೂಗುತ್ತಿದ್ದಂತೆ ಮಾತ್ರ ಕೂಗುತ್ತಿರಲಿಲ್ಲ. "ಹಸಿವಿದೆಯೇ"? ಎಂದು ಕೇಳುವ ಧೈರ್ಯವು ಅವಳಿಗಿರಲಿಲ್ಲ. ಕೇಳಿದರೆ, ಅದಕ್ಕೆ ತಕ್ಕ ಹಾಗೆ ಉಣಿಸನ್ನು ನೀಡಬೇಡವೇ? ಎಂದು ಸುಮ್ಮನಾದಳು. ಹಾಗೆಯೇ ಯೋಚಿಸಿದಾಗ ಘಟಕ್ಕನೇ ಯೋಚನೆಯೊಂದು ಹೊಳೆಯಿತು. ಓಡಿದಳು. ಆಗ ಅವಳ ಸಂತೋಷವನ್ನು ಹೇಳತೀರದು. ಮನೆಯಿಂದ ಹೊರಟು ಹೋದವಳು ಇಮ್ಮಡಿ ಹಿಗ್ಗಿನಿಂದ ಮರಳಿ ಬಂದಳು. ಬರುವಾಗ ಬೇಕುಬೇಕಾದ ತಿಂಡಿಯನ್ನೆಲ್ಲಾ ತೆಗೆದುಕೊಂಡು ಬಂದಳು. ಆ ದಿನ ನರಸುವಿಗೆ ಔತಣ. ಅದುವರೆಗೂ ತನ್ನ ಜೀವನಮಾನದಲ್ಲಿ ಕಂಡಿರಲಾರದ ಔತಣ. ಸಂಜೆಯಾಯಿತು. ನರಸು ಊಟ ಮಾಡಿ ಚಾಪೆಯಲ್ಲಿ ಉರುಳಾಡಿದ. ಇಷ್ಟು ದಿನ ಉಪವಾಸ ನರಳಿ ಕಣ್ಣೀರು ಸುರಿಸಿದ ತಮ್ಮ ವ್ಯಥೆ ಇಷ್ಟು ಸುಲಭದಲ್ಲಿ ಹೇಗೆ ಮಾಯವಾಯಿತು? ಇಂಥ ದಾನ ಮಾಡಿದವರಾರು? ಎಂದು ವಿಚಾರ ಮಾಡತೊಡಗಿದ. ಕಣ್ಣು ಮುಚ್ಚಿದ್ದರೂ ಅವನ ಮನಸ್ಸು ಎಚ್ಚರವಾಗಿಯೇ ಇತ್ತು.

ನಡುರಾತ್ರಿಯ ಸಮಯ., ಹೊರಗಿನಿಂದ ಯಾರೋ ಕದವನ್ನು ತಟ್ಟಿದ ಸದ್ದು ಕೇಳಿತು. 'ಸುಬ್ಬಿ' ಎಂದು ಕರೆದಂತಾಯಿತು. ಏನೋ ಕನಸು ಎಂದು ನರಸು ಸುಮ್ಮನಿದ್ದ. ಪುನಃ ಸ್ವರ ಕೇಳಿಸಿತು. ತನಗಿಂತ ಸ್ವಲ್ಪ ದೂರದಲ್ಲಿ ಮಲಗಿದ್ದ ಸುಬ್ಬವ್ವನು ಎಚ್ಚೆತ್ತು, ಯೋಚನೆ ಮಾಡುತ್ತ ಮೇಲೆದ್ದು ಕುಳಿತಳು. ಮೂರನೆಯ ಬಾರಿ 'ಸುಬ್ಬಿ' ಎಂಬ ಕೂಗು ಕೇಳಿದ ಕೂಡಲೇ ಸುಬ್ಬವ್ವ ಎದ್ದು, ಕೊಠಡಿಯನ್ನು ಬಿಟ್ಟು ಹೊರಕ್ಕೆ ಹೋಗಿ ಕದವನ್ನು ತೆರೆದಳು. ಒಂದು ನಗುವು ಕೇಳಿಬಂತು. ಇದೆಲ್ಲ ವಿಚಿತ್ರವನ್ನು ಕಂಡು ನರಸುವಿನ ಎಚ್ಚರದ ಕನಸು ಬಿಟ್ಟಿತು. ಇಷ್ಟೊತ್ತಲ್ಲಿ ಯಾರು? ಏನು? ಎಂಥದು? ಎಂಬ ನೂರಾರು ಪ್ರಶ್ನೆಗಳು ಅವನ ಮುಂದೆ ನಿಂತವು. ಒಂದೆರಡು ಬಾರಿ ಮೃದುವಾಗಿ 'ಸುಬ್ಬಿ ಸುಬ್ಬಿ' ಎಂಬ ಮಾತುಗಳು ಕೇಳಿಸಿದುವು. "ಏನು ಸುಳ್ಳುಗಾರ್ತಿಯೇ" ಎಂಬ ಪ್ರಶ್ನೆ ಬಂದಿತು. ನರಸುವಿಗೆ ಎದೆ ಧಡಕ್ಕೆಂದಿತು. ತನ್ನ ತಾಯಿಯನ್ನು ಸುಳ್ಳುಗಾರ್ತಿಯೆಂಬ ಅಪವಾದಕ್ಕೆ ಗುರಿ ಮಾಡಿದವರಾರು ಎಂದು ತಿಳಿಯುವ ಕುತೂಹಲ ಉಂಟಾಯಿತು. ಮೆಲ್ಲನೆ ಕಿಟಿಕಿ ಮರೆಯಲ್ಲಿ ನಿಂತನು. ಅಷ್ಟರಲ್ಲಿ ಸುಬ್ಬಿಯ ಅಳುವು ಕೇಳಿಬಂದಿತು. "ಇಲ್ಲ ಸುಳ್ಳಲ್ಲ" ಎಂಬ ಸುಬ್ಬಿಯ ಮಾತು ಕೇಳಿ ಬಂದವು. ಮಾತಿನೊಂದಿಗೆ ಅಳುವಿನ ನೆರೆಯೇ ಬಂದಿತು. ಇದೇನೋ ಭಯಂಕರ ಪ್ರಸಂಗವೆಂದು ನರಸುವಿಗೆ ಭೀತಿಯಾಯಿತು.

ಏನೆಂದು ತೋಚಲಿಲ್ಲ. ಬಳಿಯಲ್ಲಿ ಬಿದ್ದಿದ್ದ ಒಂದು ಬಲವಾದ ದೊಣ್ಣೆಯನ್ನು ಹಿಡಿದುಕೊಂಡು ಸದ್ದು ಮಾಡದೇ ಹೊರಕ್ಕೆ ಬಂದ. ಹೊರಗೆ ಬೆಳ್ದಿಂಗಳಲ್ಲಿ ತನ್ನ ತಾಯಿಯೂ, ಇನ್ನ್ಯಾರೋ ಓರ್ವ ತರುಣನೂ ನಿಂತುದು ಕಂಡಿತು. ಅಲ್ಲೇ ತಾನೂ ನಿಂತನು. ನರಸು ನೋಡುತ್ತಿದ್ದಂತೆ ಆ ತರುಣ ಸುಬ್ಬಿಯನ್ನು ತಬ್ಬಿಕೊಂಡು ಚುಂಬಿಸುತ್ತಿದ್ದ. ನರಸುವಿನ ಎಚ್ಚರ ತಪ್ಪಿತು.

ಮರುದಿನ ಊರೆಲ್ಲ ಗದ್ದಲ. ಬಾಡೂರಿನ ಜನರು ಏನೆಲ್ಲವನ್ನು ಆಡಿಕೊಳ್ಳುತ್ತಿದ್ದರು. ಸುಬ್ಬಿಯ ಗುಡಿಸಿಲಿನ ಕಡೆಗೆ ಜನಸಂದಣಿಯೇ ಹರಿದು ಬರುತ್ತಿತ್ತು. ಹೊತ್ತು ಮೂಡುವುದರೊಳಗೆ ಅವಳ ಮನೆ ಸುತ್ತ ಜನರು ಬಾಡೂರಿನ ರಾಯರು ಮನೆಯ ಮುಂದೆ ಕಿಡಿಕಿಡಿಯಾಗಿ ನಿಂತಿದ್ದರು. ರಾಯರ ಪತ್ನಿ ಸುಬ್ಬಿಯ ಕಡೆ ಕೈ ಮಾಡಿ "ನನ್ನ ಗೋಪುವನ್ನು ಈ ಪೂತನಿಯು ಕೊಂದಳು" ಎಂದು ಚೀರುತ್ತಿದ್ದಳು. ಸುಬ್ಬವ್ವನ ಕೈಗಳಿಗೆ ಬೇಡಿ ತೊಡಿಸಿದ್ದರು. ನರಸುವನ್ನು ಬಲವಾದ ಹಗ್ಗಗಳಿಂದ ಕಟ್ಟಲಾಗಿತ್ತು. ಪ್ರತಿಯೊಬ್ಬರೂ ತಾಯಿ ಮಕ್ಕಳನ್ನು ಬಯ್ಯುತ್ತಿದ್ದರು. ಪೋಲೀಸರು ತಮ್ಮನ್ನು ಎಳೆದೊಯ್ಯುವ ಮೊದಲು ತಾಯಿಯನ್ನು ಕುರಿತು "ಅಮ್ಮಾ ಇದೇನು?" ಎಂದು ಕೇಳಿದ. ಸುಬ್ಬಿಯು ನರಸುವಿನ ಕಿವಿಯಲ್ಲಿ "ಮಗು ನಿನ್ನ ತಂದೆ ಏನಾದರೂ ಮಾಡಿ ನರಸುವನ್ನುಳಿಸು, ಒಂದಲ್ಲ ಒಂದು ದಿನ ನರಸು ಎಂಥ ರತ್ನವೆಂದು ತಿಳಿದೀತು ಎಂದಿದ್ದನು" ಎಂದಳು. ನರಸು ತಾಯಿಯ ಮೈಮೇಲೆ ಉರುಳಾಡಿದ. ಇಬ್ಬರನ್ನೂ ರಾಯರ ಮಗ ಗೋಪಾಲನ ಕೊಲೆ ಮಾಡಿದ ಅಪರಾಧಿಗಳೆಂದು ಸೆರೆಮನೆಗೆ ಒಯ್ದರು.

ಎಷ್ಟೋ ವರುಷಗಳ ನಂತರ ರಾಯರ ಮನೆ ಮುಂದಿನ ತೋಟವನ್ನು ಒಬ್ಬ ಹುಚ್ಚ ಸೇರಿಕೊಂಡನು. ಅವನಾಡುತ್ತಿರುವುದು ಒಂದೇ ಮಾತು. "ನಮ್ಮಮ್ಮ ಪತಿವ್ರತೆ, ನನಗೆ ಮಾತ್ರ ಹಸಿವು" ಆ ಊರಿನ ಮುದುಕಪ್ಪನಿಗೆ ಅವನ ಗುರುತು ಹತ್ತಿತು. ರಾಯರನ್ನು ಕರೆದುಕೊಂಡು ಬಂದ. ರಾಯರನ್ನು ನೋಡುತ್ತಿದ್ದಂತೆ ಆ ಹುಚ್ಚನು ನನ್ನ ತಾಯಿ ತಪ್ಪಿಸ್ಥಳಲ್ಲ. "ನಿಮ್ಮ ಗೋಪುವಿನ ರೊಟ್ಟಿಯ ತುಂಡಿಗಾಗಿ ಅವಳು ಬಾಯಿಬಿಟ್ಟಳು. ಹಸಿವೆಗೆ ಬಲಿಯಾದ ನಾನು ಅಪರಾಧಿ" ಎಂದನು. ಆ ಮಾತುಗಳನ್ನು ಮುಗಿಸಿ ಮಲಗಿದವನು ತಿರುಗಿ ಏಳಲೇ ಇಲ್ಲ.

ಶ್ರೀಮಂತರಿಗೆ ಮನೆಯ ಕೆಲಸಕ್ಕೆ ಬಡವರೇ ಬೇಕು. ನಯವಾಗಿ ಬಡವರನ್ನು ಶೋಷಣೆ ಮಾಡುವುದು ಬಡವರಿಗೆ ತಮ್ಮ ಅಜ್ಞಾನದಿಂದ ತಿಳಿಯುವುದೇ ಇಲ್ಲ. 'ನಮ್ಮ ಮನೆ ನಾಯಿ ಇದ್ದಂತೆ' ಎಂದು ಹೇಳಿದರೂ ಖುಷಿ ಪಡುವಂತ ವೆಂಕಪ್ಪನವರಂತವರಿಗೆ ಶ್ರೀಮಂತರ ಶೋಷಣೆ, ವ್ಯಂಗ್ಯ, ದೌರ್ಜನ್ಯ, ಅರ್ಥವಾಗುವುದೇ ಇಲ್ಲ. ಇದ್ದೊಬ್ಬ ಮಗನನ್ನು ಹೇಗಾದರೂ ಉಳಿಸಿಕೊ ಎಂದು ಹೇಳಿದ ಮಾತನ್ನೇ ವೇದವಾಕ್ಯದಂತೆ ಪಾಲಿಸ ಹೊರಟ ಸುಬ್ಬಿಗೆ ಮಗ ನರಸುವಿನ ಹಸಿವನ್ನು ನೀಗಿಸುವುದೇ ದೊಡ್ಡ ಸವಾಲೆನಿಸುತ್ತದೆ. ಆದರೆ ತನಗಾದ ನೋವು ಆತಂಕವನ್ನು ಮಾತ್ರ ನರಸುವಿನ ಮುಂದೆ ವ್ಯಕ್ತಪಡಿಸದೇ ಒಳಗೊಳಗೇ ಮನಸ್ಸು ಕುದಿಯುತ್ತಿತ್ತು. ಪರಿಹಾರವನ್ನು ಕಾಣಲು ಪ್ರಯತ್ನಿಸುತ್ತಾಳೆ. ಬಡ ಹೆಂಗಸಿಗೆ ಯಾರು ತಾನೇ ಸಾಲ ಕೊಡುವ ಮನಸ್ಸು ಮಾಡಿಯಾರು? ಕೊಟ್ಟ ಸಾಲ ಹಿಂದೆಕ್ಕೆ ಬರುವುದಾದರೂ ಹೇಗೆಂಬುದು ಅವರ ಅನುಮಾನ.

ಅಂತಿಮವಾಗಿ ರಾಯರ ಮಗನ (ಗೋಪುವಿನ) ರೊಟ್ಟಿಯ ತುಂಡನ್ನು ತೆಗೆದುಕೊಂಡು ಮಗನ ಹಸಿವನ್ನು ತೀರಿಸಲು ಪ್ರಯತ್ನಿಸುವ ತಾಯಿಯ ವಾತ್ಸಲ್ಯ ನರಸುವನ್ನು ಕಟ್ಟಿಬಿಡುತ್ತದೆ. ಹಲವು ದಿನದಿಂದ ಹಸಿವಿನಿಂದ ಬಳಲುತ್ತಿದ್ದ, ಉಪವಾಸದಿಂದ ಕಂಗೆಟ್ಟ ತಮಗೆ ಅನ್ನ ನೀಡಿದವರಾರು ಎಂಬ ಪ್ರಶ್ನೆ ನರಸುವನ್ನು ಕಾಡುತ್ತಿದ್ದ ಮಧ್ಯರಾತ್ರಿಯಲ್ಲಿ ತನ್ನ ತಾಯಿಯೊಂದಿಗೆ ಅಪರಿಚಿತ ತರುಣನೊಬ್ಬ ಅಸಭ್ಯವಾಗಿ ವರ್ತಿಸುತ್ತಿದ್ದುದನ್ನು ನೋಡಿ, ಕೋಪಗೊಂಡ ನರಸುವಿಗೆ ತಾಯಿಯ ಅಳುವು ಮತ್ತಷ್ಟು ಕೆರಳಿಸಿ ಎಚ್ಚರ ತಪ್ಪುವಂತೆ ಮಾಡಿಬಿಡುತ್ತದೆ. ಅಂತಿಮವಾಗಿ ಗೋಪುವಿನ ಕೊಲೆಯೊಂದಿಗೆ ಅಂತ್ಯವಾಗುತ್ತದೆ. ಅಮ್ಮಾ ಏನೆಂದು ಕೇಳಿದಾಗ ತಾಯಿ ಹೇಳಿದ ಮಾತು "ಏನಾದರೂ ಮಾಡಿ ನರಸುವನ್ನು ಉಳಿಸೆಂದು ಹೇಳಿದ ಗಂಡನ ಮಾತನ್ನು ಉಳಿಸುವುದಕ್ಕಾಗಿ" ತಾನು ಈ ಕೆಲಸಕ್ಕಿಳಿಯಬೇಕಾಯಿತೆಂದು ಹೇಳಿದಾಗ ನರಸು ಒದ್ದಾಡಿ ಬಿಡುತ್ತಾನೆ. ಗಂಡನಿಗೆ ಕೊಟ್ಟ ಮಾತನ್ನು ಉಳಿಸಲಿಕ್ಕಾಗಿ, ತನ್ನ ಹಸಿವಿನ ಸಂಕಟವನ್ನು ನೀಗಿಸುವುದಕ್ಕಾಗಿ ತಾಯಿ ಎಂಥಹ ತ್ಯಾಗಕ್ಕೆ ಸಿದ್ಧಳಾದಳಲ್ಲ ಎಂದು ಯೋಚಿಸಿ ಸೆರೆಮನೆಯಿಂದ ಬಿಡುಗಡೆಯಾಗಿ, ರಾಯರ ಬಳಿ ಬಂದು ತನ್ನ ತಾಯಿ ತಪ್ಪು ಮಾಡಿಲ್ಲ. ನಾನೇ ಅಪರಾಧಿ ಎಂದು ಹೇಳಿ ಪ್ರಾಣ ಬಿಡುತ್ತಾನೆ. ಬಡವರ ಮೇಲಿನ ಶೋಷಣೆ, ಹಸಿವು, ಸಂಕಟ, ಅಸಹಾಯಕತೆ, ತ್ಯಾಗ, ವಾತ್ಸಲ್ಯ, ಇವೆಲ್ಲವೂ ಹಸಿವು ಕಥೆಯ ಮೂಲಕ ಅನಾವರಣಗೊಂಡು ನಾಗರಿಕ ಸಮಾಜವೇ ಯೋಚಿಸುವಂತೆ ಮಾಡಿ ಬಿಡುತ್ತದೆ.

ಕಾರಂತರ 'ಹೋಳಿಗೆ'

ಪಾಣೂರಿನ ರಾಯರೆಂದರೆ ಅವರೇ ಸುಬ್ಬರಾಯರು. ರಾಯರ ಅಳಿಯ ಸದಾಶಿವ ರಾಯರ ಮನೆಗೆ ಬರುವ ದಿನವೆಂದ ಮೇಲೆ ರಾತ್ರಿ ಹೋಳಿಗೆ ಇದೆ ಎಂಬುದನ್ನು ಬಿಡಿಸಿ ಹೇಳುವ ಕಾರಣವಿಲ್ಲ. ಸದಾಶಿವನು ಮಾವನ ಮನೆಗೆ ಬರುವುದು ಊರ ಪದ್ಧತಿಯೇ ಆದರೂ ಇತರ ಪ್ರಸಂಗಗಳಲ್ಲಾದರೂ, ಏನಾದರೂ ನೆಪ ಹುಡುಕಿಕೊಂಡು ಬಾರದೇ ಇರುತ್ತಿರಲಿಲ್ಲ. ಅದರ ರಹಸ್ಯವಾದರೂ ಹೋಳಿಗೆಯೇ. ಅಂಥ ಹೋಳಿಗೆ ಎನ್ನುವಾಗ ಯಾರಾದರೂ ಸುಳ್ಳೆನ್ನಬಹುದು. ಜನರನ್ನು ಅದು ಅಷ್ಟು ಭ್ರಾಂತಿಗೊಳಿಸುವುದಾದರೆ ಅದರಲ್ಲಿ ಅಫೀಮು ಹಾಕುವರೇ, ಭಂಗಿ ಸೊಪ್ಪನ್ನು ಸೇರಿಸುವರೇ ಎಂದು ಕೇಳಬಹುದು. ಆ ರೀತಿಯ ವಾಗ್ವಾದವನ್ನು ದೇವರು ಮೆಚ್ಚನು. ತಾನು ಇದಕ್ಕಿಂತ ಹೆಚ್ಚಿನ ಉತ್ತರವನ್ನು ಕೊಡಲಾರೆ ಎಂದು ನಿರೂಪಕರೇ ಹೇಳಿದ್ದಾರೆ. ಹೋಳಿಗೆಯನ್ನು ತಿಂದ ಪ್ರತಿಯೊಬ್ಬರೂ ಸಣ್ಣಪ್ಪನ ಬೆನ್ನನ್ನು ಚಪ್ಪರಿಸದೇ ಇರಲಿಲ್ಲ. "ಸಣ್ಣಪ್ಪ ನಿನ್ನ ಹೋಳಿಗೆಯೆಂದರೆ ಹೋಳಿಗೆಯಪ್ಪ" ಎನ್ನುವರು.[೩] ಕಲೆಕ್ಟರ್‌ರವರಿಂದಲೇ ಸಣ್ಣಪ್ಪನಿಗೆ ಈ 'ಪ್ರಮಾಣಪತ್ರ' ದೊರಕಿತ್ತು. ಒಂದು ದಿನ ತಹಶೀಲ್ದಾರರೇ ಅಂದಿದ್ದರು. "ಸ್ವಾಮಿ ನಿಮ್ಮ ಸಣ್ಣಪ್ಪನ ಕೈ ಎಂದರೆ – ನಳರಾಯನ ಕೈಯೇ ಸರಿ, ಅವನ ಕಾಲದ ನಂತರ ನರಹುಳುವಿಗೆ ಈ ರೀತಿ ಹೋಳಿಗೆ ಮಾಡಲು ಬಾರದು".[೧೪]

ಸಣ್ಣಪ್ಪನಿಗೆ 'ಹೋಳಿಗೆ' ಮಾಡುವುದು ಹುಟ್ಟುಗುಣದಂತೆ. ವರಬಲವಿದ್ದ ಹಾಗೆ, ಅಷ್ಟಾದರೂ ಪಾಪದ ಸಣ್ಣಪ್ಪನಿಗೆ ತಾನು ಮಾಡಿದ ಹೋಳಿಗೆಯ ರುಚಿ ತನಗೆ ತಿಳಿದಿರಲಿಲ್ಲ. ಏಕೆಂದರೆ, ಕಾರಣವಿಷ್ಟೇ! "ಸಣ್ಣಪ್ಪ ಸಿಹಿ ತಿಂದ ದಿನವೇ ನಿನ್ನ ದೇಹ ಪ್ರಕೃತಿ ಅದ್ಭುತವಾಗಿ (ವಿಚಿತ್ರವಾಗಿ) ನಿನಗೆ ಮೃತ್ಯು ಬಂದೀತು" – ಎಂದು ವೈದ್ಯರು ನುಡಿದಿದ್ದರು.[೧೫] ಅವನ

ಪೂರ್ವಾರ್ಜಿತ ಒಂದು ತೀರ ವಿಶೇಷ ತರಹದ ಹಾಳು ಸಿಹಿ ಮೂತ್ರ ರೋಗ, ಜೊತೆಗೆ-ಇನ್ನೊಂದೆರಡು ಬೇನೆಗಳು, ಮಾಡಿದ ಕೈಗೆ ತಿನ್ನುವ ಋಣವಿರಬಾರದೆಂದೋ ಏನೋ. ನಿಜವನ್ನು ಹೇಳುವುದಾದರೆ – ಸ್ವತಃ ಅದೇ ವೈದ್ಯರಿಗೆ ಸಣ್ಣಪ್ಪ ಮಾಡಿದ ಹೋಳಿಗೆಯನ್ನು ಕೊಟ್ಟು 'ತಿಂದರೆ ಸಾಯುತ್ತೀರಿ' – ಎಂದು ಹೇಳಿದ್ದರೆ, "ಸತ್ತರೂ ಚಿಂತೆಯಿಲ್ಲ, ತಿನ್ನುತ್ತೇನೆ" ಎನ್ನುತ್ತಿದ್ದರವರು.

ಆದರೆ ಸಣ್ಣಪ್ಪ ಒಂದು ಚೂರನ್ನು (ಹೋಳಿಗೆ) ಬಾಯಿಗೆ ಹಾಕಿದವನಲ್ಲ. ಹಾಗೆಯೇ ಒಂದು ಚೂರನ್ನು ಮನೆಗೆ ಒಯ್ದುವನಲ್ಲ. "ಅವನ ಹೆಂಡತಿಗೂ ಅದೇ ಕಾಯಿಲೆಯೇ?" ಎಂದು ಹೋಚಿಸಿದರೆ, ಹಾಗೇನಿಲ್ಲ. ಎಲ್ಲರೂ ಹೊಗಳುತ್ತಿರುವುದನ್ನು ಕೇಳಿ, ಕೇಳಿ ನಿಜವಾಗಿಯೂ ಅಂತ ಯೋಗ್ಯತೆಯು ಅದರಲ್ಲಿ ಇರಬಹುದೆಂದು ಅವನೂ ನಂಬುತ್ತಿದ್ದ. ಅಲ್ಲದೇ ಅದಕ್ಕೆ ಬಳಸಬೇಕಾದ ಸಾಮಾನುಗಳೆಂಥವೆಂದು ಅವನಿಗೆ ಗೊತ್ತಿತ್ತು. ಒಮ್ಮೆ ತಿಂದು ನೋಡಿ ಅದರ ಸವಿ ಅಂಟಿದರೆ, ಮುಂದೆ ಜೀವನ ಪರ್ಯಂತ ಹಸಿವೆಯಿಂದ ಸಾಯಬೇಕಾದೀತು. ಇದ್ದ ಮನೆಯನ್ನು ಮಾರಿ ಬೀದಿಗೆ ಬರಬೇಕಾದೀತೆಂಬುದು ಅವನ ಲೆಕ್ಕಾಚಾರ. ದಿನದ ಹಸಿವೆಯನ್ನು ನೀಗಿಸಿಕೊಳ್ಳುವುದೇ ಸವಾಲಾಗಿರುವಾಗ ಪ್ರತೀದಿನ ಹೋಳಿಗೆ ಬೇಕೆಂದು ಹೆಂಡತಿ-ಮಗಳು ಕೇಳಿದರೆ ಎಲ್ಲಿಂದ ತರುವುದು? ಸಣ್ಣಪ್ಪನಂತೆ ಸುಬ್ಬರಾಯರ ಮನೆಯ ಇತರ ಆಳುಗಳು ಅದರ ರುಚಿ ಕಂಡವರಲ್ಲ.

'ಜನ ಎಷ್ಟೆಂದು ಎಣಿಕೆ ಹಾಕಿ, ತಲೆ ಒಂದರ ನಾಲ್ಕರಂತೆ ಮಾಡು' ಎಂದು ರಾಯರು ಸಣ್ಣಪ್ಪನಿಗೆ ಹೇಳಿಬಿಡುತ್ತಿದ್ದರು. ಇಲ್ಲಿ ಜನ ನೋಡಿ ಎಂದರೆ ಜರತಾರಿ ಮುಂಡಾಸಿ ಜನಗಳೇ ಹೊರತೂ- ಬರೇ ಎರಡು ಕಣ್ಣು ಒಂದು ಮೂಗು, ಎರಡು ಕಿವಿ, ಒಂದು ಬಾಯಿ ಇರುವ ಆಸಾಮಿಗಳಲ್ಲ. ಇಂತವರನ್ನು ಜನ ಎಂದು ಸುಬ್ಬರಾಯರು ಎಣಿಸುವ ಹಾಗೂ ಇಲ್ಲ. ಜಗತ್ತು ಎಣಿಸಿದರಲ್ಲವೇ ಸುಬ್ಬರಾಯರು ಎಣಿಸುವುದು. ಅಂತು ಸುಬ್ಬರಾಯರು ರಿಯಾಯಿತಿಯಿಂದ "ಸಣ್ಣಪ್ಪ ನಿನಗೆ ಬೇಕಾದರೆ ಎರಡು ಹೆಚ್ಚಿಗೆ ಮಾಡು" ಎನ್ನುತ್ತಿದ್ದರು. ಮನೆಗೆ ಒಯ್ಯುವುದಕ್ಕಲ್ಲ. ಅಲ್ಲೇ ತಿನ್ನುವುದಕ್ಕೆ. ಸಣ್ಣಪ್ಪನಿಗೆ ವೈದ್ಯರ ಉಪದೇಶವಿತ್ತೆಂದು ಸುಬ್ಬರಾಯರಿಗೆ ತಿಳಿದಿರದಿದ್ದರೂ, "ಸ್ವಾಮೀ, ಅಡುಗೆ ಮಾಡಿದವರಿಗೆ ಊಟ ರುಚಿಸದು" ಎಂದು ನಗುತ್ತಾ ಕೊಟ್ಟ ಉತ್ತರಗಳೇ ಅವರನ್ನು ಸಮಾಧಾನ ಪಡಿಸುತ್ತಿದ್ದವು. ರಾಯರ ಮನೆಯಲ್ಲಿ ಅಡುಗೆ ಮನೆ ಬೇರೆ, ಅಲ್ಲಲ್ಲಿನ ನೌಕರರೂ ಬೇರೆ. ದೊಡ್ಡವರ ಮನೆಯಲ್ಲಿ ಈ ವ್ಯವಸ್ಥೆಯೇ ರೂಢಿ. ಇದರಿಂದಲೇ ಉಗ್ರಾಣದ ನೌಕರನಿಗೂ, ಅಡುಗೆಯವನಿಗೂ ಸದಾ ಜಗಳ. ಆದರೆ ಸಣ್ಣಪ್ಪ ಇಂಥ ಜಗಳಕ್ಕೆಲ್ಲಾ ಅವಕಾಶ ಕೊಡುತ್ತಿರಲಿಲ್ಲ.

ಸಣ್ಣಪ್ಪನಿಗೆ ಹೆಂಡತಿ ಬದುಕಿರವವರೆಗೂ ಸ್ವಲ್ಪ ತೊಂದರೆ ಇತ್ತು. ರಾಯರ ಮನೆಯ ಹೋಳಿಗೆ ಎಂದರೆ, ದಿಕ್ಕು ದೇಶಕ್ಕೆಲ್ಲಾ ಗೊತ್ತು. ಮನೆಗೆ ಒಂದೆರಡು ತರಬಾರದೇ ಎನ್ನುತ್ತಿದ್ದಳು. "ಹೋಳಿಗೆ ತಿಂದವರು ಸಾಯುವುದಿಲ್ಲವೇ" ಎಂದು ಸಣ್ಣಪ್ಪ ಥಟ್ಟನೆ ಸಿಟ್ಟಿನ ಉತ್ತರವನ್ನು ಕೊಡುತ್ತಿದ್ದ. ಅಂತೂ ಸಣ್ಣಪ್ಪನ ಹೆಂಡತಿ ಹೋಳಿಗೆಯನ್ನು ತಿನ್ನದೇ ಸತ್ತಳು. ಸಾಯುವಾಗ ತನ್ನ ಹೋಳಿಗೆ ಬಯಕೆಯನ್ನು ಮುಗಿಸುವುದಕ್ಕೆ ಎಂಬಂತೆ ಒಬ್ಬ ಮಗಳನ್ನು ಬಿಟ್ಟು ಹೋದಳು. ಅದು ಅವಳ ಮೂರು ವರ್ಷದ ಹುಡುಗಿ ಸಾವಿತ್ರಿ. ಸಾವಿತ್ರಿ ಎಂದರೆ ಸಣ್ಣಪ್ಪನಿಗೆ ಜೀವ. ಅಂದರೆ ಹೆಂಡತಿ ಬದುಕಿದಷ್ಟು ದಿನ ಅವಳನ್ನು ಚೆನ್ನಾಗಿ ಎತ್ತಿ ಹಿಡಿದವನೂ ಅಲ್ಲ. ರಾಯರ ಮನೆ ಬಿಟ್ಟು

ಒಂದು ಕ್ಷಣ ಹೊರಗೆ ಬರುವ ಅವಕಾಶವಿಲ್ಲ -ಅವನಿಗೆ. ಅವನಿಲ್ಲದಾಗ ಯಾರಾದರೂ ದೊಡ್ಡ ಮನುಷ್ಯರು ರಾಯರಲ್ಲಿಗೆ ಬಂದರೆ ಹೋಳಿಗೆ ಮಾಡುವವರಾದರೂ ಯಾರು?

ಸಣ್ಣಪ್ಪನ ಗ್ರಹಚಾರಕ್ಕೆ ಸರಿಯಾಗಿ ಹೆಂಡತಿಯು ಅವನನ್ನು ಅಗಲಿದಳು. ಸಾವಿತ್ರಿ ಈಗ ಮೂರು ತಿಂಗಳಿಂದ ಸಣ್ಣಪ್ಪನ ಕೊರಳಿಗೊಂದು ಬೀಸುವ ಕಲ್ಲಿದ್ದಂತೆಯೇ. ಅಷ್ಟು ಭಾರವೆಂದಲ್ಲ. ಬಡವರ ಮಕ್ಕಳು ಭಾರವಾಗಿರುವುದೇ ಇಲ್ಲ. ಅಂತು ಬಿಡಲಾರರು, ಉರುಳು ಎಂದು. ಅಡುಗೆ ಮಾಡುವಾಗ, ನೀರು ತರುವಾಗ, ನಿಲ್ಲುವಾಗ, ಕುಳಿತುಕೊಳ್ಳುವಾಗ ಸಾವಿತ್ರಿಯನ್ನು ಎತ್ತಿಕೊಂಡೇ ಇರಬೇಕು. ಪಾಪ! ತಾಯಿ ಇಲ್ಲದ ಮಗು ಎಂದು ಅವನಷ್ಟು ಮಾಡುತ್ತಿದ್ದನು. ಇಷ್ಟುದಿನ ಅವನಿಗೊಂದು ಕಷ್ಟವಾಗಿ ಕಾಣಲಿಲ್ಲ. ಆದರೆ ರಾಯರ ಅಳಿಯ ಬರುವ ದಿನವಾದುದರಿಂದ ಸ್ವಲ್ಪ ತೊಡಕಿಗೆ ಬಂತು. ಇತ್ತೀಚೆಗೆ ಪಾಣೂರಿಗೆ ಮೂರು ತಿಂಗಳಿನಿಂದ ಒಂದೇ ಒಂದು ದೊಡ್ಡ ತಲೆಯು ಕಾಲಿಟ್ಟರಲಿಲ್ಲ. ಸುತ್ತ-ಮುತ್ತ ವಾಂತಿ-ಭೇದಿ ಇದೆಯೆಂದು ಕೇಳಿ ನೌಕರರು ಅಂಜಿಕೊಂಡರು. ಆರೋಗ್ಯ ಇಲಾಖೆಯವರು ಎಂಟು ಮೈಲು ದೂರದಿಂದಲೇ ಆರೋಗ್ಯ ರಕ್ಷಣೆ ಮಾಡುತ್ತಿದ್ದರು. ಹಾಗಾಗಿ ಹೋಳಿಗೆಯ ಕಾವಲಿಯು ಸಹ ಉಗ್ರಾಣದಲ್ಲಿತ್ತು. ಅಳಿಯ ಸದಾಶಿವನಿಗಾಗಿ ಅದು ಹೊರಗೆ ಬಂದಿತು. ಸ್ವತಃ ಸಣ್ಣಪ್ಪನೇ ಚೊಕ್ಕ ಮಾಡಲು ಕುಳಿತ್ತಿದ್ದನು. ಅದೊಂದರ ಮಟ್ಟಿಗೆ ಅವನು ಬೇರೆಯವರ ಕೈಯಲ್ಲಿ ಇರಿಸುವ ಹಾಗೆ ಇದ್ದಿರಲಿಲ್ಲ. ಯಾರಾದರೂ ಹೊಟ್ಟೆಕಿಚ್ಚಿನಿಂದ, ಅದಕ್ಕೆ ಬೇವಿನ ರಸವನ್ನು ಹಚ್ಚಿ ತನಗೆ ಅಪಕೀರ್ತಿ ತಂದರೆ ಎಂಬ ಭಯ. ಹಾಗಾಗಿ ಅವನೇ ತೊಳೆಯುತ್ತಿದ್ದ. ಅಷ್ಟರಲ್ಲಿ ಸಾವಿತ್ರಿ ಬಂದಳು. ಅಪ್ಪಾ ಅಪ್ಪಾ-ಇದೆಂಥದು ಎಂದು ತೊದಲು ನುಡಿಯಿಂದ. ಇವನು ನಗುತ್ತಾ "ಅಪ್ಪಚ್ಚಿ ಮಾಡೋಕೆ" ಎಂದನು. ಮಗುವು ಹಿಗ್ಗಿನಿಂದ ಕುಣಿಯಿತು. ಅದನ್ನು ಕಂಡು ಸಣ್ಣಪ್ಪನಿಗೆ ಸ್ವಲ್ಪ ಅಂಜಿಕೆಯಾಯಿತು. ಕೆಲಸದವರು ತಮ್ಮ ಮಕ್ಕಳು – ಮರಿಗಳನ್ನು ರಾಯರ ಮನೆ ಸುತ್ತ ತರಲೇ ಬಾರದಿತ್ತು. ಸಣ್ಣಪ್ಪನೊಬ್ಬನನ್ನು ರಾಯರು ಆಕ್ಷೇಪಿಸುತ್ತಿರಲಿಲ್ಲ. ಆದರೆ ಅವನು ಹೋಳಿಗೆಯ ಚೂರೊಂದನ್ನು ತೆಗೆದು ಅಥವಾ ಕದ್ದು ಮಗುವಿಗೆ ಕೊಟ್ಟರೆ ಅವನ ಗತಿ ಮುಗಿಯಿತೆಂದೇ ಲೆಕ್ಕ. ಅದಕ್ಕಾಗಿ ಅವನು ಸಂಜೆ ಮಗುವನ್ನು ಬೇರೆ ಆಳುಗಳ ಜೊತೆಯಲ್ಲಿ ಆಡಲು ಬಿಟ್ಟು, ಕದವನ್ನು ಹಾಕಿಕೊಂಡು ಹೋಳಿಗೆಯನ್ನು ಮಾಡುತ್ತಿದ್ದನು.

ರಾತ್ರಿ ಊಟದ ಸಮಯ; ಚೌಕಿ ಮನೆಯಲ್ಲಿ ದೀವಿಗೆ ಉರಿಯುತ್ತಿತ್ತು. ರಾಯರು, ಅಳಿಯರಾಯರು, ಜೊತೆಗೆ ಗೌರಿ – ಇಷ್ಟು ಮಂದಿ ಊಟಕ್ಕೆ ಕುಳಿತಿದ್ದರು. ಮೊದಲಿನ ಬಡಿಸುವಿಕೆಯೆಲ್ಲಾ ಮುಗಿದ ಮೇಲೆ ರಾಯರು, "ಸಣ್ಣಪ್ಪ ಬರಲಿ ನಿನ್ನ ವೇಷ" ಎಂದಾಗ ಸಣ್ಣಪ್ಪನ ಮುಖ ಹೂವಿನಂತೆ ಅರಳಿಬಿಟ್ಟಿತು. ತಾನು ಸಿದ್ಧಪಡಿಸಿದ ಹೋಳಿಗೆಯೊಂದಿಗೆ ಬಂದ. ಎಲ್ಲರಿಗೂ ನಾಲ್ಕು ನಾಲ್ಕರಂತೆ ಬಡಿಸಿದ. ಬಕದಂತೆ ಕಾದುಕುಳಿತ ಸದಾಶಿವ ಹೋಳಿಗೆ ತಿಂದು ಸಂತೃಪ್ತನಾದ. ಔತಣವು ಬಲು ನೆಮ್ಮದಿಯಿಂದ ಸಾಗಿತ್ತು. ಅಷ್ಟರಲ್ಲಿ ಅವಲಕ್ಷಣವೊಂದು ಕಾಣಿಸಿತು. ಸಾವಿತ್ರಿ ಆಳುಗಳ ಕೈಯಿಂದ ತಪ್ಪಿಸಿಕೊಂಡು ನೇರವಾಗಿ ಊಟದ ಮನೆಯ ಒಳಗೆ ಬಂದಳು. ರಾಯರ ಎಲೆಯ ಮೇಲಿರುವ 'ಅಪ್ಪಚ್ಚಿ'ಗಳನ್ನು ಕಂಡಳು. ಆಗ ಸಣ್ಣಪ್ಪ ಹಾಲನ್ನು ತರಲು ಅಡುಗೆ ಮನೆಗೆ ಹೋಗಿದ್ದನು. ಮಗುವು "ಅಪ್ಪಾ, ಅಪ್ಪಚ್ಚೀ" ಎಂದಿತು. ಸುಬ್ಬರಾಯರಿಗೆ ಕಣ್ಣು ಕೆಂಪಾಯಿತು. "ಯಾವ ಪ್ರೇತವಿದು" ಎಂದರು. ನೋಡಿದರೆ ಸಾವಿತ್ರಿ. ಅದೇ ಕ್ಷಣ ಅಲ್ಲಿಗೆ

ಬಂದ ಸಣ್ಣಪ್ಪನಿಗೆ ಸಂಗತಿ ತಿಳಿಯಿತು. ಸುಮ್ಮನಿದ್ದರೆ ಕೆಲಸ ಕೆಟ್ಟೀತೆಂದು, ಅಲ್ಲಿಯೇ ಸಾವಿತ್ರಿಗೆರಡು ಏಟು ಕೊಟ್ಟು, ಎಳೆದುಕೊಂಡು ಹೋಗಿ ಅಡುಗೆ ಮನೆಯಲ್ಲಿ ತುರುಕಿ, ಬಂದು ರಾಯರಿಗೆ ಬಡಿಸಿದನು. ಆ ದಿನ ರಾಯರಿಗೆ ಊಟ ಹಿಡಿಸಲೇ ಇಲ್ಲ. ಅವರ ಎಲೆಯ ಮೇಲೆ ಮೂರುವರೆ ಹೋಳಿಗೆಗಳು ಹಾಗೆಯೇ ನರಳುತ್ತಿದ್ದವು.

ಸದಾಶಿವನ ವಿಷಯವನ್ನು ಬಣ್ಣಿಸಬೇಕಾಗಿಲ್ಲ. ಗೌರಿ ಚಿಕ್ಕವಳು. ಒಂದಕ್ಕೆ ಮಿಕ್ಕಿ ತಿನ್ನಲಿಲ್ಲ. ಆದರೆ ನಾಲ್ಕರಂತೆ ಬಡಿಸುವ ಪದ್ಧತಿ ಇತ್ತು.

ಊಟವೆಲ್ಲಾ ಮುಗಿದ ಅರ್ಧ ತಾಸಿನ ಬಳಿಕ ಸಣ್ಣಪ್ಪನು ರಾಯರ ಮುಂದೆ ವೀಳೆಯದ ಹರಿವಾಣವನ್ನು ಇರಿಸಲು ಹೋದಾಗ, “ಸಣ್ಣಪ್ಪ, ಇಷ್ಟು ವಯಸ್ಸಾದರೂ ನಿನಗೆ ಜ್ಞಾನವಿಲ್ಲವೆ” ಎಂದರು. ಸಣ್ಣಪ್ಪನಿಗೆ ಅಷ್ಟೇ ಸಾಕಾಯಿತು. ಇದುವರೆಗೆ ಅವನಿಂಥ ಮಾತುಗಳನ್ನು ಕೇಳಿದವನಲ್ಲ. ಸಾವಿತ್ರಿಯಿಂದ ತನ್ನ ಗತಿ ಹೀಗಾಯಿತೇ ಎಂದುಕೊಂಡು ಈಚೆಗೆ ಬಂದು ಕತ್ತಲಲ್ಲಿ ಕಂಬಕ್ಕೆ ಒರಗಿ ಕುಳಿತುಬಿಟ್ಟ.

ಇತ್ತ ಅಡುಗೆ ಮನೆಯಲ್ಲಿ ಸೆರೆಯಾದ ಸಾವಿತ್ರಿಗೆ ಅಲ್ಲೇ ಅತ್ತು ದಣಿದು, ನಿದ್ರೆ ಬಂದಿತ್ತು. ಎಚ್ಚರವಾಗಲು ತಂದೆಯ ನೆನಪು ಬಂದು ‘ಅಪ್ಪಾ’ ಎಂದು ಕೂಗಿದಳು. ಸಣ್ಣಪ್ಪನಿಗೆ ಎಚ್ಚರವಾಯಿತು. ಹೊರಕ್ಕೆ ಬಂದ. ಆ ರಾತ್ರಿ ಅವನಿಗೆ ಊಟವೇ ಇಲ್ಲ. ಮಗುವಿಗೆ ಸಂಜೆಯೇ ಒಂದು ತುತ್ತು ತಿನ್ನಿಸಿದುದರಿಂದಾಯಿತು. ಇಲ್ಲವಾದರೆ ಅದಕ್ಕೂ ಇವನಂತೆಯೇ ಆಗುತ್ತಿತ್ತು.

ರಾತ್ರಿ ಯಾವಾಗಲೂ, ತನ್ನ ಜೋಪಡಿಗೆ ಮಲಗಲು ಹೋಗುವುದು ಅವನ ರೂಢಿ. “ಹಿರಿಯರು ಕಟ್ಟಿದ ಮನೆಯನ್ನು ಹಾಳು ಕೆಡವಬಾರದು” ಎಂದು ದಿನನಿತ್ಯ ಹೋಗುತ್ತಿದ್ದ. ಆ ದಿನವೂ ಹೊರಟ. ರಾತ್ರಿ ಮನೆ ತಲುಪುವಾಗ ಚಂದ್ರ ಮುಳುಗಿದ್ದ. ಅವಸರದಿಂದ ಕದವನ್ನು ತೆರೆದು ಚಾವಡಿಯಲ್ಲಿ ಹಾಸಿಗೆಯನ್ನು ಬಿಡಿಸಿದ. ಮಗುವನ್ನು ಬಳಿಯಲ್ಲಿ ಮಲಗಿಸಿಕೊಂಡು ಮಲಗಿದನು. ಸಾವಿತ್ರಿಗೆ ನೆನಪು ತುಂಬಾ. ಅವಳು ಮೆಲ್ಲಗೆ ಪ್ರೀತಿಯಿಂದ “ಅಪ್ಪಯ್ಯ ನಾಳೆ ಅಪ್ಪಚ್ಚಿ ಕೊಡುತ್ತೀಯಾ” ಎಂದಳು. ಮರೆತು ಹೋದ ಕೋಪ–ತಾಪಗಳೆಲ್ಲ ಉಕ್ಕಿಬಂದವು. ಮಗುವಿನ ಮೈಮೇಲೆ ಹೊದಿಸಿದ ತಾಯಿಯ ಸೀರೆಯೂ ಕಣ್ಣಿಗೆ ಬಿತ್ತು. ಅವಳಿಗಿದ್ದ ಹೋಳಿಗೆಯ ಬಾಯಾರಿಕೆಯೂ ನೆನಪಿಗೆ ಬಂತು. “ಏ ಪ್ರೇತವೇ! ಇನ್ನೂ ನೀನು ಸಾಯಲಿಲ್ಲವೇ” ಎಂದು ಮಗುವನ್ನು ಬಡಿದು ಅಪ್ಪಳಿಸಿ ಬಿಟ್ಟನು. ತಾನು ಏನು ಮಾಡಿದೆನೆಂಬುದು ಅವನಿಗೆ ತಿಳಿಯಲಿಲ್ಲ.

ತನಗೆ ರಾಯರ ಮನೆಯಲ್ಲಿದ್ದ ಗೌರವವು ನಷ್ಟವಾಯಿತೆಂದು ದುಃಖಿಸಿದನು ಸಣ್ಣಪ್ಪ. ಒಮ್ಮೆಯಾದರೂ ಅವನು ಸಿಟ್ಟಿನಿಂದ ಮಗುವಿನ ಮೇಲೆ ಕೈ ಮಾಡಿದವನಲ್ಲ. ಇದೇ ಮೊದಲು. ಆದರೆ ಹಸಿವು, ಬಡತನ, ಅಸಹಾಯಕತೆ, ಸಿಟ್ಟು, ವ್ಯಥೆ ಎಲ್ಲಾ ಸೇರಿ ಅವನಿಂದ ಆ ಕೆಲಸವನ್ನು ಮಾಡಿಸಿದ್ದವು. ಮಗುವು ಸುಮ್ಮನಾಗಿತ್ತು. ಒಂದೆರಡು ನಿಮಿಷಗಳಲ್ಲಿ ತನ್ನ ಮೂರ್ಖತೆಯು ತನಗೆ ಹೊಳೆಯಿತು. ಸಾವಿತ್ರಿ ನಿರಪರಾಧಿಯೆಂದು ಮೇಲಿಂದ ಮೇಲೆ ಮನಸ್ಸಿಗೆ ತಿಳಿಯಿತು. ಮಕ್ಕಳು ತಿಂಡಿಯನ್ನು ಕಂಡು ಬಾಯ್ಬಿಡುವುದರಲ್ಲಿ ಆಶ್ಚರ್ಯವಿಲ್ಲವೆಂದು ತಿಳಿದನು. ಬಡತನದ ಕಾರಣದಿಂದ ತನಗೆ ಮಾತ್ರ ಮಗು ಕೇಳಿದ್ದನ್ನು ಕೊಡುವ ಭಾಗ್ಯವಿಲ್ಲವೆಂಬುದು ಸ್ಪಷ್ಟವಾಯಿತು.

ಒಡಲು ಕರಗಿ ನೀರಾಯಿತು. ಮಗುವಿನೊಡನೆ ಕ್ಷಮೆಯನ್ನು ಬೇಡುವವನಂತೆ ಅದರ ಮೈ ಸವರಿದನು. ಚಕಿತನಾದನು. ಸಾವಿತ್ರಿಯ ಹೋಳಿಗೆಯ ಋಣವು ಮುಗಿದು ಅವಳೇ ಹೋಳಿಗೆಯಾಗಿದ್ದಳು. ಈ ಕಥೆಯಲ್ಲಿ ಕಾರಂತರು ಚಿತ್ರಿಸಿರುವಂತೆ ಬಡವರು ಎಷ್ಟೇ ಮೈಮುರಿದು ದುಡಿದರೂ, ಪ್ರಾಮಾಣಿಕವಾಗಿ ಕೆಲಸ ಮಾಡಿದರೂ ಅವರಿಗೆ ಕೈ ತುಂಬುವಷ್ಟು, ಹೊಟ್ಟೆತುಂಬುವಷ್ಟು ಹಣವನ್ನಾಗಲಿ. ಅನ್ನವನ್ನಾಗಲಿ ಕೊಡಲು ಶ್ರೀಮಂತರಿಗೆ ಮನಸ್ಸೇ ಬರುವುದಿಲ್ಲ. ಅಧಿಕಾರಿ ವರ್ಗದವರಿಂದ ಹಿಡಿದು ಶ್ರೀಮಂತರಿಗೆಲ್ಲಾ ಸಣ್ಣಪ್ಪ ಮಾಡಿದ ಹೋಳಿಗೆಯೇ ಬೇಕು. ಆದರೆ ಸಣ್ಣಪ್ಪನ ದುರಾದೃಷ್ಟಕ್ಕೆ ಅವನು ತಿನ್ನುವಂತಿಲ್ಲ. ಮನೆಗಾದರೂ ಒಯ್ದು ಹೆಂಡತಿ, ಮಗಳಿಗೆ ತಿನ್ನಿಸುವಂತೆಯೂ ಇಲ್ಲ. ಎಲ್ಲರ ಹೊಟ್ಟೆಗೂ ಹೋಳಿಗೆಯ ಸಿಹಿ ನೀಡುವ ಸಣ್ಣಪ್ಪನ ಹೊಟ್ಟೆಯ ಕಹಿಯನ್ನು ಯಾರೂ ಅರ್ಥ ಮಾಡಿ ಕೊಳ್ಳುವುದಿಲ್ಲ. ರಾಯರ ಮನೆಯ ಯಾವೊಬ್ಬ ಆಳೂ ಕೂಡ ಸಿಹಿ ಹೋಳಿಗೆಯ ರುಚಿಯನ್ನು ಸವಿಯಲು ಸಾಧ್ಯವೇ ಇರಲಿಲ್ಲ. ಶ್ರೀಮಂತರ (ಧನಿಕರ) ಮನೆಯ ಎಲ್ಲ ಕೆಲಸಕ್ಕೂ ಬಡನೌಕರರೇ ಬೇಕು. ಆದರೆ ಅವರ ಕಷ್ಟ ಮಾತ್ರ ಯಾರಿಗೂ ಬೇಡ.

ಹೆಂಡತಿಯ ಹೋಳಿಗೆಯ ಬಯಕೆಯನ್ನು ಈಡೇರಿಸಲು ಕೂಡ ಸಾಧ್ಯವಾಗದ ಸಣ್ಣಪ್ಪನಿಗೆ ಹೆಂಡತಿ ಇರುವಾಗ ಮಗಳನ್ನು ನೋಡಿಕೊಳ್ಳುವ ಜವಾಬ್ದಾರಿ ಇರಲಿಲ್ಲ. ಹೆಂಡತಿ ತೀರಿದ ಬಳಿಕ ಮಗಳ ಜವಾಬ್ದಾರಿ ತನ್ನ ಮೇಲೆ ಬಿತ್ತು. ಆದರೆ ರಾಯರ ಮನೆಗೆ ಯಾವೊಬ್ಬ ನೌಕರರೂ (ಆಳುಗಳು) ಮಕ್ಕಳು-ಮರಿಗಳನ್ನು ತರುವಂತಿರಲಿಲ್ಲ. ಸಣ್ಣಪ್ಪನಿಗೆ ರಿಯಾಯಿತಿ ಇದ್ದರೂ ರಾಯರ ಮನೆಯ ಯಾರೊಬ್ಬರ ಕಣ್ಣಿಗೆ ಬೀಳದಂತೆ ನೋಡಿಕೊಳ್ಳಬೇಕಾಗಿತ್ತು.

ರಾಯರು ಅಳಿಯ-ಮಗಳೊಂದಿಗೆ ಊಟಕ್ಕೆ ಕುಳಿತಾಗ ಆಕಸ್ಮಿಕವಾಗಿ ಬಂದ ಸಣ್ಣಪ್ಪನ ಮಗಳು ಸಾವಿತ್ರಿ ರಾಯರ ಊಟದ ಎಲೆಯ ಮೇಲಿದ್ದ ಹೋಳಿಗೆಗೆ ಆಸೆಪಟ್ಟಾಗ, ಸಾವಿತ್ರಿಗೆ ಒಂದು ಹೋಳಿಗೆಯನ್ನು ಕೊಡದಂಥ ರಾಯರ ಜಿಮುಣತನ, ಸ್ವಾರ್ಥ, ದರ್ಪ ಅಸಹ್ಯ ಹುಟ್ಟಿಸುತ್ತದೆ. ತಿಂಡಿಯನ್ನು ಕಂಡಕೂಡಲೇ ಆಸೆ ಪಡುವ ಮಕ್ಕಳಿಗೆ ಒಂದು ತುಂಡು ಕೊಟ್ಟರೂ ಅವುಗಳ ಸಂತೋಷಕ್ಕೆ ಮಿತಿಯೇ ಇಲ್ಲ. ಆ ಪುಟ್ಟ ಕಂದಮ್ಮನನ್ನು ಮುದ್ದಿಸುವ ಬದಲು "ಯಾವ ಪ್ರೇತವಿದು?" ಎಂದು ಮಗುವನ್ನು ಕೆಂಪು ಕಣ್ಣಿನಿಂದ ದೃಷ್ಟಿಸಿದ ರಾಯರ ಅಮಾನವೀಯ ಮುಖದರ್ಶನವಾಗುತ್ತದೆ. ತಾನು ಎಲೆಯಲ್ಲಿ ತಿನ್ನದೇ ಬಿಟ್ಟಿದ್ದರೂ ಅದನ್ನು ಮಗುವಿಗೆ ಕೊಡುವ ಉದಾರತೆಯನ್ನು ರಾಯರು ತೋರುವುದೇ ಇಲ್ಲ. ಮಗಳು ಗೌರಿ ತಾನೂ ಕೂಡ ಒಂದು ಹೆಣ್ಣಾಗಿದ್ದರೂ, ಆ ಹೆಣ್ಣುಮಗುವಿನ ಆಸೆಯನ್ನು ಅರ್ಥಮಾಡಿಕೊಳ್ಳುವುದೇ ಇಲ್ಲ. ತಾನು ತಿಂದದ್ದು ಒಂದೇ ಹೋಳಿಗೆಯಾದರೂ ಎಲೆಯಲ್ಲಿದ್ದ ಮೂರು ಹೋಳಿಗೆಗಳು ಮಾತ್ರ ತಿನ್ನುವವರಿಲ್ಲದೆ ಅನಾಥವಾಗಿದ್ದವು. ಈ ಸಮಾಜ ಹಸಿದವರಿಗೆ ನೀಡದೇ, ಹೊಟ್ಟೆ ತುಂಬಿದವರಿಗಷ್ಟೇ ಯಥೇಚ್ಛವಾಗಿ ಸಿಗುವುದು, ನೀಡುವುದು ನಿಜಕ್ಕೂ ವಿಪರ್ಯಾಸವಾದುದು.

ಮಧ್ಯರಾತ್ರಿಯಲ್ಲಿಯೂ ಹೋಳಿಗೆಯ ಕುರಿತು ತನ್ನಪ್ಪನನ್ನು ಪ್ರೀತಿಯಿಂದ "ಅಪ್ಪಯ್ಯ, ನಾಳೆ ಅಪ್ಪಚ್ಚೀ (ಹೋಳಿಗೆ) ಕೊಡುತ್ತೀಯಾ" ಎಂದು ಕೇಳಿದ್ದೆ ತಪ್ಪಾಗಿ ಹೋಯಿತು. 'ಬಡವನ ಕೋಪ ದವಡೆಗೆ ಮೂಲ' ಎಂಬ ಮಾತಿನಂತೆ ಬಡವರು ಕೋಪ ಮಾಡಿಕೊಂಡರೆ ನಷ್ಟ ಅವರಿಗೇ. ಸಣ್ಣಪ್ಪನ ಕೋಪ ಅವನ ಮಗಳನ್ನೇ ಬಲಿ ತೆಗೆದುಕೊಂಡಿತು. ಮಗಳನ್ನು ಮನಸಾರೆ

ಮುದ್ದಾಡುವ ಸಣ್ಣಪ್ಪನಿಗೆ ನಿಜವಾಗಿ ಕೋಪವಿದ್ದದ್ದು ರಾಯರ ಮೇಲಲ್ಲ. ತನ್ನ ಬಡತನ, ಹಸಿವು, ನೋವು, ನಿರಾಶೆ, ಅಸಹಾಯಕತೆಯ ಮೇಲೆ.

ಹೋಳಿಗೆ ಮಾಡಿ, ಮಾಡಿ ಎಲ್ಲರ ಮೆಚ್ಚುಗೆಗೆ ಪಾತ್ರನಾದ ಸಣ್ಣಪ್ಪ ಕೊನೆಗೊಂದು ದಿನ ಮಗಳು ಅವನ ಕೈಯಲ್ಲಿಯೇ ಅಪ್ಪಚ್ಚಿಯಾದುದು (ಹೋಳಿಗೆ) ಇಡೀ ನಾಗರಿಕ ಸಮಾಜವೇ ತಲೆ ತಗ್ಗಿಸುವಂತದು. ಈ ಕುರುಡು ಸಮಾಜದಲ್ಲಿ ಹಸಿದವರಿಗೆ ಅನ್ನವಿಲ್ಲ. ಹೊಟ್ಟೆ ತುಂಬಿದವರಿಗೆ ಮಾತ್ರ ಅನ್ನ ಲಭಿಸುತ್ತದೆ. ಹೊಟ್ಟೆ ತುಂಬಿಸಿಕೊಂಡು ಚೆಲ್ಲುವ ಶ್ರೀಮಂತರ ಅನ್ನವೂ ಹಸಿದ, ಹೊಟ್ಟೆಗೆ ನಿಲುಕದೇ ಪ್ರಾಣಿ–ಪಕ್ಷಿಗಳ ಪಾಲಾಗುತ್ತಿದೆ. ಶ್ರೀಮಂತರು ಅನ್ನ ಹೆಚ್ಚಾದರೆ ಚೆಲ್ಲುತ್ತಾರೆಯೇ ವಿನಃ ಹಸಿದ ಹೊಟ್ಟೆಗೆ ಮಾತ್ರ ನೀಡಲಾರರು. ಈ ಸಂದರ್ಭದಲ್ಲಿ ಬಸವಣ್ಣನವರ ವಚನವೊಂದನ್ನು ನೆನಪಿಸಿಕೊಳ್ಳಬಹುದು.

ಕಲ್ಲನಾಗರ ಕಂಡರೆ ಹಾಲನೆರೆಯೆಂಬರು
ದಿಟ ನಾಗರ ಕಂಡರೆ ಕೊಲ್ಲೆಂಬರಯ್ಯ
ಉಣ್ಣುವ ಜಂಗಮ ಬಂದರೆ ಮುಂದೆ ನಡೆಯೆಂಬರು
ಉಣ್ಣದ ಲಿಂಗಕ್ಕೆ ಬೋನ ಹಿಡಿವರಯ್ಯಾ

ಕಲ್ಲಿನ ನಾಗರಕ್ಕಿಂತ ಹಾಲಿನ ಅಗತ್ಯತೆ ಇರುವುದು ಜೀವಂತ ನಾಗರಕ್ಕೆ. ಆದರೆ ಜೀವವಿದ್ದದ್ದನ್ನು ಕೊಲ್ಲುವರು. ಕಲ್ಲಿಗೆ ಹಾಲಿನ ಅಭಿಷೇಕ ಮಾಡುವುದು ಎಷ್ಟು ಸರಿ. ಹಸಿದು ಬಂದ ಜಂಗಮನನ್ನು ಮುಂದೆ ಕಳುಹಿಸಿ, ಉಣ್ಣದ ಲಿಂಗದ ಮುಂದೆ ನೈವೇದ್ಯ ಇಡುವುದರಿಂದ ಬಂದ ಭಾಗ್ಯವಾದರೂ ಯಾವುದು?

ಹೋಳಿಗೆಯನ್ನು ತಿನ್ನದೇ ತಿಪ್ಪೆಗೆ ಎಸೆಯಲು ಸಿದ್ಧರಾದ ರಾಯರು, ರಾಯರ ಮಗಳು, ಅದನ್ನು ಬಯಸಿದ ಸಾವಿತ್ರಿಗೆ ಮಾತ್ರ ಕೊಡಲು ಮುಂದೆ ಬರುವುದಿಲ್ಲ.

ಶ್ರೀಮಂತರು ಬಡವರ ಹಸಿವು, ಅಸಹಾಯಕತೆಯನ್ನೇ ಬಂಡವಾಳ ಮಾಡಿಕೊಂಡು ಮಾಡುತ್ತಿರುವ ಈ ಶೋಷಣೆಗೆ ಬಿಡುಗಡೆ ಯಾವಾಗ ಎಂಬುದು ಕೂಡ ಶೋಷಣೆಗೊಳಗಾದವರಿಗೆ ಅರ್ಥವಾಗುವುದೇ ಇಲ್ಲ. ತನ್ನ ಕಣ್ಣೆದುರಲ್ಲೇ ಮಗಳನ್ನು ಪ್ರೇತ ಎಂದರೂ ಕೂಡ ಬೇಸರವಿಲ್ಲ ಸಣ್ಣಪ್ಪನಿಗೆ. ಆದರೆ ರಾಯರಿಂದ ಬೈಸಿಕೊಳ್ಳಬೇಕಾಯಿತಲ್ಲ. ಸಾವಿತ್ರಿಯಿಂದ ತನ್ನ ಗತಿ ಹೀಗಾಯಿತೆ ಎಂದುಕೊಂಡು ಯೋಚಿಸುತ್ತಾನೆಯೇ ವಿನಃ ತನ್ನ ಮಗಳು ಬೇಡಿದ್ದಾದರೂ ಏನು. ರಾಯರ ಮನೆಯ ಬೆಲೆಬಾಳುವ ವಸ್ತುವನ್ನೇ, ಅಥವಾ ಮೃಷ್ಟಾನ್ನ ಭೋಜನವನ್ನೇ, ವಸ್ತುವನ್ನೇ, ಆಟಿಕೆಗಳನ್ನೇ ಎಂದರೆ ಯಾವುದೂ ಅಲ್ಲ. ಹೋಳಿಗೆಯನ್ನು. ಹಲವು ವರ್ಷಗಳಿಂದ ಹೋಳಿಗೆ ಮಾಡುತ್ತಿದ್ದರೂ ತಾನು ತಿನ್ನುವ ಭಾಗ್ಯವಿಲ್ಲದಿದ್ದರೂ ತನ್ನ ಮಗಳಿಗೊಂದಾದರೂ ಹೋಳಿಗೆಯನ್ನು ತೆಗೆದುಕೊಳ್ಳದ, ಧೈರ್ಯ ಮಾಡದ, ಪ್ರಾಮಾಣಿಕನಾದ ಸಣ್ಣಪ್ಪ ತನ್ನ ಮಗಳು ಹೋಳಿಗೆ ಕೇಳಿದ್ದಕ್ಕೆ ಪ್ರತಿಯಾಗಿ ಕೋಪದಿಂದ ಆಕೆಯನ್ನೇ ಹೋಳಿಗೆ ಮಾಡಿದ್ದು ಮಾತ್ರ ಯಾವ ನ್ಯಾಯ ಎಂಬುದನ್ನು ನಮಗೆ ನಾವೇ ಪ್ರಶ್ನಿಸಿಕೊಳ್ಳಬೇಕಾಗಿದೆ. ಹಸಿವಿನ ನಿವಾರಣೆಗೆ ಎಲ್ಲರೂ ಪ್ರಯತ್ನಿಸಬೇಕಾಗಿದೆ. ಅಮಾಯಕ ಜೀವಿಗಳನ್ನು ಉಳಿಸಬೇಕಾಗಿದೆ, ಆರ್ಥಿಕ ಶೋಷಣೆ ನಿಲ್ಲಬೇಕಿದೆ.

ಕಾರಂತರ 'ಮಗಳ ಮದುವೆ'

ಮಗಳ ಮದುವೆಯೆಂದರೆ ಯಾವ ತಂದೆ-ತಾಯಿಯೇ ಆಗಲಿ ಹಿಗ್ಗಿನ ಜೊತೆ ನೋವನ್ನು ಕೂಡ ಅನುಭವಿಸುತ್ತಾರೆ. ಆದರೆ ಬಡವರ ಮನೆಯ ಮಗಳಾದರಂತೂ ಮದುವೆ ಎಂಬುದೇ ಕನಸಾಗಿ ಉಳಿಯುವ ಸಂಭವವೇ ಜಾಸ್ತಿ. ಬಡವರ ಮನೆಯಲ್ಲಿ ಹೆಣ್ಣು ಮಕ್ಕಳು ಹುಟ್ಟುವುದೇ ಶಾಪ ಎಂಬಂಥ ಪರಿಸ್ಥಿತಿ ಸಮಾಜದಲ್ಲಿ ನಿರ್ಮಾಣವಾಗಿ ಬಿಟ್ಟಿದೆ. ಗುಣ-ನಡತೆ-ಸೌಂದರ್ಯಕ್ಕಿಂತ ಹಣವೇ ಮುಖ್ಯವಾಗಿರುವ ಈ ಕರುಡು ಸಮಾಜದಲ್ಲಿ ಬಡವರು ಬದುಕುವುದಾದರೂ ಹೇಗೆ? ತಮ್ಮ ಮಕ್ಕಳ ಬದುಕನ್ನು ಹಸನಾಗಿಸಬೇಕೆಂದು ಬಯಸಿದರೂ ಅದಕ್ಕೆ ಅವಕಾಶವೇ ಸಿಗದಿರುವುದು ದುರಂತವೇ ಸರಿ ಎಂಬುದನ್ನು ಕಾರಂತರು 'ಮಗಳ ಮದುವೆ' ಎಂಬ ಕಥೆಯ ಮೂಲಕ ನಿರೂಪಿಸಿದ್ದಾರೆ. ಬಡವರಿಗೆ ಬಡತನ, ಹಸಿವು ಒಂದು ಶಾಪವಾದಂತೆ ಮಕ್ಕಳು ಶಾಪವಾಗುವುದು ಈ ಕಥೆಯಲ್ಲಿ ನಿರೂಪಿತವಾಗಿದೆ.

ಕಿಟ್ಟಪ್ಪನಿಗೆ ಒಬ್ಬಳೇ ಮಗಳು. ಗಂಡು ಸಂತಾನವಿರದ ಕಿಟ್ಟಪ್ಪ ಮತ್ತು ಭಾಗ್ಯಮ್ಮ ಮಗಳಿಗೆ ೧೨ ವರ್ಷ ವಯಸ್ಸಾದೊಡನೆಯೇ ಮದುವೆ ಯೋಚನೆ ಮಾಡಿ, ವರಾನ್ವೇಷಣೆಗೆ ತೊಡಗಿದರು. "ವರಹ ಇಲ್ಲದೆ ವರ ಸಿಗುವ ಕಾಲ"[೧೬] ಎಂದೋ ಮುಗಿದಿದೆ. ವರ ಗಂಡಾದರೂ ವರಹ ಇಲ್ಲದೆ ಸಾಗದು. ಸಮಾರಾಧನೆಯಲ್ಲಿ ಊಟ ಮಾಡುವಾಗ ಭೇಟಿಯಾದ ಸ್ನೇಹಿತ ಸುಬ್ಬಣ್ಣ ಪುರಾಣಿಕರು "ಕಿಟ್ಟಪ್ಪನಿಗೆ ಜಾತಕ ಸರಿ ಬಂದರೆ ನಮ್ಮ ಮನೆಗೆ ನಿಮ್ಮ ನಾಗಮ್ಮನನ್ನು ಏಕೆ ತರಬಾರದು?" ಎಂದು ಹೇಳಿದ್ದೇ ತಡ, ಪುರಾಣಿಕರ ಮನೆಗೆ ಓಡಿದ. ಜಾತಕ ನೋಡಿ, ಆಗಿ ಬರುತ್ತದೆ. ಆದರೆ ಯಾವುದಕ್ಕೂ ನಮ್ಮ ಹುಡುಗ ಬೆಂಗಳೂರಿನಿಂದ ಬರಲಿ ಎಂದರು. ನೆಂಟಸ್ತಿಗೆ ಆಗಬಹುದೆಂದು ಬೇರೆ ಹುಡುಕಾಟಕ್ಕೆ ಹೋಗಲಿಲ್ಲ.

ಊರಿನ ಜಾತ್ರೆಗೆ ಪುರಾಣಿಕರ ಮಗ ಶಂಕರ ಬಂದ. ಜಾತ್ರೆಯಲ್ಲೇ ಕಿಟ್ಟಣ್ಣ ಅವನನ್ನು ಭೇಟಿಮಾಡಿ ಜೊತೆಯಲ್ಲಿಯೇ ಅತ್ತಿತ್ತ ತಿರುಗಾಡಿದ. ಮರುದಿನ ಪುರಾಣಿಕರ ಮನೆಗೆ ಹೋದ. ಆ ಸಂದರ್ಭದಲ್ಲಿ ತಂದೆ-ಮಕ್ಕಳಿಬ್ಬರೂ ಮಾತನಾಡುತ್ತಾ ನಗುತ್ತಾ ಇದ್ದರು. 'ಏನು ಬಂದೆ ಕಿಟ್ಟಣ್ಣ' ಎಂದರು. ಲಗ್ನದ ವಿಚಾರ ಮಾತನಾಡಲು ಬಂದ ವಿಚಾರ ತಿಳಿಸಿದಾಗ, ಈಗ ಬಂದರೆ ಏನು ಉಪಯೋಗ? ಮಹಾದೇವ ಭಟ್ಟರ ಮಗಳೊಂದಿಗೆ ನಮ್ಮ ಮಗನ ಮದುವೆ ಎಂದು ತೀರ್ಮಾನಿಸಿ ಆಗಿದೆ ಎಂದ ಪುರಾಣಿಕರು, ಅವರ ಮಗಳು ಲಕ್ಷಣವಾಗಿದ್ದಾಳೆ ಎಂದಾಗ, ಕಿಟ್ಟಪ್ಪನು ನಮ್ಮ ಹುಡುಗಿಯೂ ಚೆನ್ನಾಗಿಯೇ ಇದ್ದಾಳೆ ಎಂದನು.

ನಿಮ್ಮ ಮಗಳ ರೂಪದ ವಿಚಾರ ಅಲ್ಲ ನಾನು ಹೇಳುವುದು. ರೂಪ ಹೇಗೂ ಇದೆ. ಆದರೆ ಮಹಾದೇವ ಭಟ್ಟರು ಹುಡುಗನ ಈಗಿನ ಅಂತಸ್ತಿಗೆ ತಕ್ಕಂತೆ ಐದು ನೂರು ರೂಪಾಯಿ ವರದಕ್ಷಿಣೆ ಕೊಡುವುದಲ್ಲದೆ ಮಗಳ ಮೈತುಂಬ ಚಿನ್ನ ಹಾಕುತ್ತೇನೆ ಅಂತ ಅಂದರು. ಕಿಟ್ಟಣ್ಣ ಸುಮ್ಮನಾದನು. ಪುನಃ ಪುರಾಣಿಕರು 'ನೀವು ಒಂದು ನೂರು ಹೆಚ್ಚಿಗೆ ಕೊಟ್ಟರೆ ಮನಸ್ಸು ಮಾಡಬಹುದು" ಎಂದರು.

ಬರೀ ನೂರು ರೂಪಾಯಿ ಕೊಡಲೂ ಶಕ್ತನಲ್ಲದ ಕಿಟ್ಟಣ್ಣ ಇನ್ನೂ ಆರು ನೂರು ರೂಪಾಯಿ ಹೊಂದಿಸಿ ಕೊಡುವುದಾದರೂ ಹೇಗೆ? ತನ್ನನ್ನು ಮಾರಿದರೂ ಅಷ್ಟು ಹಣ

ಬರಲಾರದು. ಹತಾಶನಾಗಿ ಮನೆಗೆ ಬಂದ. ಹೆಂಡತಿಯ ಉಬ್ಬಿದ ಮನಸ್ಸು ಕುಗ್ಗಿ ಹೋಯಿತು. ಇದೇ ಸಂದರ್ಭದಲ್ಲಿ ಶಂಕರನ ಮದುವೆ ನಿಶ್ಚಯವಾಯಿತು. ಮಹಾದೇವ ಭಟ್ಟರು ಬಂದು ಕಿಟ್ಟಣ್ಣನಿಗೆ ತುಂಬಾ ಹೇಳಿ ಹೋದರು, ಕಿಟ್ಟಣ್ಣ ಹೋಗಬಾರದೆಂದು ತೀರ್ಮಾನಿಸಿಬಿಟ್ಟಿದ್ದ. ಅಷ್ಟರಲ್ಲಾಗಲೇ ಮದುವೆಯೇ ನಿಂತು ಹೋಯಿತು. ಮದುಮಗ ಶಂಕರ ಬೆಂಗಳೂರಿನಲ್ಲಿ ಯಾರ ಮನೆಯಲ್ಲಿ ಅಡುಗೆ ಕೆಲಸ ಮಾಡಿಕೊಂಡಿದ್ದನೋ ಅಲ್ಲಿಂದ ಒಂದು ವಾಚನ್ನು ಕದ್ದು ತಂದ ಆರೋಪದ ಮೇಲೆ ಅವನನ್ನು ಜೈಲಿಗೆ ಹಾಕಿದರು. ಕಿಟ್ಟಪ್ಪ ದಂಪತಿಗಳಿಗೆ 'ವಿಪತ್ತನ್ನು ದೇವರೇ ತಪ್ಪಿಸಿದ' ಎಂದು ಸಮಾಧಾನವಾಯಿತು.

ಕಿಟ್ಟಣ್ಣ ಪುನಃ ವರಾನ್ವೇಷಣೆ ಆರಂಭಿಸಿದರೂ, ಊರೂರು ತಿರುಗಿದರೂ ಹುಡುಗಿ ಹೇಗೇ ಇರಲಿ, ವರದಕ್ಷಿಣೆ ವಿಚಾರ ಹೇಗೆ? ಎನ್ನುವವರೇ ವಿನಹಾ ಬೇರೆ ಇಲ್ಲ. ಭಾಗ್ಯಮ್ಮ 'ತಮ್ಮ ಮಗಳು ನಾಗಮ್ಮನ ರೂಪ ಕಂಡರೆ ದಮ್ಮಯ್ಯ ಹಾಕಿಕೊಂಡು ಗಂಡುಗಳು ಬರುತ್ತವೆ" ಎಂದವಳು "ದೇವರು ನನ್ನ ಮಗಳಿಗೆ ದುಂಡಗಿನ ಸೊಡ್ಡನ್ನು ಕೊಡುವ ಬದಲು, ದುಡ್ಡಿನ ಸೊಡ್ಡನ್ನು ಕೊಡಬಾರದಿತ್ತೇ?" ಎಂದು ರೋದಿಸಿದಳು. ಹಣ ಕಂಡರೆ ಬಾಯಿ ಬಾಯಿ ಬಿಡುವಂತ ಈ ಕಾಲದಲ್ಲಿ ಗುಣಕ್ಕಾಗಲಿ ರೂಪಕ್ಕಾದರೂ ಮಹತ್ವವಿಲ್ಲ ಎಂಬುದರ ಅರಿವಾಯಿತು. ಅಂದಿನಿಂದ ಮಗಳನ್ನು ದೂಷಿಸತೊಡಗಿದಳು. ಬಡವರು ತಮ್ಮ ಅಸಹಾಯಕತೆಯನ್ನು, ಸಿಟ್ಟನ್ನು ತಮ್ಮ ಮನೆಯವರ ಮೇಲೆ ತೀರಿಸಕೊಳ್ಳಬೇಕೇ ವಿನಃ ಬೇರೆಯವರ ಮೇಲೆ ತೋರಿಸಲು ಸಾಧ್ಯವಿಲ್ಲ. ತೋರಿಸಿದರೂ ಯಾರು ತಾನೇ ಕೇಳುತ್ತಾರೆ. 'ಬಡವರ ಕೋಪ ದವಡೆಗೆ ಮೂಲ' ಎಂಬಂತೆ. ಭಾಗ್ಯಮ್ಮ ತನ್ನ ಎಲ್ಲ ಅಸಹನೆಯನ್ನು ಮಗಳ ಮೇಲೆ ತೀರಿಸಿಕೊಳ್ಳಲಾರಂಭಿಸಿದಳು. 'ಏ ಶನಿಯೇ, ನೀ ಹಾಳಾಗಿ ಹೋಗುವುದಿಲ್ಲವೇಕೆ' ಎನ್ನಲು ತೊಡಗಿದಳು. ಒಂದೆರಡು ಬಾರಿ ಏಟು ಕೊಟ್ಟಳು. ಕೊನೆಗೆ ತನ್ನ ಮೂರ್ಖತನಕ್ಕೆ ಅತ್ತಳು. ಮಗಳು ನಾಗಮ್ಮ ಮಾತ್ರ ಯಾವ ಯೋಚನೆಯಿಲ್ಲದ ಸುಂದರ ಯುವತಿಯಾಗಿ ಬೆಳೆಯತೊಡಗಿದಳು. ಇದೆಲ್ಲಿ ರೋಗ ಬಂತು ಎಂದು, ತಾಯಿಯು ಮಗಳಿಗೆ ಹೊಟ್ಟೆ ತುಂಬಾ ಅನ್ನ ಹಾಕುವುದನ್ನು ನಿಲ್ಲಿಸಿದಳು. ಮಗಳ ಬೆಳವಣಿಗೆ ಕಣ್ಣಿಗೆ ಕುಕ್ಕುವಂತಾಗಬಾರದು ಎಂದು. ಬಡವರ ಮಕ್ಕಳಿಗೆ ರೂಪವೂ ಒಂದು ಶಾಪವೇ ಆಗಿರುತ್ತದೆ.

ಅಂದಿನಿಂದ ನಾಗಮ್ಮ ಬರೀ ಗಾಳಿ ತಿಂದೇ ಬೆಳೆಯುವ ಹಾಗೆ ಬೆಳೆದಳು. ಸರಾಸರಿ ವಯಸ್ಸು ಹದಿನಾಲ್ಕು (೧೪) ಆದರೂ ಕಂಡವರೆಲ್ಲಾ ಅವಳಿಗೆ ಕನಿಷ್ಠ ಪಕ್ಷ ಇಪ್ಪತ್ತು (೨೦) ವಯಸ್ಸಾದರೂ ಆಗಿದೆ ಎನ್ನುತ್ತಿದ್ದರು. ಊರ ಕೆರೆಯ ಹತ್ತಿರ ಹೋದರೆ, ನಾಗಮ್ಮ 'ಗರ್ಭಿಣಿ'ಯಿದ್ದ ಹಾಗೆ ಇದ್ದಾಳೆ – ಅನ್ನಲು ಶುರು ಮಾಡುವರು. ವಿಷಯ ತಿಳಿದು ಭಾಗ್ಯಮ್ಮ ಹಣೆ ಹಣೆ ಬಡಿದುಕೊಂಡಳು. ಬಡವರಾಗಿ ಹುಟ್ಟುವುದೇ ಶಾಪ. ಅಂಥದ್ದರಲ್ಲಿ ಈ ರೀತಿಯ ಮಾತು ಕೇಳಿದರಂತೂ ಕತ್ತಿಯಿಂದ ತಿವಿದಷ್ಟು ನೋವಾಗುತ್ತಿತ್ತು. ಇನ್ನು ಮುಂದೆ ಮನೆ ಬಿಟ್ಟು ತಿರುಗಬಾರದೆಂದು ಕಟ್ಟಪ್ಪಣೆ ಮಾಡಿದಳು. ಜನರ ಸಂಶಯ ಮತ್ತಷ್ಟು ಗಟ್ಟಿಯಾಯಿತು. "ಹೆರಿಗೆ ಸಮಯ ಬಂತು, ಅಡಗಿಸಿ ಇಡಲಿಕ್ಕೆ ಉಪಾಯ ಮಾಡಿದ್ದಾರೆ" ಎಂಬ ವಾರ್ತೆಯನ್ನು ಹರಡಿದರು. ನಾಲ್ಕು ತಿಂಗಳು ಸಲ್ಲುವುದರಲ್ಲಿ 'ಗರ್ಭಹತ್ಯಾ' ದೋಷದ ಅಪವಾದವನ್ನೂ ಕಿಟ್ಟಣ್ಣನ ಮೇಲೆ ಹೊರಿಸಿಯೂ ಬಿಟ್ಟರು. ಬೇಸತ್ತ ಕಿಟ್ಟಣ್ಣ ಮತ್ತು ಭಾಗ್ಯಮ್ಮ ತಮ್ಮ ಅದೃಷ್ಟವನ್ನು

ನಿಂದಿಸಿಕೊಂಡರು. ದೇವರ ಹತ್ತಿರ "ನಾಗಮ್ಮನನ್ನು ಬೇಗ ಕರೆದುಕೊಂಡು ಹೋಗು" ಎಂದು ಮನಪೂರ್ವಕವಾಗಿ ಬೇಡಿ, ಅತ್ತರು. ನಾಗಮ್ಮ ಕೂಡ ಅದೇ ವರವನ್ನು ಬೇಡಿದಳು.

ಬದುಕಿದಾಗಲಂತೂ ನೆಮ್ಮದಿ ಇಲ್ಲ. ಇನ್ನು ಸತ್ತ ಮೇಲಾದರೂ ನೆಮ್ಮದೆ ಸಿಗಲಿ ಎಂಬುದು ಬಡವರ ಬಯಕೆ. ಸಾವು ಬರಲೆಂದು ಬಯಸಿದ ನಾಗಮ್ಮ ವಿಷಮ ಜ್ವರದಿಂದ ಬಳಲತೊಡಗಿದಳು. ತಂದೆ-ತಾಯಿಗಳು ಎಷ್ಟೇ ಬಡವರಾದರೂ- ಹಸಿವೆಯಿಂದ ನರಳಿದರೂ ಕರುಣೆಯೆಂಬುದು ಸಾಯುವುದಿಲ್ಲ. ಬಡತನದಲ್ಲೂ ಮಕ್ಕಳ ಮೇಲಿನ ಪ್ರೀತಿಯನ್ನು ಕಡಿಮೆ ಮಾಡುವುದಿಲ್ಲ. ಎದುರಿನಲ್ಲಿ ಕೋಪಿಸಿಕೊಂಡಂತೆ ಕಂಡರೂ ಅಂತರಂಗದಲ್ಲಿ ಆ ವಾಸ್ತಲ್ಯ ಇದ್ದೇ ಇರುತ್ತದೆ. ಮಗಳ ಜ್ವರಕ್ಕೆ ಏನೆಲ್ಲಾ ಔಷಧಿ ಮಾಡಲು ತೊಡಗಿದರು. "ಬಾಣಂತಿ ನಂಜು ಮೀರಿರಬೇಕು" ಎಂಬ ಹೊಸವಾರ್ತೆ ಹುಟ್ಟಕೊಂಡಿತು. ಮಗಳು ಸಾಯುವ ಸ್ಥಿತಿಯಲ್ಲಿರುವಾಗ ಅದನ್ನು ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ. ಪಾಪ ಮಾಡದ ಪಾಪದ ನಾಗಮ್ಮ ಒಂದು ಹನಿ ಔಷಧವನ್ನು ಕುಡಿಯದೇ, ತಾನು ಸಾಯುತ್ತೇನೆ, ಅದರಿಂದ ತಂದೆ-ತಾಯಿಯರಿಗೆ ದುಃಖ ಪರಿಹಾರವಾಗುತ್ತದೆ ಎಂಬ ಹರುಷದಲ್ಲಿಯೇ ಉಳಿದಳು.

ವಿಷಮ ಜ್ವರದ ಇಪ್ಪತ್ತೊಂದನೆಯ (೨೧) ದಿನ ಈ ದಿನ ದಾಟಿದರೆ ಭೀತಿಯಿಲ್ಲವೆಂದು ರೋಗಿಯನ್ನು ಕಾಣದ ಊರ ಪಂಡಿತನ ಉಪದೇಶವಾಗಿತ್ತು. ಮರುದಿನ ಕಷಾಯದ ನೀರಿನಲ್ಲಿ ಸ್ನಾನ ಮಾಡಿಸಬಹುದು ಎಂದಿದ್ದನು. ಇತ್ತ ಕಡೆ ನಿಜವಾಗಿಯೂ ನಾಗಮ್ಮನ ಮುಖದಲ್ಲಿ ಗೆಲುವು ಕುಣಿಯುತ್ತಿತ್ತು. ಬಡವರು ಹಸಿವೆ, ಬಡತನದ ಜೊತೆಗೆ ಇತರರು ನಿಂದಿಸುವ ಮಾತುಗಳಿದ್ದರೂ ಕೂಡ ಆಯುಷ್ಯ ಜಾಸ್ತಿ. ಬಡತನ, ಹಸಿವು, ಅಸಹಾಯಕತೆ ಅವರ ದೌರ್ಬಲ್ಯವಾದರೂ ಅವರು ಗಟ್ಟಿಗರು. ಮನಸ್ಸು ಗಟ್ಟಿಯದು.

ಶಂಕರನ ಮದುವೆ ನಿಂತು, ಅವನು ಸೆರೆಮನೆಗೆ ಹೋದ ಚಿಂತೆಯಿಂದ ಕಾಯಿಲೆ ಬಿದ್ದ ಅವರ ತಾಯಿ, (ಸುಬ್ಬಣ್ಣ ಪುರಾಣಿಕರ ಪತ್ನಿ) ಕಾಯಿಲೆ ಬಿದ್ದ ಮೇಲೆ ಏಳಲೇ ಇಲ್ಲ. ಇತ್ತ ಮಗನಿಂದ ಕುಲಕ್ಕೆ ಅಪಕೀರ್ತಿ ಬಂದ ಮೇಲೆ ಅವನಿದ್ದರೂ ಒಂದೇ, ಸತ್ತರೂ ಒಂದೇ ಎಂದು ತಿಳಿದು ಪುರಾಣಿಕರು ತಾನು ನಿರ್ಗತಿಕನಾಗಿ ಸಾಯಬಾರದೆಂದು ಸೂತಕವು ಕಳೆದ ದಿನವೆ ಲಗ್ನವಾಗಬೇಕೆಂದು ನಿರ್ಣಯಿಸಿ, ತನಗೆ ಐವತ್ತಾರು (೫೬) ವಯಸ್ಸಾದರು ಚಿಕ್ಕವನೆಂದೇ ಭಾವಿಸಿ ಅವರು ಯೋಗ್ಯ ಕನ್ಯೆಯನ್ನು ಯೋಚಿಸತೊಡಗಿದರು. ಕಿಟ್ಟಣ್ಣನ ನೆನಪು ಮಾಡಿಕೊಂಡರು, ಅವನಿಗೆ ಈ ಹಿಂದೆ ಕೊಟ್ಟ ವಚನವನ್ನು ಉಳಿಸುವ ಕಾಲವಿದೇ ಎಂದು ಓಡೋಡಿ ಅವನ ಮನೆಗೆ ಹೋದರು. ಆಗ ಭಾಗ್ಯಮ್ಮ, ಕಿಟ್ಟಣ್ಣ ಇಬ್ಬರೂ ನಾಗಮ್ಮನ ಬಳಿ ಕುಳಿತ್ತಿದ್ದರು. ಪುರಾಣಿಕರು ಬಂದು "ಏನು ಮಗುವಿಗೆ ಚೆನ್ನಾಗಿಲ್ಲವೇ?" ಎಂದರು. ಅದೇ ಮಾತಿನಲ್ಲಿ ತಾನು ಬಂದ ಉದ್ದೇಶ ತಿಳಿಸಿದರು. ಪುರಾಣಿಕರ ಮಾತು ಕೇಳಿ ಕಿಟ್ಟಣ್ಣನಿಗೆ ಭಯಂಕರ ಕೋಪ ಬಂತು. 'ನನ್ನ ಮಗಳ ಮದುವೆಯಾಯಿತು, ನೀನು ಹೋಗಿ ಈಗ ಅಗ್ನಿ ತಯಾರು ಮಾಡು ಎಂದನು.'

ಮೊದಲು ಹದಿನಾಲ್ಕು ವರ್ಷದ ಸ್ನೇಹಿತನ ಮಗಳನ್ನು ತನ್ನ ಮಗನಿಗೆ ತಂದು ಕೊಳ್ಳಬೇಕೆಂದು ತೀರ್ಮಾನಿಸಿದ ಪುರಾಣಿಕರು ಮಗ ಸೆರೆಮನೆಗೆ ತೆರಳಿದ್ದೇ ತಡ ಹೆಂಡತಿ ಹಾಸಿಗೆ ಹಿಡಿದದ್ದೇ ನೆಪ ಮಾಡಿಕೊಂಡು, ಮಗಳ ವಯಸ್ಸಿನ ಹದಿನಾಲ್ಕು (೧೪) ವರ್ಷದ

ನಾಗಮ್ಮನನ್ನು ಮದುವೆಯಾಗಲು ಬಯಸಿದ್ದು ನಿಜವಾಗಿ ಅವರ ಮರುಳುತನವೇ ಹೌದು. ಬಡವರ ಬಡತನ, ಹಸಿವು, ಅಸಹಾಯಕತೆಯನ್ನು ಅಸ್ತ್ರಮಾಡಿಕೊಂಡು ಅವರನ್ನು ಸೋಲಿಸಲು ಪ್ರಯತ್ನಿಸುವುದು ಒಳ್ಳೆಯ ಬೆಳವಣಿಗೆಯಲ್ಲ. ವರಹವಿಲ್ಲದೆ ವರನನ್ನು ಪಡೆಯಲು ಸಾಧ್ಯವಿಲ್ಲ ಎಂಬಂಥ ಸನ್ನಿವೇಶವನ್ನು ನಿರ್ಮಾಣ ಮಾಡಿದವರು ಬಡವರಲ್ಲ, ಸ್ಥಿತಿವಂತರೇ. ಹೆಣ್ಣಿನ ಮನೆಯ ವರದಕ್ಷಿಣೆಯಿಂದಲೇ ತಮ್ಮ ಮನೆ ಬೆಳಕಾಗಬೇಕು, ಉದ್ಧಾರವಾಗಬೇಕು ಎಂದು ಕನಸು ಕಾಣುತ್ತಿರುವ ಗಂಡನ್ನು ಹೆತ್ತ ತಂದೆ-ತಾಯಿಗಳು ಬದಲಾಗಬೇಕಿದೆ. ತಮ್ಮ ಮನೆ ಬೆಳಗಬೇಕಾದಂತಹ ಸುಸಂಸ್ಕೃತ ಸನ್ನಡತೆಯ ವಧುವನ್ನು ಆಯ್ಕೆ ಮಾಡಿಕೊಳ್ಳುವ ಬದಲು ಕೋಟಿ ಕೋಟಿ ಹಣ ತಂದರೆ ಮಾತ್ರ ಅವಳು ಸೊಸೆ ಎಂದು ಒಪ್ಪಿಕೊಳ್ಳುವುದು ಮೂರ್ಖತನ. ವರದಕ್ಷಿಣೆಯ ಹೆಸರಿನಲ್ಲಿ ನಿರಂತರವಾಗಿ ಶೋಷಣೆ ನಡೆಯುತ್ತಲೇ ಇದೆ. ಹೆಣ್ಣು ಹೆತ್ತ ತಂದೆ-ತಾಯಿಯರನ್ನು ಗಂಡು ಹೆತ್ತ ತಂದೆ-ತಾಯಿಯಂದಿರು ನಡೆಸಿಕೊಳ್ಳುತ್ತಿರುವ ರೀತಿಯನ್ನು ನೋಡಿದರೆ ಇಡೀ ನಾಗರಿಕ ಸಮಾಜವೇ ತಲೆತಗ್ಗಿಸಬೇಕಾಗಿದೆ. ತಾನೊಂದು ಹೆಣ್ಣಾಗಿದ್ದರೂ ತನ್ನ ಮನೆ ಬೆಳಗಲು ಬರುವ ವಧುವನ್ನು ಅತ್ತೆಯಾದವಳು ನೋಡಿಕೊಳ್ಳುವುದು, ಅಳೆಯುವುದು ದುಡ್ಡಿನಿಂದಲೇ ಎಂದಾಗ ಹೆಣ್ಣಿಗೆ ಹೆಣ್ಣೇ ಶತ್ರು ಎಂಬುದು ಮನದಟ್ಟಾಗುತ್ತದೆ. ಆರ್ಥಿಕತೆಯ ಕಾರಣದಿಂದ ಮದುವೆಯಾಗದೇ ಹೆಣ್ಣು ಕನ್ಯೆಯಾಗಿಯೇ ಉಳಿಯಬೇಕಾಗಿದೆ.

ಕಾರಂತರ 'ಅಡುಗೆ ಮನೆ'

ಬಡವರಿಗೆ ಬಡತನವೇ ಶಾಪ. ಅದರೊಟ್ಟಿಗೆ ಹಾಳು ಹೊಟ್ಟೆಯನ್ನು ತುಂಬಿಸಿಕೊಳ್ಳಬೇಕಾದ ತುರ್ತುಬೇರೆ. ಬಡವರ ಮನೆಯಲ್ಲಿ ಹುಟ್ಟಿದ ಹೆಣ್ಣು ಮಕ್ಕಳಿಗೆ ಒಳ್ಳೆಯಕಡೆ ಮದುವೆಯಾಗಿ ಹೋದರೆ ಅಂಥಾ ಸಮಸ್ಯೆ ಇರುವುದಿಲ್ಲ. ಮೆಟ್ಟಿದ ಮನೆ ಸ್ವಲ್ಪ ಮಟ್ಟಿಗಾದರೂ ಉತ್ತಮ ಸ್ಥಿತಿಯಲ್ಲಿದ್ದರೆ ಏನೂ ಚಿಂತೆ ಇಲ್ಲ. ಹುಟ್ಟಿದ ಮನೆ ಮತ್ತು ಮೆಟ್ಟಿದ ಮನೆ ಎರಡರಲ್ಲೂ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದ್ದರೆ ಎರಡರಷ್ಟು ಸಂಕಟ ಹೆಣ್ಣು ಮಕ್ಕಳಿಗೆ. ಹುಟ್ಟಿದ ಮನೆಯೂ ನರಕವಾಗಿ, ಮೆಟ್ಟಿದ ಮನೆಯೂ ನರಕವಾದರೆ ಆ ಹೆಣ್ಣಿನ ಜೀವನವೇ ಅಧೋಗತಿ. ಜೀವನ ಪರ್ಯಂತ ನೋವನ್ನೇ ಉಂಡು ನೋವನ್ನೇ ಜೀರ್ಣಿಸಿಕೊಳ್ಳಬೇಕಾಗುತ್ತದೆ. ಕೊನೆಗೆ ತನ್ನ ಗಂಡ ಅಕಾಲ ಮರಣಕ್ಕೆ ತುತ್ತಾದರೆ ಗತಿಯಾರು? ಎಂಬ ಪ್ರಶ್ನೆ ಎದುರಾಗುತ್ತದೆ. ಕೊನೆಗೆ ಹುಟ್ಟಿದ ಮನೆಗಾದರೂ ಬಂದು ಆಸರೆ ಪಡೆಯೋಣವೆಂದರೆ, ಅಲ್ಲಿಯ ಪರಿಸ್ಥಿತಿಯು ಹದಗೆಟ್ಟಿರುತ್ತದೆ. ಆಗ ಆಕೆ ಕೈಗೊಂಡ ತೀರ್ಮಾನ, ಅದರಿಂದಾದ ಪರಿಣಾಮವನ್ನು ಕಾರಂತರ 'ಅಡುಗೆ ಮನೆ' ಕಥೆಯ ಮೂಲಕ ಅರ್ಥಮಾಡಿಕೊಳ್ಳಬಹುದು.

ಪರಮಯ್ಯನಿಗೆ ಒಬ್ಬಳೇ ಮಗಳು. ವಯಸ್ಸು ಹದಿನಾರು ತುಂಬಿದ ಕೂಡಲೇ ನರಸಪ್ಪ ಐತಾಳರು ಸೂಚಿಸಿದ ವರನಿಗೆ ಕನಕಮ್ಮನನ್ನು ಕೊಟ್ಟು ಮದುವೆ ಮಾಡಲಾಯಿತು. ಕನಕಮ್ಮನನ್ನು ಕೈಹಿಡಿದ ರಾಮಚಂದ್ರ ಯೋಗ್ಯನಾಗಿಯೇ ಇದ್ದ. ನಾಲ್ಕು ವೇದಗಳಲ್ಲಿ ಅಲ್ಪ-ಸ್ವಲ್ಪ ಕಲಿತುಕೊಂಡು ವಯಸ್ಸು ಕೇವಲ ಇಪ್ಪತ್ತೆ ಆಗಿದ್ದರೂ ಅಲ್ಲಿ ಇಲ್ಲಿ ಬ್ರಾಹ್ಮಣಿಕೆ ಮಾಡಿಕೊಂಡು ನಾಲ್ಕು ಕಾಸು ಸಂಪಾದಿಸುತ್ತಿದ್ದನು. 'ಇನ್ನು ಮುಂದೆ ಅವನಿಗೆ ರಾಜಗೌರವ ಸಿಗುತ್ತೆ ನೋಡಿ' ಎಂದು ಜಾತಕ ನೋಡಿದವರು ಹೇಳುತ್ತಿದ್ದರು. ಒಂದು ರೀತಿಯಲ್ಲಿ ಅದೂ ಸಿಕ್ಕಿತು. ಅವನು ಅಧ್ಯಯನ ಮಾಡುವ ವಿಧಾನವನ್ನು ಕಂಡು, ಅಲ್ಲಿಗೆ ಕಾರಣಾಂತರದಿಂದ ಬಂದ ತಹಶೀಲ್ದಾರರು 'ನಾನು

ಹುಟ್ಟಿದ ಮೇಲೆ ಈ ರೀತಿ ಅಧ್ಯಯನ ಮಾಡುವವರನ್ನು ಕಾಣಲಿಲ್ಲ' ಎಂದಿದ್ದರು. ಇದರಿಂದ ರಾಮಚಂದ್ರನ ಯೋಗ್ಯತೆ ಅದಕ್ಕೂ ಮೀರಿದ ಪುರಸ್ಕಾರವನ್ನು ಹೊಂದಿತು. ಅಳಿಯನ ಯಶಸ್ಸು ಮಾವನಾದ ಪರಮಯ್ಯನಿಗೆ ಸಂತೋಷವನ್ನುಂಟು ಮಾಡಿತು. 'ದೇವರೆ, ನೀನು ಕೊಡುವ ಸಂಪತ್ತನೆಲ್ಲಾ ಕೊಟ್ಟೆ, ಆರೋಗ್ಯವೊಂದನ್ನು ಧಾರಾಳವಾಗಿ ಕೊಡಿಸಪ್ಪ' ಎಂದು ದೇವರಲ್ಲಿ ಪ್ರಾರ್ಥಿಸಿಕೊಂಡನು.

ಪರಮಯ್ಯ ದೇವರಲ್ಲಿ ಪ್ರಾರ್ಥಿಸಿಕೊಳ್ಳಲು ಕಾರಣವಿತ್ತು. ಮೊದಲಿನಿಂದಲೂ ರಾಮಚಂದ್ರನು ಶರೀರದಲ್ಲಿ ನಿತ್ರಾಣಿ, ಉಬ್ಬಸ ಎನ್ನುವುದು ಅಮವಾಸ್ಯೆಯಲ್ಲದಿದ್ದರೂ ಸಂಕ್ರಾಂತಿಗಾದರೂ ಅವನನ್ನು ಕಂಡುಹೋಗುತ್ತಿದ್ದವು. ಮದುವೆಯಾದ ಒಂದೆರಡು ವರುಷಗಳಲ್ಲಿ ಅವು ಸ್ವಲ್ಪ ಬಲವಾದವು. ಅವನು ಹಾಸಿಗೆ ಹಿಡಿದುಬಿಟ್ಟನು. ಪರಮಯ್ಯ ನರಸಪ್ಪ ಐತಾಳರ ಬಳಿ ಹೋಗಿ, 'ಸ್ವಾಮಿ ಅಳಿಯನ ಗ್ರಹಚಾರ ಹೇಗಿದೆ?' ಎಂದು ಜಾತಕ ತೋರಿಸಿದರು. 'ಹುಡುಗ ಕಲ್ಲು ತುಂಡಿನ ಹಾಗಿದ್ದಾನೆ' ಎಂದರು. 'ತುಂಬಾ ಆಯುಷ್ಯವಿದೆ. ಆಯುಷ್ಯ ರೇಖೆಯನ್ನುವುದು ನೇಗಿಲು ಕಂತಿದ ಹಾಗಿದೆ' ಎಂದರು. ಕಾಯಿಲೆ ಬಂದ ಸ್ಥಿತಿ ಕೇಳಿ ಸಮ್ಮನಿರಬಾರದು ಎಂದು, 'ಏನಿಲ್ಲ ಅಷ್ಟು ಸಂಶಯ ನಿಮಗಿದ್ದರೆ ನಾಲ್ಕು ಮಂದಿ ಬ್ರಾಹ್ಮಣರನ್ನು ಕರೆಯಿಸಿ, ಒಂದು ಶಾಂತಿ ಮಾಡಿಸಿಬಿಡಿ' ಎಂದರು.

ಪರಮಯ್ಯ ಭಕ್ತಿಯಿಂದ ಮನೆಗೆ ಬಂದು, ತಾಯಿಯಿಲ್ಲದ ಮಗಳಾದ ಕನಕಮ್ಮನ ಮಾಂಗಲ್ಯಭಾಗ್ಯ ಗಟ್ಟಿಯಾಗಿರಬೇಕೆಂದು ಮರುದಿನವೇ ಶಾಂತಿಯ ವ್ಯವಸ್ಥೆ ಮಾಡಿಸಿದನು. ಶಾಂತಿಯಾಯಿತು. ಬ್ರಾಹ್ಮಣರಿಗೆ ದಾನ ನೀಡಲಾಯಿತು. ದಕ್ಷಿಣೆಯಾಯಿತು, ಭೋಜನವಾಯಿತು. ಪರಮಯ್ಯನು ಬಡತನದ ಬೇಗೆಯಿಂದ ನರಳುತ್ತಿದ್ದರೂ, ಮಗಳ ಬದುಕಿಗಾಗಿ ಏನೆಲ್ಲಾ ಮಾಡಬೇಕೋ ಅದನ್ನು ಮಾಡಿ ಮುಗಿಸಿದ. ಆ ಹೊತ್ತಿಗೆ ಅಳಿಯ ರಾಮಚಂದ್ರ ಸ್ವಲ್ಪ ಆಯಾಸಗೊಂಡು ಕೆಮ್ಮಿದ. ದೂರದಲ್ಲಿ ಅದರ ಶಬ್ದವನ್ನು ಕೇಳಿದ ಐತಾಳರು "ಶೈತ್ಯ ನೆಗಡಿ ಇರಬೇಕು ಸ್ವಾಮಿ" ಎಂದು ಮಿತ್ರ ವೃಂದಕ್ಕೆ ಹೇಳಿ ಮುಗಿಸುವಷ್ಟರಲ್ಲಿ 'ರಾಮಚಂದ್ರನ ಇಹಲೋಕ ಯಾತ್ರೆ ಮುಗಿಯಿತು' ಶಾಂತಿ ಮಾಡಲು ಬಂದವರು ಪರಲೋಕದಲ್ಲಾದರೂ ದೀರ್ಘಾಯುಷ್ಯ ದೊರೆಯಲಿ ಎಂದು ಉತ್ತರಕ್ರಿಯೆಗೆ ನಿಂತರು. ಐತಾಳರು ಬೊಬ್ಬಿಡುವ ಪರಮಯ್ಯನಿಗೆ ಸಮಾಧಾನ ಹೇಳಿದರು.

ಪರಮಯ್ಯನಿಗೆ ತನ್ನ ಚಿಂತೆಗಿಂತ ತನ್ನ ಮಗಳ ಚಿಂತೆ ಬಲವಾಯಿತು. "ಸತ್ತವರಿಗಾಗಿ ಅತ್ತು ಫಲವಿಲ್ಲ" ಎಂದು ಬ್ರಾಹ್ಮಣ ವರ್ಗದವರು ಸಮಾಧಾನ ಪಡಿಸುವಾಗ "ಗೊತ್ತು ಸ್ವಾಮಿ, ಬದುಕಿದವರು ಅವರ ಬಗ್ಗೆ ಪ್ರಾಯಶ್ಚಿತ್ತ ಅನುಭವಿಸಬೇಕಲ್ಲ ಸ್ವಾಮಿ" ಎಂದು ಉತ್ತರವಿತ್ತನು. ಹೋಮದ ಹೊಗೆ ನಂದುವುದರಲ್ಲಿ, ಚಿತೆಯ ಹೊಗೆ ಎದ್ದಿತು. ತಂದೆಯ ದುಃಖ ಕಂಡು ಕನಕಮ್ಮ ತನ್ನ ದುಃಖ ಅಪಾರವಾದದ್ದಾದರೂ ನುಂಗಿಕೊಂಡಳು.

ಪತಿವಿಮೋಚನೆಯಾಗಿ ಎಂಟು ವರ್ಷವಾಯಿತು. ಕನಕಮ್ಮನೋ ಇನ್ನು ಹದಿಹರೆಯದವಳು. ತನ್ನೆಲ್ಲ ಬಯಕೆಗಳನ್ನು ನಿಯಂತ್ರಿಸಿಕೊಂಡು ತಂದೆಯ ಸುಃಖ-ದುಃಖದಲ್ಲಿ ಭಾಗಿಯಾಗಿ ಕುಳಿತಳು. ದಿನಕಳೆದಂತೆ ಪರಮಯ್ಯನ ಆರೋಗ್ಯವು ಕೆಟ್ಟು ಒಂದು ರೀತಿಯ ವಾತವು ಪ್ರಾರಂಭಿಸಿ ಅವನನ್ನು ಕಾಡತೊಡಗಿತು. ಕನಕಮ್ಮನ ಕೆಲಸ ಎರಡೆರಡಾಯಿತು.

ತಾಯಿಯಿಲ್ಲದ ಕಾರಣ ತಂದೆಯ ಆರೈಕೆಯನ್ನು ಅವಳೇ ಮಾಡಬೇಕಾಯಿತು. ಮುಂದೆ ಹೊಟ್ಟೆಯೋಚನೆಯ ವಿಚಾರವನ್ನು ಅವಳು ಎಣಿಸಬೇಕಾಯಿತು. ಅಲ್ಪ-ಸ್ವಲ್ಪ ಅಕ್ಕಿ ಮನೆಯಲ್ಲಿ ಉಳಿದಷ್ಟು ದಿನ ಯೋಚನೆಯಿಲ್ಲದೆ ಸಾಗಿತು. ಇನ್ನು ಹಾಗೆಯೇ ಎಂಟು ದಿನವೋ-ತಿಂಗಳೊ ಸಾಗಬಹುದು. ಅದಕ್ಕೂ ಮೇಲೆ ಭಿಕ್ಷಾ ಪಾತ್ರೆಯೇ ಸರಿ. ಪರಮಯ್ಯನಿಗೆ ತನ್ನ ಬಡತನದ ಸ್ಥಿತಿ ನೆನೆದು ಹಾಸಿಗೆಯಲ್ಲಿ ಉರುಳಿಕೊಂಡೇ ಕಣ್ಣೀರಿಡತೊಡಗಿದನು. ಎಷ್ಟು ಯೋಚನೆ ಮಾಡಿದರೂ ಮುಂದಿನ ಬಗೆಯಿಲ್ಲ. ನೆಂಟರೂ ಇಲ್ಲ. ಆಶ್ರಯ ಕೊಡುವ ಸ್ನೇಹಿತರೂ ಇಲ್ಲ.

ಒಂದು ದಿನ ಆಕಸ್ಮಿಕವಾಗಿ ಮನೆಗೆ ಬಂದ ನರಸಪ್ಪ ಐತಾಳರು ಪರಮಯ್ಯನ ಮನೆಯ ಪರಿಸ್ಥಿತಿಯನ್ನು ಕೇಳಿ, ನೋಡಿ, ಯೋಚಿಸಿ "ಒಂದು ಕೆಲಸ ಸಾಧ್ಯವಿದೆ, ನಿಮ್ಮ ಮಗಳು ಎಲ್ಲಾದರೂ ಅಡುಗೆ ಕೆಲಸಕ್ಕೆ ನಿಂತರೆ ಹೇಗೂ ಬಡತನದಿಂದ ಜೀವನ ಸಾಗಿಸಬಹುದು" ಎಂದರು. ಕನಕಮ್ಮ ಕಣ್ಣೀರಿಡುತ್ತ "ಸ್ವಾಮಿ, ತಂದೆ ಋಣ ತೀರಿಸಲು, ಏನು ಬೇಕಾದರೂ ಮಾಡುತ್ತೇನೆ, ಒಂದು ಮನೆ ನಿಶ್ಚಯ ಮಾಡಿಕೊಡಿರಿ" ಎಂದಳು. ಐತಾಳರು ತಮ್ಮ ಮನೆಯಿಂದ ಹೋಗಿ ಒಂದು ವಾರ ಕಳೆಯಿತು. ಅವರು ಬರುವುದು ಒಂದು ದಿನ ಹೆಚ್ಚು ಕಡಿಮೆಯಾದರೆ ಏಕಾದಶಿ ಎನ್ನುವ ಪ್ರಸಂಗ ಬಂದಿತು. ಸರಿಯಾದ ಸಮಯಕ್ಕೆ ಐತಾಳರು ಮನೆಗೆ ಬಂದು, ಜನಾರ್ದನಯ್ಯನ ಮನೆಯವರನ್ನೆಲ್ಲಾ ಒಪ್ಪಿಸಿ, ಅವರ ಮನೆ ಅಡುಗೆ ಕೆಲಸಕ್ಕೆ ಕನಕಮ್ಮನನ್ನ ಗಂಟು ಹಾಕಿಬಿಟ್ಟೆ. ತಿಂಗಳಿಗೆ ನಾಲ್ಕು ರೂಪಾಯಿ ಕೊಡುತ್ತಾರೆ. ಹಳ್ಳಿಯಲ್ಲಿ ಇನ್ನೆಷ್ಟು ಸಿಗಬೇಕು? ಎಂದರು. ಪರಮಯ್ಯ ಐತಾಳರ ಮಾತು ಕೇಳಿ, ದೇವರೇ ಮಾನವನ್ನು ಉಳಿಸಿದನೆಂದು ಹೇಳಿದನು. ಅದೇ ದಿನ ಐತಾಳರು ಕನಕಮ್ಮನನ್ನು ಜನಾರ್ದನಯ್ಯನ ಮನೆಗೆ ಮುಟ್ಟಿಸಿ ಬಂದರು.

ಪ್ರತಿನಿತ್ಯ ಕನಕಮ್ಮ ಜನಾರ್ದನಯ್ಯನ ಮನೆ ಅಡುಗೆ ಮಾಡುವುದು, ಸಂಜೆ ಅಡುಗೆ ಮಾಡಿಟ್ಟು ಮನೆಗೆ ಬರುವುದು – ಹೀಗೆ ನಡೆಯುತ್ತಿತ್ತು. ಕನಕಮ್ಮನ ಮನೆ ಸ್ವಲ್ಪ ದೂರದಲ್ಲಿ ಇದ್ದುದರಿಂದ ಮನೆಗೆ ಬರುವಾಗ ಸ್ವಲ್ಪ ವೇಳೆ ಆಗುತ್ತಿತ್ತು. ಆದರೆ ಆ ಸುಖ-ದುಃಖವನ್ನೆಲ್ಲಾ ಯೋಚಿಸಿದರೆ ಹೊಟ್ಟೆ ತುಂಬುವ ಬಗೆ ಹೇಗೆ? ಆದರೆ ಇನ್ನೂ ಒಂದು ಕಷ್ಟ ಅವಳ ದಾರಿಯಲ್ಲೇ ಇತ್ತು. ಪರರ ಅಡುಗೆ ಮನೆ ಚಾಕರಿ ಮಾಡಿ ಸಿಗುವ ನಾಲ್ಕು ರೂಪಾಯಿ, ಪರಮಯ್ಯನ ಊಟಕ್ಕೂ ಔಷಧಕ್ಕೂ ಸಾಲದಾಯಿತು.

ಒಂದೆರಡು ತಿಂಗಳು ಕಳೆದು ಹೋದವು ಬಳಿಕ ಜನಾರ್ದನಯ್ಯ ಕನಕಮ್ಮನ ಕೆಲಸಕ್ಕೆ ಮೆಚ್ಚಿದಂತೆ ಕಾಣುತ್ತದೆ. ಒಂದು ದಿನ ತಾನೇ ಕರೆದು "ಮಗೂ, ನಿತ್ಯ ಮನೆಗೆ ಹೋಗುವುದೆಂದರೆ ನಿನಗೆ ತೊಂದರೆ, ಇತ್ತ ರಾತ್ರಿ ಕೆಲಸ ಬಹಳ ಮಟ್ಟಿಗೆ ಬಾಕಿ ಉಳಿಯುತ್ತೆ, ಅಡುಗೆ ಮನೆಯನ್ನು ನೀನು ಹೋದ ಬಳಿಕ ಇನ್ನೊಬ್ಬರ ಸ್ವಾಧೀನ ಕೊಡುವುದೆಂದರೆ ಚೆನ್ನಾಗಿ ಕಾಣಿಸುವುದಿಲ್ಲ. ನೀನೇ ಇರಬಾರದೇಕೆ? ಬೇಕಾದರೆ ಒಂದೆರಡು ರೂಪಾಯಿ ಹೆಚ್ಚಿಗೆ ಕೊಡುವಾ" ಎಂದು ಆಸೆ ತೋರಿಸಿದರು. ಕನಕಮ್ಮ ತಂದೆಯೊಡನೆ ಯೋಚನೆ ಮಾಡಿಕೊಂಡು ಹೊಸತೊಂದು ಏರ್ಪಾಡು ಮಾಡಿ ಬಂದಳು. ಬೆಳಿಗ್ಗೆ ಧನಿಯರ ಮನೆ ಕೆಲಸ ಮಾಡಿ, ಮನೆಗೆ ಓಡಿ ತಂದೆಗೆ ಎರಡು ಹೊತ್ತಿಗೆ ಸಾಕಾಗುವಷ್ಟು ಅಡುಗೆ ಮಾಡಿ ಇರಿಸಿ, ತಿರುಗಿ ಮಧ್ಯಾಹ್ನದ ಅಡುಗೆಗೆ ತಡವಾಗದಂತೆ ಬರುವುದು. ಸಂಜೆ ಅಡುಗೆಗೆ ಧನಿಯರ ಮನೆಯಲ್ಲಿ ಇದ್ದು ರಾತ್ರಿಯನ್ನು ಅಲ್ಲೇ

ಕಳೆಯುವುದೆಂದು. ಜನಾರ್ದನಯ್ಯ ಅವಳ ಮನೆಯ ತಾಪತ್ರಯವನ್ನು ನೆನೆಸಿಕೊಂಡು ಸಮ್ಮತಿ ನೀಡಿದರು. ತಿಂಗಳಿಗೆ ಆರು ರೂಪಾಯಿಗಳಂತೆ ವೇತನವನ್ನು ಕೊಡಲು ಒಪ್ಪಿಕೊಂಡರು.

ಇದೇ ಕ್ರಮದಲ್ಲಿ ಒಂದು ವರ್ಷ ಕಳೆಯಿತು. ಪರಮಯ್ಯನಿಗೆ ಮಗಳ ದುಡಿಮೆಯಿಂದ ಹೊಟ್ಟೆಯ ಮಟ್ಟಿಗೆ ಕೊರತೆ ಇಲ್ಲದಂತೆ ಆಯಿತು. ಆದರೆ ವಾತವು ಅವನನ್ನು ಬಿಡದಂತಾಯಿತು. ಕನಕಮ್ಮನ ದೆಸೆಯಿಂದ ಜನಾರ್ದಯ್ಯನ ಮನೆಯ ಹೆಂಗಸರಿಗೆ ಅಡುಗೆ ಮನೆ ಕೆಲಸದಿಂದ ಮುಕ್ತಿ ಸಿಕ್ಕಿತು. ಕನಕಮ್ಮನಂತೂ ಬಹು ಎಚ್ಚರದಿಂದ ವಾಸಮಾಡತೊಡಗಿದ್ದಳು. ಜನಾರ್ದನಯ್ಯ ತನ್ನ ತಂದೆಯೆಂದು ತಿಳಿಯತೊಡಗಿದಳು. ಅವರು ಊಟಕ್ಕೆ ಬಂದರೆ ಅಷ್ಟೇ ಅಕ್ಕರೆಯಿಂದ ಬಡಿಸುತ್ತಿದ್ದಳು. ಒಂದು ದಿನ ರಾಯರೊಬ್ಬರೆ ಊಟಕ್ಕೆ ಕುಳಿತ್ತಿದ್ದರು. ಕನಕಮ್ಮ ಊಟ ಬಡಿಸುತ್ತಿದ್ದಳು. ರಾಯರು "ತಂದೆಗೆ ಹೇಗಿದೆ?" ಎಂದು ಕೇಳಿದರು. ಕನಕಮ್ಮ ತಲೆ ತಗ್ಗಿಸಿಕೊಂಡು "ಹಾಗೆಯೇ ಇದೆ, ಗುಣವಾಗುವ ಭರವಸೆಯಿಲ್ಲ. ಅವರ ಆಯುಷ್ಯವೇ ನರಳುವುದಕ್ಕಾಯಿತು" ಎಂದು ಮರುಗಿದಳು. ಊಟವಾದ ಮೇಲೆ ರಾಯರು ಹೊರಗೆ ಹೋದರು. ರಾತ್ರಿ ಹತ್ತು ಘಂಟೆಯೊಳಗೆ ಕನಕಮ್ಮನು ಅಡುಗೆಯ ಮನೆಯನ್ನೆಲ್ಲಾ ಚೊಕ್ಕಟಮಾಡಿ, ಒಲೆಯ ಮುಂದೆ ಒಂದು ಚಾಪೆ ಹಾಸಿಕೊಂಡು ಮಲಗಿದಳು. ಸುಮಾರು ನಡುರಾತ್ರಿಯ ಸಮಯಕ್ಕೆ ಹೊರಗಿನಿಂದ 'ಕನಕಮ್ಮ ಕದ ತೆರೆ, ಸ್ವಲ್ಪ ಬಿಸಿ ನೀರು ಬೇಕು' ಎಂದು ಕೇಳಿಸಿತು. ಕನಕಮ್ಮ ನಿದ್ದೆ ಕಣ್ಣನ್ನು ಸವರಿಕೊಂಡು ಕದವನ್ನು ತೆರೆದಳು. ಬಿಸಿನೀರಿಲ್ಲವೆಂದು ಒಲೆಯನ್ನು ಹೊತ್ತಿಸಿದಳು. ರಾಯರು ಮೆಲ್ಲನೆ ಕದವಿಕ್ಕಿ ಮುಂದೆ ಒಲೆಯ ಬಳಿಗೆ ಬಂದು – 'ನೀರಿಲ್ಲದಿದ್ದರೆ ಹೋಗಲಿ' ಎಂದರು. ಕನಕಮ್ಮ ಎದ್ದು ನಿಂತಳು. ರಾಯರು ನಗುತ್ತ ಕೈಹಿಡಿದು ಬಿಟ್ಟರು. ಕನಕಮ್ಮ ಗಾಬರಿಗೊಂಡು ಕೂಗುವುದರಲ್ಲಿದ್ದಳು. ಆದರೆ ರಾಯರ ಹುಲಿಯಂಥ ಕಣ್ಣುಗಳನ್ನು ಕಂಡು ಸುಮ್ಮನಾದಳು. 'ಕನಕ ನಿನ್ನನ್ನು ನಾನು ಚಿನ್ನದಂತೆ ಪ್ರೀತಿಸುತ್ತೇನೆ. ನಿನ್ನ ತಂದೆಯನ್ನು ನಾನೇ ಸಾಕುತ್ತೇನೆ' ಎಂದರು. ಕನಕಮ್ಮ ಮರುಮಾತೆತ್ತದೆ ತನ್ನ ಕೈಯನ್ನು ತಪ್ಪಿಸಿಕೊಳ್ಳಲು ಯತ್ನಿಸಿದಳು. ಅದಕ್ಕೆ ರಾಯರು 'ಕೈ ಬೇಕಾದರೆ ಬಿಡುವೆ. ಆದರೆ ನಾಳೆಯಿಂದ ನಿನಗೆ ಈ ಮನೆಯಲ್ಲಿ ಕೆಲಸವಿಲ್ಲ, ನಿನಗೆ ನೀನೇ ಗತಿ' ಎಂದರು. ರಾಯರ ಮಾತು ಕೇಳಿ ಕನಕಮ್ಮನಿಗೆ ತಲೆಯ ಮೇಲೆ ಸಿಡಿಲು ಬಡಿದಂತಾಯಿತು. 'ನಾಳೆಯಿಂದ ಮನೆಯಲ್ಲಿ ನಿನಗೆ ಕೆಲಸವಿಲ್ಲ' ಎಂಬ ಮಾತು ಕನಕಮ್ಮನಿಗೆ ಕಣ್ಣೀರು ತರಿಸಿತು. ಹಾಗಾದರೆ ತನಗೂ ತನ್ನ ತಂದೆಗೂ ಉಪವಾಸವೇ ಗತಿ. ಕನಕಮ್ಮ ಯೋಚಿಸುತ್ತಾ ನಿಂತಳು. ರಾಯರು ಕೈ ಬಿಟ್ಟು ದೂರ ನಿಂತು 'ಏನು?' ಎಂದರು. ಕನಕಮ್ಮ ಉತ್ತರ ನೀಡಲಿಲ್ಲ. ಏನು ಹೇಳುವುದಕ್ಕೂ ತೋಚದೆ ತನ್ನ ಮತ್ತು ತಂದೆಯ ಹಸಿವಿನ ನಿವಾರಣೆಗೆ ರಾಯರ ಮಾತನ್ನು ತಿರಸ್ಕರಿಸುವಂತಿರಲಿಲ್ಲ. ರಾಯರೇ ವಿಜಯಿಯಾದರು.

ಕನಕಮ್ಮ ತನ್ನ ಜೀವನದ ಕಳಂಕವನ್ನು ಬಚ್ಚಿಟ್ಟುಕೊಂಡು ಅಂತರಂಗದಲ್ಲಿ ನರಕವನ್ನು ಅನುಭವಿಸತೊಡಗಿದಳು. ತಂದೆ ಮತ್ತು ರಾಯರ ಎದುರು ತೋರಿಕೆಗಾಗಿ ಸುಖಿಯೆಂದೇ ತೋರಿಸಿಕೊಂಡಳು. ಆದರೆ ಅವಳ ಸುಖ ಅವಳೊಬ್ಬಳಿಗೇ ಗೊತ್ತಿತ್ತು. ಮನಸ್ಸಿನಲ್ಲಿ ಪಿತೃಋಣವನ್ನಾದರೂ ತೀರಿಸುತ್ತಿದ್ದೇನಲ್ಲಾ ಎಂಬೊಂದು ಸಮಾಧಾನದಿಂದ ದಿನಗಳೆದಳು. ಆರೆಂಟು ತಿಂಗಳಾಯಿತು. ಒಂದು ದಿನ ಅದೇ ಅಡುಗೆ ಮನೆಯಲ್ಲಿ ರಾಯರು ನಡುರಾತ್ರಿಯ ಸಮಯಕ್ಕೆ ಬಂದು ಕನಕನಿಗೆ ಅದೇ ಮಾತು ಆಡಿದರು. 'ನಿನಗೆ ನೀನೇ ಗತಿ' ನಾಳೆಯಿಂದ

ನಿನಗೆ ಇಲ್ಲಿ ಕೆಲಸವಿಲ್ಲವೆಂದು' ಕನಕನ ಎದೆಯೊಡೆಯಿತು. 'ಈಗ ನನ್ನನ್ನು ಕೈ ಬಿಡುವಿರಾ?' ಎಂದಾಗ 'ನಾನು ಬಿಡಬೇಕೆಂದಿಲ್ಲ, ಆದರೆ ನಿನ್ನನ್ನು ಸ್ವಲ್ಪ ಸಮಯದವರೆಗೆ ಮನೆಯಲ್ಲಿರಿಸಿಕೊಳ್ಳಲು ಸಾಧ್ಯವಿಲ್ಲ. ನೀನೀಗ ಗರ್ಭಿಣಿ. ಆ ಕಾರಣ, ಬೇರೆ ಊರಿನಲ್ಲಿ ನಿಂತು ಗರ್ಭವನ್ನು ಕಳೆದುಕೊಂಡು ಬಂದರೆ ಮುಂದೆ ತೊಂದರೆಯಿಲ್ಲ' ಎಂದ ರಾಯರ ಮಾತು ಕೇಳಿ ಕನಕಮ್ಮ ಸಿಟ್ಟಿನಿಂದ ಮಾತನಾಡಲಿಲ್ಲ. ರಾಯರು ಕಾದು ಕಾದು ಬೇಸರಗೊಂಡು ಹೊರಟು ಹೋದರು, ಮರುದಿನ ಕನಕಮ್ಮ ಸಂಜೆ ಹೊತ್ತಿಗೆ ಮನೆಗೆ ಹೋದಳು. ತಂದೆ ರಾಯರ ಮನೆಗೆ ಹೋಗುವುದಿಲ್ಲವೇ ಎಂದು ಕೇಳಿದಕ್ಕೆ ಕನಕಮ್ಮ 'ಇಲ್ಲಪ್ಪಾ, ಹೇಳಿ ಬಂದಿರುವೆ. ಮೈ ನೆಟ್ಟಗಿಲ್ಲ. ಅಲ್ಲದೆ ಒಂದು ರಾತ್ರಿಯಾದರೂ ನಿನ್ನ ಜೊತೆಗಿರುವ ಆಸೆಯಾಗಿದೆ' ಎಂದಾಗ ಪರಮಯ್ಯ ಸುಮ್ಮನಾದನು.

ಊಟಮಾಡಿ ತಂದೆ-ಮಗಳಿಬ್ಬರು ಮಲಗಿಕೊಂಡರು. ಕನಕಮ್ಮನಿಗೆ ನಿದ್ದೆ ಬರುವುದಾದರೂ ಹೇಗೆ? ಅಡುಗೆಮನೆಯ ಅಪಮಾನ (ಕಳಂಕ) ಅವಳ ಎದೆಯನ್ನು ಕೊರೆಯುತ್ತಿತ್ತು. ಹೇಗಿದ್ದರೂ ತಂದೆಗೆ ತಿಳಿದೇ ತಿಳಿಯುತ್ತದೆ. ವಿಷಯ ತಿಳಿದು ತಂದೆಯು ಹೇಯ ಜೀವನದ ಗಳಿಕೆಯಿಂದ ತಾನು ಬದುಕಿದ್ದುದಕ್ಕಾಗಿ ವ್ಯಥೆಪಡುವನು ಎಂಬುದು ಖಂಡಿತಾ. ಆದುದರಿಂದ ತಾನು ಮಾಡಿದ ತಪ್ಪನ್ನು ತೊಳೆಯುವುದಾದರೂ ಹೇಗೆ? ಪರಿಹಾರವೇನು? ಎಂದು ಚಿಂತಿಸಿದಳು. ನಡುರಾತ್ರಿಯೇ ತಂದೆಯ ಮೈಯನ್ನು ಅಲುಗಾಡಿಸಿ ಎಚ್ಚರಿಸಿದಳು. 'ಏನು, ಮಗು, ಮೈ ನೆಟ್ಟಗಿಲ್ಲವೇ?' ಎಂದವನು ಕೇಳಿದಾಗ, ಮಗಳು ಕನಕಮ್ಮ 'ಅಲ್ಲಪ್ಪ, ನನಗೇಕೋ ಅಂಜಿಕೆಯಾಗುತ್ತಿದೆ. ನೀನು ಬಹಳ ದಿನ ಬದುಕುವುದಿಲ್ಲವೆಂದು, ಅಪ್ಪಾ, ಒಮ್ಮೆ ನನ್ನನ್ನು ಅಪ್ಪಿಕೋ' ಎಂದು ಅತ್ತಳು.

'ಮಗೂ, ಸಾವು ಬಂದರೆ ನನ್ನಂಥ ಪುಣ್ಯವಂತರಿಲ್ಲ. ಆದರೆ ಯಮರಾಯನ ಅನುಗ್ರಹವಾಗಬೇಕಲ್ಲ. ಅವನ ಅಮಗ್ರಹವಾದರೆ ಈಗ ಬೇಕಾದರೆ ಈಗಲೇ ಸಾಯುವೆ. ನೀನಾಗ ಕಂಡವರ ಮನೆಯಲ್ಲಿ ದುಡಿಯ ಬೇಕಾಗಿರುವುದಿಲ್ಲ ಎಂದು ನುಡಿದ ತಂದೆಯ ಮಾತು ಕೇಳಿ ಕನಕಮ್ಮನ ಕಣ್ಣೀರ ಕಟ್ಟೆ ಒಡೆದು, ಗೊಳ್ಳೆಂದು ಅತ್ತಳು. ಪರಮಯ್ಯನಿಗೆ ಮಗಳ ಮನವು ತಿಳಿಯದೆ ಅವನೂ ಅತ್ತನು. ಅವಳನ್ನು ತಬ್ಬಿಕೊಂಡನು. ಅಪ್ಪಾ ನನ್ನ ಹೆದರಿಕೆಯಂತೆ ನೀನು ಸಾಯುವುದಾದರೆ ನಾನೆಂಥ ತಪ್ಪು ಮಾಡಿದರೂ ಕ್ಷಮಿಸುವೆಯಾ? ನನ್ನ ಪಿತೃಋಣ ಮುಗಿಯಿತೆಂದು ಆಶೀರ್ವದಿಸುವೆಯಾ?' ಎಂದು ಕೇಳಿದಳು. ಮಗಳ ಪ್ರಶ್ನೆಗೆ ತಂದೆಯ ಒಡಲು ಇನ್ನಷ್ಟು ಕರಗಿತು. 'ಮಗೂ ನೀನು ತಪ್ಪು ಮಾಡಿದರೆ ನಾನು ಮಾಡಿದಂತೆ. ಇನ್ನು ಪಿತೃಋಣವೆನ್ನುವಿ. ನನಗೆ ನೀನು ಋಣಿಯೇ? ನಿನಗೆ ನಾನೇ?' ಎಂದು ತಿರುಗಿ ತಬ್ಬಿಕೊಂಡನು.

ನಂತರ ಕನಕಮ್ಮ ತಂದೆಯನ್ನು ಕುರಿತು 'ಅಪ್ಪಾ, ನೀನು ಖಂಡಿತಾ ಸಾಯುವೆಯೆಂದು ನನಗೆ ಅಂಜಿಕೆಯಾಗುವುದು. ಒಮ್ಮೆ ನನ್ನ ತೊಡೆಯ ಮೇಲೆ ತಲೆಯಿರಿಸಿ ಮಲಗಿಕೋ. ಇನ್ನು ಮುಂದೆ ನನಗೆ ರಾತ್ರಿ ಮನೆಗೆ ಬರಲು ಆಗುತ್ತದೆಯೋ ಇಲ್ಲವೋ?' ಎಂದಳು. ಪ್ರೀತಿ-ವಾತ್ಸಲ್ಯದ, ದುಃಖದ ಭರದಲ್ಲಿ ಪರಮಯ್ಯ ತಾಯ ತೊಡೆಯ ಮೇಲೆ ಮಲಗುವ ಶಿಶುವಿನಂತೆ, ಮಗಳ ತೊಡೆಯ ಮೇಲೆ ವಿಶ್ರಾಂತಿ ಪಡೆದನು. ನಿದ್ರೆ ಬರಲಿಲ್ಲ. ಕನಕಮ್ಮ ಮಗ್ಗುಲಿನಿಂದ ಚೂರಿಯನ್ನು ತೆಗೆದು ಅವನ ಎದೆಯಲ್ಲಿ ನಾಟಿಸಿ, 'ಅಪ್ಪಾ, ನಾನು ಅಪರಾಧಿ. ತಪ್ಪು ತಿಳಿವಿನಿಂದ ನಿನ್ನ ಋಣ

ತೀರಿಸುವೆನೆಂದು ಹಾದರ ಮಾಡಿದೆ. ಈಗ ನಾನು ಗರ್ಭಿಣಿ. ಕ್ಷಮಿಸುವೆಯಾದರೆ ಕ್ಷಮಿಸು' ಎಂದಳು.

ಪರಮಯ್ಯನಿಗೆ ಮಾತನಾಡುವ ಚೈತನ್ಯವಿರಲಿಲ್ಲ. ಆದರೆ ಮಗಳ ಮಾತು ಕೇಳಿಸದಿರಲಿಲ್ಲ. ಅವನಾಗ ಯಾವ ಸುಖವನ್ನೋ, ಸಂಕಟವನ್ನೋ ಅನುಭವಿಸಿದನೋ ದೇವರಿಗೆ ಗೊತ್ತು. ಕದಲಲಿಲ್ಲ. ಅವಳೆರಡು ಕೈಗಳನ್ನು ಹಿಡಿದುಕೊಂಡು ಚಿರಶಾಂತಿ ಪಡೆದನು. ಕೂಡಲೇ ಕನಕಮ್ಮ ಕೂಡ ಅದೇ ಚೂರಿಯನ್ನು ಅವನೆದೆಯಿಂದ ಕಿತ್ತು ತನ್ನೆದೆಗೆ ಸ್ಥಾಪಿಸಿಕೊಂಡಳು.

ಬಡತನದ ಬೇಗೆ ಅಥವಾ ಒಡಲ ಹಸಿವು ಮನುಷ್ಯರನ್ನು ಎಂಥೆಂಥ ಪರಿಸ್ಥಿತಿಗೆ ತಳ್ಳುತ್ತದೆ ಎಂಬುದನ್ನು ಕಾರಂತರು ಮನಮುಟ್ಟುವಂತೆ ಈ ಕಥೆಯಲ್ಲಿ ನಿರೂಪಿಸಿದ್ದಾರೆ. ತಂದೆಯ ಋಣ ತೀರಿಸುವುದಕ್ಕಾಗಿ ಕನಕಮ್ಮ ಜನಾರ್ದನಯ್ಯನ ಮನೆಯಲ್ಲಿ ಅಡುಗೆ ಕೆಲಸಕ್ಕೆ ಸೇರಿಕೊಂಡಿದ್ದು, ತನ್ನ ತಂದೆಯ ವಯಸ್ಸಿನ ರಾಯರನ್ನು ಅಕ್ಕರೆಯಿಂದ ಕಂಡದ್ದು 'ಅನ್ನ ಕೊಟ್ಟ ಧಣಿ ದೇವರಿಗೆ ಸಮಾನ' – ಎಂಬ ಭಾವದಿಂದ. ಬಡತನದ ಬೇಗೆಯಲ್ಲಿ ಬೆಂದ, ನೊಂದ ಕನಕಮ್ಮ ಮನೆಯ ಪರಿಸ್ಥಿತಿ ಸರಿ ಇದ್ದಿದ್ದರೆ, ರಾಯರ ಮನೆಗೆ ಅಡುಗೆ ಕೆಲಸಕ್ಕೆ ಹೋಗಬೇಕಾದ ಅನಿವಾರ್ಯತೆ ಇರಲಿಲ್ಲ. ಚಿಕ್ಕ ವಯಸ್ಸಿಗೆ ತಾಯಿಯನ್ನು, ನಂತರ ಗಂಡನನ್ನು ಕಳೆದುಕೊಂಡು ಹದಿಹರೆಯದ ತನ್ನ ಕನಸುಗಳನ್ನು ಹಾಗೆಯೇ ಬಚ್ಚಿಟ್ಟುಕೊಂಡು ತನ್ನ ಹಾಗೂ ತಂದೆಯ ಒಡಲ ಹಸಿವನ್ನು ನಿವಾರಿಸುವುದಕ್ಕೆ ರಾಯರ ಮನೆ ಕೆಲಸಕ್ಕೆ ಸೇರಬೇಕಾದದ್ದು ಅವಳ ದುರದೃಷ್ಟವೇ ಸರಿ.

ರಾಯರ ಮನೆಯ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದ ಕನಕಮ್ಮ ರಾಯರು ಎರಡು ರೂಪಾಯಿ ಹೆಚ್ಚಿಗೆ ಕೊಡುತ್ತೇನೆಂದಾಗ, ತನ್ನ ತಂದೆಗೆ ಎರಡು ಹೊತ್ತಿನ ಊಟ ಮತ್ತು ಔಷಧೋಪಚಾರಕ್ಕೆ ಅನುಕೂಲವಾಗುತ್ತದೆಂಬ ಕಾರಣಕ್ಕೆ ಅಲ್ಲಿಯೇ ಉಳಿಯುವಂತಾಯಿತು. ತಂದೆಯಂತಿರಬೇಕಾದ ರಾಯರು ಕನಕಮ್ಮನ ಮೇಲೆ ಯಾವಾಗ ಮೋಹಗೊಂಡರೋ, ಅಂತೂ ಒಂದು ರಾತ್ರಿ ಅವರ ಬಣ್ಣ ಬಯಲಾಯಿತು. ಅವರು ಅಷ್ಟು ದಿನ ತನ್ನ ತಂದೆ ಹಾಗೂ ತನ್ನ ಬಗ್ಗೆ ಕರುಣೆ ತೋರಿಸುತ್ತಿದ್ದುದಕ್ಕೆ ಕಾರಣ ಬೇರೆಯೇ ಇತ್ತು. ಕನಕಮ್ಮನ ಮನೆಯ ಪರಿಸ್ಥಿತಿಯನ್ನೇ ಬಂಡವಾಳ ಮಾಡಿಕೊಂಡು ಅವಳನ್ನು ಪಡೆದುಕೊಂಡರು. ಏಳೆಂಟು ತಿಂಗಳಾದ ಮೇಲೆ ಕನಕಮ್ಮ ಬಸುರಿ ಎಂದು ತಿಳಿದ ಮೇಲೆ 'ನಿನಗೆ ನೀನೇ ಗತಿ' ನಾಳೆಯಿಂದ ಬರಬೇಡ ಎಂದಾಗ ಕನಕಮ್ಮನಿಗೆ ಆಕಾಶವೇ ಕಳಚಿಬಿದ್ದಂತಾಗಿತ್ತು. ಆತ್ಮಸಾಕ್ಷಿಗೆ ವಿರುದ್ಧವಾಗಿ ಅಡುಗೆ ಮನೆಯಲ್ಲಿ ರಾಯರ ಕೋರಿಕೆಯನ್ನು ತೀರಿಸಿದ್ದು ತನ್ನ ತಂದೆಯ ಋಣ ಪರಿಹಾರಕ್ಕಾಗಿ. ನಡುನೀರಿನಲ್ಲಿ ಕೈಬಿಟ್ಟಾಗಲೇ ಕನಕಮ್ಮ ರಾತ್ರಿಯೆಲ್ಲಾ ಯೋಚಿಸಿ, ತನ್ನ ಮನೆಗೆ ಬಂದು, ತನ್ನ ಹಾದರಕ್ಕೆ ತಾನೇ ಅಸಹ್ಯ ಪಟ್ಟು, ತಂದೆಗೆ ಎಂದಾದರೂ ವಿಚಾರಗೊತ್ತಾಗಿ ನೊಂದುಕೊಳ್ಳುವರೆಂದು ತಿಳಿದು, ತಂದೆಗೆ ನಿಜವಾದ ಸಂಗತಿಯನ್ನು ಹೇಳಿ, ಆತನನ್ನು ಚೂರಿಯಿಂದ ಇರಿದು, ತನ್ನನ್ನು ಅದೇ ಚೂರಿಯಿಂದ ಇರಿದುಕೊಂಡು ಪ್ರಾಣಬಿಡುತ್ತಾಳೆ. ಗಂಡನ ಆಸರೆಯಲ್ಲಿರಬೇಕಾದವಳಿಗೆ ಗಂಡನೂ ಇಲ್ಲ, ಇತ್ತ ತಂದೆಯ ಆರೋಗ್ಯವೂ ಇಲ್ಲ. ಇನ್ನು ತನ್ನ ಬದುಕೇ ಶೂನ್ಯ. ಈ ಪಾಪಿ ಪ್ರಪಂಚದಲ್ಲಿ ಬಡವರಿಗೆ ಉಳಿಗಾಲವಿಲ್ಲ. ಬಡವರು ಏನು ಮಾಡಿದರೂ ತಪ್ಪು. ಆದರೆ ಶ್ರೀಮಂತರು ಏನು ಮಾಡಿದರೂ ಸರಿ, ಎನ್ನುವಾಗ ಬಡವರ

ಮೇಲೆ ನಡೆಯುವ ನಿರಂತರ ಅತ್ಯಾಚಾರ, ಶೋಷಣೆ ಕೊನೆಯಾಗುವುದಾದರೂ ಎಂದು ಎಂಬ ಪ್ರಶ್ನೆ ಹುಟ್ಟುತ್ತದೆ. ಆರ್ಥಿಕ ಪರಿಸ್ಥಿತಿ ಬಡವರನ್ನು ಅಣು ಅಣುವಾಗಿ ಕೊಂದು ಬಿಡುತ್ತದೆ. ಅಲ್ಲದೇ ಇಷ್ಟವಾಗದ ಕೆಲಸವನ್ನು ಮಾಡಿಸಲು ಪ್ರೇರೇಪಿಸುತ್ತದೆ.

ನಿರಂಜನರ 'ಕೊನೆಯ ಗಿರಾಕಿ'

ಕಥೆಯ ನಾಯಕಿ 'ಕಾಣಿ' ಹದಿನಾರರ ಹರೆಯದ ಹುಡುಗಿ. ಚಿಕ್ಕ ಗುಡಿಸಲು, ಒಕ್ಕಲುತನದ ಒಂದಿಷ್ಟು ಹೊಲವನ್ನು ಹೊಂದಿದ್ದ ಆಕೆಯ ತಂದೆ-ತಾಯಿಗೆ ಹಿರಿಯ ಜಮೀನ್ದಾರ ಹೆಚ್ಚು ಗೇಣಿ ಕೇಳಿದ. ಕೊಡದೆ ಹೋದರೆ ಹೊಸ ಒಕ್ಕಲನ್ನು ಹುಡುಕುವುದಾಗಿ ಹೇಳಿದ. ಹಾಗೆಯೇ ಆಯಿತು. ಕಾಣಿಯ ತಾಯ್ತಂದೆಯರು ಹೊಲ ಕಳೆದುಕೊಂಡರು. ಮಡಿಕೆ-ಕುಡಿಕೆಗಳೊಂದಿಗೆ ಗುಳೆ ಹೊರಟಿತು ಆ ಸಂಸಾರ. ಹಿರಿಯ ಮಗ ಕೂಲಿಯಾಗುವೆನೆಂದು ಮದರಾಸಿಗೆ ಹೋದ. ಕಿರಿಯವನು ಜಗಳವಾಡಿ ದೇಶಾಂತರ ಹೋದ. ತಂದೆ ತಾಯಿ ಮೂಕಿಯಾದ ಮಗಳು ಕಾಣಿಯನ್ನು ಕಟ್ಟಿಕೊಂಡು ಊರೂರು ಸುತ್ತಿದರು. ಎಷ್ಟು ಸುತ್ತಾಡಿದರೂ ಕೆಲಸ ಸಿಗದಿದ್ದಾಗ ಬೇಡಿ ಬೇಡಿ ಅಭ್ಯಾಸವಾದ ಬಳಿಕ ಭಿಕ್ಷೆ ಎತ್ತುವ ಕೆಲಸವನ್ನೇ ಖಾಯಂ ಮಾಡಿಕೊಂಡರು.

ಅದೊಂದು ದಿನ ಯಾವುದೋ ಮನೆಯ ಮಾಡಿನ ಕೆಳಗೆ ಬೀದಿಯ ಬಳಿ ಆ ರಾತ್ರಿ ತನ್ನೊಡನೆ ಹೊರಳಾಡಿದ ಮೊಂಡು ಕೈಯ ಯುವಕ ಭಿಕ್ಷುಕ ಆಕೆಗೊಂದು ಆಧಾರವಾಗಿದ್ದ. ಆತನೊಂದಿಗೆ ಕರ್ನಾಟಕದ ರಾಜಧಾನಿಗೆ ಓಡಿ ಬಂದಿದ್ದಳು. ಓಡಿ ಬಂದು ಆ ದೊಡ್ಡ ನಗರದಲ್ಲಿ ಕಳೆದದ್ದು ಹತ್ತೇ ದಿನ. ಹನ್ನೊಂದನೆಯ ದಿನ ಮುಂಜಾನೆ ಆಕೆ ಒಬ್ಬಳೇ ಆಶ್ರಯಕ್ಕೆ ಹುಲ್ಲು ಕಡ್ಡಿಯೂ ಇಲ್ಲದ ಮಹಾ ಆಳದಲ್ಲಿ ಕೈಕಾಲು ಬಡಿಯುತ್ತಿದ್ದಳು. ಅಲ್ಲಿ ಇಲ್ಲಿ ಸುತ್ತಾಡಿದಳು. ಆತ ಸಿಗಲಿಲ್ಲ. ಕಣ್ಣೀರು ಸುರಿಸುತ್ತಾ ರೈಲು ನಿಲ್ದಾಣದ ಕೆರೆಗೆ ಬಂದು ಆ ಕೆರೆಯ ನೀರನ್ನು ಕುಡಿದಳು. ಆಕೆ ರೂಪವತಿಯಲ್ಲ. ತೆಳ್ಳನೆಯ ದೇಹ, ವಯಸ್ಸಿಗೆ ಮೀರಿ ಮೈ ತುಂಬಿತ್ತು. ಬರಿಯ ದೇಹ ಮಾಂಸಕ್ಕೆ ಹಂಬಲಿಸುವವರಿಗೆ ಆಕೆ ಮನದಣಿಯುವ ಊಟವಾಗಿದ್ದಳು.

ನಡೆದು ಹೋಗುವಾಗ ಒಬ್ಬ ಸಿಗರೇಟು ಸೇದುತ್ತಾ ಹಿಂಬಾಲಿಸಿದ. ತನ್ನ ಹಸಿವಿನ ಕತ್ತಲೆಗೆ ದಾರಿ ತೋರಿದಂತಾಯಿತು. ಒಂದು ಮರದ ಬಳಿ ನಿಂತಳು. ಅವನೂ ಸಮೀಪಕ್ಕೆ ಬಂದ. ತಿಂಡಿಯ ಪೊಟ್ಟಣವನ್ನು ಆತ ನೀಡಿದ್ದೇ ತಡ, ಮಾತು ಬಾರದ ಆಕೆಯ ಬಾಯಿಂದ 'ಆಆ' ಎಂಬ ಸ್ವರ ಹೊರಟಿತು. ಪೊಟ್ಟಣವನ್ನು ಬಿಚ್ಚಿ ಅದರಲ್ಲಿದ್ದ ತಿಂಡಿಯನ್ನು ಹಸಿವಿನ ತೀವ್ರತೆಯಿಂದ ಗಬಗಬನೆ ತಿಂದಳು. 'ಬೆಳಿಗ್ಗಿನಿಂದಲೇ ನಿನ್ನ ನೋಡ್ತಾ ಇದ್ದೆ' ಎಂದನಾತ. ಬಾ ಎಂದು ಕೈಸನ್ನೆ ಮಾಡಿದ. ಆಕೆ ತಲೆಬಾಗಿಸಿಕೊಂಡು ಆತನನ್ನೇ ಹಿಂಬಾಲಿಸಿದಳು. ಆ ರಾತ್ರಿ ಬೆಳಗಾಯಿತು. ಹೀಗೆ ನಾಲ್ಕು ದಿನಗಳು ಕಳೆದವು. ಆಕೆಯನ್ನು ಅಲಂಕರಿಸಿದ. 'ನಾನು ಹೊಸಬರನ್ನು ಕರಕೊಂಡು ಬರ್ತೀನಿ. ನೀನು ಸುಮ್ಮನಿರು, ಬಾಯಿ ಬಿಡಬೇಡ, ಮೂಕಿ ಅಂತ ತೋರಿಸಬೇಡ' ಎಂದ.

ದುಡ್ಡಿನ ಬೆಲೆ ಕಾಣಿಗೆ ತಿಳಿಯದು. ಎಷ್ಟು ಬರುತ್ತಿತ್ತೋ ಏನೋ, ಎರಡು ಸೀರೆ, ರವಕೆ, ಜಂಪರ್. ರಾತ್ರಿ ಹೊರ ಹೋಗುವಾಗ ಹಾಕಿಕೊಳ್ಳಲು ತೂತಾಗಿದ್ದ ಆದರೆ ಉಣ್ಣೆಯ ಸ್ತ್ರೀ

ಕೋಟು. ಮುಡಿಯಲು ಹೂವು. ಮೂಗಿಗೆ ಹೊಡೆಯುವ ಎಣ್ಣೆ ಕೂದಲಿಗೆ. ಹಸಿದ ಹೊಟ್ಟೆಗೆ ಹೊಟ್ಟೆ ತುಂಬಾ ಊಟ ತಿಂಡಿ ಹಾಗೆಯೇ ದಿನ ಕಳೆಯಿತು. ಸದ್ಯ ಆಕೆ ಬಸುರಿಯಾಗಲಿಲ್ಲ.

ಮಾರನೆಯ ದಿನ ಮುಂಜಾನೆ ಅಲ್ಲಿದ್ದ ತಿಂಡಿ-ಬಟ್ಟೆಯನ್ನೆಲ್ಲಾ ಕಟ್ಟಿಕೊಂಡು ನಗರದ ಇನ್ನೊಂದು ಸ್ಥಳವನ್ನು ತಲುಪಿದಳು. ಸುತ್ತಾಡಿ ಸುತ್ತಾಡಿ ಜಾಗದ ಪರಿಚಯವಾಯ್ತು. ಒಂದು ಸರ್ಕಲ್ ನಡುವಿನಲ್ಲಿ ಕಾರಂಜಿ, ಯಾರದೋ ಪ್ರತಿಮೆ. ದೂರದಲ್ಲಿ ಒಂದು ದೊಡ್ಡ ಕಟ್ಟಡ. ಮೂಲೆಯಲ್ಲಿ ಕಡಲೇಕಾಯಿ ಮಾರುತ್ತಾ ಕುಳಿತಿದ್ದವನಿಗೆ ಇದ್ದ ಪುಡಿಗಾಸು ಸುರಿದು ಕಾಸಿನ ಬೆಲೆ ಏನೆಂದು ಕಾಣಿಸಿ ಅರ್ಥ ಮಾಡಿಕೊಂಡಳು. ಹಸಿವು ಇಂಗಲಿಲ್ಲ.

ಕತ್ತಲಾದಾಗ ದೀಪದ ಮಂದ ಪ್ರಕಾಶದಲ್ಲಿ ಹಾದು ಹೋಗುತ್ತಿದ್ದವರು ಆಕೆಯನ್ನು ನೋಡಿ ಹೋಗುತ್ತಿದ್ದರು. ಅವರಲ್ಲೊಬ್ಬ ಕನ್ನಡಕವನ್ನು ಸರಿಪಡಿಸುತ್ತಾ ಆಕೆಯನ್ನು ಹಿಂಬಾಲಿಸಿದ. ಮರುದಿನ ಕಾಣಿಗೆ ಕಾಗದದ ಚೂರೊಂದನ್ನು ಕೊಟ್ಟರೆ ತಿಂಡಿಯೂ, ಊಟವೂ ಬರುತ್ತದೆ, ಅದರೊಂದಿಗೆ ಚಿಲ್ಲರೆ ಕಾಸು ವಾಪಾಸು ಬರುವುದೆಂದು ಖಾತ್ರಿಯಾಯಿತು.

ಅಂದಿನಿಂದ ಹಗಲು ಅಲೆದಾಟ. ಸಂಜೆ ಸರ್ಕಲ್‌ನಿಂದ ಒಂದೋ ಎರಡೋ ಗಿರಾಕಿಗಳ ಪರಿಚಯ. ಸಮೀಪದ ಹುಲ್ಲುಗಾವಲಿನ ಹಾಸಿಗೆಯಲ್ಲಿ ಆಕೆಯೇ ಒಂದು ಸಾರಿಯೋ, ಎರಡು ಸಾರಿಯೋ ಸಾಯುವುದು. ಸತ್ತು ತನ್ನ ಹಸಿದ ಹೊಟ್ಟೆ ತುಂಬಿಸಿಕೊಂಡು ಬದುಕುವುದು. ಕಾಲ ಹಾಗೆಯೇ ಕಳೆಯಿತು. ಪ್ರೇಮ-ಕಾಮಗಳ ವಿಚಾರವನ್ನು ಅರಿಯದ ಆಕೆ ಎಳೆ ಮೀಸೆಯವರಿರಲಿ, ಮುದುಕರಿರಲಿ, ಆಕೆಗೆರಡೂ ಸಮವೇ. ದೇಹ ಬಳಲಿದಾಗ ಆಕೆ ನರಳುವಳು, ನೋವಾದಾಗ ಅರ್ಥವಾಗದ ವಿಕೃತ ಧ್ವನಿ ಹೊರಡಿಸುವಳು.

ಮಳೆ ಹೆಚ್ಚಾಯಿತು. ಗಿರಾಕಿಗಳು ಬರಲಿಲ್ಲ. ಸಂಪಾದನೆ ಕಡಿಮೆಯಾಯಿತು. ಹಸಿವೆಯಿಂದ ದೇಹ ಸಣಕಲಾಯಿತು. ಕಾಣಿ ಬಡಕಲಾದಳು. ತಾನೇ ಜನರ ಬಳಿ ಹೋಗಿ ಸುತ್ತಲಾರಂಭಿಸಿದಳು. ಕೆಲವು ಪುಂಡರು ಬಂದರೂ, ಪುಡಿಗಾಸು ಕೊಡದೆ ಜಗಳವಾಡಿ ಹೋಗುತ್ತಿದ್ದರು. ತ್ರಾಣವಿಲ್ಲದೆ ಕಾಣಿ ಅವರಿಗೆ ತಲೆಬಾಗುತ್ತಿದ್ದಳು. ಜ್ವರ ಹೆಚ್ಚಿತು, ಚರ್ಮಕ್ಕೆ ರೋಗ ಬಡಿಯಿತು. ಕಾಣಿ ಜಾಗ ಬದಲಿಸಿ ನಡುವಯಸ್ಸಿನ ಭಿಕ್ಷುಕನ ಆಸರೆ ಪಡೆದಳು. ಅವಳಿಗೆ ಗಂಜಿ ನೀಡಿ, ರೋಗಪೀಡಿತನಾಗಿದ್ದ ಆತ ಆಸೆಯ ಕಣ್ಣಿಂದ ಆಕೆಯನ್ನು ನೋಡಿ ಬಯಕೆಯನ್ನು ತೀರಿಸಿಕೊಂಡ. ಸಂಜೆಯಾಗುತ್ತಲೇ ಕಾಣಿ ಹುಲ್ಲುಗಾವಲನ್ನು ದಾಟಿ ಕತ್ತಲೆ ಇದ್ದ ಒಂದು ಮೂಲೆಯಲ್ಲಿ ನಿಂತಳು. ಆಗ ಆಕೆಗೆ ಊರಿನ ಹೊಲ, ತಾಯಿ, ತಂದೆ, ಮೊಂಡು ಕೈಯ ಜೊತೆಗಾರ, ಅಣ್ಣ-ತಮ್ಮ ಎಲ್ಲರೂ ಕಣ್ಣ ಮುಂದೆ ಬಂದಂತಾಯಿತು. ಕೈಬೀಸಿ ಕರೆದಂತಾಯಿತು. ಕುಸಿದು ಕೂತಳು. ದೂರದಲ್ಲಿ ಕಡಲೆ ಮಾರುವಾತನ ದೀಪ ಬಾ ಎನ್ನುತ್ತಿತ್ತು. ಆದರೆ ಪುಡಿಗಾಸಿರಲಿಲ್ಲ. ಕಡಲೆ ಕಾಯನ್ನೇ ಬಾಚಿ ಒಯ್ದು ಬಿಡಬೇಕೆಂದು ತೋರಿತು ಆದರೆ ಸಾಮರ್ಥ್ಯವಿರಲಿಲ್ಲ. ಕೊನೆಗೊಬ್ಬ ದಾಂಡಿಗ ತೋಳು ಬೀಸಿ ಸನ್ನೆ ಮಾಡಿದ. ಆತನನ್ನೇ ಹಿಂಬಾಲಿಸಿದಳು. ಅಲ್ಲೇ ಪೊದರಿನಾಚೆಗೆ ಆಕೆಯನ್ನು ಕೆಡವಿದ. ನಂತರ ಎದ್ದು ನಿಂತು ಮೈ ಕೊಡವಿ ಹೊರಟ. ಕಾಸು ಕೊಡಲಿಲ್ಲ. ಹೆತ್ತ ಎಳೆಗೂಸನ್ನು ಕಸಿದೊಯ್ಯುವ ಪಾಪಿಯನ್ನು ಬೆನ್ನಟ್ಟುವಂತೆ ಅವಳು ಓಡಿ ಬೊಬ್ಬಿಟ್ಟಳು. ನಾಳೆಯ ಒಂದು ತುತ್ತು ಅನ್ನವನ್ನು ಕಸಿಯಬೇಡವೆಂದು ಮೊರೆಯಿಡುತ್ತಿದ್ದಳು. ಆತನಿಗೇನು ಗೊತ್ತು ಕಾಣಿಯ ಹಸಿವಿನ ಸಂಕಟ.

ಆಕೆಯ ಗಂಟಲಿಗೆ ಕೈಹಾಕಿ ಓಷುಕಿ ನೆಲಕ್ಕುರುಳಿಸಿದ. ಆಕೆಯ ಹಸಿದ ಹೊಟ್ಟೆಗೆ ಬೂಟುಗಾಲಿನಿಂದ ಒದ್ದ. ಕಾಣಿ ಹಾಗೆಯೇ ಬಿದ್ದುಕೊಂಡಳು. ಉಸಿರಾಟ ನಿಧಾನವಾಗಿ ಸ್ತಬ್ಧವಾಯಿತು. ಸತ್ತ ಮೇಲೆ ಬಳಿ ನಿಲ್ಲುವವರು ಯಾರೂ ಇರಲಿಲ್ಲ. ಪುರಸಭೆಯ ವ್ಯಾನು ಶವ ಒಯ್ಯಲು ಬರುವುದಿತ್ತು. ಅಷ್ಟರಲ್ಲಿ ಕಾಣಿಯ ದೇಹವನ್ನು ಕುಕ್ಕಿ ತಿನ್ನುವುದಕ್ಕಾಗಿ ಗಿಡುಗವೊಂದು ಎತ್ತರದಲ್ಲಿ 'ಕೊನೆಯ ಗಿರಾಕಿ'ಯಂತೆ ಸುತ್ತು ಸುತ್ತು ಬರುತ್ತಿತ್ತು.

ಬಡಪಾಯಿ ಹದಿಹರೆಯದ ಹುಡುಗಿಯೊಬ್ಬಳು ಬಡತನದ ಕಾರಣದಿಂದ ಹಸಿದ ಹೊಟ್ಟೆಯನ್ನು ತುಂಬಿಸಿಕೊಳ್ಳುವ ಸಲುವಾಗಿ ಇನ್ನೊಬ್ಬರ ಕಾಮದ ಹಸಿವನ್ನು ನಿವಾರಿಸಿ, ತನ್ನೊಡಲಿನ ಅನ್ನದ ಹಸಿವನ್ನು ತೀರಿಸಿಕೊಳ್ಳಲು ಪ್ರಯತ್ನಿಸುವುದು, ಏನೂ ಅರಿಯದ ಮುಗ್ಧ ಮನಸ್ಸಿನ ಮೂಕಿಯಾದ ಕಾಣಿಗೆ ದುಡ್ಡಿನ ಬೆಲೆ ತಿಳಿದಿಲ್ಲ. ಅನ್ನದ ಬೆಲೆ ತಿಳಿದಿದೆ. ಅನ್ನಕ್ಕಾಗಿ ದುಡ್ಡು ಪಡೆಯಬೇಕಿದೆ. ದುಡ್ಡಿಗಾಗಿ ದೇಹವನ್ನು ಮಾರಾಟ ಮಾಡಿಕೊಳ್ಳಬೇಕಿದೆ. ಇದು ಸರಿಯೋ ತಪ್ಪೋ ವಿವೇಚನೆ ಮಾಡುವಷ್ಟು ಶಕ್ತಿ ಅವಳಿಗೆಲ್ಲಿಂದ ಬರಬೇಕು. ಒಡಹುಟ್ಟಿದ ಅಣ್ಣತಮ್ಮಂದಿರು ಜೊತೆಯಲ್ಲಿದ್ದಿದ್ದರೆ ಕಾಣಿ ಹಸಿವೆಯಿಂದ ನರಳುವ ಪ್ರಮೇಯ ಬರುತ್ತಿರಲಿಲ್ಲ. ಕಾಣಿ ಗಿರಾಕಿಗಳಿಗೋಸ್ಕರ ಅಲೆಯುವುದು ತಪ್ಪುತ್ತಿತ್ತು. ಕೊನೆಗೆ ಬೀದಿ ಹೆಣವಾಗಿ 'ಕೊನೆಯ ಗಿರಾಕಿ'ಯಾದ ಗಿಡುಗನಿಗೆ ಆಹಾರವಾಗುವುದು ತಪ್ಪುತ್ತಿತ್ತೇನೋ? ಹಸಿದವರಿಗೆ ಅನ್ನ ನೀಡದ, ದುಡಿಯುವ ಕೈಗೆ ಕೆಲಸ ನೀಡದ ಸಮಾಜದ ಕ್ರೂರತೆಯನ್ನು ನಿರಂಜನರು ಈ ಕಥೆಯ ಮೂಲಕ ನಿರೂಪಿಸಿದ್ದಾರೆ. ಇದು ಕಾಣಿಯೊಬ್ಬಳ ಕಥೆ ಮಾತ್ರವಾಗಿರದೆ ಸಮಾಜದಲ್ಲಿ ಬದುಕಿ ಬಾಳಬೇಕಾದ ಅದೆಷ್ಟೋ ಮುಗ್ಧ ಬಡ ಜೀವಗಳ ಕಥೆಯಾಗಿದೆ. ಅನ್ನವನ್ನು ಕಾಣದೆ ಬಡತನದ ಬೇಗೆಯಿಂದ ಬೇಯಲಾಗದೆ ಇಷ್ಟವಿದ್ದೋ, ಇಲ್ಲದೆಯೋ ಇನ್ನೊಬ್ಬರ ಕಾಮದ ಹಸಿವಿಗೆ ಆಹಾರವಾಗಿ ತಮ್ಮ ಹೊಟ್ಟೆಯ ಹಸಿವನ್ನು ತೀರಿಸಿಕೊಳ್ಳಬೇಕಾದುದು ದುರಂತವೇ ಸರಿ.

ದುಡಿದು ತಿನ್ನುತ್ತೇನೆಂದರೂ ಈ ಸಮಾಜ ಬಿಡಬೇಕಲ್ಲ. ಬಡವರ ಅಸಹಾಯಕತೆ ಅವರನ್ನು ಏನು ಮಾಡಲು ಸಹ ಹಿಂಜರಿಯದಂತೆ ಮಾಡಿಬಿಡುತ್ತದೆ. ಹುಟ್ಟುತ್ತಲೇ ಮೂಕಿಯಾದ ಕಾಣಿ ತನ್ನ ತಂದೆ-ತಾಯಿ ಜಮೀನ್ದಾರನ ಶೋಷಣೆ ಇಲ್ಲದೇ ಹೋಗಿದ್ದರೆ ಹೇಗೂ ನೆಮ್ಮದಿಯಿಂದಲಾದರೂ ಬದುಕಬಹುದಿತ್ತು. ಕೆಟ್ಟು ಪಟ್ಟಣ ಸೇರು ಎಂಬ ಮಾತಿನಂತೆ ಪಟ್ಟಣಕ್ಕೆ ಹೋಗಿ ಉದ್ಧಾರವಾಗಬೇಕಾದ ಕಾಣಿ ಪಟ್ಟಣದ ಚಿಗುರು ಮೀಸೆಯ ಯುವಕರಿಂದ ಮೊದಲ್ಗೊಂಡು ಮುದುಕರ ದೈಹಿಕ ಕಾಮನೆಯನ್ನು ಈಡೇರಿಸುತ್ತಾ ತನ್ನ ಹೊಟ್ಟೆ ತುಂಬಿಸಿಕೊಳ್ಳುತ್ತಾಳೆ. ಕೊನೆಗೆ ಗಿಡುಗವೊಂದು ಆಕೆಯ ಕೊನೆಯ ಗಿರಾಕಿಯಾಗುತ್ತದೆ. ಬದುಕಿರುವವರೆಗೆ ಗಿರಾಕಿಗಳನ್ನು ಹುಡುಕಿದ ಕಾಣಿ ಸತ್ತ ನಂತರವೂ ಗಿಡುಗವೆಂಬ ಗಿರಾಕಿಗೆ ಬಲಿಯಾಗಬೇಕಾದುದು ಆರ್ಥಿಕತೆಯ ಕಾರಣದಿಂದ ಎಂದಾಗ ಮನ ಮಿಡಿಯುತ್ತದೆ. ಅಮಾಯಕರು ಆರ್ಥಿಕ ಅಸಮಾನತೆಯ ಕಾರಣದಿಂದ ತಮ್ಮ ಬದುಕನ್ನೇ ಅಂತ್ಯ ಮಾಡಿಕೊಳ್ಳುತ್ತಿದ್ದಾರೆ.

ಲಂಕೇಶರ 'ಕಣ್ಣಪ್ಪನ ಅಂತಿಮ ದಿನಗಳು'

ಬಹುಮುಖ ವ್ಯಕ್ತಿತ್ವದ ಪಿ. ಲಂಕೇಶ್‌ರವರು ಬಡವನ ಶೋಷಣೆಯನ್ನು ವಸ್ತುವಾಗಿಸಿಕೊಂಡು ಬರೆದ ಕತೆ. ಈ ಕತೆಯು ನಾಯಕ ಕಣ್ಣಪ್ಪ ಮಾಡದ ತಪ್ಪಿಗೆ ಶಿಕ್ಷೆ

ಅನುಭವಿಸುತ್ತಾನೆ. ಶಿಕ್ಷೆ ಅನುಭವಿಸಿ ಬಂದ ಮನುಷ್ಯನನ್ನು ಈ ವ್ಯವಸ್ಥೆ ತುಂಬಾ ನಿಕೃಷ್ಟವಾಗಿ ಕಾಣುತ್ತದೆ. ಅವನು ಹಾಗಾಗಲು ಕಾರಣ ಯಾರೆಂಬುದು ಗೊತ್ತಿರುವ ವಿಷಯವಾದರೂ ಯಾರೂ ಕಣ್ಣಪ್ಪನ ಸಹಾಯಕ್ಕೆ ಬರುವುದಿಲ್ಲ. ಬಡವರು ಮತ್ತೆ ಮತ್ತೆ ತುಳಿತಕ್ಕೊಳಗಾಗುತ್ತಾರೆಂಬ ಸತ್ಯದ ಚಿಂತನೆ ಈ ಕತೆಯಲ್ಲಿ ಅನಾವರಣಗೊಂಡಿದೆ. ಮುಗ್ಧ ಮನಸ್ಸಿನ ಒಳತುಡಿತ ಕತೆಯಲ್ಲಿ ವ್ಯಕ್ತವಾಗಿದೆ. ಈ ವ್ಯವಸ್ಥೆಗಿಂತ ಜೈಲೇ ವಾಸಿಯೆಂದು ಕಣ್ಣಪ್ಪ ಬಯಸುವುದು ಈ ವ್ಯವಸ್ಥೆಯ ಕಠೋರತೆಯನ್ನು ಬಿಂಬಿಸುವ ಕೈಗನ್ನಡಿಯಾಗಿದೆ.

ಕಣ್ಣಪ್ಪ ನೂಕುವ ಗಾಡಿಯಲ್ಲಿ ತರಕಾರಿ ವ್ಯಾಪಾರ ಮಾಡುವವನು. ಅರವತ್ತು ವರ್ಷದ ಕಣ್ಣಪ್ಪ ಕಳೆದ ಐವತ್ತು ವರ್ಷಗಳಿಂದ ಬೆಂಗಳೂರಿನ ಬೀದಿಬೀದಿಗಳಲ್ಲಿ ತರಕಾರಿ ಮಾರುತ್ತಾನೆ. ತರಕಾರಿ ಹೆಸರುಗಳನ್ನು ಕರೆದು ಹೇಳುವ ಕಣ್ಣಪ್ಪ ಬಡವನಾದರೂ ಹೆಚ್ಚು ಲಾಭ ಮಾಡುವ ಮನಸ್ಥಿತಿಯವನಲ್ಲ. ಬಡವನಾದರೂ ತನ್ನ ಹೊಟ್ಟೆಯನ್ನು ತುಂಬಿಸಿಕೊಳ್ಳುವುದಕ್ಕಾಗಿ ಅನ್ಯ ಮಾರ್ಗವನ್ನು ಕಂಡುಕೊಳ್ಳದೇ ವ್ಯಾಪಾರ ವೃತ್ತಿಯನ್ನು ಹುಡುಕಿಕೊಂಡಿದ್ದ. ಗಿರಾಕಿಗಳು ವ್ಯಾಪಾರದಲ್ಲಿ ಚೌಕಾಶಿ ಮಾಡಿದರೆ ಎರಡು ರೂಪಾಯಿ ಕೊಡುವಲ್ಲಿ ಒಂದುವರೆ ರೂಪಾಯಿ ತಗೊಂಡು ಸುಮ್ಮನಾಗುತ್ತಿದ್ದ.

ಹೀಗೆ ತನ್ನ ವ್ಯಾಪಾರದಲ್ಲಿ ಒಮ್ಮೆ ಶಿವರಾತ್ರಿಯ ಎರಡು ದಿನ ಮೊದಲು ಅಂದರೆ ಮಾರ್ಚ್ ಒಂಬತ್ತರಂದು ಸೋಮವಾರ ಮಧ್ಯಾಹ್ನ ಒಂದು ಗಂಟೆಗೆ ಬಿ. ಟಿ. ಎಸ್. ಕಂಡಕ್ಟರ್ ರಾಮಣ್ಣನ ಮನೆ ಎದುರು ಒಂದು ಘಟನೆ ನಡೆಯಿತು. ರಾಮಣ್ಣನ ಹೆಂಡತಿ ಕಿರಾಣಿ ಅಂಗಡಿ ಇಟ್ಟುಕೊಂಡಿದ್ದಳು (ನಡೆಸುತ್ತಿದ್ದಳು). ಅಂಗಡಿಯಿಂದ ಹಾಗೆ ಹೊರ ಬಂದು ಕಣ್ಣಪ್ಪನ ಗಾಡಿಯಲ್ಲಿದ್ದ ಗೋರಿಕಾಯನ್ನು ಕೊಂಡುಕೊಳ್ಳಲು ಬಂದಳು. ರಾಮಣ್ಣನ ಹೆಂಡತಿ ಗಾಡಿಯಲ್ಲಿರುವ ಎಲ್ಲಾ ತರಕಾರಿಯನ್ನು ಚೀಲಕ್ಕೆ ತುಂಬಿಸಿ ಐದು ರೂಪಾಯಿ ಕೊಡುತ್ತೇನೆ ಅನ್ನುವಷ್ಟರಲ್ಲಿ ಗಾಡಿ ಅಡ್ಡ ನಿಲ್ಲಿಸಿರುವುದರಿಂದ ರಸ್ತೆಯಲ್ಲಿ ವಾಹನಗಳು ಸೇರತೊಡಗಿದವು. ದೂರದಲ್ಲಿದ್ದ ಪೋಲೀಸ್ ಪೇದೆ ಮುಂದೆ ಹೋಗು ಎಂದು ವಿಶಲ್ ಊದಿದ. ರಾಮಣ್ಣನ ಹೆಂಡತಿ ಐದು ರೂಪಾಯಿ ಕೊಡದೆ ಮನೆ ಒಳಗೆ ಹೋಗಿರುವುದರಿಂದ ಇದುವರೆಗೆ ಸಾಲ ಕೊಡದಿರುವ ಕಣ್ಣಪ್ಪ ಅಲ್ಲೇ ನಿಂತ. ಪೋಲೀಸ್ ಹತ್ತಿರ ಬಂದಾಗ ಈ ಗಡಿಬಿಡಿಯಲ್ಲಿ ಕಣ್ಣಪ್ಪ ಏನೋ ಬಡಬಡಿಸಿದ. ಪೋಲೀಸ್ ಬಯ್ಯತೊಡಗಿದ. ಕಣ್ಣಪ್ಪ ಹತಾಶೆಯಿಂದ ಕೂಗಿಕೊಂಡ. ಆಗ ಪೋಲೀಸ್ ಏನಂದೆ? ಪೋಲೀಸ್‌ಗೆ ಧಿಕ್ಕಾರ ಅಂತೀಯಾ ಎಂದು ಪೋಲೀಸ್ ಸ್ಟೇಷನ್‌ಗೆ ಕರೆದೊಯ್ದ.

ಪೋಲೀಸ್ ಸ್ಟೇಷನ್ನಿಂದ ಬಿಡಿಸಿಕೊಳ್ಳಲು ವಕೀಲರು ಬೇಕಾಗುತ್ತದೆ ಎಂದರು. ಈ ವಿಷಯವನ್ನು ಹೇಗೋ ತನ್ನ ಬಡಾವಣೆಯ ವಕೀಲ ಚಂದ್ರಣ್ಣನಿಗೆ ಮುಟ್ಟಿಸಿದ. ವಕೀಲ ಚಂದ್ರಣ್ಣ 'ಪೋಲೀಸ್‌ಗೆ ಧಿಕ್ಕಾರ' ಎಂದದ್ದು ಹೌದೇ ಎಂದ. ಕಣ್ಣಪ್ಪ ತಾನು ಮಾಡದ ತಪ್ಪನ್ನು ಒಪ್ಪಿಕೊಳ್ಳುವಂತೆ ಮಾಡಿದ. ಕೋರ್ಟ್‌ನ ಕಟಕಟೆಯಲ್ಲಿ ನಿಂತಾಗ ನ್ಯಾಯಾಧೀಶರನ್ನು ಕಣ್ಣಪ್ಪಗೆ ತೋರಿಸಿದ. ಪೋಲೀಸ್ ತುಂಬ ನಿಷ್ಠುರನಂತೆ ಕಣ್ಣಪ್ಪ ಧಿಕ್ಕಾರ ಹೇಳಿದ್ದಾನೆಂದು ಒಪ್ಪಿಸಿದ. ಚಂದ್ರಣ್ಣ ಕಣ್ಣಪ್ಪನ ಪರವಾಗಿ ವಾದಿಸಿದ.

ಕಣ್ಣಪ್ಪ ಬಡವ, ಕುಡಿತದಿಂದ ಅವನ ಕಣ್ಣು ಗುಳಿಬಿದ್ದಿದೆ ಎಂದು ನ್ಯಾಯಾಧೀಶರಿಗೆ ವಿವರಿಸಿ ಹೇಳಿದ. ಜೀವಮಾನದಲ್ಲಿ ಯಾವತ್ತೋ ಒಮ್ಮೆ ಕುಡಿದ ಕಣ್ಣಪ್ಪನಿಗೆ ಚಂದ್ರಣ್ಣನ ಮಾತು ನೋವುಂಟು ಮಾಡಿತು. ಕೊನೆಗೂ ಕಣ್ಣಪ್ಪನಿಗೆ ಐವತ್ತು ರೂಪಾಯಿ ದಂಡ ಮತ್ತು ಹದಿನೈದು ದಿನದ ಸಾದಾ (ಸಾಮಾನ್ಯ) ಶಿಕ್ಷೆಯಾಯಿತು. ಚಂದ್ರಣ್ಣ ಅವನ ಬಡಾವಣೆಯಲ್ಲಿ ದಂಡ ಕಟ್ಟಲು ಹಣ ಸಂಗ್ರಹಿಸಿ ಕೊಟ್ಟ. ಕಣ್ಣಪ್ಪ ಹದಿನೈದು ದಿನ ಜೈಲುವಾಸದಿಂದ ಹೊರಬಂದು ಮಾಮೂಲಿನಂತೆ ತರಕಾರಿ ಮಾರಲು ಪ್ರಯತ್ನಿಸಿದ.

ಕಣ್ಣಪ್ಪ ಜೈಲಿಗೆ ಹೋಗಿ ಬಂದ ನಂತರ ಅವನಿಂದ ತರಕಾರಿ ಕೊಂಡುಕೊಳ್ಳುತ್ತಿದ್ದವರು ಬೇರೆಯವರಿಂದ ಅವನ ಕಣ್ಣೆದುರೇ ಕೊಳ್ಳುತ್ತಿದ್ದರು. ಕಣ್ಣಪ್ಪನ ವ್ಯಾಪಾರ ದಿನೇ ದಿನೇ ಕಡಿಮೆಯಾಯಿತು. ಈ ಚಿಂತೆಯಲ್ಲಿ ಕಣ್ಣಪ್ಪ ಕುಡಿತಕ್ಕೆ ಶರಣಾದ. ನೋವು, ದೌರ್ಬಲ್ಯ, ಕುಡಿತ ಇವುಗಳಲ್ಲಿ ಯಾವುದು ತನ್ನನ್ನು ತಿನ್ನುತ್ತಿದೆ ಎಂಬುದು ಕಣ್ಣಪ್ಪನಿಗೆ ತಿಳಿಯದಾಯಿತು. ಅರವತ್ತರ ಶರೀರಕ್ಕೆ ಬ್ರಾಂದಿ, ಸಾರಾಯಿ ಒಳಸೇರಿದಾಗ ಏನೋ ಮಜಾ ಸಿಕ್ಕಿತು. ದಿನನಿತ್ಯ ಕುಡಿವ ಕಣ್ಣಪ್ಪನ ಆರೋಗ್ಯ, ವ್ಯಾಪಾರ ಎಲ್ಲಾ ಹಾಳಾಯಿತು. ವೈನ್‌ಶಾಪ್‌ನ ಜೋಸೆಫ್‌ನ ಮಗ ಕಣ್ಣಪ್ಪನನ್ನು ಜೈಲಿಗೆ ಹೋದವನು ಎಂದು ಅಣಕಿಸಿದಾಗ ವಿಷ ಮಾರುವ ನಿನ್ನಪ್ಪ ಜೈಲಿಗೆ ಹೋಗಬೇಕಾಗಿತ್ತು ಎಂದು ಹೇಳಿ ಕೆನ್ನೆಗೆ ಹೊಡೆದ. ಜೋಸೆಫ್ ಕಣ್ಣಪ್ಪನನ್ನು ವಿರೋಧಿಸಲಿಲ್ಲ. ಕೊನೆಗೆ ಕಣ್ಣಪ್ಪ ರಾತ್ರಿಯೆಲ್ಲಾ ರಸ್ತೆ ಬದಿಯಲ್ಲಿ ಸುತ್ತಾಡಲು ಆರಂಭಿಸಿದ. ಈ ಬದುಕಿಗಿಂತ ಜೈಲುವಾಸವೇ ಉತ್ತಮವೆಂದು ತೀರ್ಮಾನಿಸಿದ. ದೂರದಲ್ಲಿ ನಿಂತ ಪೋಲೀಸ್ ಪೇದೆಯ ಹತ್ತಿರ ಬಂದು 'ಪೋಲೀಸರಿಗೆ ಧಿಕ್ಕಾರ' ಎಂದ. ಜೈಲು? ಯಾಕೆ ಜೈಲು? ಸುಮ್ಮನೆ ಹೋಗು, ವಯಸ್ಸಾಗಿದೆ, ವಿವೇಕ ಮಾತ್ರ ಬಂದಿಲ್ಲ. ನಿಮ್ಮಂಥ ಮುದುಕರನ್ನು ಜೈಲಿಗೆ ಹಾಕ್ತಾ ಹೋದ್ರೆ ಆಯಿತು, ಎಂದ ಪೋಲೀಸ್ ಪೇದೆ. ಕಣ್ಣಪ್ಪ ಮಾತ್ರ ಚಲಿಸದೇ ಅಲ್ಲೇ ನಿಂತ.

ಒಟ್ಟಾರೆ ಹೇಳುವುದಾದರೆ ಬಡವರು ಏನು ಮಾಡಿದರೂ, ಅದನ್ನು ಅನುಮಾನದಿಂದಲೇ ನೋಡುವ ಈ ಮಾನವ ಸಮಾಜದಲ್ಲಿ ಅಧಿಕಾರ, ಸಂಪತ್ತು ಇದ್ದವರಿಗೆ ಮಾತ್ರ ಮನ್ನಣೆ. ಶ್ರೀಮಂತರು ಏನು ಮಾಡಿದರೂ ಅದನ್ನು ಯಾರೂ ಪ್ರಶ್ನಿಸುವಂತಿಲ್ಲ. ಜೈಲಿಗೆ ಹೋಗಿ ಬಂದರೂ ಅವರಿಗೆ ರಾಜಮರ್ಯಾದೆ. ಬಡವ ದುಡಿದು ತಿಂದರೂ ಸಹಿಸದ ಈ ಸಮಾಜ ಅವನು ಹಸಿದು ಬಳಲುವಾಗ ಅನ್ನ ನೀಡುವುದಿಲ್ಲ ಏಕೆ ಎಂಬುದು ನಿಜಕ್ಕೂ ಪ್ರಶ್ನಿಸಿಕೊಳ್ಳಬೇಕಾಗಿದೆ.

ಮಾಡದ ತಪ್ಪಿಗೆ ಶಿಕ್ಷೆಯನ್ನು ಅನುಭವಿಸಿ ಬಂದವರಿಗೆ ಮೊದಲೇ ಆ ನೋವಿರುವಾ ಅದರೊಂದಿಗೆ ಈ ಸಮಾಜ ನಡೆದುಕೊಳ್ಳುವ ರೀತಿ ಮತ್ತಷ್ಟು ದುರ್ಬಲರನ್ನಾಗಿಸುತ್ತದೆ. ತಪ್ಪು ಮಾಡುವುದು ಸಹಜ; ತಿದ್ದಿ ನಡೆಯೋನು ಮನುಜ ಎಂಬ ಹಿತನುಡಿಯುವವರು ಬಡವರ ಕಂಬನಿಗೆ ಮಿಡಿಯದಿರುವುದು ನಿಜಕ್ಕೂ ಘೋರ. 'ಸೃಷ್ಟಿಯ ಮಹದ್ವ್ಯೂಹ ರಚನೆಯಲಿ ಪಾಪಿಗೂ ಉದ್ಧಾರ ಸಾಧ್ಯ' ಎಂದು ಕುವೆಂಪುರವರ 'ಶ್ರೀ ರಾಮಾಯಣ ದರ್ಶನಂ' ನಲ್ಲಿ ಉಲ್ಲೇಖಗೊಂಡಿರುವಾಗ ನಿರಪರಾಧಿಗೆ ಬದುಕಲು, ಉದ್ಧಾರವಾಗಲು ಏಕೆ ಅವಕಾಶವಿಲ್ಲ? ನೊಂದವರ ನೋವು ನೊಂದವರಿಗೆ ಗೊತ್ತೇ ವಿನಃ ನೋಯದವರೇನು ಬಲ್ಲರು?

ಈ ನಾಗರಿಕ ಸಮಾಜ ಇನ್ನಾದರೂ ಬದಲಾಗಬೇಕಾಗಿದೆ. ದುಡಿದು ತಿನ್ನುವವರನ್ನು ಬೆನ್ನು ತಟ್ಟಿ ಪ್ರೋತ್ಸಾಹಿಸಬೇಕಾಗಿದೆ. ಪ್ರಾಮಾಣಿಕ ಪ್ರಯತ್ನದಿಂದ ಶ್ರದ್ಧೆ, ನಿಷ್ಠೆಯಿಂದ, ಬೆವರನ್ನು ಬಸಿದು ನಿರಂತರ ಕಾಯಕ ಮಾಡುವ ಯೋಗಿಗಳಿಗೆ ಅಗ್ರಸ್ಥಾನ ಈ ಸಮಾಜದಲ್ಲಿ ಸಲ್ಲಬೇಕಾಗಿದೆ. ಹಸಿವಿನ, ಬಡತನದ ಕಾರಣಕ್ಕೆ ಬಡವರ ಮೇಲಿನ ಶೋಷಣೆ ಕೊನೆಯಾಗಿ ತಾನು ಬದುಕಬೇಕು, ಬದುಕುತ್ತೇನೆ ಎಂಬ ಆತ್ಮವಿಶ್ವಾಸವನ್ನೂ ಮೂಡಿಸಬೇಕಾಗಿದೆ. ಕುವೆಂಪು ಹೇಳುವಂತೆ, "ಸರ್ವರಿಗೆ ಸಮಬಾಳು, ಸರ್ವರಿಗೆ ಸಮಪಾಲು" ಪ್ರಾಪ್ತವಾಗಿ ಮಾನವೀಯತೆಯ ಮಹತ್ವವನ್ನು ಎಲ್ಲೆಡೆ ಸಾರಬೇಕಾಗಿದೆ. ತ್ಯಾಗದ, ದಯೆಯ ಮನೋಭಾವ ಬೆಳೆದು, ಉಳ್ಳವರು ಉಳ್ಳದವರೊಂದಿಗೆ ಹೊಂದಿಕೊಂಡು ಬಾಳಬೇಕಾಗಿದೆ, ಆರ್ಥಿಕ ಸಮಾನತೆ ಮೂಡಬೇಕಿದೆ.

ಬೆಸಗರಹಳ್ಳಿ ರಾಮಣ್ಣನವರ 'ನೂರು ರೂಪಾಯಿ ನೋಟು'

ಕೂಳನೆರೆ ಪುಟ್ಟ ಕಾಳೇಗೌಡ ಹೆಂಡತಿ-ಮಗನನ್ನು ತಬ್ಬಲಿ ಮಾಡಿ ಹೊರಟು ಹೋದ. ಇದ್ದದ್ದು ಎರಡು ಎಕರೆ ಬರಡು ಭೂಮಿ. ತಂದೆಯಿಲ್ಲದ ಮಗ ಶಿವರಾಮನನ್ನು ತಾಯಿ ಬಲು ಜೋಪಾನದಿಂದ ಸಾಕಿ ಸಲಹಿದಳು. ಶಿವರಾಮ ಮೈಸೂರಿನ ಅನಾಥಾಲಯದಲ್ಲಿದ್ದುಕೊಂಡೇ ಓದಿ ಮುಂದೆ ಬಂದು- ಎಂ.ಬಿ.ಬಿ.ಎಸ್ ಸೀಟು ಪಡೆದಿದ್ದಾನೆ.

ಶಿವರಾಮನ ತಾಯಿ ತಾನು ಹೆಣ್ಣು ಹೆಂಗಸೆಂದುಕೊಂಡು ಮನೆಯಲ್ಲಿ ಕೂರದೇ ಮಗನ ವಿದ್ಯಾಭ್ಯಾಸಕ್ಕೆಂದೇ ತನ್ನ ಜೀವನವನ್ನು ಮುಡುಪಾಗಿಟ್ಟವಳು. ಹೊಟ್ಟೆ-ಬಟ್ಟೆಯನ್ನು ಕಟ್ಟಿ, ಬೆಳಗ್ಗಿನಿಂದ ಸಂಜೆವರೆಗೆ 'ಬೆಲ್ಲ ಬೇಕೇನ್ರಮ್ಮ ಬೆಲ್ಲ' ಬನ್ರಮ್ಮ ಬನ್ನಿ' ಎಂದು ತನ್ನ ಹರಕಲು ಸೀರೆ ಉಟ್ಟು ತುಂಬಿದೆದೆಗಳನ್ನು ಅದುಮಿಡಲಾರದೆ ಹರಿದ ರವಿಕೆಯನ್ನು ಶಪಿಸುತ್ತಾ ಎಟುಕದ ಸೀರೆ ತುದಿಯಿಂದ ಎಳೆದೆಳೆದು ಮುಚ್ಚಲೆತ್ನಿಸುತ್ತಾ, ಬೆಲ್ಲದ ಕುಕ್ಕೆಯನ್ನು ಹೊತ್ತು ಬರಿಗಾಲಲ್ಲಿ ಸುಡುವ ಬಿಸಿಲಲ್ಲಿ, ಕಾಡುದಾರಿಯಲ್ಲಿ ಬರಬರನೆ ನಡೆವ, ತನ್ನ ಹಸಿವು ಆಯಾಸವನ್ನು ಲೆಕ್ಕಿಸದೆ, ಮಗನ ಶಿಕ್ಷಣಕ್ಕಾಗಿ ತನ್ನ ಜೀವನವನ್ನೇ ಸವೆಸಿದಳು. ತಾನು ಬೆಲ್ಲ ಮಾರಿ ದುಡಿದು ಸಂಪಾದಿಸಿದ ಹಣ ಮಗನ ಶಿಕ್ಷಣಕ್ಕಾಗಿ ಸಾಕಾಗದಿದ್ದಾಗ, ಮಗನ ಹಾಸ್ಟೆಲ್ ಫೀಜನ್ನು ಕಟ್ಟುವುದಕ್ಕಾಗಿ ಓರ್ವ ಸಾಹುಕಾರನೊಡನೆ ಅನೈತಿಕವೆಂಬ ಅರಿವಿದ್ದರೂ ಸಂಬಂಧ ಮಾಡುತ್ತಾಳೆ. ಮಗನನ್ನು ಒಬ್ಬ ಉತ್ತಮ ವೈದ್ಯನನ್ನಾಗಿ ಮಾಡಬೇಕು. ಆತ ತನ್ನೂರಿನ ಜನರ ರೋಗವನ್ನು ನಿವಾರಿಸುವ ದೇವ ವೈದ್ಯನಾಗಬೇಕೆಂದು ಇಚ್ಛಿಸಿ ತನ್ನ ಜೀವನವನ್ನೇ ಮಗನಿಗೋಸ್ಕರ ಧಾರೆಯೆರೆದು ವೈದ್ಯನನ್ನಾಗಿ ರೂಪಿಸುತ್ತಾಳೆ.

ಆದರೆ ಶಿವರಾಮ ತಾನು ವೈದ್ಯನಾದ ಕೂಡಲೇ ತನ್ನ ಗತಕಾಲದ ಕಷ್ಟ-ಕಾರ್ಪಣ್ಯ, ತನ್ನ ತಾಯಿ ತನಗೆ ಮಾಡಿದ ತ್ಯಾಗವನ್ನು ಮರೆತೇ ಬಿಡುತ್ತಾನೆ. ಶ್ರೀಮಂತರ ಮನೆಯ ಹುಡುಗಿಯನ್ನು ಮದುವೆಯಾಗುತ್ತಾನೆ. ಆದರೆ ಸೊಸೆಯಾದವಳು ತನ್ನ ವೈದ್ಯ ಗಂಡನ ತಾಯಿ ಎಂಬ ಯಾವ ಗೌರವವಿಲ್ಲದೇ ಅತ್ತೆಯನ್ನು ತನ್ನ ಗೆಳತಿಯರ ಮುಂದೆ ನಮ್ಮ ಮನೆಯ ಆಳು ಎಂಬುದಾಗಿ ಹೇಳುತ್ತಾಳೆ. ಬಡವರು ಹಸಿವನ್ನು ತಡೆದುಕೊಳ್ಳುತ್ತಾರೆ. ಆದರೆ ಸ್ವಾಭಿಮಾನಕ್ಕೆ ಚ್ಯುತಿ ಬಂದರೆ ಖಂಡಿತಾ ತಡೆದುಕೊಳ್ಳಲಾರರು. ಹಾಗೆಯೇ ಶಿವರಾಮನ ತಾಯಿ ಮತ್ತು ಪತ್ನಿಯ ನಡುವೆ ಜಗಳವೇರ್ಪಟ್ಟು, ತಾಯಿ ತನ್ನ ಹಳ್ಳಿಗೆ ಹೋಗಿ ಅಲ್ಲಿಯೇ ನೆಲೆಸುತ್ತಾಳೆ. ತನ್ನ ಹಳ್ಳಿಗೆ ಹೋಗುವ ತಾಯಿ ತನ್ನ ಮಗನಿಗೆ ಕೆಲವು ಬುದ್ಧಿಮಾತುಗಳನ್ನು ಹೇಳುತ್ತಾಳೆ.

ತಾನು ಓರ್ವ ನಿರಕ್ಷರಕುಕ್ಷಿಯಾಗಿದ್ದರೂ, ಊರೂರು ಅಲೆದು ಕುಕ್ಕೆಯಲ್ಲಿ ಬೆಲ್ಲ, ಎಲೆ-ಅಡಿಕೆ ಇತ್ಯಾದಿ ದಿನಬಳಕೆಯ ಸಾಮಾನುಗಳನ್ನು ಹೊತ್ತುಕೊಂಡು ಸುಡುಬಿಸಿಲಿನಲ್ಲಿ, ಮಳೆ-ಗಾಳಿ-ಧೂಳಿನಲ್ಲಿ ನಿನಗಾಗಿ ಶ್ರಮಿಸಿದ್ದು ತನ್ನ ಸ್ವಾರ್ಥಕ್ಕಲ್ಲ, ತನ್ನ ಹೊಟ್ಟೆಯ ಹಸಿವನ್ನು ಇಂಗಿಸಿಕೊಳ್ಳುವುದಕ್ಕಲ್ಲ, ಮಗ ಒಬ್ಬ ಉತ್ತಮ ಡಾಕ್ಟರಾಗಿ ಬಡ ಜನರ ಸೇವೆ ಮಾಡಲಿ, ಅವರ ದುಃಖ ನಿವಾರಿಸುವ ಪರಮಾತ್ಮ ಆಗಲಿ ಅಂತಾ ನಿರೀಕ್ಷೆಪಟ್ಟೆ. ನೀನು ತದ್ವಿರುದ್ಧವಾಗಿ ಬಡಜನರ ರಕ್ತ ಹೀರುವ-ಕ್ಷುದ್ರ ಜಂತುವಾಗಿದ್ದೀಯಲ್ಲಾ ಎಂದು ಮಗನನ್ನು ಆಕ್ಷೇಪಿಸಿ, ತನ್ನೂರಿನಲ್ಲಿ ನೆಲೆಸಿ ಕೊನೆಯವರೆಗೂ ಯಾರ ಹಂಗಿಗೂ ಒಳಗಾಗದೇ ಸ್ವಾಭಿಮಾನದಿಂದ ಬದುಕಿ ಪ್ರಾಣ ಬಿಡುತ್ತಾಳೆ.

ಹಸಿವು-ಬಡತನದಿಂದ ಅನುಕಂಪದಿಂದ ಮೇಲೆ ಬಂದವರಿಗೆ ತಮ್ಮ ಹಿಂದಿನ ದಾರಿಗಳೆಲ್ಲಾ ಮುಚ್ಚಿಹೋಗುತ್ತವೆ. ನಗರದಲ್ಲಿ ಕೋಟ್ಯಂತರ ರೂಪಾಯಿ ಗಳಿಸಿದ ಎಷ್ಟೋ ವ್ಯಕ್ತಿಗಳಿಗೆ ತಮ್ಮ ಹುಟ್ಟೂರಲ್ಲಿ ಪ್ರೈಮರಿಶಾಲೆ ಮುರಿದು ಬೀಳುವ ಸ್ಥಿತಿಯಲ್ಲಿದ್ದರೂ ಕಣ್ಣಿಗೆ ಕಾಣುವುದಿಲ್ಲ. ತನ್ನ ಬಂಧುಗಳು, ಒಡನಾಡಿಗಳು ಒಂದೊಂದು ತುತ್ತು ಅನ್ನಕ್ಕೂ ಹೋರಾಟ ಮಾಡುತ್ತಿದ್ದರೂ ಕಣ್ಣೆತ್ತಿ ನೋಡುತ್ತಿಲ್ಲ. ಗ್ರಾಮೀಣ ಬದುಕು ಉರಿಯತೊಡಗಿದೆ. ಈ ದೇಶದಲ್ಲಿ ಸುಮಾರು ೯೦ ಲಕ್ಷ ಜನ ಕ್ಷಯರೋಗಿಗಳಿದ್ದಾರೆ. ೪೦ ಲಕ್ಷ ಜನ ಕಷ್ಠರೋಗಿಗಳಿದ್ದಾರೆ. ಬಹುತೇಕ ಜನ ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ಈ ಸಮಸ್ಯೆಗಳ ನಿವಾರಣೆಗೆ ವೈದ್ಯರೂ, ಧನವಂತರೂ ರಾಜಕಾರಣಿಗಳೂ, ಅಧಿಕಾರಿವರ್ಗದವರು ನೆರವಾಗಬೇಕಿದೆ ಎಂದು ಬೆಸಗರಹಳ್ಳಿ ರಾಮಣ್ಣ ಹೇಳಿದ್ದಾರೆ.[೧೭]

ಗ್ರಾಮೀಣ ಭಾಗದ ಜನರು ತಮಗೆ ಕಾಯಿಲೆ ಬಂದಾಗ, ಅದರ ನಿವಾರಣೆ ಹಸಿವು-ಬಡತನವನ್ನು ಕೇಂದ್ರವಾಗಿ ಮಾಡಿಕೊಳ್ಳದೇ ಪೈಸಾ ಪೈಸಾ ಜೋಡಿಸಿ ವೈದ್ಯರನ್ನು ಭೇಟಿಯಾಗುವುದಕ್ಕೋಸ್ಕರ, ಅವರಿಗೆ ಪರೀಕ್ಷಿಸಿದ್ದಕ್ಕಾಗಿ ಹಣ ತುಂಬಲು ಏನೆಲ್ಲಾ ಕಷ್ಟಗಳನ್ನು ಎದುರಿಸುತ್ತಾರೆ. ಅದೇ ಬಡವರು ಶೋಕದಿಂದ ಕೊಡುವ ನೂರು ರೂಪಾಯಿ ನೋಟು ಡಾ. ಶಿವರಾಮರ ಮಗ ರವಿಕಾಂತೇಗೌಡ ಬಡಭಾರತೀಯರ ಹಳ್ಳಿಗಾಡಿನ ಜನರಿಗಾಗಿ ದುಡಿಯಲು ಮನಸ್ಸು ಮಾಡುವುದು ಒಂದು ಆರೋಗ್ಯ ಪೂರ್ಣ ಸಮೂಹ ಬೆಳವಣಿಗೆಗೆ ನಿದರ್ಶನವಾದೀತು. ಎಲ್ಲರೂ ದುಡಿಯಬೇಕು. ಬಡತನ, ಹಸಿವು ನಿವಾರಣೆಯದಾಗ ಮಾತ್ರ ದೇಶ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯ ಎಂಬುದನ್ನು ಎಲ್ಲರೂ ಕಂಡುಕೊಳ್ಳಬಹುದಾಗಿದೆ. ಬಡವರು ಆರ್ಥಿಕವಾಗಿ ಸದೃಢತೆಯನ್ನು ಪಡೆಯುವಂತಾಗಬೇಕು.

ಬಿ. ಟಿ. ಲಲಿತಾನಾಯಕ್‌ರವರ 'ಕಳ್ರು'

ಬಿ. ಟಿ. ಲಲಿತಾನಾಯಕ್ ಮಹಿಳಾ ಸಂವೇದನೆಯ ಪ್ರಮುಖ ಲೇಖಕಿಯರಲ್ಲಿ ಒಬ್ಬರು. ಲಂಬಾಣಿ ಜನಾಂಗದ ಸಂಸ್ಕೃತಿ, ಸೋಲು, ವಿಷಾದ, ಬದುಕಿನ ಬವಣೆ, ಹಸಿವು, ನೋವು ಮುಂತಾದ ವಿಚಾರಗಳ ಹಿನ್ನೆಲೆಯಲ್ಲಿ ತಮ್ಮ ಸಾಹಿತ್ಯವನ್ನು ರೂಪಿಸಿಕೊಂಡವರು. ಇವರ ಅನೇಕ ಸಣ್ಣ ಕಥೆಗಳಲ್ಲಿ ಪ್ರಮುಖವಾದ ಕಥೆ ಕಳ್ರು.

ಗುಂಡ ಹೇಳಿ ಕೇಳಿ ಬಡವ. ಓಣಿಯ ಜನ ತಿರುಪತಿ ಯಾತ್ರೆ ಹೊರಟಾಗ, ಅವನಿಗಾಗಲಿ ಆತನ ಪತ್ನಿ ಶಾಂತಿಗಾಗಲಿ ಯಾತ್ರೆ ಮಾಡಬೇಕೆಂಬ ಉತ್ಕಟವಾದ ಇಚ್ಛೆಯೇನೋ

ಇರಲಿಲ್ಲ. ನೆರೆಹೊರೆಯವರ ಉತ್ಸಾಹ, ನಂಜಿಕೆಯ ಚಟುವಟಿಕೆಗಳು ಅವರಿಬ್ಬರನ್ನು ಉತ್ತೇಜಿಸಿದ್ದವು. ಹೇಗಾದ್ರೂ ಮಾಡಿ ಒಂದು ಬಾರಿ ಯಾತ್ರೆ ಮಾಡಿ ಬಂದರೆ ಸಾಕು. ಆ ತಿರುಪತಿ ತಿಮ್ಮಪ್ಪನ ಕರುಣೆಯಿಂದ ಮಾಡಿದ ಸಾಲ ತೀರೋದು, ಸೋಗೆಯ ಗುಡಿಸಲು, ಹೆಂಚಿನ ಮನೆಯಾಗೋದು ಎಷ್ಟೊತ್ತಿನ ಕೆಲಸಾ? ಎಂಬ ಮಾತುಗಳಿಗೆ ದಂಪತಿ ಮನ ಸೋತರು.

ಗುಂಡ ಊರಿನ ಕೆಲವಾರು ಸಿರಿವಂತ ಕುಳಗಳ ಬಳಿ ಸಾಲಕ್ಕಾಗಿ ಎಡತಾಗಿ 'ಇಲ್ಲ' ಎಂದರೂ, ನಿರಾಶನಾಗದೆ ಪಕ್ಕದ ಗ್ರಾಮದ ಸಾಹುಕಾರನ ಕಾಲು ಹಿಡಿದು ಆರುನೂರು ರೂಪಾಯಿ ಸಾಲ ಪಡೆದುಕೊಂಡು ಯಾತ್ರೆ ಮಾಡಿ ಬಂದ. ಸಾಲದ ಋಣವನ್ನು ತೀರಿಸಲು ಸ್ವತಃ ಎರಡು ವರ್ಷ ಜೀತ ಮಾಡುವ ಕರಾರಿಗೆ ಹೆಬ್ಬೆಟ್ಟಿನ ಸಹಿ ಬೇರೆ ಒತ್ತಿದ್ದ. ಯಾತ್ರೆ ಹೋದಾಗ ಆವರಿಸಿದ್ದ ಭಕ್ತಿಯ ಅಮಲು ಊರಿಗೆ ಮರುಳುತ್ತಿದ್ದಂತೆ ಇಳಿಯಲಾರಂಭಿಸಿತು. ಕರಾರಿನಂತೆ ಅವನು ಜೀತಕ್ಕೆ ಹೊರಟು ಹೋದ. ಅಲ್ಲಿ ಅವನ ಹೊಟ್ಟೆಗೇನೂ ಚಿಂತೆ ಇರಲಿಲ್ಲ. ತಾಪತ್ರಯ ಬಂದದ್ದು ಮಾತ್ರ ಶಾಂತಿಗೆ. ವಾರದಲ್ಲಿ ಒಂದು ದಿನವೂ ಅವಳು ಕೂಲಿ ಕೆಲಸ ತಪ್ಪಿಸುವಂತಿರಲಿಲ್ಲ. ಹಾಗೆ ತಪ್ಪಿದ ದಿನ ಅಂದಿನ ಊಟವು ತಪ್ಪಿದಂತೆ. ಬಡವರಿಗೆ ಬಡತನವೇ ಒಂದು ಭಾರವಾದರೆ ಮಕ್ಕಳು ಇನ್ನೊಂದು ಭಾರ. ಆರು ಮಕ್ಕಳ ಪೈಕಿ ಹಿರಿಯ ಮಗಳಾದ ಪಾಪಿ ಓದಿನಲ್ಲಿ ಚುರುಕಾಗಿದ್ದಳು. ಪಾಪಿಯನ್ನು ತುಂಬಾ ಓದಿಸಬೇಕು. ಆಮ್ಯಾಲೆ ಅವಳಿಗೆ ನೌಕರಿ ಸಿಗುತ್ತೆ. ನೂರಿನ್ನೂರು ರೂಪಾಯಿ ಸಂಬಳ ಕೊಡ್ತಾರೆ. ನಾವೆಲ್ಲ ಆಗ ರಾಜರ್ಥಂಗ ಇರಬಹುದು ಎಂದು ಗುಂಡ ಕನಸು ಕಾಣುತ್ತಿದ್ದ.

ಆದರೆ ಕಿತ್ತು ತಿನ್ನುವ ಬಡತನದಿಂದಾಗಿ ಪಾಪಿ ಶಾಲೆ ಬಿಡುವುದು ಅನಿವಾರ್ಯವಾಯಿತು. ತಾಯಿ ಕೂಲಿಗೆ ಹೋದಾಗ ಮನೆಗೆಲಸವನ್ನು, ಸಣ್ಣ-ಪುಟ್ಟ ತಂಗಿ-ತಮ್ಮಂದಿರನ್ನು ನೋಡಿಕೊಳ್ಳುವ ಹೊಣೆಯನ್ನು, ಅವಳೇ ಹೊರಬೇಕಾಗಿ ಬಂತು. ಅಷ್ಟರಲ್ಲೆ ಬಿಡುವು ಮಾಡಿಕೊಂಡು ತುಸು ಅನುಕೂಲಸ್ಥೆಯಾಗಿದ್ದ ಜಮಣಿಬಾಯಿಯ ಮನೆಗೆಲಸದಲ್ಲಿಯೂ ನೆರವಾಗುತ್ತಿದ್ದಳು. ಅಲ್ಲಿ ತಿನ್ನಲು ನೀಡಿದ್ದನ್ನು ಮನೆಗೆ ತಂದು ತನ್ನ ಬಳಗಕ್ಕೆ ಹಂಚುತ್ತಿದ್ದಳು.

ವಾರಪೂರ್ತಿ ದುಡಿದು ಸಂತೆಯ ದಿನ ಕಾಳು-ಕಡ್ಡಿ, ಉಪ್ಪು, ಮೆಣಸು ತರುವುದರಲ್ಲೇ ಶಾಂತಿಯ ಶಕ್ತಿ ವ್ಯಯವಾಗುತ್ತಿತ್ತು. ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಯೋಚಿಸುವ ತ್ರಾಣ ಅವಳಲ್ಲಿ ಉಳಿದಿರಲಿಲ್ಲ. ಗುಂಡನಾದರೂ ಅಲ್ಲಿ ಮೈ ಮುರಿದು ದುಡಿಯಬೇಕಾಗುತ್ತಿತ್ತು. ಪ್ರತೀದಿನ ಮನೆಗೆ ಬರಲು ಸಾಹುಕಾರನ ಪರವಾನಿಗೆ ಸಿಗುತ್ತಿರಲಿಲ್ಲ. ವಾರದಲ್ಲಿ ಎರಡು ಮೂರು ದಿನ ಬಂದು ಹೋಗುತ್ತಿದ್ದ. ತಾನು ಮನೆಯಲ್ಲಿದ್ದು ದುಡಿಯುತ್ತಿದ್ದಾಗ ಪರಿಸ್ಥಿತಿ ಇಷ್ಟೊಂದು ಹದಗೆಟ್ಟಿರಲಿಲ್ಲ ಎಂದು ಅವನು ಪದೇ ಪದೇ ಅಂದುಕೊಳ್ಳುತ್ತಿದ್ದ.

ಯಾತ್ರೆ-ಜಾತ್ರೆ ಎಂಬುದು ಬಡವರಿಗೆ ಹೇಳ್ಸಿದ್ದಲ್ಲ. ಸುಮ್ಮ ಸುಮ್ಮನೆ ಸಾಲಮಾಡಿ ರೊಕ್ಕ ಖರ್ಚು ಮಾಡಿದೆ. ಹೆಂಡ್ತಿ ಮಕ್ಕಳನ್ನು ಕಷ್ಟಕ್ಕೆ ಸಿಕ್ಕಿಸಿ ಬಿಟ್ಟೆ ಎಂದೆಲ್ಲಾ ಪೇಚಾಡಿಕೊಳ್ಳುತ್ತಿದ್ದ. ಚಿಂತೆ ಮರೆಯಲು ಸುರೆಯ ಮೊರೆ ಹೋಗುತ್ತಿದ್ದ.

ಒಂದು ದಿನ ಬಿಡುವು ಮಾಡಿಕೊಂಡು ಗುಂಡ ಮನೆಗೆ ಬಂದಾಗ ಮಕ್ಕಳು 'ಅವ್ವಾ ಅಪ್ಪ ಬಂದ!' ಎಂದು ಕೂಗಿಕೊಂಡದ್ದು ಅಪ್ಪ ತಿನ್ನಾಕೆ ಏನಾರೂ ತಂದಿದ್ದಾನೋ ಎಂಬ ಆಸೆಯಿಂದ. ಉರಿಯುತ್ತಿದ್ದ ಒಲೆ ಬೆಳಕಿನಲ್ಲಿ ಶಾಂತಿ ರೊಟ್ಟಿ ತಟ್ಟುತ್ತಿರುವುದು ಕಾಣಿಸಿತು. 'ಒಂದು ಮೊರಗಿರ ತತ್ತಾ' ಎಂದು ಪಿಸು ನುಡಿದಾಗ ಶಾಂತಿಯ ಬಾಡಿದ್ದ ಮೋರೆ ತುಸು ಅರಳಿತು. ಮುರುಕು ಮರವೊಂದನ್ನು ಎಳೆದು ಅವನೆದಿರು ಸರಿಸಿದಳು. 'ಏನಿಲ್ಲ ಒಂದ್ಹಿಡಿ ಜ್ವಾಳದ ಹಿಟ್ಟು ತಂದೀವ್ನಿ' ಎಂದು ನುಡಿದಾಗ ಅರಳಿದ ಶಾಂತಿಯ ಮುಖ ಯಥಾಪ್ರಕಾರ ಮುದುಡಿತು.

ಇವತ್ತು ಹಸಿ ಹಿಟ್ಟೇನು ಐತೆ. ಆಳಿಗೊಂದೊಂದು ರೊಟ್ಟಿ ಹಾಕಿದೀನಿ. ಆದ್ರೆ ಅದರ ಮ್ಯಾಲೆ ತಿನ್ನಾಕೆ ಕಾರ ಅರಿಯಾಣಾಂದ್ರೆ ಮೆಣಸಿನಕಾಯಿ ಇಲ್ಲ. ಸಂತೆಯಲ್ಲಿ ತಂದಿದ್ದು ಮುಗಿದು ಹೋಗಿದೆ ಎಂದು ಶಾಂತಿ ಸೋತ ದನಿಯಲ್ಲಿ ಉಸುರಿದಾಗ, 'ಮಿಂಚನ್ನ ಕಳುಹಿಸಬೇಕಾಗಿತ್ತು. ಆ ಥಾವರ್‍ಯನ ಹಿತ್ತಿಲಾಗ ಎಷ್ಟೊಂದು ಹಸಿಮೆಣಸಿನಕಾಯಿ ಬಿಟ್ಟಿದ್ವಲ್ಲ' ಎಂದು ಗುಂಡ ಸಲಹೆ ಮಾಡಿದಾಗ ಅಲ್ಲಿಗೂ ಹೋಗಿಬಂದ. ಆದರೆ ಹಸಿ ಮೆಣಸಿಕಾಕಾಯಿ ಬದಲಿಗೆ ತಲೆ ಒಡುಸ್ಕೊಂಡು ಬಂದಾನೆ.' ಕದ್ದುಮುಚ್ಚಿ ತರೋದಂದ್ರೆ ರೊಕ್ಕ ಕೊಟ್ಟು ತರೋ ಅಷ್ಟು ಸಲೀಸಲ್ಲ[೧೭] ಎಂಬುದು ಶಾಂತಿಗೂ ಗೊತ್ತು. ಮಗನ ಹಣೆಯ ಮೇಲೆ ಕೈಯಾಡಿಸುತ್ತ 'ಹಾಂ ಅನ್ನೊದ್ರೊಳಗೆ ಬೇಲಿ ಹಾರಿ ಓಟ ಕೀಳೋದು ಬಿಟ್ಟು ಕಲ್ಲೇಟು ತಿಂದಿದ್ದಿಯಲ್ಲಲೇ'[೧೮] ಎಂದು ಗುಂಡ ಮಗನನ್ನು ಮೂದಲಿಸಿದ.

ನೀನಾದರೂ ನಾಕು ಮೆಣ್ಸಿಕಾಯಿ ತಂದಿದ್ರಾಗಿತ್ತು. ಅವರೇನು ಮೂರು ಹೊತ್ತು ನಿನ್ನ ಕೈಬಾಯಿ ಕಾದುಕೊಂಡು ಕುಂತಿರ್ತಾರಾ? ಎಂದು ಶಾಂತಿ ಗುಂಡನಿಗೆ ಹೇಳಿದಳು. ಏನಂತಾ ತಿಳಿದುಕೊಂಡಿದ್ದೀಯಾ? ಆಳುಗಳು ಎಲ್ಲಿ ಹೋದ್ರು ಅತ್ತಕಡೆಯೇ ನಿಗಾ ಇಡ್ತಾರೆ. ಮಾತು ಮಾತಿಗೂ 'ಕಳ್ಳ ನನ್ನ ಮಕ್ಳು ಕಣ್ರಲಾ ನೀವೆಲ್ಲರು"[೧೯] ಅಂತಿರ್ತಾನೆ ಆ ಸಾವ್ಕಾರ. ಎಲ್ಲಾರ ಗಾಚಾರ ಕೆಟ್ಟು ಸಿಕ್ಕಿ ಹಾಕಿಕೊಂಡ್ರೆ ಮುಗೀತು. 'ಗೆಯ್ಯಲೆ ಮಗನೆ ಇನ್ನೊಂದು ವರ್ಷ ಹೆಚ್ಚಿಗೆ ಅಂದ್ರೂ ಅಂದ್ನೆ ಆ ನನ್ಮಗ' ಎಂದು ಗುಂಡ ತನ್ನ ಪರಿಸ್ಥಿತಿ ವಿವರಿಸಿದಾಗ ಹಂಗಾದ್ರೆ ಹೆದರಿಕೊಂಡಿರೋದೆ ಒಳ್ಳೆಯದು ಬಿಡು ಎಂದು ಶಾಂತಿ ಅಂಜಿಕೆ ವ್ಯಕ್ತಪಡಿಸಿದಳು.

'ಅವ್ವಾ ರೊಟ್ಟಿಕೊಡು ಹೊಟ್ಟೆ ಹಸೀತಾ ಐತೆ'[೨೦] ಎನ್ನುತ್ತಾ ಹೊರಗಿದ್ದ ಮಕ್ಕಳು ಒಳಬಂದು ತಾಯಿಯ ಮೇಲೆ ಬಿದ್ದವು. 'ಕಾರಗೀರಯಂತಾದ್ದು ಇಲ್ಲ; ತಡೀರಲೇ ಒಂದೀಟು ಎಂದರು ಕೇಳದೆ ಅರ್ಧರ್ಧ ರೊಟ್ಟಿ ಕಸಿದುಕೊಂಡಾಗ, ಸರಿಯಾತು. 'ಹಂಗೇ ತಿಂದು ಬಿಡ್ರಿ ಎಂದು ಶಾಂತಿ ಬೇಜಾರು ಪಟ್ಟಾಗ, ತಾನು ತಂದಿರೋ ಹಿಟ್ಟನ್ನ ಕಲಸಿ ರೊಟ್ಟಿ ಹಾಕ್ಬಿಡು, ಹುಡುಗ್ರೆಲ್ಲಾ ಭಾಳ ಹಸಿದುಕೊಂಡಿದ್ದಾವೆ ಎಂದು ಗುಂಡ ಶಾಂತಿಗೆ ಹೇಳಿದ.

ಆಕೆ ಹಿಟ್ಟು ನಾದಿ ರೊಟ್ಟಿ ತಟ್ಟಿ ಹಂಚಿನ ಮೇಲೆ ಹಾಕಿದಾಗ 'ಯವ್ವಾ ಏಟ್ ಬೆಳ್ಳಗೆ ಸುಣ್ಣದ್ಹಂಗ್ ಐತೆ ನೋಡು ಈ ರೊಟ್ಟಿ! ಹೊತ್ತಾರೆ ಪಾಪಕ್ಕ ಇಂತಾದ್ದೇ ರೊಟ್ಟಿ – ಅವ್ರೆ ಒಡ್ಕಲ ಪದಾರ್ಥ ತಂದು ಕೊಟ್ಟಿರಲಿಲ್ಲಾ?'[೨೧]

ಗುಂಡ ತನ್ನ ಮಕ್ಕಳ ಗುಂಪಿನಲ್ಲಿ ಪಾಪಿಯನ್ನು ಕಾಣದೇ ಇಷ್ಟೊತ್ತಾದರೂ ಯಾಕೆ ಬರಲಿಲ್ಲ ಎಂದು ಚಡಪಡಿಸಿದ. 'ರೊಟ್ಟಿ ಕೊಡೋದಿಲ್ವೇನವ್ವಾ ತಿನ್ನಾಕೆ' – ಸಹನೆ ಕಳೆದುಕೊಂಡು

ಮಕ್ಕಳು ಚೀರಿಕೊಂಡಾಗ, 'ಹೂಂ ಉಪ್ಪಾಕಿ ಮಾಡಿದೀನಿ ಕುತ್ಕಂಡು ತಿನ್ನಿ' ಎಂದು ಹೇಳಿ ಶಾಂತಿ ರೊಟ್ಟಿ ಹಂಚಲು ಅನುವಾಗುತ್ತಿದ್ದಂತೆ, 'ಅವ್ವಾ' ಎಂದು ಹೇಳಿ ಪಾಪಿ ಒಳಗಡೆ ಬಂದಾಗ ಎಲ್ಲರ ಕಣ್ಣಲ್ಲೂ ಆಸೆ ಇಣುಕಿತು. ಆದರೆ ಪಾಪಿ ಬರಿಗೈಲಿ ಬಂದಿದ್ದಳು.

'ಇಷ್ಟೊತ್ತು ಮಾಡಿ ಮನೆಗೆ ಬರೋದಾ? ಏನ್ ನೂರು ರೂಪಾಯಿ ಎಣ್ಸಿಕೊಟ್ಟಿದ್ದಾರಮ್ಮಿ–ಅವರ ಮನಿಯಾಗ ಈಟೊತ್ತಿನ ತನಕ ದುಡಿಯಾಕ?' ಎಂದು ಗುಂಡ ರೇಗಿದಾಗ 'ಮುಂಚೇನೆ ಬರ್ತಿದ್ದೆ ಕಣಪ್ಪ. ಅಷ್ಟೊತ್ತಿಗೆ ಕೊಪ್ಪದಿಂದ ಹನುಮಣ್ಣನೂ, ಅವನ ಹೆಂಡ್ತಿ ಕಾರ್‍ನಾಗ ಕುಂತು ಬಂದ್ರು, ಅದಕ್ಕೆ ಹೆಚ್ಚಿಗೆ ಅಡುಗೆ ಮಾಡೋದೈತಿ, ಕಾರಗೀರ ಅರ್ದು ಕೊಡುವಂತೆ, ಈಗ್ಲೆ ಹೋಗಬೇಡ ತಡಿ' ಎಂದು ಜಮಣತ್ತೆ ಹೇಳಿದಳು ಎಂದು ಪಾಪಿ ತಿಳಿಸಿದಳು. 'ಹಂಗಾದ್ರೆ ಈಗ್ಲೆ ಯಾಕೆ ಬರಿಗೈಯಾಗೆ ಬಂದೆ' ಎಂದು ಮಿಂಚ ಪಾಪಿನ್ನ ಕೇಳಿದ.

'ನೋಡು, ಅವರ ಮನೆಯಾಗ ಹುಂಜನ್ನ ಕೊಯ್ತಾವ್ರೆ. ಹೊತ್ತಾರೆ ಮಾಡಿದ ಮೊಳ್ಕೆ ಹುಳ್ಳಿಕಾಳಿನ ಸಾರು ಗಡಿಗೆ ತುಂಬ ಉಳಿದೈತೆ. ಅದನ್ನಾ ಈಗ ನಾವ್ಯಾರು ಉಣ್ಣೋದಿಲ್ಲ. ನೀನೇ ತಗಂಡು ಹೋಗುವೆಯಂತೆ ಅಂದವ್ಳೆ ಜಮಣತ್ತೆ' ಎಂದು ಪಾಪಿ ಉತ್ಸಾಹದಿಂದ ನುಡಿದಾಗ 'ಯವ್ವಾ' ಎಂದು ಮಕ್ಕಳು ಆನಂದದಿಂದ ಕುಳಿತಲ್ಲೇ ಕುಪ್ಪಳಿಸಿ ಬಿದ್ದರು. 'ಈಗ್ಲೆ ತಂದು ಬಿಡಬೇಕಾಗಿತ್ತು' ಎಂದು ಮಿಂಚ ಆತುರದಿಂದ ಕೇಳಿದಾಗ, 'ಇನ್ನೂ ಕೊಟ್ಟಿಲ್ಲ ತಡಿ, ಸಾರನ್ನೋದು ಗಮಗಮಗುಡ್ತಾ ಐತೆ. ಈಗ ಕೇಳಿ ತಂದು ಬಿಡ್ತೀನಿ ಈಗ್ಲೆ ರೊಟ್ಟಿ ತಿನ್ನ ಬ್ಯಾಡ್ರಿ. ಇದನ್ನು ಹೇಳಿ ಹೋಗೋಕೆ ಬಂದಿದ್ದೆ' ಎನ್ನುತ್ತಾ ಪಾಪಿ ಅಲ್ಲಿಂದ ಓಡಿದಳು. ಮನೆ ಮಂದಿಯೆಲ್ಲ ಸಾರಿನ ನಿರೀಕ್ಷೆಯಲ್ಲಿ ಕುಳಿತರು. ಕ್ಷಣ ಯುಗವಾಗುತ್ತಿತ್ತು. ಎಲ್ಲರ ದೃಷ್ಟಿ ಬಾಗಿಲ ಕಡೆಗೆ ಬಿತ್ತು. ಕೈಯ ತುತ್ತನ್ನು ಬಾಯಿ ಕರೆಯುತ್ತಿತ್ತು. ಸ್ವಲ್ಪ ಹೊತ್ತಿಗೆ ಪಾಪಿ ಬಂದಳು. ಆದರೆ ಬರೀ ಗೈಯಲ್ಲಿ ಬಂದದ್ದು ನೋಡಿ ಎಲ್ಲರಿಗೂ ನಿರಾಸೆಯಾಯಿತು. 'ಅಪ್ಪ ಜಲ್ದಿ ಬರಬೇಕಂತೆ. ಹುನುಮಣ್ಣ ಕರಕಂಡ ಬಾ' ಅಂತ ನನ್ನ ಕಳುಹಿಸಿದ್ದಾನೆ ಎಂದಾಗ ಮಗಳು ತರಬಹುದಾದ ಸಾರಿನಿಂದ ರೊಟ್ಟಿ ತಿನ್ನುವ ಹವಣಿಕೆಯಲ್ಲಿದ್ದ ಗುಂಡನಿಗೆ ಬೇಸರ ಜೊತೆಗೆ ಸಿಟ್ಟೂ ಬಂದಿತ್ತು. ಹರಕು ಟವೆಲ್ಲನ್ನು ಹೆಗಲಿಗೆ ಹಾಕಿಕೊಳ್ಳುತ್ತ ಭರಭರನೆ ಮಗಳನ್ನು ಹಿಂಬಾಲಿಸಿದ. ಶಾಂತಿ ದೀಪ ಆರಿಸಿ ಗುಡಿಸಿಲಿಂದ ಹೊರಬಂದಳು ಅವಳು ಬಾಗಿಲ ತಡಿಕೆ ಮುಚ್ಚುತ್ತಿರುವಾಗ ಹೆಗಲ ಮೇಲೆ ದಪ್ಪ ದಪ್ಪನೆಯ ಎರಡು ಮರದ ತುಂಡುಗಳನ್ನು ಹೊತ್ತ ಗುಂಡ ಅತ್ತಲಿಂದ ಭರಭರನೆ ಓಡಿಬಂದು 'ತಗಿತಗಿ ಜಲ್ದಿ' ಎಂದು ಪಿಸುಗುಟ್ಟಿದ. ಶಾಂತಿ 'ಇದ ಎಲ್ಲಿಂದ ತಂದೆ?' ಎಂದು ಕೇಳಿದಳು. ಗುಂಡ ಉತ್ತರಿಸುವ ಗೋಜಿಗೆ ಹೋಗದೆ ಅತ್ಯಂತ ಕಷ್ಟದಿಂದ ತುಂಡುಗಳನ್ನು ಒಳಗಡೆ ಸಾಗಿಸಿ 'ಕಳ್ರು, ಕಳ್ರು, ಎಲ್ಲಾ ಕಳ್ರು' ಎಂದು ಗೊಣಗಿದ. 'ಹೊಟ್ಟೆ ಹಸಿದ ಹೊತ್ನಾಗೆ ಎಂಥಾದ್ದಾರ ಸಣ್ಣ ಪುಟ್ಟ ಸಾಮಾನು ತರೋದು ಬಿಟ್ಟು ಕೊರ್‍ಡು ಹೊತ್ತು ತಂದಿದೀಯಲ್ಲ. ಯಾರ ಹೆಣ ಸುಡಾಕ ತಂದೆ?' ಎಂದಳು. 'ಹನುಮಣ್ಣ ಕಾರಲ್ಲಿ ಇಟ್ಕೊಂಡು ಬಂದ್ವನೆ – ಪೋಲಿಸ್ನೋರು ಬೆನ್ನು ಹತ್ತಿದ ಕೂಡ್ಲೆ ನನ್ನ ಕೈಗೆ ಕೊಟ್ಟು ಓಡಿದ್ದಾನೆ. ಗಂಧದ ಕೊರ್‍ಡಿವು' ಎಂದು ಹೊರ ನಡೆದ.

ಸ್ವಲ್ಪ ಹೊತ್ತಿಗೆ ಮಕ್ಕಳ ದಂಡು ಮನೆಗೆ ಬಂತು. ಎಲ್ಲರಿಗಿಂತ ಮುಂದಾಗಿ ಬರುತ್ತಿದ್ದ ಮಿಂಚನ ಕೈಯಲ್ಲಿ ಸಾರಿನ ಗಡಿಗೆ ಇತ್ತು. 'ಅಮ್ಮ ಸಾರು ತಂದಿದೀನಿ, ಉಣ್ಣಾಕಿಕ್ಕು ಬಾ' ಎಂದಾಗ ಶಾಂತಿಯ ಕಣ್ಣು ಹೊಳೆದವು. 'ಜಮಣತ್ತೆ ಕೊಟ್ಟು ಕಳುಹಿಸಿದಳಾ' ಎಂದು ಕೇಳಿದಳು. 'ಇಲ್ಲ

ಅವರೆಲ್ಲಾ ಕೊಟ್ಟಿಗೆ ಮನೆಯಾಗೆ ಸೇರ್ಕೊಂಡು ಬಾಡ ಬೇಸ್ತಾ ಇದ್ದಾರೆ. ಪಾಪಿನ ಕೇಳಿದ್ರೆ ಆಕೆ ಬರ್ಲಿ ತಡಿಯೋ ಅಂದ್ಲು. ಅದ್ಕೆ ನಾನೇ ಎತ್ಕೊಂಡ್ ಬಂದೆ' ಎಂದಾಗ 'ಆಮೇಲೆ ಬೈದ್ರೆ ಗೀದ್ರೆ ಹೆಂಗೋ ಮಗನೆ' ಎಂದು ಚಿಂತಿಸತೊಡಗಿದಳು. 'ಗಡಿಗೆಗೆ ಸಾರು ಸುರ್ಕೊ. ಅವರ ಗಡಿಗೆ ಅವರ ಮನೆಯಾಗ ಇಟ್ಟು ಬರ್ತೀನಿ' ಎಂದ ಮಿಂಚ. ಮಕ್ಕಳೆಲ್ಲ ಸಂಭ್ರಮದಿಂದ ಉಣ್ಣತೊಡಗಿದರು. ಮಕ್ಕಳು ಉಂಡು ಮಲಗಿದ ಮೇಲೆ ಗಂಡ ಮಗಳ ದಾರಿ ಕಾಯುತ್ತ ಶಾಂತಿ ಕುಳಿತಳು. ಅಷ್ಟು ಹೊತ್ತಿಗೆ ತೂರಾಡ್ಕೊಂಡು ಗುಂಡ ಬಂದ. ಹನುಮ ಕೊಟ್ಟ ಹನ್ನೆರಡಾಣೆನೂ ಹೊಟ್ಟೆಗಾಕ್ಕೊಂಡು ಬಂದಿದ್ದ. 'ಪೋಲಿಸ್ನೋರು ಬಂದಿದ್ರಂತಲ್ಲ. ಆ ಹನ್ಮನ್ನ ಹಿಡ್ಕಂಡು ಹೋದ್ರಾ?' ಎಂದು ವಿಚಾರಿಸಿದಳು. ಅದಕ್ಕೆ ಗುಂಡ ಹನುಮಂತನಂಥ ಸಾವ್ಕಾರನ್ನ ಎಲ್ಲಾರು ಪೋಲಿಸ್ನೋರು ಹಿಡಿತಾರೇನ್ಲೆ ಹುಚ್ಚಿ?' ಎಂದು ನಕ್ಕ. ಅಷ್ಟು ಹೊತ್ತಿಗೆ 'ಹೊ' ಎಂದು ಅಳುತ್ತಾ ಪಾಪಿ ಬಂದಳು. ಯಾಕೆ? ಏನಾತು?' ಎಂದು ವಿಚಾರಿಸಿದಾಗ 'ಜಮಣತ್ತೆನೂ ಮತ್ತು ಅವರ ಮನೆಯವರೆಲ್ಲರೂ ನನಗೆ ಸಿಕ್ಕ ಸಿಕ್ಕಂಗ್ ಹೊಡ್ದು ಹೊರಗೆ ದಬ್ಬಿದ್ರು. ನಾವು ಕಳ್ರಂತೆ. ಇವತ್ತು ಗಡಿಗೆ ಸಾರು ಕದ್ದೋಳು, ನಾಳೆ ಇನ್ನೊಂದು ಕದೀದೆ ಬಿಡ್ತಿಯಾ ನೀನು? ಅಂತ ಬೈದು ಅಟ್ಟಿದ್ರು. ನಾಳೆ ಊರೋರ್ನೆಲ್ಲಾ ಪಂಚಾಯ್ತಿ ಕರಸ್ತರಾಂತೆ. ನಮಿಗೆ ದಂಡ ಹಾಕಿಸ್ತಾರಂತೆ.' ಎಂದು ಹೇಳಿದಳು. ಅದನ್ನು ಕೇಳಿ ಶಾಂತಿ ಬೆವತು ನೀರಾದಳು. 'ಥೂ ಅವರ ದೊಡ್ಡಸ್ತಿಕೆಗೆ ನನ್ನ ಎಕ್ಕಡ ಹೊಡೆಯಾ ಕಳ್ರು ಯಾರಂತೆ? ನಾನಂತಾ? ದಂಡ ಯಾರು ಕೊಡಬೇಕೆಂತೆ? ಥೂ, ಥೂ' ಎಂದು ತೊದಲಿದ ಗುಂಡ.

ಮನೆ ಮಂದಿಯೆಲ್ಲಾ ಸೇರಿ ದುಡಿದ್ರೂ ಇಂಗದ ಹಸಿವಿನ ಗೋಳಾಟ ಗುಂಡನ ಸಂಸಾರದ್ದು. ಸಾಲ ಮಾಡಿ ತಿರುಪತಿ ತಿಮ್ಮಪ್ಪನ ದರ್ಶನ ಮಾಡಿದ್ರೂ ಸ್ಥಿತಿ ಮಾತ್ರ ಸುಧಾರಣೆಯಾಗದೆ, ಮಾಡಿದ ಸಾಲದ ಹೊರೆ ಮಾತ್ರ ತಲೆ ಮೇಲಿತ್ತು. ಹಸಿವೆಯಿಂದ ಕಂಗಾಲಗಿದ್ದ ಮಕ್ಕಳು ಚಡಪಡಿಸುತ್ತಿದ್ದವು. ರೊಟ್ಟಿ ಮೇಲೆ ಹಚ್ಕೊಂಡು ತಿನ್ನೋಕೆ ನಾಕು ಮೆಣಸಿನಕಾಯಿಗೂ ಗತಿ ಇರಲಿಲ್ಲ. ಜಮಣತ್ತೆ ಮನೆಯಲ್ಲಿ ಕೆಲಸ ಮಾಡ್ತಿದ್ದ ಪಾಪಿ ಬಂದು ಅವರ ಮನ್ಯಾಗೆ ಮೊಳ್ಕೆಸಾರು ಗಡ್ಗೆ ತುಂಬೈತೆ. ಅದನ್ನ ನಂಗೆ ಕೊಡ್ತಾರೆ ಎಂದು ಮನೆಗೆ ಬಂದು ಹೇಳಿದಾಗ ಎಲ್ಲರ ಬಾಯಲ್ಲಿ ನೀರೂರಿತು. ಆಸೆಗಣ್ಣಿಂದ ಹಸಿವನ್ನು ತಡ್ಕಂಡು ಕುಂತಿದ್ವು. ಹನುಮಣ್ಣ ಕಾರ್ನಲ್ಲಿ ಗಂಧದ ಕೊರಡನ್ನು ತರೋದನ್ನ ತಿಳಿದ ಪೋಲಿಸ್ನೋರು ಬೆನ್ನ ಹತ್ತಿ ಬಂದಿದ್ರು. ಅವರ ಕಣ್ಗೆ ಮಂಕು ಬೂದಿ ಎರಚಿ ಕದ್ದ ಗಂಧದ ಕೊರಡನ್ನು ಗುಂಡನ ಕೈಯಲ್ಲಿ ಹೊರ್ಸಿ ತಾನು ಬಚಾವಾಗಿದ್ದ. ಗಂಧದ ಕೊರಡು ಹೊತ್ತಿದ್ದಕ್ಕೆ ಗುಂಡನಿಗೆ ಹನ್ನೆರಡಾಣೆ ಕೊಟ್ಟು ತಾನು ಮಾತ್ರ ಸಾಚಾ ಎಂಬಂತೆ ತೋರುತ್ತಿದ್ದ. ಮೊಳ್ಕೆ ಹುರುಳಿ ಸಾರನ್ನ ಕೊಡ್ತೆನಂತಾ ಹೇಳಿ ಸತಾಯಿಸ್ದಾಗ ಮಿಂಚನೇ ಯಾರಿಗೂ ಕಾಣ್ದಂಗೆ ಎತ್ಕಂಡು ಬಂದು, ಸಾರಿನ ಗಡಿಗೆಯನ್ನು ಹಿಂದಿರುಗಿಸಬೇಕೆಂದು ಹೇಳುತ್ತಾನೆ. ಜಮಣಾಬಾಯಿ ಸಾರಿನ ಗಡಿಗೆ ಕಾಣದೇ ಇರುವುದಕ್ಕೆ ಪಾಪಿಯೇ ಕಾರಣ ಎಂದು ತಿಳಿದು ಎಲ್ರೂ ಸೇರಿ ದನಕ್ಕೆ ಬಡಿದಂಗೆ ಬಡಿದು ಹೊರಹಾಕಿದ್ದು ಈ ಸಮಾಜದ ಕ್ರೌರ್ಯಕ್ಕೆ ನಿದರ್ಶನವೇ ಸರಿ. ಗಂಧದ ಕೊರಡನ್ನ ಕದ್ದರೂ ಕಳ್ಳ ಎನಿಸಿಕೊಳ್ಳದವನು ಸಮಾಜದಲ್ಲಿ ಸಭ್ಯಸ್ಥನಂತೆ ಕಾಣುವುದು ಲೋಕದಲ್ಲಿ ಹಣವಂತರಿಗೆ ಮಾತ್ರ ಸ್ಥಾನಮಾನ ಎಲ್ಲ, ಹಣವಿಲ್ಲದವರು ಬಡವರು, ನಿರ್ಗತಿಕರು ಏನು ಮಾಡಿದರೂ ತಪ್ಪು. ಹೊಟ್ಟೆ ತುಂಬಿಸಿಕೊಳ್ಳೋಕೆ ಗಡಿಗೆ ಸಾರು ಕದ್ದಿದ್ದಕ್ಕೆ 'ಕಳ್ರು ಕಳ್ರು' ಎಂದು ನಿಂದಿಸಿ ಊರ ಪಂಚಾಯ್ತಿಗೆ

ಕರಸೋದು, ದಂಡ ಹಾಕೋದು ಯಾವ ನ್ಯಾಯ. ಒಂದು ಕಣ್ಣಿಗೆ ಬೆಣ್ಣೆ, ಇನ್ನೊಂದು ಕಣ್ಣಿಗೆ ಸುಣ್ಣ ಎಂಬಂತಾಯಿತು. ಗುಂಡನ ಸಂಸಾರದ ಹಸಿವು ಅಷ್ಟು ಸುಲಭವಾಗಿ ಪರಿಹಾರವಾಗುವಂತದ್ದಲ್ಲ. ಅದಕ್ಕೆ ಸಮಾಜವೂ ಅವಕಾಶವನ್ನೇ ಕೊಡದೇ ಇರೋದು ನಿಜಕ್ಕೂ ತಲೆತಗ್ಗಿಸುವಂತ ವಿಚಾರವೇ ಸರಿ. ಗುಂಡನ ಮನೆಯವರು ಕದ್ದದ್ದಾದರೂ ಏನು? ಚಿನ್ನ ಬೆಳ್ಳಿಯನ್ನೇ, ಹಣವನ್ನೇ ಅಥವಾ ಬೆಲೆ ಬಾಳುವುದನ್ನೇ! ಹಸಿವನ್ನು ನೀಗಿಸಕೊಳ್ಳಲು ಸಾರು ಕದ್ದಿದ್ದನ್ನೇ ದೊಡ್ಡದಾಗಿ ಬಿಂಬಿಸುವ ಜಮಣಾಬಾಯಿಯು ತನ್ನ ಮಗ ಹನುಮಣ್ಣ ಗಂಧದ ಕೊರಡನ್ನು ಕದ್ದು ತಂದದ್ದು ಕಣ್ಣಿಗೆ ಕಾಣುವುದೇ ಇಲ್ಲ. ಕದಿಯುವುದು ತಪ್ಪೇ ಆದರೂ, ಗುಂಡನ ಕುಟುಂಬದ ಹೀನಸ್ಥಿತಿಗೆ ಕಾರಣ ಯಾರು ಎಂಬುದನ್ನು ಶೋಧಿಸಬೇಕಾಗಿದೆ. ಧಾರ್ಮಿಕ, ಆರ್ಥಿಕ ಕಾರಣದಿಂದ ಬಡವರ ಬದುಕು ಶೋಚನೀಯವಾಗಿ ಬಿಟ್ಟಿದೆ. ಹಸಿವಿನ ಬೇನೆಯಿಂದ ಮರಗಟ್ಟಿ ಹೋಗುವಂತಾಗಿದೆ.

ತುಳಸಿ ವೇಣುಗೋಪಾಲ್‌ರವರ 'ಆಕಾಶ ಬಾಣ'

ಎಂಥ ಕಷ್ಟ ಕಾರ್ಪಣ್ಯಗಳ ಮಧ್ಯದಲ್ಲೂ ತಮ್ಮದೇ ಆದ ಆತ್ಮವಿಶ್ವಾಸ ಘನತೆ ಕುರಿತು ತುಳಸಿ ವೇಣುಗೋಪಾಲ್ ಅವರು ಅನೇಕ ಹೃದಯಸ್ಪರ್ಶಿ ಕತೆಗಳನ್ನು ಬರೆದಿದ್ದಾರೆ. ಅಂಥ ಪ್ರಾತಿನಿಧಿಕ ಕತೆಗಳಲ್ಲಿ 'ಆಕಾಶಬಾಣವೂ' ಒಂದು. ಬಡವರ ಬದುಕುವ ಆಸೆಯನ್ನು ವೈಭವೀಕರಿಸಿ ಓದುಗರನ್ನು ಭಾವುಕತೆಯಲ್ಲಿ ಅದ್ದಿಬಿಡುವುದು ಈ ಲೇಖಕಿಯ ಉದ್ದೇಶವಲ್ಲ. ತಮ್ಮ ಪಾತ್ರಗಳು ಬದುಕುತ್ತಿರುವ ವಿಶಾಲವಾದ, ಸಂಕೀರ್ಣವಾದ ಸಾಮಾಜಿಕ ಸಂದರ್ಭಗಳನ್ನೂ ಅವು ಈ ವ್ಯಕ್ತಿಗಳ ಬದುಕನ್ನು ನಿಯಂತ್ರಿಸುತ್ತಿರುವ ಬಗೆಯನ್ನು ಅವರ ಕತೆಗಳು ಕಾಣಿಸದೆ ಬಿಟ್ಟಿಲ್ಲ. ಆದರೆ ತುಳಸಿ ಅವರ ಕತೆಗಳಲ್ಲಿ ಒತ್ತು ಇರುವುದು ಬಡವರ ಕಷ್ಟಗಳ ಮೇಲಲ್ಲ. ಬಡವರ ಬದುಕುವ ಶಕ್ತಿಯ ಮೇಲೆ ಹೆಚ್ಚಿನ ಅವಧಾರಣೆ ಕಂಡುಬರುತ್ತದೆ. ಬಡವರನ್ನು ಕೇವಲ ಹಸಿದ ಹೊಟ್ಟೆಗಳಾಗಿ ನೋಡದೆ ,ಅವರಲ್ಲಿ ಸುಪ್ತವಾಗಿರುವ ಅಸಾಧಾರಣ ಪ್ರತಿಭೆಯನ್ನು, ಈ ಪ್ರತಿಭೆಗೆ ಸದ್ಯದ ಸಾಮಾಜಿಕ ವ್ಯವಸ್ಥೆಯಲ್ಲಿ ಅಂಥ ಮಾನ್ಯತೆ ಸಿಗದಿರುವ ದುರಂತವನ್ನು ತುಳಸಿ ವೇಣುಗೋಪಾಲ್ ಅವರ ಕತೆಯು ನಿರೂಪಿಸುತ್ತದೆಂದು ಟಿ.ಪಿ ಅಶೋಕ್‌ರವರು ಹೇಳಿರುವ ಮಾತನ್ನು ಇಲ್ಲಿ ನೆನಪಿಸಿಕೊಳ್ಳಬಹುದು.[೨೨] ಬಡತನ, ಹಸಿವು, ಶೋಷಣೆ, ದೌರ್ಜನ್ಯಗಳನ್ನು ಕುರಿತ ಬಹುಸಂಖ್ಯೆಯ ಮಾಮೂಲಿ ಸಾಮಾನ್ಯ ಕತೆಗಳಿಗೂ ತುಳಸಿಯವರ ಕತೆಗೂ ಇರುವ ಮುಖ್ಯ ವ್ಯತ್ಯಾಸವೆಂಬುದನ್ನು ಟಿ.ಪಿ ಅಶೋಕ್ ಸರಿಯಾಗಿಯೇ ಗುರುತಿಸಿದ್ದಾರೆ.[೪೮] ಘಟನೆಗಳನ್ನು ಕೇವಲ ಸರಳ ರೇಖಾತ್ಮವಾಗಿ ಪೇರಿಸಿಡುವುದಷ್ಟಕ್ಕೆ ತೃಪ್ತರಾಗದೆ ಒಂದು ಜೀವನ ಸಂದರ್ಭಗಳನ್ನು ಅದರ ಸೂಕ್ಷ್ಮ ವಿವರಗಳಲ್ಲಿ ನೇಯುತ್ತಾ ಹೋಗುವ ಈ ಲೇಖಕಿ ಭಾಷಾ ಬಳಕೆಯಲ್ಲೂ, ನಿರೂಪಣೆಯ ಲವಲವಿಕೆಯಲ್ಲೂ ಗಮನ ಸೆಳೆಯುತ್ತಾರೆ. ಮುಂಬಯಿಯ ಜೋಪಡಿ ಪಟ್ಟಿಗಳ ಪರಿಸರವನ್ನು ಅಲ್ಲಿ ಬದುಕುತ್ತಿರುವವರ ಜೀವನವನ್ನು ಭಾಷೆಯಲ್ಲಿ ಪುನರ್‌ಸೃಷ್ಟಿಸುವಲ್ಲಿ ಅವರು ಸಾಕಷ್ಟು ಯಶಸ್ವಿಯಾಗಿದ್ದಾರೆ.

'ಆಕಾಶಬಾಣ'ವೆಂದೇ ಕೊಳೆಗೇರಿಯ ಮಕ್ಕಳಲ್ಲಿ ಪ್ರಸಿದ್ಧನಾಗಿರುವ ಈ ಕತೆಯ ಬಚ್ಚೂಬಾಯಿ ವಾಸಿಸುತ್ತಿರುವುದು ಮುಂಬಾಯಿಯ ಕೋಂಡಸ್ಕರವಾಡಿ (ಪೂರ್ವ) ಯಲ್ಲಿ. ಪಶ್ಚಿಮದಲ್ಲಿರುವ ತರಲೆ ಮಂದಿಗೆ ಈ ಕೊಳೆಗೇರಿ ಪದ ಪ್ರಯೋಗ ಸುಳಿವು ಸಿಕ್ಕರೆ ಸಣ್ಣ

ರೀತಿಯ ಒಂದು ಗಲಭೆ, ದೊಂಬಿ ನಡೆಯುವುದು ಖಂಡಿತ. ಉತ್ತರ ಭಾರತೀಯರೇ ಹೆಚ್ಚಾಗಿರುವ ವಾಡಿಯ ಪೂರ್ವದ ಕೆಲ ಕತ್ತಲೆಗಲ್ಲಿಗಳಲ್ಲಿ ಒಂದೆರಡು ಹೆಣಗಳು, ಅರೆ ಸುಟ್ಟ ಜೋಪಡಿಗಳೊಳಗಿನ ಚಿಕ್ಕಳಿಕೆ ನಮ್ಮ ಎದೆಯನ್ನು ನಡುಗಿಸಬಹುದು. ವಾಡಿಯನ್ನು ಕೊಳೆಗೇರಿ ಮಾಡಿದ್ದು ಈ ಜನರು ಎಂದು ಒಬ್ಬ ಪುಢಾರಿ ವಾಡಿಯ ಮೈದಾನದಲ್ಲಿ ಆರ್ಭಟಿಸಿದ ನಂತರದ ಬೆಳವಣಿಗೆಯಿದು. ವಾಡಿಯ ಎದೆಯ ಮೇಲೆ ಶಸ್ತ್ರಚಿಕಿತ್ಸೆಯ ಗುರುತಿನಂತೆ ಹೆದ್ದಾರಿಯೊಂದು ಸಾಗಿ ಹೋಗಿದ್ದು ಅದರ ಎರಡು ಬದಿ ವಾಡಿ ಪಶ್ಚಿಮ, ವಾಡಿ ಪೂರ್ವವಾಗಿ ಬೆಳೆಯುತ್ತದೆ. ವರ್ಗ ಸಮಾಜವೊಂದು ಸೀಳಿಕೊಂಡಿರುವ ಪರಿಗೆ ಒಡ್ಡಿದ ಒಂದು ಅದ್ಭುತ ರೂಪಕ ಇದು. ತಮ್ಮ ಸಹಾನುಭೂತಿ ಯಾವ ಕಡೆಗಿದೆ ಎಂಬುದನ್ನು ಲೇಖಕಿ ಮರೆಮಾಚುವುದಿಲ್ಲ. ವಾಡಿ ಪೂರ್ವ, ವಾಡಿ ಪಶ್ಚಿಮ ಎನ್ನುವ ಪ್ರಯೋಗವೇ ಇರಲಿ. ಬಚ್ಚುಬಾಯಿಯಂತಹ ಬಡ ಮುಗ್ಧ ಜೀವಿಗಳು ನೆಮ್ಮದಿಯಿಂದ ಬದುಕು ಬಾಳಲಿ. ಈ ಸಹಾನುಭೂತಿಯು ಬಚ್ಚೂಬಾಯಿಯಂತಹ ಪ್ರಾತಿನಿಧಿಕ ಮತ್ತು ಅಪವಾದ ಎಂದು ಹೇಳಬಹುದಾದ ಪಾತ್ರ ಮಾದರಿಯನ್ನು ಕಡೆಯುವಲ್ಲಿ ಲೇಖಕಿಗೆ ಸೃಜನಶೀಲವಾಗಿ ಒದಗಿ ಬಂದಿದೆ. ಆದುದರಿಂದಲೇ ಜಗತ್ತಿನಲ್ಲಿಯೇ ಅಪರೂಪವೆನ್ನಬಹುದಾದ ಹೆಸರಿಲ್ಲದ ವೃತ್ತಿಯೊಂದನ್ನು ಬಚ್ಚೂ ಕೈಗೊತ್ತಿಗೊಂಡಿದ್ದಾನೆ ಎಂಬ ಅವನ ಅಮ್ಮನ ಉದ್ದೇಶವನ್ನು ಕೇಳಿಸಿಕೊಳ್ಳಲು ನಿರೂಪಕಿಗೆ ಸಾಧ್ಯವಾಗಿದೆ. ಆದರೆ ಈ ಉದ್ಗಾರದಲ್ಲಿ ಮೆಚ್ಚುಗೆಗಿಂತ ಆತಂಕವೇ ಹೆಚ್ಚಾಗಿದೆ ಎಂಬುದನ್ನು ಅವಳು ಗಮನಿಸಿದ್ದಾಳೆ. 'ಬೇಟಾ ಗಂಡಸಿಗೆ ಹೆಸರಿರುವ ಒಂದು ಉದ್ಯೋಗ ಬೇಕು. ನಿನ್ನ ಬಾಬಾಗೆ ಬಟ್ಟೆ ಗಿರಣಿಯಲ್ಲಿ ನೌಕರಿ ಎಂದು ನಮ್ಮ ಹಳ್ಳಿಜನ ಎದ್ದು ನಿಂತು ಮಾರ್ಯದೆ ಕೊಡುತ್ತಿದ್ದರು. ನೀನು ಕಿರಾಣಿ ದುಕಾನ್‌ನಲ್ಲೋ, ಫ್ಯಾಕ್ಟರಿಯಲ್ಲೋ ಮತ್ತು ಅದೆಂತದೋ ಮಾಲಾ ಎಂದು ಹೇಳುತ್ತಾರಲ್ಲ ಅಲ್ಲಿ ಸೇರಿಕೊಂಡರು ಸಾಕು ಎಂದು[೪೯] ಬಚ್ಚೂಬಾಯಿಯ ಅಮ್ಮ ನುಡಿಯುವಾಗ ಸದ್ಯದ ಸಾಮಾಜಿಕ ಆಶೋತ್ತರಗಳ ಒಂದು ಧ್ವನಿಯೇ ಆಕೆಯ ವರ್ಗ ಸಂದರ್ಭದಲ್ಲಿ ಕೇಳಿಬಂದ ಹಾಗೇ ಆಗುತ್ತದೆ.

ಹಳ್ಳಿಯಲ್ಲಿ ದನ ಮೇಯಿಸುವುದು, ಗದ್ದೆ ಮಾಡುವುದು ಇವುಗಳಿಗಿಂತ ಶಹರದ ಗಿರಣಿಗಳಲ್ಲಿ ದುಡಿಯುವುದು ಹೆಚ್ಚು ಗೌರವಯುತವಾದ, ಸುರಕ್ಷಿತವಾದ ಕೆಲಸ ಎಂದು ಅನೇಕ ಬಡವರಿಗೆ ಅನ್ನಿಸುವ ಸಂಗತಿಯೂ ಕತೆಯಲ್ಲಿ ದಾಖಲಾಗಿದೆ. ಗಿರಣಿ ಮುಚ್ಚಿ ಬಚ್ಚೂಬಾಬಾ ಕೆಲಸ ಕಳೆದುಕೊಂಡರೂ ಹರತಾಳ, ಕೋರ್ಟು, ಕೇಸು ಎಲ್ಲ ಮುಗಿದು ಗಿರಣಿ ಪ್ರಾರಂಭವಾಗುವುದೆಂದು, ಅಲ್ಲಿ ತನ್ನ ಮಗನಿಗೂ ಒಂದು ಕೆಲಸ ಸಿಕ್ಕಬಹುದುದೆಂದೂ ಕನಸು ಕಾಣುತ್ತಾನೆ. ಅವನೊಬ್ಬ ಸಾಮಾನ್ಯ ಬಡ ಕಾರ್ಮಿಕ. ಆದರೆ ಅವನು ಗಿರಣಿಯನ್ನು ಪರಿಭಾವಿಸಿಕೊಳ್ಳುವ ಪರಿ ನಮ್ಮನ್ನು ಬೆರಗುಗೊಳಿಸುವಂತಿದೆ. 'ಬಚ್ಚೂ ಕಿವಿಗೊಟ್ಟು ಕೇಳು, ಅಲ್ಲಿ ನಾನು ನಿಂತ ಜಾಗದಲ್ಲಿ ನೀನು ನಿಲ್ಲುತ್ತೀ. ನನ್ನ ಕೈಗೆ ಮಣಿಯುತ್ತಿದ್ದ ಆ ರಾಕ್ಷಸ ಯಂತ್ರವನ್ನು ನೀನು ನಿಲ್ಲುತ್ತಿ. ನನ್ನ ಕೈಗೆ ಮಣಿಯುತ್ತಿದ್ದ ಆ ರಾಕ್ಷಸ ಯಂತ್ರವನ್ನು ನೀನು ಮಣಿಸುತ್ತಿ. ನಾವು ಯೋಧರು ಆಹಾ, ಎಂಥ ರಣಾಂಗಣ, ಟಕ್ ಟಕಾ ಟಕ್ಕ್, ಕುದುರೆ ಸಾಲು ನೋಡು ಸೈನಿಕರನ್ನು. ರಥಗಳನ್ನು ನೋಡು. ಹೆದರಬೇಡ. ಮಗನೇ ಕಾಕನ ಕೈಯನ್ನು ಯಂತ್ರ ತಿಂದು ಹಾಕಿತು. ಥಾನು, ಥಾನು ಬಿಳಿ ಬಟ್ಟೆಗೆ ನೆತ್ತರ ಹೋಳಿ, ನಾನು ಹೆದರಲಿಲ್ಲ. ತಲೆ ಬಿದ್ದರೂ ನಾನು ನಿಂತೇ ಇರುವವ.[೫೦] ಗಿರಣಿಯ, ಯಂತ್ರಗಳ, ಶಹರದ ಆಕರ್ಷಣೆ ಅವುಗಳನ್ನು ನಿಭಾಯಿಸಬಲ್ಲೆನೆಂಬ ಆತ್ಮವಿಶ್ವಾಸ (ಅದೂ ಇಲ್ಲದಿದ್ದರೆ ಹಸಿದ ಹೊಟ್ಟೆಗಳನ್ನು ಹಾಗೂ ತನ್ನ

ಹೊಟ್ಟೆಯನ್ನು ತುಂಬಿಸುವುದಾದರೂ ಹೇಗೆ) ನಗರದ ಜೀವನ ಕ್ರಮದಲ್ಲೆ ಅಂತರ್ಗತವಾಗಿರುವ ಹಿಂಸೆ, ಕ್ರೌರ್ಯ, ಅಪಾಯ ಎಲ್ಲವನ್ನೂ ಇಡಿಯಾಗಿ, ಸಮಸ್ಯಾತ್ಮಕವಾಗಿ ನೋಡುವ ಒಂದು ಕ್ರಮ ಬಚ್ಚೂಬಾಬಾನ ಮಾತುಗಳಲ್ಲಿ ಕಂಡುಬರುವಂತಿದೆ. ಆದರೆ ಬಚ್ಚೂಗೆ ಇದು ರೂಢಿಗತ, ಯಾಂತ್ರಿಕ, ನೀರಸ ಕೆಲಸ. ಅವನು ಆಕರ್ಷಿತನಾಗುವುದು. ಹಳ್ಳಿಯಿಂದ ಬಂದು ಶಹರದಲ್ಲಿ ಜೀವನವನ್ನು ರೂಢಿಸಿಕೊಂಡವರಿಂದ. ಆದುದರಿಂದಲೇ ಬಚ್ಚೂ ಎಲ್ಲೂ ನಾಲ್ಕು ದಿನಗಳಿಂದ ಹೆಚ್ಚು ದಿನ ಕೆಲಸಕ್ಕೆ ಹೋದವನಲ್ಲ. ಅವನು ಹೊಸ ಅನುಭವಗಳನ್ನು, ಹೊಸ ಕೆಲಸಗಳನ್ನು ಹುಡುಕಿಕೊಂಡು ಗಲ್ಲಿಗಲ್ಲಿ ಸುತ್ತುತ್ತಾ ತನ್ನ ಮನೆಯವರ ದುಗುಡ ಆತಂಕಗಳಿಗೆ ಕಾರಣನಾಗುತ್ತಾನೆ. ಕೊನೆಗೆ ಅವನಿಗೊಬ್ಬ ಗುರು ಸಿಗುತ್ತಾನೆ. ಅವನು ತಾನ್ಯಾ. ಮಕ್ಕಳ ಪಾಲಿಗೆ ಅವನು ಕಿಂದರಿಜೋಗಿ. ಹೆಗಲಿಗೆ ಹಾಕಿಕೊಂಡ ಜೋಳಿಗೆಯಿಂದ ಪಟಾಕಿ ಸರಗಳನ್ನು ತೆಗೆದು ಅಚ್ಚುಕಟ್ಟಾಗಿ ಒಂದಕ್ಕೊಂದು ಹೆಣೆದು ರಸ್ತೆಯುದ್ದದ ಮಾಲೆ ತಯಾರಿಸುವುದನ್ನು ಮಕ್ಕಳು ಬೆರಗಿನಿಂದ ನೋಡುತ್ತಿದ್ದರು. ಆಕಾಶಬಾಣವನ್ನು ಕೈಯಲ್ಲಿ ಹಿಡಿದು ಸೇದುವ ಬೀಡಿಯಿಂದಲೇ ಬತ್ತಿಗೆ ಕಿಡಿ ಹಚ್ಚಿ ಬಿಡುವ, ಅವನ ಪೌರುಷಕ್ಕೆ ಚಪ್ಪಾಳೆ ತಟ್ಟುತ್ತಿದ್ದರು. ಪಟಾಕಿಯ ಬೆಳಕು, ಶಬ್ದದ ಗಮ್ಮತ್ತಿನ ಮಧ್ಯೆ ಸೊಂಟಕ್ಕೆ ಕೈ ಇರಿಸಿ ನಿಲ್ಲುವ ತಾನ್ಯ ಮಕ್ಕಳಿಗೆ ಅಸಾಮಾನ್ಯನಂತೆ ಕಾಣುತ್ತಿದ್ದ. ಮೊದಮೊದಲು ಹೆದ್ದಾರಿಯ ಪಕ್ಕದ ಗಲ್ಲಿಗಳಲ್ಲಿ ಆಮಂತ್ರಣವಿಲ್ಲದೆ ಸ್ವತಃ ಹೋಗಿ ಪಟಾಕಿ ಸುಡುವ ಜವಾಬ್ದಾರಿ ಹೊತ್ತುಕೊಳ್ಳುತ್ತಿದ್ದ ತಾನ್ಯ ಕ್ರಮೇಣ ತನ್ನದೇ ಆದ ಪ್ರತಿಷ್ಠೆಗಳಿಸಿಕೊಳ್ಳುತ್ತಾನೆ.. ತನ್ನ ಬಾಟಲಿಗಾಗುವಷ್ಟು ಹಣವನ್ನು ಕಾಡಿಬೇಡಿ ಪಡೆಯುತ್ತಿದ್ದ. ತಾನ್ಯನನ್ನು ಈಗ ಆಯೋಜಕರು ತಾವೇ ಹುಡುಕಿಕೊಂಡು ಬರಲಾರಂಭಿಸುತ್ತಾರೆ. ಗಣಪತಿ, ನವರಾತ್ರಿ ಉತ್ಸವಗಳಲ್ಲಿ ಮಾತ್ರವಲ್ಲದೆ ಮದುವೆ ಸಮಾರಂಭಗಳಿಗೆ, ಸಾರ್ವಜನಿಕ ಸಭೆ-ಉತ್ಸವಗಳಿಗೆ ಅವನಿಗೆ ಪಟಾಕಿ ಸುಡುವ ಕಾಂಟ್ರಕ್ಟ್ ಕೊಡಲಾರಂಭಿಸುತ್ತಾರೆ. ಪ್ರತಿಷ್ಠೆಯ ಸಂಕೇತದಲ್ಲಿ ಆತೀಷ್‌ಬಾಜಿ ಕೂಡ ಸೇರಿಕೊಂಡು ಬಿರುಸುಬಾಣಗಳಿಲ್ಲದ ಸಮಾರಂಭಗಳು ಸಪ್ಪೆ ಎನಿಸಿಕೊಳ್ಳ ತೊಡಗಿದ ಮೇಲೆ ತಾನ್ಯನನ್ನು ವಿಚಾರಿಸಿಕೊಂಡು ಆತನ ಬಾಗಿಲಿಗೆ ಜನ ಬರುತ್ತಿದ್ದರು. ಈ ಸುಭಿಕ್ಷ ಕಾಲದಲ್ಲಿ ಬಚ್ಚು ತಾನ್ಯನ ಶಿಷ್ಯನಾಗುತ್ತಾನೆ. ಶಿಷ್ಯ ವೃತ್ತಿ ಫಲಿಸಿ ಪಟಾಕಿ ಸುಡುವ ಕಾಯಕದಲ್ಲಿ ಅವನೂ ಪರಿಣಿತನಾಗುತ್ತಾನೆ. ಅವನ ಕೈಯಲ್ಲೂ ಹಣ ಹರಿದಾಡಲಾರಂಭಿಸುತ್ತದೆ. ತಾನ್ಯ ತೀರಿಕೊಂಡ ಮೇಲೆ ಬಚ್ಚೂಗೆ ಕಾಂಟ್ರ್ಯಾಕ್ಟ್ ಸಿಗತೊಡಗುತ್ತದೆ. ಬಚ್ಚಾ ಈಗ ಬಚ್ಚೂಬಾಯಿ ಯಾಗಿ ತನ್ನ ಸುತ್ತಲ ಸಮಾಜದಲ್ಲಿ ಗುರುತಿಸಲ್ಪಡುತ್ತಾನೆ.

ಬಚ್ಚೂನ ವೃತ್ತಿಯಿಂದ, ಅದು ತರುತ್ತಿದ್ದ ಗಳಿಕೆಯಿಂದ ಅವನ ಆರ್ಥಿಕ ಪರಿಸ್ಥಿತಿಯು ಏರುಮುಖದಲ್ಲಿದ್ದರೂ ಅವನ ಮೂಲ ಹಳ್ಳಿಯವರ ಕಣ್ಣಿನಲ್ಲಿ ಅವನ ಅಂತಸ್ತು ಕೆಳಗಿಳಿಯಲಾರಂಭಿಸಿದ್ದು ಇಡೀ ಬೆಳವಣಿಗೆಯನ್ನು ಸಮಸ್ಯಾತ್ಮಕವಾಗಿಸುತ್ತದೆ. ದೊಡ್ಡ ನೋಟುಗಳು ಅವನ ಜೇಬು ತುಂಬತೊಡಗಿ ಕ್ರಮೇಣ ಅದು ಅವನ ಅಮ್ಮಾಜಿಯ ಉಳಿತಾಯ ಖಾತೆಯಲ್ಲೂ ಜಮೆಯಾಗತೊಡಗಿ ಅವಳು ತನ್ನ ಬಚ್ಚಾ ಒಳ್ಳೆ ಕಾಸು ಸಂಪಾದಿಸುತ್ತಿದ್ದಾನೆ ಎಂದು ಹೆಮ್ಮೆಯಿಂದ, ಖುಶಿಯಿಂದ ಎಲ್ಲರಲ್ಲಿ ಹೇಳಿಕೊಂಡು ತಿರುಗುತ್ತಿರುತ್ತಾಳೆ. ಈಗ ಬಚ್ಚೂನ ಕೈಗೂ ಒಂದು ಮೊಬೈಲು ಫೋನು ಬಂದಿದೆ. ನಾನು ಎಂಟರ್‌ಟೈನ್ ಮ್ಯಾನೇಜರ್ ಎಂದು ಹೆಸರನ್ನು ಕೊಡುತ್ತಾನೆ. ವಾಡಿ 'ಪೂ' ಬಿಟ್ಟು ಪಶ್ಚಿಮದಲ್ಲಿ ಖೋಲಿಯೊಂದನ್ನು ಹಿಡಿದರೆ ಅವನ ಸಾಮಾಜಿಕ ಅಂತಸ್ತು ಮೇಲೇರುತ್ತದೆ ಎಂಬ ಐಡಿಯಾಗಳು ಬರುತ್ತದೆ. ಅದು

ಆದರೆ ಬಚ್ಚೂ ವಾಡಿ ಪೂರ್ವದಲ್ಲಿ ಎಂದು ಹೊಸ ಖೋಲಿಗಳನ್ನು ಮೂವತ್ತುಸಾವಿರ ರೂಪಾಯಿಗಳಿಗೆ ಡಿಸ್ಟ್ರೆಸ್ ಸೇಲ್‌ನಲ್ಲಿ ಖರೀದಿಸಿ ಅವುಗಳನ್ನು ಕೂಡಿಸಿ ಅದನ್ನು ಒನ್‌ಬಿಎಚ್.ಕೆ ಎಂದು ಕರೆಯಲಾರಂಭಿಸುತ್ತಾನೆ. ಇದು ಅವನ ಅಮ್ಮನ ದೃಷ್ಟಿಯಲ್ಲಿ ಹೆಡ್ಡತನ. ಏಕೆಂದರೆ ಕುಟುಂಬದ ದುಡ್ಡು ಪೋಲಾಗುತ್ತದೆ. ಹಾಗೆ ಈ ಒನ್‌ಬಿಎಚ್‌ಕೆ.ಯಲ್ಲೂ ಗಲ್ಲಿಯ ಕೊನೆಯಲ್ಲಿರುವ ಸಂಡಾಸಿನ ಬಾಗಿಲು ತೆರೆದಾಗ ಓಡಬೇಕಾಗಿ ಬರುವುದು ತಪ್ಪಲಿಲ್ಲ. ಅದೇನೆ ಇದ್ದರೂ ಬಚ್ಚೂನ ಅಂತಸ್ತು ಮೇಲೇರುತ್ತಿದ್ದಂತೆ ಅವನ ಭಾಷಾ ಪ್ರಪಂಚದಲ್ಲಿ ಇಂಗ್ಲಿಷ್ ಪದಗಳೂ ಕಾಣಿಸಿಕೊಳ್ಳಲಾರಂಭಿಸುವುದು. ನಿರೂಪಕಿಯ ಗಮನವನ್ನು ತಪ್ಪಿಸಿಕೊಳ್ಳುವುದಿಲ್ಲ. ಬಚ್ಚೂನೆ ಅಮ್ಮ ಬಂಬಾಯಿ ಪೋರಿ ಬೇಡ ಎಂದು ಹೆಣ್ಣು ಹುಡುಕಲು ತನ್ನ ಮೂಲ ಊರಿಗೆ ಹೋದಾಗ ಅಲ್ಲಿಯ ಅಂಗುಟಾಛಾಪ್‌ಗಳು ಕೂಡ ಅವಳನ್ನು ಮೂದಲಿಸತೊಡಗುತ್ತಾರೆ. ಬೆಹೆನ್‌ಜಿ ಇದೆಂತಹ ನೌಕರಿ, ಶಾದಿ ಭಾರತ್, ಮೇಲಾಗಳಲ್ಲಿ ನಾವು ಪಟಾಕಿ ಸುಡುತ್ತೇವೆ ಎಂದು ನಗುತ್ತಾರೆ. ಇದರಿಂದ ಅವಳಿಗೆ ಅವಮಾನವಾಗುತ್ತದೆ. ಆದರೆ ಈ ಕಿರುಪ್ರಸಂಗದಲ್ಲಿ ಲೇಖಕಿ ಎರಡು ಜೀವನ ಕ್ರಮಗಳ, ಎರಡು ಯೋಚನಾಕ್ರಮಗಳ ನಡುವಣ ವ್ಯತ್ಯಾಸವನ್ನು ಲಘುದಾಟಿಯಲ್ಲಿ ಹೊಳೆಯಿಸಿ ಬಿಡುತ್ತಾರೆ.

ಈ ದ್ವಂದ್ವ ಸ್ವತಃ ಬಚ್ಚೂನಲ್ಲಿಯೂ ಇದೆ. ಹಳ್ಳಿ ಹಳ್ಳಿಯ ತಲೆಮಾರುಗಳ ರೈತಾಪಿ ಕೆಲಸಬಿಟ್ಟು ನಗರಕ್ಕೆ ಬಂದು ಅಲ್ಲಿಯ ಕಾರ್ಖಾನೆಗಳಲ್ಲಿ ಕಾರ್ಮಿಕರಾಗುವುದು ಅವನ ಹಳ್ಳಿಯವರಿಗೆ ಗೌರವಾನ್ವಿತವಾದ ಕೆಲಸ. ಅಂದರೆ ಕುಟುಂಬದ ಪರಂಪರಾಗತ ವೃತ್ತಿಯನ್ನು ಬಿಟ್ಟು ಬೇರೆ ವೃತ್ತಿಗಳನ್ನು ಆಯ್ಕೆ ಮಾಡಿಕೊಳ್ಳುವುದು ಅವರಲ್ಲಿ ಅಂಥ ಆತಂಕ ವಿರೋಧಗಳನ್ನು ಹುಟ್ಟಿಸುವುದಿಲ್ಲ. ಆದರೆ ಬಚ್ಚೂ ತನ್ನ ಅಪ್ಪನ ವೃತ್ತಿಯನ್ನು ಬಿಟ್ಟು ಅಸಂಪ್ರದಾಯಕವಾದ ಮತ್ತೊಂದು ವೃತ್ತಿಯನ್ನು ಆರಿಸಿಕೊಂಡಾಗ ಅದೇ ಜನ ಅವನನ್ನು ಮೂದಲಿಸುತ್ತಾರೆ. ಬಚ್ಚೂಗೆ ಒಂದು ನಿಟ್ಟಿನಲ್ಲಿ ತನ್ನ ಅಪ್ಪನ ಕನಸಿನಂತೆ ಗಿರಿಣಿ ಪುನಾರಾಂಭಗೊಳ್ಳಲಿ ಎಂಬ ಆಸೆಯಿದೆ. ಆದರೆ ಹಾಗೇನಾದರೂ ಅದು ಮತ್ತೆ ಪ್ರಾರಂಭವಾದರೆ ತಾನು ಪಟಾಕಿ ಸುಡುವುದನ್ನು ಬಿಟ್ಟು ಗಿರಣಿ ಕಾರ್ಮಿಕನಾಗುತ್ತೇನೆ ಎಂಬುದರ ಬಗ್ಗೆ ಅವನಿಗೆ ಭರವಸೆಯಿಲ್ಲ. ಅಂದರೆ ಅವನೂ ಆಯ್ಕೆಯ ಗೊಂದಲದಲ್ಲಿ ಸಿಕ್ಕಿಬಿದ್ದಿದ್ದಾನೆ. ಆದುದರಿಂದಲೇ ಯಾವ ರಾಜಕಾರಣಿಯನ್ನು ಸಂತೃಪ್ತಗೊಳಿಸಲು ತಾನು ಆಕಾಶಬಾಣ ಹಾರಿಸಬೇಕಾಗಿದೆಯೋ ಆ ಧುರೀಣನು ಹಾಳು ಬಿದ್ದಿರುವ ಆ ಮಿಲ್ ಜಾಗದಲ್ಲಿ ಬಹುಮಹಡಿಯ ಕಟ್ಟಡಗಳು, ಮಾಲ್‌ಗಳು, ಮಲ್ಟಿಪ್ಲೆಕ್ಸ್‌ಗಳು ಬರಲಿವೆ. ಆಲ್ಲಿ ಮಲ್ಟಿ ನೇಶನಲ್ ಎಂದು ಭಾಷಣ ಆರಂಭಿಸುತ್ತಿದ್ದಂತೆ ದಿಗ್ಭ್ರಾಂತನಾಗುತ್ತಾನೆ. ತಾನೆ ಸ್ವತಃ ಕೆಲಸ ಮಾಡಲು ಇಚ್ಛಿಸದ ಆದರೆ ತನ್ನ ಅಪ್ಪನೂ ಅವನಂಥವರೂ ದುಡಿದು ಜೀವನ ಸಾಗಿಸಿ ಹೊಟ್ಟೆ ತುಂಬಿಸಿಕೊಳ್ಳಬಹುದಾದ ಒಂದು ಅವಕಾಶವು ಹೊಸ ರಾಜಕೀಯ ಮತ್ತು ಅರ್ಥವ್ಯವಸ್ಥೆಯಲ್ಲಿ ಧ್ವಂಸಗೊಳ್ಳುವ ಸಾಧ್ಯತೆಯಿಂದ ಬಚ್ಚೂ ಹತಾಶನಾಗುವಲ್ಲಿ ಒಂದು ವರ್ಗದ ತಳಮಳಗಳೇ ಧ್ವನಿತವಾಗುವಂತಿದೆ. ರಾಜಕಾರಣಿಗಳು, ಧನಿಕರು ದುಡಿಯುವ ಕೈಗೆ ಕೆಲಸ ನೀಡುವ ಯೋಜನೆಯನ್ನು ಕೈಗೊಳ್ಳದೆ ಕೇವಲ ಹಣ ಮಾಡುವ ಸಂಸ್ಥೆಗಳನ್ನು ಆರಂಭಿಸುವುದು ಆರ್ಥಿಕತೆಯ ಅಸಮಾನತೆಗೆ ಕಾರಣವಾಗುತ್ತದೆ.

ಮಿತ್ರಾ ವೆಂಕಟ್ರಾಜ್‌ರವರ 'ನಾಗಮ್ಮನ ಮನೆಯ ಸಣ್ಣಗೇಟು'

ಮಿತ್ರಾ ವೆಂಕಟ್ರಾಜ್‌ರವರ ನಾಗಮ್ಮನ ಮನೆಯ ಸಣ್ಣ ಗೇಟು – ಕಥೆಯಲ್ಲಿ ನಾಗಮ್ಮನ ಬದುಕಿನ ಬವಣೆಯ ಚಿತ್ರಣವಿದೆ. ಮನೆ-ಮಕ್ಕಳು ಸಂಸಾರ ಎಂದು ಬದುಕಿನುದ್ದಕ್ಕೂ ಕಷ್ಟಪಟ್ಟು ಜೀವನ ಸಾಗಿಸಿದ ಮಹಿಳೆಯರ ಚಿತ್ರಣವಿದೆ. ಒಂದು ಕಡೆ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ನಲುಗಿದ್ದಷ್ಟೇ ಅಲ್ಲದೇ ದುಡಿಮೆಯನ್ನು ಮಾಡದೇ ಖಾಲಿ ಕೂರುವ ಗಂಡನನ್ನು ಕಟ್ಟಿಕೊಂಡು ಹಸಿವು-ಬಡತನವನ್ನು ಅನುಭವಿಸಿ ಏಳು ಮಕ್ಕಳ ಸಂಸಾರವನ್ನು ಹೇಗೆ ಸಾಗಿಸಿದೆನೆಂಬುದೇ ನಾಗಮ್ಮನಿಗೆ ಆಶ್ಚರ್ಯವೆನಿಸುತ್ತಿತ್ತು. ಆಶ್ಚರ್ಯಕ್ಕಿಂತ ಹೆಚ್ಚು ಸಿಟ್ಟು ಬರುತ್ತಿತ್ತು. ಗಂಜಿಯಿಲ್ಲ ಎಂಬಂಥ ಪರಿಸ್ಥಿತಿ ಮನೆಯಲ್ಲಿದ್ದರೂ ಏನಿದೆ, ಏನಿಲ್ಲ ಎಂಬುದರ ಪರಿವೆಯಿಲ್ಲದೇ (ಜವಾಬ್ದಾರಿ) ಓಡಾಡುವ ಗಂಡ, ಶಿಕ್ಷಣವಾಗಲೀ, ಆರ್ಥಿಕ ಬಲವಾಗಲಿ ಇಲ್ಲದಿದ್ದಾಗ ಹೆಣ್ಣಿನ ಬದುಕು ಬರ್ಬರವಾಗುತ್ತದೆ. 'ವಿಷ ತೆಕಂಬ ಅಂದ್ರೂ ನಮ್ಮದೇ ದುಡ್ಡು ಇದ್ದಿತ್ತ? ಎನ್ನುವಲ್ಲಿ ಈ ವ್ಯವಸ್ಥೆ ಸಾಯಲು ಬಿಡುವುದಿಲ್ಲ. ಬದುಕಲು ಬಿಡುವುದಿಲ್ಲ ಎಂಬುದು ತಿಳಿಯುತ್ತದೆ.

ನಾಗಮ್ಮನದು ಗ್ರಾಮೀಣ ಹೆಣ್ಣುಮಕ್ಕಳ ಪಾಲಿಗೆ ಸಹಜವಾಗಿ ಒದಗುವಂತಹ ಬಹಳ ಸಂಘರ್ಷಮಯವಾದ ಬದುಕು. "ನಮ್ಮನ್ನೆಲ್ಲಾ ಏನು ಗಂಡ ಸುಪ್ಪತ್ತಿಗೆಯೊಳಗಿಟ್ಟ್ ಸಾಕ್ಲಿಲ್ಲೇ" ಎನ್ನುತ್ತಾ "ನಾನು ಪಟ್ಟ ಕಷ್ಟಕ್ಕೆ ಬೇರೆ ಯಾವಳಾದ್ರೂ ಆಯಿದ್ರೆ ಹೊಳೆ ಬಾವಿ ಕಾಣ್ಕಿತ್ತ. ಆದ್ರೆ ಒಂದಿನ ಒಬ್ರಿಗೆ ಕೈ ಚಾಚೂಕೆ ಹೋಗ್ಲಿಲ್ಲ ಕಾಣಿ" ಎನ್ನುವ ಸ್ವಾಭಿಮಾನಿ.

ಸ್ಥಿತಿವಂತ ಮನೆಯಲ್ಲಿ ಹುಟ್ಟಿದ ನಾಗಮ್ಮ ಊರೂರು ಅಲೆಯುವ ನಿರುದ್ಯೋಗಿ ಗಂಡನ ನೆರವಿಲ್ಲದೆ, ಆತನ ಪ್ರೀತಿಯಿಲ್ಲದೆ ದಿನ ರಾತ್ರಿ ಒಂದು ಮಾಡಿ ಹೆತ್ತ ಮಕ್ಕಳನ್ನು ದಡದಾಟಿಸಿದ ಗಟ್ಟಿಗಿತ್ತಿ. ತನ್ನ ಸ್ವಂತಿಕೆಯನ್ನು ಕಸಿದು ತನ್ನನ್ನು ತಾನೇ ಅಲ್ಲವಾಗಿಸಿದ ತನ್ನದೊಂದು ಜೀವನವೇ ಎಂದು ಸೋಜಿಗಪಟ್ಟ ಸ್ಥಿತಿ ತಲುಪಿದ ನಾಗಮ್ಮ ತನ್ನ ಮಗ ಮನೆ ಮಾಡಿ ಕರೆದಾಗ ಬೆಳಕಿನ ಕಿರಣ ಕಂಡಂತಾಗುತ್ತದೆ. ಹಸಿವು ಮತ್ತು ಬಡತನದಿಂದ ಪಾರಾದೆ ಎಂದುಕೊಳ್ಳುತ್ತಾಳೆ. ಆರ್ಥಿಕ ಪರಿಸ್ಥಿತಿ ಹದಗೆಟ್ಟಷ್ಟು ಬಡವರ ಬದುಕು ಶೋಚನೀಯವಾಗುತ್ತದೆ. ಆದರೆ ಇದೆಲ್ಲವನ್ನು ಮೀರಿ ಸ್ವಾಭಿಮಾನದಿಂದ ಬದುಕುವ, ಮಕ್ಕಳನ್ನು ದಡ ದಾಟಿಸುವ ನಾಗಮ್ಮ ನಿಜಕ್ಕೂ ಗಟ್ಟಿಗಿತ್ತಿಯಾಗಿ ನಿಲ್ಲುತ್ತಾಳೆ.

ಎಚ್. ನಾಗವೇಣಿಯವರ 'ಇನಾಮು'

ಎಚ್. ನಾಗವೇಣಿಯವರ ಕಥೆಯಲ್ಲಿ ತುಂಗಳ ಮಗನಾದ ಗಂಗಯ್ಯ ಕಲಿಕೆಯಲ್ಲಿ ಬರೆಯುವಿಕೆಯಲ್ಲಿ ಮುಂದೆ ಇದ್ದ ಕಾರಣ ಆತನಿಗೆ ಕಲಿಸುವ ರಂಗಮಾಸ್ತ್ರು ಬಹುಮಾನವಾಗಿ ಪುಸ್ತಕಗಳನ್ನು ಕೊಡುತ್ತಿದ್ದರು. ಈ ಪುಸ್ತಕ ಇನಾಮಿಗೆ ಆತನ ತಾಯಿ ತುಂಬಾ ವಿರೋಧ ವ್ಯಕ್ತಪಡಿಸುತ್ತಾಳೆ. ಅದಕ್ಕೆ ಕಾರಣ ಅವಳ ಹಸಿವು, ಬಡತನ, ಅಜ್ಞಾನ, ಅನಕ್ಷರತೆಗಳೇ ಕಾರಣ. ಮಗ ಓದಲೆಂಬ ಆಸೆ ಇದೆ. ಆದರೆ ಪುಸ್ತಕ ಮಾತ್ರ ಇನಾಮಾಗಿ ಬೇಡಿ ಎಂಬುದು ತುಂಗಳ ಧೋರಣೆಯಾಗಿತ್ತು. ಈ ಕಥೆಯಲ್ಲಿ ಕೆಳವರ್ಗದವರಿಗೆ ಶಿಕ್ಷಣದ ಅಗತ್ಯದ ಬಗ್ಗೆ ಹೇಳುತ್ತ ಬಡತನ ಅವರನ್ನು ಯಾವ ಸ್ಥಿತಿಗೆ ತಳ್ಳುತ್ತದೆ ಎಂಬುದನ್ನು ಮನಗಾಣಬಹುದು. ಇನಾಮು ಹಣದ

ರೂಪದಲ್ಲಾದರೂ ಇದ್ದಿದ್ದರೆ ಹೊಟ್ಟೆಗೆ ಬೇಕಾದದ್ದನ್ನು ಕೊಂಡುತಂದು ಹಸಿವನ್ನು ಇಂಗಿಸಿಕೊಳ್ಳಬಹುದಿತ್ತಲ್ಲ ಎಂದು ತುಂಗಮ್ಮ ಯೋಚನೆ ಮಾಡುವುದರಲ್ಲಿ ಅರ್ಥವಿದೆ.

ಗಂಗಾ ಪಾದೇಕಲ್‌ರವರ 'ಮೂರಾಬಟ್ಟೆ'

ಮೂರಾಬಟ್ಟೆ-ಶ್ರೀಮಂತ ಪುರುಷರ ಕಾಮುಕತನಕ್ಕೆ ಹಸಿವಿನಿಂದ ಕಂಗಾಲಾಗಿ ಬಡತನದ ಬೇಗೆಯಿಂದ ತತ್ತರಿಸಿದ ಬಡಹೆಣ್ಣುಮಕ್ಕಳು ಶ್ರೀಮಂತರ ಮನೆಕೆಲಸಕ್ಕೆ ಸೇರುವುದು ಸರಿ. ಆದರೆ ಅದೇ ಶ್ರೀಮಂತರು ಆ ಹೆಣ್ಣುಮಕ್ಕಳ ಹಸಿವು ಮತ್ತು ಬಡತನವನ್ನು ಅಸ್ತ್ರವಾಗಿ ಬಳಸಿಕೊಂಡು ಕಾಮದಾಹವನ್ನು ತೀರಿಸಿಕೊಳ್ಳುವುದು. ಸಾಹೇಬನ ಮನೆಗೆ ಕೆಲಸಕ್ಕೆ ಹೋದಾಗ ಆತ ನೆಕ್ಲೇಸ್ ಕಳುವಿನ ಆರೋಪ ಹೊರಿಸಿ ಬೆದರಿಸಿ, ಬಡಹೆಣ್ಣುಮಗಳನ್ನು ತನ್ನ ಕಾಮತೃಷೆಯನ್ನು ತೀರಿಸಿಕೊಳ್ಳಲು ಬಳಸಿಕೊಳ್ಳುವುದು, ಇದರಿಂದ ಆಕೆ ಆಘಾತ ಉಂಟಾಗಿ ಹುಚ್ಚಿಯಾಗುವುದು ನಿಜಕ್ಕೂ ಘೋರ ಸಂಗತಿ. ಬಡತನ ಬಡವರಿಗೆ ಶಾಪ. ಬಡತನ-ಹಸಿವಿನ ತಾಪದಿಂದ ಶ್ರೀಮಂತರ ಮನೆಗೆಲಸಕ್ಕೆ ಸೇರಿದರೂ ನೆಮ್ಮದಿಯಿಲ್ಲ. ಹರಯದ ಹೆಣ್ಣು ಮಕ್ಕಳ ಪಾಡಂತೂ ಶೋಚನೀಯವಾಗಿರುತ್ತದೆ.

ಗಂಗಾ ಪಾದೇಕಲ್‌ರವರ 'ಹಸಿವು'

ಹಸಿವು ಕಥೆಯ ಶಂಕರ ಲಚುಮಿಯವರದು ತುಂಬು ಸಂಸಾರ. ಕಣ್ಣಿಗೆ ಕಂಡುದನ್ನೆಲ್ಲ ಕೊಳ್ಳುವ ಚೈತನ್ಯ ಇಲ್ಲದಿದ್ದರೂ ಅವರು ಸುಖವಾಗೇ ಇದ್ದರೆನ್ನಬಹುದು. ಶಂಕರನ ದುಡಿತದಿಂದ ಮೈ ಮುಚ್ಚಲು ಬಟ್ಟೆ ಹೊಟ್ಟೆ ತುಂಬ ಗಂಜಿ ಸಿಗುತ್ತಿತ್ತು. ಮೃದುಸ್ವಭಾವದ ಶಂಕರನಿಂದ ಅವನ ಧಣಿ ಸುಲಭವಾಗಿ ಗೇಣಿ ಭೂಮಿಯನ್ನು ಕಸಿದುಕೊಂಡು ಒಂದಿಷ್ಟೂ ಪರಿಹಾರ ಕೊಡದೇ ಅಟ್ಟಿದ್ದ. ಹಳ್ಳಿಯಲ್ಲಿ ಸೋತ ಶಂಕರ ಹೆಂಡತಿಯೊಂದಿಗೆ ಪೇಟೆಗೆ ಬಂದಾಗ ಮಗಳು ಕಮಲಿ ಮೂರು ತಿಂಗಳ ಮಗು. ಹಳ್ಳಿಯಲ್ಲಿ ಸೋತ ಶಂಕರ ಪೇಟೆಯಲ್ಲಿ ಕಾರ್ಖಾನೆಯೊಂದಲ್ಲಿ ವಾಚ್‌ಮ್ಯಾನ್ ಕೆಲಸವೂ ದೊರಕಿ ಅವರು ಕೊಳೆಗೇರಿಯಲ್ಲಿ ಒಂದು ಗುಡಿಸಲು ಕಟ್ಟಿ ನೆಲೆಯಾಗಿದ್ದು ಈಗ ಹನ್ನೊಂದು ವರ್ಷ ಕಳೆದಿತ್ತು.

ನಗರವಾಸಿಯಾದ ಶಂಕರನ ಸಂಸಾರವೂ ಬೆಳೆದಿತ್ತು. ನಾಲ್ಕು ಮಕ್ಕಳ ತಂದೆಯಾದ ಶಂಕರ ತನ್ನಿಬ್ಬರು ಮಕ್ಕಳನ್ನು ಸ್ಕೂಲಿಗೆ ಸೇರಿಸಿದ್ದ. ಎಲ್ಲವೂ ಸರಿಯಾಗಿಯೇ ನಡೆದಿತ್ತು. ಒಂದು ದಿನ ಅವನ ಕೆಲಸ ಮಾಡುತ್ತಿದ್ದ ಕಾರ್ಖಾನೆಯ ಮೇಸ್ತ್ರಿ ಕೆಲಸಗಾರ್ತಿಯನ್ನು ಕೆಡಿಸಲು ಪ್ರಯತ್ನಿಸಿದಾಗ ಶಂಕರ ಮಧ್ಯ ಪ್ರವೇಶಿಸಿ ಹೆಣ್ಣಿನ ಶೀಲ ಕಾಪಾಡಿದ. ಆದರೆ ಅವಮಾನಿತನಾದ ಮೇಸ್ತ್ರಿ ಶಂಕರನನ್ನು ಮರೆಯದೆ ಒಂದು ರಾತ್ರಿ ಲಾರಿಗಳಲ್ಲಿ ಕಾರ್ಖಾನೆಯ ಮಾಲುಗಳನ್ನು ತುಂಬಿಸಿಟ್ಟು, ವಾಚ್‌ಮ್ಯಾನ್ ಶಂಕರ ಕಾರ್ಖಾನೆಗೆ/ಮಾಲೀಕನಿಗೆ ಮೋಸ ಮಾಡಿ ಕಳ್ಳ ಮಾರಾಟಕ್ಕೆ ಪ್ರಯತ್ನಿಸಿದ್ದಾನೆಂದು ರುಜುವಾತು ಪಡಿಸಿದ. ಶಂಕರನ ಕೆಲಸ ಹೋಗಿ ಮೂರು ವರ್ಷ ಕಠಿಣ ಸಜೆಯಾಯಿತು. ಈ ಸಂದರ್ಭದಲ್ಲಿ ಮನೆಯ ಸಾಮಾನುಗಳೆಲ್ಲಾ ಮಾರಾಟವಾಗಿ ಅಂಗಡಿ ಸೇರಿದ್ದವು. ಶಂಕರ ಜೈಲು ಸೇರಿದ್ದರೂ ಅವನ ಹೊಟ್ಟೆ ತುಂಬುತ್ತಿತ್ತು. ಆದರೆ ಲಚುಮಿ ಮತ್ತು ಮಕ್ಕಳ ಹೊಟ್ಟೆ ತುಂಬುವುದಾದರೂ ಹೇಗೆ? ತನ್ನ ಗಂಡನ ಒಳ್ಳೆಯತನಕ್ಕೆ ಸಿಕ್ಕಿದ ಶಿಕ್ಷೆಗೆ ಗೋಳಾಡುತ್ತಲೇ ಕೆಲಸಕ್ಕೂ ಅಲೆದಾಡಿದಳು. ಮೇಸ್ತ್ರಿಯ ಕುತಂತ್ರದಿಂದ ಲಚುಮಿಗೆ ಕೆಲಸ

ಸಿಗುವುದೇ ದುಸ್ತರವಾಯಿತು. ಎಷ್ಟಾದರೂ ಕಳ್ಳನ ಹೆಂಡತಿಯಲ್ಲವೇ? ಎಂದು ಎಷ್ಟೋ ಮಂದಿ ಅವಮಾನಿಸಿದರು, ಕೆಲಸ ಕೊಡಲು ಅನುಮಾನಿಸಿದರು. ತನ್ನ ಹಾಗೂ ಮಕ್ಕಳ ಹೊಟ್ಟೆ ತುಂಬಬೇಕಲ್ಲ. ಕೊನೆಗೆ ಅಲೆದೂ ಒಂದು ಮನೆಯಲ್ಲಿ ಕೆಲಸ ಗಿಟ್ಟಿಸಿದಳು. ಆದರೂ ಆ ಮನೆಯಲ್ಲಿ ಅವಳಿಗೆ ಸಿಗುವ ಸಂಬಳವಾದರು ದಿನಕ್ಕೊಂದು ಸೇರು ಅಕ್ಕಿ ಹಾಗೂ ತಿಂಗಳಿಗೆ ಹದಿನೈದು ರೂಗಳು. ಆದರೂ ಹಸಿವು ಸ್ವಲ್ಪ ಮಟ್ಟಿಗಾದರೂ ಇಂಗಲು ನೆರವಾದ ರಾಯರ ಮನೆಗೆ ಲಚುಮಿ ಕೃತಜ್ಞಳಾಗಿದ್ದಳು. ತಾನು ಕೆಲಸಕ್ಕೆ ಹೋಗಲಾರಂಭಿಸಿದಾಗ ಸಣ್ಣ ಮಗುವನ್ನು ನೋಡಿಕೊಳ್ಳುವ ಸಮಸ್ಯೆ ಎದುರಾದರೂ ಕಮಲಿಯನ್ನು ಶಾಲೆ ಬಿಡಿಸಿ ಮನೆಕೆಲಸಕ್ಕೆ ಹಾಕಿಕೊಳ್ಳುವುದು ಅನಿವಾರ್ಯವಾಗಿತ್ತು. ಅಕ್ಕ ಶಾಲೆ ಬಿಡುತ್ತಿದ್ದಂತೆ ತಮ್ಮ ಮಾಧು ಶಾಲೆ ತಪ್ಪಿಸಲಾರಂಭಿಸಿದ. ಗದರಿ ಓದಿಸೋ ತಂದೆಯಿಲ್ಲ. ನಿಗಾ ವಹಿಸಬೇಕಿದ್ದ ತಾಯಿ ಹಗಲಿಡೀ ಮನೆಯೊಳಗೆ ಇರುವುದಿಲ್ಲ. ರಾತ್ರಿ ಮನೆ ತಲುಪಿ ದುಡಿತದಿಂದ ಸುಸ್ತಾದ ಆಕೆ ಯಾವುದನ್ನು ವಿಚಾರಿಸುವುದಿಲ್ಲ. ಕಮಲಿಯಾದರೂ ಏನು ತಾನೇ ಮಾಡಿಯಾಳು? ಆರು ತಿಂಗಳು ಕಳೆಯಿತು ಲಚುಮಿ ಕಾಯಿಲೆ ಬಿದ್ದಳು. ಗಂಗಾ ಪಾದೇಕಲ್‌ರವರು ಹೇಳುವಂತೆ 'ಬಡವರಿಗೆ ಬರುವ ರೋಗದ ಮೂಲ ಹಸಿವೇ ಆಗಿರುತ್ತದೆ'.

ಲಚುಮಿಯನ್ನು ಸರಿಯಾಗಿಯೇ ದುಡಿಸಿಕೊಳ್ಳುವ ರಾಯರ ಮನೆಯವರು ರಾಶಿ ರಾಶಿ ಕೆಲಸ ಕೊಡುವುದನ್ನು ಲಚುಮಿ ಪ್ರಶ್ನಿಸಿದಾಗ 'ನಮಗೆ ಕೆಲ್ಸದೋರಿಗೆ ಬರ ಬಂದಿಲ್ಲ, ಏನೋ ಅಷ್ಟೊಂದು ಕೇಳಿಕೊಂಡದ್ದಕ್ಕೆ ನಿನ್ನನ್ನು ಇರಿಸಿಕೊಂಡದ್ದು' ಎಂದು ಹೇಳಿ ಬಾಯಿ ಮುಚ್ಚಿಸಿ ಬಿಡುತ್ತಿದ್ದರು. ಇದೀಗ ಕಾಯಿಲೆ ಬಿದ್ದಿದ್ದರಿಂದ ಮನೆಯೊಳಗಿದ್ದ ಕಾಳಕ್ಕಿಯೂ ಮುಗಿದಿತ್ತು. ಸಾಲ ಕೇಳೋಣ ಎಂದರೆ 'ಕಳ್ಳನ ಸಂಸಾರ' ಎಂದು ಯಾರೂ ಕನಿಕರ ತೋರಿಸುತ್ತಿಲ್ಲ. ಮಧ್ಯಾಹ್ನ ಮೂರು ಗಂಟೆಯಾದರೂ ತುತ್ತು ಅನ್ನವಿಲ್ಲ. ಕಮಲಿ ಹಸಿವೆಯಿಂದ ತೀರಾ ಬಳಲಿದ್ದಾಳೆ. ತಮ್ಮಂದಿರಿಬ್ಬರೂ ಅಲೆಯಲು ಹೋಗಿದ್ದಾರೆ. ಹಿಂದಿರುಗಿ ಬಂದರೆ ಅವರಿಗೂ ತಿನ್ನಲಿಕ್ಕೆ ಏನು ಇಲ್ಲ. ಕೊನೆಯ ಕೂಸು ಎಂಟು ತಿಂಗಳ ಲಲಿತಾ ಅವ್ವನ ಬಳಿ ಮುದುರಿ ನಿದ್ದೆ ಹೋಗಿದೆ. ಅದನ್ನು ಗಮನಿಸಿದ ಕಮಲಿ ಮಗುವಾಗಿದ್ದರೆ ಎಷ್ಟು ಒಳ್ಳೆಯದು 'ಹಸಿವಾದಾಗಲೆಲ್ಲಾ ಅವ್ವನ ಮೊಲೆ ಕುಡೀತದೆ' ಎಂದು ಗೊಣಗಿಕೊಂಡು, ಹಸಿವನ್ನು ತಡೆಯಲಿಕ್ಕಾಗದೇ ಒಳಗೆ ಹೋಗಿ ನೀರು ಮೊಗೆದು ಕುಡಿದಳು. ಆ ಖಾಲಿ ಹೊಟ್ಟೆಯಲ್ಲಿ ನೀರು ಹೋಗಿ ವಿಲಕ್ಷಣ ಸಂಕಟ ಉಂಟಾಯ್ತು. ವಾಕರಿಕೆ ಬಂದಂತಾಗಿ ಹೊರಗೆ ಧಾವಿಸಿ ಅಂಗಳಕ್ಕೆ ಬಂದು ಬರೀ ಉಗುಳನ್ನೇ ಕಕ್ಕಿದಳು. ಆಗ ಅವ್ವ ಕರೆದಂತಾಗಿ ಏನವ್ವ ಎಂದಾಗ, "ನಾನು ಕೆಲಸ ಮಾಡುವ ಮನೆಗೆ ಹೋಗಿ ಏನಾದರೂ ಈಸ್ಕೊಂಡು ಬಾ, ಅವ್ವಾರು ಒಳ್ಳೇರು. ನಂಗೆ ಜರ ಬಂದೈತೆ ಅನ್ನು. ಏನಾರ ಕೊಟ್ಟಾರು" ಎಂದಾಗ ಅದನ್ನು ಕೇಳಿ ಕಮಲಿಯ ಉತ್ಸಾಹ ಚಿಗುರಿತು. ಅಲ್ಲಿ ತಿನ್ನಲು ಏನಾರೂ ಸಿಕ್ಕೀತು ಎಂಬ ಯೋಚನೆ ಬಂದೊಡನೆ ರಾಯರ ಮನೆ ಕಡೆ ಹೆಜ್ಜೆ ಹಾಕಿದಳು. ರಾಯರ ಮನೆಯಲ್ಲಿ ರಾಯರನ್ನು ಬಿಟ್ಟರೆ ಬೇರೆ ಯಾರೂ ಆ ದಿನ ಮನೆಯಲ್ಲಿರಲಿಲ್ಲ. ರಾಯರ ಮನೆಯ ಅಡುಗೆ ಕೆಲಸ ಮಾಡುತ್ತಿದ್ದ ರಂಗಪ್ಪ ಕೂಡ ಬಡ ಕುಟುಂಬ ತನ್ನ ಸಂಬಳವನ್ನೇ ನೆಚ್ಚಿಕೊಂಡು ಬದುಕುವವರು. ರಾಯರ ಮಗ ರಾಜಣ್ಣ ಕದ್ದು ಓದುತ್ತಿದ್ದ ಕಾಮಶಾಸ್ತ್ರದ ಪುಸ್ತಕವನ್ನು ಯಾರಿಗೂ ತಿಳಿಯದಂತೆ ತೆಗೆದು ಬಿಡುವಿನ ವೇಳೆಯಲ್ಲಿ ಓದುತ್ತಿದ್ದ. ತನ್ನ ದೈಹಿಕ ಕಾಮನೆಗಳನ್ನು ಜಾಗೃತಗೊಳಿಸಿಕೊಂಡಿದ್ದ. ಅವ್ವಾರೆ, ಅವ್ವಾರೆ ಎಂಬ ಸ್ವರ ಕೇಳಿ ಹೊರ ಬಂದು ನೋಡಿದ. ಲಚುಮಿಯ ಮಗಳು ಕಮಲಿಯನ್ನು ಕಾಣುತ್ತಲೇ 'ಎಲ್ಲೇ ನಿನ್ನವ್ವ' ಎಂದು

ಏರುದನಿಯಲ್ಲಿ ಕೇಳಿದಾಗ ಹೆದರಿದ ಕಮಲಿ ಅವ್ವಂಗೆ ಜ್ವರ ತುಂಬಾ ಜ್ವರ ಎಂದಷ್ಟೇ ಹೇಳಿದಾಗ, ಜ್ವರವಾದ್ರೆ ಏನು ಬಂದು ಚಾಕರಿ ಮಾಡಬಾರ್ದ? ಎಂದು ಗುಡುಗಿದ. ಕಮಲಿ ಪೂರ್ತಿ ಬೆದರಿದಳು. ಇಲ್ಲಿಂದ ಓಡಿ ಬಿಡ್ಲಾ' ಎಂದು ಕೊಂಡರೂ ಬೆನ್ನಿಗಂಟಿದ್ದ ಹೊಟ್ಟೆ ಅವಳ ಮಾತನ್ನು ಕೇಳಲಿಲ್ಲ. ಮನೆಯಲ್ಲಿ ಏನು ಇಲ್ಲ. ಬೆಳಗಿನಿಂದ ಉಪಾಸಾ ಏನಾರು ಕೇಳಿ ಇಸ್ಕೊಂಬಾಂತ ಅವ್ವ ಕಳಿಸ್ಯಾಳೆ. ಅವ್ವಂಗೆ ಏಳಾಕೆ ಆಗಾಕಿಲ್ಲ ಎಂದಳು. ಹಾಗೇ ಹೇಳುತ್ತಲೆ ಹಸಿವೂ, ಅವ್ವನ ಕಾಯಿಲೆಯಿಂದ ಉಂಟಾಗಿದ್ದ ವ್ಯಥೆಯು ಹೆಚ್ಚಾಗಿ ಬಿಕ್ಕಳಿಸಲಾರಂಭಿಸಿದಳು. 'ಅಳಬೇಡ, ಒಳಗೆ ಏನಾರ ಇದೆಯಾ ನೋಡ್ತಿನಿ. ಕಣ್ಣು ಮೂಗು ಒರಸ್ಕೋ ಎಂದ. ಒಳಗೆ ಹೋದ ರಂಗಪ್ಪ ಬೆಳಗಿನ ಚಪಾತಿಯನ್ನು ಎತ್ತಿಕೊಳ್ಳುತ್ತಲೇ ಕಿಟಕಿಯಿಂದ ಕಮಲಿ ಕಡೆಗೆ ನೋಡಿದ. ತನ್ನ ಲಂಗದ ಅಂಚಿನಿಂದ ಕಣ್ಣು ಒರಸಿಕೊಳ್ಳುತ್ತಿದ್ದ ಮುಗ್ಧೆ ಕಮಲಿಯ ಅಡಿಯಲ್ಲಿ ಕಂಡ ಬಿಳಿ ಕಾಲುಗಳನ್ನು ನೋಡಿ ರಂಗಪ್ಪ ಮರಗಟ್ಟಿದ. ಒಳಗೆ ಬಾ ನೀನು ತಿಂದು ಮನೆಗೂ ಕೊಂಡುಹೋಗು ಎಂದ. ಅರ್ಧ ತಾಸಿನ ನಂತರ ಮನೆ ತಲಪಿದ ಕಮಲಿ ತಂದ ಚಪಾತಿಯನ್ನು ಎಲ್ಲರೂ ತಿಂದರು. ಅಲ್ಲಿ ಅಡ್ಗೇ ಮಾಡೋ ಅಯ್ಯ ತುಂಬ ಒಳ್ಳೆ ಜನ, ಒಳಗೆ ಕೂರಿಸಿ, ತಿಂಡಿ ಕೊಟ್ಟು ನಾಳೆ ಈ ಹೊತ್ತಿಗೆ ಹೋದ್ರೆ ತಿಂಡಿಕೊಡ್ತಾರಂತೆ. ನಾ ನಾಳೇಕೆ ಮತ್ತೆ ಹೋಯ್ತಿನಿ ಎಂದು ಉತ್ಸಾಹದಿಂದ ಹೇಳುವ ಮುಗ್ಧೆ ಕಮಲಿಗೆ ತನ್ನ ಮತ್ತು ಮನೆಯವರ ಹೊಟ್ಟೆಯ ಹಸಿವನ್ನು ನೀಗಿಸಿಕೊಳ್ಳುವುದರ ಜೊತೆಗೆ ಒಂದಿಲ್ಲೊಂದು ದಿನ ತನಗರಿವಿಲ್ಲದೇ ತಾನು ಅವನ ಕಾಮದ ಹಸಿವಿಗೆ ಆಹಾರವಾದೇನೆಂಬುದರ ಕಲ್ಪನೆ ಕೂಡ ಇರಲಿಲ್ಲ. ಹೀಗೆ ಬಡವರ ಬಡತನ, ಹಸಿವು, ಮುಗ್ದತೆ ಹೇಗೆ ಇತರರಿಗೆ ಆಹಾರವಾಗುತ್ತದೆಂಬುದರ ಚಿತ್ರಣ ಇಲ್ಲಿದೆ.

ಗಂಗಾ ಪಾದೇಕಲ್‌ರವರ 'ನಮ್ಮಲ್ಲೊಬ್ಬಳು ಅಲೀಮ'

ಅಬ್ದುಲ್ಲನ ಮಗಳು ಹೆಂಡತಿ ಸತ್ತ ನಂತರ ಮರು ಮದುವೆಯಾದ ಅಬ್ದುಲ್ಲನ ಮಗಳನ್ನು ಖತೀಜಳೇ ನೋಡಿಕೊಳ್ಳುತ್ತಿದ್ದುದು. ಅಬ್ದುಲ್ಲನಿಗೆ ಮರುಮದುವೆಯ ನಂತರ ಏಳು ಮಕ್ಕಳು ಹುಟ್ಟಿದವು. ಹಸಿವು, ಬಡತನ, ಆರ್ಥಿಕ ಪರಿಸ್ಥಿತಿ ನೆಟ್ಟಗಿಲ್ಲದಿದ್ದರೂ ಅಲ್ಪ ಸ್ವಲ್ಪ ಮೀನು ವ್ಯಾಪಾರದಲ್ಲೇ ಜೀವನ ಸಾಗುತ್ತಿತ್ತು. ಅಬ್ದುಲ್ಲಾ ತನ್ನ ಹೆಂಡತಿ ಮಾತು ಕೇಳಿ ಖತೀಜಾಳನ್ನು ಬೇರೆ ಮನೆ ಮಾಡುವಂತೆ ಕೇಳಿಕೊಂಡ. ಖತೀಜಾ ಗುಡಿಸಲನ್ನು ಕಟ್ಟಿಕೊಂಡು ಹೇಗೂ ಬೀಡಿ ಕಟ್ಟಿ ಜೀವನ ನಿರ್ವಹಣೆ ಮಾಡುತ್ತಿದ್ದಳು. ಸಲ್ಮಾ ಅಕ್ಕ ಹೆಣ್ಣುಮಕ್ಕಳು ಓದಲು ಬರೆಯಲು ಕಲಿಯಬೇಕೆಂಬ ಕರೆಕೊಟ್ಟಾಗ ಯಾರೂ ಆಕೆಯ ಮಾತಿಗೆ ಬೆಲೆಕೊಡಲಿಲ್ಲ. ದುಬೈನಲ್ಲಿರುವ ಹುಡುಗನಿಗೆ ಮದುವೆಮಾಡಲು ಅಬ್ದುಲ್ಲಾ ತಯಾರಿ ನಡೆಸಿ, ಖತೀಜಾಳ ಹೆಸರಿನಲ್ಲಿ ಸಾಲ ಪಡೆದು ಅವಸರವಾಗಿ ಮದುವೆಯನ್ನು ಮಾಡಿದ ಏಕೆಂದರೆ ಅಬ್ದುಲ್ಲನಿಗೆ ಮದುವೆ ಮಾಡಬೇಕಾದ ಇನ್ನು ನಾಲ್ಕು ಹೆಣ್ಣುಮಕ್ಕಳಿದ್ದರು. ಅಲೀಮ ಮದುವೆಯಾಗಿ ಸ್ವಲ್ಪ ದಿನದಲ್ಲೇ ಊರಿಗೆ ಹಿಂದಿರುಗಿದಳು. ಗಂಡ ಮಾತ್ರ ಬರಲಿಲ್ಲ. ಬಸಿರಾಗಿರುವ ವಿಚಾರ ತಿಳಿದು ಖತೀಜಾ ಹೆಮ್ಮೆ ಪಟ್ಟಳು. ಆದರೆ ಮದುವೆಗೆ ಮೊದಲು ಸೌಂದರ್ಯದ ಗಣಿಯಾಗಿದ್ದ ಅಲೀಮ ಈಗ ಒಣಗಿಹೋಗಿದ್ದಳು. ಬರಬರುತ್ತಾ ಆರೋಗ್ಯ ಕೆಟ್ಟಿತ್ತು. ದಿನದಿಂದ ದಿನಕ್ಕೆ ಸೊರಗುವ ಅಲೀಮನ ನೋಡಲು ಆಗದೇ ಅಬ್ದುಲ್ಲನಿಗೆ ತಿಳಿಸಿದಾಗ ಆತ ಮೊದಲಸರ್ತಿ ಹೀಗಾಗುವುದು ಸಹಜ. ಏನಂಥಾ ದೊಡ್ಡ ಮಾತು ಎಂದುಬಿಟ್ಟ. ಸಲ್ಮಾ ವಿಚಾರ ತಿಳಿದು ಸರಿಯಾಗಿ ವಿಚಾರಿಸದೇ ಮದುವೆ ಮಾಡಿದರೆ ಮತ್ತೇನಾದಿತು ಎಂದಳು. ದುಬೈಗಂಡ ಅಲೀಮಳ ಬಡತನ, ಅಜ್ಞಾನ,

ಮುಗ್ಧತನವನ್ನೇ ಬಂಡವಾಳ ಮಾಡಿಕೊಂಡು ಅವಳನ್ನು ಬಳಸಿಕೊಂಡಿದ್ದ. ಆರೋಗ್ಯ ಹದಗೆಡುತ್ತಿದೆ ಎಂದಾಕ್ಷಣ ಊರಿಗೆ ಅಟ್ಟಿದ್ದ. ಇನ್ನು ಅನುಭವಿಸಬೇಕಾದ ತೊಂದರೆಗಳನ್ನು ನೆನೆದು ಖಿತೀಜಳಿಗೆ ಕಳವಳದಿಂದ ಮನ ತುಂಬಿ ಹೋಗುತ್ತಿತ್ತು. ಆದರೆ ಮಾಡುವುದಾದರೂ ಏನು? ಕಾಲ ಮಿಂಚಿ ಹೋಗಿತ್ತು. ಹೆಣ್ಣು ಶಿಕ್ಷಣ ಪಡೆಯುವುದರ ಮೂಲಕ ಹಸಿವು, ಬಡತನ ಶೋಷಣೆಯನ್ನು ನಿವಾರಿಸಿಕೊಳ್ಳಲು ಸಾಧ್ಯ ಎಂಬ ಸಲ್ಮಾಳ ಮಾತಿಗೆ ಅಲೀಮ ಎಚ್ಚೆತ್ತುಕೊಂಡು ಕಲಿಯಲು ಅನುವಾದಳು. ಕುಟುಂಬದ ಯಜಮಾನ ಸಂಸಾರ ನಿರ್ವಹಣೆ ಕಷ್ಟವಾದಾಗ ಹೇಗಾದರೂ ತನ್ನ ಹೆಣ್ಣುಮಕ್ಕಳನ್ನು ಸಾಗಹಾಕಿಬಿಡಬೇಕೆಂದು ಯೋಚಿಸುವುದು ಈ ಆರ್ಥಿಕ ಪರಿಸ್ಥಿತಿ ವಿಷಮಸ್ಥಿತಿ ತಲುಪಿದಾಗಲೇ. ಹಸಿವು, ಬಡತನ ಇವು ಮನುಷ್ಯನನ್ನು ಅಸಹಾಯಕನನ್ನಾಗಿಸಿ ಬಿಡುತ್ತದೆ. ಇದಕ್ಕೆ ಹರೆಯಕ್ಕೆ ಕಾಲಿಡುವ ಹೆಣ್ಣುಮಕ್ಕಳು ಬಲಿಯಾಗಬೇಕಾದುದು ನಿಜಕ್ಕೂ ಘೋರ ದುರಂತವೇ ಸರಿ. ಎಷ್ಟೇ ಕಷ್ಟವಿದ್ದರೂ, ಓದಿ ಸದೃಢತೆಯನ್ನು ಪಡೆಯಬೇಕಾಗಿದೆ. ಆರ್ಥಿಕ ಸಬಲತೆಯಾಗಬೇಕಿದೆ.

ಗಂಗಾ ಪಾದೇಕಲ್‌ರವರ 'ಒಂದು ಸಾವಿನ ಕಥೆ'

ಒಂದು ಸಾವಿನ ಕಥೆ ಲಾಗಾಯ್ತಿನಿಂದಲೂ ಹೆಣ್ಣಿನ ಮೇಲೆ ನಡೆಯುತ್ತಿರುವ, ಈಗ ನಡೆಯುತ್ತಿರುವ ಶೋಷಣೆ, ದೌರ್ಜನ್ಯಕ್ಕೆ ಗಂಡೇ ಕಾರಣ. ಅವಳನ್ನು ಭೋಗದ ವಸ್ತುವನ್ನಾಗಿ, ಕೇವಲ ಕಾಮದ ಬೊಂಬೆಯನ್ನಾಗಿ ಮಾಡಿದ್ದೇ ಅವನು ಎಂಬ ವಾದ ನಿರೂಪಕಿಯದ್ದು. ಅದಕ್ಕೆ ಕಾರಣ ಆಕೆಯ ಬಡತನ ಮತ್ತು ಹಸಿವು. ಇವೆರಡನ್ನು ಎದುರಿಸಲಾಗದೇ ಹೆಣ್ಣು ಮಗಳಾದ ಸಾವಿತ್ರಿ ತನ್ನೆಲ್ಲಾ ಬಾಳಿನ ಸಂತೋಷಕ್ಕೆ ಪೂರ್ಣ ವಿರಾಮ ಹಾಕಿದ್ದು ಹದಿನಾರನೇ ವಯಸ್ಸಿಗೆ ಎಂದ ಮೇಲೆ ಬಡತನ ಮತ್ತು ಹಸಿವು ಎಷ್ಟು ಘೋರವಾದುದು ಎಂಬುದು ಮನವರಿಕೆಯಾಗುತ್ತದೆ.

ನಿರೂಪಕಿ ಆರಂಭದ ದಿನಗಳಲ್ಲಿ ಹೈಸ್ಕೂಲ್ ಮೊದಲ ತರಗತಿಯಲ್ಲಿರುವಾಗಲೇ ಅದೇ ಹೈಸ್ಕೂಲಿಗೆ ಸೇರಿದವಳು ಸಾವಿತ್ರಿ, ಕುಗ್ರಾಮದಲಿ ಹುಟ್ಟಿ ಓದಲಿಕ್ಕಾಗಿಯೇ ಬಂದು ಸೇರಿದ್ದಳು. ಏಕೆಂದರೆ ವಿದ್ಯೆ ಕೂಡ ಹೆಣ್ಣು ಮಕ್ಕಳ ಲಗ್ನಕ್ಕೆ ಇರುವ ಒಂದು ಅರ್ಹತೆ ಆಗಿದೆಯೇ ಹೊರತು ಅಗತ್ಯವಾಗಿಲ್ಲ. ಏಳನೇ ತರಗತಿ ಮುಗಿಸಿ ಒಂದು ವರ್ಷ ಮನೆಯಲ್ಲಿಯೇ ಕೂತಿದ್ದರೂ, ಓದುವಾಸೆಯಿಂದ, ಓದಿ ತನ್ನ ಕಾಲ ಮೇಲೆ ತಾನು ನಿಲ್ಲುವಾಸೆಯಿಂದ ಅವಳು ಹೈಸ್ಕೂಲ್ ಸೇರಿದ್ದಳು. ಪ್ರತೀಬಾರಿ ಶಾಲೆ ಸೇರಿದ್ದು ತಡವಾದುದರಿಂದ ಬೆಳೆದ ಹುಡುಗಿಯಂತೆ ತೋರುತ್ತಿದ್ದಳು. ಆರಂಭದ ದಿನಗಳಲ್ಲಿ ಮುದುಡಿಕೊಂಡಿದ್ದ ಅವಳು ಕೆಲವೇ ದಿನಗಳಲ್ಲಿ ಎಲ್ಲರೊಡನೆಯೂ ಹೊಂದಿಕೊಂಡಿದ್ದಳು. ಆ ಊರಿನಲ್ಲಿದ್ದುದು ಹುಡುಗಿಯರ ಶಾಲೆ ಅದೊಂದೆ ಆಗಿದ್ದರಿಂದ ವಿದ್ಯಾರ್ಥಿನಿಯರ ಸಂಖ್ಯೆ ಕೂಡ ಅಧಿಕವಾಗಿತ್ತು. ದೂರದೂರಿನಿಂದ ಬರುತ್ತಿದ್ದ ವಿದ್ಯಾರ್ಥಿನಿಯರಿಗೆ ತಕ್ಕ ವಸತಿ ಸೌಕರ್ಯ ಅಲ್ಲಿರಲಿಲ್ಲ. ಹೀಗಾಗಿ ಹೆಚ್ಚಿನವರು ದಿನಾ ಬಂದು ಹೋಗುತ್ತಿದ್ದರು. ಇನ್ನು ಕೆಲವರು ಸಂಬಂಧಿಕರ ಮನೆಯಲ್ಲಿದ್ದರು. ಸಾವಿತ್ರಿ ಕೂಡ ತನ್ನ ಹಿರಿ ಅಕ್ಕ-ಭಾವನವರ ಮನೆಯಲ್ಲಿದ್ದಳು. ಜೀವನೋಪಾಯಕ್ಕಾಗಿ ಚಿಕ್ಕದೊಂದು ಹೋಟೆಲಿಟ್ಟುಕೊಂಡಿದ್ದ ಅವರಿಗೆ ನಾಲ್ಕು ಮಕ್ಕಳು, ಅವರ ಹೋಟೆಲ್ ವ್ಯಾಪಾರ ಏನಿರುತ್ತಿರಲಿಲ್ಲ. ಇವರೆಡೆ ಸಾವಿತ್ರಿಯ ಅಕ್ಕನ ಆರೋಗ್ಯವು ಆಗಾಗ್ಗೆ ಕೆಡುತ್ತಿತ್ತು. ಈ ಎಲ್ಲಾ ಕಾರಣಗಳಿಂದ ಸಾವಿತ್ರಿಗೆ ನಿಮಿಷವು ಬಿಡುವು ಇರುತ್ತಿರಲಿಲ್ಲ. ಬೆಳಗ್ಗೆ ಐದು ಗಂಟೆ ಹೊಡೆಯುವಷ್ಟರಲ್ಲಿ

ಸೀರೊಲೆಗೆ ಉರಿ ಹಾಕಿ, ಪಾತ್ರೆ ತಿಕ್ಕಿ, ಇದ್ದ ಎರಡು ದನಗಳಿಗೆ ಅಕ್ಕಚ್ಚೆರೆದು, ನಂತರ ಬೆಳಗ್ಗಿನ ಕಾಫಿ- ತಿಂಡಿ ಮಾಡಲು ಅಕ್ಕನಿಗೆ ಸಹಾಯ ಮಾಡುವುದು, ಬಂದ ಗಿರಾಕಿಗಳಿಗೆ ಚಾ ತಿಂಡಿ ಸಪ್ಲೈ ಮಾಡುತ್ತಲೇ ಶಾಲೆಗೆ ಹೊರಡುವ ತಯಾರಿ ನಡೆಸುತ್ತಿದ್ದಳು. ನಂತರ ಸಂಜೆ ಕೂಡಾ ಅಷ್ಟೇ ಮರುದಿನದ ತಿಂಡಿಗೋಸ್ಕರ ಹಿಟ್ಟು ರುಬ್ಬಿ ಉಳಿದ ಕೆಲಸಗಳೇನಾದರೂ ಇದ್ದರೆ ಮುಗಿಸಿದ ನಂತರವೇ ಶಾಲೆಯ ಕೆಲಸ ಮಾಡಿಕೊಳ್ಳುತ್ತಿದ್ದಳು. ಈ ಕಷ್ಟಗಳ ನಡುವೆಯೇ ತರಗತಿಗೆ ಮೊದಲಿಗಳಾಗಿರುತ್ತಿದ್ದಳು. ಅವಳನ್ನು ಕಂಡರೆ ಎಲ್ಲರಿಗೂ ಮೆಚ್ಚುಗೆ, ತರಗತಿಯಲ್ಲಿ ವಿದ್ಯಾರ್ಥಿನಿಯರನ್ನು ಕುರಿತು ಕ್ಲಾಸ್ ಟೀಚರ್ ಶಕುಂತಲಾ ಹೀಗೆ ಹೇಳುತ್ತಿದ್ದರು "ನಿಮಗೆಲ್ಲಾ ಎಷ್ಟೊಂದು ಅನುಕೂಲವಿದ್ದರೂ ತೆಗೆಯುವ ಮಾರ್ಕ್ ನೋಡಿದರೆ ನನಗೆ ವ್ಯಥೆಯಾಗುತ್ತದೆ. ಆದರೆ ಸಾವಿತ್ರಿ ನೋಡಿ ಅವಳಿಗಿರುವ ಪರಿಸ್ಥಿತಿಯಲ್ಲಿ ಈ ರೀತಿ ಮಾರ್ಕ್ ತೆಗೆಯುವುದೆ ಆಶ್ಚರ್ಯ" ಎಂದು ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದರು.

ಹೀಗೆ ಆಟ ಪಾಠಗಳಲ್ಲಿ ಜಾಣೆಯಾಗಿದ್ದ ಧೀರೆಯಾಗಿದ್ದ ಸಾವಿತ್ರಿ ಧೈರ್ಯವನ್ನು ಕಳೆದುಕೊಂಡು ಹತಾಶಳಾಗುವ ಸಂದರ್ಭವೊಂದು ಬಂದಿತು. ಆಗಾಗ್ಗೆ ಕಾಯಿಲೆ ಬೀಳುತ್ತಿದ್ದ ಒಮ್ಮೆ ಕೆಲವು ದಿನಗಳ ಕಾಲ ಹಾಸಿಗೆ ಹಿಡಿದಳು. ಆಗ ಕೆಲವು ದಿನಗಳ ಕಾಲ ಸಾವಿತ್ರಿ ಅನಿವಾರ್ಯವಾಗಿ ರಜೆ ಮಾಡಬೇಕಾಯ್ತು. ಅವಳು ನಾಲ್ಕೈದು ದಿನಗಳು ಕಳೆದರೂ ಬಾರದಿದ್ದಾಗ ಶಕುಂತಲ ಟೀಚರ್ ಆಗಿದ್ದ ಪಾಠಗಳ ನೋಟ್ಸನ್ನು ಕೊಟ್ಟು ಬರಲು ಸೂಚಿಸಿದರು. ನಿರೂಪಕಿ ಗೆಳತಿಯರೊಂದಿಗೆ ಹೋದಾಗ ಸಾವಿತ್ರಿಯ ಭಾವನನ್ನು ಮೊದಲ ಬಾರಿಗೆ ನೋಡಿದರು. ಕಪ್ಪಗೆ ಕಬ್ಬಿಣದ ತಗಡಿನಂತಿದ್ದು, ಉದ್ದ ತೋರಗಳಲ್ಲಿ ಬೇತಾಳನಂತಿದ್ದ. 'ಏ ಸಾವಿತ್ರಿ ತಟ್ಟೆ ತೊಳೆದು, ಅಲ್ಲಿ ಒರಸಿಬಿಡು, ಏ ಕಿವಿ ಮುಚ್ಚಿಕೊಂಡಿದೆಯೇ ಇಲ್ಲಿ ಒಂದು ಲೋಟ ಕಾಫಿ ತಾ ಎಂದೆಲ್ಲಾ ಆರ್ಡರ್ ಮಾಡುತ್ತಿದ್ದ. ಸಾವಿತ್ರಿ ಉಸಿರೆತ್ತದೆ ಅವಸರದಿಂದ ಆ ಕೆಲಸಗಳನ್ನು ಪೂರೈಸುತ್ತಿದ್ದಳು. ನೋಟ್ಸನ್ನು ಅವಳ ಅಕ್ಕನ ಹತ್ತಿರ ಕೊಡಲು ಹೋದಾಗ ಕಿರುಚು ಧ್ವನಿಯಲ್ಲಿ ಅವಳತ್ರವೇ ಕೊಡಿ, ಇದನ್ನೆಲ್ಲಾ ಯಾವಾಗ ಬರೆಯುತ್ತಾಳೆಯೋ? ಆವಾಗಲೇ ಹೇಳಿದೆ ಶಾಲೆ ನಮ್ಮಂಥವಕ್ಕಲ್ಲಾ ಎಂದು ಕೇಳಿದೆಯಾ? ಎಂದು ಬಿಕ್ಕತೊಡಗಿದಳು. ಆ ಧ್ವನಿ ಕೇಳಿ ಅವಳ ಗಂಡ ಸಿಟ್ಟನಿಂದ 'ಶುರುವಾಯ್ತು ನಿನ್ನ ಗೋಳು ಪುರಾಣ' ಎಂದು ಹೇಳಿ ಏ ಸಾವಿತ್ರಿ ಇವರನ್ನು ಕಳಿಸಿಲ್ಲಿಂದ ಎಂದು ಅಬ್ಬರಿಸಿದ. ಗೆಳತಿಯರು ಹೆದರಿಕೆಯಿಂದ ಸಾವಿತ್ರಿಗೆ ನೋಟ್ಸ್ ಕೊಟ್ಟಾಗ ಥ್ಯಾಂಕ್ಸ್ ಹೇಳಿದಳು.

ಸಾವಿತ್ರಿಯ ಭಾವನಿಗೆ ಇಸ್ಪೀಟಾಟದ ಚಟವಿದ್ದುದರಿಂದ ವ್ಯಾಪಾರದ ಹಣವೂ ಸಂಸಾರದ ಖರ್ಚಿಗೆ ಸಾಕಾಗುತ್ತಿರಲಿಲ್ಲ. ನಂತರದ ದಿನಗಳಲ್ಲಿ ಸಾವಿತ್ರಿ ಮರಳಿ ಶಾಲೆಗೆ ಬರತೊಡಗಿದಾಗ ಗೆಳತಿ ಕೇಳಿದಳು ನಿನಗೆ ಇದೇ ಶಾಲೆ ಆಗಬೇಕಿತ್ತಾ. ಬೇರೆ ಶಾಲೆಗಾದರೂ ಹೋಗಿಬರಬಹುದಿತ್ತಲ್ಲ. ಎಷ್ಟೋ ಹುಡುಗಿಯರು ದಿನಾ ಬಸ್ಸಿನಲ್ಲಿ ಹೋಗಿ ಬರುವಂತೆ ನೀನು ಹೋಗಿ ಬರಬಹುದಿತ್ತಲ್ಲ. ಇಲ್ಲಿ ಬೈಗಳು ತಿಂದುಕೊಂಡು, ಚಾಕರಿ ಮಾಡುವುದನ್ನಾದರೂ ತಪ್ಪಿಸಿಕೊಳ್ಳಬಹುದಿತ್ತಲ್ಲ ಎಂದು (ಆದರೆ ಅವರಿಗೇನು ಗೊತ್ತು ಅವಳ ಮನೆಯವರಿಗೆ ಅಷ್ಟು ಸಾಮರ್ಥ್ಯವಿಲ್ಲ ಎಂಬುದು. ಹಾಳು ಹೊಟ್ಟೆಯ ಹಸಿವು ಮತ್ತು ಬಡತನ ಅವರನ್ನು ಬಾಧಿಸದಿದ್ದಿದ್ದರೆ ಸಾವಿತ್ರಿ ಕೂಡ ಎಲ್ಲರಂತೆ ಬಸ್ಸಿನಲ್ಲಿ ಹೋಗಿ ಬರಬಹುದಿತ್ತು. ತನ್ನಿಚ್ಛೆಯಂತೆ ಒಂದು ಒಳ್ಳೆಯ ಉದ್ಯೋಗ ಪಡೆದು ತನ್ನ ಕಾಲ ಮೇಲೆ ತಾನಿಲ್ಲಬಹುದಿತ್ತು. ಆದರೇನು

ಮಾಡುವುದು?) ತನಗೆ ಭಾವನ ಮನೆಯಲ್ಲಿದ್ದುಕೊಂಡು ಓದಲು ಅವಕಾಶ ಸಿಕ್ಕಿದ್ದೇ ಪುಣ್ಯ. ಅಕ್ಕ, ಅಮ್ಮನಿಗೆ ಮನಸ್ಸಿಲ್ಲದಿದ್ದರೂ, ಆರ್ಥಿಕ ಪರಿಸ್ಥಿತಿ ತುಂಬಾ ಹದಗೆಟ್ಟಿದ್ದರೂ, ಅಕ್ಕಂದಿರಿಬ್ಬರೂ ಮನೆಯೊಳಗೆ ಕೊಳೆಯುತ್ತಿರುವುದಕ್ಕಿಂತ ಇದು ಮೇಲಲ್ಲವೇ. ಬಡತನದಲ್ಲಿ ಹುಟ್ಟಿದ ಮೇಲೆ ಇವನ್ನೆಲ್ಲ ಸಹಿಸಿಕೊಳ್ಳಲೇಬೇಕಲ್ಲ ಎಂದು ಬೇರೆಯವರನ್ನೇ ಸಂತೈಸುತ್ತಿದ್ದಳು. ಎಸ್ಸೆಸ್ಸೆಲ್ಸಿ ಮುಗಿಸಿ ಒಂದು ಟೀಚರ್ ಟ್ರೈನಿಂಗ್ ಆದರೂ ಮಾಡಿಕೊಂಡರೆ ಬಾಲವಾಡಿಯಲ್ಲಾದರೂ ಕೆಲಸ ಸಿಗುತ್ತೆಂಬಾಸೆ, ಭರವಸೆಗಳಿಂದ ಕೂಡಿದ್ದ ಸಾವಿತ್ರಿ ಮುಂದೊಂದು ದಿನ ತರಗತಿಯಲ್ಲಿ ಕಡಿಮೆ ಮಾರ್ಕ್ಸ್ ತೆಗೆದಿದ್ದಳು. ಇದನ್ನು ಕಂಡು ಇಂಗ್ಲಿಷ್ ಮೇಡಂ ಬರಬರುತ್ತಾ ರಾಯರ ಕುದುರೆ ಕತ್ತೆಯಾಯಿತಂತೆ ಎಂದು ಚುಚ್ಚಿದರು. ಸಾವಿತ್ರಿ ದಿನೇದಿನೇ ಬಿಳುಚಿಕೊಳ್ಳಲಾರಂಭಿಸಿದಳು. ಓದಿನಲ್ಲಿ ಹಿಂದುಳಿದಳು. ಖಿನ್ನತೆಯಿಂದ ಏನನ್ನೋ ಯೋಚಿಸುತ್ತಾ ಕುಳಿತಿರುತ್ತಿದ್ದಳು. ಶಕುಂತಳ ಟೀಚರ್ ಏನಾಯ್ತಿತೆಂದು ಕೇಳಿದರೆ ಏನಿಲ್ಲ ಟೀಚರ್ ಚೆನ್ನಾಗಿದ್ದೇನೆಂದು ಹೇಳಿದರೂ ಕಂಪಿಸುತ್ತಿದ್ದಳು. ವಾರ್ಷಿಕ ಪರೀಕ್ಷೆಯ ಮೊದಲ ದಿನವೇ ಅವಳು ಪರೀಕ್ಷಾ ಕೊಠಡಿಯಲ್ಲಿ ತಲೆತಿರುಗಿ ಬಿದ್ದಾಗ ಡಾಕ್ಟರನ್ನು ಕರೆತಂದರು 'ಸಾವಿತ್ರಿ ಬಸುರಿ' ಎರಡು ತಿಂಗಳಾಗಿದೆಯಂತೆ ಎಂಬ ಸುದ್ದಿ ಊರಿಗೆ ಹಬ್ಬಿತ್ತು. ಈ ಸುದ್ದಿ ತಿಳಿದು ಎಷ್ಟೋ ಮಂದಿ ಹೆತ್ತವರು ತಮ್ಮ ಮನೆಯ ಹುಡುಗಿಯರನ್ನೆ ಶಾಲೆಯಿಂದ ಬಿಡಿಸಿಬಿಟ್ಟರು. ಆದರೆ ಇದಕ್ಕೆ ಕಾರಣ ಶಾಲೆಯಲ್ಲ. ಸಾವಿತ್ರಿಯ ಭಾವ ಕಾರಣ. ಆದ ಪ್ರಮಾದಕ್ಕೆ ಪರಿಹಾರ ಹುಡುಕುವಾಗ ನಾಚಿಕೆಗೆಟ್ಟ ಭಾವ ತಾನೇ ಅವಳನ್ನು ಲಗ್ನವಾಗುತ್ತೇನೆ ಎಂದ ಮೇಲೆ ಎಲ್ಲರೂ ಒಪ್ಪಿಕೊಂಡರು. ಕೇವಲ ಹದಿನಾರರ ಬಾಲೆಗೆ ಮದುವೆ ಮಾಡಿಯೇ ಬಿಟ್ಟರು. ಎಲ್ಲರಂತೆ ಓದಿ ಸ್ವಾಭಿಮಾನದ ಬದುಕು ನಡೆಸಬೇಕೆಂದು ಆಸೆ ಹೊತ್ತಿದ್ದ ಸಾವಿತ್ರಿ ಭಾವನ ಕಾಮದಾಹಕ್ಕೆ ಬಲಿಯಾಗಿ ಮತ್ತೆ ಪುನಃ ಬಡತನದ ಬೇಗೆಯಲ್ಲಿ ಬಳಲುವಂತಾಯಿತು. ಆಕೆಯ ಸೌಭಾಗ್ಯವೆನ್ನಬೇಕೋ ವಿಧಿ ಕಾರಣವೆನ್ನಬೇಕೋ? ಖಾರ ಅರೆಯುತ್ತಿದ್ದ ಅವಳನ್ನು ಆಕಸ್ಮಾತ್ ನೋಡಿದ ಆಕೆಯ ಗೆಳತಿಯರೊಮ್ಮೆ ಹೇಗಿದ್ದಿಯಾ ಸಾವಿತ್ರಿ? ಎಂದು ಕೇಳಿದ್ದಕ್ಕೆ, ಆಕೆ ನಿಮಗಿನ್ನೂ ಗೊತ್ತಿಲ್ಲವೇ ಸಾವಿತ್ರಿ ಅವತ್ತೇ ಸತ್ತು ಹೋಗಿದ್ದಾಳೆ ಎಂದು ಹೇಳುವಾಗ ಆ ಹೆಣ್ಣು ಜೀವ ಎಷ್ಟು ನೊಂದು ಹೋಗಿದೆ ಎಂಬುದು ತಿಳಿಯುತ್ತದೆ. ಸಾವಿತ್ರಿಯಂತೆ ಎಷ್ಟೋ ಹೆಣ್ಣು ಮಕ್ಕಳು ಅರಳುವ ಮೊದಲೇ ಈ ಹಸಿವು ಬಡತನವೆಂಬ ಸಮಸ್ಯೆಯಲ್ಲಿ ಸಿಲುಕಿ ಜೀವವನ್ನೇ ಕಳೆದುಕೊಳ್ಳುವುದು ಮನುಕುಲದ ದುರಂತವೇ ಸರಿ. ಬಡವರ ಬಾಳು ಉದ್ಧಾರವಾಗಬೇಕು. ಆರ್ಥಿಕ ಸಬಲತೆ ಬರಬೇಕಿದೆ.

ಗಂಗಾ ಪಾದೇಕಲ್‌ರವರ 'ಸೇಸಿಯ ಹಾಡು-ಪಾಡು'

ಗಂಗಾ ಪಾದೇಕಲ್‌ರವರ ಇನ್ನೊಂದು ಕಥೆ ಸೇಸಿಯ ಹಾಡು-ಪಾಡು. ಈ ಕಥೆಯ ನಾಯಕಿ ಸೇಸಿ. ತನ್ನ ಅಜ್ಜಿಯಿಂದ ಹಾಡುಗಾರಿಕೆಯನ್ನು ಬಳುವಳಿಯಾಗಿ ಪಡೆದ ಆಕೆ ಗಂಡನನ್ನು ಕಳೆದುಕೊಂಡ ನತದೃಷ್ಟೆ. ಮೇಲಿನವರ ಮನೆ ಕೆಲಸದವನಾಗಿದ್ದ ಗಂಡ ಮರವೇರಿ ಕಾಯಿಕೊಯ್ಯುವಾಗ ಬಿದ್ದು ಸತ್ತುಹೋಗಿದ್ದ. ಸಂಸಾರದ ಹೊಟ್ಟೆ ಹೊರೆಯುವ ಜವಾಬ್ದಾರಿ ಹೊತ್ತ ಸೇಸಿ ಮೇಲಿನವರ ಮನೆ ಚಾಕರಿ ಮಾಡಿ ಹೇಗೂ ತನ್ನ ಸಂಸಾರದ ಹೊಟ್ಟೆ ತುಂಬಿಸಿ, ತಾನು ತುಂಬಿಸಿಕೊಳ್ಳುತ್ತಿದ್ದಳು.

ಕೆಳಗಿನ ಮನೆಯ ಧಣಿ ಹೇಳಿ ಕಳುಹಿಸಿದ್ದಾರೆ ಹಾಡು ಹೇಳಲು ಬರಬೇಕಂತೆ ಎಂದಾಗ ಸೇಸಿ ತನ್ನ ಮಗ ಕಲ್ಲು ಹೋರಲು ಹೋಗಿ ಕಾಲಿನ ಮೇಲೆ ಕಲ್ಲು ಹಾಕ್ಕೊಂಡು ಕಾಲು

ನೋವಿನಿಂದ ಒದ್ದಾಡುತ್ತಿದ್ದ ಅವನಿಗೆ ಸೊಪ್ಪಿನ ರಸದ ಔಷಧಿ ಹಾಕಿ ಕೆಳಗಿನ ಮನೆ ಹೋಗೋದು ಬೇಕೋ ಬೇಡವೋ ಎಂದು ಯೋಚಿಸುತ್ತಾ ತನ್ನ ಮಗನ ಕಾಲಿನ ನೋವು ವಾಸಿಯಾಗ್ದೆ ಇದ್ರೆ ಡಾಕ್ಟರ್ ಹತ್ತಿರವಾದ್ರೂ ಕರ್‍ಕೊಂಡು ಹೋಗಬೇಕು ಎಂದುಕೊಂಡು, ಡಾಕ್ಟರ್‌ಗೆ ಹಣಕೊಡದೇ ಇದ್ರೆ ಸುತಾರಾಂ ಚಿಕಿತ್ಸೆ ಮುತುವರ್ಜಿವಹಿಸುವುದಿಲ್ಲ. ಕೆಳಗಿನ ಮನೆಯವರು ಹಣಕೊಟ್ರೆ ಡಾಕ್ಟರ್‌ಗೆ ಕೊಡೊಕ್ಕಾದ್ರು ಆಗುತ್ತೆ ಅಂತ ಹೊರಟಾಗ ಮಕ್ಕಳು ಹಸಿವು ಹಸಿವು ಎಂದು ಒದ್ದಾಡಿದಾಗ ಅವಕ್ಕೆ ಒಂದಷ್ಟು ಗಂಜಿ ಬೇಯಿಸಿ ಹಾಕಿ ತಾನೂ ಉಂಡು ಕೆಳಗಿನ ಮನೆಗೆ ಹೋದರೆ ಮನೆಯೊಡತಿ ಮುಖತಿರುವಿಕೊಂಡು ವ್ಯಂಗ್ಯದ ಮಾತುಗಳನ್ನಾಡಿದಳು. ನಂತರ ಕೆಲಸದಾಕೆ ನಾಗಿ ಸಮಾಧಾನ ಮಾಡಿದಳು. ಮನೆಯೊಡತಿ ಮನೆಯ ಪಾತ್ರೆತೊಳೆಯುವ, ಹಂಡೆಬೆಳಗುವ ಕೆಲಸದ ಜೊತೆಗೆ ನೀರು ತುಂಬಿ, ಬೆಟ್ಟಕ್ಕೆ ಹೋಗಿ ಸೊಪ್ಪು ತರಬೇಕೆಂದಳು. ಎಲ್ಲ ಕೆಲಸ ಮಾಡಿ ಹಾಡುವ ಸಮಯದಲ್ಲಿ ತುಂಬಾ ಚೆನ್ನಾಗಿ ಹಾಡಿ ಎಲ್ಲರ ಮೆಚ್ಚುಗೆ ಪಡೆದಳು. ಪುನಃ ಮಾರನೇ ದಿನ ಬರಲು ತಿಳಿಸಿದರು. ಆದರೆ ಮಾರನೆ ದಿನ ಸೇಸಿಗೆ ಹಾಡಲು ಸಾಧ್ಯವಾಗಲಿಲ್ಲ. ಮೇಲಿನವರ ಕೆಲಸ ಬಿಟ್ಟು ಅವರ ಕಡುವೈರಿ ಕೆಳಗಿನವರ ಮನೆಗೆ ಹಾಡಲು ಏಕಾದರೂ ಬಂದೆನೋ? ಮಗನನ್ನು ಡಾಕ್ಟರ್ ಹತ್ತಿರ ಕರಕೊಂಡು ಹೋಗಬೇಕು. ಅದಕ್ಕೆ ಹಣ ಬೇಕು. ಕೆಳಗಿನ ಮನೆಯವರು ಹಣ ಕೊಡ್ತರೋ ಇಲ್ಲ ಎಂಬ ಚಿಂತೆಯಲ್ಲಿ ಮುಳುಗಿದ ಸೇಸಿ ಚೆನ್ನಾಗಿ ಹಾಡಲು ಸಾಧ್ಯವಾಗಲಿಲ್ಲ. ಅವರು ಕೊಟ್ಟ ಬಿಡಿಗಾಸನ್ನು ತೆಗೆದುಕೊಂಡು ಮೇಲಿನವರ ಮನೆಗೆ ಹೋದರೆ ಆ ಮನೆಯ ಯಜಮಾನ ಮತ್ತು ಯಜಮಾನ್ತಿ ಬಾಯಿಗೆ ಬಂದಂತೆ ಗದರಿಸಿ, ಹೀಯಾಳಿಸಿ ನಿನ್ನಂಥೋರಿಗೆ ಇಲ್ಲಿ ಕೆಲಸವಿಲ್ಲ ನಡೀ ಎಂದು ಬಾಗಿಲು ಮುಚ್ಚಿಕೊಂಡರು. ಸೇಸಿಯ ಯಾವ ಮಾತನ್ನು ಕೇಳಿಸಿಕೊಳ್ಳದ ಸ್ಥಿತಿಯಲ್ಲಿದ್ದ ಅವರು ಸೇಸಿ ಇಷ್ಟು ವರ್ಷದಿಂದ ತಮ್ಮ ಮನೆಯಲ್ಲಿ ಹಗಲು ಇರುಳು ದುಡಿಯುತ್ತಿದ್ದಾಳೆ. ತಮ್ಮ ಮನೆ ಕೆಲಸ ಮಾಡುವಾಗಲೇ ಈಕೆಯ ಗಂಡ ಮರದಿಂದ ಬಿದ್ದು ಸತ್ತದ್ದು ಎಂಬ ಕಿಂಚಿತ್ತು ಕರುಣೆ ಇಲ್ಲದೇ ಅಮಾನವೀಯವಾಗಿ ನಡೆದುಕೊಂಡರು.

ಸೇಸಿಯ ಮನೆಯ ಹಸಿವು, ಬಡತನ ಏಳೇಳು ಜನಕ್ಕೂ ಬಗೆಹರಿಯಲಾರದಂಥದ್ದು. "ಅವ್ವಾ, ಬ್ಯಾಗ ಗಂಜಿ ಬಡ್ಸು, ನಂಗೆ ಇಪ್ರೀತ ಹಸ್ವು" ಎಂದ ಸುಬ್ಬಿಗೆ, "ಮೂದೇವಿ, ಓಗ್ತಿಯೋ ಇಲ್ಲವೋ ಇಲ್ಲಿಂದ? ಯಾವಾಗ್ನೋಡಿದ್ರೂ ವಂದೇ ರಾಗ ನಿಂದು, ಅಸಿವೂ, ಅಸಿವೂ ಅದ್ಯಾನು ಒಟ್ಟೆಯೊಳ್ಗೆ ಬೂತ ಹೊಕ್ಕಂಡೈತೊ ಎಂಗೆ? ಎಂಬ ಮಾತು.

ಕಾಲು ನೋವಿಂದ ಒದ್ದಾಡುತ್ತಿದ್ದ ಮಗ ಚೆನ್ನನು "ಅವ್ವಾ ಈ ಓಸ್ತಿಲಿ ನೋವೂ ಕಡ್ಮೆ ಅಗಾದಿಲ್ಲವ್ವಾ, ಒಳ್ಗೆ ವಿಲಿ ವಿಲೀಂತ ಜೋರು ಸಿಡಿತೈತಿ. 'ಬ್ಯಾಡವ್ವ ಅಸಿಕಾನ್ದೆ ಬೈಳಗ್ಗೆಗಿಂತ್ಲೂ ಈವಾಗ ಇಪ್ರೀತ ಸಿಡೀತೈತವ್ವಾ" ಎಂಬ ಮಾತುಗಳು.

ಸಿವ್ನೆ ಏಟೊಂದು ಪರೀಕ್ಷೆ ಮಾಡ್ತಿಯಪ್ಪಾ ನನ್ನ. ದಾಕ್ತುರ ತಾವ ಓಗೋಣ ಅಂದ್ನಲ್ಲಾ ಮೊಗಾನ್ಕೈಲಿ? ಈವಾಗ ಓಗೋದೆಂಗೆ? ಕೈಲಿ ಕಾಸೇ ಇಲ್ದಿರುವಾಗ? ಸೇಸಿಯ ಮಾತುಗಳಲ್ಲಿ ಹಸಿವು ಮತ್ತು ಬಡತನದಿಂದ ಮನುಷ್ಯ ಹೇಗೆ ಅಸಹಾಯಕನಾಗುತ್ತಾನೆ. ಕುಗ್ಗಿ ಹೋಗುತ್ತಾನೆಂಬುದು ತಿಳಿಯುತ್ತದೆ. ಮೇಲಿನ ಮನೆಯವರು ಅವಮಾನವೀಯತೆಯನ್ನು ಪ್ರದರ್ಶಿಸಿದಾಗ ಸೇಸಿಯ ಅಂತರಂಗದಲ್ಲಿ ಮಡುಗಟ್ಟಿದ ಮಾತುಗಳು ಹೊರಬಂದಿದ್ದು ಹೀಗೆ. 'ನಾ ಯೇನಂತ ತೆಪ್ಪು ಮಾಡಿವ್ನಿ? ಚಿಕ್ಬುದ್ದಿ ಏಳಿ ಕಳ್ಸಿದ್ರೂಂತ ಅಲ್‌ಹೋಗಿ ಆಡೇಳ್ದೆ. ಅದೂ

ಬರೀ ಒಂಜೆನಾ. ಅಂಗೂ ಯಾಕೋದೆ? ನನ್ನ ಕಂದುಂಗೆ ಕಾಲ್ಗೆ ಕಲ್ಲು ಚಿತ್ತೈತಲ್ಲಾ ? ಅದುಕ್ಕೇ ಓಸ್ತಿಗೆ ಅಣಾ ಮಾಡಾಕೋದೆ. ನಂಕಸ್ಟಕ್ಕೆ ಇಲ್ಲಿ ಅಣ ಸಿಗ್ತೈತೇಂತ ಕಾತ್ರಿ ಇದ್ರೆ ನಾ ಓಗ್ತಿದ್ನಾ? ಉಂ ದುಡ್ಡಿರೋರೆ ಇಂಗೆ.. ಏಟೇ ಬಗ್ಗಿದ್ರೂ ಇನ್ನ ಸೊಲ್ಪ ಬಗ್ಗೂ ಅನ್ನೂರು. ಅವ್ರಂಗೇಳಿದ್ರೂಂತ ಭೂಮಿವರ್ಗೂ ಬಗ್‌ಬೈದು. ಆದ್ರೆ ಅದ್ಕಿಂತ್ಲೂ ಕೆಳ್ಗೆ ಬಗ್ಗಕಾದದ? ಎಂಬಲ್ಲಿ ದೊಡ್ಡವರ ಶೋಷಣೆ ಅಮಾನವೀಯತೆ ವ್ಯಕ್ತವಾದರೂ ಬಡವರು ಏನೂ ಮಾಡುವಂತಿಲ್ಲ. ಹೊಟ್ಟೆ ತುಂಬಬೇಕಲ್ಲ. ತಾವು ಕೋಪಿಸಿಕೊಂಡರೆ ಹೊಟ್ಟೆ ತುಂಬುವುದಾದರೂ ಹೇಗೆ? ಹಸಿದ ಹೊಟ್ಟೆಗಳನ್ನು ತುಂಬಿಸುವವರು ಯಾರು?

'ಕೆಲ್ಸ ಮಾಡಿದ್ರೆ ಕಾಸು ಯಾರೂ ಕೊಡಾಕಿಲ್ವ? ನನ್ ರಟ್ಟೆ ಗಟ್ಟಿ ಇರಾತನ್ಕ ಎಲ್ಲಾದ್ರೂ ಗೇದು ತಿನ್ಬ್ಯಾಕು ಅಸ್‌ಟೇಯಾ. ಆದ್ರೆ ಅದಿಕೂ ಕೈಕಾಲು ಗಟ್ಟಿ ಬ್ಯಾಕಲ್ಲ. ನಮ್ಮಂಥವರಿಗೆ ಗಟ್ಟಿ ಸರೀರವೇ ಆಸ್ತಿ". ಎಂಬ ಸೇಸಿಯ ಮಾತಲ್ಲಿ ರೋಷಾವೇಶವಿದ್ದರೂ ಬಡವರು ಮತ್ತೂ ಶ್ರೀಮಂತರ, ಧನಿಕರ ಮನೆಯ ಚಾಕರಿ ಮಾಡಿಯೇ ತಮ್ಮ ಹೊಟ್ಟೆ ತುಂಬಿಸಿಕೊಳ್ಳಬೇಕಾದದ್ದು ನಿಜಕ್ಕೂ ದುರಂತ. ಶ್ರೀಮಂತರು ಮನಸ್ಸು ಮಾಡದೆ ಬಡವರ ಹೊಟ್ಟೆ ತುಂಬುವಂತಿಲ್ಲ.

೪.೩ ಧಾರ್ಮಿಕ ಕಾರಣದ ಹಸಿವಿನ ಕತೆಗಳು

ಕಾರಂತರ 'ಅಜ್ಜೀ ಹೆಣ'

ಬಡವರ ಗೋಳು ಕೇಳುವವರಿಲ್ಲ, ಕೇಳಿದರೂ ಅದನ್ನು ಪರಿಹರಿಸುವ ಮನವಾದರೂ ಶ್ರೀಮಂತರಿಗೆಲ್ಲಿ ಬರಬೇಕು. ಧನಿಕರು ಒಂದು ರೀತಿಯಲ್ಲಿ ಬಡವರನ್ನು ಶೋಷಣೆ ಮಾಡಿದರೆ ಬ್ರಾಹ್ಮಣರು, ಪುರೋಹಿತರು ಇನ್ನೊಂದು ರೀತಿಯಲ್ಲಿ ಬಡವರನ್ನು ಮತ್ತಷ್ಟು ಆಳದ ಕೂಪಕ್ಕೆ ತಳ್ಳಿಬಿಡುತ್ತಾರೆ. ಬಡವರ ಅಜ್ಞಾನವನ್ನೇ ಬಂಡವಾಳ ಮಾಡಿಕೊಂಡ ಧನಿಕರಾಗಲಿ, ಬ್ರಾಹ್ಮಣರಿಗಾಗಲಿ ಬಡವರ ಹಸಿವು ಮತ್ತು ಬಡತನದ ಬಗ್ಗೆ ಕರುಣೆ ಎಂಬುದೇ ಇಲ್ಲ. ಬದಲಾಗಿ ಮತ್ತಷ್ಟು, ಸಿಕ್ಕಷ್ಟು ದೋಚಲು ಹೊಂಚು ಹಾಕಿ ಕುಳಿತವರ ಹಾಗೆ ಕಾಣಿಸುತ್ತಾರೆ. ಅದಕ್ಕೆ ಒಂದು ಉತ್ತಮ ನಿದರ್ಶನ ಕಾರಂತರ 'ಅಜ್ಜೀ ಹೆಣ' ಕಥೆ.

ಈ ಕಥೆಯ ನಾಯಕ ನಾರಾಯಣಪ್ಪ ಬದುಕಿದ್ದರೂ ಅವನೊಂದು ಜೀವಂತ ಹೆಣ. ಏಕೆಂದರೆ ಬಡವ. ಏನೂ ಮಾಡಲಾರದ ಅಸಹಾಯಕ. ಕಷ್ಟವಾದರೂ ತನಗೆ ಚಿಂತೆಯಿಲ್ಲ. ಯಾರ ಹಂಗೂ ಬೇಡವೆಂದು ಬೋಳುಗುಡ್ಡದ ಬಳಿ ಮನೆ ಮಾಡಿಕೊಂಡಿದ್ದ. ಮನೆ ಎನ್ನುವುದಕ್ಕಿಂತ ಅದು ಗೂಡೇ ಆಗಿತ್ತು. ಯಾರಾದರೂ "ನೀನು ಗೇಣಿ ಒಕ್ಕಲಾದರೆ ನಿನಗೆ ಬರುವ ಅವಮಾನವೇನು?" ಎಂದರೆ "ಅವಮಾನವೇನೂ ಇಲ್ಲ." ಸ್ವಾಮಿ, ನನಗೆ ಪರರ ಹಂಗು ಬೇಡ, ದೇವರು ಕೊಟ್ಟದ್ದುಂಟು. ಅಷ್ಟರಿಂದಲೇ ತೃಪ್ತಿ. ಅಲ್ಲದೆ, ಅವರ ಸ್ಥಳದ ಹಂಗಿಗೆ ಬಿದ್ದರೆ ಇದ್ದ ಒಂದು ಗೇಣು ಜಾಗವೂ ಹೋದೀತು" ಎಂದು ಹೇಳುವ ಸ್ವಾಭಿಮಾನಿ ನಾರಾಯಣಪ್ಪ[೨೪] ಸ್ವತಂತ್ರವಾಗಿ ಬದುಕುವುದಕ್ಕೆಂದೇ ಬರಡು ಗುಡ್ಡವನ್ನು ಆಯ್ದುಕೊಂಡಿದ್ದ. ನೀರಿಗಾಗಿ ಗುಡ್ಡದ ಒಂದೆರಡು ಕುಣಿತೋಡಿಸಿದರೂ ನೀರು ಸಿಗಲಿಲ್ಲ. ಬದಲಾಗಿ ಇದ್ದ ನಾಲ್ಕು ಕಾಸನ್ನು ಹಾಳು ಮಾಡಿಕೊಂಡು ಬಾವಿ ತೆಗೆಸುವ ಆಸೆಯನ್ನು ಬಿಟ್ಟನು. ತೆಗೆಸಿದ ಹೊಂಡವನ್ನು ಮುಚ್ಚಲು ಅವನಲ್ಲಿ ಕಾಸಿಲ್ಲ.

ಬಡವರ ಹಸಿವಿನ ಗೋಳನ್ನು ಅರ್ಥ ಮಾಡಿಕೊಳ್ಳುವ ಧನಿಕರು ಅವರ ಅಸಹಾಯಕತೆಯನ್ನು ಮುಂದಿಟ್ಟುಕೊಂಡು ಚುಚ್ಚು ಮಾತಿನಿಂದ ನೋಯಿಸುವುದನ್ನು ಬಿಟ್ಟರೆ ಸಮಾಧಾನದ ಮಾತುಗಳನ್ನಾಡುತ್ತಿರಲಿಲ್ಲ. ಊರಿನ ಧನಿಕರಾದ ಜನಾರ್ದನಯ್ಯನವರು ನಾರಾಯಣಪ್ಪನನ್ನು ಕುರಿತು "ಅಜ್ಜಿ ಸತ್ತರೆ ಪರರ ಹಂಗು ಬೇಡ" ವೆಂದು, ಒಂದು ದೊಡ್ಡ ಹೊಂಡ ತೆಗೆಯಿಸಿಬಿಟ್ಟಿದ್ದಾನೆ. ಇನ್ನೊಂದರ ಕೆಲಸ ಅರ್ಧ ಆಗಿ ನಿಂತಿದೆ. ಪ್ರಾಯಶಃ ಅದು ಅವನಿಗೆ ಇರಬಹುದು ಎಂದು ನಗುತ್ತಿದ್ದರು.[೨೫]

ಧನಿಕರು ಬಡವರ ಶೋಷಣೆಯನ್ನು ಮಾಡುವುದೇ ತಮ್ಮ ಕಾಯಕವೆಂದು ತಿಳಿದು ಬಡವರಿಗೆ ನೆರವಾಗುವುದರ ಬದಲಿಗೆ ಅವರನ್ನು ವಿಡಂಬಿಸುತ್ತಲೇ ಇರುತ್ತಾರೆ. ಬಡವರನ್ನು ಗುಂಡಿಗೆ ಬೀಳಿಸಲು ಕಾಯುತ್ತಿರುತ್ತಾರೆ. ನಾರಾಯಣಪ್ಪ ತನ್ನ ಮನೆಯಲ್ಲಿ ಇದ್ದೊಬ್ಬ ಮುದಿತಾಯಿಯನ್ನು ಸಾಕಿಕೊಂಡು ದಿನ ಕಳೆಯುತ್ತಿದ್ದನು. ಮನೆ ಮುಂದಿನ ಒಂದು ಬೆಳೆಯ ಹೊಲಗಳೆರಡರಲ್ಲಿ ಗೈಯ್ಯುವುದು, ಸಿಕ್ಕಿದ ಭತ್ತವನ್ನು ತಂದುಕೊಂಡು ಸಂಸಾರ ಮಾಡುವುದು. "ತಾನಾಯಿತು, ತನ್ನ ಕೆಲಸವಾಯಿತು" ಎನ್ನುವ ಮನೋಭಾವದ ನಿರುಪದ್ರವಿ ನಾರಾಯಣಪ್ಪ ತಂದೆ ಸಾಯುವ ಮೊದಲು ಜನಾರ್ದನಯ್ಯನವರಿಗೆ ತಾನು ಕೂಡಿಟ್ಟಿದ್ದ ಮುನ್ನೂರು ರೂ ಕೊಟ್ಟಿಟ್ಟಿದ್ದನು. ಅದರಲ್ಲಿ ಒಂದು ನೂರು, ಕಳೆದ ವರ್ಷದ ಕೊನೆಯಲ್ಲಿ ನಾರಾಯಣಪ್ಪನ ಕೈ ಸೇರಿತ್ತು. ಉಳಿದ ಇನ್ನೂರನ್ನು ಅಪ್ಪನು ಜನಾರ್ದನಯ್ಯನವರು ಬಳೀ ನಂಬಿಕೆಯಿಂದ ಇರಿಸಿದ್ದನು. ಕೇಳಿದರೆ ಜನಾರ್ದನಯ್ಯನವರು 'ಕೊಡುವ, ಕೊಡುವ' ಎನ್ನುತ್ತಿದ್ದರು. ಇತ್ತ ತಾಯಿಗೆ ಕಾಯಿಲೆ ಶುರುವಾಗಲು ರಾಯರ ಮನೆಗೆ ನಿತ್ಯ ಸುತ್ತಾಡತೊಡಗಿದನು. ಒಂದು ದಿನ ರಾಯರು ಕೋಪದಿಂದ "ಎಲ್ಲಿ ಹಣ? ಏನು ದಾಖಲೆ?" ಎಂದು ಕೇಳಿಬಿಡುತ್ತಿದ್ದರು. ಲಾಪಾಯಿಂಟ್‌ಗಳ ಅವತಾರ! ದೇವರೇ ಗತಿ. ಶ್ರೀಮಂತರು ತಮ್ಮ ಜೇಬಿನಿಂದ ಹಣ ಕೊಡುವ ಬದಲು ಬಡವರ ಬಳಿ ಇರುವುದನ್ನು ಕಿತ್ತುಕೊಳ್ಳಲು ನೂರೆಂಟು ತಂತ್ರಗಳನ್ನು ಬಳಸುತ್ತಾರೆ.

ನಾರಾಯಣಪ್ಪ ಕೈಗೆ ದುಡ್ಡು ಬಂದ ಕೂಡಲೇ ಸುಮ್ಮನಿರಲಿಲ್ಲ. ಅಪ್ಪನ ಆಸೆ ಇದ್ದೀತು. ಅಮ್ಮನ ಆಸೆ ಇದ್ದೀತು – ಎಂದುಕೊಂಡು, ತಾನು ಚಿಕ್ಕವನಿರುವಾಗಿನಿಂದ ಅಮ್ಮನನ್ನು 'ಅಜ್ಜೀ' ಎಂದು ಕರೆಯುವುದು. ಇವೆರಡಕ್ಕೂ ಒಂದು ಗತಿ ಕಾಣಿಸಬೇಕೆಂದು, ತಾಯಿಯನ್ನು ಕರೆದುಕೊಂಡು ರಾಮೇಶ್ವರ, ತಿರುಪತಿ ಯಾತ್ರೆಗಳನ್ನು ಮಾಡಿಸಿದನು. ತಾಯಿ ಮಗನ ಮೇಲೆ ಆಶೀರ್ವಾದದ ಸುರಿಮಳೆ ಕರೆದಳು. "ಏನೋ ಅಮ್ಮಾ ನಿನ್ನ ಅನುಗ್ರಹ" ಎಂದನು. "ಎಲ್ಲಾ ದೇವರ ಅನುಗ್ರಹ" ಎಂದು ಆ ಮುದುಕಿ ಹೇಳಿದಳು. ಇವರಿಬ್ಬರಿಗೋ ಅದು 'ದುಡ್ಡಿನ ಅನುಗ್ರಹ' ಎಂದು ಹೊಳೆಯಲೇ ಇಲ್ಲ. 'ಸಾಲ ಮಾಡಿಯಾದರೂ ತುಪ್ಪ ತಿನ್ನು' ಎಂಬಂತೆ. ತಿಂದ ಮೇಲೆ ಸಾಲ ತೀರಿಸುವುದಾದರೂ ಹೇಗೆಂಬುದು ತಿಳಿಯದ ಅಜ್ಞಾನಿಗಳು.

ನಾರಾಯಣ ಯಾತ್ರೆ ಮುಗಿದ ಮೇಲೆ ತನ್ನ ಬಳಿ ಉಳಿದ ಮೂವತ್ತು –ನಲವತ್ತು ರೂಪಾಯಿಗಳ ವಿಷಯ ಊರ ಪುರೋಹಿತ ನರಸಪ್ಪನಿಗೆ ತಿಳಿದಿತ್ತು. ಅವರು ಯಾತ್ರಿಕರು ಬಂದ ದಿನವೇ ಅವರ ಮನೆಗೆ ಹೋಗಿ ಆಶೀರ್ವದಿಸಿ ರಾಮೇಶ್ವರ, ತಿರುಪತಿ ಸಮಾರಾಧನೆಗಳ ಸುದ್ದಿ ತೆಗೆದರು.

ಪುರೋಹಿತರ ಮಾತು ಕೇಳಿ ನಾರಾಯಣಪ್ಪನ ತಾಯಿ ತಲೆದೂಗಿದಳು. ಆದರ ಮುಂದೆ, ದುಡ್ಡಿನ ಮೋರೆ ನೋಡದ ನಾರಾಯಣಪ್ಪ ಅಂತೂ ಒಂದು ದಿವ್ಯವಾದ ದಿನವನ್ನು ಕಂಡು ಸಮಾರಾಧನೆಗೆ ನಿಶ್ಚಯಿಸಿದರು. ಊರ ಬ್ರಾಹ್ಮಣರಿಗೆಲ್ಲ ಹೇಳಿಯಾಗಿತ್ತು. ಕಾರಣ ತನ್ನ ಜೀವನದಲ್ಲಿ ಗೋಬ್ರಾಹ್ಮಣರನ್ನು ಸಂತೋಷಿಸುವ ಇನ್ನೊಂದು ಸಂದರ್ಭ ಬರುತ್ತದೆ ಎಂದು ಅವನು ತಿಳಿದಿರಲಿಲ್ಲ. ಊರ ಬ್ರಾಹ್ಮಣರೆಲ್ಲ ಇಂಥ ವಿಷಯದಲ್ಲಿ ಎಂದಿನಂತೆ ತಮ್ಮ ದಿವ್ಯವಾದ ಸನ್ನಿಧಿಯಿಂದ ಅವನ ಮನೆಯನ್ನು ಪಾವನ ಮಾಡಿ, ತಮಗಿಂತಲೂ ವಯಸ್ಸು ಮೀರಿದ ನಾರಾಯಣಪ್ಪನನ್ನೂ, ಅವನ ತಾಯಿಯನ್ನೂ ಹರಸಿ, ಉಂಡು ತೇಗಿ ತೃಪ್ತರಾಗಿ ಹೋದರು. ಊರಿನ ಧನಿಕ ಜನಾರ್ದನಯ್ಯನಿಗೆ ಹೇಳಿಕೆ ಹೋಗಿದ್ದರೂ ಅವರು ಬರಲಿಲ್ಲ. ಮುಖ್ಯವಾಗಿ ಬಡವರ ಮನೆಗೆ ಅವರು ಫಕ್ಕನೆ ಹೊರಡುವ ವ್ಯಕ್ತಿಯಾಗಿರಲಿಲ್ಲ.

ಕಳೆದ ವರ್ಷಕಳೆದು ಹೊಸವರುಷ ಬರುವಾಗ ನಾರಾಯಣಪ್ಪನಿಗೆ ನರಸಪ್ಪ ಐತಾಳರ ಬಳಿ ಐದು ರೂಪಾಯಿ ಸಾಲವೇ ಉಳಿದಿತ್ತು. ಮೂರು ತಿಂಗಳು ದುಡಿದು ಫಸಲು ಬಂದೊಡನೆಯೇ ಒಂದು ಮುಡಿ ಅಕ್ಕಿಯನ್ನು ಕೊಟ್ಟು ಋಣ ತೀರಿಸಿಕೊಂಡನು. ಈಗಿರುವ ಋಣ ಒಂದೇ – ತಾಯಿ ಋಣ. ಆ ಮುದುಕಿಗೆ ಈಗ 'ಸಕ್ಕರೆ ಕಾಯಿಲೆ'. ಔಷಧಿ ಮಾಡಿಸಲಿಕ್ಕೆ ಅವನ ಬಳಿ ಕಾಸಿಲ್ಲ. ಒಂದಷ್ಟು ದಿನ ಅರೆ ಹೊಟ್ಟೆ ಮಾಡಿಕೊಂಡು, ಗಿಡಮೂಲಿಕೆ ಒಟ್ಟು ಮಾಡಿ, ತಾನೇ ಗೃಹವೈದ್ಯ ನಡೆಸಿದನು. ಆದರೆ ನಡೆಯಲಿಲ್ಲ. ಬಳಿಕ ಪುರೋಹಿತರ ಮನೆಗೆ ಓಡಿದನು. ಅವರು ಕೂಡಲೇ ತಾಯಿಯ ಕಾಯಿಲೆ ವಾಸಿಯಾಗಬೇಕಾದರೆ ಎಂಟು ದಿನ ಮೃತ್ಯುಂಜಯ ಜಪ ಮಾಡಿದರೆ ಆಗುತ್ತದೆ ಎಂದು ಜಾತಕನೋಡಿ ಹೇಳಿದರು. ಮುಂದಿನ ತಿಂಗಳಿಗೆ ಎಂದು ಇರಿಸಿದ ಅಕ್ಕಿಯನ್ನು ಅವರ ಜಗುಲಿಯ ಮೇಲೆ ಸುರಿದು ಅಷ್ಟು ಮಾಡಿ ಎಂದುಸಿರಿಕೊಂಡನು.

ಬಡವರ ಹಸಿವು ಮತ್ತು ಬಡತನಕ್ಕೆ ಅವರ ಧಾರ್ಮಿಕ ಮೌಢ್ಯವೇ ಕಾರಣ. ತಾಯಿಗೆ ತೀರ್ಥಯಾತ್ರೆ ಕರೆದೊಯ್ಯಲು, ಮನೆಯಲ್ಲಿ ಸಮಾರಾಧನೆ ಮಾಡಲು ಹಣವಿದೆ ಆದರೆ ಔಷಧಿ ಮಾಡಿಸಲಿಕ್ಕೆ ನಾರಾಯಣಪ್ಪನಲ್ಲಿ ಕಾಸಿಲ್ಲ. (ದುಡ್ಡಿಲ್ಲ) ತೀರ್ಥಯಾತ್ರೆಗೆ ಹೊರಡುವ ಮುನ್ನ ಆಲೋಚಿಸಿ ಮುನ್ನಡಿ ಇಡಬೇಕಾಗಿದ್ದ ನಾರಾಯಣಪ್ಪನಂಥವರು ನರಸಪ್ಪ ಐತಾಳರ ಮಾತ ವೇದವಾಕ್ಯ ಎಂದು ಪರಿಭಾವಿಸಿ, ಅರಿವಿಲ್ಲದೇ ಅವರು ಹೇಳಿದಂತೆ ಕೇಳುತ್ತಾ ಇದ್ದದ್ದನ್ನು ಕಳೆದುಕೊಂಡು ಬಳಲುತ್ತಾರೆ.

ನರಸಪ್ಪ ಐತಾಳರು ನಾರಾಯಣಪ್ಪನಿಗೆ ನಿತ್ಯವೂ ಲಕ್ಷ್ಮೀನರಸಿಂಹನ ಗುಡಿಗೆ ಹೋಗಿ ಅವನ ಸನ್ನಿಧಿಯಲ್ಲಿ ಪ್ರಾರ್ಥನೆ, ಪೂಜೆ ಮಾಡಿ ಎಂದರು. ನಾರಾಯಣಪ್ಪ ಹಾಗೆ ಮಾಡಿದರೂ ಯಾವ ಪ್ರಯೋಜವಾಗಲಿಲ್ಲ. ಎಂಟು ದಿನ ಕಳೆದರೂ ರೋಗ ಇಳಿಮುಖವಾಗದೇ ಮೇಲುಮುಖಕ್ಕೆ ಬಂದಿತು. ರೋಗ ಬಲವಾಯಿತು. ಅಜ್ಜಿ ಹಾಸಿಗೆಯಲ್ಲೇ. ಏಳಲಿಕ್ಕೆ ತ್ರಾಣವಿಲ್ಲ. ನಂತರ ತಾಯಿಯು "ಮಗು, ನಾರ್ಣ ದಾಕದಾರರ ಔಸ್ತಿ ಒಂದು ಮಾಡಿದ್ದರೆ ನನ್ನ ಆಸೆ ತೀರಿತು" ಎಂದ ಕೂಡಲೇ ನಾರಾಯಣಪ್ಪ ಹದಿನೈದು ಮೈಲು ದೂರದ ಗ್ರಾಮೀಣ ಆಸ್ಪತ್ರೆಗೆ ಹೋಗಿ ಸೆಗಣಿ ಬಣ್ಣದ ಔಸ್ತಿ ಹಿಡಕೊಂಡು ತಂದನು. ತಾಯಿಗೂ ಕುಡಿಸಿದನು. ವ್ಯತಿರಿಕ್ತವಾಯಿತು. ಕಫ, ಉಬ್ಬಸ ಇದ್ದಿಲ್ಲ. ಈಗ ಅವೂ ಸೇರಿದವು. ಗಾಬರಿಯಾಗಿ ತಿರುಗಿ ಓಡಿದ. ಸ್ವಾಮಿ ಒಂದಾವೃತ್ತಿ ಬಂದು ನೋಡಿ ಎಂದು ಕಿರುಚಿಕೊಂಡನು. ಡಾಕ್ಟರರಿಗೆ ಬಡವನ

ಕೂಗು ಕೇಳಲೇ ಇಲ್ಲ. ಆರಾಮ ಖುರ್ಚಿಯಲ್ಲಿ ಕುಳಿತ ಡಾಕ್ಟರ್ ಮೇಲೇಳಲೇ ಇಲ್ಲ. ಕೊನೆಗೆ ಇವನ ಒತ್ತಾಯಕ್ಕೆ ಬೇಸರಗೊಂಡು "ಹಣವೆಷ್ಟು ತಂದಿದ್ದೀರಿ?" ಎಂದು ಕೇಳಿದರು. 'ಸ್ವಾಮಿ, ಗುಣವಾದರೆ ಏನಾದರೂ ನಡೆದುಕೊಳ್ಳುತ್ತೇನೆ" ಎಂದನು. ಆದರೆ ಡಾಕ್ಟರಾದವರು ಅಂಥ ಮಾತಿಗೆ ಬರುವವರಲ್ಲ ಎಂಬುದು ನಾರಾಯಣಪ್ಪನಿಗೆ ಹೇಗೆ ತಾನೇ ತಿಳಿದೀತು.

ಹತಾಶನಾಗಿ ಮರಳಿದ. ಮನೆಗೆ ಬಂದು ನೋಡಿದರೆ ಅಜ್ಜಿ ಡಾಕ್ಟರರ ಹಣವನ್ನು ಉಳಿಸಿಹೋಗಿದ್ದಳು. ತಾಯಿಯ ಕೊನೆಯ ಅಪೇಕ್ಷೆಯನ್ನು ಸರಿಯಾಗಿ ಪೂರೈಸಲು ಆಗದೇ ಹೋಯಿತಲ್ಲಾ ಎಂದು ವ್ಯಥೆಗೊಂಡನು. ಕಣ್ಣೀರು ಕರೆಯುತ್ತಾ ಕುಳಿತರೆ ಅಜ್ಜಿಯ ಹೆಣಕ್ಕೇನು ಗತಿ ಎಂದುಕೊಂಡು ಬ್ರಾಹ್ಮಣ ಮನೆಯಲ್ಲೆಲ್ಲಾ ಸುತ್ತಿದನು. ಇವನು ಬರುವ ಮೊದಲೇ ಊರವರಿಗೆ ಅಜ್ಜಿ ಸತ್ತ ಸುದ್ದಿ ತಿಳಿದಿತ್ತು. ಆದುದರಿಂದ ಅವರು ಕದವನ್ನು ಹಾಕಿಕೊಂಡು ಕುಳಿತರು. ತನ್ನನ್ನು ಯಜಮಾನರನ್ನು ಸುಟ್ಟಲ್ಲೇ ಸುಡಬೇಕೆಂದು ಹೇಳಿದ ಮುದುಕಿ ಮಾತನ್ನು ನೆರವೇರಿಸುವುದು ಕಷ್ಟವಾಗಿತ್ತು. ತಂದೆಯನ್ನು ಸುಟ್ಟ ಸ್ಥಳವು ಹಳ್ಳದ ಬಳಿ ಇರುವುದು. ಅಲ್ಲಿಗೆ ತಾನೊಬ್ಬನೇ, ತಾನೊಬ್ಬನೇ ಶಾಸ್ತ್ರವನ್ನು ಮರೆತು ಹೆಣವನ್ನು ಸಾಗಿಸುತ್ತೇನೆಂದರೂ, ಸಾಧ್ಯವಾಗಲಿಲ್ಲ. 'ಸತ್ತ ಮೇಲೆ ಹೆಣ ಭಾರವಾಗುತ್ತದೆ' ಎಂಬ ಗಾದೆ ಮಾತಿನಂತೆ ದಾರಿ ಕಾಣದೆ ನಾರಾಯಣಪ್ಪ ಮರುದಿನ ಬೆಳಿಗ್ಗೆಯೇ ಸಂಸ್ಕಾರಕ್ಕೆ ತಾನೇ ಸಿದ್ಧತೆ ಮಾಡಿ ಗುಡ್ಡದ ಮನೆಯ ಬಳಿಯೇ ಶವಸಂಸ್ಕಾರ ಮಾಡಿದ.

ಹಣವಿಲ್ಲದ ಬಡವರಿಗೆ ಊರೇ ಶತ್ರುವಾಗಿ ಬಿಡುತ್ತದೆ. ಮನುಷ್ಯರು ಮನುಷ್ಯನಾಗಿ ನಡೆದುಕೊಳ್ಳಬೇಕೇ ವಿನಃ ಮೃಗದ ರೀತಿಯಲ್ಲಿ ವರ್ತಿಸುವುದಲ್ಲ.

ಕಾರಂತರ 'ಸೆಟ್ಟಿ ಸಾಲ'

ಬೇವೂರು ಗ್ರಾಮದ 'ಸದಯ ಸೆಟ್ಟಿ ಎಂಬುವನೊಬ್ಬ ಜನಾರ್ದಯ್ಯನವರಿಗೆ ಒಕ್ಕಲಿರುವನು. ಸದಯನ ವಯಸ್ಸು ಮೂವತ್ತೈದು, ಮೈಯಲ್ಲೂ ಧಾಂಡಿಗ, ಮನಸ್ಸು ಮಯ್ಯಂತೆ ಗಟ್ಟಿಯಾಗಿತ್ತು. ಅವನಿಗೆ ಹೆಂಡತಿ ಮತ್ತು ಮೂವರು ಮಕ್ಕಳು. ತಂದೆ– ತೀರಿ ಹತ್ತು ವರ್ಷವಾಗಿತ್ತು. ತಾಯಿ ಅದಕ್ಕೂ ಮೊದಲೇ ಸತ್ತಿದ್ದಳು. ಈಗ ಅವನ ಮೇಲೆ ಹೊಂದಿಕೊಂಡಿರುವ ಪರಿವಾರವೆಂದರೆ – ಹೆಂಡತಿ, ಮಕ್ಕಳು ಅಲ್ಲದೇ ಅವನ ವಿಧವೆ ತಂಗಿ. ಅವಳು ಸದಯ ಸೆಟ್ಟಿ ಮನೆಗೆ ಬಂದು ವಾಸಮಾಡತೊಡಗಿ ಐದು ವರ್ಷದ ಮೇಲಾಗಿತ್ತು. ಹಾಗಾಗಿ ಸದಯನ ಸಂಸಾರ ದೊಡ್ಡದಲ್ಲದಿದ್ದರೂ ಚಿಕ್ಕದೂ ಅಲ್ಲ. ಜನಸಂಖ್ಯೆಯ ದೃಷ್ಟಿಯಿಂದ ಚಿಕ್ಕದಾಗಿ ಕಾಣಿಸಿದರೂ ಖರ್ಚಿನ ದೃಷ್ಟಿಯಿಂದ ಎಂದೂ ಇಲ್ಲ. ಕಾರಣವೇನೆಂದರೆ ಸದಯನ ಮನೆತನ ದೊಡ್ಡದು. ಆಪ್ತರು, ನೆಂಟರು ಅಧಿಕ. ಬೇರೆ ಉದ್ಯೋಗವಿಲ್ಲದಿರುವಾಗ ನೆಂಟರನ್ನು ವಿಚಾರಿಸಲು ಬರುವವರ ಸಂಖ್ಯೆಯು ಅಧಿಕವಾಗಿತ್ತು. ಇದು ತಂದೆಯ ಕಾಲದಿಂದಲೂ ನಡೆದು ಬಂದ ಸ್ಥಿತಿ. ಸದಯಸೆಟ್ಟಿ ಅದನ್ನು ಎಂದೂ ಮನಸ್ಸಿಗೆ ತೆಗೆದುಕೊಳ್ಳುತ್ತಿರಲಿಲ್ಲ. 'ಎಲ್ಲಿಂದಲೋ ಬರುತ್ತೆ; ಎಲ್ಲಿಗೋ ಹೋಗುತ್ತೇ: ಎನ್ನುತ್ತಿದ್ದನು. ಈಗಲಾದರೆ ಹೋಗುವುದು ಎಲ್ಲಿಗೆ ಎಂಬುದು ಗೊತ್ತಿದೆ. ಆದರೆ ಬರುವುದು ಎಲ್ಲಿಂದ ಎಂಬುದು ಪ್ರಶ್ನೆಯೇ ಆಗಿ ಉಳಿದಿದೆ. ಕಾರಣ ಸದಯನ ಉತ್ಪನ್ನ ಮೊದಲಿನಂತಿಲ್ಲದಿರುವುದು.

ಸದಯನ ತಂದೆ ಸಾಯುವ ಮೊದಲು ಸದಯ ಒಕ್ಕಲಾಗಿರುವ ಬದಲು ಒಡೆಯನೇ ಆಗಿದ್ದನೆನ್ನಬಹುದು. ಅವನ ಕೆಳಗೆ ಮೂರು ನಾಲ್ಕು ಗೇಣಿ ಒಕ್ಕಲುಗಳು ಇದ್ದರು. ಮನೆಕೆಲಸಕ್ಕಾಗಿ ಅವನೇ ದುಡಿಯಬೇಕೆಂದೇನೂ ಇರಲಿಲ್ಲ. ಆಳುಗಳು ಇದ್ದರು. ಆದರೆ ಈಗ ಅವನ ಸ್ಥಿತಿಯೇ ಬದಲಾಗಿ ಬಿಟ್ಟಿದೆ. ತಾನಿದ್ದ ಮನೆಯ ಜಾಗಕ್ಕೂ ಜನಾರ್ದನಯ್ಯನವರಿಗೆ ಗೇಣಿ ಕೊಡಬೇಕಾಗಿದೆ. ಅಲ್ಲದೆ ಸಾಲದ ಹೊರೆಯೊಂದು ಬಲವಾಗಿ ಅವನ ಕೊರಳ ಮೇಲೆ ಕುಳಿತಿತ್ತು. ಆದುದರಿಂದ ತಾನು ದುಡಿದರೂ ಸಂಸಾರವನ್ನು ಸಾಗಿಸಿಕೊಂಡು ಹೋಗುವುದು ಕಷ್ಟವೇ ಆಗಿತ್ತು. ಬಂದ ಆದಾಯ ಮನೆಯ ಖರ್ಚಿಗೂ – ಗೇಣಿ ಸಲ್ಲಿಸಲಿಕ್ಕೂ ಸಾಲದಾಗಿತ್ತು. ಹಾಗಾಗಿ ಮೊದಲು ಮಾಡಿದ ಸಾಲ ಇನ್ನೂ ಹಾಗೇ ಉಳಿದಿತ್ತು.

ಸಾಲ ಮಾಡಿದ ಉದ್ದೇಶವೆಂದರೆ, ಸದಯನ ತಂದೆ ಸಾಯುವ ಸಮಯದಲ್ಲಿ ಅವರ ಉತ್ತರಕ್ರಿಯೆಗೆ ಅವನಲ್ಲಿ ನಗದು ಹಣವಿರಲಿಲ್ಲ. ಅದಕ್ಕಾಗಿ ಒಂದೆರಡು ತಿಂಗಳ ಮಟ್ಟಿಗೆಂದು ಎರಡು ನೂರು ರೂಪಾಯಿಬೇಕೆಂದು ಜನಾರ್ದನಯ್ಯರಲ್ಲಿಗೆ ಹೋದಾಗ, ಅವರು ಆಸ್ತಿ ಇರುವ ಎಂಥವರಿಗಾದರೂ ಸಾಲಕೊಡುತ್ತಿದ್ದರು. ಸದಯನಿಗೆ ಮರುಮಾತನಾಡದೆ ಕೊಟ್ಟರು. "ಜನಾರ್ದನಯ್ಯರು ದೇವರಂಥ ಮನುಷ್ಯರಪ್ಪಾ" ಎಂದುಕೊಂಡು ಮನೆಗೆ ಬಂದಿದ್ದ. ಬರುವ ಆತುರದಲ್ಲಿ ಎಷ್ಟು ನೋಟು ಎಂಬುದನ್ನು ಬರೆದುಕೊಟ್ಟು ಬರಲಿಲ್ಲ. ಹಾಗೆಯೇ ಗಡಿಬಿಡಿ – ಮನಸ್ಸಿನ ವ್ಯಥೆ, ಇದರಲ್ಲಿ ಬಡ್ಡಿ ಬಗ್ಗೆಯೂ ಯೋಚಿಸಲಿಲ್ಲ. ಪುಸ್ತಕದಲ್ಲಿ ಒಂದು ಸಹಿ ಹಾಕಿ ಹೋಗು ಎಂದಾಗ, ಸಹಿ ಹಾಕಿ ಬಂದಿದ್ದ.

ಎರಡು ತಿಂಗಳು ಮುಗಿಯುವಷ್ಟರಲ್ಲಿ ರೂಪಾಯಿ ಇನ್ನೂರರಲ್ಲಿ ನೂರನ್ನು ಸಿದ್ಧಪಡಿಸಿಕೊಂಡು ಜನಾರ್ದಯ್ಯನವರ ಬಳಿ ಹೋದ. ಹೀಗೆ ಚಿಲ್ಲರೆ ಚಿಲ್ಲರೆ ಏಕೆ ತಂದುಕೊಡುವುದು? ನಿನಗೂ ತೊಂದರೆ ಇರಬಹುದು. ಎಲ್ಲಾ ತೊಂದರೆ ಮುಗಿದ ಬಳಿಕ ಒಂದೇ ಬಾರಿಗೆ ತಂದುಕೊಟ್ಟರೆ ನಮಗೂ ಸುಲಭ, ನಿಮಗೂ ಸುಲಭ ಎಂದ ಜನಾರ್ದಯ್ಯರ ಮಾತು ದಿಟವೆನಿಸಿ ಮನೆಗೆ ಬಂದ. ಆ ನೂರನ್ನು ಭರ್ತಿ ಮಾಡಲು ಬೇರೆ ಒಬ್ಬನಿಂದ ಕೈ ಸಾಲ ಮಾಡಿದ್ದ ಅದನ್ನು ಮರಳಿ ಕೊಟ್ಟು ಉಳಿದ ರೂಪಾಯಿಗಳನ್ನು ಇರಿಸಿಕೊಂಡನು. ಒಂದು ದಿನ ನರಸಯ್ಯ ಐತಾಳರು ಸದಯನ ಮನೆಗೆ ಬಂದು, ಸದಯನ ತಂದೆಯು ಸತ್ತ ವಿಚಾರವಾಗಿ ತುಂಬಾ ಪಶ್ಚಾತ್ತಾಪ ಪಟ್ಟರು. ಸರಿ, ಸದಯ ನಿನ್ನ ತಂದೆಗೆ ಸ್ವರ್ಗದಲ್ಲಿ ಮೋಕ್ಷ ಸಿಗಬೇಕಾದರೆ ಅವರ ಅಸ್ಥಿಯನ್ನು ಗೋಕರ್ಣಕ್ಕೆ ಒಯ್ಯಬೇಡವೇ? ನಿನಗೆ ಬುದ್ಧಿ ಇಲ್ಲವೇ ಎಂದಾಗ ಸದಯನಿಗೂ ಅದು ಸರಿ ಎನಿಸಿತು.

ಸದಯ, ಗೋಕರ್ಣದಲ್ಲಿ ಪೂಜಾರಿಗಳಿರುವವರಾದರೂ ಅಲ್ಲಿಯವರೆಗೆ ಹೋಗಿ, ಅವರಿಂದ ಕೆಲಸ ಮಾಡಿಸಲು ಒಬ್ಬ ಜೊತೆಗಾರ ಬೇಕಲ್ಲವೆಂದುಕೊಂಡು, ಬೇಡಿ ಬೇಡಿ ನರಸಯ್ಯ ಐತಾಳರನ್ನೇ ಒಪ್ಪಿಸಿದ. ನರಸಯ್ಯ ಮೇಲುಮಾತಿಗೆ ಮನೆ ತಾಪತ್ರಯ ಹೇಳಿಕೊಂಡರು. ಕೊನೆಗೆ, "ಅಯ್ಯೋ ಏನೆನ್ನಲಿ? ನಿನ್ನಂಥವನ ಮಾತು ತೆಗೆದು ಹಾಕಲಿಕ್ಕೆ ಬರುತ್ತದೆಯೇ?" ಎಂದು ಒಪ್ಪಿಕೊಂಡರು. ಮುಖ್ಯವಾಗಿ ಹತ್ತು ವರುಷದ ಹಿಂದೆ ಸತ್ತ ತಮ್ಮ ಅಪ್ಪನ ಅಸ್ಥಿ ಸಂಸ್ಕಾರ ಮಾಡುವ ಅವಶ್ಯವಿತ್ತು ಅವರಿಗೆ. ಅಲ್ಲದೇ ಒಂದು ತಿಂಗಳು ಊರಿನಲ್ಲಿದ್ದು ಮಾಡುವುದೇನೂ ಇದ್ದಿಲ್ಲ. ಬೇಸಾಯದ ಸಮಯವೂ ಅಲ್ಲ. ಸಂತರ್ಪಣೆಯ ದಿನಗಳು ಅಲ್ಲ. ನಿರುದ್ಯೋಗದ

ದಿನಗಳಾದ್ದರಿಂದ ಒಂದು ಉದ್ಯೋಗ ಗಳಿಸಿಕೊಂಡರು. ಸದಯ ಅಲ್ಲಿ-ಇಲ್ಲಿ ಎಂದು ತಿರುಗಾಡಿ ನೂರು ರೂಪಾಯಿ ಸಾಲ ಮಾಡಿ ಯಾತ್ರೆಗೆ ಹೊರಟನು.

ಕ್ಷೇತ್ರವನ್ನು ಸೇರಿದಾಗ, ಅಲ್ಲಿನ ಪುರೋಹಿತರು ಸದಯನ ಅಪ್ಪನು ಸೀದಾ, ಯಾವುದಾರೊಂದು ತೊಂದರೆಯೂ ಇಲ್ಲದೆ ಸ್ವರ್ಗದ ನಡುಮನೆಯೊಳಗೆ ಕಾಲಿಡಲು ಏನೇನು ವ್ಯವಸ್ಥೆ ಆಗಬೇಕಿತ್ತೋ, ಯಾವಾವ ಕಾಣಿಕೆ, ಅಪರಾಧ, ದಂಡಗಳನ್ನು ಕೊಡಬೇಕಿತ್ತೋ ಅದನ್ನೆಲ್ಲಾ ಕಟ್ಟಿಸಿದರು. "ಸದಯ ಸೆಟ್ಟಿಯವರೇ ನಿಮ್ಮ ತಂದೆ ಚಿಂತೆ ಇನ್ನು ಬಿಟ್ಟು ಬಿಡಿ. ಇನ್ನು ಚಿಂತೆಪಡುವುದು ಬದುಕಿದವರಿಗಾಗಿ. ಅವರು ಸ್ವರ್ಗದಲ್ಲೀಗ ಸುಖವಾಗಿದ್ದಾರೆ. ನರಕದಲ್ಲಿರುವ ಪಾಪಿಗಳು ನಾವು" ಎಂದರು.[೨೭] ಸದಯನ ಮನಸ್ಸಿಗೆ ತಂಪೆನಿಸಿತು.

ಹೊರಡುವಾಗ, ಸದಯನು ಐತಾಳರೊಡನೆ ಸೇರಿಕೊಂಡು ಭಟ್ಟರ ಮೆಹನತ್ತಿಗೆ ಏನು ಕೊಡಬೇಕೆಂದು ವಿಚಾರಿಸಿದನು. ಮಧ್ಯೆ ತೊಂದರೆಯಾಗಬಾರದೆಂದು ತಾನು ತಂದ ಹಣವನ್ನು ಐತಾಳರ ಕೈಯಲ್ಲಿ ಇರಿಸಿದ್ದ. ಐತಾಳರು ನಾಜೂಕಾದ ಲೆಕ್ಕ ಬರೆದು ಇರಿಸಿದ್ದರು. ಆದರೆ ಜುಮ್ಲಾ ನೋಡುವಾಗ, ಐತಾಳರು ಈ ಎಲ್ಲಾ ಖರ್ಚಿಗಾಗಿ ಗೋಕರ್ಣೇಶ್ವರ ಭಟ್ಟರಿಂದಲೇ ಐವತ್ತು ರೂ. ಸಾಲ ತೆಗೆದಿದ್ದರು. ಸದಯನ ಮನಸ್ಸು ಸಪ್ಪಗಾಯಿತು. ಬಂದುದಕ್ಕೆ ಸಾಲ ಮಾಡುವುದಲ್ಲದೆ ಮನೆಗೆ ಹಿಂದಿರುಗಲು ಹಣವಿಲ್ಲದಾಯಿತಲ್ಲಾ ಎಂದುಕೊಂಡನು. ಆಗ ಮುಂದೆ ಬಂದ ಭಟ್ಟರು ಏನೆಂದು ವಿಚಾರಿಸಿದರು. ಐತಾಳರು ವಿವರಿಸಿದರು. ಭಟ್ಟರು ಮನೆಯ ಒಳಕ್ಕೆ ಹೋಗಿ ಐವತ್ತು ರೂ. ನೋಟನ್ನು ಸದಯನ ಕೈಗೆ ಎಸೆದು "ಅದರ ಚಿಂತೆ ಬೇಡ, ನಾವು ಊರು-ಮನೆಯಿರುವವರು. ಊರಿಗೆ ಹೋದಮೇಲೆ ಎಲ್ಲಾ ಹಣ ಕಳುಹಿಸಿಕೊಡಿ" ಎಂದರು. ಎಲ್ಲಾ ಹಣ ಎಂದರೆ ನೂರು ಆಗುತ್ತದೆ ಎಂದಾಗ ಸದಯ ಉಸ್ಸೆಂದು ಊರಿಗೆ ಹೊರಟು ಬಂದ.

ಊರಿಗೆ ಬಂದ ಮೇಲೆ ಸದಯ ಕ್ಷೇತ್ರದ ಸಾಲ ಬಹಳ ದಿನ ಇಟ್ಟುಕೊಳ್ಳಬಾರದೆಂದು ಜನಾರ್ದನಯ್ಯನಲ್ಲಿಗೆ ಓಡಿ, ಪುನಃ ನೂರು ರೂಗಳ ಸಾಲ ತಂದು, ಅದನ್ನೇ ಕ್ಷೇತ್ರಕ್ಕೆ ಕಳುಹಿಸಿದ. ಸದಯ ಜನಾರ್ದನಯ್ಯನವರ ಬಳಿ ಮುನ್ನೂರು ರೂಗಳ ಸಾಲ ಮಾಡಿದ್ದೇನೆಂದು ಯೋಚಿಸುತ್ತಲೇ ಇದ್ದ. ಇತ್ತಲಾಗೆ ನೆಂಟರು - ಬಂಧುಗಳು ಹಿತೈಷಿಗಳು ಬರುವುದು ಹೋಗುವುದು ನಡೆದೇ ಇತ್ತು. ಇದರ ಜೊತೆಗೆ ಅನಾವೃಷ್ಟಿ ಬೇರೆ - ಇವೆಲ್ಲ ಸೇರಿ ಸದಯನ ಆದಾಯದ ಸ್ಥಿತಿ ಕೆಳಮಟ್ಟಕ್ಕಿಳಿದಿತ್ತು. ಆದರೂ ಜನಾರ್ದನಯ್ಯರ ಸಾಲ ತೀರಿಸಿದರೆ ಆಪತ್ಕಾಲದಲ್ಲಿ ನೆರವಾದಾರೆಂದುಕೊಂಡು ದೂರದ ಸಂಬಂಧಿಯಿಂದ ಹಾಗೂ ಹೀಗೂ ಮಾಡಿಕೊಂಡು ಇನ್ನೂರಾ ಐವತ್ತು ರೂಪಾಯಿಗಳನ್ನು ತೆಗೆದುಕೊಂಡು ಬಂದನು. ಬಡ್ಡಿ ಲೆಕ್ಕಾಚಾರ ಮಾಡಿ ಒಟ್ಟು ಮುನ್ನೂರಾ ಐವತ್ತು ರೂಗಳನ್ನು ಹಿಡಿದುಕೊಂಡರು. ಜನಾರ್ದನಯ್ಯ ಹಣವನ್ನು ಪಡೆದು, ಮುನ್ನಾರಾ ಐವತ್ತು ರೂಪಾಯಿ ಪೂರ್ಣ ಬಂದಿತು ಎಂದು ರಶೀದಿ ಕೊಡಿಸಿದನು. ಸದಯನು ಋಣ ತೀರಿತು ಎಂದು ಮನೆಗೆ ಬಂದನು. ಇದಾದ ಒಂದು ವರ್ಷದಲ್ಲೇ ಸದಯನಿಗೆ ಲಾಯರ್ ನೋಟೀಸ್ ಬಂದಿತ್ತು. ನೀನು ನನ್ನ ಕಕ್ಷಿಯಿಂದ ಎರಡು ಕಂತುಗಳಿಂದ ಪಡೆದ ಒಂದು ಸಾವಿರ, ಒಂದು ಸಾವಿರಕ್ಕೆ ಶೇಕಡಾ ಹನ್ನೆರಡರ ಬಡ್ಡಿಯಲ್ಲಿ ಆಗುವ ೧,೩೧೭ ನ್ನು ಕೊಡಬೇಕು. ಅದರಲ್ಲಿ ನೀನು ಕೊಟ್ಟ ರೂ ೩೫೦ನ್ನು ವಜಾ ಮಾಡಿದರೆ

ಒಂಬೈನೂರಾ ಎಪ್ಪತ್ತೇಳು ರೂಗಳನ್ನು ನೋಟೀಸು ತಲ್ಪಿದ ಎಂಟು ದಿನದೊಳಗೆ ತಲುಪಿಸದಿದ್ದರೆ ನಿನ್ನ ಮೇಲೆ ಸಿವಿಲ್ ವ್ಯಾಜ್ಯ ಮಾಡಲಾದೀತು ಎಂದು ಒಕ್ಕಣೆಯಿತ್ತು.

ಸದಯನ ಉಸಿರು ಬಿಗಿಯಿತು. ಐತಾಳರನ್ನು ಕರೆದುಕೊಂಡು ಜನಾರ್ದನಯ್ಯನ ಮನೆಗೆ ಹೋದರು. ಅಲ್ಲಿ ಜನಾರ್ದನಯ್ಯನವರು ತೋರಿಸಿದ ಪುಸ್ತಕದಲ್ಲಿ ಹಣ ಪಡೆದದ್ದಕ್ಕೆ ಸದಯ ಸಹಿ ಕೂಡ ಹಾಕಿದ್ದನು. ಐತಾಳರು ಮರು ಮಾತನಾಡದೆ ಹೊರಟು ಬಿಟ್ಟರು. ಸದಯ ಮುಖ ತಗ್ಗಿಸಿಕೊಂಡು ಮನೆಗೆ ಬಂದ. ಸದಯ ನೂರಿನ್ನೂರು ಸಾಲ ಮಾಡಿ ಕೋರ್ಟಿಗೇರಿದನು. ಆದರೆ ಇದರಲ್ಲೂ ಜನಾರ್ದನಯ್ಯ ಗೆದ್ದನು. ಕೋರ್ಟಿನ ಖರ್ಚು ಸೇರಿದಂತೆ ಸದಯ ಸೆಟ್ಟಿ ಒಟ್ಟು ೨೦೦೦ ರೂ ಸಾಲದ ಆಸ್ತಿಯನ್ನು ಮಾರಲು ನಿಶ್ಚಯ ಮಾಡಿದ. ಇದನ್ನು ಕೊಂಡುಕೊಳ್ಳಲು ಜನಾರ್ದನಯ್ಯನೇ ತೀರ್ಮಾನಿಸಿ ಹರಾಜಿನಲ್ಲಿ ಭಾಗವಹಿಸುವವರಿಗೆ ಹಣದಾಸೆ ತೋರಿಸಿ ೧೦,೦೦೦ ರೂ ಬೆಲೆಬಾಳುವ ಜಮೀನನ್ನು ಜನಾರ್ದನಯ್ಯರು ಸಾಲಕ್ಕೆ ತಕ್ಕ ಆಸ್ತಿ ಎಂದು ಸದಯನ ಕೈಗೆ ೮೦೦ ರೂಗಳನ್ನು ಕೊಟ್ಟು ತಮ್ಮ ಹೆಸರಿಗೆ ಬರೆಸಿಕೊಂಡರು. ಸದಯನ ಆಸ್ತಿ ಜನಾರ್ದನಯ್ಯರಿಗಾಯಿತು. ಈಗ ಸದಯ ಎಲ್ಲಿ ಹೋಗಬೇಕು? ಕೊನೆಗೆ ಜನಾರ್ದನಯ್ಯನವರ ಬಳಿ ಒಕ್ಕಲಾದ. ಎಷ್ಟು ದುಡಿದರೂ-ಹಸಿವು ಖಾಯಂ ಆಗಿತ್ತು.

ಹೀಗೆ ಶಿವರಾಮ ಕಾರಂತರು – ಈ ಸೆಟ್ಟಿಯ ಕಥೆಯಲ್ಲಿ ಸ್ಥಿತಿವಂತರು ಕೂಡ ಹೇಗೆ ಜಮೀನ್ದಾರರು ಬೀಸಿದ ಬಲೆಯಲ್ಲಿ ಸಿಕ್ಕಿಹಾಕಿಕೊಂಡು ಜೀವನಪರ್ಯಂತ ಅವರ ಅಡಿಯಾಳಾಗಿ ದುಡಿಯುತ್ತಲೇ ಇರಬೇಕಾಗುತ್ತದೆ ಎಂಬುದನ್ನು ನಿರೂಪಿಸಿದ್ದಾರೆ. ಸತ್ತವರಿಗೆ ಸಂಸ್ಕಾರ ಮಾಡಲು ಹೋಗಿ, ಬದುಕಿದವರು ನರಕ ಅನುಭವಿಸಬೇಕಾದ ಪರಿಸ್ಥಿತಿ ಬರುತ್ತದೆ. ಭಟ್ಟನು, ಪುರೋಹಿತರು, ಜಮೀನ್ದಾರರು ತಮ್ಮ ಕಬಂಧ ಬಾಹುಗಳನ್ನು ಚಾಚಿ, ತಮ್ಮ ಸ್ವಾರ್ಥಕ್ಕೆ ಇನ್ನೊಬ್ಬರ ಬದುಕಿನಲ್ಲಿ ಆಟವಾಡುತ್ತಾರೆ. ಸಾಲ ಕೊಡುವಾಗ ಮತ್ತು ಸಾಲ ಪಡೆಯುವಾಗ ವಹಿಸಬೇಕಾದ ಎಚ್ಚರಿಕೆ ಏನು ಎಂಬುದನ್ನು ಅರಿತಿರಬೇಕು.

ಪ್ರತಿಯೊಬ್ಬರು ತಮ್ಮ ಯೋಗ್ಯತೆಗನುಸಾರವಾಗಿ ದುಡಿಯಬೇಕು ಮತ್ತು ಮಿತವಾಗಿ ಖರ್ಚು ಮಾಡಬೇಕು. ಒಂದು ದಿನದ ಹಬ್ಬದೂಟಕ್ಕೆ ಆಸೆಪಟ್ಟರೆ ಉಳಿದ ದಿನ ಗಂಜಿಗೂ ಗತಿಯಿಲ್ಲದೆ ಉಪವಾಸದಿಂದ, ಹಸಿವೆಯಿಂದ ನರಳಬೇಕಾದೀತು ಎಂಬ ವಾಸ್ತವ ಸತ್ಯವನ್ನು ಈ ಕಥೆ ತಿಳಿಸುತ್ತದೆ. ಸತ್ತವರ ಹೆಸರಿನಲ್ಲಿ ಮಾಡುವ ಸಂಸ್ಕಾರ, ತಿಥಿ, ಶ್ರಾದ್ಧ, ಇವೆಲ್ಲ ಜೊಳ್ಳು, ಇವೆಲ್ಲ ಹೊಟ್ಟೆ ತುಂಬಿದವರನ್ನು ಮತ್ತಷ್ಟು ತುಂಬಿಸಲು ಇರುವ ಮಾರ್ಗಗಳು ಮಾತ್ರ. ನಮ್ಮ ಬುದ್ಧಿ ನಮ್ಮ ಕೈಯಲ್ಲಿರಬೇಕು. ಈ ಕ್ರೂರ ಸಮಾಜದಲ್ಲಿ ಮಾನವೀಯತೆ, ಸತ್ತು ಹೋಗಿದೆ. ಇದ್ದವರು ಮತ್ತಷ್ಟು ಪಡೆಯಲು ಹವಣಿಸುತ್ತಿರುವಾಗ ಇಲ್ಲದವರಿಗೆ ಸಿಗುವುದಾದರೂ ಹೇಗೆ? ಮನುಷ್ಯನ ಆಸೆಯನ್ನು ಪೂರೈಸಬಹುದೇ ವಿನಃ ದುರಾಸೆಯನ್ನು ಈಡೇರಿಸಲು ಸಾಧ್ಯವಿಲ್ಲ. ಕೆಲವರು ತಮ್ಮ ಹೊಟ್ಟೆ ತುಂಬಿಸಿಕೊಳ್ಳುವುದಕ್ಕಾಗಿ ಇನ್ನೊಬ್ಬರನ್ನು ಬಲಿಕೊಡುತ್ತಾರೆ. ಬಡವರಲ್ಲಿನ ಮೌಢ್ಯ, ಅಸಹಾಯಕತೆ, ಸಂದರ್ಭದ ಒತ್ತಡ, ಅಜ್ಞಾನ, ಪುರೋಹಿತಶಾಹಿ ವರ್ಗಕ್ಕೆ ಬಂಡವಾಳವಾಗುತ್ತದೆ. ಅದನ್ನೇ ಅಸ್ತ್ರ ಮಾಡಿಕೊಂಡು ಅಸಹಾಯಕರನ್ನು ಅಣುಅಣುವಾಗಿ ಸುಲಿಗೆ ಮಾಡುವ, ಕಸಿದುಕೊಳ್ಳುವ, ಸ್ಥಿತಿವಂತರನ್ನು ಬಡತನದ ಕೂಪಕ್ಕೆ ತಳ್ಳಿ ಬಿಡುವ ವ್ಯವಸ್ಥಿತವಾದ ಸಂಚು ಅವ್ಯಾಹತವಾಗಿ ಈ ಸಮಾಜದಲ್ಲಿ ನಡೆಯುತ್ತಿರುತ್ತದೆ. ಎಚ್ಚರವಿದ್ದರಷ್ಟೇ

ಇಲ್ಲಿ ಬದುಕಲು ಸಾಧ್ಯ. ಎಚ್ಚರ ತಪ್ಪಿದರೆ ಜನಾರ್ದನಯ್ಯ, ಐತಾಳ, ಭಟ್ಟರಂತವರು ದೋಚಲು ಕಾಯುತ್ತಿರುತ್ತಾರೆ. ಯಾರು ಏನೇ ಹೇಳಿದರೂ ಪ್ರತಿಯೊಬ್ಬ ಮನುಷ್ಯನಿಗೆ ಅವನದೇ ಆದ ಬುದ್ಧಿ ಅಥವಾ ಜಾಣ್ಮೆಯೆಂಬುದಿರಬೇಕು.

ಸತ್ತವರಿಗೆ ಮೋಕ್ಷ ಕಾಣಿಸಲು ಹೋಗಿ ಬದುಕಿದ್ದವರನ್ನೇ ನರಕದ ಕೂಪಕ್ಕ ತಳ್ಳುವುದು ಸರಿಯಲ್ಲ. ಸತ್ತವರಿಗೆ ಮೋಕ್ಷ ಸಿಗಬೇಕು. ಹಾಗೆಂದು ಬದುಕಿದವರ ಜೀವನವೂ ಹಸನಾಗಿರಬೇಕು. ಸಾಲಗಾರರನ್ನು ಮತ್ತಷ್ಟು ಸಾಲ ಮಾಡುವಂತೆ ಪ್ರೇರೇಪಿಸುವ ವ್ಯಕ್ತಿ ಮತ್ತು ಆಚರಣೆಗಳಿಂದ ಸದಾ ದೂರವಿರಬೇಕು. ಸಾಲ ಮಾಡಿ ಪಶ್ಚಾತ್ತಾಪ ಪಡುವುದಕ್ಕಿಂತ "ಹುಷಾರಾಗಿದ್ದರೆ ಪಶ್ಚಾತ್ತಾಪ ಪಡಬೇಕಾದ ಅಗತ್ಯವಿಲ್ಲ."[೨೮] ಬದುಕಿನಲ್ಲಿ ಏಳು ಬೀಳುಗಳ ಸಹಜ. ಸಂಯಮದಿಂದ ಬದುಕಿನ ಸವಾಲುಗಳನ್ನು ಎದುರಿಸಬೇಕು ಇಲ್ಲದಿದ್ದರೆ ಸದಯನಂತೆ ಇದ್ದು, ಇಲ್ಲದಾಗಿಸಿಕೊಳ್ಳಬೇಕಾದೀತು. ಎಚ್ಚರದ ನಡೆ ಇರಬೇಕು.

ಕೊರಡ್ಕಲ್ ಶ್ರೀನಿವಾಸರಾವ್‌ರವರ 'ಧನಿಯರ ಸತ್ಯನಾರಾಯಣ'

ಕೊರಡ್ಕಲ್ ಶ್ರೀನಿವಾಸರಾವ್ ೧೯೩೮ರಲ್ಲಿ ಪ್ರಕಟಿಸಿದ 'ಧನಿಯರ ಸತ್ಯನಾರಾಯಣ' ಯಾರ ದುಡಿಮೆ ಇನ್ನಾರದೋ ಪಾಲು ಎಂಬುದನ್ನು ತಿಳಿಸುವ ಕಥೆ. ಈ ಕಥೆಯಲ್ಲಿ ದಿನಗೂಲಿ ಮಾಡಿ ಸಂಸಾರ ತೂಗುವ ಕಡುಬಡವ ತೌಡನು ತನ್ನ ಮಕ್ಕಳು ಬೂದ ಮತ್ತು ತುಕ್ರಿಯರ ಕಾಟ ತಡೆಯಲಾರದೆ ತನ್ನ ಗುಡಿಸಲ ಹಿಂದೆ ಬಾಳೆಯ ಸಸಿಗಳನ್ನು ನೆಡುತ್ತಾನೆ. ತಮ್ಮೆಲ್ಲ ಆಸೆ-ಆಶೋತ್ತರಗಳ ಪ್ರತೀಕವೆಂಬಂತೆ ಮನೆಯವರೆಲ್ಲ ಆ ಬಾಳೆಗಿಡಗಳನ್ನು ಜತನದಿಂದ ಬೆಳೆಸುತ್ತಾರೆ. 'ಅವರು ಹೊತ್ತು ತಂದ ಕಂದು; ಅವರಪ್ಪ ನೆಟ್ಟ ಕಂದು; ಅವರು ನೀರೆರೆದು ಬೆಳೆಸಿದ ಕಂದು, ಆದರೆ ಅದು ಗೊನೆ ಬಿಟ್ಟು ಹಣ್ಣಾಗತೊಡಗಿದಾಗ ತೌಡನ ಧಣಿಯಾದ ನಾಗಪ್ಪಯ್ಯನವರ ಕಣ್ಣಿಗೆ ಅದು ಬೀಳುತ್ತದೆ. ತಮ್ಮ ಮನೆಯ ಸತ್ಯನಾರಾಯಣ ಪೂಜೆಗೆ ಅದು ಬೇಕೆಂದು ನಿರ್ದಾಕ್ಷಿಣ್ಯವಾಗಿ ಕಡಿಸಿಕೊಂಡು ಹೋಗುತ್ತಾರೆ. ಮಕ್ಕಳಿಗೆ ಆಘಾತವಾಗುತ್ತದೆ. ಹಲವು ದಿವಸಗಳಿಂದ ಹಸಿವನ್ನು ತಡೆದಿಟ್ಟುಕೊಂಡು ಇನ್ನೇನು ಹಸಿವು ನಿವಾರಣೆಯಾಗಿ ಹೊಟ್ಟೆ ತುಂಬಬೇಕೆನ್ನುವಷ್ಟರಲ್ಲಿ ಬಾಳೆಗೊನೆ ಧನಿಯವರ ಸತ್ಯನಾರಾಯಣನ ಪಾಲಾದದ್ದು ಮಕ್ಕಳಿಗೆ ನುಂಗಲಾರದ ತುತ್ತಾಗುತ್ತದೆ. ಸಿಟ್ಟು, ದುಃಖ, ನಿರಾಶೆ, ಹತಾಶೆಗಳಿಗೆ ಏಕಮಾತ್ರ ಅಭಿವ್ಯಕ್ತಿ ಎಂಬಂತೆ ಬೂದ ಮತ್ತು ತುಕ್ರಿ ಆವೇಶ ಮತ್ತು ಉನ್ಮಾದದಿಂದ ತಾವೇ ನೆಟ್ಟ ಬಾಳೆಯ ಕಂದುಗಳನ್ನು ಕಡಿದುರುಳಿಸುತ್ತಾರೆ. ಶೋಷಣೆ ಮತ್ತು ಅದಕ್ಕೆ ಪ್ರತಿಭಟನೆ ಇವುಗಳಿಗೆ ಒಂದು ಮಾದರಿಯಂತಿರುವ ಈ ಕಥೆಯೇ ಮುಂದುವರಿದು ಬೇರೊಂದು ಆವರಣದಲ್ಲಿ 'ಚೆಲುವನ ಪರಂಗಿ ಗಿಡಗಳಾಗಿ' ರಚಿತವಾಗಿದೆಯೋ ಎಂಬಷ್ಟು ಆಶಯ ಸಾದೃಶ್ಯ ಈ ಎರಡು ಕಥೆಗಳಿವೆ. ದೇವರ ಹೆಸರಲ್ಲಿ ಬಡವರನ್ನು ಹಸಿವಿನ ಕೂಪಕ್ಕೆ ತಳ್ಳುವ ನಾಗಪ್ಪಯ್ಯನ ಮನೆಯ ಸತ್ಯನಾರಾಯಣ ಬೂದ, ತುಕ್ರಿಯರ ಪಾಲಿಗೆ ಸತ್ತ ನಾರಾಯಣನಾಗುತ್ತಾನೆ.

ಫಕೀರ್ ಮುಹಮ್ಮದ್ ಕಟ್ಪಾಡಿಯವರ 'ನೋಂಬು'

ನೋಂಬು ಎಂದರೆ ಉಪವಾಸ; ರಮ್ಜಾನ್ ತಿಂಗಳಲ್ಲಿ ಮುಂಜಾವಿನಿಂದ ಕತ್ತಲಾಗುವ ತನಕ ಏನೂ ತಿನ್ನದೆ ಉಪವಾಸವಿರುವುದೇ 'ನೋಂಬು' ಎನ್ನುವುದು ಈ ಕತೆಯ ಕೇಂದ್ರ

ಪಾತ್ರವಾದ ಬಾಲಕ ಅದ್ದುವಿಗೂ ಗೊತ್ತು. ಮಕ್ಕಳಿಗೆ ಅದು ಕಡ್ಡಾಯವಲ್ಲವಾದ್ದರಿಂದ ಅದ್ದುವಿಗೆ ನೋಂಬು ಮಾಡಿದ ಅನುಭವವಿರಲಿಲ್ಲ ಅಷ್ಟೇ. ಬೀಡಿ ಕಟ್ಟಿ ಬದುಕು ಸಾಗಿಸುವ ಬಡ ಮುಸ್ಲಿಮ್ ದಂಪತಿಗಳ ಮಗನಾದ ಅದ್ದುವಿಗೆ ಹಸಿವೆ, ಉಪವಾಸಗಳೇನೂ ಅಪರಿಚಿತವೇನಲ್ಲ. ಆದರೆ ಒಂದು ಧಾರ್ಮಿಕ ಆಚರಣೆಯಾಗಿ ಕಟ್ಟುನಿಟ್ಟಿನ ವ್ರತವಾಗಿ, ಅಂದರೆ ತನ್ನ ಆಯ್ಕೆಯಿಂದಲೇ ಅದ್ದು ಉಪವಾಸವಿದ್ದವನಲ್ಲ. ತನ್ನ ಅಪ್ಪ ಆಸ್ಪತ್ರೆಯಲ್ಲಿದ್ದಾಗ, ಮನೆಯಲ್ಲಿ ಅನ್ನ ಮಾಡದೆ ಇದ್ದ ದಿನವೂ ನೋಂಬುವಿನಂತೆಯೇ ಇತ್ತು. ಅದ್ದು ಅಮ್ಮನನ್ನು ಕೇಳುತ್ತಿದ್ದುದುಂಟು 'ಅರೆ...ನೋಂಬು ಎಂದರೆ ಇದೇ ಏನಮ್ಮಾ?. ನಾವು ಹಾಗೆ ತುಂಬಾ ಸಲ ಇದ್ದೇವಲ್ಲಾ! ಎಂದು. ಹೀಗೆ ಬಡವರ ನಿತ್ಯದ ಅನುಭವ ಮತ್ತು ಮುಸಲ್ಮಾನರ ಅತ್ಯಂತ ಪವಿತ್ರ ಆಚರಣೆ ಇವುಗಳನ್ನು ಸಮಾನಾಂತರದಲ್ಲಿ ಗ್ರಹಿಸಿ ಕಟ್ಟಾಡಿಯವರು ತಮ್ಮ ಕತೆಯನ್ನು ರಚಿಸಿದ್ದಾರೆ. ಒಂದೇ ಧಾರ್ಮಿಕ ಆವರಣದಲ್ಲಿ ಬದುಕುತ್ತಿದ್ದರೂ ಈ ಸಮುದಾಯದ ಸಾಮಾಜಿಕ ಬದುಕಿನಲ್ಲಿ ಕಂಡು ಬರುವ ಬಡವ-ಬಲ್ಲಿದ, ಗಂಡು-ಹೆಣ್ಣು ನಡುವಣ ಅಸಮಾನತೆಯ ಪ್ರಶ್ನೆಗಳನ್ನು ಲೇಖಕರು ಮರೆ ಮಾಚುವುದಿಲ್ಲ. ಅದ್ದುವಿನ ಮುಗ್ಧ ಪ್ರಜ್ಞೆಯಲ್ಲಿ ಒಂದು ಅರ್ಥಪೂರ್ಣ ಕತೆಯಾಗಿ ಮೂಡಿಬಂದಿದೆ. ಈ ಕತೆಯಲ್ಲಿ ಮೂಡಿ ಬಂದಿರುವ ಸ್ವರ್ಗದ ಕಲ್ಪನೆಯನ್ನೆ ಗಮನಿಸಬಹುದು. ಒಂದು ರಮ್ಜಾನ್ ಮಧ್ಯಾಹ್ನ ಅದ್ದುವಿನ ಅಪ್ಪನು ತನ್ನ ದುರ್ಬಲ ದೈಹಿಕ ಸ್ಥಿತಿಯಿಂದಾಗಿ ನಾಲ್ಕು ಗೋಣಿ ಬೀಡಿ ಎಲೆಗಳ ಕಟ್ಟುಗಳನ್ನು ಹೊತ್ತದ್ದಕ್ಕೆ ಸುಸ್ತಾಗಿ ಮನೆಗೆ ಬಂದು, ಈ ಸಲದ ಉಪವಾಸ ಕಠಿಣವಾದದ್ದು......... ಇನ್ನು ಇಪ್ಪತ್ತು ನೋಂಬುಗಳಿವೆಯಲ್ಲ ಹ್ಯಾಗೆ ಮುಗಿಸೋದು? ಎಂದು ನಿಟ್ಟಿಸಿರಿಡುತ್ತಾನೆ. ಆಗ ಅದ್ದುವಿನ ಅಮ್ಮ ಸ್ವಲ್ಪ ಗಂಜಿಯನ್ನು ಉಣ್ಣಲು ಹೇಳಿದಾಗ ಅದ್ದುವಿನ ಅಪ್ಪ ಹೇಳುತ್ತಾನೆ 'ಛೆ ಛೆ ಇಂತಹ ಕಷ್ಟಗಳಿಗೆಲ್ಲಾ ಹೆದರಿ ಉಪವಾಸ ಬಿಡೋದೇ! ಅಲ್ಲಾಹನ ಕ್ಷಮೆ ಇರಲಿ. ನಾಳೆ ಅಂತಿಮ ದಿನ ಬರುವಂತಹ ಕಷ್ಟಗಳೆಲ್ಲಾ ಈ ಭೂಮಿಯ ಮೇಲಿನ ಬದುಕಿನಲ್ಲೇ ಬಂದು ತೀರಲಿ . ನಾಳೆ ಸತ್ತ ನಂತರ ಅಖಿರತ್‌ನಲ್ಲಾದರೂ ಅಲ್ಲಾಹ ನಮಗೆ ಸುಖ ಸಂಪತ್ತನ್ನು ಕರುಣಿಸಲಿ. ಕಾಸಿಮನು ತನ್ನ ಅಮ್ಮನಿಂದ ಕೇಳಿದ್ದನ್ನು ಅದ್ದುವಿಗೆ ನಿರೂಪಿಸುವುದು ಹೀಗೆ. ರಮ್ಜಾನ್ ತಿಂಗಳಲ್ಲಿ ಕುರಾನ್ ಮುಸ್ತಾಬ್ ಇದೆಯಲ್ಲಾ ಅದು ಭೂಮಿಗೆ ಬಂದದ್ದಂತೆ. ಈ ತಿಂಗಳಲ್ಲಿ ಸ್ವರ್ಗದ ಬಾಗಿಲು ತೆರೆದಿರುತ್ತಂತೆ, ನೋಂಬು ಮಾಡಿದವರೆಲ್ಲ ಸ್ವರ್ಗಕ್ಕೆ ಹೋಗ್ತಾರಂತೆ ಕಾಸಿಮನಿಂದ ಸ್ವರ್ಗದ ವರ್ಣನೆ ಕೇಳುತ್ತಿದ್ದಂತೆ ಅದ್ದುವಿಗೆ ಬದುಕಿರುವಾಗಲೇ ಸ್ವರ್ಗ ಸಿಗಬಾರದೆ ಎನಿಸುತ್ತದೆ. ಶ್ರೀಮಂತ ಕಾಸಿಮನ ಮನೆಯೂ ಸ್ವರ್ಗದ ಹಾಗೆ ಕಾಣಲಾರಂಭಿಸುತ್ತದೆ. ತನ್ನ ಅಪ್ಪ-ಅಮ್ಮ ಧರ್ಮನಿಷ್ಠರಾಗಿದ್ದರೂ ಅವರೇಕೆ ಕಷ್ಟದಲ್ಲಿದ್ದಾರೆ ಎನಿಸತೊಡಗುತ್ತದೆ. ಅದಕ್ಕೆ ವೈದೃಶ್ಯವೆನಿಸುವಂತೆ ಕಾಸಿಮನ ಭಾವ ವ್ರತಾಚರಣೆಯ ಕಾಲದಲ್ಲೂ ಸಿಗರೇಟು ಸೇದುವುದು ಅವನಿಗೆ ಕಸಿವಿಸಿಯನ್ನುಂಟು ಮಾಡುತ್ತದೆ. ಕಾಸಿಮನ ಅಕ್ಕ ಜಮೀರಾ ತನ್ನ ಗಂಡನಿಂದ ದೈಹಿಕ, ಮಾನಸಿಕ ಹಲ್ಲೆಗೆ ಒಳಗಾಗುವುದನ್ನು ಅವನು ವೀಕ್ಷಿಸಿ ತಬ್ಬಿಬಾಗುತ್ತಾನೆ. ಅದ್ದುವಿನ ಮನೋಲಹರಿಯ ಮೂಲಕ ಲೇಖಕರು ನಂಬಿಕೆಯ ಲೋಕದ ಒಳಗೇ ಇರುವ ದ್ವಂದ್ವವನ್ನು ಸಮಸ್ಯಾತ್ಮಕಗೊಳಿಸುತ್ತಾರೆ. ಅದ್ದು ಅಪ್ಪ ಕಟ್ಟಿದ ಬೀಡಿಗೆ ನೂಲು ಸುತ್ತುತ್ತಾ ಕೂತಾಗ ಅಲ್ಲಾಹನ ಬಗ್ಗೆ ದರ್ಸಿನಲ್ಲಿ ಮೌಲ್ವಿಯಾರರು ಹೇಳಿಕೊಟ್ಟಿದ್ದು ನೆನಪಾಯಿತು. 'ಅಲ್ಲಾಹನು ಒಬ್ಬನೇ ಅವನು ಅನಾದಿಯಿಂದ ಇರುವವನೂ, ಯಾವ ಕುಟುಂಬ ಸಂಸಾರವಿಲ್ಲದವನೂ ಆಗಿದ್ದಾನೆ. ಅವನು ಕಣ್ಣಿಲ್ಲದೆ ಕಾಣುವವನೂ, ಕಿವಿಯಿಲ್ಲದೆ ಕೇಳುವವನೂ ಎಲ್ಲವನ್ನು ಸೃಷ್ಟಿಸಿದವನೂ ಆಗಿದ್ದಾನೆ. ಅಲ್ಲಾಹು ಕಣ್ಣಿಲ್ಲದೆ ಎಲ್ಲವನ್ನೂ ಕಾಣುವವನಾದ್ದರಿಂದ

ಕಾಸಿಮನ ಭಾವ ಸಿಗರೇಟು ಸೇದಿದ್ದು ನೋಡಿರಬಹುದು. ಅಪ್ಪ ಕೆಮ್ಮಿದ್ದು, ತಲೆತಿರುಗಿದರೂ ಬಿಡದೆ ನೋಂಬು ಮಾಡುತ್ತಿರುವುದನ್ನು ನೋಡಿರಬಹುದು. ಆದರೂ ಕಾಸಿಮನ ಭಾವ ಇರೋದು ಸ್ವರ್ಗದಂತಹ ಮನೆಯಲ್ಲಿ. ನಾವಿರುವುದು ಮಡ್ಲು ಸೋಗೆಯಲ್ಲಿ ಕಟ್ಟಿದ ಗುಡಿಸಲಲ್ಲಿ. ಇದೇಕೆ ಹೀಗೆ? ಬಹುಶಃ ಅಪ್ಪ ಹೇಳುವ ಹಾಗೆ ಸತ್ತ ನಂತರ ನಮ್ಮನ್ನು ಅಲ್ಲಾಹು ಸುಖದಲ್ಲಿಡುತ್ತಾನೆನ್ನುವುದು ಸತ್ಯವಿರಬೇಕು. ನಿಜವಾದ ದೈವಭಕ್ತರಲ್ಲಿ ಹಲವರು ಇಹಲೋಕದಲ್ಲಿ ಆದೇಕೆ ಅಷ್ಟು ಕಷ್ಟ ಪಡಬೇಕು? ದೈವ –ಧರ್ಮ ಶ್ರದ್ಧೆಯಿರದಿದ್ದವರಲ್ಲಿ ಅನೇಕರು ಸುಖ ಸಮೃದ್ಧಿ ಅನುಭವಿಸುತ್ತಾರಲ್ಲ. ಅದು ಹೇಗೆ? ಎಂಬ ಪ್ರಶ್ನೆಗಳು ಆಸ್ತಿಕರಲ್ಲೂ ನಾಸ್ತಿಕರಲ್ಲೂ ತುಂಬಾ ತೊಡಕಿನ ತಾತ್ವಿಕ ಪ್ರಶ್ನೆಗಳು. ಇಂಥವೊಂದು ಗಹನವಾದ ಜಿಜ್ಞಾಸೆಯೊಂದನ್ನು ಅದ್ದುವಿನ ಶುದ್ಧ ಮುಗ್ಧ ಪ್ರಜ್ಞೆಯ ಮೂಲಕ ಮಂಡಿಸಿ ಕಟ್ಪಾಡಿಯವರ ಈ ಕತೆಯು ದೈನಿಕಗಳ ನಿರೂಪಣೆಯನ್ನು ದಾಟಿದ ಉನ್ನತ ಸ್ತರವೊಂದನ್ನು ತಾನಾಗಿ ಮುಟ್ಟಿದೆ. ಹಾಜಿಯವರು ಅದ್ದು ಕಾಸಿಮನ ಭಾವನಿಗೆ ಸಿಗರೇಟು ತೆಗೆದುಕೊಂಡು ಹೋಗುವುದನ್ನು ನೋಡಿ ಅದು ಅವನ ಅಪ್ಪನಿಗೆ ಇರಬಹುದೆಂದು ಅನುಮಾನಿಸಿ, ಇಸ್ಲಾಮಿತನವನ್ನು ಸ್ವಲ್ಪವೂ ಪಾಲಿಸದಿರುವುದರಿಂದಲೇ ನೀವು ಬರ್ಕತ್ತಾಗದಿರೋದು ಎಂದು ಛೇಡಿಸಿದಾಗ ಅದ್ದುವಿಗೆ ಸಿಟ್ಟೇ ಬಂದು ಬಿಡುತ್ತದೆ. ಅಪ್ಪ ಅಮ್ಮ ನೋಂಬು ನಮಾಜನ್ನು ಎರಡನ್ನು ಎಂದೂ ತಪ್ಪಿಸಿದವರಲ್ಲವಾದರೂ ನಾವೇಕೆ ಇನ್ನೂ ಬರ್ಕತ್ತಾಗಲಿಲ್ಲವೆಂಬುದು ಅವನ ಪ್ರಶ್ನೆ.

ಕಾಸಿಮನ ಅಮ್ಮ ಅದ್ದುವಿಗೆ 'ನೋಂಬಿದ್ದ' ಹುಡುಗನ ಕತೆ ಹೇಳುತ್ತಾಳೆ. ಹುಡುಗ ತಾಯಿಯೊಂದಿಗೆ ಹಟ ಹಿಡಿದು ಉಪವಾಸ ಮಾಡಿದ್ದು, ಸಂಜೆಯಾಗುತ್ತಲೇ ಮುಖ ಬಾಡಿ ಮೈ ಒಣಗುತ್ತ ಬಂದು ಅವನು ಸತ್ತು ಹೋದದ್ದು. ಆಗ ಅಲ್ಲಾಹುನ ದೂತನೊಬ್ಬ ಫಕೀರನ ವೇಷದಲ್ಲಿ ಬಂದು ಅಲ್ಲಾಹುವಿನ ದಯೆಯಿಂದ ಬದುಕಿಸಿದ್ದು, ಮತ್ತೆ ಅವನು ತಂದೆ ತಾಯಿಗಳ ಜೊತೆ ಸುಖವಾಗಿ ಬದುಕಿದ್ದು. ಈ ಕತೆ ಕೇಳಿ ಅದ್ದು ಅಮ್ಮನೊಂದಿಗೆ ಮಾರನೇ ದಿನ ನಾನು ನೋಂಬು ಮಾಡುವೆನೆಂದು ಹಟ ಹಿಡಿಯುತ್ತಾನೆ. ಕತೆಯಲ್ಲಿನ ಹುಡುಗನಂತೆ ಸಾಯುವುದು ಇಲ್ಲ; ದೇವದೂತ ಬರುವುದು ಇಲ್ಲ. ಹೀಗೇಕೆ? ತನ್ನ ಜನಾಂಗದವರು ರಮ್ಜಾನ್‌ಮಾಸದಲ್ಲಿ ಮಾತ್ರ ನೋಂಬನ್ನಾಚರಿಸಿದರೆ ತನ್ನ ಕುಟುಂಬದವರು ಪ್ರತಿ ಮಾಸವೂ ಸಹಜವೆಂಬಂತೆ ನೋಂಬನ್ನಾಚರಿಸಿದರೆ ದೇವದೂತರೂ ಬರಲಿಲ್ಲ. ತನ್ನ ಕುಟುಂಬದ ಬಡತನ, ಹಸಿವು, ಗುಡಿಸಲು ಬದಲಾಗಲಿಲ್ಲವೇಕೆ ? ಎಂಬುದು ಅದ್ದುವಿನ ಪ್ರಶ್ನೆ ಮತ್ತು ಗೊಂದಲ, ಅಚ್ಚರಿ ಹಾಗೆ ಉಳಿದುಬಿಡುತ್ತದೆ. ಆಸ್ತಿಕತೆಯೂ ಇಡೀ ಸಮುದಾಯದ ನೈತಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡಬಲ್ಲದು ಎಂಬ ಶ್ರದ್ಧೆ ಇಲ್ಲಿ ಕೆಲಸ ಮಾಡಿದೆ. ಎಲ್ಲರೂ ಅಲ್ಲಾಹುವಿನ ಮಕ್ಕಳೇ ಆಗಿರುವಾಗ ಪುರುಷನು ಸ್ತ್ರೀಯರನ್ನು ಶೋಷಿಸುವುದೇಕೆ? ಶ್ರಮಜೀವಿಗಳು ಹಸಿವು ಮತ್ತು ಬಡತನದಿಂದ ಕೂಡಿದ ಬವಣೆಯ ಬದುಕು ಸಾಗಿಸುವುದೇಕೆ? ಎಂಬ ಪ್ರಶ್ನೆಗಳನ್ನು ಕತೆ ಗಟ್ಟಿಯಾಗಿ ಕೇಳುತ್ತದೆ. ಧಾರ್ಮಿಕ–ಸಾಮಾಜಿಕ ಕಾರಣಗಳಿಂದ ಮುಸ್ಲಿಂ ವರ್ಗದವರೂ ಹಸಿವು–ಬಡತನದ ಬೇಗೆಯಿಂದ ಬಳಲುವುದು ಹೊಸತೇನಲ್ಲವಾದರೂ ಕೆಲವರು ಹಬ್ಬದ ಕಾರಣದಿಂದ ಉಪವಾಸ ಮಾಡಿದರೆ ಕೆಲವರದು ದಿನನಿತ್ಯದ ಉಪವಾಸವೇ ವ್ರತವಾಗಿರುತ್ತದೆ. ಹಸಿವೆಂಬುದು ಜಾತಿ ಧರ್ಮದ ಎಲ್ಲೆಯನ್ನು ಮೀರಿದ್ದು.

ಸಾರಾ ಅಬೂಬಕ್ಕರ್‌ರವರ 'ನಿಯಮ ನಿಯಮಗಳ ನಡುವೆ'

ನಿಯಮ ನಿಯಮಗಳ ನಡುವೆ ಕಥೆಯಲ್ಲೂ ಹಸಿವು ಬಡತನದ ಅಸಹಾಯಕತೆಯನ್ನು ಅಸ್ತ್ರಮಾಡಿಕೊಂಡು ಲೈಂಗಿಕವಾಗಿ, ಮಾನಸಿಕವಾಗಿ ಪುರುಷನು ಶೋಷಣೆ ಮಾಡುವುದನ್ನು ಕಾಣಬಹುದು. ಧರ್ಮ ಇರುವುದು ರಕ್ಷಣೆ ಮಾಡಲು ಆದರೆ ಅದನ್ನು ದುರುಪಯೋಗ ಮಾಡಿಕೊಳ್ಳುವುದರ ಮೂಲಕ ಹೆಣ್ಣಿನ ಬದುಕು ದುರಂತಕ್ಕಿಡಾಗುತ್ತದೆ. ಧರ್ಮದ ನಿಜವಾದ ಮಾರ್ಗದರ್ಶನವನ್ನು ಅರಿತು ನಡೆಯಬೇಕು. ಸಹಜ ಧರ್ಮ ಪಾಲಿಸುವ ಬದಲು ಕೃತಕಧರ್ಮ ಪಾಲಿಸುವುದು ಮನುಷ್ಯ ಲೋಕದ ದುರಂತವಾಗಿದೆ. ಧರ್ಮದ ಹೆಸರಿನಲ್ಲಿ ಹೆಣ್ಣನ್ನು ನಿಕೃಷ್ಟವಾಗಿ ಕಂಡು, ಆಕೆಯನ್ನು, ಆಕೆಯ ಮಕ್ಕಳನ್ನು ಹಸಿವಿನಿಂದ ಬಳಲುವಂತೆ ಮಾಡುವುದು ನಿಜಕ್ಕೂ ಹೇಯ ಕಾರ್ಯ.

೪.೪ ರಾಜಕೀಯ ಕಾರಣದ ಹಸಿವಿನ ಕತೆಗಳು

ಕಾರಂತರ 'ಕಳ್ಳ ಫಕೀರ'

ಶಿವರಾಮ ಕಾರಂತರ ಇನ್ನೊಂದು ಕಥೆ ಕಳ್ಳ ಫಕೀರ. ಕಾಳೂರಿನವರಿಗೆಲ್ಲಾ ಕಳ್ಳ ಫಕೀರನೆಂದರೆ ಚಿರಪರಿಚಿತ. ಫಕೀರ ಕಳ್ಳನಾದರೂ ಊರಿಗೆ ತೀರಾ ಬೇಕಾದವನು. ಫಕೀರ ಊರಿನ ಒಂದು ತುದಿಯಲ್ಲಿ ಬಂದರೆ ಸಾಕು. ಇನ್ನೊಂದು ಬದಿಯಲ್ಲಿದ್ದ ಅವನ ಸ್ನೇಹಿತರೇ 'ಕಳ್ಳ ಬಂದ ನೋಡು' ಎನ್ನುತ್ತಿದ್ದರು. ಬಡವರಿಗಂತು ಅವನನ್ನು ನೋಡಿದರೆ ಆನಂದ. ಫಕೀರನೂ ಬಡವನೇ, ಆದರೆ ಬಡವರಿಗೆ ದುಃಖ ಬಂದರೆ ಪ್ರಾಣವನ್ನಾದರೂ ಕೊಟ್ಟು ಸಂತೈಸುವ ಮನಸ್ಸು ಅವನದು. ಎಷ್ಟೋ ಬಾರಿ ಅವನು ಬಡವರಿಗೆ ಹಣಕಾಸು ಕೊಟ್ಟುದು ಉಂಟು. ಬಡವರಿಗೆ ಫಕೀರನನ್ನು ಕಂಡರೆ ಎಷ್ಟು ಆನಂದವೋ ಅಷ್ಟೇ ಅಂಜಿಕೆ ಶ್ರೀಮಂತರಿಗೆ. ಕೆಲವರಿಗೆ ಸಿಟ್ಟು, ತಿರಸ್ಕಾರ.

ಬಡವರ ಬಳಿ ಫಕೀರ ಹೇಗೆಂದು ಕೇಳಿದರೆ ಸಾಕು. "ಫಕೀರನ ಸುದ್ದಿ ಕೇಳುವುದೇನು?" ನಮ್ಮ ತಂದೆಯಂತಿರುವ, 'ಫಕೀರ ಎಂದರೆ ಚಿನ್ನ', 'ಫಕೀರ ಎಂದರೆ ಫಕೀರ' ಎಂಬ ಮೆಚ್ಚುಗೆಯ ಮಾತನ್ನು ಆಡುತ್ತಿದ್ದರು. ಶ್ರೀಮಂತರನ್ನು ಕೇಳಿದರೆ "ಫಕೀರ ಹೇಗೆ ಅಂದರೆ, ಹೆಸರೇ ಹೇಳುತ್ತದೆ ಕಳ್ಳ ಎಂದು", "ಫಕೀರನೇ ಸ್ವಾಮಿ ಊಟ ಸಿಗಲಿಕ್ಕಿಲ್ಲ" ಎಂದು ಬಿಡುವರು. ಶಾಲಾ ಮಾಸ್ತರರಾಗಿದ್ದ ನಿರೂಪಕರು ಊಟಕ್ಕಿದ್ದುದು ಶ್ರೀಪತಿರಾಯರೆಂಬ ಶ್ರೀಮಂತರ ಮನೆಯಲ್ಲಿ. ಅನ್ನದಾನ ಮಾಡುತ್ತಿದ್ದ ಅವರು ಫಕೀರನ ಬಗ್ಗೆ ಹೇಳುತ್ತಿದ್ದ ಮಾತುಗಳನ್ನು ಕೇಳಿ ಕೇಳಿ ಮನಸ್ಸಿನ ತುಂಬಾ ಹೆದರಿಕೆ ಆವರಿಸಿತ್ತು. ಒಂದನೇ ತಾರೀಖು ಬಂತೆಂದರೆ ನಿರೂಪಕರ ಎದೆ ಬಡಬಡಿಸುತ್ತಿತ್ತು. ಎಲ್ಲಿ ಸಂಬಳಕ್ಕೆ ಸಂಚಕಾರ ಬರುತ್ತದೆಂದು.

ಒಂದನೇ ತಾರೀಖಿನ ದಿನ ಶಾಲೆಯ ಇಬ್ಬರು ವಿದ್ಯಾರ್ಥಿಗಳೊಂದಿಗೆ ಮನೆಯ ಕಡೆಗೆ ಹೊರಟಿದ್ದ ನಿರೂಪಕ ಮಾಸ್ತರರಿಗೆ ವಿದ್ಯಾರ್ಥಿ "ಸರ್ ಸರ್, ಕಳ್ಳ ಫಕೀರ ಸರ್" ಎಂದನು. ನಿರೂಪಕರಿಗೆ ತಲೆಯ ಮೇಲೆ ಕೊಡಲಿ ಬಿದ್ದಂತಾಯಿತು. ಹುಡುಗರನ್ನು ಅಲ್ಲಿಯೇ ಬಿಟ್ಟು ನಾಗಾಲೋಟದಿಂದ ಓಡಿದರು. ಆ ಕಳ್ಳನಿಗೆ ಒಂದನೇ ತಾರೀಖೆಂದು ಹೇಳಿದವರಾರು ಎಂದು

ಶಿಪಿಸಿ ಓಡುತ್ತಿದ್ದಾಗ, ಮುದುಕನೊಬ್ಬನಿಗೆ ಡಿಕ್ಕಿಹೊಡೆದರು. ಕಿಸೆಯಲ್ಲಿದ್ದ ರೂಪಾಯಿಗಳೆಲ್ಲಾ ನೆಲದ ಮೇಲೆ ಚೆಲ್ಲಾಪಿಲ್ಲಿಯಾಗಿ ಹರಡಿ ಬಿದ್ದಿದ್ದವು.

ಮುದುಕನು ಮೆಲ್ಲನೇ ಕುಳಿತು, ತನ್ನ ಹಣವೆಂಬಷ್ಟೇ ಆತುರದಿಂದ ಬಿದ್ದ ರೂಪಾಯಿಗಳನ್ನು ಸೇರಿಸಿದನು. ನಿರೂಪಕರಿಗೆ 'ಅಯ್ಯೋ' ಎಂದು ಚೀರಬೇಕು ಎನ್ನುವಷ್ಟರಲ್ಲಿ ಗ್ರಹಚಾರಕ್ಕೆ ಅವನ ಸೊಂಟದಲ್ಲಿದ್ದ ಚಿಚ್ಚುಗತ್ತಿಯು ಕಾಣಿಸಿತು. ನಗುತ್ತ 'ತೆಗೆದುಕೊಳ್ಳಿ ಬುದ್ಧಿ' ಎಂದು ನಿರೂಪಕರ ನಡುಗುವ ಕೈಗಳ ಮೇಲಿರಿಸಿದನು. ನಿರೂಪಕರಿಗೆ ಅದನ್ನು ನಂಬಲಾಗಲಿಲ್ಲ. ನಕ್ಕರು. ಆತನೂ ನಕ್ಕನು. "ಚಿನ್ನದಂಥ ಮನುಷ್ಯ ನೀನು, ಕೋಪಿಸಿಕೊಳ್ಳಬೇಡ, ಗಡಿಬಿಡಿಯಿಂದ ನಿನ್ನನ್ನು ಹಾಯ್ದೆ. ಕ್ಷಮಿಸು. ನಿನ್ನ ಹೆಸರೇನು?" ಎಂದು ಕೇಳಿದಾಗ ಆ ಮುದುಕ 'ಕಳ್ಳ ಫಕೀರ' ಎಂದ ಕೂಡಲೇ ನಿರೂಪಕರಿಗೆ ಅಂಜಿಕೆಯಾಯಿತು. ಕಳ್ಳ ಫಕೀರನ ಹೆಸರು ಕೇಳಿ ಓಟ ಓಡಿದ ತಾನು ಈಗ ಸಿಕ್ಕಿದುದು ಅವನ ಬಾಯಿಗೆ ಎಂದೆನಿಸಿತು. 'ಕಳ್ಳ ಫಕೀರನೇ' ಎಂದು ರಾಗ ಮಾಡಿ ಕೇಳಿದಾಗ, 'ಹೌದು' ಎಂದ ಆ ಮುದುಕನ ಮಾತು ಕೇಳಿ ಆಶ್ಚರ್ಯವಾಯಿತು. ಅವನು ಅಷ್ಟರಲ್ಲಿ ಎದ್ದು ಹೊರಟು ಹೋಗಿಬಿಟ್ಟ. ನಿರೂಪಕ ರೂಪಾಯಿಗಳನ್ನು ಕಿಸೆಯಲ್ಲಿ ತುಂಬಿಸಿ ಕೈಯಿಂದ ಒತ್ತಿ ಹಿಡಿದುಕೊಂಡು ಶ್ರೀಪತಿರಾಯರ ಮನೆಗೆ ಓಡಿದನು. ಅಲ್ಲಿ ಹೋಗಿ ಕುಳಿತುಕೊಂಡಾಗ ಸತ್ತವನು ಬದುಕಿದಷ್ಟು ಆನಂದವಾಯಿತು. ತನ್ನ ದೇಹದಿಂದ ಗಂಗೆ-ಯಮುನೆಯರಂತೆ ಬೆವರು ಸುರಿಯುತ್ತಿದ್ದುದನ್ನು ಕಂಡು ಶ್ರೀಪತಿರಾಯರು "ಏನಿದು ಗಾಬರಿ, ಗಡಿಬಿಡಿ. ಹೆದರಿಕೊಂಡಿರೇ? ಎಂದಾಗ ನಿರೂಪಕರು ನಡೆದ ವಿಚಾರ ತಿಳಿಸಿದರು. ಕಳ್ಳ ಫಕೀರನನ್ನು ನೀವು ನೋಡಿದ್ದು ಸುಳ್ಳು. ಅವನಾದರೆ ಎಂದಿಗೂ ನಿಮ್ಮ ಕಾಸು ಸಿಗುತ್ತಿರಲಿಲ್ಲ ಎಂದರು ಶ್ರೀಪತಿರಾಯರು. ಇರಲಿ ಕಾಸು ಎಣಿಸಿ ನೋಡಿ ಎಂದರು. 'ಎರಡೂ ಕಾಲು ರೂಪಾಯಿ ಕಡಿಮೆ ಇದೆ' ಎಂದ ನಿರೂಪಕರಿಗೆ "ಆ ಮುಂಡೇ ಗಂಡ ಉಳಿದುದನ್ನ ಬಿಟ್ಟದ್ದೇ ದೊಡ್ಡದು" ಎಂದರು. ನಿರೂಪಕರೂ ಕೂಡ ತನ್ನೆರಡು ಕಾಲು ರೂಪಾಯಿಗಳನ್ನು ಹೊಡೆದು ಹಾಕಿದವನು ಅವನೇ ಎಂದು ನಂಬಿ ಬಿಟ್ಟರು. ರಾತ್ರಿ ಮಲಗಿದಾಗಲೂ ಕನಸಿನಲ್ಲೂ ಫಕೀರನೇ ಬಂದು ತನ್ನನ್ನು ಚೂರಿಯಿಂದ ತಿವಿದು ಉಳಿದ ಹದಿನೇಳು ಮುಕ್ಕಾಲು ರೂಪಾಯಿಗಳನ್ನು ಎತ್ತಿಕೊಂಡು ಹೋದ ಹಾಗಾಯಿತು. ಎಚ್ಚರಗೊಂಡಾಗ ಪ್ರಾಣ ಹೋಗಿರಲಿಲ್ಲ. ಖಜಾನೆಯಲ್ಲಿ ಕೈಹಾಕಿ ನೋಡಿದಾಗ ಹದಿನೇಳು ಮುಕ್ಕಾಲು ರೂಪಾಯಿ ಇದ್ದವು. ಕೊಂಚ ನೆಮ್ಮದಿಯಾಯಿತು.

ಮಾರನೆಯ ದಿನ ಶಾಲೆಗೆ ಹೊರಟ ನಿರೂಪಕ ಮಾಸ್ತರರನ್ನು ಹಲವು ಮಂದಿ ಬಂದು ವಿಚಾರಿಸಿದರು. "ಏನು ಸ್ವಾಮಿ, ನಿಮ್ಮಿಂದ, ನಿಮ್ಮಂಥ ಪಾಪದವರಿಂದ, ನಿಮ್ಮ ಸಂಬಳದ ಹಣವನ್ನೆಲ್ಲಾ ಹಾರಿಸಿದನಂತೆ. ನಿಜವೇ"? ಎಂದರು. ಶ್ರೀಪತಿರಾಯರು ಅದಾಗಲೇ ಊರಲ್ಲೆಲ್ಲಾ ನಿರೂಪಕರು ಹಣ ಕಳೆದುಕೊಂಡ ವಿಚಾರವನ್ನು ಪ್ರಚಾರ ಮಾಡಿ ಬಿಟ್ಟಿದ್ದರು. ನಿರೂಪಕರು "ಸ್ವಾಮಿ, ಎರಡು ರೂಪಾಯಿಗಳ ಮಟ್ಟಿಗೆ ಕಳೆದುದು ಹೌದು ಎಂದರು. ಅಷ್ಟರಲ್ಲೇ ಅವನ ಋಣ ತೀರಿತಲ್ಲ, ಸುಮ್ಮನಿರಿ" ಎಂದರು.

ಆ ದಿನ ಶಾಲೆಯಲ್ಲಿ ಲೆಕ್ಕ ಪತ್ರಗಳನ್ನು ಪರಿಶೀಲಿಸಿದಾಗ ತನ್ನ ಇಪ್ಪತ್ತು ರೂಪಾಯಿ ಸಂಬಳದಲ್ಲಿ ಪ್ರಾವಿಡೆಂಟ್ ಫಂಡಿನ ಬಾಬ್ತು ಎರಡು ರೂಪಾಯಿ ವಜಾ ಆಗಿತ್ತು. ಉಳಿದದ್ದು ಹದಿನೇಳು ರೂಪಾಯಿ ಮತ್ತು ಚಿಲ್ಲರೆ ಹಣ ಎಂಬುದು ಗೊತ್ತಾದಾಗ ನಿರೂಪಕರಿಗೆ ನಗುವೇ

ಬಂತು. ಶ್ರೀಪತಿರಾಯರ ಮನೆಗೆ ಹೋಗಿ "ರಾಯರೇ ಫಕೀರನ ತಪ್ಪಿಲ್ಲ" ಎಂದು ಹೇಳಿ ಬಂದರು. ಆದರೆ ಅದನ್ನು ನಂಬದ ಶ್ರೀಪತಿರಾಯರು "ಆ ಕಳ್ಳ ಫಕೀರ ವರುಷಕ್ಕೆ ಹನ್ನೊಂದು ತಿಂಗಳು ಘಟ್ಟಕ್ಕೆ ಹೋಗುತ್ತಾನೆ. ಬರುವಾಗ ತುಂಬಾ ಹಣ ತಂದು ದಾನ ಮಾಡುತ್ತಾನೆ. ಎಲ್ಲಿಂದ? ಅವನಪ್ಪನ ಮನೆಯಿಂದಲೇ? ಯಾರ್‍ಯಾರದೋ ಮನೆಯಿಂದ ಕದಿಯುವುದು, ತರುವುದು" ಎಂದರು. "ಈ ಊರಲ್ಲಿ ಅವನೇನಾದರೂ ಕದ್ದುದುಂಟೇ?" ಎಂದ ನಿರೂಪಕರಿಗೆ ಊರಲ್ಲಿ ಕಳವು ಮಾಡಿದರೆ ಅವನ ಸೊಂಟ ಮುರಿಯುವುದಿಲ್ಲವಾ? ಅವನನ್ನು ಓಡಿಸುವುದು ಕ್ಷಣದ ಕೆಲಸ. ಆದರೆ ನಮ್ಮೂರಿನ ಕಾಕುಪೋಕರಿಗೆಲ್ಲಾ ಅವನೇ ಬೇಕು. ಸುಮ್ಮನೇ ಅವರನ್ನು ಕೆರಳಿಸಿ ಊರ ಮಂದಿಯ ನಿಷ್ಠುರ ಬೇಡ ಎಂದು ಸುಮ್ಮನಿದ್ದೇವೆಂದು ಶ್ರೀಪತಿರಾಯರು ತಮ್ಮ ದೊಡ್ಡಸ್ತಿಕೆಯನ್ನು ಹೇಳಿಕೊಂಡರು.

ನಿರೂಪಕರಿಗೆ ಮಾತ್ರ ಮುದುಕ ಫಕೀರ ಒಳ್ಳೆಯವನೆಂದು ಕಂಡಿತು. ಫಕೀರನನ್ನು ಭೇಟಿಯಾಗಿ "ನೀನು ಕಳ್ಳನೇ?" ಎಂದು ಕೇಳಬೇಕು ಎನ್ನಿಸಿತು. ಆದರೆ ಆ ಧೈರ್ಯ ಎಲ್ಲಿ ಬರಬೇಕು. ಎಷ್ಟೆಂದರೂ ತಾನು ಬೋರ್ಡಿನ ಸಂಬಳ ತಿನ್ನುವ ಬಡ ಶಾಲಾ ಉಪಾಧ್ಯಾಯನಲ್ಲವೇ? ಎಂದೆನಿಸಿತು.

ಒಂದು ದಿನ ಫಕೀರ ಮಕ್ಕಳೊಂದಿಗೆ ಮಾತನಾಡುತ್ತಿದ್ದಾಗ, ಇದೇ ಸಂದರ್ಭವೆಂದು ಭಾವಿಸಿದ ನಿರೂಪಕರು ಒಬ್ಬ ಹುಡುಗನಿಗೆ ಚುಚ್ಚಿದರು. "ಫಕೀರನನ್ನು ಕಳ್ಳನೆಂದು ಏಕೆ ಕರೆಯುತ್ತಾರೆ?" ಎಂದು ಕೇಳೆಂದು. ಆ ಹುಡುಗ "ಅಜ್ಜಾ ನಿನ್ನ ಹೆಸರೇನು?" ಎಂದ. ಆಗ ಆತ "ಫಕೀರ" ಎಂದ. "ಪೂರ್ಣ ಹೆಸರು ಕಳ್ಳ ಫಕೀರ" ಎಂದು ನಕ್ಕು ಬಿಟ್ಟ, ಮುದುಕನನ್ನು ಆ ಹುಡುಗ ಅಜ್ಜಾ ನೀನು ನಿಜವಾಗಿ ಕಳ್ಳನೇ ಎಂದನು. ಅದನ್ನು ಕೇಳಿ ಫಕೀರನ ಮುಖ ಸಪ್ಪಗಾಯಿತು.

ಆಗ ಫಕೀರ ತನ್ನ ಹಿಂದಿನ ಕಥೆಯನ್ನು ವಿವರಿಸಿದ. "ಮಗು ಒಂದು ದಿನ ನಾನು ನಿನ್ನಷ್ಟು ಚಿಕ್ಕವನಾಗಿದ್ದಾಗ ನನ್ನ ಅಜ್ಜನ ಮನೆಯಿಂದ ನಮ್ಮ ಮನೆಗೆ ಬರುತ್ತಿದ್ದೆ. ನಡು ಮಧ್ಯಾಹ್ನವಾಗಿತ್ತು. ಬಿಸಿಲು ಅಂದರೆ ಅಷ್ಟಿತ್ತು. ಹಸಿವು ಬಾಯಾರಿಕೆಯಿಂದ ಸಾಕು ಸಾಕಾಗಿತ್ತು. ಹಾದಿಯಲ್ಲಿ ಬರುತ್ತಾ ಒಂದು ತೋಟವಿತ್ತು. ಅದು ಊರಿನ ರಾಯರಿದ್ದಾರಲ್ಲ – ಅವರ ಮನೆಯ ಬಳಿ ಇತ್ತು. ಆ ರಾಯರು ಇನ್ನೂ ಹುಟ್ಟಿರಲಿಲ್ಲ. ಅವರ ತಂದೆ ಆ ಮನೆಯಲ್ಲಿದ್ದರು. ಅವರ ಹೆಸರು ವೆಂಕಟರಾಯರು ಎಂದು. ಆ ವೆಂಕಟರಾಯರ ತೋಟದ ಬಳಿಯಲ್ಲಿ ಆಗ ನಾನು ಬರತೊಡಗಿದೆ. ಅದು ಮಾವಿನ ತೋಟ. ಮಾವಿನ ಹಣ್ಣಾಗುವ ಸಮಯ. ಒಂದು ಹಣ್ಣು ಹಾದಿಯ ಮೇಲೆ ಬಿದ್ದಿತು. ತಾನದನ್ನು ಆಸೆಯಿಂದ ಹೆಕ್ಕಿಕೊಂಡೆ. ಮೊದಲೇ ಹಸಿವೆಯಿಂದ ಕಂಗೆಟ್ಟಿದ್ದ ತನಗೆ ಅದು ಅಮೃತ ಸಿಕ್ಕಂತಾಗಿ ಗಬಗಬನೇ ತಿನ್ನತೊಡಗಿದೆ ಸಿಹಿಯಿತ್ತು. 'ಹಾ' ಎನ್ನುವಂತಾಯಿತು. ಹಣ್ಣು ತಿಂದು ಮುಗಿಸುವಷ್ಟರಲ್ಲಿ ನಾನು ರಾಯರ ಕಣ್ಣಿಗೆ ಬಿದ್ದೆ.

ಇಬ್ಬರು ಆಳುಗಳಿಂದ ನನ್ನನ್ನು ಅವರ ಮನೆಯ ಅಂಗಳಕ್ಕೆ ಎಳೆದು ತರಿಸಿದರು. "ಬಿದ್ದ ಹಣ್ಣು ನನಗೆ ಗೊತ್ತಿರಲಿಲ್ಲ. ಯಾರದ್ದೆಂದು" ಎಂದಾಗ ರಾಯರ ಕೆಂಪು ಕಣ್ಣು ಕಂಡು ಹೆದರಿ ಅತ್ತೆನು. ಛೀ, ಕಳ್ಳ, ಕದ್ದು ಬಿದ್ದದ್ದು ಎನ್ನುತ್ತೀಯಾ?" ಎಂದು ಗದರಿಸಿ ಆಳುಗಳಿಂದ ನನ್ನನ್ನು

ಚೆನ್ನಾಗಿ ಹೊಡೆಸಿದರು. ಸಾಲದುದಕ್ಕೆ 'ಕಳ್ಳ ಫಕೀರ' ಎಂದು ನಾಮಕರಣ ಮಾಡಿ ಬಿಟ್ಟರು. ಹಿಂದೊಬ್ಬ ಆ ಹೆಸರಿನ ಭಾರೀ ಕಳ್ಳನಿದ್ದನಂತೆ. ಅವನ ಹೆಸರು ನನ್ನ ಕೊರಳಿಗೆ ಬಿದ್ದಿತು. 'ಪಂಜು' ಎಂಬ ತನ್ನ ನಿಜ ನಾಮದ ಬದಲು ನಾನು ಊರವರ ಪಾಲಿಗೆ ಕಳ್ಳ ಫಕೀರನಾದೆ. ಆ ದಿನ ನನ್ನದೇ ತಪ್ಪು. ಬೇರೆಯವರ ವಸ್ತುವಿಗೆ ನಾನು ಬಾಯಿ ಬಿಡಬಾರದಿತ್ತು. ಆಗ ನನಗಷ್ಟು ಜ್ಞಾನವಿರಲಿಲ್ಲ. ಚಿಕ್ಕವನಾಗಿದ್ದೆ. ಸಾಲದುದಕ್ಕೆ ದಣಿವೂ, ಹಸಿವೂ ಆಗಿದ್ದರಿಂದ, ತಿಳಿವಿಲ್ಲದೇ ಬಿದ್ದುದನ್ನು ಹೆಕ್ಕಿಕೊಂಡೆ. ತಿಂದೆ. ತಕ್ಕ ಪ್ರಾಯಶ್ಚಿತ್ತವಾಯಿತು" ಎಂದು ಹೇಳುತ್ತಾ ಕಣ್ಣೀರು ತುಂಬಿಕೊಂಡ. ಅಷ್ಟರಲ್ಲಿ ಮುದುಕನಿಗೆ ಏತಕ್ಕೋ ನಗು ಬಂದಿತು. ಹುಡುಗನಿಗೆ ಆಶ್ಚರ್ಯವಾಯಿತು. "ಏಕೆ ನಕ್ಕೇ?" ಎಂದ. ಮಗು, ಈ ಕಥೆ ನಡೆದು ತಿಂಗಳೊಳಗೆ ಒಂದು ಪ್ರಸಂಗ ನಡೆಯಿತು. ನಮ್ಮಪ್ಪ ಒಂದು ಸೌತೆಕಾಯಿ ತೋಟವನ್ನು ಮಾಡಿದ್ದನು. ಹಗಲೆಲ್ಲಾ ಅದರ ಕಾವಲಿಗೆ ನಾನು. ಒಂದು ದಿನ ಮಧ್ಯಾಹ್ನ ನಾನು ಕಾವಲು ಮಲಗಿದ್ದಾಗ ಒಂದು ಕಪ್ಪೆ ಚೀರುವ ಧ್ವನಿ ಕೇಳಿಸಿತು. ಕಾಗೆಯ ಬಾಯಿಗೆ ಸಿಲುಕಿರಬೇಕೆಂದು ಊಹಿಸಿ ಅದನ್ನು ತಪ್ಪಿಸಲು ಓಡಿದೆ. ಅಷ್ಟರಲ್ಲಿ ಇನ್ನೊಂದು ಚಮತ್ಕಾರ ನಡೆಯಿತು.

ನಮ್ಮ ಹೊಲಕ್ಕೆ ಬೇಲಿ ಇರಲಿಲ್ಲ. ಅದನ್ನು ಮಾಡುವ ಶಕ್ತಿ ನಮ್ಮಪ್ಪನಿಗಿರಲಿಲ್ಲ. ಉಪಾಯವಿಲ್ಲದೇ ಸೌತೆ ಬಳ್ಳಿಯನ್ನು ಬೆಳೆಸಿದ್ದನು. ಇತ್ತ ನಮ್ಮ ಹೊಲವಿರುವ ಜಾಗ, ಹಾದಿಗೆ ಸಮೀಪವಾಗಿತ್ತು. ನಾನು ಬರುವಷ್ಟರಲ್ಲಿ ಯಾರೋ ಇಬ್ಬರು ನಮ್ಮ ಹೊಲದ ಹತ್ತಿರ ನಿಂತುದು ಕಂಡಿತು. ಅವರಲ್ಲಿ ಒಬ್ಬನು ನಮ್ಮ ಹೊಲವನ್ನು ಸೇರಿ ಒಂದು ಸೌತೆಕಾಯಿಯನ್ನು ಕಿತ್ತು, ನಿಂತಿದ್ದ ಇನ್ನೊಬ್ಬನ ಕೈ ಮೇಲಿರಿಸಿದನು. ನಾನು ಓಡಿ ಬಂದೆ. ಆ ವ್ಯಕ್ತಿ ಕೈಯಲ್ಲಿದ್ದ ಸೌತೆಯನ್ನು ತಿನ್ನಲು ತೊಡಗಿದ. ಅವನ ಬಾಯಿಂದ "ಚೆನ್ನಾಗಿದೆ, ಚೆನ್ನಾಗಿದೆ" ಎಂಬ ಮಾತು ಹೊರಟುದು ಕೇಳಿಸಿತು. ನಾನು ಓಡೋಡಿ ಹೊಲದ ಹತ್ತಿರಕ್ಕೆ ಬಂದು ನಿಂತು ನೋಡಿದೆ. ಏನು ಹೇಳುವುದು, ಕಾಯಿಯನ್ನು ತಿನ್ನುತ್ತಿದ್ದವರು ಆ ವೆಂಕಟರಾಯರೇ. ಅವರು ನನ್ನನ್ನು ಕಂಡರು. ಆಶ್ಚರ್ಯವಾಯಿತು. ಅವರು ಆಳನ್ನು ನೋಡಿ, ಸುಬ್ಬೂ, ನಮ್ಮ ಮನೆಯ ಮಾವಿನಹಣ್ಣನ್ನು ಕದ್ದ ಕಳ್ಳ ಫಕೀರನಲ್ಲವೇ! ಛೀ ಘಟಿಂಗ ಇಲ್ಲಿಯೂ ಸೌತೆಕಾಯಿಯನ್ನು ಜಾರಿಸಲು ಬಂದಿರುವನು. ಹೊಡೆದೋಡಿಸು ಅವನನ್ನು ಎಂದರು. ನನಗೆ ನಾಚಿಕೆಯಾಯಿತು. ನಾನು ಓಡಿ ಬಿಟ್ಟೆ. ನಾನು ಕಳವು ಮಾಡಲು ಬಂದವನೆಂದು ತಿಳಿದು ಅವರ ಸುಬ್ಬು ಬಲು ದೂರದವರೆಗೆ ನನ್ನನ್ನು ಓಡಿಸಿಕೊಂಡು ಬಂದ. ಸುಬ್ಬು ಹಿಂದಿರುಗಿ ಹೋದ. ಅಂದಿನಿಂದ ನಾನು ಹೊಲಕ್ಕೆ ಹೋಗಲೇ ಇಲ್ಲ ಎಂದ. ನಿರೂಪಕರಿಗೆ ಮತ್ತೆ ಫಕೀರನ ಕಥೆ ಕೇಳಲು ಮನಸ್ಸಾಗದೇ ಅಲ್ಲಿಂದ ಹೊರಟು ಬಿಟ್ಟರು.

ಈ ಕಥೆಯಲ್ಲಿ ಕಾರಂತರು ಫಕೀರನ ಪಾತ್ರದ ಮೂಲಕ ಬಡವರ ಬಡತನ, ಹಸಿವು, ಅಸಹಾಯಕತೆಯನ್ನು ಅನಾವರಣ ಮಾಡಿದ್ದಾರೆ. ಹುಡುಗನಾಗಿದ್ದ ಸಂದರ್ಭದಲ್ಲಿ, ಹಸಿವು–ಬಾಯಾರಿಕೆಯಿಂದ ಬಳಲಿ ನಡೆದುಕೊಂಡು ಬರುತ್ತಿರುವಾಗ ಮಾರ್ಗ ಮಧ್ಯದಲ್ಲಿ ಕೆಳಗೆ ಬಿದ್ದಿದ್ದ ಮಾವಿನ ಹಣ್ಣನ್ನು ಹೆಕ್ಕಿಕೊಂಡು ತಿಂದದ್ದನ್ನೇ ಮಹಾಪರಾಧವೆಂದು ಭಾವಿಸಿ ಆಳುಗಳಿಂದ ಸಾಯುವಂತೆ ಹೊಡೆಸಿದ್ದು, ಶ್ರೀಮಂತರ ಅಟ್ಟಹಾಸದ ದೌರ್ಜನ್ಯವನ್ನು, ಶೋಷಣೆಯನ್ನು ಎಳೆ ಎಳೆಯಾಗಿ ತೋರಿಸುತ್ತದೆ. ಸತ್ಯ ಹೇಳಿದ 'ಪಂಜು'ವಿನ ಮಾತನ್ನು ಕೇಳಿಸಿಕೊಳ್ಳದೇ, ಮಾವಿನ ಹಣ್ಣು ಬಿದ್ದದ್ದಲ್ಲ, ನೀನು ಕದ್ದದ್ದು ಎಂದು ಹೇಳಿ ಗದರಿಸಿ, 'ಕಳ್ಳ ಫಕೀರ'ನೆಂದು

ಮರುನಾಮಕರಣ ಮಾಡಿದ್ದು ಶ್ರೀಮಂತರ ಶೋಷಣೆಯ ರಾಜಕೀಯ ಯಾವ ಮಟ್ಟದ್ದೆಂಬುದು ಮನವರಿಕೆಯಾಗುತ್ತದೆ. ಮಾವಿನ ಹಣ್ಣನ್ನು ತಿಂದ ತಪ್ಪಿಗೆ ವಿಟು ತಿಂದದ್ದಲ್ಲದೇ ಸಾಯುವ ತನಕವೂ ಯಾರೋ ಒಬ್ಬ ಕುಖ್ಯಾತ ಕಳ್ಳನೊಬ್ಬನ ನಾಮವನ್ನಿಟ್ಟುಕೊಂಡೇ ಬದುಕಬೇಕಾದದ್ದು ಮಾತ್ರ ವಿಪರ್ಯಾಸವಾದುದು. ಈ ಸಮಾಜ ತಪ್ಪು ಮಾಡಿದವನು ಶ್ರೀಮಂತನಾದರೆ ಕ್ಷಮಿಸಿ, ತಪ್ಪು ಮಾಡದಿದ್ದರೂ ಬಡವನಾಗಿದ್ದರೆ ಅವನನ್ನು ಶಿಕ್ಷೆಗೆ ಗುರಿಮಾಡುವ ಅಮಾನವೀಯತೆಯನ್ನು ತೋರುತ್ತಿರುವುದು ಮಾತ್ರ ಖಂಡನೀಯವಾದುದು. 'ಪಂಜು' ಕಳ್ಳಫಕೀರನೆಂದು ಎಲ್ಲರಿಂದ ಕರೆಸಿಕೊಂಡರೂ ಎಂದೂ ಕಳ್ಳತನ ಮಾಡದಿರುವುದು ಬಡವರ ಕಷ್ಟಕ್ಕೆ ನೆರವಾಗುವುದನ್ನು ನೋಡಿದರೆ, ಬಡವರ ಕಷ್ಟಕ್ಕೆ ನೆರವು ನೀಡುವವರು ಬಡವರೇ ಎಂಬುದು ವೇದ್ಯವಾಗುತ್ತದೆ.

ಬಿದ್ದ ಒಂದು ಮಾವಿನ ಹಣ್ಣನ್ನು ತಿಂದುದಕ್ಕಾಗಿ ಸಾಯುವ ಹಾಗೆ ಹೊಡೆಸಿದ ಅದೇ ಶ್ರೀಮಂತ ವೆಂಕಟರಾಯರು ಫಕೀರನ ತೋಟಕ್ಕೆ ನುಗ್ಗಿ ರಾಜಾರೋಷವಾಗಿ ಸೌತೆಯನ್ನು ಅವನ ಎದುರೇ ತಿಂದು ತೋಟದ ಯಜಮಾನನನ್ನೇ ಕಳ್ಳನೆಂದು ಓಡಿಸಿ ಬಿಡುವುದನ್ನು ನೋಡಿದರೆ, ಈ ಸಮಾಜದಲ್ಲಿ ಶ್ರೀಮಂತರು ಏನು ಮಾಡಿದರೂ ಬಡವರು ಪ್ರಶ್ನಿಸುವಂತಿಲ್ಲ. ಕದ್ದರೂ ಶಿಕ್ಷಿಸುವಂತಿಲ್ಲ. ಬಡವರಾಗಿ ಹುಟ್ಟಿದ ಮೇಲೆ ಹಸಿವು, ನೋವು, ದಬ್ಬಾಳಿಕೆ, ಶೋಷಣೆ, ದೌರ್ಜನ್ಯ ಏನಾದರೂ ಸಹಿಸಿಕೊಂಡೆ ಬದುಕನ್ನು ಸವೆಸಬೇಕಾಗಿದೆ ಎಂಬ ಸತ್ಯವನ್ನು ಕಾರಂತರು ಈ ಕಥೆಯ ಮೂಲಕ ನಿರೂಪಿಸಿಬಿಟ್ಟಿದ್ದಾರೆ.

ಬಡವರು ಬಡತನದಲ್ಲೂ, ಹಸಿವೆಯಲ್ಲೂ, ನೋವಿನಲ್ಲೂ, ನಲಿವನ್ನೇ ಕಾಣುತ್ತಾರೆಯೇ ವಿನಃ ಇನ್ನೊಬ್ಬರ ವಸ್ತುವಿಗೆ ಆಸೆ ಪಡುವವರಲ್ಲ. ಅಥವಾ ಕಸಿದುಕೊಳ್ಳುವ ಜಾಯಮಾನದವರೂ ಅಲ್ಲ. ಹಸಿವೆಯಲ್ಲೂ ಕಸಿದು ತಿನ್ನುವಷ್ಟು ಶಕ್ತಿ ಇದ್ದರೂ ಹಾಗೆ ಮಾಡಲಾರರು. ಆದರೆ ಕೆಲವು ಶ್ರೀಮಂತರು ತಮ್ಮಲ್ಲಿ ಕೂತು ತಿನ್ನುವಷ್ಟು ಹೊನ್ನಿದ್ದರೂ ಬಡವರ, ಅಸಹಾಯಕರ ಬಳಿ ಇರುವುದನ್ನು ಕೂಡ ಕಸಿದುಕೊಳ್ಳಲು ಬಯಸುವಂತವರು. ಬಡವರ ಹೊಟ್ಟೆಯ ಹಸಿವನ್ನು ಅನ್ನ ನೀಡಿ ತುಂಬಿಸಬಹುದು. ಶ್ರೀಮಂತರ ಆಸ್ತಿಯ (ಸಂಪತ್ತಿನ) ಹಸಿವನ್ನು ತೃಪ್ತಿಪಡಿಸಲು ಸಾಧ್ಯವೇ ಇಲ್ಲ ಎಂಬುವುದು ಕೂಡ ಈ ಕಥೆಯ ಮೂಲಕ ಮನವರಿಕೆಯಾಗುತ್ತದೆ.

ಕಾರಂತರ 'ನಂದಯ್ಯ ನಾಯರಿ'

ಇದು ಹಸಿವನ್ನು ತೀರಿಸಿಕೊಳ್ಳಲು ಹೋಗಿ ಒತ್ತಾಯ ಪೂರ್ವಕವಾಗಿ ತಿಂದು ಪ್ರಾಣ ಬಿಟ್ಟಂತಹ ಮುದುಕನೊಬ್ಬನ ದುರಂತ ಕಥೆಯಾಗಿದೆ.

ನಂದಯ್ಯ ನಾಯರಿ ಎಂಬುದು ನಿರೂಪಕರ ಊರಿನ ಒಬ್ಬ ತಿರುಕುಳಿಯ ಹೆಸರು. ಊರೂರು ಸುತ್ತುವುದರಿಂದ ಅವನಿಗೆ ತಿರುಕುಳಿ ಎಂಬ ಅನ್ವರ್ಥ ನಾಮವೂ ಉಂಟು. ಊರಲ್ಲಿ ಅನ್ನ ಸಿಕ್ಕದಿದ್ದರೆ ನಿರೂಪಕರ ಮನೆಗೆ ಬರುತ್ತಿದ್ದ ಆತನಿಗೆ ಹಸಿವಾದರೆ ಬೇಡುವುದಕ್ಕೆ ಬೇರೆಡೆ ಹೋಗುತ್ತಾನೆ. ಹಬ್ಬ, ಹುಣ್ಣಿಮೆ, ಮದುವೆ, ಮುಂಜಿ ಹೀಗೆ ವಿಶೇಷ ದಿನಗಳಲ್ಲಿ ಊರಲ್ಲಿ ಖಂಡಿತವಾಗಿ ಕಾಣಸಿಗುತ್ತಿದ್ದ. ಉಳಿದ ದಿನಗಳಲ್ಲಿ ಅವನು ತಿರುಪೆಗೆ ಹೋದರೆ ಇಲ್ಲವೆಂದು

ಕೈಯಾಡಿಸಿದರೆ ಅಲ್ಲಿಂದೆದ್ದು ಜಿಡುವನು. ಆದರೆ ಹಬ್ಬ-ಹರಿದಿನಗಳಲ್ಲಿ ಮಾತ್ರ ಇಲ್ಲವೆಂದರೂ ಮಾತನಾಡದೆ ಧರಣಿ ಕೂರುತ್ತಿದ್ದನು. ಹಸಿವು ಎಂಬುದು ಒಡಲಿನ ಸಂಕಟ. ಈ ಸಂಕಟವನ್ನು ನೀಗಿಸಿಕೊಳ್ಳಲು ಯಾವ ಸಂಕೋಚವೂ ಇಲ್ಲ. ಮನೆಯವರು ಉಂಡು ಎಲೆಯನ್ನು ಹೊರಗೆ ಚೆಲ್ಲುವವರೆಗೂ ಅವನು ಸತ್ಯಾಗ್ರಹ ಮುಗಿಯುತ್ತಿರಲಿಲ್ಲ. ಇಲ್ಲ ಎಂದವರಿಗೆ ನಾಚಿಗೆಯಾಗಬೇಕು ಹಾಗಿರುತ್ತಿತ್ತು ಅವನ ಸತ್ಯಾಗ್ರಹ. ಈತನನ್ನ 'ನರ್ಪಟ' ಎಂದು ಕರೆಯುತ್ತಿದ್ದರು. ಇದರ ಭಾವಾರ್ಥವೆಂದರೆ 'ಹಠ ಹಿಡಿದು ನಾಚಿಕೆಯಿಲ್ಲದಂತೆ ಬೇಡುತ್ತಿರುವುದು' ಉಳಿದವರು ಬಾಯಿಬಿಟ್ಟು ಅನ್ನ ಕೇಳಿದರೆ, ನಂದಯ್ಯ ಕೇಳಿದರೂ ಅದು ಒಂದು ಸಾರಿ. ಎರಡನೆಯ ಕ್ರಮವೇ ಸತ್ಯಾಗ್ರಹ. ಅದರಿಂದಲೇ ಅವನ ಮನಸ್ಸನ್ನು ಅರಿತುಕೊಳ್ಳಬೇಕಾಗಿತ್ತು.

ನಂದಯ್ಯನ ಹೊಟ್ಟೆಯ ಹಸಿವಿನ ತೀವ್ರತೆ ಎಷ್ಟಿತ್ತೆಂದರೆ ಯಾರೇ ಆಗಲಿ ಅವರ ಮನೆಯ ಕಿಟಕಿ, ಬಾಗಿಲು ಮುಚ್ಚಿಕೊಂಡು ಈಗಷ್ಟೇ ದೋಸೆ ಮಾಡುವುದಕ್ಕೆಂದು ಉದ್ದು ಕಡೆಯಲು ಕುಳಿತರೆ ಸಾಕು, ಹೊರಗಡೆ ಅಂಗಳದಲ್ಲಿ ನಂದಯ್ಯ ಸಿದ್ಧ. ಯಾರು ಅವನಿಗೆ ಅಷ್ಟು ಬೇಗ ತಂತಿ ವರ್ತಮಾನ ಕೊಡುತ್ತಾರೆಂಬುದೇ ಯಕ್ಷ ಪ್ರಶ್ನೆಯಾಗಿತ್ತು ಊರವರಿಗೆ. ಪರರ ಮನೆಯ ಅನ್ನ ಸಂತರ್ಪಣೆಗೆ ಹೋಗುವ ಭೂರಿಜನರು ನಂದಯ್ಯನ ಚಲನೆಯನ್ನನುಸರಿಸಿ ತಮ್ಮ ಊಟದ ಮನೆಯನ್ನು ಹುಡುಕುತ್ತಿದ್ದರು. ನಂದಯ್ಯನ ಹಸಿವಿನ ಕಾರಣದಿಂದ ಬೇರೆಯವರ ಹಸಿವು ನೀಗುತ್ತಿತ್ತು.

ನಂದಯ್ಯ ಪರೋಪಯೋಗಿ ಪ್ರಾಣಿ ಏಕೆಂದರೆ ಊರಿನ ಜನ ಮನೆಯ ಕೆಲಸಕ್ಕೆ ಕೂಲಿಯವರು ಕಾಣಸಿಗದಿದ್ದರೆ ನಂದಯ್ಯನಿಂದ ಕಟ್ಟಿಗೆ ಒಡೆಯಿಸುವರು, ಹೊರೆ ಹೊರಿಸುವರು. ಅವನು ಒಲ್ಲೆ ಎನ್ನುತ್ತಿರಲಿಲ್ಲ. ತನಗೆ ಸಾಧ್ಯವಾಗುವಷ್ಟು ಹೊತ್ತು ಕೆಲಸ ಮಾಡುವನು. ಮೇಲೆ ಒತ್ತಾಯ ಮಾಡಿದರೆ ಕೊಡಲಿಯನ್ನು ಎಸೆದು ಬಿಡುತ್ತಿದ್ದ. ಆದರೆ ಮಾಡಿದ ಕೆಲಸಕ್ಕೆ ಊಟವನ್ನಾದರೂ ಕೊಟ್ಟು ತನ್ನ ಹಸಿವನ್ನು ತಣಿಸುತ್ತಾರೆ ಎಂಬುದು ಅವನ ಎಣಿಕೆ. ಊಟ ಕೊಡದಿದ್ದರೆ ತನ್ನಷ್ಟಕ್ಕೆ ಮಟ ಮಟ ಬೈಯುತ್ತಾ ಹೋಗಿಬಿಡುವನು. ಅವನೊಂದಿಗೆ ಯಾರೂ ಕರಾರು ಮಾಡಿಕೊಳ್ಳುತ್ತಿರಲಿಲ್ಲ. ಅವನು ಮುದುಕ, ಕೆಲಸ ಮಾಡಿದರೆ ಎರಡು ತಾಸು ಮಾಡಿಯಾನು, ಅದಕ್ಕೆ ಪ್ರತಿಫಲವಾಗಿ ಊಟ (ಅನ್ನ) ಕೊಟ್ಟರೆ ಮೋಸವಾದೀತೆಂದು ಕೆಲವರು ಲೆಕ್ಕಾಚಾರ ಮಾಡುತ್ತಿದ್ದರು. ಊಟ ಕೊಡುವುದಕ್ಕೂ ಯೋಚಿಸುತ್ತಿದ್ದರು. ಲೆಕ್ಕಾಚಾರ ಮಾಡದವರು ಎಂದರೆ ಬಡವರು. ಅವರು ಶಕ್ತಿಯಿಲ್ಲದಿದ್ದರೂ ನಂದಯ್ಯನಿಗೆ ತಿಂಡಿಯನ್ನಾದರೂ ಕೊಟ್ಟು ಕಳುಹಿಸುತ್ತಿದ್ದರು.

ಒಂದು ದಿನ ಊರ ಪಟೇಲ ರಾಮಯ್ಯನವರ ಮನೆಯಲ್ಲಿ ದೊಡ್ಡ ಸಮಾರಾಧನೆ. ಊಟ ಭಾರೀ ಊಟವೆಂದು ಜನರಿಗೆ ಗೊತ್ತು. ರಾಮಯ್ಯನವರ ಮನೆಗೆ ಭಾರಿ ಊಟದವರು (ಹೇಳಿಕೆಯಿಲ್ಲದೆ ಬರುವವರು) ಹೋಗುವಷ್ಟು ಧೈರ್ಯ ಮಾಡುತ್ತಿರಲಿಲ್ಲ. ಹಾಗಾಗಿ ರಾಮಯ್ಯನವರ ಮನೆಯಲ್ಲಿ ಸಮಾರಾಧನೆಯಾದರೆ ಇಂತಿಷ್ಟೇ ಜನ ಊಟಕ್ಕಿರುವವರು ಎಂದು ಲೆಕ್ಕ ಮಾಡಿ ಹೇಳಬಹುದು. ಆದರೆ ಊಟ ಮಾತ್ರ ಮಧ್ಯಾಹ್ನ ನಾಲ್ಕು ಗಂಟೆಗಿಂತ ಮುಂಚೆ ಆಗಲಾರದು.

ರಾಮಯ್ಯನವರ ಮನೆಯಲ್ಲಿ ಎಲ್ಲರೂ ಸೇರಿದ್ದಾರೆ. ರಾಮಯ್ಯರ ಮನೆ ಊಟದ ಸುದ್ದಿ ಹೇಗೋ ನಂದಯ್ಯನಿಗೆ ಗೊತ್ತಾಗಿದೆ. ಆಗಲೇ ಅಲ್ಲಿ ಹಾಜರಾಗಿ ಬಿಟ್ಟಿದ್ದ. ಊಟದ ಸಮಯವಾದ ಕೂಡಲೇ ಎಲ್ಲರೂ ಪರಾರಿ. ಊಟವಾಯಿತು. ಎಲ್ಲರೂ ಒಬ್ಬೊಬ್ಬರೇ ಹೊರಗೆ ಬಂದರು. ನಂದಯ್ಯನ ಧರಣಿ ನಡೆಯುತ್ತಲೇ ಇತ್ತು. ರಾಮಯ್ಯ ಹೊರಬಂದು 'ಇಲ್ಲಿ ಬಾ' ಎಂದು ನಂದಯ್ಯನನ್ನು ಹೆಬ್ಬಾಗಿಲ ಮುಂದೆ ಕುಳಿತಿರಲು ಸೂಚಿಸಿದರು. ದೊಡ್ಡದೊಂದು ಎಲೆ ಹಾಕಿಸಿದರು. ಎಲೆಯ ಮೇಲೆ ಪಲ್ಯ-ಪದಾರ್ಥಗಳೆಲ್ಲ ಬಂದುವು. ಬಡಿಸುವವನೊಬ್ಬ ಕಡುಬಿನ ಬುಟ್ಟಿ ಹಿಡಿದುಕೊಂಡು ತಂದನು. ನಂದಯ್ಯ ಸಂತೋಷದಿಂದ ನಕ್ಕನು. 'ಹಾಕು' ಎಂದು ರಾಮಯ್ಯ ಹೇಳಿದಾಗ ಬಡಿಸುವವನು ಬಲವಾದ ನಾಲ್ಕು ಕಡುಬುಗಳನ್ನು ಎಲೆಯ ಮೇಲೆ ಹಾಕಿದನು. ರಾಯರಿಗೆ ಸಿಟ್ಟು ಬಂತು. "ತಂದದ್ದು ಪೂರ್ಣ ಹಾಕು" ಅಂದರು. ಅವನು ಪೂರ್ಣ ಹಾಕಿ ಬಿಟ್ಟನು. ಎಲೆಯ ಮೇಲೆ ಹದಿನಾರು ಕಡುಬುಗಳ ರಾಶಿ. ಅದರ ಮೇಲೆ ಪಾಯಸ ತಂದು ಸುರಿದರು. ಎಣ್ಣೆ ತಂದು ಸುರಿದರು. ಹುಳಿ ತಂದು ಸುರಿದರು. ನಂದಯ್ಯನ ಊಟಕ್ಕೆ ಅಪ್ಪಣೆ ದೊರೆಯಿತು. ಅವನ ಮುಂದೆಯೇ ರಾಯರು ಕೈಕಟ್ಟಿ ಕುಳಿತರು. ಹುಡುಗರು ಚೇಷ್ಟೆ ನೋಡುವಾ ಎಂದು ಸುತ್ತ ನಿಂತರು. ನಂದಯ್ಯನ ಊಟ ಆರಂಭವಾಯಿತು.

ನಂದಯ್ಯನು ತಿನ್ನಲು ತೊಡಗಿದನು. ಮೂರನೆಯ ಕಡುಬು ಮುಗಿಯಿತು, ನಾಲ್ಕನೆಯದು ಅರ್ಧವಾಯಿತು. ಅದು ಮುಗಿಯಲು 'ತೇಗು' ಬಂದಿತು. 'ಸಾಕು' ಎಂದ ನಂದಯ್ಯನಿಗೆ ಹುಡುಗರು 'ತಿನ್ನೋ' ಎಂದರು. ನಂದಯ್ಯ ಮಕ್ಕಳ ಸಂತೋಷಕ್ಕೆ ಜಾಸ್ತಿಯಾಗಿ ಒಂದು ತಿಂದ. ಸಂಖ್ಯೆ ಒಟ್ಟು ಐದಾಯಿತು. ಎದ್ದನು. ರಾಯರು ಗದರಿಸಿ ಕುಳ್ಳಿರಿಸಿದರು. ನಿನ್ನ ಹಸಿವಿನ ಹುಚ್ಚು (ಊಟದ ಹುಚ್ಚು) ಬಿಡಿಸುತ್ತೇನೆ. 'ಪೂರ್ಣ ತಿನ್ನದೆ ಏಳಬಾರದು' ಎಂದರು. ಹುಡುಗರ ಮುಖ ಸಪ್ಪೆಯಾಯಿತು. ನಂದಯ್ಯ ಹೆದರಿ ತಿನ್ನತೊಡಗಿದನು. ಆರಾಯಿತು. ಏಳಾಯಿತು. ನಂದಯ್ಯನ ಕಷ್ಟ ಹೇಳತೀರದು. ಎಂಟನ್ನು ತಿನ್ನುವಷ್ಟರಲ್ಲಿ ನಂದಯ್ಯ ಅತ್ತುಬಿಟ್ಟ, "ದಮ್ಮಯ್ಯ ನನ್ನನ್ನು ಬಿಡಿ" ಎಂದು ಬೇಡಿದನು. "ತಿನ್ನದೆ ಹೋಗುವಿ ಹೇಗೆ? ನೋಡಿಬಿಡುವೆ" ನೆಂದರು ರಾಯರು. ಮಕ್ಕಳಿಂದಲೂ ಈ ಆಟ ನೋಡಲಾಗಲಿಲ್ಲ. ಅವರು ಎದ್ದು ಹೋದರು. ನಂದಯ್ಯ ಬಿಕ್ಕಿ ಬಿಕ್ಕಿ ಅಳತೊಡಗಿದ. ರಾಯರು ಮತ್ತೊಮ್ಮೆ ಗದರಿಸಿದರು. ಕೆಲವರು 'ಬಿಡಿ ಸ್ವಾಮಿ ಹೋಗಲಿ' – ಎಂದಾಗ, ರಾಯರು ಅವರಿಗೂ ಬೈದರು. ಅವರು ಹೊರಟು ಹೋದರು. ಆ ಬಾಗಿಲ ಬಳಿ ನಂದಯ್ಯ ಮತ್ತು ರಾಯರು ಮಾತ್ರ ಉಳಿದಿದ್ದರು. ನಂದಯ್ಯನು ಭೀತಿಯಿಂದ ಊಟ ಮುಂದುವರಿಸಿದ. ಹದಿನಾರು ಕಡುಬುಗಳನ್ನು ತಿಂದನು. 'ನಡಿ' ಎಂದು ಅಪ್ಪಣೆ ದೊರೆತ ಕೂಡಲೇ ಅಲ್ಲಿಂದೆದ್ದು ಹೊರಟ.

ರಾಯರ ಮನೆಯ ಸುತ್ತ ವಿಶಾಲವಾದ ಹೊಲಗಳಿದ್ದವು. ಊಟವಾದ ಬಳಿಕ ಹುಡುಗರು ಅಲ್ಲಿ ಸೇರಿ ಆಟವಾಡತೊಗಿದ್ದರು. ಈಗ ಅವರು ಆಡುತ್ತಿದ್ದ ಆಟಕ್ಕೆ 'ಗೊಡ್ಡು' ಎಂದು ಹೆಸರು. ಗೊಡ್ಡಾಟವೆಂದರೆ ಹೀಗೆ: ಎರಡು ಪಂಗಡಗಳು ಆಡುವ ಪಂಗಡ, ತಡೆಯುವ ಪಂಗಡ. ಬಯಲಿನಲ್ಲಿ ಒಂದು ತೆಂಗಿನ ಸಿಪ್ಪೆಯನ್ನು ನೇರವಾಗಿ ನೆಲದ ಮೇಲೆ ನಿಲ್ಲಿಸುವುದು, ಅದರಿಂದ ನೂರು ಅಡಿ ದೂರಕ್ಕೆ ನಿಂತು ಕೈಯಲ್ಲಿ ಒಂದು ಚಂಡಿನಂತಿರುವ ಒಂದು ಜಾತಿಯ ಕಾಯಿಯನ್ನು ಹಿಡಿದು ಅದಕ್ಕೆ ಗುರಿಯಿಟ್ಟು ಎಸೆಯುವುದು. ಇಲ್ಲಿ ಕಾಳಿಂಗನ ಪಂಗಡ ಬೇರೆ ಮತ್ತು ಲಚ್ಚಣ್ಣನ ಪಂಗಡ ಬೇರೆ. ಆಟ ಆರಂಭವಾಯಿತು. ಲಚ್ಚಣ್ಣನ ಪಂಗಡದವರು ಗುರಿ

ಹಿಡಿಯಲಾರದೆ ಸೋತುಬಿಟ್ಟರು. ಕಾಳಿಂಗನ ಪಂಗಡದಲ್ಲಿ ಎಲ್ಲರೂ ಸೋತರು. ಉಳಿದೊಬ್ಬ ಕಾಳಿಂಗನು ಕೈಯಲ್ಲಿ ಕಾಯಿ ಹಿಡಿದು ನಿಂತು ಎಸೆದನು. 'ಧಡ್' ಎಂದಿತು. 'ಗೊಡ್ಡು' ಎಂದು ಅವನ ಪಂಗಡದವರು ಕೂಗಿದರು. ಲಚ್ಚಣ್ಣನ ಪಂಗಡದವರು ಗುರಿಯನ್ನು ನೋಡುತ್ತಾರೆ. ಅದು ಇದ್ದಲ್ಲೇ ಇದೆ. ಅದಕ್ಕೆ ಕಾಯಿ ತಾಗಲೇ ಇಲ್ಲ. ಹಾಗಾದರೆ 'ಶಬ್ದವೇನು' ಎಂದು ಗಾಬರಿಗೊಂಡರು. ಸುತ್ತನೋಡಿದರು. ಸ್ವಲ್ಪ ದೂರದಲ್ಲಿ ಗದ್ದೆ ಅಂಚಿನ ಬಳಿ ಯಾರೋ ಬಿದ್ದುಕೊಂಡುದು ಕಾಣಿಸಿತು. ಓಡಿಹೋಗಿ ನೋಡಿದರೆ, ಬಿದ್ದವನು ನಂದಯ್ಯ. ಬಾಯಿಂದ ಕಡುಬಿನ ಚೂರೊಂದು ಅರ್ಧ ಹೊರಬಂದಿತ್ತು. 'ನಂದಯ್ಯ', ನಂದಯ್ಯಾ' ಎಂದು ಕಾಳಿಂಗನು ಪ್ರೀತಿಯಿಂದ ಎತ್ತಿ ಹಿಡಿಯಲು ಯತ್ನ ಮಾಡಿದ. ಉಳಿದ ಹುಡುಗರೂ ಕೈನೀಡಿದರು. ನಂದಯ್ಯ ಕಣ್ಣು ತೆರೆದು ನೋಡಿದ. ತಿರುಗಿ ಮುಚ್ಚಿದ. ಮುಂದೆ ಕಣ್ಣು ತೆರೆಯಲೇ ಇಲ್ಲ. ಹೀಗೆ ನಂದಯ್ಯ ಒಡಲಿನ ತಾಪವನ್ನು ಕಡಿಮೆ ಮಾಡಿಕೊಳ್ಳಲು ಹೋಗಿ, ಅದೇ ತಾಪದಿಂದ ಅಸುನೀಗಿದ.

ಹಸಿದ ಹೊಟ್ಟೆಗೆ ಬೇಕಾದುದು ಹೊಟ್ಟೆತುಂಬ ಅನ್ನ. ಅದು ಸಿಕ್ಕಿದ ಮೇಲೆ ಅಮೃತಾನ್ನವೂ ಜಿಗುಪ್ಸೆಯನ್ನುಂಟು ಮಾಡುತ್ತದೆ. ನಂದಯ್ಯ ಹೇಳಿ ಕೇಳಿ ಮುದುಕ. ಅಸಹಾಯಕ. ಇವನಿಗೆ ಪುಗಸಟ್ಟೆ ಅನ್ನ ಹಾಕಬಾರದೆಂದು ಕೆಲವರು ಇವನಿಂದ ಕೆಲಸ ಮಾಡಿಸಿಕೊಂಡಿದ್ದಾರೆ. ಅನ್ನ ಹಾಕಲು ಹಿಂದೆ ಮುಂದೆ ನೋಡಿದ್ದಾರೆ. ಇನ್ನು ಕೆಲವರು ಇವನು ಮಾಡುವುದು ಎರಡೋ-ಮೂರೋ ತಾಸು ಕೆಲಸ. ಇದಕ್ಕೆ ಊಟ ಹಾಕಿ ಏಕೆ ನಷ್ಟಮಾಡಿಕೊಳ್ಳಬೇಕೆಂದು ಲೆಕ್ಕಾಚಾರವನ್ನು ಹಾಕುತ್ತಿದ್ದರು. ನಂದಯ್ಯನಿಗೆ ನಿಜವಾಗಿ ಅನ್ನನೀಡುವವರೆಂದರೆ ಬಡವರು ಮಾತ್ರ. ಹಸಿದವರ ಕಷ್ಟ ಹಸಿದವರಿಗೆ (ಬಡವರಿಗೆ) ಮಾತ್ರ ಗೊತ್ತಾಗುವುದಂತೆ. ಹೊಟ್ಟೆ ತುಂಬಿದ ಧನಿಕರಿಗೆ 'ಹಸಿವು' ಎಂದರೇನೆಂದು ಗೊತ್ತೇ ಇಲ್ಲ. ನಂದಯ್ಯನಿಗೆ ಊಟ ಹಾಕುವ ನೆಪದಲ್ಲಿ ರಾಮಯ್ಯ ನಂದಯ್ಯನಿಗೆ ನೀಡುವ ಶೋಷಣೆ ಇಡೀ ನಾಗರಿಕ ಸಮಾಜವೇ ತಲೆತಗ್ಗಿಸುವಂತದ್ದು. ಅನುಕೂಲವಂತರು ಅನ್ನ ನೀಡುವ ನೆಪದಲ್ಲಿ ನಂದಯ್ಯನಂತಹ ಅದೆಷ್ಟೋ ಜೀವಗಳು ಅಳಿದು ಹೋಗಿವೆ. ಹೊಟ್ಟೆ ತುಂಬಿದ ಮೇಲೂ ತಿನ್ನು ತಿನ್ನು "ನಿನ್ನ ಊಟದ ಹುಚ್ಚು ಬಿಡಿಸುತ್ತೇನೆ" ಎಂದು ಹೇಳುವ ರಾಮಯ್ಯನವರು ನಂದಯ್ಯನ ಹಸಿವನ್ನು ಅಪಹಾಸ್ಯ ಮಾಡುತ್ತಾರೆ. ಮಕ್ಕಳಿಗೂ ರಾಮಯ್ಯನವರ ವರ್ತನೆ ಸರಿ ಎನ್ನಿಸುವುದಿಲ್ಲ. ನಂದಯ್ಯ ಹಸಿವಿನಿಂದ ಸಾಯಲಿಲ್ಲ. ಅಜೀರ್ಣದಿಂದ ಸಾಯುವಂತಾದುದು ರಾಮಯ್ಯನಂತಹ ಅಮಾನವೀಯತೆಯ ಮನುಷ್ಯರಿಂದ.

ಶಾಂತರಸರ 'ನಾಯಿ ಮತ್ತು ಪಿಂಚಣಿ'

ಸ್ವಾತಂತ್ರ್ಯ ಹೋರಾಟ, ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ ಮೇಲೂ ನಿಜಾಮನ ಆಳ್ವಿಕೆಯ ವಿರುದ್ಧ ಹೋರಾಟ. ವಸಾಹತುಶಾಯಿ ಕ್ರೌರ್ಯದ ಪರೋಕ್ಷ ಅನುಭವ, ರಜಾಕಾರರಿಂದ ನೇರವಾಗಿ ಅನುಭವಿಸಿದ ಹಿಂಸೆ, ದೌರ್ಜನ್ಯ ಇವೆಲ್ಲವುಗಳಿಂದ 'ಮುಕ್ತ'ವಾಗಿ ಸಂಪೂರ್ಣ ಸ್ವಾತಂತ್ರ್ಯ ಸಿಕ್ಕ ಮೇಲೆ ನವ ರಾಜಕೀಯ ಶಕ್ತಿಗಳ ಆಟಾಟೋಪ, ಸ್ಥಳೀಯ ಮುಖಂಡರಿಂದಲೇ ಸ್ಥಳೀಯರ ಶೋಷಣೆ, ಬೊಕ್ಕಸ ಲೂಟಿ, ಆದರ್ಶಕ್ಕಾಗಿ ಜೀವ ತೆತ್ತವರು, ಆದರ್ಶದ ಹೆಸರಿನಲ್ಲಿ ಸ್ವಾರ್ಥಸಾಧಿಸಿದವರು. ಗಂಡನನ್ನು ಕಳೆದುಕೊಂಡು ಬಡತನದ ಬೇಗೆಯಿಂದ ನರಳುತ್ತಿದ್ದರೂ, ಹಸಿವಿನ ತಾಪದಿಂದ ಕರಗುತ್ತಿದ್ದರೂ, ಇನ್ನೊಬ್ಬರ ಮುಂದೆ ಕೈಚಾಚದೇ ಸರಕಾರದಿಂದ

ಮಂಜೂರಾಗಬೇಕಾದ ಪಿಂಚಣಿಯನ್ನು ನಿರಾಕರಿಸುವುದರ ಮೂಲಕ ಸ್ವಾಭಿಮಾನದ, ಪತಿವ್ರತಾ ಧರ್ಮದ ಪ್ರತೀಕವೆಂಬಂತೆ ಈರವ್ವಳ ಪಾತ್ರ ರೂಪುಗೊಂಡಿದೆ.

ದೇಶಕ್ಕೆ ದೇಶವೇ ಸ್ವಾತಂತ್ರ್ಯ ಬಂತೆಂದು ಹಿಗ್ಗಿ ನಲಿಯುವ ಕಾಲದಲ್ಲಿ ಸಂಗಪ್ಪನ ಕುಟುಂಬ ಹಾಗೂ ಗೆಳೆಯ ರಂಗಣ್ಣನ ಕುಟುಂಬ ನಿಜಾಮನ ಬಂಧನದಲ್ಲಿತ್ತು ಮತ್ತು ಅವರಿಂದ ಶೋಷಣೆಗೊಳಗಾಗಿತ್ತು. ಅದೇ ಊರಿನ ಮೌಲಾನಾಯ್ಕ ರಜಾಕಾರರ ಮುಂದಾಳು. ಅವನ ಹಿಂದೆ ದೊಡ್ಡ ಗುಂಪು. ಈರವ್ವಳ ಗಂಡ ಸಂಗಪ್ಪ ಮತ್ತು ರಂಗಣ್ಣನ ಮೇಲೆ ಅವನಿಗೆ ಸಿಟ್ಟು. ಚಳವಳಿ ಮಾಡಲೆಂದು ಸಂಗಪ್ಪ-ರಂಗಣ್ಣ ಊರು ಬಿಡುತ್ತಾರೆ. ಮೌಲಾನಾಯ್ಕನು ಈರವ್ವಳ ಮನೆಗೆ ನುಗ್ಗುತ್ತಾನೆ. ಅವಳ ಗಂಡನ (ಸಂಗಪ್ಪ) ವಿಳಾಸಕ್ಕಾಗಿ ಪೀಡಿಸುತ್ತಾನೆ. ಅವಳ ಮೈದುನ ನಿಂಗಣ್ಣನ ಮೇಲೆ ಹಲ್ಲೆ ಮಾಡುತ್ತಾನೆ. ತನ್ನ ಮನೆಗೆ ಬಂದು ತನ್ನೊಡನೆ ಇರುವಂತೆ ಈರವ್ವಳನ್ನು ಒತ್ತಾಯಿಸುತ್ತಾನೆ. ಈರವ್ವ ಒಪ್ಪುವುದಿಲ್ಲ. ತನ್ನನ್ನು ಕೊಲ್ಲು ಎಂದು ಎದೆ ಸೆಟೆಸಿ ನಿಲ್ಲುತ್ತಾಳೆ. ಮುಂದೆ ಕೂಡ ಮೌಲಾನಾಯ್ಕನಿಂದ ಕರಕರೆಯಾಗುತ್ತಿದ್ದರೂ ಇವಳ ಮೇಲೆ ಬಲಾತ್ಕಾರವೆಸಗಲು ಮೌಲಾನಾಯ್ಕನೇ ಅಳುಕುತ್ತಾನೆ. ಸಂಗಪ್ಪ ಅಂತಿಮವಾಗಿ ಸಾಯುತ್ತಾನೆ. ಚಳವಳಿಯ ಕಷ್ಟವನ್ನು ಅರಿತ ರಂಗಣ್ಣ ಅದರಿಂದ ದೂರವಾಗಿ ಕುತಂತ್ರದಿಂದ ಚಳವಳಿಯ ಎಲ್ಲ ಲಾಭವನ್ನು ಪಡೆಯುತ್ತಾನೆ ಸ್ವಾತಂತ್ರ್ಯ ಬಂದ ಮೇಲೆ ಜನಪ್ರತಿನಿಧಿಯೂ ಆಗಿ ಹಣ-ಅಧಿಕಾರವನ್ನು ವೃದ್ಧಿಸಿಕೊಂಡನು. ಸಂಗಪ್ಪನ ಮಾದರಿಗೆ ವೈದೃಶ್ಯವೆಂಬಂತೆ ಇವನ ನಡಾವಳಿಗಳನ್ನು ನೋಡಬಹುದು. ನಿಜವಾದ ಸ್ವಾತಂತ್ರ್ಯ ವೀರ ಸಂಗಪ್ಪನಾದರೂ ಅದರ ಫಲವನ್ನು ಸ್ವೀಕರಿಸುವ ಮೊದಲೇ ಸಾಯುತ್ತಾನೆ. ಆದರೆ ಚಳವಳಿ ಮುಗಿದ ಕೂಡಲೇ ರಂಗಣ್ಣ ತಾನೇ ಸ್ವಾತಂತ್ರ್ಯವೀರನೆಂದು ಘೋಷಿಸಿಕೊಂಡು ಊರಿಗೆ ಮರಳುತ್ತಾನೆ. ಎಂ.ಎಲ್.ಎ. ಕೂಡ ಆಗುತ್ತಾನೆ. ಈರವ್ವಳಿಗೆ ಸವಲತ್ತುಗಳನ್ನು ಪಡೆಯುವಂತೆ ಸಲಹೆ ಮಾಡುತ್ತಾನೆ. ತಾನು ಅವಳಿಗೆ ಪಿಂಚಣಿ ಬರುವಂತೆ ಮಾಡುತ್ತೇನೆಂದು ಆಶ್ವಾಸನೆ ಕೊಡುತ್ತಾನೆ. ಬಡತನ- ಹಸಿವು ಏಕಕಾಲಕ್ಕೆ ಬಾಧಿಸುತ್ತಿದ್ದರು, ಅದಕ್ಕೆ ತನ್ನನ್ನು ಬಲಿಗೊಡದೇ ದುಡಿದು ತಿನ್ನುತ್ತೇನೆಂಬ ಸ್ವಾಭಿಮಾನದ ಮಾತುಗಳನ್ನಾಡಿ ಎಲ್ಲ ಸವಲತ್ತುಗಳನ್ನು ತಿರಸ್ಕರಿಸುತ್ತಾಳೆ. ಎಲ್ಲ ಅನುಕೂಲವಿದ್ದವರೇ ಸವಲತ್ತುಗಳನ್ನು ಪಡೆದುಕೊಳ್ಳುತ್ತಿರುವಾಗ, ಇನ್ನು ಬಡತನ - ಹಸಿವೆಯಿಂದ ಕಂಗೆಟ್ಟಿರುವವರಿಗೆ ಸವಲತ್ತು ಸಿಗುವುದಾದರೂ ಹೇಗೆ? ಕೊಡಿಸುವವರಾದರೂ ಯಾರಿದ್ದಾರೆ? ಕೊಡುತ್ತೇನೆಂದು ಮುಂದೆ ಬಂದಾಗ ಈರವ್ವಳಂತೆ ಬೇಡ ಎಂದು ಧೈರ್ಯದಿಂದ ಹೇಳುವವರಾದರೂ ಯಾರಿದ್ದಾರೆ? ಎಂಬುದನ್ನು ಶಾಂತರಸರು ಈರವ್ವಳ ಪಾತ್ರದ ಮೂಲಕ ಸಮಾಜವನ್ನು ಪ್ರಶ್ನಿಸಿದ್ದಾರೆ.

ಗಂಡನನ್ನು ಕಳೆದುಕೊಂಡು ಒಂಟಿ ಹೆಣ್ಣಾದ ತನ್ನ ದೇಹದ ಮೇಲೆಯೇ ಎಲ್ಲರ ಕಣ್ಣಿರುವುದನ್ನು ಗಮನಿಸಿದರೂ ಯಾರಿಗೂ ತನ್ನ ದೇಹವನ್ನು ಮಾರಿಕೊಳ್ಳುವುದಿಲ್ಲ. ಮನಸ್ಸು ಮಾಡಿದರೆ ಈರವ್ವ ಬಡತನ ಮತ್ತು ಹಸಿವೆಯಿಂದ ಮುಕ್ತಳಾಗಬಹುದಿತ್ತು. ಆದರೆ ಇಂಥ ಹೇಸಿಗೆ ಬದುಕು ನಡೆಸುವುದಕ್ಕಿಂತ ಬಡತನ-ಹಸಿವೆಗೆ ದುಡಿದೇ ತಿನ್ನಬೇಕೆಂಬ ಕಾಯಕ ನಿಷ್ಠೆಯನ್ನೇ ಎತ್ತಿ ಹಿಡಿದು ನಿಜಕ್ಕೂ ಆದರ್ಶವಾಗುತ್ತಾಳೆ. ಎಂಥ ಪ್ರತಿಕೂಲ ಪರಿಸ್ಥಿತಿಯಲ್ಲೂ ಅವಳು ತನ್ನ ನೈತಿಕತೆ, ಘನತೆ, ಗಾಂಭೀರ್ಯಗಳನ್ನು ಬಿಟ್ಟು ಕೊಡುವುದಿಲ್ಲ. ಮುಖ್ಯವಾಗಿ ತನ್ನ ಗಂಡನು ದೇಶದ ಸ್ವಾತಂತ್ರ್ಯಕ್ಕಾಗಿ ತನ್ನ ಜೀವನವನ್ನೇ ತ್ಯಾಗಮಾಡಿದ್ದರೂ ಸ್ವಾತಂತ್ರ್ಯೋತ್ತರ ಸಂದರ್ಭದಲ್ಲಿ ಸರಕಾರದಿಂದ ಅವಳು ಯಾವ ನೆರವನ್ನು ಪಡೆಯುವುದಿಲ್ಲ. "ದುಡಕಂಡ್ ತಿಂತೀನಲ್ಲ,

ನನಗೇನು ಕಡಿಮೆಯಾಗಿಲ್ಲ. ಇರಾದು ಒಂದು ಜೀವ, ಸರಕಾರದ ಮುಲಾಜ್ಯಾದರೂ ಯಾಕೆ?" ಎಂಬ ನಿಲುವು ತಾಳುತ್ತಾಳೆ.[೨೬]

ಶಾಂತರಸರು ನಾಯಿ ಪಾತ್ರವೊಂದನ್ನು ತಂದು ಮನುಷ್ಯ ಕೈಬಿಟ್ಟರು ತನಗೆ ಅನ್ನ ನೀಡಿದರೆ ಕೊನೆತನಕ ನಮ್ಮ ರಕ್ಷಣೆಗೆ ನಿಲ್ಲುವ ಏಕೈಕ ಪ್ರಾಣಿ ನಾಯಿ ಎಂಬುದನ್ನು ಕಥೆಯ ಮೂಲಕ ನಿರೂಪಿಸಿದ್ದಾರೆ. ಏಕಾಂಗಿಯಾದ ಈರವ್ವಳಿಗೆ ನಾಯಿಯೇ ಭಂಟ, ಸಂಗಾತಿ. ಅದಕ್ಕೆ ಮಲ್ಲಣ್ಣನೆಂದು ಹೆಸರಿಟ್ಟು ಮಗನಂತೆ ಸಾಕುತ್ತಾಳೆ.

ಮನುಷ್ಯಲೋಕವನ್ನು ಕುರಿತು ನಾಯಿ ಮಲ್ಲಣ್ಣನು ಮಾಡುವ ಟೀಕೆಯನ್ನು ಯಾರೂ ಅಲ್ಲಗಳೆಯುವಂತಿಲ್ಲ. 'ತನ್ನ ಉಪಯೋಗಕ್ಕೆ ಬರುವ ಎಲ್ಲವನ್ನೂ ಬಳಸಿಕೊಂಡು ಮತ್ತೆ ಅದನ್ನು ತಿರಸ್ಕಾರದಿಂದ ಕೊಂಕಿನಿಂದ ಕಾಣುವ ಪ್ರಾಣಿ ದೇವರ ಸೃಷ್ಟಿಯಲ್ಲಿ ಈ ಮನುಷ್ಯನೊಬ್ಬನೇ' ಎಂಬುದನ್ನು ಶಾಂತರಸರು ನಾಯಿ ಪಾತ್ರದ ಮೂಲಕ ಹೇಳಿಸಿದ್ದಾರೆ. 'ತನ್ನ ಡೊಂಕನ್ನು ಮುಚ್ಚಿಟ್ಟುಕೊಳ್ಳುವಲ್ಲಿ ಮನುಷ್ಯನಿಗಿಂತ ಮೀರಿದ ಪ್ರಾಣಿ ಇನ್ನೊಂದಿಲ್ಲ. ಮನುಷ್ಯನ್ನುಳಿದು ಯಾವ ಪ್ರಾಣಿಯೂ ತನ್ನ ಸಹಜತೆಯನ್ನು ಮರೆಮಾಚಲು ಇಚ್ಛಿಸುವುದಿಲ್ಲ' ಎಂಬುದು ನಾಯಿ ಕಂಡುಕೊಂಡಿರುವ ಮತ್ತೊಂದು ಸತ್ಯ ಎಂಬುದು ನಿರೂಪಕರ ಅಭಿಮತ.

'ಮೌಲಾನಾಯ್ಕನ ಮತ್ತು ರಜಾಕಾರರ ಉಪಟಳ ತಡೆಯದೇ ಊರು ಬಿಟ್ಟು ಹೋಗಿದ್ದು ನಿಜ. ಮುಂಜಾಗ್ರತೆಯಾಗಿ ಹೆಂಡತಿ, ಮಗ, ತಾಯಿ ನಗನಾಣ್ಯಗಳನ್ನು ಬೇರೆ ಊರಿಗೆ ಸಾಗಿಸಿದ್ದು ನಿಜ. ಇದರಲ್ಲಿ ತಪ್ಪೇನಿದೆ? ಹಾಗೆ ಮಾಡದಿದ್ದರೆ ಎಲ್ಲಾ ರಜಾಕಾರರ ಪಾಲಾಗುತ್ತಿತ್ತು' ಎನ್ನುವ ರಂಗಣ್ಣ ತನ್ನೆಲ್ಲ ಭಂಡತನಗಳಿಗೆ ಉದ್ದಕ್ಕೂ ಸಮರ್ಥನೆ ನೀಡುತ್ತಾ ಹೋಗುತ್ತಾನೆ. 'ತಾನು ಜನರ ಕೆಲಸ ಮಾಡಿಸಿ ಕೊಡುತ್ತೇನೆ. ಅದಕ್ಕೆ ಪ್ರತಿಯಾಗಿ ಅವರು ಏನಾದರೂ ಕೊಡುತ್ತಾರೆ. ಅದನ್ನು ಒಲ್ಲೆ ಅನ್ನುವುದರಲ್ಲಿ ಏನರ್ಥವಿದೆ?' ಎಂಬುದು ಅವನ ವಾದ. ಅವನ ಪ್ರಕಾರ ಸಂಗಪ್ಪ ಒಬ್ಬ ಮೂರ್ಖ. ಜೀವ ಕಳೆದುಕೊಂಡರೆ ಏನು ಬರುತ್ತದೆ? ಬದುಕಿದ್ದರೆ ಏನಾದರೂ ಮಾಡಬಹುದಲ್ಲ. ನಾನೀ ವಿಚಾರದವ. ಮೂರ್ಖತನದಿಂದ, ಅಜ್ಞಾನದಿಂದ ಭಾವ ಪರವಶನಾಗಿ ಪ್ರಾಣಕಳೆದುಕೊಳ್ಳುವುದು ಮೂರ್ಖತನ ಎಂದು ವಾದಿಸುವ ರಂಗಣ್ಣ 'ತ್ಯಾಗ-ಬಲಿದಾನ'ಗಳನ್ನು ಹೀಗೂ ವ್ಯಾಖ್ಯಾನಿಸಿ ಬಿಡುತ್ತಾನೆ. ನಮ್ಮ ಪವಿತ್ರವಾದ ನಂಬಿಕೆ ಮತ್ತು ಭಾವನೆಗಳಿಗೆ ಈ ಮುಖವೂ ಇರಬಹುದೆಂಬ ಯೋಚನೆ ಮನುಷ್ಯ ನಡಾವಳಿಯನ್ನೇ ಸಮಸ್ಯಾತ್ಮಕಗೊಳಿಸುವಂತಿದೆ. ಆದರೆ ಸತ್ಯಾಗ್ರಹದಿಂದ ಲಾಭವಿದೆ ಎನ್ನುವುದು ರಂಗಣ್ಣನಿಗೆ ಗೊತ್ತು. 'ಸೇಫ್' ಆಗಿ ಸತ್ಯಾಗ್ರಹ ಮಾಡಬೇಕು. ರಾಜಕಾರಣ ಮಾಡಬೇಕು. ಅದರಿಂದ ಮಾಡುವವರಿಗೂ ಅನುಕೂಲವಾಗಬೇಕು ಎಂಬುದು ಅವನ ಒಟ್ಟಾರೆ ನಿಲುವು ಎನ್ನಬಹುದು. ಸ್ವಾತಂತ್ರ್ಯ ಚಳವಳಿಯಲ್ಲಿ ಸತ್ತ ಸಂಗಪ್ಪನ ಹೆಂಡತಿ ಈರವ್ವಳ ಬಡತನ-ಹಸಿವಿನ ನಿವಾರಣೆಗೆ ಸರಕಾರಿ ಸವಲತ್ತುಗಳನ್ನು ಕೊಡಸಬೇಕೆಂಬ ಅವನ ಮಾತಿನಲ್ಲಿ ಸ್ವಾರ್ಥವೂ ಇದೆ. ತನ್ನ ರಾಜಕಾರಣಕ್ಕೆ ಹಿಂದೆ ಸಂಗಪ್ಪನ್ನು ಬಳಸಿಕೊಂಡಿದ್ದ. ಈಗ ಅವನ ಹೆಂಡತಿಯನ್ನು ಬಳಸಿಕೊಳ್ಳಬಹುದೆಂಬುದು ಅವನ ಇಂಗಿತ.

'ಅಷ್ಟೇ ಅಲ್ಲ, ಹಿಂದೊಮ್ಮೆ ತನ್ನ ಕಡುವೈರಿಯಾಗಿದ್ದ, ರಜಾಕಾರರ ನಾಯಕನಾಗಿ ಊರಿಗೇ ಕಂಟಕನಾಗಿದ್ದ ಮೌಲಾನಾಯ್ಕ ಈಗ ಅವನ ದೋಸ್ತಿ. ಸ್ವಾತಂತ್ರ್ಯೋತ್ತರ ಭಾರತದ ರಾಜಕೀಯ ಒಂದು ಪ್ರಧಾನ ಮಾದರಿಯನ್ನೇ ಪ್ರತಿನಿಧಿಸುವ ರಂಗಣ್ಣನು ಕಾರಂತ, ಶ್ರೀರಂಗ,

ಅಡಿಗ, ಮುಂತಾದವರು ಸೃಷ್ಟಿಸಿರುವ ಅನೇಕ ಪಾತ್ರಗಳಿಗೆ ನೆನಪಿಗೆ ತರುವ ಹಾಗಿದ್ದಾನೆ' ಎಂದು ಟಿ.ಪಿ.ಅಶೋಕ್ ಅಭಿಪ್ರಾಯ ಪಟ್ಟಿದ್ದಾರೆ.[೩೦]

ಕಥೆಯ ಕೊನೆಯಲ್ಲಿ ಈರವ್ವ ಸತ್ತ ಬಳಿಕ, ಅವಳಿಗೆ ಪಿಂಚಣಿ ಸ್ಯಾಂಕ್ಷನ್ ಆಗಿ ಬರುತ್ತದೆ. ಅದನ್ನು ಲಪಟಾಯಿಸಲು ರಂಗಣ್ಣ ಅದಕ್ಕೊಂದು ಸಮರ್ಥನೆಯನ್ನು ನೀಡುತ್ತಾನೆ 'ಬರುವ ದುಡ್ಡು ಯಾಕೆ ಬಿಡಬೇಕು? ಅದು ಸತ್ತವರದೇ ಇರಲಿ, ಬದುಕಿದವರದೇ ಇರಲಿ,' ಎಂಬುದು. ನಾಯಿ ಮಲ್ಲಣ್ಣ ಮಾತ್ರ ರಂಗಣ್ಣನಿಗೆ ಒಂದು ಸಮಸ್ಯೆ. ಈರವ್ವಳ ಜೊತೆಗೆ ಆಕೆಯ ನಾಯಿಯೂ ಸತ್ತಿದ್ದರೆ ಒಳ್ಳೆಯದಿತ್ತು. 'ಸುಡುಗಾಡು ಸೂಳೆ ಮಗನದು. ನನ್ನನು ನೋಡಿದರೆ, ಕೂಡಲೇ ಗುರ್ರೆನ್ನುತ್ತದೆ. ಕಡಿಯಲಿಕ್ಕೆ ಬರುತ್ತದೆ. ಅದಕ್ಕೆ ಹುಚ್ಚು ಹಿಡಿದಿದೆ ಎಂದು ಪುಕಾರು ಮಾಡಿ ಅದನ್ನು ಕೊಲ್ಲಿಸಿಬಿಡಿರಿ' ಎಂದು ಪಂಚಾಯಿತಿಯವರಿಗೆ ಆದೇಶ ನೀಡುವ ರಂಗಣ್ಣ ತನ್ನ ವಿರೋಧಿಗಳನ್ನು ಹಾಗೆ ನಿವಾರಿಸಿಕೊಳ್ಳುವ ಬಗೆಯಲ್ಲೂ ನಮ್ಮ ಹಲವು ಸಮಕಾಲೀನ ರಾಜಕಾರಿಣಿಗಳ ಪ್ರತಿನಿಧಿಯೇ ಆಗಿದ್ದಾನೆ.

ಬಡವರ ಮೇಲಿನ ದೌರ್ಜನ್ಯ, ಶೋಷಣೆ, ದಬ್ಬಾಳಿಕೆಯನ್ನು ನಿವಾರಿಸಿ, ಅವರ ಬಡತನ-ಹಸಿವನ್ನು ಇಲ್ಲವಾಗಿಸಿ ಅವರ ಬದುಕನ್ನು ಹಸನು ಮಾಡುತ್ತೇವೆಂದು ನೈತಿಕತೆಯ ಮುಖವಾಡವನ್ನು ಹಾಕಿಕೊಂಡು ಬಡವರ ಹಸಿವು-ಬಡತನವನ್ನೇ ಬಂಡವಾಳ ಮಾಡಿಕೊಂಡು ತಮ್ಮ ಸ್ವಾರ್ಥದ ಬೇಳೆ ಕಾಳನ್ನು ಬೇಯಿಸಿಕೊಳ್ಳುತ್ತಾ, ತಮ್ಮ ಮನೆಯ ಖಜಾನೆಯನ್ನು ತುಂಬಿಕೊಳ್ಳುವ ಅಧಿಕಾರಶಾಹಿ, ಬಂಡವಾಳಶಾಹಿ, ಸ್ವಾರ್ಥರಾಜಕಾರಣಿಗಳ ಮುಖವಾಡವನ್ನು ಕಳಚುವುದು ಸಾಧ್ಯವೇ ಇಲ್ಲ. ಪ್ರತಿಭಟಿಸಿದರೆ ತಮ್ಮ ಅಧಿಕಾರಬಲ ಮತ್ತು ಹಣಬಲದಿಂದ ಹೇಗೆ ಮುಗಿಸಿಬಿಡುತ್ತಾರೆಂಬುದನ್ನು ಕಥೆ ನಿರೂಪಿಸಿದೆ.

ಪಿ. ಲಂಕೇಶ್‌ರವರ 'ರೊಟ್ಟಿ'

ಬಾಣಂತಿ ಮಗಳಿಗೆ ಊರಿಂದ ತಂದ ತಿಂಡಿ, ಪದಾರ್ಥ ಕೊಟ್ಟು ಒಂದು ವಾರ ಆರೈಕೆ ಮಾಡಿ ತನ್ನ ಪುಟ್ಟ ಟ್ರಂಕು, ಬ್ಯಾಗು ಹಿಡಿದುಕೊಂಡು ನಾಲ್ಕು ಮೈಲಿ ನಡೆದು ಬಂದು ಸಿಂಗಾರಪೇಟೆಯ ರೈಲ್ವೆ ಸ್ಟೇಷನ್ನಿನಲ್ಲಿ ಮಹಿಳೆಯೊಬ್ಬಳು ತನ್ನ ಊರಿಗೆ ಹೊರಡಲು ಕಾದಿದ್ದಾಳೆ. ರೈಲು ಬರುವುದು ತಡವೆಂದು ಗೊತ್ತಾದ ಮೇಲೆ ತನ್ನ ಮಗಳು ಕೊಟ್ಟ ಹಣ್ಣು, ರೊಟ್ಟಿಯನ್ನೇ ತಿಂದು ತನ್ನ ಹಸಿವೆಯನ್ನು ನೀಗಿಸಿಕೊಳ್ಳಬೇಕೆಂದರೂ ಜನರೆದುರು ತಿಂದು ಗೊತ್ತಿಲ್ಲ. ಹೊಟ್ಟೆಗೆ ಉತ್ತರ ಒಂದೇ. ಮೆಲ್ಲಗೆ ಬ್ಯಾಗು ತೆರೆದು ರೊಟ್ಟಿಗಳನ್ನು ಎಳೆದುಕೊಂಡಳು. ಅವುಗಳಲ್ಲಿ ಎರಡನ್ನಾದರೂ ಚಿಕ್ಕ ಮಗುವಿಗೆ ಇಟ್ಟುಕೊಳ್ಳಬೇಕೆಂದು ಪ್ಯಾಕೆಟ್ ಬಿಚ್ಚಿ ತೊಡೆಯ ಮೇಲೆ ಇಟ್ಟುಕೊಂಡಳು. ಒಂದನ್ನು ಪಕ್ಕಕ್ಕೆ ಇಟ್ಟು ಮಿಕ್ಕವನ್ನು ಕಾಗದದಲ್ಲಿ ಮುದುರುತ್ತಿದ್ದಾಗ ಪಕ್ಕದಲ್ಲಿಯೇ ನಿಂತಿದ್ದ ಉದ್ದ ಕೂದಲಿನ ವ್ಯಕ್ತಿ ನಾಲ್ಕೇ ಗಜ ದೂರದಲ್ಲಿ ನಿಂತು ಇಷ್ಟಗಲ ಕಣ್ಣು ತೆರೆದು ನೋಡುತ್ತಿದ್ದ. ಅವನ ಕಣ್ಣಲ್ಲಿದ್ದದ್ದು ಜ್ವರವಲ್ಲ, ಬೇಸರವಲ್ಲ, ಹಸಿವೆಯೆಂದು ತಿಳಿಯಿತು. ಅವನಿಗೊಂದು ರೊಟ್ಟಿ ಕೊಡೋಣವೆಂದು ನೋಡಿದಳು. ಕೊಡುವುದರ ಮೂಲಕ ಆ ಅಪಾಯದಿಂದ ವ್ಯಕ್ತಿಯ ಅನ್ಯೋನ್ಯತೆ ಗಳಿಸಲು ಇಷ್ಟವಿರಲಿಲ್ಲ. ಸಂಶಯ, ಭಯ. ಆದುದರಿಂದ ಬೇಗ ಬೇಗ ರೊಟ್ಟಿಯನ್ನು ಕಟ್ಟುತ್ತಿದ್ದಾಗ ಆತ ನೇರವಾಗಿ ಅವಳ ಕಡೆ ಜಿಗಿದು ಎಲ್ಲಾ ರೊಟ್ಟಿಗಳನ್ನು ಕಸಿದುಕೊಂಡು ತಿನ್ನತೊಡಗಿದ.

"ಹೋ... ಕಳ್ಳ! ಕಳ್ಳ!" ಅಂತ ಚೀರಿದಳು ಆ ಮಹಿಳೆ. ನಿಧಾನಕ್ಕೆ ಸುತ್ತ ಜನ ನಿಂತರು. ಅದರಲ್ಲೊಬ್ಬ ಎತ್ತರದ, ಕ್ರೂರ ಕಣ್ಣುಗಳ ವ್ಯಕ್ತಿ ಅವಳನ್ನೇ ನೋಡುತ್ತಾ ಕೇಳಿದ, "ಏನಾಯ್ತು?" ಹೆದರಿಕೆಯಿಂದ ನಡುಗುತ್ತಿದ್ದಳು. "ಈತ ಕದ್ದ... ನನ್ನ ನನ್ನ ನನ್ನ". "ಏನನ್ನ ಕದ್ದ". "ರೊಟ್ಟಿ ಕದ್ದ, ನನ್ನ ರೊಟ್ಟಿ ಆತ ತಿಂತಿರೋದು". ಆತ ಉದ್ದ ಕೂದಲಿನ ಹಸಿದ ವ್ಯಕ್ತಿ. ರೊಟ್ಟಿಯನ್ನು ಕಚ್ಚಿ ತಿನ್ನುತ್ತಾ ಅರ್ಧ ಮುಗಿಸಿದ್ದ. ಅವನಿಗೆ ಜಗತ್ತಿನ ಪರಿವೆಯೇ ಇದ್ದಂತಿರಲಿಲ್ಲ. ಅವನ ತೊಡೆಯನ್ನು ಕೂಡಾ ಸರಿಯಾಗಿ ಮುಚ್ಚದ ಪಂಚೆ, ಎದೆ ತೋರುವ ಅಂಗಿ, ಜಡೆಗಟ್ಟಿ ಬೆಳೆದ ಉದ್ದ ಕೂದಲು, ಕುರುಚಲು ಗಡ್ಡ. ಅವನ ಏಕಾಗ್ರತೆಗೆ ಜಗತ್ತು ಮೂಕವಾದಂತಿತ್ತು. ಕ್ರೂರ ಕಣ್ಣುಗಳ ವ್ಯಕ್ತಿ ಕೇಳಿದ, "ಅಷ್ಟಕ್ಕೆ ಇಷ್ಟು ಚೀರಾಡೋದೇ? ಯಾಕೆ ಕದ್ದ ಗೊತ್ತಲ್ಲ?" ಆಕೆಯ ಅಸಹಾಯಕತೆ ಜಾಸ್ತಿಯಾಗುತ್ತಿತ್ತು. ನಡುಗುವ ಸ್ವರದಲ್ಲಿ "ಅಷ್ಟು ಗೊತ್ತಾಗೊಲ್ಲವೇ. ನನ್ನಿಂದ ಆತ ಅದನ್ನು ಕಿತ್ತುಕೊಂಡ".

"ಹಸಿದಿತ್ತು... ತುಂಬಾ ಹಸಿವಾಗಿತ್ತು ಅವನಿಗೆ" ಉತ್ತರ ನೇರವಾಗಿತ್ತು. ಹಸಿದಿತ್ತಂತೆ, ಅದಕ್ಕೆ ತೆಗೆದುಕೊಂಡನಂತೆ. ಸಮರ್ಪಕವೂ ಹೌದು. ಆದರೆ ಕೆರಳಿದ, ಅಸ್ತವ್ಯಸ್ತವಾದ ಆ ಮಹಿಳೆ, "ಕೇಳಿದ್ದರೆ ನಾನೇ ಕೊಡ್ತಿದ್ದೆ. ಕಿತ್ತುಕೊಳ್ಳಬೇಕಾದ ಅಗತ್ಯವಿತ್ತೇ?" ಎಂದಾಗ ಸುತ್ತಲಿದ್ದವರು ನಕ್ಕರು, ಚೀರಾಡಿದರು. ದುರ್ಬಲ ದೇಹದ, ಅಗಲ ಕಣ್ಣುಗಳ ಒಬ್ಬ ವ್ಯಕ್ತಿ ಗಂಟಲು ಎತ್ತರಿಸಿ ಕೇಳಿದ "ನಿಮ್ಮಂಥವರು ಹೇಳೋ ಮಾತು ಇದೇನೇ! ಇದು ಬಹಳ ಕಾಲದಿಂದ ನಡೆದು ಬಂದಿರೋ ಕತೆ. ನಮ್ಮ ಹತ್ರ ಸುಳ್ಳು ಬೇಡ. ನಿಮ್ಮ ಮಗು ಮೇಲೆ ಆಣೆ ಮಾಡಿ ಹೇಳಿ, ಆತ ರೊಟ್ಟಿ ಕೇಳಿದ್ರೆ ಕೊಡ್ತಿದ್ದಿರಾ?"

ಏಕಾಂಗಿ ಹೆಂಗಸೊಬ್ಬಳ ಸಹಾಯಕ್ಕೆ ಬರದ ಕಂತ್ರಿ ನಾಯಿಗಳು ಸಹ ಕೂಗುವುದು ಕಂಡು ಅವಳಿಗೆ ಎಲ್ಲಿಲ್ಲದ ಸಿಟ್ಟು ಬಂತು. ಹೆಂಗಸಿನ ಕೈಯಿಂದ ಕಿತ್ಗೊಂಡು ಆ ನಾಯಿ ತಿಂತಿದ್ರೆ ಬೈತಿದ್ದೀರಲ್ಲ, ನಾಚಿಕೆಯಾಗೊಲ್ಲವಾ?

ಗಲಾಟೆ ದೊಡ್ಡದಾಯಿತು. ಸ್ಟೇಷನ್ನಿನ ಎಣಿಸಲಾರದಷ್ಟು ಜನ ಸುತ್ತ ಸೇರಿದರು. 'ಥೂ' ಅಂತ ಉಗಿದಳು. ಸಹಸ್ರ ಕಣ್ಣುಗಳು ಆಕೆಯನ್ನೇ ದಿಟ್ಟಿಸುತ್ತಿದ್ದವು. ಬೆತ್ತಲೆ ನಿಂತಂತೆ ಅನಿಸಿತು. ಸುತ್ತಣ ಒತ್ತಡಕ್ಕೆ ನೀತಿ ಬಿಟ್ಟು ಹೋಗುವ ಭಯ. ಅಷ್ಟರಲ್ಲಿ ಒಬ್ಬ ಪೋಲೀಸ್ ಬಂದ. ಬಂದವನೇ ಅವಳಿಂದ ಚೀಲ ಕಸಿದುಕೊಂಡ, ಭಿಕ್ಷುಕನ ಹತ್ತಿರ ಹೋಗಿ ಅವನಿಂದ ರೊಟ್ಟಿ ಕಿತ್ತುಕೊಂಡು ಅವನಿಗೆ ಕೋಲಿಂದ ತಲೆಗೆ ಬಾರಿಸಿದ. ರೊಟ್ಟಿಯ ಕಳ್ಳನಿಗೆ ಕೋಪದ ಅಲೆ. ಕೃತಿಗೆ ಇಳಿಯಲು ಹವಣಿಸುತ್ತಿತ್ತು. ಭಿಕ್ಷುಕನಿಗೆ ಪೋಲೀಸ್ ಇನ್ನೊಂದು ಏಟು ಕೊಟ್ಟ, ರಕ್ತ ಚಿಮ್ಮಿತು. ಆತ ತತ್ತರಿಸಿ ನಿಂತ. ಆಕೆ ಕಳ್ಳನನ್ನು ದಿಟ್ಟಿಸಿ ನೋಡುತ್ತಿದ್ದಳು. ರಕ್ತ ಸುರಿಯುತ್ತಿತ್ತು. ಜನ ಪೋಲೀಸಿನವನ ದೊಣ್ಣೆ ಹಿಡಿದುಕೊಂಡು 'ಯಾಕೆ ಹೊಡೆದೆ?' ಅಂತ ಕೇಳಿದರು. ಇನ್ನೇನು ಪೋಲೀಸ್ ಜನರ ಕೈಯಲ್ಲಿ ತುಕಡ ಆಗಬೇಕು. 'ಬೇಡಿ, ಯಾರನ್ನೂ ಹೊಡೀಬೇಡಿ' ಎಂದಳು. ಕಳ್ಳನ ಬಳಿ ಹೋಗಿ ಅವನನ್ನು ಮುಟ್ಟಲಾಗದೆ, ಮುಟ್ಟಬೇಕೆಂದು ಆಸೆಯಾಗಿ, ಆದರೂ ಮುಟ್ಟಲಾಗದೆ ನಡುಗುತ್ತಾ ತನ್ನ ಬಟ್ಟೆ, ಟ್ರಂಕ್‌ಗಾಗಿ ತಡಕಾಡಿದಳು. ಪೋಲೀಸ್ ಭಯದಿಂದ ನಿಂತಿದ್ದ. ಆತ ಅಂದ, "ಅಮ್ಮಾ ನಿಮ್ಮಿಂದ ಇಷ್ಟೆಲ್ಲಾ ರಾಮಾಯಣ, ಇಲ್ಲಿಂದ ಹೊರಟು ಹೋಗಿ. ನಿಮ್ಮಂಥೋರಿಂದ ತಲೆ ಹೋಗುತ್ತೆ' ಅಂತ ಜನಕ್ಕೆ ಮೆಚ್ಚುಗೆಯಾಗುವ ಹಾಗೆ ಮಾತನಾಡಲು

ಯತ್ನಿಸಿದ. ಆದರೆ ಹೋಗುವುದು ಆಕೆಗೆ ಸಾಧ್ಯವಿರಲಿಲ್ಲ. ಚೀಲದಿಂದ ಹಣ್ಣುಗಳನ್ನು ತೆಗೆದುಕೊಂಡು ಆ 'ಕಳ್ಳ' ವ್ಯಕ್ತಿಗೆ, ಎಲ್ಲಾ ಜನರಿಗೆ ಕೊಡಬೇಕೆನ್ನಿಸಿತು. ಹಣ್ಣನ್ನು ಎಲ್ಲರಿಗೂ ಕೊಡ ಹೋದಳು. ಯಾರೂ ತೆಗೆದುಕೊಳ್ಳಲಿಲ್ಲ. ಕ್ಷಮಿಸಿ ಅನ್ನಲು ಪ್ರಯತ್ನಿಸಿದಳು. ಮಾತು ಬರಲಿಲ್ಲ. ನಿಶ್ಶಕ್ತವಾದ ಕೈಯಿಂದ ಹಣ್ಣುಗಳು ಕೆಳಗೆ ಬಿದ್ದವು.

ಆಗ ದೂರದ ವಿಷಲ್ ಜನಕ್ಕೆ ಭಯ ಹುಟ್ಟಿಸುವ ಮಿಲಿಟರಿ ಕೂಗು ಕೇಳಿಸಿತು. ಜನ ಮೆಲ್ಲಗೆ ಚದುರಲು ಯತ್ನಿಸಿದರು. ನೂಕುನುಗ್ಗಲು ಶುರುವಾಯಿತು. ಜನರಿಗೆ ಲಾಠಿ ಪ್ರಹಾರ ಮಾಡಹತ್ತಿದ ಪೋಲೀಸನಿಗೆ 'ಬೇಡಿ, ಹೊಡೀಬೇಡಿ' ಎಂದರೂ ಯಾರಿಗೂ ಆಕೆಯ ಮಾತು ಕೇಳಿಸಲಿಲ್ಲ. ರಿಸರ್ವ್ ಪಡೆ ಜನರ ಮೇಲೆ ಎರಗಿತು. ಪೋಲೀಸಿನವನು 'ನೋಡಿ ಈ ಜನರ ತರಲೆ ಯಾವಾಗಲೂ ಇದ್ದದ್ದೇ' ಎಂದು ಅವಳ ರಟ್ಟೆ ಹಿಡಿದು ಎಳೆದ. ಬಿಡಿಸಿಕೊಳ್ಳಲು ಯತ್ನಿಸಿದಳು. ಆತ ಬಿಡಲಿಲ್ಲ. ರೊಟ್ಟಿಯ ಕಳ್ಳ ಕಂಬದ ಹತ್ತಿರ ರಕ್ತ ಸುರಿಸುತ್ತಾ ನಿಂತು ಅವಳನ್ನೇ ನೋಡುತ್ತಿದ್ದ. ಪೋಲೀಸ್ ಅವಳನ್ನು ದರದರ ಎಳೆದೊಯ್ದು ರಿಸರ್ವ್ ಮಂದಿಯ ಹತ್ತಿರ ಬಿಟ್ಟ. ಆಕೆಗೆ ದೂರದಲ್ಲಿದ್ದ ಜನರ ಗುಂಪನ್ನು ಸೇರಿ, ಅವರಿಂದ ಹೊಡೆತ ತಿನ್ನಬೇಕೆನಿಸಿತು. ಆದರೆ ಸುತ್ತ ಪೋಲೀಸ್ ಅವಳನ್ನು ಕರೆದುಕೊಂಡು ಹೊರಟಿತು. ಭಿಕ್ಷುಕ ಮಾತ್ರ ಸ್ಟೇಷನ್ನಿನ ಕಂಬಿಗಳು, ಗೋಡೆಗಳು, ಮೂಟೆಗಳ ಸಂದಿನಲ್ಲೇ ಕಾಣಿಸಿದ ಜ್ವರ, ಕೋಪ, ಹಸಿವೆಯ ಅವನ ಕಣ್ಣು ತನ್ನನ್ನೇ ನೋಡುತ್ತಿದ್ದಂತ್ತಿತ್ತು.

ಒಂದು ಕಡೆ ರೊಟ್ಟಿಯನ್ನಿಟ್ಟುಕೊಂಡ ಮಹಿಳೆ, ಹಸಿವಿನಿಂದ ಕಂಗಾಲಾಗಿ ರೊಟ್ಟಿಗಾಗಿ ಹಪಹಪಿಸುತ್ತಿರುವ ವ್ಯಕ್ತಿ ಇನ್ನೊಂದು ಕಡೆ. ಇದು ನಿಜವಾಗಿ ಉಳ್ಳವರ ಮತ್ತು ಇಲ್ಲದವರ ನಡುವಿನ ಸಂಘರ್ಷ. ಹಾಗೆ ನೋಡಿದರೆ ಆ ಮಹಿಳೆ ಶ್ರೀಮಂತಳೇನಲ್ಲ. ಏಕೆಂದರೆ ತನ್ನ ಮಗಳ ಮನೆಯಿಂದ ನಾಲ್ಕು ಮೈಲು ದೂರವಿರುವ ರೈಲ್ವೇ ಸ್ಟೇಷನ್ನಿಗೆ ಎರಡು ರೂಪಾಯಿ ಕೊಟ್ಟು ಗಾಡಿಯಲ್ಲಿ ಬರಲು ಇಷ್ಟವಿಲ್ಲದ ಕಾರಣ ರಣಬಿಸಿಲಿನಲ್ಲೂ ನಡೆದೇ ಬಂದಿದ್ದಳು.

ನಡೆದು ಆಯಾಸವಾದದ್ದರ ಜೊತೆಗೆ ಹಸಿವೆ ಕೂಡಾ ಆಗಿತ್ತು. ಹೊಟ್ಟೆಯ ಗಂಟನ್ನು ಬಿಚ್ಚಲು, ಹಸಿದ ಭಿಕ್ಷುಕ ಕಸಿದುಕೊಂಡದ್ದು, ಆಕೆಗೆ ಭಯದ ಜೊತೆಗೆ ಕೋಪವನ್ನುಂಟು ಮಾಡಿತ್ತು. ಕೇಳಿದ್ದರೆ ನಾನೇ ಕೊಡುತ್ತಿದ್ದೆ ಎಂದು ಹೇಳುವ ಆಕೆಯ ಫಿಲಾಸಫಿಗೂ, ಈ ಹೊತ್ತಿನ ಢಾಂಬಿಕತನಕ್ಕೂ ಒಂದು ಸಂಬಂಧವಿದೆ ಎನ್ನಿಸುತ್ತದೆ. ಈ ಹೊತ್ತಿನ ಮೊಗವಾಡಗಳ ಬದುಕಿಗೆ ಮಹಿಳೆ ಪ್ರತಿನಿಧಿಯಾಗುತ್ತಾಳೆ. ಹಸಿವಿನಿಂದ ಬೆಂದ ಆ ಜೀವ (ಭಿಕ್ಷುಕ) ರೊಟ್ಟಿಯನ್ನು ಕದ್ದದ್ದು ಧರ್ಮವಲ್ಲ ನಿಜ. ಆದರೆ ಆ ಜೀವಕ್ಕೆ ಅದೇ ಧರ್ಮ,

ರೊಟ್ಟಿಯನ್ನು ಕದ್ದದ್ದನ್ನೇ ದೊಡ್ಡ ಸಂಗತಿಯನ್ನಾಗಿ ಮಾಡುವ ಆ ಮಹಿಳೆ ತಾನು ನೋಯುವುದರ ಜೊತೆಗೆ ಹಸಿದ ವ್ಯಕ್ತಿಗೂ ನೋವುಣಿಸುತ್ತಾಳೆ. ಹಸಿದ ಹೊಟ್ಟೆ ತುಂಬಬೇಕಾದ ರೊಟ್ಟಿಗಳು ವ್ಯರ್ಥವಾಗಿ ಪೋಲೀಸಿನವನ ಕೈಯಲ್ಲಿ ಮುದ್ದೆಯಾಗಿ ಬಿಡುತ್ತವೆ. ಪಶ್ಚಾತ್ತಾಪದಿಂದ ತನ್ನಲ್ಲಿರುವ ಹಣ್ಣನ್ನು ಭಿಕ್ಷುಕನಿಗೆ, ಜನರಿಗೆ ನೀಡಲು ಪ್ರಯತ್ನಿಸಿದರೂ ಯಾರೊಬ್ಬರೂ ಸ್ವೀಕರಿಸದೇ ನೆಲಪಾಲಾಗಿ ಬಿಡುತ್ತವೆ.

'ರೊಟ್ಟಿ' ಹಸಿವನ್ನು ಕೇಂದ್ರಿತವಾಗಿ ರಚನೆಯಾದ ಕತೆ. ಇಲ್ಲಿ ಹಸಿವಿನ ರುದ್ರ ನರ್ತನವನ್ನು ಅನುಭವಕ್ಕೆ ತರುವ ಅಪೂರ್ವ ಕಲಾತ್ಮಕತೆ ಇದೆ. ಗಿಜಿಗುಡುವ ರೈಲ್ವೇ ಸ್ಟೇಷನ್‌ನಲ್ಲಿ ಮಗುವಿಗೆ ಉಣಬಡಿಸಬೇಕಾದ ರೊಟ್ಟಿಯನ್ನು ಭಿಕ್ಷುಕನೊಬ್ಬ ಎಳೆದುಕೊಂಡು ಮುಕ್ಕ ತೊಡಗುವ ಘಟನೆ ಸಂಭವಿಸುವುದು ಸಾಮಾನ್ಯವೆಂಬಂತಿಲ್ಲ. ಹಾಗಾಗಿ ಈ ಘಟನೆ ಹಸಿವಿನ ವಿಭಿನ್ನ ಮುಖಗಳನ್ನು ದರ್ಶಿಸುತ್ತದೆ. ವಿಭಿನ್ನ ಮನೋಧರ್ಮದ ಜನ ಅದಕ್ಕೆ ಪ್ರತಿಕ್ರಿಯಿಸುವ ರೀತಿ ವ್ಯವಸ್ಥೆಯ ಸ್ತರಮಾನಗಳನ್ನು ಪರಿಚಯಿಸುತ್ತದೆ. ಜೊತೆಗೆ ಪೋಲೀಸರ ಆಗಮನ, ಅವರು ಭಿಕ್ಷುಕನಿಗೆ ಕೊಡುವ ಏಟು, ಒಂದೊಂದು ಆಕೆಯ ಅಂತಃಕರಣವನ್ನು ಕಲಕುತ್ತವೆ. ಈ ಕಲಕುವಿಕೆ ಪ್ರೀತಿ, ಸಂಕಟ, ಕರುಣೆ, ಅಸಹಾಯಕತೆಗಳನ್ನು ಏಕಕಾಲದಲ್ಲಿ ನಮ್ಮ ಮುಂದೆ ಒಡ್ಡುತ್ತದೆ. ಬ್ಯೂರೋಕ್ರಸಿಯ ಕ್ರೌರ್ಯ ಅವಳನ್ನು ಎಳೆದೊಯ್ಯುವಲ್ಲಿ ವ್ಯಕ್ತಗೊಳ್ಳುತ್ತದೆ. ಭಿಕ್ಷುಕ ರೊಟ್ಟಿಯನ್ನು ಎಳೆದದ್ದು ಸರಿಯೋ ಅಥವಾ ತಪ್ಪೋ ಎನ್ನುವ ಪ್ರಶ್ನೆಯನ್ನು ಹಾಗೆಯೇ ಉಳಿಸಿಕೊಳ್ಳುವುದು ಕತೆಯ ವಿಶಿಷ್ಟತೆ. ಕತೆಯ ಒಟ್ಟಾರೆ ಚೌಕಟ್ಟು ಉಳ್ಳವರು ಮತ್ತು ಇಲ್ಲದವರ ನಡುವಿನ ಸಂಘರ್ಷ. ನೋಡಲು ಸರಳವಾಗಿ ಕಾಣುವ ಶೈಲಿಯ ಈ ಕತೆ ಆಸ್ತಿ ಬಗೆಗಿನ ಸಮಾಜವಾದಿ ದೃಷ್ಟಿಯನ್ನು ವ್ಯಕ್ತಪಡಿಸುತ್ತದೆ ಎಂಬ ಗಿರಡ್ಡಿ ಗೋವಿಂದರಾಜರ ಮಾತು ಸರಿ ಎನ್ನಿಸುತ್ತದೆ.[೩೧]

ಆಧುನಿಕ ಜಗತ್ತು ಆಧುನಿಕ ಮನಸ್ಸುಗಳ ಖಂಡ ಕಾವ್ಯದಂತಿರುವ ರೊಟ್ಟಿ ಕಥೆಯಲ್ಲಿ ಹಸಿವು, ಕರುಣೆ, ದಾರಿದ್ರ್ಯ, ಕ್ರೌರ್ಯ ಮತ್ತು ಮುಖ ಹೀನ ನಗರದ ಸ್ಥಿತಿ ಎಲ್ಲವನ್ನೂ ಏಕಕಾಲಕ್ಕೆ ಬಿಚ್ಚಿ ತೋರಿಸುವ ಅದ್ಭುತ ಕಥೆಯೆಂದು ಅಮರೇಶ ನುಗಡೋಣಿ ಅಭಿಪ್ರಾಯಪಟ್ಟಿದ್ದಾರೆ.[೩೨] ಸರಳವಾಗಿ ಬಗೆಹರಿಯಬೇಕಾದ ಸಮಸ್ಯೆ ರಾಜಕೀಯ ಕಾರಣದಿಂದ ದುರಂತದಲ್ಲಿ ಅಂತ್ಯವಾಗುತ್ತದೆ.

ಬೆಸಗರಹಳ್ಳಿ ರಾಮಣ್ಣನವರ 'ಚೆಲುವನ ಪರಂಗಿ ಗಿಡಗಳು'

ಡಾ. ಬೆಸಗರಹಳ್ಳಿ ರಾಮಣ್ಣ ಅವರ 'ಚೆಲುವನ ಪರಂಗಿ ಗಿಡಗಳು' ಎಪ್ಪತ್ತರ ಮಧ್ಯ ಭಾಗದಲ್ಲಿ ರಚಿತವಾದ ಕಥೆ. ಹಸಿವು, ಬಡತನ, ಶೋಷಣೆಯ ಹಲವಾರು ಕರಾಳ ಮುಖಗಳನ್ನು, ಅವುಗಳಿಗೆ ಮುಖಾಮುಖಿಯಾಗುವ ಹಲವು ಬಗೆಗಳನ್ನು, ಮನೋಜ್ಞವಾಗಿ ನಿರೂಪಿಸುವ ಈ ಕಥೆಯು ಸ್ವಾತಂತ್ರ್ಯೋತ್ತರ ಭಾರತದ ಗ್ರಾಮೀಣ ಭಾರತದ ಸಾಮಾಜಿಕ ಬದುಕಿನ ಒಂದು ಕಿರುದರ್ಶನವನ್ನೇ ಮಾಡಿಸುವಂತಿದೆ. ಹಸಿವು, ಬಡತನ, ಜಾತಿಯ ಇಕ್ಕಟ್ಟುಗಳು, ಹಳ್ಳಿಯ ಬದುಕನ್ನು ಹೊಸದಾಗಿ ಪ್ರವೇಶ ಮಾಡಿರುವ ಹೊಸ ಶಿಕ್ಷಣ, ವಿವಿಧ ಸರಕಾರಿ ಯೋಜನೆಗಳು ಅವುಗಳ ವೈವಿಧ್ಯಮಯ ಪರಿಣಾಮಗಳು ಇವೆಲ್ಲ ಒಟ್ಟುಗೂಡಿ ಸಂಕೀರ್ಣವಾಗಿರುವ ಬದುಕಿನ ಸಂದರ್ಭವನ್ನು ರಾಮಣ್ಣನವರ ಕಥೆ ಒಳಗೊಂಡಿದೆ. ಪರಂಪರಾಗತ ನಂಬಿಕೆಗಳು, ರೂಢಿಗಳು, ಮೌಲ್ಯಗಳು, ಹೊಸ ಅಭೀಪ್ಸೆ ಹೊಸ ಆತ್ಮವಿಶ್ವಾಸಗಳಿಗೆ ಎದುರಾಗಿ ಇತಿಹಾಸದ ಚಕ್ರ ಮತ್ತೊಂದು ಉರುಳಿಗೆ ಸನ್ನದ್ಧವಾಗಿರುವ ಸ್ಥಿತಿಯೊಂದನ್ನು ಈ ಕಥೆ ಬೆರಳು ಮಾಡಿ ತೋರಿಸುವಂತಿದೆ.

ಈ ಕಥೆಯು ಸುಣ್ಣದ ಹಳ್ಳಿ ಎಂಬ ಸಾಮಾಜಿಕ ಆವರಣದಲ್ಲಿ ನಡೆಯುತ್ತದೆ. ಸ್ವಾತಂತ್ರ್ಯ ಬಂದ ಈ ಹಳ್ಳಿಯ 'ಸುಧಾರಣೆ', 'ಅಭಿವೃದ್ಧಿ'ಗಳ ಪಥಕ್ಕೆ ಬಂದಿದೆ. ಅಲ್ಲೊಂದು ಮಾಧ್ಯಮಿಕ

ಶಾಲೆ. ಅಲ್ಲಿ ರಾಷ್ಟ್ರ, ರಾಷ್ಟ್ರೀಯತೆ, ರಾಷ್ಟ್ರ ಪ್ರಭುತ್ವಗಳು ತಮ್ಮ ಪ್ರವೇಶವನ್ನು ಸಾರಿದೆ. ಹಲವು ರಾಷ್ಟ್ರೀಯ ಯೋಜನೆಗಳು ಆ ಮೂಲಕ ಇಲ್ಲಿಗೂ ಹರಿದಿದೆ. ಹಳ್ಳಿಯ ಮಕ್ಕಳು ಸರಕಾರಿ ಶಾಲೆ ಸೇರಿದ್ದಾರೆ. ದೇಶದ ಚರಿತ್ರೆ, ವಿಜ್ಞಾನ, ಸಮಕಾಲೀನ ವಿದ್ಯಮಾನಗಳಿಗೆ ತೆರೆದುಕೊಳ್ಳುತ್ತಿದ್ದಾರೆ. ಹರಿಜನ ಮೂಗೂರನ ಮಗ ಚೆಲುವನು ಇವರಲ್ಲಿ ಒಬ್ಬ. ಬದಲಾವಣೆಯ ಹೊಸ್ತಿಲಲ್ಲಿರುವ ಈ ಹಳ್ಳಿಯಲ್ಲಿ ತೋಟಗಾರಿಕಾ ಮೇಲ್ವಿಚಾರಕರಾದ ಸುಬ್ಬಣ್ಣರಂಥ ಆದರ್ಶವಾದಿಗಳು ಇದ್ದಾರೆ. ಗೋವಿಂದ ಸ್ವಾಮಿಯಂಥ ಹಳೆಯ ಜಮೀನ್ದಾರ- ಮುಖಂಡರುಗಳು ಇದ್ದಾರೆ. ಹಳೆಯ ವ್ಯವಸ್ಥೆಗಳು ಸಂಪೂರ್ಣವಾಗಿ ನಶಿಸಿರದ, ಹೊಸ ವ್ಯವಸ್ಥೆಗಳು ಇನ್ನೂ ಪೂರ್ಣವಾಗಿ ತಲೆಯೆತ್ತಿರದ ಸಂಕ್ರಮಣಾವಸ್ಥೆಯಲ್ಲಿ ಪಟ್ಟ ಭದ್ರ ಹಿತಾಸಕ್ತಿಗಳಿಗೂ ಹೊಸ ಸಮಾಜಿಕ ವರ್ಗ ಶಕ್ತಿ, ಅಭೀಪ್ಸೆಗಳಿಗೂ ಇರುವ ಸಂಬಂಧ ಸಂಘರ್ಷಮಯವಾಗಿದೆ.

ಕಥೆಯ ಪ್ರಾರಂಭವೇ ಧ್ವನಿಪೂರ್ಣವಾಗಿದೆ. ಆ ದಿನ ಸುಣ್ಣದ ಹಳ್ಳಿಯ ಮಾಧ್ಯಮಿಕ ಶಾಲೆಯ ಇತಿಹಾಸದಲ್ಲಿ ಬರೆದಿಡಬೇಕಾದ ಪ್ರಮುಖ ಘಟನೆ. ಪೌಷ್ಟಿಕಾಂಶ ಯೋಜನೆಯ ದಿನಾಚರಣೆಯನ್ನು ಸದಾ ತಾಲ್ಲೂಕಿನ ಕೇಂದ್ರದಲ್ಲಿ ನಡೆಸುವುದರಿಂದ ನಿರೀಕ್ಷಿತ ಫಲ ದೊರೆಯುವುದಿಲ್ಲವೆಂದು, ಭಾರತದ ಜನಸಂಖ್ಯೆಯಲ್ಲಿ ಶೇಕಡ ಎಂಬತ್ತೆರಡು ಜನರು ಹಳ್ಳಿಗಳಲ್ಲಿ ವಾಸಿಸುವುದರಿಂದ ಹಾಗೂ ಇವರಿಗಾಗಿಯೇ ರೂಪಿಸಿದ ಯೋಜನೆಯ ದಿನಾಚರಣೆ, ಸುಣ್ಣದ ಹಳ್ಳಿಯಂಥ ಹಳ್ಳಿಯಲ್ಲಿಯೇ ನಡೆಯಬೇಕೆಂದು ಬಿ.ಡಿ.ಓ. ಸಾಹೇಬರು ನಿರ್ಧರಿಸಿದ್ದರು.

ಪೌಷ್ಟಿಕಾಂಶ ಕುರಿತ ಭಾಷಣಗಳು, ಭಿತ್ತಿಚಿತ್ರಗಳ ಪ್ರದರ್ಶನ ತಾನು ಹಿಂದೆ ಕೇಳಿರದ ಮಾಹಿತಿಗಳು, ಅಂಕಿ-ಅಂಶಗಳು ಚೆಲುವನ ಎಳೆಯ ಮುಗ್ಧ ಮನಸ್ಸಿನ ಮೇಲೆ ಅಚ್ಚಳಿಯದ ಪರಿಣಾಮವನ್ನುಂಟು ಮಾಡಿದವು. ಅವನು ಒಳ್ಳೆಯ ಆಹಾರಕ್ಕೂ, ಮನುಷ್ಯನ ದೇಹದಲ್ಲಿ ಕೆಲವು ಅಂಗಾಂಗಳ ಬೆಳವಣಿಗೆಗೂ ಇರುವ ಸಂಬಂಧ ತಿಳಿದು ವಿಸ್ಮಯಗೊಂಡ. ಅದರಲ್ಲೂ ಕಣ್ಣಿಗೂ ಪರಂಗಿ ಹಣ್ಣಿಗೂ ಸಂಬಂಧವಿದೆ ಎಂಬುದನ್ನು ತಿಳಿದು ದಂಗು ಬಡಿದು ಹೋದ. 'ಎ' ಅನ್ನಾಂಗದ ಕೊರತೆಯಿಂದ ಭಾರತದಲ್ಲಿ ಅದೆಷ್ಟು ಲಕ್ಷ ಮಂದಿ ಮಕ್ಕಳು ಕುರುಡಾಗಿದ್ದಾರೆ? ಇದನ್ನು ಊಹಿಸಿಕೊಂಡ ಚೆಲುವನ, ಹೃದಯ ಗಡಗಡನೆ ನಡುಗಿಹೋಯಿತು. ನಮ್ಮ ಪವಿತ್ರವಾದ ನಾಡಿನ ನೆಲ ಬಂಜೆ ಅಲ್ಲ, ಇಲ್ಲಿ ಹರಿಯುವ ನೀರು ವಿಷವಲ್ಲ ಎಂಬ ಸುಬ್ಬಣ್ಣನವರ ಈ ನುಡಿಗಳು ಚೆಲುವನ ಗುಂಡಿಗೆಯಲ್ಲಿ ನಾಟಿಕೊಂಡವು. ಪರಂಗಿ ಸಸಿಗಳನ್ನು ತಮ್ಮ ಮನೆಯ ಸುತ್ತ ಪಾಳು ಬಿದ್ದಿರುವ ಭೂಮಿಯಲ್ಲಿ, ಮನೆಗೆ ಮೂವತ್ತು ನಲವತ್ತು ಮಾರು ದೂರದಲ್ಲಿ ಹರಿಯುತ್ತಿರುವ ವಿಶ್ವೇಶ್ವರಯ್ಯ ನಾಲೆಯ ನೀರನ್ನು ಬಳಸಿಕೊಂಡು ಬೆಳೆಸಬೇಕೆಂದು ಮನಸ್ಸು ಮಾಡಿ, ತನ್ನ ಅವ್ವ, ಅಕ್ಕ, ಅಣ್ಣ ಇವರೆಲ್ಲರನ್ನು ಒಪ್ಪಿಸಿದ.

ಇಡೀ ಬಡ ದಲಿತ ಕುಟುಂಬ ತಮ್ಮ ಕನಸು, ಶ್ರಮ ಬೆವರುಗಳಿಂದ ಪರಂಗಿ ಸಸಿಗಳನ್ನು ನೆಟ್ಟು ಬೆಳೆಸುವ ಪ್ರಕ್ರಿಯೆಯು ಹೃದಯಂಗಮವಾಗಿದೆ. ಸ್ವಂತ ಮಕ್ಕಳನ್ನು ಬೆಳೆಸುವಷ್ಟು ಅಕ್ಕರೆ-ಆಸಕ್ತಿಯಿಂದ ಪರಂಗಿ ಗಿಡಗಳನ್ನು ಬೆಳೆಸಿ ಇವುಗಳಲ್ಲಿ ಕಾಯಿ ಬಿಟ್ಟಿದ್ದನ್ನು ನೋಡಿ ಇಡೀ ಕುಟುಂಬ ಹಿಗ್ಗಿನಿಂದ ನಲಿಯುತ್ತದೆ. ಆ ಪರಂಗಿ ಹಣ್ಣುಗಳನ್ನು ಮಾರಿದರೆ ಎಷ್ಟು ಹಣ ದೊರೆಯಬಹುದು. ಅದು ಮನೆಯ ಯಾವ ಅಗತ್ಯವನ್ನು ಪೂರೈಸಬಹುದು ಮುಂತಾಗಿ ಚೆಲುವನೂ ಅವನ ಕುಟುಂಬ ಕನಸು ಕಾಣಲಾರಂಭಿಸುತ್ತದೆ. ಚೆಲುವನ ಕನಸು ಮನಸುಗಳಲ್ಲಿ

ಪರಂಗಿ ಗಿಡಗಳೇ ತುಂಬಿಕೊಳ್ಳುತ್ತವೆ. ಆದರೆ ಗೋವಿಂದ ಸ್ವಾಮಿಯ ಅಧ್ಯಕ್ಷತೆಯ ಶಾಲಾಭಿವೃದ್ಧಿ ಮಂಡಳಿಯ ಒಂದು ಯೋಜನೆಯಿಂದ ಚೆಲುವನ ಕನಸು ನುಚ್ಚು ನೂರಾಗುತ್ತದೆ. ಶಾಲೆಯ ವಿದ್ಯಾರ್ಥಿ ಸಂಘದ ಮುಕ್ತಾಯ ಸಮಾರಂಭದ ಪ್ರಯುಕ್ತ ಮಕ್ಕಳಿಗೆ ಮಧ್ಯಾಹ್ನ ಮತ್ತು ರಾತ್ರಿ ಊಟವನ್ನು ಏರ್ಪಡಿಬೇಕೆಂದು ತೀರ್ಮಾನವಾಗುತ್ತದೆ. ಗೋವಿಂದ ಸ್ವಾಮಿ ಉದಾರ ಮನಸ್ಸಿನಿಂದ ಅಕ್ಕಿಯನ್ನು ತಾನೇ ಒದಗಿಸುವುದಾಗಿ ಹೇಳುತ್ತಾನೆ. ತರಕಾರಿಗಾಗಿ ಚೆಲುವನ ಪರಂಗಿ ಗಿಡಗಳಲ್ಲಿ ಸೊಂಪಗಿ ಬೆಳೆದಿದ್ದ ಕಾಯಿಗಳು ಅವರ ಕಣ್ಣಿಗೆ ಬೀಳುತ್ತವೆ. ಪರಂಗಿ ಸಸಿ ಒದಗಿಸಿದ್ದು ತೋಟಗಾರಿಕೆ ಇಲಾಖೆ; ಗಿಡಗಳನ್ನು ನೆಟ್ಟ ಜಾಗ ಸರಕಾರಿ ಭೂಮಿ. ಹಾಗಾಗಿ ಪರಂಗಿ ಕಾಯಿಗಳನ್ನು ಉದುರಿಸಿಕೊಂಡು ಬರಲು ಚೆಲುವನ ಮನೆಯವರ ಅನುಮತಿ ಸಹ ಬೇಕಾಗಿಲ್ಲ ಎಂಬ ದಾರ್ಷ್ಟ್ಯವನ್ನು ಗೋವಿಂದ ಸ್ವಾಮಿ ಪ್ರದರ್ಶಿಸುತ್ತಾನೆ. ಅವನ ವೈಯಕ್ತಿಕ ಹಿತಾಸಕ್ತಿಗೆ, ಕುಟಿಲ ರಾಜಕಾರಣಕ್ಕೆ ದ್ವೇಷ ಅಸೂಯೆಗಳಿಗೆ ಚೆಲುವನ ಪರಂಗಿ ಗಿಡಗಳು ಬಲಿಯಾಗುತ್ತವೆ. ಗೋವಿಂದಸ್ವಾಮಿ ಆ ಹಳ್ಳಿ ಶಕ್ತಿ ಕೇಂದ್ರವಾದ್ದರಿಂದ ಅವನನ್ನು ಪ್ರತಿರೋಧಿಸುವುದಕ್ಕೆ ಯಾರೂ ಮುಂದಾಗುವುದಿಲ್ಲ. ಚೆಲುವನ ಅಪ್ಪ ಮೂಗೂರಯ್ಯ ಮಾತ್ರ ತೀವ್ರವಾಗಿ ಪ್ರತಿಭಟಿಸುತ್ತಾನೆ. ಇದಕ್ಕೆ ಕಾರಣ ಕುಟುಂಬದ ಹಸಿವು, ಬಡತನ, ಅಸಹಾಯಕತೆ ಅವನನ್ನು ಪ್ರತಿಭಟಿಸುವಂತೆ ಪ್ರೇರೇಪಿಸುತ್ತದೆ. ತನ್ನ ಶೋಷಕರ ವಿರುದ್ಧ ಹಿಂಸಾತ್ಮಕ ಆಕ್ರಮಣಕ್ಕೂ ಮುಂದಾದಾಗ ಅವನ ಕುಟುಂಬ ವರ್ಗ ಅವನನ್ನು ತಡೆಯುತ್ತದೆ. ಇದರಿಂದ ಮೂಗೂರಯ್ಯ ತೀವ್ರವಾದ ತಳಮಳಕ್ಕೆ ಒಳಗಾಗಿ ತಾನು ತನ್ನ ಕುಟುಂಬ ವರ್ಗ ಶ್ರಮ-ಶ್ರದ್ಧೆಯಿಂದ ಬೆಳೆಸಿದ್ದ ಪರಂಗಿ ಗಿಡಗಳನ್ನು ತಾನೆ ಕಡಿದುಹಾಕಲಾರಂಭಿಸುತ್ತಾನೆ. ಅಪ್ಪನು ಪರಂಗಿ ಗಿಡಗಳನ್ನು ಕಡಿಯಹೊರಟಾಗ ಆಘಾತದಿಂದ ಚೆಲುವನು ಜ್ಞಾನತಪ್ಪಿ ಬಿದ್ದು ಹಣೆಗೆ ಪೆಟ್ಟುಮಾಡಿಕೊಳ್ಳುವುದು ಮೂಗೂರಯ್ಯನನ್ನು ಹಿಂಸೆಯಿಂದ ಹಿಮ್ಮೆಟ್ಟಿಸುತ್ತದೆ. 'ಆಕ್ರಮಣ ಮತ್ತು ಆತ್ಮಹತ್ಯೆ ಹಸಿವಿನಿಂದ ಕಂಗೆಟ್ಟ ಬಡವರಿಗೆ, ದಲಿತರಿಗೆ ತೀರ ಸಹಜವಾದ ಅನಿವಾರ್ಯವಾದ ಪ್ರತಿಭಟನೆಯ ಕ್ರಮಗಳೇ' ಎಂಬ ಪ್ರಶ್ನೆಯನ್ನು ಕಥೆ ವಿಷಾದಿಂದ ಆದರೆ ಮುಕ್ತವಾಗಿ ತೆರೆದಿಡುತ್ತದೆ ಎಂದು ಟಿ. ಪಿ. ಅಶೋಕರವರು ಅಭಿಪ್ರಾಯಪಟ್ಟಿದ್ದಾರೆ.[೩೩] ರಾಜಕೀಯ ಕಾರಣದಿಂದಾಗಿ ಬಡವರು ತಮ್ಮ ಹಸಿವನ್ನು ಹತ್ತಿಕ್ಕಿಕೊಳ್ಳಬೇಕಾದ ಅನಿವಾರ್ಯತೆಯನ್ನು ಈ ಸಮಾಜ ಸೃಷ್ಟಿಸಿ ಬಿಟ್ಟಿದೆ. ಪ್ರತಿಭಟಿಸಿದರೂ ಕೂಡಾ ಅದಕ್ಕೆ ಯಾವ ಬೆಲೆಯಿಲ್ಲ.

ಬಿ. ಎಂ. ಬಷೀರ್‌ರವರ 'ಚೂರ್ಕತೆ'

ಹಸಿದು ಕಂಗಾಲಾಗಿದ್ದ ವೃದ್ಧನೊಬ್ಬ ಫುಟ್‌ಪಾತ್‌ನಲ್ಲಿ ಮಲಗಿದ್ದ. ಉಂಡು ಎಷ್ಟು ದಿನವಾಗಿತ್ತೋ ಏನೋ? ಹೊಟ್ಟೆ ಬೆನ್ನಿಗೆ ಅಂಟಿಕೊಂಡಿತ್ತು. ಕಣ್ಣು ಮಂಜಾಗಿತ್ತು. ಯಾರೋ ಕನಿಕರಗೊಂಡು ಅವನ ತಲೆಯ ಬಳಿ ಒಂದು ಕಟ್ಟು ಎಸೆದು ಹೋದರು. ವೃದ್ಧ ನಡುಗುವ ಕೈಯಿಂದ ಅದನ್ನು ಮುಟ್ಟಿದ. ಬಿಸಿಯಿತ್ತು. ಅನ್ನದ ಪರಿಮಳ ಮೂಗಿಗೆ ಬಡಿಯಿತು. ಕಷ್ಟದಿಂದ ಎದ್ದು ಕೂತು ಆತುರಾತುರದಿಂದ ಅದನ್ನು ಬಿಡಿಸಲು ಯತ್ನಿಸಿದ. ಹಸಿವಿನಿಂದ ನಡುಗುತ್ತಿದ್ದರಿಂದ ಕೈಗಳು ಸಹಕರಿಸುತ್ತಿರಲಿಲ್ಲ. ಕೊನೆಗೆ ಕಟ್ಟು ತೆರೆದು ನೋಡಿದರೆ ಬಿಸಿ ಬಿಸಿ ಅನ್ನ ಹೊಗೆಯಾಡುತ್ತಿತ್ತು. ಮಾಂಸದ ತುಂಡು ಮತ್ತು ಸಾರು ಗಮಗಮಿಸುತ್ತಿತ್ತು. ಬತ್ತಿ ಹೋಗಿದ್ದ ಅವನ ಕಣ್ಣಿನ ಆಳದಿಂದ ನೀರಿನ ಒಸರು ಮಿಂಚಿದಂತೆ ಬೆಳಕು. ಕಟ್ಟನ್ನು ಸಂಪೂರ್ಣ ಬಿಡಿಸಿ ಒಂದು ತುತ್ತು ತೆಗೆದು ಬಾಯಿಗಿಟ್ಟ. ಮಾಂಸದ ಪರಿಮಳ ಅವನ ನರನರವನ್ನು ಕೆರಳಿಸಿತ್ತು.

ಇನ್ನೊಂದು ತುತ್ತು ಬಾಯಿಗಿಡಬೇಕು ಎಂಬಷ್ಟರಲ್ಲಿ ಪಕ್ಕದ ಬಸ್‌ಸ್ಟಾಪಿನಿಂದ ಯಾರೋ ಚೀರಿದರು. ಅಯ್ಯೋ ಅನ್ಯಾಯ, ಬೀಫ್, ಆತ ಬೀಫ್ ತಿನ್ನುತ್ತಿದ್ದಾನೆ. ಬಸ್‌ಸ್ಟಾಪಿನಲ್ಲಿದ್ದವರ ಗಮನವೆಲ್ಲಾ ವೃದ್ಧನ ಕಡೆ ಹರಿಯಿತು. ಓಹ್ ಬೀಫ್ ಎಂದು ಹಲವರು ಉದ್ಗರಿಸಿದರು. ಅವರೆಲ್ಲರೂ ಕೆಲಸಕ್ಕೆಂದು ತೆರಳುತ್ತಿದ್ದ, ಬಸ್ಸಿಗಾಗಿ ಕಾಯುತ್ತಿದ್ದ ಸಭ್ಯ ನಾಗರಿಕರು.

ಬೆಳಿಗ್ಗೆ ಎದ್ದು ಮಿಂದು, ಮಡಿಯುಟ್ಟು, ದೇವರ ಪೂಜೆ ಮಾಡಿ, ಸಸ್ಯಾಹಾರವನ್ನಷ್ಟೇ ಸೇವಿಸಿ, ಸಾತ್ವಿಕವಾದ ವಸ್ತ್ರಗಳನ್ನು ಧರಿಸಿ, ತಮ್ಮ ಮುದ್ದು ಮಕ್ಕಳಿಗೆ ಟಾಟಾ ಹೇಳಿ ತಮ್ಮ ಕಾಯಕಕ್ಕೆ ಹೊರಟವರು. ಅವರಲ್ಲೊಬ್ಬರು ಪೋಲೀಸರಿಗೆ ಫೋನ್ ಮಾಡಿ ಎಂದು ಸಲಹೆ ನೀಡಿದರು.

ಅಷ್ಟರಲ್ಲಿ ಆ ವೃದ್ಧ ತಿಂದು ಮುಗಿಸಿದರೆ! ಸಾಕ್ಷಿ ಸಮೇತ ಬಂಧಿಸಬೇಕು. ಮೊದಲು ಅವನಿಂದ ಅದನ್ನು ಕಿತ್ತುಕೊಳ್ಳಿ. ಎಲ್ಲರೂ ಅವನನ್ನು ಸುತ್ತುವರಿದರು. ವೃದ್ಧ ಅವರೆಲ್ಲರನ್ನು ಗಮನಿಸದೇ ಇನ್ನೊಂದು ಮುಷ್ಠಿ ಅನ್ನವನ್ನು ಬಾಯಿಗಿಡಬೇಕು ಅನ್ನುವಷ್ಟರಲ್ಲಿ ಒಬ್ಬ ಬಂದು ಅವನ ಕೈಯನ್ನು ಹಿಡಿದುಕೊಂಡ. ಬಲಾಢ್ಯ, ಹೆಗಲಲ್ಲಿ ಕೇಸರಿ ಶಾಲು. ಹಣೆಯಲ್ಲಿ ಕೆಂಪು ನಾಮದವನು. 'ಏಯ್... ಗೋಮಾಂಸ ತಿನ್ನುತ್ತಿದ್ದೀಯಾ?' ಅವನ ಗರ್ಜನೆಗೆ ವೃದ್ಧ ನಡುಗಿ ಹೋದ. ಆದರೆ ಮುಷ್ಠಿಯಲ್ಲಿದ್ದ ಅನ್ನವನ್ನು ಮಾತ್ರ ಕೆಳಗೆ ಹಾಕಲಿಲ್ಲ. 'ಹೇಳು, ಗೋಮಾಂಸ ತಾನೇ?' ಮುದುಕನಿಗೆ ಅರ್ಥವೇ ಆಗಲಿಲ್ಲ. ಅವರೆಲ್ಲ ಈ ಅನ್ನವನ್ನು ಪಾಲು ಮಾಡಿಕೊಳ್ಳಲು ಬಂದವರೆಂದು ಭಾವಿಸಿದ.

ಕೊಡು ನಿನ್ನ ಕೈಯಲ್ಲಿರುವುದನ್ನು, ಈಗ ಪೋಲೀಸರು ಬರುತ್ತಾರೆ, ಮಾಲು ಪರೀಕ್ಷೆಯಾಗಬೇಕು' ಎಂದು ಇನ್ನೊಬ್ಬ ಆದೇಶ ನೀಡಿದ. ವೃದ್ಧ ಮಾತ್ರ ಮುಷ್ಠಿಯಲ್ಲಿದ್ದ ಅನ್ನವನ್ನು ಕೆಳಗೆ ಹಾಕಲಿಲ್ಲ.

ಒಬ್ಬ ಅವನ ಕೈಯಲ್ಲಿದ್ದ ಅನ್ನದ ಕಟ್ಟನ್ನು ಎಳೆದುಕೊಂಡು ಜಾಗ್ರತವಾಗಿ ಕಟ್ಟಿಟ್ಟ, ಯಾಕೆಂದರೆ ಪೋಲೀಸರಿಗೆ ಕೊಡಲು ಸಾಕ್ಷ್ಯಗಳು ಬೇಕು. ಅನ್ಯಾಯವಾಗಿ ಯಾರಿಗೂ ಶಿಕ್ಷೆಯಾಗಬಾರದು. ಇನ್ನಿಬ್ಬರು ಅವನ ಇನ್ನೊಂದು ಮುಷ್ಠಿಯಲ್ಲಿದ್ದ ಮಾಂಸದ ತುಂಡು, ಅನ್ನವನ್ನು ಬಿಡಿಸಲು ಪ್ರಯತ್ನಿಸಿದರು. ವೃದ್ಧ ಮುಷ್ಠಿಯನ್ನು ಸರ್ವಶಕ್ತಿ ಪ್ರಯೋಗಿಸಿ ಬಾಯಿಯೆಡೆಗೆ ಕೊಂಡೊಯ್ಯುತ್ತಿದ್ದರೆ ಉಳಿದಿಬ್ಬರೂ ಆ ಪ್ರಮಾದವನ್ನು ತಪ್ಪಿಸಲು ತಮ್ಮ ಸರ್ವಶಕ್ತಿಯನ್ನು ಪ್ರಯೋಗಿಸುತ್ತಿದ್ದರು. ವೃದ್ಧ ಅಂದುಕೊಂಡಷ್ಟು ದುರ್ಬಲನಾಗಿರಲಿಲ್ಲ. ಇನ್ನೊಬ್ಬನ ಪ್ರವೇಶವಾಯಿತು. ಎಲ್ಲರೂ ಸೇರಿ ವೃದ್ಧನ ಒಂದೊಂದೇ ಬೆರಳನ್ನು ಬಿಡಿಸಿ ಮಾಂಸವನ್ನು, ಅನ್ನವನ್ನು ಕೊನೆಗೂ ಕೆಳಗೆ ಹಾಕುವಲ್ಲಿ ಯಶಸ್ವಿಯಾದರು.

ಅಷ್ಟರಲ್ಲಿ ಪೋಲೀಸಿನವರ ಪ್ರವೇಶವಾಯಿತು. ವೃದ್ಧನನ್ನು ಜೀಪಿನಲ್ಲಿ ಕುಳ್ಳಿರಿಸಿ ಮಾಲನ್ನು ವಿಧಿವಿಜ್ಞಾನದೆಡೆಗೆ ಸಾಗಿಸುವ ಮಾತಾಡಿದರು. ಜನರು ನಿರಾಳರಾದರು. ಒಂದು ದೊಡ್ಡ ಪ್ರಮಾದ ತಪ್ಪಿಸಿದೆವೆಂದು ಹೆಮ್ಮೆಪಟ್ಟರು. ಮುಕ್ಕೋಟಿ ದೇವರಿರುವ ತಾಯಿಯನ್ನು ತಿನ್ನುತ್ತಾರಲ್ಲ... ರಾಕ್ಷಸರು, ರಾಕ್ಷಸರು ಎಂದು ಮತ್ತೊಬ್ಬರು ಜಿಗುಪ್ಸೆ ಪಟ್ಟುಕೊಳ್ಳುತ್ತಿದ್ದರು.

ಮರುದಿನ ಪತ್ರಿಕೆಗಳ ಮುಖಪುಟದಲ್ಲಿ ಪ್ರಕಟವಾಯಿತು 'ಗೋಮಾಂಸ ಸೇವನೆ... ಪ್ರಮಾದ ತಪ್ಪಿಸಿದ ಸಾರ್ವಜನಿಕರು'. ಎರಡು ದಿನದಲ್ಲಿ ಮಾಂಸವನ್ನು ಪರೀಕ್ಷಿಸಿದ ವಿಧಿವಿಜ್ಞಾನ ಪ್ರಯೋಗಾಲಯದ ವರದಿ ಪ್ರಕಟವಾಯಿತು. ಚಿಂತೆಪಡಬೇಕಾಗಿಲ್ಲ, ವೃದ್ಧ ತಿನ್ನುತ್ತಿದ್ದ ಮಾಂಸ ದನದ್ದಲ್ಲ, ಕುರಿಯದ್ದು. ಈಗ ಪೋಲೀಸರು ನಿರಾಳರಾದರು. ಅನ್ನದ ಕಟ್ಟನ್ನು ಪುನಃ ವೃದ್ಧನ ಕೈಗೆ ಕೊಟ್ಟು ಅದೇ ಫುಟ್‌ಪಾತ್‌ನಲ್ಲಿ ಬಿಟ್ಟು ಹೋದರು.

ವೃದ್ಧ ನಡುಗುವ ಕೈಗಳಲ್ಲಿಯೇ ಅನ್ನದ ಕಟ್ಟನ್ನು ಬಿಡಿಸಿದ. ನೋಡಿದರೆ ಅನ್ನ-ಮಾಂಸದಲ್ಲಿ ಹುಳಗಳು ಓಡಾಡುತ್ತಿದ್ದವು. ಆ ವೃದ್ಧನಿಗೆ ಏನನಿಸಿತೋ ಏನೋ? ಪುನಃ ಯಾರಾದರೂ ಕಿತ್ತುಕೊಳ್ಳಲು ಬಂದಾರೆಂಬ ಭಯದಿಂದ ಗಬಗಬನೆ ತಿನ್ನತೊಡಗಿದ. ಹಸಿದ ಹೊಟ್ಟೆಗೆ ಹುಳು ತುಂಬಿದ ಹಾಳಾದ ಮಾಂಸಾನ್ನವು ಅಮೃತವಾಗಿತ್ತು. ಹಾಗೆ ನೆಲಕ್ಕೊರಗಿದ. ಮರುದಿನ ಪತ್ರಿಕೆಯಲ್ಲಿ ಸಣ್ಣದೊಂದು ಸುದ್ದಿ ಪ್ರಕಟವಾಯಿತು. 'ನಗರದಲ್ಲಿ ತೀವ್ರ ಚಳಿ. ಓರ್ವ ವೃದ್ಧನ ಬಲಿ'. ಎಂತಹ ದುರಂತ. ಹಸಿದಾಗ ವೃದ್ಧನನ್ನು ಗಮನಿಸಿದ ನಗರದ ಸಭ್ಯ ನಾಗರಿಕರು, ಅನ್ನದ ಕಟ್ಟನ್ನು ಬಿಚ್ಚುವಾಗ ನೋಡಿದ್ದು, ಹಸಿದವರಿಗೆ ಅನ್ನ ನೀಡಬೇಕೆಂಬ ಕನಿಕರವಿಲ್ಲದವರು, ಕೈಯಲ್ಲಿದ್ದ ಅನ್ನದ ಕಟ್ಟನ್ನು ಬಲವಂತವಾಗಿ ಕಿತ್ತುಕೊಂಡು ದೊಡ್ಡ ಪ್ರಮಾದವನ್ನು ತಪ್ಪಿಸಿದೆವೆಂಬ ಹಮ್ಮಿನಿಂದ ಬೀಗುವುದು, ಹಸಿದ ಒಡಲು ಹಸಿವಿನಿಂದಲೇ ಒದ್ದಾಡಿ ಸಾಯುವಂತೆ ಮಾಡಿದ್ದು ಈ ಸಮಾಜದ ಘೋರ ವರ್ತನೆ. ಬಡವರು ತಿನ್ನುವ ಆಹಾರವನ್ನೇ ಅನುಮಾನದಿಂದ ನೋಡುವುದೇಕೆ? ಕೈಯಲ್ಲಿರುವ ಮಾಂಸದ ತುಂಡನ್ನು ನೋಡಿದ ಕೂಡಲೇ ನಾಗರಿಕರು ಹೌಹಾರಿದ್ದೇಕೆ? ಹಸಿದ ಒಡಲಿಗೆ ತಿಳಿಯುವುದು ಸಾಧ್ಯವೇ ಇದು ಯಾವ ಪ್ರಾಣಿಯ ಮಾಂಸವೆಂಬುದು. ಹಸಿದೊಡಲಿಗೆ ಹೊಟ್ಟೆ ತುಂಬಿಸಿಕೊಳ್ಳುವುದು ಮುಖ್ಯವೇ ಹೊರತು ಇದು ಯಾವ ಅಕ್ಕಿಯಿಂದ ಮಾಡಿದ ಅನ್ನ, ಇದು ಯಾವ ಪ್ರಾಣಿಯ ಮಾಂಸ ಎಂದು ಪರೀಕ್ಷಿಸಲು ಸಮಯ ಉಂಟೇ? ಈ ಕ್ರೂರತೆ ಅಳಿಯಬೇಕು. ಹಸಿದ ಒಡಲಿಗೆ ಅನ್ನ ನೀಡುವ ಕರುಣೆ ಮಾನವರಲ್ಲಿ ಬರಬೇಕಾಗಿದೆ. ಆಹಾರದ ರಾಜಕಾರಣ ಹಸಿದವರನ್ನು ಮತ್ತಷ್ಟು ಹಸಿವಿನಿಂದ ಬಳಲುವಂತೆ ಮಾಡಿ ಬಿಡುವುದು ನಾಗರಿಕ ಸಮಾಜವೇ ತಲೆ ತಗ್ಗಿಸುವಂಥದ್ದು. ಧನಿಕರು ಏನು ತಿಂದರೂ ಅದನ್ನು ಪ್ರಶ್ನಿಸುವಂತಿಲ್ಲ. ಅದೇ ಬಡವರು, ಹಸಿದವರು ಏನನ್ನು ತಿಂದರೂ ಅದನ್ನು ಅನುಮಾನದಿಂದಲೇ ನೋಡುವುದು ಈ ಹೀನ ಮನುಷ್ಯರ ಗುಣವಾಗಿದೆ.

ದೇವನೂರು ಮಹಾದೇವರವರನ್ನು ಒಮ್ಮೆ ಯಾರೋ 'ಒಕ್ಕಲಿಗರು, ಲಿಂಗಾಯತರೂ ದಲಿತರನ್ನು ಶೋಷಣೆ ಮಾಡುತ್ತಾ ಇರುವವರು. ಇವರೊಟ್ಟಿಗೆ ಸಾಮರಸ್ಯ ಹೆಂಗೆ ಸಾಧ್ಯ?' ಅಂತ ಪ್ರಶ್ನೆ ಕೇಳಿದರಂತೆ. ಇಲ್ಲಿ ಶೋಷಣೆ ಎರಡೂ ರೀತಿಯಲ್ಲಿ ಇದೆ. ಒಂದು ಕಾಣೋದು, ಇನ್ನೊಂದು ಕಾಣ್ದೇ ಇರೋದು. ಪ್ರತ್ಯಕ್ಷ ತೆರಿಗೆ, ಅಪ್ರತ್ಯಕ್ಷ (ಪರೋಕ್ಷ) ತೆರಿಗೆ ಅಂತಾರಲ್ಲ, ಹಂಗೆ. ಇಲ್ಲಿ ಬ್ರಾಹ್ಮಣರು, ಶೂದ್ರರು, ದಲಿತರು ಎಂದು ವಿಂಗಡಿಸಿದರೆ ಅವು ಬುದ್ಧಿ, ಹೃದಯ, ಹೊಟ್ಟೆಯಂತೆ ರಫ್ ಆಗಿ ಸಂಬಂಧ ಪಡೆದಿದೆ. ಬ್ರಾಹ್ಮಣರದ್ದು ಬುದ್ಧಿ, ಶೂದ್ರರದ್ದು ಹೃದಯ, ದಲಿತರದ್ದು ಹೊಟ್ಟೆಯಾಗಿದೆ. ಬ್ರಾಹ್ಮಣರು ಕೇವಲ ಒಂದು ಜಾತಿಯಾಗಿರದೆ ಬಾಹ್ಮಣರೂ ಕೂಡಾ ಹೇಸುವಂತಹ ಒಂದು ನೀತಿಯೂ ಆಗಿದೆ. ಇಲ್ಲಿ ಹೊಟ್ಟೆಯನ್ನು ಹೃದಯ, ಬುದ್ಧಿ ಎರಡೂ ತುಳಿತಾನೇ ಇವೆ. ಜೊತೆಗೆ ಅಷ್ಟಷ್ಟು ಈ ಹೊಟ್ಟೆಯಿಂದ ಹೃದಯಕ್ಕೋ, ಬುದ್ಧಿಗೋ ಏರಿದವರು ಮಾಡುವುದು ಅದನ್ನೇ. ಒಂದಂಶ ಸ್ಪಷ್ಟವಾಗಿದೆ. ಹೃದಯಕ್ಕೆ ಆಕೃತಿಯಿದೆ, ಅದು

ತುಳಿಯುವುದು ಕಾಣುತ್ತೆ. ಬುದ್ಧಿಗೆ ಆಕಾರವೇ ಇಲ್ಲ, ಇದು ಎಷ್ಟು ತುಳಿದರೂ ಕಾಣುವುದಿಲ್ಲ. ಹೀಗಿರುವುದರಿಂದ ಕಣ್ಣಿಗೆ ಕಾಣುವುದಕ್ಕಿಂತ, ಕಣ್ಣಿಗೆ ಕಾಣದೇ ಇರುವುದೇ ಹೆಚ್ಚು ಅಪಾಯಕಾರಿಯಾಗಿದೆ. ಮೊದಲು ಇದು ಹೋಗಬೇಕು. ಅನ್ಯಾಯದ ರೀತಿ–ನೀತಿಯನ್ನೇ ಮೂರ್ತದಿಂದ ಅಮೂರ್ತಕ್ಕಿಳಿಸಬೇಕು. ಮೊದಲು ಅಮೂರ್ತದ ವಿರುದ್ಧ ಹೋರಾಡುತ್ತಿರುವುದರಿಂದ ಮೇಜರ್ ಕಾಂಟ್ರಡಿಕ್ಷನ್ ಗುರುತಿಸಿ ಅದರ ವಿರುದ್ಧ ಹೋರಾಡುವುದು ಯುದ್ಧದ ನೀತಿ. ಆದ್ದರಿಂದ ಮೂರ್ತವನ್ನು ಒಟ್ಟುಗೂಡಿಸಿ ಅಮೂರ್ತದ ವಿರುದ್ಧ ಹೋರಾಡುವುದು ಮೊದಲ ಹೆಜ್ಜೆ. ಇಲ್ಲಿ ಗೆಲುವು ಸಿಕ್ಕರೆ ಆಮೇಲೆ ಉಂಟಾಗುವ ಪರಿಸ್ಥಿತಿ, ಏಳುವ ಸಮಸ್ಯೆಗಳು ಮತ್ತೂ ಹೋರಾಟವನ್ನು ಅಪೇಕ್ಷಿಸಬಹುದು. ಮುಂದಾಗಬಹುದಾದದ್ದು ಮೂರ್ತ ಹೋರಾಟವಾದ್ದರಿಂದ ನೇರ ನೇರ ಎಂದರೆ ಕೈಮಿಲಾಯಿಸುವ ಹೋರಾಟವೂ ಆಗಬಹುದೇನೋ? ಇದನ್ನು ಊಹಿಸುತ್ತಾ ಕೂರಲಾರೆ ಎಂದಿದ್ದಾರೆ.[೩೪]

ಇನ್ನೊಂದು ಕಡೆ ದೇವನೂರು ಮಹಾದೇವರು 'ನಾನು ಅಕಸ್ಮಾತ್ ಓದಿದವನು, ಹಾಗೇನೇ ಆಕಸ್ಮಾತ್ತು ಕಥೇನೋ, ಕವನಾನೋ ಬರೆದವನು. ಈ ಆಕಸ್ಮಿಕಗಳಲ್ಲಿ ಏನಾದರೂ ಒಂದು ಹಳಿ ತಪ್ಪಿದರೆ ನಾನು ಇಲ್ಲಿರ್ತಿರಲಿಲ್ಲ ಎಂದಿದ್ದಾರೆ. ಶಿಕ್ಷಣದಿಂದ ಉನ್ನತಿಗೇರಲು ಸಾಧ್ಯ, ಶೋಷಣೆಯಿಂದ ಮುಕ್ತರಾಗಲು ಸಾಧ್ಯ, ಶೋಷಣೆಯನ್ನು ಅರ್ಥ ಮಾಡಿಕೊಳ್ಳಲು ಸಾಧ್ಯ ಎಂಬುದು ಅವರ ಅಭಿಮತವಾಗಿದೆ.

ಸಾರಾ ಅಬೂಬಕ್ಕರ್‌ರವರ 'ಬಿತ್ತಿ ಬೆಳೆದವರು'

ಹಸಿವು ಮತ್ತು ಬಡತನದಿಂದ ಪಾರಾಗಿ ಹಣ ಹೇಗೆ ಮಾಡುವುದೆಂಬ ಚಿತ್ರಣವನ್ನೊಳಗೊಂಡ ಕತೆಯಿದಾಗಿದೆ. ರಾಜಕಾರಣಿಗಳು ಜನರನ್ನು ಮರುಳು ಮಾಡಿ ಓಟು ಪಡೆಯುತ್ತಾರೆ. ಓಟಿನಲ್ಲಿ ಗೆಲ್ಲಿಸಲು ಪ್ರಯತ್ನಿಸಿದ ವ್ಯಾಪಾರಿಗಳಿಗೆ ರಾಜಕಾರಣಿಗಳು ಋಣಿಗಳಾಗುತ್ತಾರೆ. ಅಂತಹವರು ಶ್ರೀಮಂತರಾಗುತ್ತಾರೆ. ಹಣ ಹಾಕಿ ಹಣ ತೆಗೆಯುವ ರಾಜಕೀಯ ತಂತ್ರ ಈ ಕಥೆಯಲ್ಲಿ ವ್ಯಕ್ತವಾಗುತ್ತದೆ.

ಹಸಿವು ಮತ್ತು ಬಡತನವನ್ನು ನಿವಾರಿಸಿಕೊಳ್ಳುವುದು ಕೂಡಾ ಒಂದು ಕೌಶಲ್ಯವೇ ಆಗಿದೆ. ಬಡತನ ಮತ್ತು ಹಸಿವಿನಿಂದ ಕಂಗಾಲಾಗಿದ್ದ ಮಹಮ್ಮದ್ ತನ್ನ ಕೌಶಲ್ಯದಿಂದ ಶ್ರೀಮಂತನಾಗಿ ಮಹಮ್ಮದ್ ಹಾಜಿಯಾಗುತ್ತಾನೆ. ಶ್ರೀಮಂತನಾದ ಹಾಜಿಯ ಮಕ್ಕಳು ಕೂಡಾ ಸಾವಿರ ಬಿತ್ತಿ ಲಕ್ಷ ಬೆಳೆ ತೆಗೆಯುವ ಕಲೆಯನ್ನು ತಂದೆಯಿಂದ ಬಳುವಳಿಯಾಗಿ ಪಡೆದಿದ್ದಾರೆ. ಬಡವರು ಹಸಿವು, ನೋವು, ವಿಷಾದದಿಂದ ಕೊರಗದೆ ಎದುರಾಗುವ ಸಮಸ್ಯೆಗಳನ್ನು ಆತ್ಮವಿಶ್ವಾಸದಿಂದ ಬಗೆಹರಿಸಿಕೊಂಡಾಗ ಬದುಕು ಸಾರ್ಥಕವಾಗುತ್ತದೆ. ಮನುಷ್ಯನೆಂದ ಮೇಲೆ ಸಮಸ್ಯೆಗಳು ಸಹಜ. ಸಮಸ್ಯೆಗಳಿಗೆ ಬೆನ್ನು ತೋರಿಸದೆ ಭರವಸೆಯ ಮೂಲಕ ಎದುರಿಸಿದರೆ ಯಶಸ್ಸು ಕಟ್ಟಿಟ್ಟ ಬುತ್ತಿ. ಮನಸ್ಸಿದ್ದಲ್ಲಿ ಮಾರ್ಗ ಎಂಬಂತೆ ಬದುಕುವ ಛಲ ಯಶಸ್ಸಿಗೆ ದಾರಿಯಾಗಬಲ್ಲದು ಎಂಬುದನ್ನು ಸಾರಾ ಅಬೂಬಕ್ಕರ್ ಬಿತ್ತಿ ಬೆಳೆದವರು ಕಥೆಯ ಮೂಲಕ ನಿರೂಪಿಸುವ ಪ್ರಯತ್ನ ಮಾಡಿದ್ದಾರೆ. ಹಸಿವು ಮತ್ತು ಬಡತನಕ್ಕೆ ರಾಜಕೀಯ ಕಾರಣವಾದಂತೆ ಅದೇ ರಾಜಕೀಯ ತಂತ್ರದಿಂದಲೇ

ಹಸಿವು ಮತ್ತು ಬಡತನವನ್ನು ನೀಗಿಸಿಕೊಂಡ ಮಹಮ್ಮದ್ ಹಾಜಿ ಹಸಿವು-ಬಡತನವನ್ನು ಆತ್ಮವಿಶ್ವಾಸದಿಂದ ನಿವಾರಿಸಿಕೊಳ್ಳಬೇಕೆಂಬ ಸತ್ಯವನ್ನು ತೆರೆದಿಡುತ್ತಾನೆ.

ಅಲಕ ತೀರ್ಥಹಳ್ಳಿಯವರ 'ಪದಕುಸಿಯೆ ನೆಲವಿಹುದು'

ಗ್ರಾಮೀಣ ಕೃಷಿ ಬದುಕಿನಲ್ಲಿ ಸೊಗಡು ಮಾತ್ರವಲ್ಲ ಅದರೊಂದಿಗೆ ಸಂಕಷ್ಟಗಳು ಇರುವುದನ್ನು ಅಲಕ ಈ ಕಥೆಯಲ್ಲಿ ನಿರೂಪಿಸಿದ್ದಾರೆ. ಭೂ ಸುಧಾರಣೆಯ ಕಾನೂನಿನ ಪೂರ್ವದಲ್ಲಿ ಗೇಣಿದಾರರಾಗಿದ್ದ ಒಕ್ಕಲು ಕುಟುಂಬಗಳು ಹಸಿವು-ಬಡತನದ ಬವಣೆಗಳಿಂದ ತತ್ತರಿಸ ಹೋಗಿದ್ದವು. ಕುಟುಂಬ ನಿರ್ವಹಣೆಗಾಗಿ ಗಣಪಯ್ಯ ಮಾಬ್ಲಯ್ಯನವರ ಮನೆಯ ಹೊರಗೆ ತೋಟ-ಹಿತ್ತಲುಗಳಲ್ಲಿ ದುಡಿದರೆ, ಪಾರ್ವತಿಯು ಅವರ ಮನೆಯ ಒಳಗೆಲಸಕ್ಕೆ ನಿಂತಳು. ಭೂಸುಧಾರಣೆ ಕಾನೂನು ಯಾರಿಗೆ ಏನೆಲ್ಲಾ ಉಪಕಾರ ಮಾಡಿತ್ತೋ ಏನೋ ಗಣಪಯ್ಯನವರ ಸಂಸಾರವನ್ನಂತೂ ಅಕ್ಷರಶಃ ಬೀದಿಗೆ ಎಸೆದಿತ್ತು. ಅವರ ಅಪ್ಪಯ್ಯನ ಕಾಲದ ಹತ್ತು ಎಕರೆ ಗದ್ದೆಯಲ್ಲಿ ರೈತರು ಬೆಳೆದು ಅದರಲ್ಲಿ ಕೊಡುತ್ತಿದ್ದ ಒಂದಿಷ್ಟು ಗುತ್ತಿಗೆ ಭತ್ತ, ಸಂಸಾರಕ್ಕೆ ಸಾಕಾಗುತ್ತಿತ್ತು. ಇನ್ನು ಅಲ್ಲಿ-ಇಲ್ಲಿ ಅಡುಗೆ ಪೌರೋಹಿತ್ಯ ಇತ್ಯಾದಿ ಕಾರ್ಯಗಳಿಂದ ಪುಟ್ಟ ಆದಾಯದಿಂದ ಮೇಲು ಖರ್ಚುಗಳೂ ನಡೆಯುತ್ತಿದ್ದವು. ಆದರೆ ಈಗ ಹಾಗಿಲ್ಲ; ಅರಳು ಹುರಿಯುವುದಕ್ಕೂ ನಾಕು ಕಾಳು ಗುತ್ತಿಗೆ ಭತ್ತ ಬರುತ್ತಿಲ್ಲ, ಇನ್ನು ಊರಲ್ಲಿ ಎಲ್ಲರೂ ಅಡುಗೆಯವರೆ – ಎಲ್ಲರೂ ಪೌರೋಹಿತ್ಯದವರೇ! ಆದರೆ ದೇವರು ದೊಡ್ಡವನು – ತನ್ನನ್ನು ನಿತ್ಯವೂ ತೊಳೆದು ತಲೆಯ ಮೇಲೆ ಹೂ ಹಾಕಿದವರನ್ನು ಹಾಗೆ ಬಿಡಲಾರ ಎಂದೇ ನಂಬಿದ್ದವ ಗಣಪಯ್ಯ. ಗಣಪಯ್ಯನು ಮಾಬ್ಲಯ್ಯನವರ ಮನೆ-ತೋಟದ ಕೆಲಸ ನಿರ್ವಹಿಸಿದರೆ ಮಾತ್ರ ಹೊಟ್ಟೆಗೆ ಹಿಟ್ಟು, ಇಲ್ಲದಿದ್ದರೆ ತಣ್ಣೀರೇ ಗತಿ. ಮಾಬ್ಲಯ್ಯನವರ ಮನೆ- ತೋಟದ ಕೆಲಸ ಮಾಡಿದರೆ, ಮಾತ್ರ ಆತನ ಕುಟುಂಬದ ಹಸಿವನ್ನು ನೀಗಿಸಲು ಸಾಧ್ಯವಾಗಿತ್ತು. ಒಮ್ಮೆ ಮಾಬ್ಲಯ್ಯನವರ ತೋಟದ ಕೆಲಸ ಮಾಡುತ್ತಿರುವಾಗ ಗಣಪಯ್ಯ ಅಡಿಕೆ ಮರದಿಂದ ಬಿದ್ದ. ಸಾಗರದ ಆಸ್ಪತ್ರೆಗೆ ಸೇರಿಸಿದರೂ ಪ್ರಯೋಜನವಾಗಲಿಲ್ಲ.

ಗಣಪಯ್ಯನ ಮಗ ದತ್ತಮೂರ್ತಿಗೆ ಬಡತನದ ಜೊತೆಗೆ ಅನಾಥ ಪ್ರಜ್ಞೆಯೂ ಕಾಡತೊಡಗಿದರೂ, ಮಾಧವಬಾಪಟ ಗುರುಗಳು ದತ್ತಮೂರ್ತಿಯ ನೆರವಿಗೆ ಧಾವಿಸಿ ಹಸಿವು ಬಡತನದಿಂದ ಪಾರಾಗಲು ಶಿಕ್ಷಣವೆಂಬ ಅಸ್ತ್ರವನ್ನು ಹಿಡಿ ಎಂದು ಹೇಳಿ ಅವನಲ್ಲಿ ಬದುಕುವ ಭರವಸೆಯನ್ನು ಮೂಡಿಸುತ್ತಾರೆ.

ಹಸಿವೆಯ-ಬಡತನಕ್ಕೆ ಹತಾಶರಾಗದೇ ಸವಾಲಾಗಿ ಸ್ವೀಕರಿಸಬೇಕು. ದುಡುಕಿನ ನಿರ್ಧಾರ ಕೈಗೊಳ್ಳಬಾರದು. ಈಸಬೇಕು ಇದ್ದು ಜಯಿಸಬೇಕೆಂಬ ಮಾತು ಸಾರ್ಥಕವೆನಿಸುತ್ತದೆ. ಪದ ಕುಸಿದರೂ ನೆಲವಿರುವಂತೆ ಶಿಕ್ಷಣದಿಂದ ಜೀವನ ನಿರ್ವಹಣೆಗೆ ಸಹಾಯಕವಾದೀತೆಂಬ ಅಭಿಮತ.

೪.೫ ಪ್ರಾಕೃತಿಕ ಕಾರಣದ ಹಸಿವಿನ ಕತೆಗಳು

ಕುವೆಂಪುರವರ 'ಯಾರೂ ಅರಿಯದ ವೀರ'

ಕನ್ನಡದ ರಾಷ್ಟ್ರಕವಿ 'ಕುವೆಂಪು'ರವರ ಮಹತ್ವದ ಕಥೆಗಳಲ್ಲಿ ಒಂದು 'ಯಾರೂ ಅರಿಯದ ವೀರ'. ಇದು ನೆರೆಯ ಭೀಕರತೆ ಪ್ರಕೃತಿಯ ವಿಕೋಪದಿಂದಾಗುವ ಒಂದು ದುರಂತ ಅವಘಡ ಕಥೆಯಾಗಿದೆ. ಅತಿವೃಷ್ಠಿ ತಂದೊಡ್ಡುವ ಈ ತೊಂದರೆಗೆ ಜೀವ ಜಗತ್ತು ಅನುಭವಿಸುವ ಆತಂಕ, ತಲ್ಲಣಗಳು ಅಪೂರ್ವವೆನ್ನಿಸುವ ಹಾಗೆ ಈ ಕಥೆಯಲ್ಲಿ ಅನಾವರಣಗೊಂಡಿದೆ. ಎಲ್ಲದಕ್ಕಿಂತ ಮುಖ್ಯವಾಗಿ ಈ ಕಥೆಯ ನಾಯಕ ಲಿಂಗ ತಾನು ಹಸಿದಾಗ ಅನ್ನ ಕೊಟ್ಟ ಧಣಿಯ ಅನ್ನದ ಋಣವನ್ನು ತೀರಿಸಲು ತನ್ನನ್ನೇ ತಾನು ಅರ್ಪಿಸಿಕೊಂಡು ಧಣಿಯ ಕುಟುಂಬವನ್ನು ಪಾರುಮಾಡುವ ಆತನ ಸಾಹಸ, ತ್ಯಾಗ, ಸಮಯಕ್ಕೆ ತಕ್ಕ ಅವನ ಆ ವರ್ತನೆ ಯಾರಿಗೂ ಅರ್ಥವಾಗುವುದಿಲ್ಲ. ಆದರೆ ನಿರೂಪಕರು ಲಿಂಗನನ್ನು 'ಯಾರೂ ಅರಿಯದ ವೀರ' ಎಂದು ಪ್ರಶಂಸಿಸುತ್ತಾರೆ.

ಹಸಿವೆಗೆ ಚಿನ್ನವನ್ನು ಅಥವಾ ಹಣವನ್ನು ಕೊಡುವುದರಿಂದ ನಿವಾರಣೆಯಾಗುವುದಿಲ್ಲ. ಹಸಿವೆಗೆ ಅನ್ನಕ್ಕಿಂತ ಪರ್ಯಾಯವಾದುದು ಬೇರೆ ಯಾವುದೂ ಇಲ್ಲ.

ಲಿಂಗ ಬಡವ, ಮಾವಿನಹಳ್ಳಿ ರಂಗೇನಾಯ್ಕರ ಮನೇಲಿ ಜೀತಕ್ಕಿದ್ದ. ಅಲ್ಲಿಯೇ ಐದಾರು ವರ್ಷ ಜೀತ ಮಾಡಿದ. ಅದರೊಂದಿಗೆ ಯಾರ್‍ಯಾರದೋ ಜೊತೆಯಲ್ಲೋ ಸೇರಿಕೊಂಡು ಕಳ್ಳು ಕುಡಿಯೋದು ಕಲಿತ. ಒಂದು ದಿನ ಸಂಜೆಯ ಹೊತ್ತು ಕಳ್ಳು ಕುಡಿದಿದ್ದ. ತಲೆಗೇರಿತ್ತು. ಕಳ್ಳಿನವನು ಏನು ಸೇರಿಸಿದ್ದನೋ ಏನೋ? ಅಮಲು ಬರುವ ಹಾಗೆ. ದಾರಿಯಲ್ಲಿ ಬರುವಾಗ ರಂಗನಾಯ್ಕರ ಮಗ ಶೇಷನಾಯ್ಕನು ಕುಡಿದಿದ್ದ. ತಲೆಗೆ ಅಮಲೇರಿತ್ತು. ಆತ ಲಿಂಗನನ್ನು ಬಾಯಿಗೆ ಬಂದಂತೆ ಬಯ್ದ. ಕುಡಿತದ ಮತ್ತಿನಲ್ಲಿದ್ದ ಲಿಂಗ ಕೂಡ ಹಿಂದೆ ಮುಂದೆ ನೋಡದೆ ಒಡೆಯರ ಮಗ ಅಂತಾ ತಿಳಿಯದೆ ಬಾಯಿಗೆ ಬಂದಂತೆ ಬೈದ. ಇಬ್ಬರ ನಡುವೆ ಮಾರಾಮಾರಿ ನಡೆಯಿತು. ಶೇಷನಾಯ್ಕನಿಗೆ ಪೆಟ್ಟಾಯ್ತು. ಲಿಂಗನ ಮೇಲೆ ಪಿರ್‍ಯಾದು ಕೊಟ್ಟರು. ಲಿಂಗ ಬಡವನಾದ್ದರಿಂದ ಜೈಲಾಯ್ತು.

ಧನಿಕರ ಮಕ್ಕಳು ಏನು ಮಾಡಿದರೂ ಅದು ಅಪರಾಧವಾಗುವುದಿಲ್ಲ. ತಪ್ಪು ಮಾಡಿದರೂ ಜಯಿಸಿಕೊಂಡು ಬರುವಷ್ಟು ಸಾಮರ್ಥ್ಯವಿರುವುದರಿಂದ ಅವರು ಯಾವುದಕ್ಕೂ ಹೆದರುವುದಿಲ್ಲ. ಹೆದರಬೇಕಾದದ್ದು ಬಡವರೆ. 'ಬಡವನ ಕೋಪ ದವಡೆಗೆ ಮೂಲ' ಎಂಬ ಮಾತಿನಂತೆ ಲಿಂಗ ಮಾಡಿದ್ದು ತಪ್ಪು ಅಂತಾ ಆರೋಪ ಹೊರಿಸಿ ಆತನನ್ನು ಅಪರಾಧಿಯನ್ನಾಗಿಸಿ ಜೈಲಿಗೆ ಅಟ್ಟಲಾಯಿತು.

ಲಿಂಗ ಎರಡು ವರ್ಷ ಜೈಲುವಾಸ ಅನುಭವಿಸಿ ಬರುವಾಗಲೇ ಹೆಂಡತಿ ತೀರಿಕೊಂಡಿದ್ದಳು. ಲಿಂಗನ ಮಗ ನಾಗ ಅನಾಥನಾಗಿ ಅಲೆದಾಡಿಕೊಂಡಿದ್ದ. ಲಿಂಗನು ಜೈಲಿನಿಂದ ಬರುತ್ತಿದ್ದಂತೆ ಬಂಧುಗಳೆಲ್ಲಾ ದೂರವಾದರು. ಲಿಂಗ ಮಗನನ್ನು ಕಟ್ಟಿಕೊಂಡು ಅಲೆದೂ ಅಲೆದೂ ಸುಟ್ಟು ಸುಣ್ಣಾಗಿದ್ದ. ಕೊನೆಗೆ ಶಿವನೂರು ಸುಬ್ಬಣ್ಣಗೌಡರಲ್ಲಿಗೆ ಬಂದು ಆಶ್ರಯ

ಪಡೆದ. ಲಿಂಗ ಹಾಗೂ ಆತನ ಮಗ ನಾಗನ ಹಸಿದ ಹೊಟ್ಟೆಗೆ ಅನ್ನ ಕೊಟ್ಟು ಜೊತೆಗೆ ಬಟ್ಟೆಯನ್ನು ಕೊಟ್ಟು ಲಿಂಗನಿಗೆ ಮರುಜನ್ಮ ನೀಡಿದವರೇ ಶಿವನೂರು ಸುಬ್ಬಣ್ಣಗೌಡರು.

ಒಂದು ದಿನ ಇದ್ದಕ್ಕಿದ್ದಂತೆ ಸಿಡಿಲು, ಗುಡುಗು–ಮಿಂಚು, ಮಳೆ–ಗಾಳಿ ಇವುಗಳಿಂದ ರಾತ್ರಿ ಭಯಂಕರವಾಗಿತ್ತು. ಸುಬ್ಬಣ್ಣಗೌಡರು ವಾಸವಾಗಿದ್ದ ಮನೆಯ ಪಕ್ಕದಲ್ಲಿದ್ದ ಹೊಳೆಯ ನೀರು ನೆರೆಯಿಂದ ಏರುತ್ತಿತ್ತು. ಗೌಡರು ಗಾಬರಿಗೊಂಡು ದೋಣಿಯನ್ನು ಸಿದ್ಧಪಡಿಸಲು ಲಿಂಗನಿಗೆ ಹೇಳಿದರು. ಅಷ್ಟರಲ್ಲಾಗಲೇ ಗೌಡರ ಮನೆಯ ಉಪ್ಪರಿಗೆ ಗೋಡೆ ಬಿದ್ದುಹೋಗಿತ್ತು. ಅಷ್ಟರಲ್ಲೇ ನಾಗಮ್ಮ, ತಿಮ್ಮ, ಸೀತೆ, ಲೋಕಮ್ಮ, ಸೋಮಕ್ಕನ ಮಗಳು ದಾಸಮ್ಮ ಎಲ್ಲರೂ ಹೊರಗೋಡಿ ಬಂದರು. ಸೋಮಕ್ಕ ಮಾಳಿಗೆ ಕೋಣೆಯಲ್ಲಿ ಇಟ್ಟಿದ್ದ ಪುಟ್ಟ ಗಂಟು ತರಲು ಓಡಿದವಳು ಹಿಂದಕ್ಕೆ ಬರಲೇ ಇಲ್ಲ. ಗೌಡರು ಬೀರಿನಿಂದ ಎರಡು ಪೆಟ್ಟಿಗೆಗಳನ್ನು ಕೆಳಗಿಟ್ಟು ಬೀರಿನ ಬಾಗಿಲು ಹಾಕಿ ಬೀಗಹಾಕಿದರು. ಒಂದು ಪೆಟ್ಟಿಗೆಯನ್ನು ಲಿಂಗನ ಮಗ ನಾಗನೂ, ಇನ್ನೊಂದನ್ನು ಗೌಡರು ಹೊತ್ತುಕೊಂಡು ಎಲ್ಲರೂ ದೋಣಿ ಏರಿದರು. ಅಷ್ಟರಲ್ಲಾಗಲೇ ಗೌಡರ ಮನೆ ಮುರಿದಂತಾಗಿ ಒಂದು ಚೀತ್ಕಾರದ ಧ್ವನಿಯೂ ಕೇಳಿಬಂತು. ಅಷ್ಟರಲ್ಲಾಗಲೇ ಎಲ್ಲರೂ ಸೋಮಕ್ಕನ ಆಸೆಯನ್ನು ಬಿಟ್ಟುಬಿಟ್ಟಿದ್ದರು. ಲಿಂಗ ದೋಣಿಯನ್ನೇರುವುದಕ್ಕೆ ಜಾಗಲೇ ಇರಲಿಲ್ಲ. ಅಷ್ಟರಲ್ಲಾಗಲೇ ದೋಣಿಗೆ ಭಾರ ಹೆಚ್ಚಾಗಿತ್ತು. ತಾನು ಕೂತರೆ ದೋಣಿ ದಡ ಸೇರುವುದಾದರೂ ಹೇಗೆಂಬುದು ಲಿಂಗನ ಚಿಂತೆಯಾಗಿತ್ತು. ಗೌಡರು ಮಾತ್ರ "ಏನಾದಾರಾಗಲಿ ಹತ್ತು, ದೇವರು ಮಾಡಿಸಿದ್ದಾಯಿತು" ಎಂದರು.[೧೬] ಆದರೂ ಅವರು ನದಿಯ ಕಡೆ ನೋಡಿದಾಗ ಮೈ ನಡುಗಿಬಿಟ್ಟಿತು. ಲಿಂಗ ಮಾತ್ರ ದೋಣಿಯನ್ನು ಹತ್ತದೇ ಗೌಡರಿಗೆ ತಾವು ದಡ ಸೇರಿದ ಮೇಲೆ ನಂತರ ದೋಣಿ ಕೊಟ್ಟು ಯಾರನ್ನಾದರೂ ಕಳುಹಿಸಿಕೊಡಲು ಹೇಳಿದರೂ ಕೂಡಾ, ಗೌಡರು ಗಟ್ಟಿಯಾಗಿ ಕೂಗಿ ಲಿಂಗನಿಗೆ ದೋಣಿ ಹತ್ತಲು ಅಪ್ಪಣೆ ಕೊಡಿಸಿಬಿಟ್ಟರು.

ಲಿಂಗ ಮರುಮಾತನಾಡದೆ ದೋಣಿಯ ಮತ್ತೊಂದು ತುದಿಯಲ್ಲಿ ಹುಟ್ಟುಹಿಡಿದು ಕುಳಿತ. ದೋಣಿ ಹೊರಟಿತು. ಮಲೆನಾಡಿನ ಬೆಟ್ಟಗುಡ್ಡಗಳಿಂದ ಕೂಡಿದ ಆ ಗಾಳಿ–ಮಳೆ, ಆ ಕತ್ತಲಿನಲ್ಲಿ ದೋಣಿ ಸಾಗುತ್ತಿತ್ತು. ದೋಣಿ ಭಾರದಿಂದ ಈಗಲೋ ಆಗಲೋ ಮುಳುಗುವಂತೆ ತೋರುತ್ತಿತ್ತು. ಗೌಡರು ದೋಣಿಯಲ್ಲಿದ್ದ ಎರಡು ಬೆಲೆಬಾಳುವ ಪೆಟ್ಟಿಗೆಗಳನ್ನು ತೆಗೆದು ಹೊಳೆಗೆ ಎಸೆದರು. ಪ್ರಾಣಹೋಗುವ ಸಂದರ್ಭದಲ್ಲಿ ಬೆಲೆಬಾಳುವ ವಸ್ತುಗಳಿಗಿಂತ ಜೀವ ಉಳಿಸಿಕೊಳ್ಳುವುದೇ ಮುಖ್ಯವಾಗಿ ಬಿಡುತ್ತದೆ. ಜೀವ ಇದ್ದರೆ ತಾನೇ ಏನನ್ನಾದರೂ ಗಳಿಸಲು ಸಾಧ್ಯ ಎಂಬುದು ಸುಬ್ಬಣ್ಣ ಗೌಡರಿಗೆ ಅರ್ಥವಾಗಿರಬೇಕು.

ಪೆಟ್ಟಿಗೆಗಳನ್ನು ಹೊಳೆಗೆ ಎಸೆದರೂ ದೋಣಿಗೆ ಭಾರ ಕಡಿಮೆಯಾಗಿರಲಿಲ್ಲ. ಹೆಂಗಸರು–ಮಕ್ಕಳು ಗೋಳಾಡತೊಡಗಿದರು. ಒಂದು ಸಾರಿ ದೋಣಿ ಮುಳುಗುವಂತಾಗಿ ಸ್ವಲ್ಪ ನೀರು ಒಳಗೆ ನುಗ್ಗಿತ್ತು. ಹುಟ್ಟು ಹಾಕುತ್ತಲಿದ್ದ ಲಿಂಗನು ಹೆಂಗಸರು ಮಕ್ಕಳ ಗೋಳಾಟವನ್ನು ಕಂಡು ಎದೆ ಮರುಗಿದ. ದೋಣಿ ಭಾರದಿಂದ ಮುಳುಗುವುದು ಖಂಡಿತವೆಂದು ನಿಶ್ಚಯಿಸಿದ. ಭಾರವನ್ನು ಕಡಿಮೆ ಮಾಡುವ ದಾರಿಯನ್ನು ಯೋಚಿಸಿದ. ಬಗೆಹರಿಯಲಿಲ್ಲ. ಹುಟ್ಟು ಹಾಕುವುದನ್ನು ನಿಲ್ಲಿಸಿ, ಸುತ್ತಲೂ ನೋಡಿದ. ಮಳೆಯ ರಭಸದಲ್ಲಿ ಒಬ್ಬರಿಗೊಬ್ಬರು ಕಾಣುತ್ತಿರಲಿಲ್ಲ. ತಾನೇ ಹೊಳೆಗೆ ಹಾರಿದರೆ ಭಾರ ಕಡಿಮೆಯಾಗಿ, ದೋಣಿ ಸುರಕ್ಷಿತವಾಗಿ ದಡ ಸೇರುವುದೆಂದು ತಿಳಿದ.

ತನ್ನನ್ನು ಊರಿಗೆ ಊರೇ ಕಳ್ಳನೆಂದು ದೂರಮಾಡಿದಾಗ, ಹಸಿದೂ ಹಸಿದೂ ದಿಕ್ಕೆಟ್ಟಿದ್ದ ತನಗೂ ತನ್ನ ಮಗ ನಾಗನಿಗೂ ಅನ್ನಕೊಟ್ಟು ಹಸಿವನ್ನು ನಿವಾರಿಸಿದ್ದ, ತೊಡಲು ಬಟ್ಟೆ ಕೊಟ್ಟು ರಕ್ಷಿಸಿದ ಧಣಿಯವರ ಕುಟುಂಬವನ್ನು ತನ್ನ ಪ್ರಾಣ ತ್ಯಾಗ ಮಾಡಿಯಾದರೂ ಉಳಿಸಲೇಬೇಕೆಂದು ಯೋಚನೆ ಮಾಡಿದ್ದ. ಹೊಳೆಗೆ ಹಾರಲು ಸಿದ್ಧನಾದಾಗ ಮಗನ ನೆನಪಾಗಿ ಹಿಂಜರಿದು ನಿಂತ. ಅಷ್ಟರಲ್ಲಿ ದೋಣಿ ಮುಳುಗುವಂತಾದಾಗ, ರಾಮ ರಾಮ ಎಂಬ ಕೂಗು ಕೇಳಿ, ಲಿಂಗ ಹಿಂದು ಮುಂದು ನೋಡದೇ ಹೊಳೆಗೆ ಹಾರಿಯೇ ಬಿಟ್ಟ. ಅವನು ಹಾರಿದ್ದು ಆ ಕಗ್ಗತ್ತಲಿನಲ್ಲಿ, ಆ ಗಾಳಿ-ಮಳೆ ಹೊಳೆಯ ಆರ್ಭಟದಲ್ಲಿ ಯಾರಿಗೂ ತಿಳಿಯಲಿಲ್ಲ. ದೋಣಿಯ ಭಾರ ಕಡಿಮೆಯಾಗಿ ಸರಾಗವಾಗಿ ಮುನ್ನಡೆಯುತ್ತಿತು. ಗೌಡನು ಮಾತ್ರ ಲಿಂಗನನ್ನು ಕುರಿತು "ಲಿಂಗಾ, ದೋಣಿ ಸ್ವಲ್ಪ ಸರಾಗವಾಗಿ ಹೋಗುತ್ತಿದೆಯೋ ಭಗವಂತನ ದಯೆಯಿಂದ" ಎಂದರು.[೩೫] ಲಿಂಗನ ದಯೆಯೂ ಜೊತೆಗೆ ಸೇರಿತ್ತೆಂದು ಅವರಾರಿಗೂ ತಿಳಿಯಲಿಲ್ಲ.

ಮೆಲ್ಲನೆ ದೋಣಿ ದಡಸೇರಿತು. ನುಗ್ಗೇನ ಹಳ್ಳಿಯ ರಾಮೇಗೌಡರು ಸಿದ್ದೇಗೌಡರು ಓಡಿ ಬಂದು ಹೆಂಗಸರು ಮಕ್ಕಳನ್ನೆಲ್ಲಾ ಎಚ್ಚರಿಕೆಯಿಂದ ದೋಣಿಯಿಂದ ಇಳಿಸಿದರು. ಆ ಆನಂದದ ಸಡಗರದಲ್ಲಿ ಎಲ್ಲರಿಗೂ ಜೀವ ಉಳಿದದ್ದೇ ಹೆಚ್ಚಾಗಿತ್ತು. ಆದ್ದರಿಂದ ಅವರಾರಿಗೂ ಲಿಂಗನ ನೆನಪಾಗಲಿಲ್ಲ. ಆದರೆ ನಾಗ ಮಾತ್ರ ಅಪ್ಪಾ ಎಂದು ಅಳುತ್ತಿದ್ದ. ಸುಬ್ಬಣ್ಣಗೌಡರ ಮುಖ ಬಿಳುಪೇರಿತು. 'ಲಿಂಗಾ' 'ಲಿಂಗಾ' ಎಂದು ಕರೆದರು. ಪ್ರತ್ಯುತ್ತರವಿಲ್ಲ. ದೋಣಿಯ ಬಳಿ ಓಡಿದರೂ, ಅಲ್ಲಿಯೂ ಇರಲಿಲ್ಲ. ಸುಬ್ಬಣ್ಣಗೌಡರು 'ನಮ್ಮ ಮನೆಯ ಒಂದು ಬೆಳಕೇ ಹೋಯಿತು'[೧೮] ಎಂದು ಗೋಳಿಟ್ಟರು. ಲಿಂಗ ಅನ್ನ ಕೊಟ್ಟ ಧಣಿಯ ಮನೆಯ ಬೆಳಕೇ ಆಗಿಬಿಟ್ಟಿದ್ದ. ಗೌಡರ ಮನೆಯಲ್ಲಿ ಲಿಂಗನಿಲ್ಲದೆ ಯಾವ ಕೆಲಸವೂ ಆಗುತ್ತಿರಲಿಲ್ಲ. ನಾಗ ಒಂದೇ ಸಮನೆ ಅಳುತ್ತಿದ್ದ. ಸುಬ್ಬಣ್ಣಗೌಡರ ಮಕ್ಕಳು ಅವನನ್ನು ಸಮಾಧಾನ ಪಡಿಸುತ್ತಿದ್ದರು. ಅಷ್ಟರಲ್ಲಾಗಲೇ ಲಿಂಗ ಹೇಗೂ ಜೀವ ಉಳಿಸಿಕೊಂಡು ನುಗ್ಗೇನ ಹಳ್ಳಿಯಲ್ಲಿ ಎಲ್ಲರ ಮುಂದೆ ಪ್ರತ್ಯಕ್ಷನಾದ. ಗೌಡರು ಲಿಂಗನನ್ನು ಏನು ಸಮಾಚಾರ ಎಂದಾಗ, ತಾನು ಮುಗ್ಗರಿಸಿ ಬಿದ್ದೆ. ನನ್ನ ಅದೃಷ್ಟ ಮತ್ತು ನಿಮ್ಮ ಅನ್ನದ ಋಣ ಇನ್ನೂ ನನ್ನ ಮೇಲಿದ್ದರಿಂದ ಬದುಕಿ ಬಂದೆ ಎಂದು ಸುಳ್ಳು ಹೇಳಿದ.

ಹೀಗೆ ಕುವೆಂಪುರವರು ಒಬ್ಬ ಸಾಮಾನ್ಯ ಬಡ ಕೆಲಸದವನು ತನ್ನ ಹಸಿವಿನ ಸಂದರ್ಭದಲ್ಲಿ ಅನ್ನಕೊಟ್ಟ ಧಣಿಯ ಅನ್ನದ ಋಣ ತೀರಿಸಲು ಸರಿಯಾದ ಸಮಯವೆಂದು ತಿಳಿದು ತನ್ನ ಮಗನಿಗೆ ತಂದೆ ಇಲ್ಲ ಎಂಬ ಕೊರಗಿಗಿಂತ ತನ್ನ ಯಜಮಾನರ ಕುಟುಂಬ ಉಳಿಯಬೇಕೆಂಬ ಹಂಬಲದಿಂದ ತನ್ನ ಪ್ರಾಣವನ್ನೇ ಅರ್ಪಿಸಲು ಮುಂದಾದದ್ದರಿಂದ ಲಿಂಗ ಯಾರಿಗೂ ಕಡಿಮೆಯಿಲ್ಲದ ವ್ಯಕ್ತಿ. ಅವನನ್ನು ವೀರ ಎಂದು ಶ್ಲಾಘಿಸುತ್ತಾರೆ. ನಮ್ಮ ನಡುವೆ ಕಣ್ಣಿಗೆ ಕಾಣದ ವೀರರು ಹಲವರಿದ್ದಾರೆ. ಅವರನ್ನು ಗುರುತಿಸಲು ಅಂತರಂಗದ ಕಣ್ಣು ತೆರೆಯಬೇಕಾಗಿದೆ ಎಂಬುದನ್ನು ಕುವೆಂಪು ಇಲ್ಲಿ ನಿರೂಪಿಸಿದ್ದಾರೆ.

ಬೆಸಗರಹಳ್ಳಿ ರಾಮಣ್ಣನವರ 'ಜೀತ'

'ಜೀತ' ಪದ್ಧತಿ ಎಂಬುದು ಮಂಡ್ಯ ಜಿಲ್ಲೆ ಮುಂತಾದೆಡೆ ಈಗಲೂ ರೂಢಿಯಲ್ಲಿರುವುದು ಸಮಾಜದ ಅಸಮಾನತೆಗೆ ಸಾಕ್ಷಿಯಾಗಿದೆ. ತಮ್ಮ ಮನೆತನದವರು ಎಂದೋ ಮಾಡಿದ ಸಾಲಕ್ಕೆ

ಪ್ರತಿಯಾಗಿ ಆ ಮನೆತನದ ವಾರಸುದಾರರು ತಮ್ಮದಲ್ಲದ ಆ ಸಾಲದ ಹೊರೆಯನ್ನು ಹೊತ್ತುಕೊಂಡು ಜಮೀನ್ದಾರರ ಮನೆಯ ಚಾಕರಿ ಮಾಡುತ್ತಾ ಬದುಕಿರೋದು. ಹಸಿವು-ಬಡತನದ ಕಾರಣದಿಂದ ಇದು ಬಿಟ್ಟು ಬೇರೆ ಮಾರ್ಗವಿರಲಿಲ್ಲ.

ಚಿಕ್ಕರಾಮ ದೇವೀರಯ್ಯನ ಮನೆಯ ಜೀತದಾಳು. ಈತ ದನಗಳನ್ನೆಲ್ಲಾ ಮೇಯಲು ಬಿಟ್ಟು, ಮಾವಿನ ಮರದಡಿ ಕೂತಿದ್ದ. ರಾತ್ರಿಯೆಲ್ಲಾ ನಿದ್ದೆ ಕೆಟ್ಟಿದ್ದುದರಿಂದ ಕಣ್ಣು ಉರಿಯತೊಡಗಿದ್ದವು. ಜೊತೆಗೆ ಬರುವಾಗ ಗಡದ್ದಾಗಿ ತಂಗಳುಂಡು ಬಂದಿದ್ದರಿಂದ ಮೈ ಭಾರವಾಗಿತ್ತು. ದನಗಳು ಸುತ್ತಮುತ್ತಲ ಗದ್ದೆಗೆ ಹೋದರೂ ಅಂಥ ಅನಾಹುತವೇನೂ ಆಗಲಾರದು. ಅಲ್ಲದೆ ಎಲ್ಲ ತಾನು ಜೀತಕ್ಕಿರುವ ಸಾಹುಕಾರ ದೇವೀರಯ್ಯನ ಭತ್ತ, ಕಬ್ಬಿನ ಗದ್ದೆಗಳು ಎಂಬ ಧೈರ್ಯದಿಂದಲೋ ಏನೋ ತನ್ನ ಚೌಕವನ್ನು ತಲೆದಿಂಬು ಮಾಡಿಕೊಂಡು ಮಲಗಿದ. ಬೆಳಗಾವುದಕ್ಕೆ ಮುಂಚೆಯೇ ಮೂವತ್ತು ಮಂಕರಿಯಷ್ಟು ಕಸಗುಡಿಸಿ, ಹೊತ್ತು ತಿಪ್ಪೆಗೆ ಹಾಕಿ, ಆಮೇಲೆ ಒಂದು ಚೀಲ ಹಸಿರು ಹುಲ್ಲನ್ನು ಕುಯ್ದು ಬಂದಿದ್ದುದರಿಂದ ಗಾಢವಾದ ನಿದ್ರೆ ಬಂತು.

ಒಮ್ಮೆಲೆ ನಾಲ್ಕಾರು ಚಾವಟಿಯ ಏಟು ಬಿದ್ದಂತಾಗಿ 'ಅಯ್ಯೋ' ಎಂದು ಚಿಕ್ಕರಾಮ ಕಿರುಚುತ್ತಾ ನಿಂತುಬಿಟ್ಟ. ಕಣ್ಣು ಬಿಟ್ಟು ನೋಡಿದರೆ ಸರ್ವೇಚಬ್ಬೆಯನ್ನು ಹಿಡಿದು ನಿಂತು "ಲೋ ಸೂಳೇಮಗನೇ ಇದ್ಕೆ ಏನ್ಲ ನಿಂಗೆ ವರ್ಷಕ್ಕೆ ಅರವತ್ತು ರೂಪಾಯಿಕೊಟ್ಟು, ಹಿಟ್ಟು, ಬಟ್ಟೆ ಕೊಟ್ಟು ಜೀತಕ್ಕೆ ಮಡಿಕೊಂಡಿರೋದು. ದನಗಳು ಕಬ್ಬಿನ ಗದ್ದೆಗೆ ನುಗ್ಗಿ ಎರಡು ಪಾತಿ ನುಣ್ಣಗೆ ಮೇಯ್ಕೊಂಡವಲ್ಲೋ"[೩೬] ಎಂದು ದೇವೀರಯ್ಯ ಕಾಲಿನ ಮೇಲೆ, ಮೈಮೆಲೆ ಬಾರಿಸತೊಡಗಿದರು. ಏಟು ಬಿದ್ದ ಕಡೆಯಲ್ಲೆಲ್ಲಾ ಬಾಸುಂಡೆ ನುಲಿದುಕೊಂಡು ಬರುತ್ತಿತ್ತು. ಏಟಿನ ಚುರುಕು ತಾಳಿಕೊಳ್ಳದೇ ಚಿಕ್ಕರಾಮ ಗದ್ದೆ ಬಯಲಿನ ಕಡೆ ಓಡಿಬಿಟ್ಟ. ದೇವೀರಯ್ಯನಿಗೆ ಹೊಟ್ಟೆಗೆ ಬೆಂಕಿ ಹಾಕಿದಂತಾಗಿತ್ತು. ತಮ್ಮ ದನಗಳಿಂದಲೇ ತಮ್ಮ ಕಬ್ಬಿನ ಗದ್ದೆಯನ್ನು ತಮ್ಮ ಆಳೇ ಮೇಯಿಸಿ ಲೂಟಿ ಮಾಡಿಸಿಬಿಟ್ಟನಲ್ಲಾ ಎಂದು ರೋಷಉಕ್ಕಿತು. ಅವರು ಚಿಕ್ಕರಾಮನನ್ನು ಬೆನ್ನಟ್ಟಿ ಓಡಿದರು. ದಢೂತಿ ಮೈಯ ದೇವೀರಯ್ಯ ಪಾತಿಯ ತೆವರಿಯ ಮೇಲೆ ಓಡುವಾಗ ಕುಸಿದು ಗದ್ದೆಯ ಬದಿಯಲ್ಲಿ ಉರುಳು ಸೇವೆ ಮಾಡಿದುದನ್ನು ಕಂಡು ನೋಡುತ್ತಿದ್ದ ಜನ ನಗುವನ್ನು ಒಳಗೇ ತಡೆದುಕೊಂಡರು. ಇನ್ನು ದೇವೀರಯ್ಯನ ಕೈಗೆ ಸಿಕ್ಕಿದರೆ ತನ್ನ ಹುಟ್ಟಿದ ದಿನ ಕಾಣಬೇಕಾಗುತ್ತದೆಂದುಕೊಂಡು ಚಿಕ್ಕರಾಮ ಪಕ್ಕದಲ್ಲಿದ್ದ ಕಬ್ಬಿನ ಗದ್ದೆಗೆ ನುಗ್ಗಿದ.

ಮೈಕೈಗೆ ಅಂಟಿದ್ದ ಕೆಸರನ್ನು ಒರೆಸಿಕೊಂಡು ದೇವೀರಯ್ಯ ಮೇಲೆದ್ದು "ಲೇ ಕಬ್ಬಿನಗದ್ದೆ ಹೊಕ್ಕುದ್ರೂ ನಿನ್ನ ಇವತ್ತು ಬಿಟ್ಟೇನೆ ಸೂಳೇ ಮಗನೇ, ನಿನ್ನಾ ಇವತ್ತು ಕೋದಂಡ ಎತ್ತದೇ ಹೋದ್ರೆ ನನ್ನ ಕುಲಕ್ಕೆ ಅವಮಾನ"[೩೭] ಎಂದು ಹಲ್ಲು ಕಚ್ಚಿದ. ಎಲ್ಲವನ್ನೂ ನೋಡುತ್ತಿದ್ದ ತನ್ನ ಜಮೀನಿನ ಗುತ್ತಿಗೆದಾರ ದಾಸಣ್ಣನಿಗೆ ಕಬ್ಬಿನ ಗದ್ದೆಯೊಳಕ್ಕೆ ಹೊಕ್ಕಿರುವ 'ಆ ನಾಯಿ ಬಡ್ಡೀಮಗನನ್ನ ಒದ್ದು ಎಳೆದುಕೊಂಡು ಬಾ' ಎಂದು ಆದೇಶಿಸಿದ. ಧಣಿಯನ್ನು ಸಂತೋಷಪಡಿಸಲು, ದಾಸಣ್ಣ ಇಂಥ ಪ್ರಸಂಗ ಬರಲಾರದು ಎಂಬಂತೆ ಹಿಂದು ಮುಂದು ಚಿಂತಿಸದೇ ಕಬ್ಬಿನಗದ್ದೆ ಕಡೆ ನುಗ್ಗಿದ.

ದಾಸಣ್ಣ 'ಲೋ ಚಿಕ್ಕರಾಮ ಒಳ್ಳೆ ಮಾತೇಲಿ ಬಾ ಆಚ್ಗೆ. ಇಲ್ದೆ ಹೋದ್ರೆ ಒದ್ದು ತೊಳ್ಳೆ ಒಡೆದು ಹಾಕ್ತೀನಿ. ಗದ್ದೆಗೆ ಬೆಂಕಿ ಹಾಕಿ ಜೀವ ಸಹಿತ ಸುಡ್ತೀನಿ'[೩೮] ಎಂದಾಗ ಚಿಕ್ಕರಾಮ ಜಗ್ಗಲಿಲ್ಲ. ದಾಸಣ್ಣ ಕಬ್ಬಿನ ಗದ್ದೆಯೊಳಕ್ಕೆ ನುಗ್ಗಿದ. ಚಿಕ್ಕರಾಮ ಯಾವ ಕಡೆಯಿಂದಲಾದರೂ ನುಗ್ಗಿ ತಪ್ಪಿಸಿಕೊಳ್ಳಲು ಪ್ರಯತ್ನ ಪಟ್ಟರೆ ಹಿಡಿದು ತದುಕಿ ಹಾಕಬೇಕೆಂದು ದೇವೀರಯ್ಯನು ಹಲ್ಲುಮುರಿ ಕಚ್ಚುತ್ತ ಮೈಯೆಲ್ಲಾ ಕಣ್ಣಾಗಿ ಕಾವಲು ನಿಂತ. ಇದನ್ನು ದೂರದಲ್ಲಿ ನಿಂತು ನೋಡುತ್ತಿದ್ದ ಪುಟ್ಟನಿಂಗ ಶಿವಲಿಂಗಣ್ಣನವರ ಮನೆಯಲ್ಲಿ ಜೀತಕ್ಕಿರುವ ಚಿಕ್ಕರಾಮನ ಅಣ್ಣ ಪುಟ್ಟಸ್ವಾಮಿಗೆ ವಿಷಯ ಮುಟ್ಟಿಸಿದ. ವಿಷಯ ಕೇಳಿ ಪುಟ್ಟಸ್ವಾಮಿಗೆ ಎದೆಗುಂಡಿಗೆ ಒಡೆದು ಹೋದಂತಾಯ್ತು. ಮಿಂಚಿನಂತೆ ಗದ್ದೆ ಬಯಲು ಕಡೆ ಓಡಿದ.

ಅಷ್ಟರಲ್ಲಿ ದಾಸಣ್ಣ ಕುರಿಯನ್ನೋ ದನವನ್ನೋ ಓಡಾಡಿಸಿ ಹಿಡಿಯುವಂತೆ ಚಿಕ್ಕರಾಮನನ್ನು ಹಿಡಿದು ಹೊರತಂದಿದ್ದ. ಚಿಕ್ಕರಾಮನ ಮೈಯೆಲ್ಲಾ ಕಬ್ಬಿನಗರಿಯ ಹೊಡತಕ್ಕೆ ಸಿಕ್ಕಿ ಗೀರಿ, ಮೈ, ಮುಖದಲ್ಲಿ ಅಲ್ಲಲ್ಲಿ ರಕ್ತ ಜಿನುಗುತ್ತಿತ್ತು. ದೇವೀರಯ್ಯ ಅವನ ಕತ್ತು ಅದುಮಿಕೊಂಡು ಬೆನ್ನು ಮೇಲೆ ಸರ್ವೇ ಚಬ್ಬೆಯಿಂದ ಬಾರಿಸುತ್ತಿದ್ದ. ಚಿಕ್ಕರಾಮ ಬಯಲು ಒಂದಾಗುವಂತೆ 'ಅಪ್ಪೋ, ಅಣ್ಣೋ ನನ್ನ ಬುಡಸರಪ್ಪೋ'[೩೯] ಎಂದು ಕಿರುಚುತ್ತಿದ್ದ. ಓಡಿ ಬಂದ ಪುಟ್ಸಾಮಿ "ನೀ ಮನ್ಸನೋ ದನವಯ್ಯೋ"[೪೦] ಎಂದು ದೇವೀರಯ್ಯನ ಕೈಯನ್ನು ಹಿಡಿದುಕೊಂಡ. ದೇವೀರಯ್ಯ ಪುಟ್ಸಾಮಿಗೆ 'ಕೈಬಿಡೋ ನೀಯಾವೊನೋ ಕೇಳೋಕೆ' ಎಂದಾಗ "ಪುಟ್ಸಾಮಿ ನಾನು ಅವರಣ್ಣ, ತಪ್ಪು ಮಾಡ್ದ ಅಂತ ಪ್ರಾಣ ತಗದೀಯಯ್ಯ?" "ಜೀತಕ್ಕೆ ಇರ್ಸುಕೋದು ಅಂದ್ರೆ ಕುಂಡ್ರಿಸಿ ಪೂಜೆ ಮಾಡೋಕೆನ್ನಲೆ?"[೪೧] ಎಂದ ದೇವೀರಯ್ಯನಿಗೆ, "ಜೀತಕ್ಕೆ ಅವನೆ ಅಂತ ಕೊಂದುಬುಡಯ್ಯ, ನಿನಗೆ ಮಕ್ಕಳಿಲ್ವೆ?" ಎಂದ ಪುಟ್ಸಾಮಿ. ಅಲ್ಲಿಗೆ ಪುಟ್ಸಾಮಿ ಜೀತಕ್ಕಿದ್ದ ಸಾಹುಕಾರ ಶಿವಲಿಂಗಣ್ಣನೂ ಬಂದುದನ್ನು ನೋಡಿ ದೇವೀರಯ್ಯನಿಗೆ ಮುಜುಗರವಾಯಿತು. ಶಿವಲಿಂಗಣ್ಣ ಅಣ್ಣ-ತಮ್ಮಂದಿರಿಬ್ಬರನ್ನೂ ಸಮಾಧಾನ ಮಾಡಿ ತನ್ನ ಜೊತೆ ಕರೆದುಕೊಂಡು ಹೋದ.

ರಾತ್ರಿ ಮನಸ್ಸಿಲ್ಲದ ಮನಸ್ಸಿನಿಂದ ಉಂಡು, ಪುಟ್ಸಾಮಿ ಮತ್ತು ಚಿಕ್ಕರಾಮ ದನದ ಮನೆಯಲ್ಲಿ ಮಲಗಲೆಂದು ಬಂದರು. ಎದೆಯಲ್ಲಿ ನೋವು-ದುಃಖಗಳೆರಡೂ ಹೆಪ್ಪುಗಟ್ಟಿದ್ದವು. ಮಲಗುವ ಜಾಗವನ್ನು ಗುಡಿಸಲು ಸಜ್ಜಾಗಿ ಚಾಪೆ ಹಾಸಿ, ಜಿಡ್ಡು ಹಿಡಿದ ಹಳೆಯ ತಲೆದಿಂಬನ್ನು ಕಂಬಳಿಯನ್ನು ಕೊಟ್ಟು ತಮ್ಮನಿಗೆ ಮಲಗಲು ತಿಳಿಸಿದ. ಪುಟ್ಸಾಮಿಗೆ ದನಗಳಿಂಗಿತಲೂ ಕಡೆಯಾಗಿ ತನ್ನ ತಮ್ಮನನ್ನು ಗದ್ದೆ ಬಯಲಲ್ಲಿ ಓಡಾಡಿಸಿಕೊಂಡು, ಕಬ್ಬಿನ ಗದ್ದೆ ಹೊಕ್ಕರೂ ಬಿಡದೆ, ಬೆದರಿಸಿ, ಬೈದು ಹೊರಗೆಳೆದು ಹೊಡೆದು ಹಂಗಿಸಿದುದನ್ನು ನೆನೆದು ಮನಸ್ಸಿಗೆ ಹೇಸಿಗೆಯಾಯಿತು."ಥೂ ಇಂತ ಅನಿಷ್ಟ ಬಾಳು ಬಾಳಬಾರದು. ಈ ಮನ್ಸನ ಜನ್ಮವೇ ಬ್ಯಾಡ, ತಿರ್ಗ ಹುಟ್ಟಿದರೆ ಮರವಾಗೋ, ಕಲ್ಲಾಗೋ, ಮೂಗಬಸವನಾಗೋ ಹುಟ್ಬೇಕು. ಈ ಮನ್ಸನ ಜನ್ಮ ಏಳೇಳು ಜನ್ಮಕ್ಕೂ ಬ್ಯಾಡ" ಎಂದುಕೊಂಡ.[೪೨]

ನೆಪಮಾತ್ರಕ್ಕೆ ಅವನು ಕುಳಿತಿದ್ದ. ಮನಸ್ಸೆಲ್ಲಾ ಇಪ್ಪತ್ತು ಮೈಲಿಗಳ ದೂರದಲ್ಲಿರುವ ಅವ್ವ-ಅಪ್ಪ, ಅಣ್ಣ, ತಮ್ಮ, ತಂಗಿಯರನ್ನು ನೆನೆದು ಅವರೊಡನೆ ಮೂಕಭಾಷೆಯಲ್ಲಿ ಸಂಭಾಷಿಸತೊಡಗಿತ್ತು. ಅವ್ವನೇನಾದರೂ ಚಿಕ್ಕರಾಮನನ್ನು ಈ ಸ್ಥಿತಿಯಲ್ಲಿ ನೋಡಿದರೆ, ಮಧ್ಯಾಹ್ನ ನೋಡಿದ್ದರೆ ಎದೆಕಚ್ಚಿಕೊಂಡು ಚಿಕ್ಕರಾಮನನ್ನು ಎದೆಗೆ ತಬ್ಬಿಕೊಂಡು ಭೂಮಿ-ಬಾನು

ಒಂದಾಗುವಂತೆ ಗೋಳೋ ಎಂದು ಅತ್ತು ಬಿಡುತ್ತಿದ್ದಳೆಂದುಕೊಂಡ. ಅವ್ವ ತಾವು ಜೀತಕ್ಕೆ ಹೊರಡುವ ಹಿಂದಿನ ದಿನ ಆಡಿದ ಮಾತುಗಳನ್ನು ನೆನಪಿಸಿಕೊಂಡ.

ಅವ್ವ ಅಪ್ಪನ ಹತ್ತಿರ, "ಈ ಹಾಳು ಜೀತಕ್ಕೆ ಮಕ್ಕಳನ್ನು ಇರಿಸೋದು ಬ್ಯಾಡಿ" ಎಂದಾಗ, ಅಪ್ಪ "ಹೋ! ನೀ ಬಾಳ ಕಂಡಿದ್ದಿಕನ. ಸುಮ್ಮನಿರು. ಹೊಟ್ಟೆಗೆ ತಣ್ಣೀರು ಬಟ್ಟೆ ಹಾಕಿ ಮಲಗಿಸೀಯ" ಎಂದ. "ನಾವು ಕುಡಿದ ಅಂಬಲಿಯೋ, ಗಂಜಿಯೋ, ತಿಂದ ತುಂಬೆ ಸೊಪ್ಪೋ ಅವೂ ತಿನ್ನಲಿ, ಈ ಹಾಳು 'ಜೀತ' ಮಾತ್ರ ಬ್ಯಾಡಿ" ಎಂದಳು.[೩೧] "ಅಂಬಲಿಯೋ ಗಂಜಿಯೋ ಸಿಕ್ಕಿದ್ರೆ ಸಾಕು. ಕುಡ್ಸಿ ಸಾಕೇನು. ಅದಾದ್ರು ಎಲ್ಲಿದ್ದಾತು ನಮ್ಮ ತಾವ. ಇರೋದು ಅರ್ಧ ಎಕ್ರೆ ಬರಡು ಹೊಲ. ಇನ್ನು ಸಾಲ ಬ್ಯಾರೆ" ಎಂದ ಅಪ್ಪ. ಅವ್ವನಿಗೆ ಮಾತ್ರ ಮಕ್ಕಳನ್ನು ಜೀತಕ್ಕೆ ಇರಿಸೋದು ಸಂಕಟ ತಂದಿತ್ತು. "ಈ ಜನ ಬಹಳ ಹಿಂದಿನಿಂದಲೂ ನಮ್ಮನ್ನು ಜೀತದ ಮನೆಯೋರ ವಂಶದೋರು ಅಂತ್ಲೇ ಕರ್ದುರ ರೂಢಿ. ಇನ್ನಾದ್ರೂ ಅದು ನಿಲ್ಲಲಿ" ಎಂದಿದ್ದಳು. ಅವ್ವನ ಮಾತಿಗೆ ಅಪ್ಪನೂ "ನನ್ನ ಮಕ್ಕಳನ್ನು ಜೀತಕ್ಕಿರಿಸೋದಕ್ಕೆ ಸಂಕಟವಿಲ್ಲ ಎಂದು ಭಾವಿಸಿದ್ಯಾ? ನನ್ನ ಎದೆ ಮೇಲೆ ರೋಣು ಹೊಡೆದಂತಾಯ್ತದೆ. ನಮ್ಮನ್ನು ಜೀತದವರು ಅಂತ ಅವರು ಇವರು ಕರೆಯೋವಾಗ" ನನಗೆ ದುಃಖ ಒದ್ದುಕೊಂಡು ಬರುವಾಗ ಹೆತ್ತೋಳ್ಗೆ ಅದು ಎಷ್ಟಿರಬೋದು ಅಂತ ನಾಕಾಣನೇ! ತಡ್ಕೊ ಎಂದು ಅಪ್ಪ ದೀಪದ ಬೆಳಕಿನಿಂದಲೇ ಕತ್ತಲೆ ಚೆಲ್ಲಿದ ಗೋಡೆಯ ಕಡೆ ತಿರುಗಿ ಕಣ್ಣೀರೊರೆಸಿಕೊಂಡಿದ್ದ. ಆಗ ಅವ್ವ ದುಃಖ ಉಕ್ಕಿಬಂದರೂ ತಡೆದುಕೊಂಡು 'ಏನೋ ಹೆತ್ತ ಹೊಟ್ಟೆ ಉರೀಗೆ ಬ್ಯಾಡ ಅಂದೆ, ನಿಮ್ಮಿಷ್ಟದಂಗೇ ಆಗಲಿ' ಎಂದು ತನ್ನ ಮಕ್ಕಳಿಗೆಲ್ಲಾ ಸರಿಯಾಗಿ ಹೊದಿಸಿ, ಬೆಳಗಾಗುತ್ತಲೇ ಜೀತಕ್ಕಿರಲು ಹೊರಟ ಮಕ್ಕಳನ್ನು ಮುದ್ದಿಸಿದ್ದಳು.

ಅಣ್ಣ ತನ್ನೂರಿನ ಸಾಹುಕಾರರ ಮನೆಯಲ್ಲಿ, ತಾನು ಶಿವಲಿಂಗಣ್ಣನ ಮನೆಯಲ್ಲಿ ತಮ್ಮ ದೇವೀರಯ್ಯನ ಮನೆ ಜೀತಕ್ಕಿರಬೇಕಾಯಿತು. ಪುನಃ ಎಚ್ಚೆತ್ತುಕೊಂಡ ಪುಟ್ಟಾಮಿಗೆ ತನ್ನ ತಂದೆ-ತಾಯಿ ಇಬ್ಬರೂ ಬಂದು ತಮ್ಮನ್ನು ಜೀತದಿಂದ ಮುಕ್ತಿಗಾಣಿಸಿ ಕರೆದೊಯ್ಯಲು ಬಂದಂತೆ ಭಾಸವಾಯಿತು. ಇನ್ನೂ ಈ ಜೀತಕ್ಕೆ ಮುಕ್ತಾಯ ಹೇಳಬೇಕು. ಅವ್ವ-ಅಪ್ಪ-ಅಣ್ಣಾ-ತಂಗಿಯರನ್ನು ನೋಡಬೇಕು ಇರುವ ಅರ್ಧ ಎಕರೆಯನ್ನು ರಟ್ಟೆಯ ಬಲ ಎಲ್ಲವನ್ನೂ ಬಿಟ್ಟು ಅಗೆದು ಹಸನು ಮಾಡಿ, ದುಡಿದು ಮಾನವಾಗಿ ಬದುಕಬೇಕು ಎಂದು ಮನಸ್ಸು ಘರ್ಜಿಸತೊಡಗಿತು. ಮೇಲೆದ್ದು, ತಮ್ಮನನ್ನು ಎಚ್ಚರಗೊಳಿಸಿದ. ತಮ್ಮನಿಗೆ ಕಂಬಳಿಯನ್ನು ಹೊದ್ದುಕೊಳ್ಳಲು ಹೇಳಿ ಕತ್ತಲೆಯಲ್ಲಿ ಬೀದಿಗಿಳಿದ. ಚಿಕ್ಕರಾಮ ಸದ್ದಿಲ್ಲದೆ ಅಣ್ಣನೊಡನೆ ಊರ ಬಾಗಿಲಲ್ಲಿರುವ ಭೈರವೇಶ್ವರ ಗುಡಿಯವರೆಗೆ ಬಂದು ಅಣ್ಣನಿಗೆ ಎಲ್ಲಿಗೆ ಹೋಗುವುದೆಂದು ಕೇಳಿದ? ನಮ್ಮೂರ್ಗೆ ಎಂದಾಗ, 'ಅಣ್ಣಾ ಮರೆತಿದ್ದೆ. ನೆನ್ನೆ ದಿನ ನಮ್ಮೂರಿಂದ ಈ ಕಡೆ ಕೆಲ್ಸ ಹುಡುಕ್ಕೊಂಡು ಬಂದಿದ್ದೋರು ಮೂರು ಕಾಸಿನ ಬೆಳೆಯೂ ಊರಕಡೆ ಕೈಬರದೇ ಇದ್ದುದಕ್ಕೆ ಕಂಗಾಲಾಗಿದ್ದಾರಂತೆ. ಅದಕ್ಕೆಂದೇ ಊರಿನ ಜನವೆಲ್ಲ ದನ, ಕರು, ಆಡು, ಕುರಿ ಬಂದಷ್ಟಕ್ಕೆ ಮಾರಿ ಕೆಲ್ಸ ಹುಡುಕ್ಕೊಂಡು ಹೋದ್ರು ನಾವು ಅದ್ಕೆ ಬಂದೆವು. ನಿಮ್ಮ ಅಪ್ಪ-ಅವ್ವ ಎಲ್ಲರೂ ಇನ್ನೂ ಐದಾರು ದಿವಸಕ್ಕೆ ನೀವಿರುವಲ್ಲಿಗೆ ಬರ್ತೀವಿ ಅಂತ ನಮ್ಮಿಬ್ಬರಿಗೂ ಹೇಳ್ಬಿಡಿ ಅಂತ ಹೇಳಿಕಳ್ಸಿದ್ದಾರಂತೆ' ಎಂದಿದ್ದ ಎಂದು ಚಿಕ್ಕರಾಮ ಮಾತು ನಿಲ್ಲಿಸಿದಾಗ, ಪುಟ್ಟಾಮಿ ಬೆಪ್ಪಾಗಿ ನಿಂತ. ಸುತ್ತಲಿದ್ದ ಕತ್ತಲೆ ಒಂದಾಗಿ ಅವನನ್ನು

ಅಪ್ಪಳಿಸಿದಂತಾಯಿತು. ಅಯ್ಯೋ ದೇವರೆ ಇನ್ನೇನಪ್ಪ ಗತಿ ಎಂದು ಹಣೆ ಹಣೆ ಚಚ್ಚಿಕೊಂಡಾಗ, ತಮ್ಮ ಚಿಕ್ಕರಾಮ ಅಣ್ಣನನ್ನು ಸಮಾಧಾನ ಪಡಿಸಲು ಪ್ರಯತ್ನಿಸಿದ.

ಜಾತಿಯನ್ನು ನಾವು ಬಿಟ್ಟರು, ಜಾತಿ ನಮ್ಮನ್ನು ಬಿಡದು. ಹಾಗೆಯೇ ಅದು ನಮ್ಮನ್ನು ಬದುಕಿರುವವರೆಗೂ ಹಿಂಬಾಲಿಸುವ ನೆರಳಂತೆ, ಜೀತದಿಂದ ಮುಕ್ತವಾಗಲೆತ್ನಿಸಿದರೂ ಇಡೀ ಕುಟುಂಬವೇ ಜೀತದ ಮುಷ್ಠಿಯೊಳಕ್ಕೆ ಸಿಲುಕಿಕೊಳ್ಳುವುದು ವಿಪರ್ಯಾಸವೇ ಸರಿ ಎಂದೋ, ಯಾರೋ ಮಾಡಿದ ಸಾಲಕ್ಕೆ, ಸಾಲ ಮಾಡಿದವರ ಮನೆತನ ಬಾಧ್ಯಸ್ಥರಾಗುವಂತೆ ಪುಟ್ಸಾಮಿ ಮತ್ತು ಚಿಕ್ಕರಾಮ ಬೇರೊಂದು ಊರಿನಲ್ಲಿ ಒಬ್ಬೊಬ್ಬ ಸಾಹುಕಾರರ ಮನೆಯಲ್ಲಿ ಜೀತಕ್ಕಿರಬೇಕಾಯಿತು. ಆಡುವ, ಓದುವ ವಯಸ್ಸಿನಲ್ಲಿ ವಂಚಿತರಾಗಿ ಬೆಳಿಗ್ಗೆಯಿಂದ ರಾತ್ರಿ ತನಕ ದಣಿವೆನ್ನದೇ ದುಡಿದು ತಂಗಳನ್ನವನ್ನೇ ಉಂಡು, ಪ್ರಾಣಿಗಳಂತೆ ದನದ ಕೊಟ್ಟಿಗೆಯಲ್ಲಿ ಕಾಲಕಳೆಯಬೇಕಾದುದು ಇಡೀ ಮಾನವ ಸಮಾಜವೇ ತಲೆತಗ್ಗಿಸುವಂತಹ ಹೀನ ವ್ಯವಸ್ಥೆ ಇದು.

ಯಾರೋ ಮಾಡಿದ ತಪ್ಪಿಗೆ ಇನ್ನಾರೋ ಶಿಕ್ಷೆ ಅನುಭವಿಸಬೇಕಾದುದು ನಿಜಕ್ಕೂ ಹೇಯವಾದುದು. ಅಂಬಲಿಯನ್ನೋ, ಗಂಜಿಯೋ, ತುಂಬೆ ಸೊಪ್ಪೋ ತಿಂದು ಬದುಕೋಣವೆಂದು ಕೊಂಡರೂ ಅದಕ್ಕೂ ಗತಿಯಿಲ್ಲದಿರುವಾಗ ಬದುಕುವುದಾದರೂ ಹೇಗೆ? ಅರ್ಧ ಎಕರೆ ಬರಡು ಹೊಲದಲ್ಲಿ ಬಿತ್ತುವುದಾದರೂ, ಬೆಳೆಯುದಾದರೂ ಏನ್ನನ್ನು? ಅದೂ ಅಲ್ಲದೇ ಹಿಂದೆ ಮಾಡಿದ ಸಾಲದ ಹೊರೆಯು ತಲೆಯ ಮೇಲಿರುವಾಗ ಊರಿನ ಸಾಹುಕಾರರು ನೆಮ್ಮದಿಯಿಂದ ಬದುಕಲು ಬಿಟ್ಟಾರೆಯೇ? ಬಡವರಿಗೆ ಬದುಕು ಭಾರ, ಹಾಗೆಯೇ ಹಸಿವೆಯಿಂದ ನರಳುವುದು ಇನ್ನು ಭಾರ. ಬಡವರ ಬವಣೆಯನ್ನು ಕೇಳುವುದಾದರೂ ಯಾರು? ಕಿವಿಯಿದ್ದು ಕಿವುಡಾಗಿರುವ, ಬಾಯಿಯಿದ್ದು ಮೂಗರಾಗಿರುವ, ಕಣ್ಣು ಇದ್ದು ಕುರುಡಾಗಿರುವ ಈ ಸಮಾಜಕ್ಕೆ ಬಡವರ ಕಷ್ಟ ಅರ್ಥವಾಗುವುದಾದರೂ ಹೇಗೆ? ಬಡವರ ಕಷ್ಟಕ್ಕೆ ಪ್ರಕೃತಿಯ ವಿಕೋಪವೂ ಕಾರಣವಾಗುವುದು ದುರಂತವೇ ' ಸರಿ. ಪ್ರಕೃತಿಯ ಮುನಿಸು, ಆರ್ಥಿಕ ಅಸಮಾನತೆಯ ಕಾರಣದಿಂದ ಬಡವರು ಮತ್ತಷ್ಟು ಕುಗ್ಗಿ ಹೋಗುತ್ತಾರೆ.

ಬಡವರ ಕಣ್ಣೀರನ್ನೊರಸಿ, ಅವರ ಬದುಕಿಗೆ ಭರವಸೆಯ ಬೆಳಕು ನೀಡುವವರು ಮುಂದೆ ಬರಬೇಕಾಗಿದೆ. ಅನಿವಾರ್ಯವಾಗಿ ಪುಟ್ಟಸ್ವಾಮಿ, ಆತನ ಅಣ್ಣ ಹಾಗೂ ತಮ್ಮ ಚಿಕ್ಕರಾಮ ಜೀತಕ್ಕೆ ಸೇರಿಕೊಳ್ಳಬೇಕಾಗುತ್ತದೆ. ಜೀತಕ್ಕಿಟ್ಟುಕೊಳ್ಳುವ ಸಾಹುಕಾರರಾಗಲಿ, ಜಮೀನ್ದಾರರಾಗಲಿ, ಜೀತಕ್ಕಿರುವವರು ತಮ್ಮ ಹಾಗೇ ಮನುಷ್ಯರೆಂದು ಭಾವಿಸದೇ ಹಣದ, ಅಧಿಕಾರದ, ಶ್ರೀಮಂತಿಕೆಯ ದರ್ಪದಿಂದ ಜೀತದವರನ್ನು ಶೋಷಣೆ ಮಾಡುತ್ತಲೇ ಖುಷಿಪಡುತ್ತಾರೆ. ತಮ್ಮೆಲ್ಲ ಸುಖಕ್ಕೆ ತಮ್ಮ ಕೆಲಸದಾಳುಗಳು ಕಾರಣ. ಅವರು ಚೆನ್ನಾಗಿದ್ದರೆ ನಾವು ಚೆನ್ನಾಗಿರಬಹುದೆಂಬ ವಿಶಾಲ ಭಾವನೆಯನ್ನಿಟ್ಟುಕೊಳ್ಳದೇ ಸ್ವಾರ್ಥದಿಂದ, ಆವೇಶದಿಂದ ಅಮಾನವೀಯವಾಗಿ ನಡೆದುಕೊಳ್ಳುತ್ತಾರೆ.

ಬಡತನದ ಬದುಕಿಗೆ ಬೇಸತ್ತೇ ಪುಟ್ಸಾಮಿ, ಜೀತದಂತಹ ಹೀನ ಬದುಕನ್ನು ಬದುಕಬಾರದು. ಜೀತದ ಬದುಕು ಅನಿಷ್ಟ ಬದುಕು. ಈ ಮನುಷ್ಯ ಜನ್ಮವೇ ಬೇಡ, ಪುನಃ ಹುಟ್ಟುವುದಾದರೆ ಮರವಾಗಿಯೋ, ಕಲ್ಲಾಗಿಯೋ, ಮೂಗಬಸವನಾಗಿ ಹುಟ್ಟಬೇಕು. ಈ ಮನುಷ್ಯ ಜನ್ಮ ಏಳೇಳು ಜನ್ಮಕ್ಕೂ ಬೇಡ ಎಂದು ಹೇಳಬೇಕಾದರೆ ಅವನ ಮನಸ್ಥಿತಿ ಏನಾಗಿದೆ

ಎಂಬುದನ್ನು ಸುಲಭವಾಗಿ ಅರ್ಥಮಾಡಿಕೊಳ್ಳಬಹುದು. ಮನುಷ್ಯ ಜನ್ಮ ಇತರೆ ಎಲ್ಲಾ ವಸ್ತು, ಪ್ರಾಣಿ, ಪಕ್ಷಿ, ಗಿಡ ಮರಗಳಿಂಗಿತಲೂ ಕ್ರೂರವಾದುದು ಹಾಗೂ ಕಷ್ಟಕರವಾದುದು ಎಂಬುದೇ ಆತನ ಅಭಿಮತ.

ಹೀಗೆ ಹಸಿದವರ, ದುಃಖಿತರಾದ ಬಡವರ ಕೋಪಕ್ಕೆ ಬೆಲೆಯಾದರೂ ಎಲ್ಲಿದೆ? 'ಬಡವರ ಕೋಪ ದವಡೆಗೆ ಮೂಲ' – ಎಂಬ ಮಾತಿನಂತೆ ಬಡವನ ಕೋಪ ಬಡವನ ದುಃಖಕ್ಕೆ ಮೂಲವಾಗುತ್ತದೆ. ಹಸಿದರೂ ಅವನೇ ಅನುಭವಿಸಬೇಕು, ಕೋಪಗೊಂಡರೂ ಅದರ ಪರಿಣಾಮವನ್ನು ಅವನೇ ಎದುರಿಸಬೇಕು. ಹಸಿವು ಮತ್ತು ಬಡತನ ಬಡಜನತೆಗೆ ಶಾಪವಾಗಿ ಬಿಟ್ಟಿದೆ. ಈ ಸಮಾಜದಲ್ಲಿ ಅನ್ನದ ಬೆಲೆಯನ್ನು ತಿಳಿಯದವರಿಗೆ ಹೆಚ್ಚು ಅನ್ನ. ಅನ್ನದ ಬೆಲೆ ತಿಳಿದವರಿಗೆ ಅನ್ನವೇ ಇಲ್ಲದಿರುವುದು ದುರಂತವೇ ಸರಿ. ಹೊಟ್ಟೆಗಿಲ್ಲದೆ ಎಲುಬಿನ ಹಂದರಗಳಾಗಿರುವ ಬಡಜನತೆಗೆ ಹೊಟ್ಟೆ ತುಂಬುವಷ್ಟು ಅನ್ನ ಸಿಗುವಂತಾಗಬೇಕು.

ಪ್ರತಿ ಕಥೆಯಲ್ಲೂ ಹಸಿವಿನಿಂದ ನೊಂದ ಬಡವರ ಗೋಳಿನ ಪ್ರಶ್ನೆಗಳು ಕಥೆಯ ರಚನೆಯ ಆಚೆಗೆ ವಿಸ್ತರಿಸಿ ಓದುಗರನ್ನು ಗಂಭೀರ ಚಿಂತನೆಗೆ ಹಚ್ಚುವಂತಿವೆ. ಜೀವನದುದ್ದಕ್ಕೂ ನೋವು ತಿಂದು ನಲಿವನ್ನು ನೋವಿನಂತೆ ಕಾಣುವಂತಾದವರು ಶಿಕ್ಷಣ ಸ್ವಾವಲಂಬನೆಗೆ ದೊರೆತ ಶಕ್ತಿ ಎಂಬುದನ್ನು ಮರೆಯಬಾರದು. ಹಾಗೆಯೇ ಧನಿಕರು ಕೂಡ ಪರರ ಹಿತಕ್ಕಾಗಿ ಶ್ರಮಿಸುವುದೇ ಜೀವನವೆಂದು ಭಾವಿಸಿ ಬಡವರ ಹಸಿವೆಗೆ ಅನ್ನನೀಡುವುದರಿಂದ ಜೀವನ ಸಾರ್ಥಕವಾಗುವುದು. ಏಕೆಂದರೆ ಬಡವರ ಹಸಿವೆಂಬುದು ತೀರಾ ಭಯಾನಕವಾದ್ದು.

ಕುಂ. ವೀರಭದ್ರಪ್ಪನವರ 'ದೇವರ ಹೆಣ'

ಪ್ರಕೃತಿ ವಿಕೋಪದಿಂದ ಮನುಷ್ಯ ಹಸಿವಿನ ನೋವಿನಿಂದ ಬಳಲುವ ಪರಿ ನಿಜಕ್ಕೂ ಮನ ಕಲಕುವಂಥದ್ದು. ಕುಂ.ವೀರಭದ್ರಪ್ಪನವರ ದೇವರ ಹೆಣ ಕತೆಯ ನಾಯಕ ಠೊಣ್ಣಿ ಮತ್ತು ಆತನ ಕುಟುಂಬ ಬರಗಾಲದ ಸುಳಿಗೆ ಸಿಕ್ಕು ನಲುಗಿದ ರೀತಿಯನ್ನು ಗಮನಿಸಿದರೆ ಬರಗಾಲದ ಕರಾಳ ಮುಖದ ಪರಿಚಯವಾಗುತ್ತದೆ. ಒಂದು ಹನಿ ಮಳೆ ಕಾಣದೇ ಇಡೀ ಭೂಮಿ ಬರಡಾಗಿ ಬಿಸಿಲ ಝಳದಿಂದ ಬಣಗುಡುತ್ತಿತ್ತು. ಠೊಣ್ಣಿಗೆ ಅನ್ನ ಎಂಬ ಶಬ್ದ ಕೇಳಿದರೆ ಸಾಕು ಅಚ್ಚರಿಯಾಗುತ್ತಿತ್ತು. ಅನ್ನವನ್ನು ಕಾಣದೇ ಅದೆಷ್ಟೋ ದಿನಗಳಾಗಿ ಹೋಗಿತ್ತು. ಹೊಟ್ಟೆಗೆ ಅನ್ನವಿಲ್ಲದೆ ದೇಹ ಸಣಕಲಾಗಿ ಹೋಗಿತ್ತು. ಹೆಂಡತಿ ಬಡತನದ ಬೇಗೆಗೆ ಹೊಂದಿಕೊಂಡಿದ್ದಳು. ಹಸಿವೆಯಿಂದ ಬಳಲುವುದು ಆಕೆಗೆ ಹೊಸದೇನಾಗಿರಲಿಲ್ಲ. ಠೊಣ್ಣಿಯ ಹಿರಿಯ ಮಗ ಕೊಕ್ಕ ತಿನ್ನಲು ಅನ್ನವಿಲ್ಲದೇ ಇಲಿಯನ್ನೇ ಸುಟ್ಟು ತಿಂದು ಹಸಿವನ್ನು ನೀಗಿಸಿಕೊಳ್ಳುವ ಪ್ರಯತ್ನ ಮಾಡಿದ್ದ. ಉಳಿದ ಮಕ್ಕಳಾದ ಅಪಾರಿ, ತಿಮ್ಮಿ, ಕುಲ್ಡಿ ವಾಸ್ತವದಲ್ಲಿ ತಿನ್ನಲು ಏನಿಲ್ಲದಿದ್ದರೂ ಊಟ ಮಾಡುವ ಆಟ ಆಡುತ್ತಿದ್ದರು. ಠೊಣ್ಣಿ ಮಾತ್ರ ಎಕ್ಕೆ ಗಿಡದ ಎಲೆಯಿಂದಲೇ ತನ್ನ ಹಸಿವೆಯನ್ನು ನೀಗಿಸಿಕೊಳ್ಳುವ ಸಲುವಾಗಿ ಎಲೆಯನ್ನು ಹುಡುಕಾಡಿದ. ಎಲೆ ಸಿಕ್ಕಕೂಡಲೇ ಅದನ್ನು ಸುರುಳಿಯಾಗಿ ಸುತ್ತಿ ಅದಕ್ಕೆ ಹೊಗೆಸೊಪ್ಪು ತುಂಬಿಸಿ ದಾರಿಯಲ್ಲಿ ಹೋಗುವವರಿಂದ ಬೆಂಕಿಪೊಟ್ಟಣವನ್ನು ಪಡೆದು ಬೆಂಕಿ ಹೊತ್ತಿಸಿಕೊಂಡು ಧಮ್ಮಿನ ಮೇಲೆ ಧಮ್ಮೆಳೆದ .ಇದ್ದಕ್ಕಿದ್ದಂತೆ ಮನಸ್ಸಿನಲ್ಲಿ ಆಲೋಚನೆಯೊಂದು ಹೊಳೆಯಿತು. ಕಳೆದ ತಿಂಗಳಿಂದ ರೋಗದಿಂದ ಮಲಗಿರುವ ಗೌಡರ ಮನೆಯ ಎತ್ತು ಗುಣವಾಗದ ರೋಗದಿಂದ

ಜಿದ್ದುಕೊಂಡಿರುವುದಕ್ಕೆ ತನ್ನ ಮನೆಯ ದೇವರಾದ ಉರುಕುಂದಿ ಈರಣ್ಣನ ಕರುಣೆಯೇ ಕಾರಣವೆಂದುಕೊಂಡ.

ಗೌಡರ ಮನೆಯ ಎತ್ತು ಸತ್ತರೆ ಅದರ ವಾರಸುದಾರ ಮಾದಿಗನಾದ ತಾನೇ ಎಂದುಕೊಂಡ, ಸತ್ತ ಎತ್ತನ್ನು ಹೊತ್ತೊಯ್ದು ಕೊಯ್ಯುವುದು,ಅದರ ತೊಗಲು ಮಾರಿ ತನ್ನ ಮನೆಯ ಸ್ಥಿತಿಗತಿ ಸುಧಾರಿಸಿಕೊಳ್ಳಬೇಕೆಂದು ಕಟುಗರ ದಯಾನಂದಪ್ಪನ ಬಳಿಗೋಡಿದ. ತೊಗಲಿನ ರೇಟು ಎಷ್ಟಿದೆಯೆಂದು ಕೇಳಿದ. ಎತ್ತಿನದೊ ಎಮ್ಮೆಯದೊ ಎಂದ ಕಟುಗರವನಿಗೆ, ಎತ್ತಿನದೆಂದು ತಿಳಿಸಿದ. ಹಾಗಾದರೆ ತೆಗೆದುಕೊಂಡು ಬರಲು ಠೊಣ್ಣಿಗೆ ಕಟುಗರವನು ತಿಳಿಸಿದ. ಹೇಗೂ ತೊಗಲು ಬರುವುದು ಗ್ಯಾರಂಟಿ ಎಂದು ಭಾವಿಸಿ ಮುಂಗಡ ಯಾಕೆ ಒಂದೈದು ಇಸಗಬಾರದೆಂದು ಪಿಲಾನು ಮಾಡಿದ ಠೊಣ್ಣಿ ಒಂದೈದು ಅಡುವಾನ್ಸ್ ಕೊಡಪ್ಪೊ ಜ್ವಾಳ ತಕ್ಕೋಬೇಕಿತ್ತು ಅಂತಾ ಕೇಳಿಯೇ ಬಿಟ್ಟ. ಅದಕ್ಕೆ ಕಟುಗರ ದಯಾನಂದ ಓಗ್ ಓಗಲೇ ಮೊದ್ಲು ಎಡಗೈಯಾಗೆ ತೊಗ್ಲಿಡು, ಬಲಗೈಯಾಗೆ ರೊಕ್ಕ ಎಣಿಸ್ತ್ಯಾ ಅಂದು ಬಿಟ್ಟ. ಅದು ಸರಿ ಎಂದು ಹೊರಟ ಠೊಣ್ಣಿಗೆ ತಾನು ಗೌಡರ ಮನಿಯಾಗ ನೂರಾರು ಸೇವೆ ಮಾಡಿರುವುದರಿಂದ ತನಗೆ ಗೌಡರು ಯೋಗ ಕ್ಷೇಮ ವಿಚಾರಿಸಿ ಎತ್ತನ್ನೊಯ್ಯಲು ಅಪ್ಪಣೆ ಕೊಡಬಹುದೆಂದುಕೊಂಡು ಅವರ ಅಂಗಳದ ಬಳಿ ಬಂದ. ಎತ್ತು ಸತ್ತರೆ ತನ್ನ ಮನೆಯ ದಾರಿದ್ರ್ಯ ನಾಶವಾಗುವುದೆಂಬ ಆಸೆಯಿಂದ ಬಾಯಿಯ ಜೊಲ್ಲನ್ನು ಕುಡಿಯುತ್ತಾ ನಿಂತ.

ಗೌಡರು ಮನೆಯಿಂದ ಹೊರಬಂದಾಗ, ದೇವ್ರ ಆರೋಗ್ಯ ಹೆಂಗೈತೆ ಧಣಿ ಎಂದು ಕೇಳಿದ ಠೊಣ್ಣಿಗೆ ಗೌಡರು ಇನ್ನೆಲ್ಲೈತಿ, ಸಿವ್ನ ಪಾದ ಸೇರಿಬಿಡ್ತು ನಿನ್ನ ದೇವ್ರು ಎಂದಾಗ ಠೊಣ್ಣಿಗೆ ಒಳಗೊಳಗೆ ನಗು ಬಂತು. ಸ್ವಲ್ಪ ಸಮಯದ ನಂತರ ತುಂಬಿದ ಮನೆಯಾಗೆ ದೇವ್ರ ಹೆಣ ಬಾಳ ಹೊತ್ತಿರೋದು ಬೇಷಿ ಕಾಣವಲ್ದು. ಅಪ್ಪಣೆ ಕೊಡ್ರಿ ಧಣಿ-ಒಯ್ದು ಬಿಡ್ತೀನಿ ಎಂದ ಠೊಣ್ಣಿಯ ಮಾತಿಗೆ ಕೋಪಿಸಿಕೊಂಡ ಗೌಡರು ನಿಂಗೆ ಕೊಡೋಕೆ ಸತ್ತಿರೋದು ಅಗಸ್ರ ಕತ್ತಿ ಅಲ್ಲಲೇ, ಮನೆಯ ಎತ್ತು ಎಂದು ಬಿಟ್ರು ಅವರ ಮಾತಿಂದ ಠೊಣ್ಣಿಯ ಮೈ ತಣ್ಣಗಾಗಿ ನಂತರ ಬಿಸಿಯಾಯಿತು. ಇಂಥ ಮಾತಂದ್ರೆ ಎಂಗ್ರಿ ಧಣಿ , ನಾವು ಹೆಣ ತಿಂದು ಬದುಕೋ ಮಂದಿ..ದ್ಯಾವ್ರ ಹೆಣ ಕೊಡ್ರಿ, ಕೊಯ್ದು ತಿಂದು ಬದುಕಂತೀವಿ" ಎಂದಾಗ ಗೌಡರು ಜೋರಾಗಿ ಗದರಿದಾಗ ಠೊಣ್ಣಿ ಜಾಗ ಕಾಲಿ ಮಾಡಿದ. ಮನೆಗೆ ಬಂದ ಠೊಣ್ಣಿಯನ್ನು ಹೆಂಡ್ತಿ ಎತ್ತು ಸತ್ತೈತಂತೆ ಓಗಿದ್ಯಾ" ಎಂದು ಪ್ರಶ್ನಿಸಿದಳು.

ಠೊಣ್ಣಿಗೆ ಏನುಮಾಡಬೇಕೆಂದು ತೋಚದೆ ಸತ್ತಿರೊ ಎತ್ತು ಕೊಡಿಸ್ರೆಪ್ಪೊ ಆ ಎತ್ತು ತಿನ್ನೋದು ನನ್ನ ಅಕ್ಕೈತ್ರೆಪ್ಪೊ ಎಂದು ಕೇರಿಯ ಮುಂದೆ ನಿಂತು ನಿವೇದಿಸಿಕೊಂಡ. ಯಾರೂ ನೆರವಿಗೆ ಬರಲಿಲ್ಲ. ಗೌಡರಮನೆಯಲ್ಲಿ ಎತ್ತಿನ ಪೂಜೆ ನಡೆಯುತ್ತಿರುವ ಸುದ್ದಿ ತಿಳಿದ ಮೇಲಂತೂ ಒದ್ದಾಡಿದ. ಮನೆಯಿಂದ ಓಡಿದ ಸಾರಾಯಿ ಅಂಗಡಿ ಬಳಿ ಬಂದು ಕಾಡಿ ಬೇಡಿ ದುಕ್ಕಮರಿಬೇಕ್ರಪ್ಪೋ ಎಂದು ಸಾರಾಯಿ ಕುಡಿದ.ತೂರಾಡುತ್ತಾ ಗೌಡರ ಮನೆ ಹತ್ತಿರ ಬಂದ ಠೊಣ್ಣಿ ದೇವ್ರ ಹೆಣವನ್ನು ಅವುಚಿಕೊಳ್ಳಲು ಹೋದ. ಗೌಡರ ಆಳುಗಳು ಅವನ ಮೇಲೆ ಮುಗಿಬಿದ್ರು, ಅಲ್ಲಿಂದ ಹೇಗೂ ಮನೆಗೆ ಬಂದು ಹೆಂಡ್ತಿ ಕೈಯಿಂದ ಕಾವು ಕೊಡೀಸ್ಗಂಡ. ಅವತ್ತೆಲ್ಲಾಅವನ ಜೀವಕ್ಕೆ ಸಮಾಧಾನವೇ ಇಲ್ಲ.ಹೊಟ್ಟೇ ಸೇರಬೇಕಾದ ಎತ್ತು ಮಣ್ಣು

ಪಾಲಾಯಿತಲ್ಲಾ ಎಂಬ ರೋಷಕ್ಕಿಂತಲೂ ಮಿಗಿಲಾಗಿ ಹೊಟ್ಟೆಯಲ್ಲಿ ಕಾಣಿಸಿಕೊಂಡಿತ್ತು ಹಸಿವೆ ಎಂಬ ಹಸಿವು.

ಸಂಜೆ ವರೆಗೂ ಸುಮ್ಮನಿದ್ದ. ನಂತರ ತುಕ್ಕು ಹಿಡಿದು ಮೂಲೆ ಸೇರಿದ್ದ ಮಚ್ಚು ಮಸೆದು ಮಸೆದು ಮುಖ ನೋಡಿಕೊಂಡ, ಸಲಿಕೆ,ಪುಟ್ಟಿ ತಗೊಂಡು ಮುನ್ನಡೆದ, ಸ್ವಲ್ಪ ಸಮಯದಲ್ಲೇ ದೇವರ ಹೆಣ ಮಣ್ಣು ಮಾಡಿದ ಜಾಗವನ್ನು ಗುದ್ದನ್ನು ನೋಡಿ ಕಂಡು ಹಿಡಿದ, ಮಣ್ಣನ್ನೆಲ್ಲಾ ಮೇಲೆ ಎಳೆದು, ದೇವರ ಹೆಣ ತಲುಪಿದ. ದೇವರ ಹಣದ ಮೂಲೆ ಮೂಲೆಯನ್ನು ಮೂಸಿ ನೋಡಿ ಖುಷಿಯಾದ, ಚಕ ಚಕಾಂತ ದೇವರ ಹೆಣವನ್ನು ಕೊಯ್ದು ಕಣ್ಣೆ ಕಣ್ಣೆ ಮಾಂಸವನ್ನು ಪುಟ್ಟಿಗೆ ತುಂಬಿದ, ಹಸಿ ತೊಗಲನ್ನು ಮಡಚಿಟ್ಟುಕೊಂಡ. ಮನೆಕಡೆ ಹೆಜ್ಜೆ ಹಾಕಿದ.

ಮಾರನೆಯ ದಿನ ಕೋಳಿ ಕೂಗದಿದ್ರೂ ಬೆಳಕು ಹರಿಯಿತು, ರೊಣ್ಣೆ ಪತ್ನಿ ಮಕ್ಕಳೊಂದಿಗೆ ಕೂಡಿಕೊಂಡು ಖುಷಿಯಿಂದ ಮಾಂಸದಡುಗೆ ಮಾಡುವ ತಯಾರಿ ಸುರುವು ಮಾಡಿದಳು. ರೊಣ್ಣೆ ತೊಗಲು ಹದ ಮಾಡಿ ಅದನ್ನು ಕಟುಗರ ದಯಾನಂದಪ್ಪನ ಬಳಿಗೆ ತಂದನು. ಅದನ್ನು ನೋಡಿ ದಯಾನಂದಪ್ಪನಿಗೆ ರೊಣ್ಣೆಯ ಧಿಮಾಕು ಮುರಿಯಬೇಕೆಂದುಕೊಂಡು,ರೊಕ್ಕ ಇಸ್ಗಂಡುಬರ್ತೀನಿ ಇಲ್ಲೇ ಇರು ಎಂದು ಹೇಳಿ ಗೌಡರ ಮನೆಗೆ ಹೋಗಿ ಎಲ್ಲಾ ವಿಚಾರವನ್ನು ವಿವರವಾಗಿ ವಿವರಿಸಿದ. ಗೌಡ್ರು ವಿಷಯ ತಿಳಿದು ಕೆಂಡಾಮಂಡಲರಾದರು. ಇವತ್ತು ಎತ್ತಿನ ಹೆಣಾ ಕಿತ್ಗಂಡ್ ತಿಂದ್ರು, ನಾಳೆ ನಮ್ಮೆಣಾನ ಅದೆಂಗೆಬಿಟ್ಟಾರು ಎಂದುಕೊಂಡು ಮಗನ ನೇತೃತ್ವದಲ್ಲಿ ಒಬ್ಬ ಆಳನ್ನು ಕಳಿಸಿ ರೊಣ್ಣೆಯನ್ನು ಎಳೆದು ತಂದ್ರು. ಗೌಡ್ರು ರೊಣ್ಣೆಯನು ್ನಕುರಿತು ಎತ್ತು ಮುಟ್ಟೋವಷ್ಟು ತಾಕತ್ತು ಐತೇನ್ಲೇ ಮೈಯಾಗೆ? ಎಂದಾಗ, ರೊಣ್ಣೆ ಐತಪ್ಪಾ ಐತೆ, ಅಸಗಂಡೂ ಅಸಗಂಡೂ, ಏನ್ನಿಲ್ಲಿ ಏನ್ಬಿಡ್ಲಿ ಅನ್ನಂಗಾಗೈತಿ ಅಂದನು. ಗೌಡರು ಕೋಪದಿಂದ ಕುದ್ದರು, ಅವನ್ನು ಒದ್ದು ಮಗ್ಗಲು ಮುರಿಯಬೇಕೆಂದರೂ ಯಾರೂ ಆ ಸಾಹಸ ಮಾಡಲಿಲ್ಲ, ಏಕೆಂದರೆ ರೊಣ್ಣೆ ಉಫ್ ಎಂದರೆ ದೂರ ಹಾರಿ ಹೋಗಿಬೀಳುವ ತರಗೆಲೆಯಂತಿದ್ದ. ರೊಣ್ಣೆಯ ಹೆಂಡತಿ ಮಕ್ಕಳು ವಿಷಯ ತಿಳಿದು ರೊಯ್ಯನೆ ಬಂದು ರೊಣ್ಣೆಯನ್ನು ಸೇರಿಕೊಂಡು ಅಳತೊಡಗಿದರು

ಗೌಡರು ರೊಣ್ಣೆಯನ್ನು ಪೋಲಿಸರಿಗೆ ಒಪ್ಪಿಸುವುದೆಂದು ತೀರ್ಮಾನಿಸಿ ಪೋಲಿಸರನ್ನು ಕರೆಸಿದರು. ಸಬ್ ಇನ್ಸಪೆಕ್ಟರ್ ರೊಣ್ಣೆಗೆ ಇಂಥಾ ಕೆಲ್ಸನಾ ಮಾಡೋದು- ನಿಂಗೆ ಆರ್ತಿಂಗಳು ಜೇಲಿಗ್ಹಾಕಿ ಬುದ್ದಿ ಕಲಿಸ್ತೀನಿ ಎಂದಾಗ, ರೊಣ್ಣೆ ಆರ್ತಿಂಗ್ಳ್ಯಾಕೆ ಒಂದ್ವರ್ಸ ಆಕಿ ಬಿಡ್ರೀ, ಎಪ್ಪಾ ಹಸಿಗ್ಕೆಂಡು ಇಲ್ಲಿ ಸಾಯಾಕಿಂತಾ ಜೇಲಾಗಿರೋದೆ ಏಷ್ಟೋವಾಸಿ, ನಿಮ್ಮ ಕಾಲಿಗೆಬಿದ್ದು ಬೇಡ್ಕಂತೀನಿ   ಬೇಕಾರೆ ಎಂದಾಗ ಇನ್ಸಪೆಕ್ಟರ್ ಹೌಹಾರಿದ ಈ ಸಾರಿ ಕ್ಷಮಿಸಿ ಬಿಡ್ತೀನಿ, ಇನ್ನೊಂದ್ಸಾರಿ ಬಾಲ ಬಿಚ್ಚಿದ್ರೇ ಎಂದು ಹೇಳುತ್ತಿದ್ದಂತೆ, ರೊಣ್ಣೆ ಅದ್ಹೆಂಗೆ ಬಿಟ್ ಓಗ್ತೀರೊ ನೋಡೇ ಬಿಡ್ತೀನಿ ಎಂದ. ಇನ್ಸಪೆಕ್ಟರ್ ಅಲ್ಲಿಂದ ಹೊರಟುಬಿಡಲು ನಿರ್ಧರಿಸಿದ. ಪೋಲಿಸ್ ಜೀಪು ಧೂಳೆಬ್ಬಿಸುತ್ತಾ ಕಣ್ಮರೆಯಾಗಲು, ರೊಣ್ಣೆ ಬರ್ತೀನ್ರೋ, ಬರ್ತೀನ್ರೋ ಅಂತಾ ಕೂಗುತ್ತಾ ಹಿಂಬಾಲಿಸಿದ.

ಹಸಿದೂ ಹಸಿದೂ ಕಂಗಲಾಗಿದ್ದ ರೊಣ್ಣೆ ಮತ್ತು ಆತನ ಕುಟುಂಬಕ್ಕೆ ಗೌಡರ ಮನೆ ಎತ್ತು ಸತ್ತು ನವಚೈತನ್ಯವನ್ನು ತಂದಿತ್ತು. ಮಾದಿಗನಾದ ತನಗೆ ಎತ್ತನ್ನು ಕೊಯ್ದು ತಿಂದು, ಅದರ

ತೊಗಲನ್ನು ಮಾರಿ ಮನೆ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಬೇಕೆಂಬ ಇಚ್ಛೆ ಇದ್ದರೂ ಅದಕ್ಕೆ ಗೌಡರು ಅವಕಾಶ ಮಾಡಿಕೊಟ್ಟರಲಿಲ್ಲ.ಹೊಟ್ಟೆಯ ತೀವ್ರ ಹಸಿವಿನ ನಡುವೆ ಯಾವುದನ್ನೂ ಲೆಕ್ಕಿಸದೇ ಅನಾವೃಷ್ಟಿಯ ಕಾರಣದಿಂದ ಮೊದಲೇ ನಲುಗಿ ಹೋಗಿದ್ದ ಠೊಣ್ಣಿ ಸಮಾಧಿಯನ್ನೇ ಅಗೆದು ದೇವರ ಹೆಣವನ್ನು ಕೊಯ್ದು ಅದರ ಮಾಂಸವನ್ನು ತಿಂದು ಬಹುದಿನಗಳ ತನ್ನ ಹಾಗೂ ಕುಟುಂಬದ ಹಸಿವನ್ನು ನೀಗಿಸಿಕೊಳ್ಳಲು ಪ್ರಯತ್ನಿಸಿದರೂ ಅದು ಸಾಧ್ಯವಾಗುವುದಿಲ್ಲ. ಪ್ರಕೃತಿ ಮುನಿಸಿಕೊಂಡಂತೆ, ಧನಿಕರೂ ಶತ್ರುಗಳಾಗಿ ಬಿಡುತ್ತಾರೆ. ಕೊನೆಯಲ್ಲಿ ಹಳ್ಳಿಗಿಂತ ಜೈಲೇವಾಸಿ ಎಂದುಕೊಂಡರೂ ಅದಕ್ಕೂ ಅವಕಾಶವಾಗುವುದಿಲ್ಲ. ಹಸಿವಿನ ತೀವ್ರತೆ, ಹಸಿವಿನ ತಲ್ಲಣ, ಹಸಿವನ್ನು ನೀಗಿಸಿಕೊಳ್ಳಲು ಕೆಳವರ್ಗ ತೆಗೆದುಕೊಳ್ಳುವ ಕ್ರಮ ನಿಜಕ್ಕೂ ಮನ ಕಲಕುವಂಥದ್ದು.

ಹೀಗೆ ಪ್ರಾತಿನಿಧಿಕ ಕನ್ನಡ ಸಣ್ಣ ಕಥೆಗಳ ಮೂಲಕ ಹಸಿವಿನ ವಿವಿಧ ಮುಖಗಳನ್ನು ಅನಾವರಣಗೊಳಿಸಲಾಗಿದೆ. ಹಸಿವು ಮನುಷ್ಯನ ಭೌತಿಕ ಕ್ರಿಯೆಯಾದರೂ ಕೂಡಾ ಹಸಿವಿನ ತಲ್ಲಣ, ಹಸಿವಿನಿಂದಾಗುವ ದುಷ್ಪರಿಣಾಮಗಳು ಮನಕಲಕುವಂಥದ್ದು. ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ, ಪ್ರಾಕೃತಿಕ ಕಾರಣಗಳಿಂದ ಹಸಿವಿನ ಸಮಸ್ಯೆ ತೀವ್ರಗೊಳ್ಳುತ್ತದೆ. ಇದಕ್ಕೆ ಮುಂದಿನ ದಿನಗಳಲ್ಲಿ ಪರಿಹಾರವನ್ನು ಕಂಡುಕೊಳ್ಳಲೇಬೇಕಾದ ಅಗತ್ಯವಿದೆ. ಹಸಿವಿನ ಸಂಕಟ ಪ್ರಪಂಚದಲ್ಲಿಯೇ ಕ್ರೂರ ಯಾತನೆಯಾಗಿರುವುದು ಮನುಕುಲದ ದುರಂತವಾಗಿದೆ. ಚಿನ್ನಕ್ಕಿಂತ ಅನ್ನಕ್ಕೆ ಮಹತ್ತ್ವ ನೀಡಬೇಕಾಗಿದೆ. ಎಲ್ಲಾ ಕಾರಣಗಳನ್ನು ಬದಿಗಿಟ್ಟು ಮನುಕುಲ ಒಂದಾಗಬೇಕಾಗಿದೆ. ಸರ್ವರಿಗೆ ಸಮಬಾಳು-ಸಮಪಾಲು ಸಿಗಬೇಕಾಗಿದೆ. ಹಸಿದವರಿಗೆ ಅನ್ನ ನೀಡುವ ಮಹಾಕಾರ್ಯದಲ್ಲಿ ಎಲ್ಲರೂ ಕೈ ಜೋಡಿಸಬೇಕಾಗಿದೆ. ಆಹಾರದ ಉತ್ಪಾದನೆ ದ್ವಿಗುಣಗೊಳ್ಳಬೇಕಾಗಿದೆ.

ಕೊನೆ ಟಿಪ್ಪಣಿಗಳು

೧. ಸಣ್ಣರಾಮ, ಸಾಹಿತ್ಯ ಸಂವೇದನೆ-೩, ೨೦೧೧, ಪ್ರಸಾರಾಂಗ, ಕುವೆಂಪು ವಿ. ವಿ., ಶಿವಮೊಗ್ಗ, ಪುಟ ೧೦೦.

೨. ಅದೇ.

೩. ಕಥನ ಪ್ರೀತಿ, ಟಿ. ಪಿ. ಅಶೋಕ, ಪುಟ ೨೬೪, ಅಕ್ಷರ ಪ್ರಕಾಶನ, ಸಾಗರ ೨೦೧೩.

೪. ಕಥನ ಪ್ರೀತಿ – ಟಿ.ಪಿ ಅಶೋಕ, ೨೦೧೩. ಅಕ್ಷರ ಪ್ರಕಾಶನ ಹೆಗ್ಗೋಡು, ಸಾಗರ, ಪುಟ ೬೧೦.

೫. ಬುಗುರಿ, ಮೊಗಳ್ಳಿ ಗಣೇಶ್ ಪುಟ ೬೧೩ ಶತಮಾನದ ಕಥೆಗಳು ಎಸ್. ದಿವಾಕರ್ (ಸಂ), ಪ್ರಿಸಮ್ ಬುಕ್ಸ್ ಪ್ರೈ. ಲಿ ಬೆಂಗಳೂರು ೨೦೧೧.

೬. ಬುಗುರಿ, ಟಿ. ಪಿ. ಅಶೋಕ, ಕಥನ ಪ್ರೀತಿ, ಅಕ್ಷರ ಪ್ರಕಾಶನ, ಸಾಗರ, ೨೦೧೩, ಪುಟ ೬೧೫.

೭. ಪಾತರಗಿತ್ತಿ, ಪ್ರೊ. ಶಿವರಾಮ ಶೆಟ್ಟಿ (ಸಂ), ಪ್ರಸಾರಾಂಗ, ಮಂಗಳೂರು. ವಿ.ವಿ. ೨೦೧೭ ಪುಟ ೫೮.

೮. ಅದೇ, ಪುಟ ೪೫.

೯. ಅದೇ, ಪುಟ ೪೯.

೧೦. ಶಿವರಾಮ ಕಾರಂತ, ಹಸಿವು– ಸಣ್ಣಕಥೆಗಳ ಸಂಕಲನ – ಭಾಗ ೧, ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ ಪುಟ ಸಂಖ್ಯೆ ೬, ೨೦೧೭.

೧೧. ಅದೇ, ಪುಟ ೭.

೧೨. ಹಸಿವು – ಡಾ. ಶಿವರಾಮ ಕಾರಂತ. ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ ೨೦೧೭, ಪುಟ ಸಂಖ್ಯೆ ೧೪.

೧೩. ಅದೇ, ಪುಟ ಸಂಖ್ಯೆ ೧೪.

೧೪. ಹೋಳಿಗೆ ಕಥೆ ಪು. ಸಂ ೩೪.

೧೫. ಅದೇ, ಪುಟ ೩೪.

೧೬. ಮಗಳ ಮದುವೆ, ಕಾರಂತ, ಹಸಿವು, ಪು. ಸಂ. ೬೧.

೧೭. ನೂರು ರೂಪಾಯಿ ನೋಟು, ಬೆಸಗರಹಳ್ಳಿ ರಾಮಣ್ಣ, ಸಮಗ್ರ ಕಥೆಗಳು, ಕ. ಸಾ. ಪ., ಬೆಂಗಳೂರು, ೨೦೧೫, ಪು. ೭೦.

೧೮. ಕಳ್ರು, ಬಿ.ಟಿ. ಲಲಿತಾನಾಯಕ್, (ಸಂ) ಸಣ್ಣರಾಮ, ಸಾಹಿತ್ಯ ಸಂವೇದನೆ-೩, ಪು. ೭೨ ೨೦೧೧ ಪ್ರಸಾರಾಂಗ ಕುವೆಂಪು ವಿ. ವಿ.

೧೯. ಅದೇ.

೨೦. ಅದೇ, ಪುಟ ೭೨.

೨೧. ಅದೇ, ಪುಟ ೭೩.

೨೨. ಕಥನ ಪ್ರೀತಿ – ಟಿ.ಪಿ ಅಶೋಕ – ಅಕ್ಷರ ಪ್ರಕಾಶನ, ಸಾಗರ-೨೦೧೩, ಪು. ೨೪೮.

೨೩. ಅದೇ, ಪುಟ ೩೪೯.

೨೪. ಅಜ್ಜೀ ಹೆಣ – ಹಸಿವು, ಕಾರಂತ ಪು. ೪೭.

೨೫. ಅದೇ.

೨೬. ಸೆಟ್ಟಿಸಾಲ, ಕಾರಂತ, ಹಸಿವು ಪು. ೫೨.

೨೭. ಅದೇ, ಪು. ೫೩.

೨೮. Better safe than sorry, ಡಾ. ಡಿ. ವಿ. ಗುರುಪ್ರಸಾದ್ ವಿಜಯವಾಣಿ ದಿನಪತ್ರಿಕೆ ೧೪/೦೭/೧೯.

೨೯. ಕಥನಪ್ರೀತಿ, ಟಿ. ಪಿ. ಅಶೋಕ, ಅಕ್ಷರ ಪ್ರಕಾಶನ – ಸಾಗರ ೨೦೧೩, ಪುಟ ೭೦.

೩೦. ಅದೇ, ಪುಟ ೭೧.

೩೧. ಕೇದಗೆ, ಸತ್ಯನಾರಾಯಣ (ಸಂ), ಪ್ರಸಾರಾಂಗ, ಮಂಗಳೂರು, ವಿ. ವಿ., ಮಂಗಳೂರು, ೨೦೧೦, ಪು. ೨೪, ೨೫.

೩೨. ಅಮರೇಶ್ ನುಗಡೋಣಿ, ಕನ್ನಡ ಸಾಹಿತ್ಯದಲ್ಲಿ ಮನುಷ್ಯ ಪರಿಕಲ್ಪನೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೩, ಪು. ೧೬೦.

೩೩. ಕಥನ ಪ್ರೀತಿ, ಟಿ. ಪಿ. ಅಶೋಕ, ಪುಟ ೧೬೨, ಅಕ್ಷರ ಪ್ರಕಾಶನ, ಸಾಗರ ೨೦೧೩.

೩೪. ಸಾಹಿತ್ಯ ಸಂವೇದನೆ-೩, ಡಾ. ಸಣ್ಣರಾಮ (ಸಂ), ಪ್ರಸಾರಾಂಗ, ಕುವೆಂಪು ವಿ. ವಿ., ೨೦೧೧, ಪು. ೧೧೨.

೩೫. ಯಾರೂ ಅರಿಯದ ವೀರ ಕುವೆಂಪು, ನುಡಿಶಿಲ್ಪ, ಪ್ರಸಾರಾಂಗ. ಮಂಗಳೂರು ವಿ.ವಿ. ೨೦೧೭, ಪುಟ ೩೪.

೩೬. ಜೀತ, ಬೆಸಗರಹಳ್ಳಿ ರಾಮಣ್ಣ, ಸಮಗ್ರ ಕಥೆಗಳು ಪುಟ ೮೨, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು – ೨೦೧೫.

೩೭. ಅದೇ, ಪುಟ ೮೨.

೩೮. ಅದೇ, ಪುಟ ೮೩.

೩೯. ಅದೇ, ಪುಟ ೮೩.

೪೦. ಅದೇ, ಪುಟ ೮೩.

೪೧. ಅದೇ, ಪುಟ ೮೪.

೪೨. ಅದೇ ಪುಟ ೮೫.

ಅಧ್ಯಾಯ ೫: ಹಸಿವಿನ ಸಮಸ್ಯೆಯ ನಿವಾರಣೆಯ ಕ್ರಮಗಳು

೫.೧ ಹಸಿವಿನ ನಿವಾರಣೆಗೆ ಮಹಿಳೆ ಕಂಡು ಕೊಂಡ ದಾರಿ

೫.೨ ಹಸಿವಿನ ನಿವಾರಣೆಗೆ ಪುರುಷ ಕಂಡುಕೊಂಡ ದಾರಿ

೫.೩ ಹಸಿವಿನ ನಿವಾರಣೆಗೆ ಚಿಂತಕರು ಸೂಚಿಸಿದ ಕ್ರಮಗಳು

೫.೪ ಹಸಿವಿನ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳು

೫.೫ ಹಸಿವಿನ ನಿವಾರಣೆಗೆ ಕೈಗೊಳ್ಳಬಹುದಾದ ಕ್ರಮಗಳು

ಅಧ್ಯಾಯ ೫

ಹಸಿವಿನ ಸಮಸ್ಯೆಯ ನಿವಾರಣೆಯ ಕ್ರಮಗಳು

ಬದಲಾವಣೆಗೊಳ್ಳುತ್ತಲೇ ಇರುವ ವ್ಯವಸ್ಥೆಯಲ್ಲಿ ಮಾನವ ಸಮಾಜ ಪ್ರಮುಖ ಅಂಗ. ಇದಕ್ಕೆ ಹಲವಾರು ವಿಭಿನ್ನಾಂಗಗಳಿವೆ. ಧರ್ಮ, ಅರ್ಥ, ಕಾಮ, ಮೋಕ್ಷ ಈ ಚತುರ್ವಿಧ ಪುರುಷಾಂಗಗಳ ಗಳಿಕೆಗೆ, ಸಾಧನೆಗೆ ಹಲವಾರು ದಾರಿಗಳಿವೆ. ಮೋಕ್ಷ ಸಾಧನೆಗೆ ಧರ್ಮ, ಅರ್ಥ ಮತ್ತು ಕಾಮಗಳು ನೆರವಾಗುವ ಹಾದಿಗಳು ಎಂದು ಸುಲಭವಾಗಿ ಅರ್ಥೈಸಬಹುದಾದರೆ ಗುರಿ ಮೋಕ್ಷವಾದೀತು. ಅದೊಂದೇ ಪುರುಷಾರ್ಥ. ಆದರೆ ಮನುಷ್ಯ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳನ್ನು ಗಳಿಸಿಕೊಳ್ಳಲು ಪ್ರಯತ್ನಿಸುತ್ತೇನೆಂದು ಭಾವಿಸುತ್ತಾನೆ. ಉಳಿದ ಗಳಿಕೆಯೆಲ್ಲ ಗೌಣ ಎಂದು ಅಲ್ಲಗಳೆಯುವಂತಿಲ್ಲ. ಹೆಂಡತಿ, ಮಕ್ಕಳು, ಭೂಮಿ, ಐಶ್ವರ್ಯ, ವಿದ್ಯೆ ಇತ್ಯಾದಿಗಳನ್ನು ಗಳಿಸುತ್ತಾ, ಅವುಗಳನ್ನು ಅನುಭವಿಸಲು ಸಮರ್ಪಕ ವ್ಯವಸ್ಥೆಯನ್ನು ಮನುಷ್ಯ ರೂಪಿಸಿಕೊಂಡಿರುವುದನ್ನು ಪ್ರಾಚೀನ ಕಾಲದಿಂದಲೂ ಗುರುತಿಸಬಹುದಾಗಿದೆ. ವೇದ–ಪುರಾಣಗಳ ಕಾಲಕ್ಕಾಗಲೇ ಇಂತಹ ವ್ಯವಸ್ಥೆ ಅತ್ಯಂತ ವ್ಯವಸ್ಥಿತವಾಗಿ ಕಾರ್ಯನಿರ್ವಹಿಸಿರುವುದನ್ನು ಗುರುತಿಸಬಹುದು. ಮನುಷ್ಯನ ಸುತ್ತಮುತ್ತ ಅವನನ್ನೂ ಸೇರಿದಂತೆ ಇರುವ ವ್ಯವಸ್ಥೆಯಲ್ಲಿ ಕಾಲಕಾಲಕ್ಕೆ ಹಲವು ಮಾರ್ಪಾಡುಗಳು ಆಗಿರುವುದು ನಿಜ. ಮೂಲ ವ್ಯವಸ್ಥೆಯಂತೂ ಉಳಿದಿದೆ.

ಲಿಖಿತ ದಾಖಲೆಗಳು ದೊರಕುವ ವೇಳೆಗಾಗಲೇ ಕರ್ನಾಟಕದಲ್ಲಿ ಮನುಷ್ಯ ಮತ್ತು ಅವನ ವ್ಯವಸ್ಥೆ ಅತ್ಯಂತ ಸಮರ್ಪಕ, ಯೋಜಿತ ಮತ್ತು ಕ್ರಮಬದ್ಧವಾಗಿತ್ತು ಎನ್ನುವುದನ್ನು ಅಶೋಕನ ಶಾಸನಗಳ ಹಿನ್ನೆಲೆಯಲ್ಲಿ ಗುರುತಿಸಬಹುದು.

ಅಶೋಕನ ಶಾಸನಗಳು ಧರ್ಮಪ್ರಧಾನವಾದವು. ಆದರೆ ಅಲ್ಲಿ ಶೈವ, ವೈಷ್ಣವ, ಬೌದ್ಧ, ಜೈನ ಇತ್ಯಾದಿ ಧರ್ಮಗಳ ವಿಷಯ ಪ್ರಾಧಾನ್ಯತೆ ಪಡೆದಿಲ್ಲ ಎಂಬುದು ಗಮನಾರ್ಹವಾದುದು. ಧರ್ಮಕ್ಕೆ ದೇವರ ಹೆಸರಿನ ಕಟ್ಟುಪಾಡುಗಳಿಲ್ಲ. ಕೌಟಿಲ್ಯನ ಅರ್ಥಶಾಸ್ತ್ರವೇ ಆ ಕಾಲದ ರಾಜ್ಯವ್ಯವಸ್ಥೆ. ರಾಜನೀತಿ, ನ್ಯಾಯ, ದಂಡ ಇತ್ಯಾದಿಗಳ ಬಗ್ಗೆ ತಿಳಿಸುವುದರಿಂದ ಅನಂತರದ ಅಶೋಕನ ಕಾಲದ ರಾಜ್ಯವ್ಯವಸ್ಥೆ, ಆಡಳಿತ ಇತ್ಯಾದಿಗಳು ಸಮರ್ಪಕವಾಗಿದ್ದುವೆಂದು ಭಾವಿಸಬಹುದು. ವೇದಗಳ ಕಾಲದಲ್ಲೂ ಸಭಾ, ಸಮಿತಿ ಎಂಬ ಆಡಳಿತ ವ್ಯವಸ್ಥೆಗಳಿದ್ದವು.

ತಮ್ಮದೇ ಆದ ಒಂದು ತಂಡವನ್ನು ರಚಿಸಿಕೊಂಡು ಆ ಸಂಘಟನೆಯ ಮೂಲಕ ತಮ್ಮೆಲ್ಲರ ಅವಶ್ಯಕತೆಗಳನ್ನು ಪೂರೈಸಿಕೊಳ್ಳುತ್ತಾ, ಪರಸ್ಪರ ರಕ್ಷಿಸಿಕೊಳ್ಳುತ್ತಾ, ತಮ್ಮ ವಾಸಸ್ಥಾನವನ್ನು ಭದ್ರಪಡಿಸಿಕೊಳ್ಳುತ್ತಾ, ಅದನ್ನು ಇತರ ಸಂಘಟನೆಗಳಿಂದ ರಕ್ಷಿಸಿಕೊಳ್ಳುತ್ತಲೇ ಮತ್ತಷ್ಟು ಸ್ಥಳವನ್ನು ಆಕ್ರಮಿಸಿಕೊಳ್ಳುವ ಪ್ರವೃತ್ತಿ ಅತ್ಯಂತ ಪ್ರಾಚೀನವಾದುದು. ಈ ಆಕ್ರಮಣಕಾರಿ ಪ್ರವೃತ್ತಿಯು ಅಪಾಯಕಾರಿಯೂ ಹೌದು, ದುರಂತಕ್ಕೂ ಕಾರಣವಾಗುತ್ತದೆ ಎಂಬುದನ್ನು ಅಶೋಕ ಕಳಿಂಗ ಯುದ್ಧದ ಸಂದರ್ಭದಲ್ಲಿ ಅರ್ಥ ಮಾಡಿಕೊಂಡಿದ್ದನ್ನು ಅವನ ಶಾಸನವೇ ಪ್ರಸ್ತಾಪಿಸಿದೆ. ಕಳಿಂಗ ಯುದ್ಧಾನಂತರ ಅಶೋಕನ ಆಸಕ್ತಿಯೆಲ್ಲಾ ತನ್ನ ಪ್ರಜೆಗಳು ಒಳ್ಳೆಯ ರೀತಿಯಲ್ಲಿ ಬಾಳಬೇಕು, ಬದುಕಬೇಕು ಎಂಬುದರತ್ತ ವಾಲಿತು.

ಅಶೋಕ ಯುದ್ಧ ಮಾಡಬಾರದೆಂದು ನಿಶ್ಚಯಿಸಿದ. ಅದರ ದುಷ್ಪರಿಣಾಮಗಳನ್ನು ಕಣ್ಣಿಗೆ ಕಟ್ಟುವಂತೆ ವಿವರಿಸಿದ. ಅವನ ಜೀವನಾವಧಿಯಲ್ಲಿ ಮತ್ತೆ ಯುದ್ಧ ಮಾಡಲಿಲ್ಲ. ಆದರೆ ಅವನ ನಂತರದ ರಾಜರು ಯುದ್ಧಗಳನ್ನು ಮುಂದುವರೆಸಿದರು. ಇತ್ತೀಚಿನವರೆಗೂ, ಈಗಲೂ ಯುದ್ಧಗಳು ನಡೆಯುತ್ತಲೇ ಇವೆ. ಹಲವಾರು ಶಾಸನಗಳು ಯುದ್ಧಭೂಮಿಯ ವಿವರಣೆಯನ್ನು ನೀಡಿವೆ. ಬೀಭತ್ಸವೆನಿಸುವ ಆ ವರ್ಣನೆಗಳಿಂದಲೇ ಇನ್ನಾದರೂ ಯುದ್ಧ ಸಾಕು ಎನ್ನಿಸದಿರದು. ಆದರೆ ಯುದ್ಧಗಳು ನಿಂತಿಲ್ಲ, ನಿಲ್ಲುವ ಸೂಚನೆಗಳೂ ಇಲ್ಲ. ತಮ್ಮ ಆಡಳಿತ ಪ್ರದೇಶದ ವಿಸ್ತರಣೆ ಮತ್ತು ರಕ್ಷಣೆಗಾಗಿ ಹಿಂದೆ ಆಳಿದ ಜನ ಯುದ್ಧ ಮಾಡುತ್ತಿದ್ದರು. ಈಗ ಯುದ್ಧಕ್ಕೆ ರಾಜ್ಯ ವಿಸ್ತರಣೆ ಕಾರಣವಾಗಬೇಕಾಗಿಲ್ಲ. ತಮ್ಮ ಪ್ರಭಾವ, ಪ್ರತಿಷ್ಠೆಗಳನ್ನು ಉಳಿಸಿಕೊಳ್ಳಲು ಒಂದು ದೇಶ ಯುದ್ಧ ಮಾಡಿದರೆ, ಆಕ್ರಮಣಕ್ಕೊಳಗಾದ ದೇಶ ಸ್ವ-ರಕ್ಷಣೆಗೆ ಹೋರಾಟಕ್ಕಿಳಿಯುವುದು ಅನಿವಾರ್ಯ. ಆಗ ಮತ್ತೊಂದು ದೇಶ ತನ್ನ ಪ್ರಭಾವ ಪ್ರತಿಷ್ಠೆಗಳನ್ನು ಬೆಳೆಸಿಕೊಳ್ಳಲು ಅದರ ನೆರವಿಗೆ ಬರುತ್ತದೆ. ಈ ಸ್ವಪ್ರತಿಷ್ಠೆ ಮತ್ತು ಪ್ರಭಾವಗಳೇ ಈಗಿನ ಯುದ್ಧಗಳಿಗೆ ಪ್ರೇರಣೆಯಾಗಿವೆ. ಅಶೋಕನ ಕನಸು ನನಸಾಗಿಲ್ಲ. ಅವನಿಗೆ ಮಾನವೀಯ ಮೌಲ್ಯಗಳೇ ಪ್ರಧಾನವಾದ ಬದುಕಿನ ಬಗೆಗೆ ಅಪಾರವಾದ ಕಳಕಳಿ. ಈ ಕಾರಣದಿಂದಲೇ ಅವು ಧರ್ಮಪ್ರಧಾನವಾದ ಶಾಸನಗಳು.

ಅಹಿಂಸೆ, ಆರೋಗ್ಯಪಾಲನೆ, ತಂದೆ-ತಾಯಿ, ಗುರುಹಿರಿಯರಿಗೆ ಗೌರವ, ಧರ್ಮಮಂಗಲಗಳ ಆಚರಣೆ, ಎಲ್ಲಾ ಮತಗಳ ಬಗೆಗೆ ಗೌರವ ಇತ್ಯಾದಿ ಮಾನವೀಯ ಮೌಲ್ಯಗಳನ್ನು ಕುರಿತಂತೆ ಅಶೋಕ ತನ್ನ ಧರ್ಮಶಾಸನಗಳ ಮೂಲಕ ಜನತೆಗೆ ತಿಳುವಳಿಕೆ ನೀಡಲು ಪ್ರಯತ್ನಿಸಿದ. ಅವನ ಏಳನೆಯ ಸ್ತಂಬ ಲಿಪಿಯು ಈ ಎಲ್ಲಾ ವಿವರಗಳನ್ನು ಒಳಗೊಂಡಿದೆ. ರಸ್ತೆಯ ಬದಿಗಳಲ್ಲಿ ಪಶುಗಳಿಗೆ ಮತ್ತು ಮನುಷ್ಯರಿಗೆ ನೆರಳಾಗಿ ಮರಗಳನ್ನು ಬೆಳೆಸುವ, ಬಾಯಾರಿಕೆಯ ನಿವಾರಣೆಗಾಗಿ ಅರವಟ್ಟಿಗೆಗಳನ್ನು ನಿರ್ಮಿಸುವ, ತಂಗಲು ತಂಗುಮನೆಗಳನ್ನು ನಿರ್ಮಿಸುವ ಕೆಲಸ ಅಶೋಕನ ಕಾಲದಲ್ಲಿ ವಿಶೇಷ ಮನ್ನಣೆ ಪಡೆದಿತ್ತು. ತಂದೆ-ತಾಯಿಯರ ಆರೈಕೆ, ಗುರುಗಳ ಸೇವೆ, ಹಿರಿಯರಲ್ಲಿ ಆದರ, ಬ್ರಾಹ್ಮಣ-ಶ್ರಮಣರಲ್ಲಿ, ದೀನ ದಲಿತರಲ್ಲಿ, ದಾಸ ಸೇವಕರಲ್ಲಿ ಅನುಕಂಪ ಇವು ಹೆಚ್ಚಿವೆ, ಹೆಚ್ಚುತ್ತಲಿವೆ ಎಂಬುದು ಅಶೋಕನ ನಂಬಿಕೆಯಾಗಿತ್ತು.[೧] ದೇವನಾಂಪ್ರಿಯ ಪ್ರಿಯದರ್ಶಿನಿ ರಾಜನು ಮತ್ತೆ ಹೀಗೆ ನುಡಿದಿದ್ದಾನೆ. ಜನರಲ್ಲಿ ಧರ್ಮದ ವೃದ್ಧಿಯಾಗುವುದಕ್ಕೆ ಎರಡು ಕಾರಣಗಳು, ಧರ್ಮ ನಿಯಮ ಮತ್ತು ನಿಧ್ಯಪ್ತಿ. ಇವುಗಳಲ್ಲಿ ಧರ್ಮನಿಯಮಗಳಿಗಿಂತ ನಿಧ್ಯಪ್ತಿ ಹೆಚ್ಚಿನದು. ಧರ್ಮ ನಿಯಮವೆಂದರೆ ಇಂತಿಂಥ ಪ್ರಾಣಿಗಳನ್ನು ಕೊಲ್ಲಲಾಗದು ಎಂದು ಮುಂತಾಗಿ ನಾನು ಮಾಡಿದ ನಿಯಮಗಳು. ನಿಧ್ಯಪ್ತಿ ಎಂದರೆ ಪ್ರಾಣಿಗಳನ್ನು ಹಿಂಸಿಸದಿರುವುದು, ಕೊಲ್ಲದಿರುವುದು. ಇದರಿಂದಲೇ ಜನರಲ್ಲಿ ಧರ್ಮವೃದ್ಧಿಯಾಗುತ್ತದೆ. ಈ ಉದ್ದೇಶದಿಂದ ಇದನ್ನು ಬರೆಸಿದೆ ಎಂದು ಹೇಳಿದ್ದಾನೆ. ಅಶೋಕ ಬುದ್ಧನ ಅನುಯಾಯಿಯಾಗಿದ್ದುದು, ಬೌದ್ಧ ಸಂಘವನ್ನು ಸೇರಿದ್ದುದು ಈ ಕಾರಣದಿಂದಲೇ. ಬೌದ್ಧ ಧರ್ಮವನ್ನು ಬಲ್ಲಿದನಂತೆಯೇ ಬಡವನೂ ಸಾಧಿಸಬಹುದು ಎಂಬುದು ಅಶೋಕನ ಅಭಿಪ್ರಾಯವಾಗಿತ್ತು. ಸರ್ವಧರ್ಮ ಸಮನ್ವಯತೆಯನ್ನು ಸಾರುವ ಶಾಸನಗಳೂ ಸಹ ಸಾರ್ವತ್ರಿಕವಾಗಬಹುದಾದ ಮಾನವೀಯ ಧರ್ಮದ ಬಗೆಗೆ ಗಮನಹರಿಸಿಲ್ಲ ಎಂಬುದು ಸ್ಪಷ್ಟ. ಹಾಗೆಯೇ ಮನುಷ್ಯ ಎಂದಿಗೂ ಒಳ್ಳೆಯವನಾಗಿಯೇ ಇರಲು ಇಷ್ಟಪಟ್ಟಿದ್ದಾನೆ. ಆದರೆ ಪರಿಸರ ಅವನನ್ನು ತಪ್ಪುದಾರಿಗೆಳೆದಿದೆ. ಆ ಪರಿಸರದ ನಿರ್ಮಾತೃವೂ ಮನುಷ್ಯನೇ ಆಗಿದ್ದಾನೆ.

ಆದರೆ, ತಮ್ಮ ಮಕ್ಕಳು, ತಮ್ಮ ಸುತ್ತಮುತ್ತಲ ಜನ, ರಾಜ ಎಲ್ಲರೂ ಒಳ್ಳೆಯವರಾಗಿರಬೇಕು; ಒಳ್ಳೆಯ ಕೆಲಸಗಳನ್ನು ಮಾಡಬೇಕು ಎಂಬ ನಿರೀಕ್ಷೆ ತಾಯಿಂದಿರಿಗಿತ್ತು. ಈ ಕಾರಣದಿಂದಲೇ ಸಿಂಗಾಂಬಿಕೆಯು ತನ್ನ ಮಗು ಲಕ್ಷ್ಮೀಧರನಿಗೆ ಚಿಕ್ಕಂದಿನಲ್ಲಿ ಹೇಳಿಕೊಟ್ಟಿದ್ದ ಪಾಠ ಅನುಕರಣೀಯವಾದುದು.

ಕೆರೆಯಂ ಕಟ್ಟಿಸು ಬಾವಿಯಂ ಸವಸು ದೇವಾಗರಂ ಮಾಡಿಸಜ್ಜೆರಿಯೊಳ್ಸಿಲ್ಕಿದನಾಥರಂ
ಬಿಡಿಸು ಮಿತ್ರರ್ಗಿಂಬುಕೆಯ್ ನಂಬಿದರ್ಗ್ಗರಿವೆಟ್ಟಾಗಿರು ಶಿಷ್ಯರಂ ಪೊರೆಯೆನುತ್ತಿಂತೆಲ್ಲವಂ
ಪಿಂದೆತಾಯೆರಿದಳ್ಪಾತಾವಂದು ತೊಟ್ಟು ಕಿವಿಯೊಳ್ ಲಕ್ಷ್ಮೀಧರಾಮಾತ್ಯನಾ.[೨]

ಸಾಮಾನ್ಯವಾಗಿ ಜನರ ಆದರ್ಶಗಳು ಹಾಗಿದ್ದವು. ಇದು ಅತ್ಯುತ್ತಮ ಹಾಗೂ ಜನೋಪಯೋಗಿ ವ್ಯವಸ್ಥೆಯೂ ಹೌದು.

ತನ್ನ ಅನುಭವಗಳಿಗೆ ಬರಹದ ಮೂಲಕ ಅಭಿವ್ಯಕ್ತಿ ಕೊಡುವ ಕವಿಯ ಮೊದಲ ಹಾಗು ಕೊನೆಯ ಲಕ್ಷ್ಯ ಮನುಷ್ಯನೇ. ಅದರಿಂದಾಗಿ ಅವನ ಕೃತಿಯ ವಸ್ತು ಏನೇ ಇರಲಿ, ಅವನ ಕೃತಿಯಲ್ಲಿ ಯಾವುದರ ಚಿತ್ರಣವೇ ಇರಲಿ, ಅದೆಲ್ಲದರ ಹಿಂದೆ ಅವನದೇ ಆದ ಜೀವದೃಷ್ಟಿ, ಧೋರಣೆಗಳು ಇರುತ್ತವೆ. ಈ ದೃಷ್ಟಿಧೋರಣೆಗೆ ಅನುಗುಣವಾಗಿಯೇ ಅವನ ಮನುಷ್ಯ ಪರಿಕಲ್ಪನೆ ಇರುತ್ತದೆ.

ಅವನ ಮನುಷ್ಯ ಜೀವನ ದೃಷ್ಟಿಯನ್ನು ರೂಪಿಸುವಲ್ಲಿ ಕೆಲವೊಂದು ಮೌಲ್ಯಗಳು, ಆದರ್ಶಗಳು ಹಿನ್ನೆಲೆಯಲ್ಲಿರುತ್ತವೆ. ಈ ಮೌಲ್ಯಗಳು, ಆದರ್ಶಗಳಿಗನುಗುಣವಾಗಿಯೇ ಅವನ ಕೃತಿಯಲ್ಲಿ ಮನುಷ್ಯರ ಆಕಾರಗಳು ರೂಪುಗೊಳ್ಳುತ್ತಾ ಹೋಗುತ್ತವೆ.

"ಹಾಗಾದರೆ ಈ ಮೌಲ್ಯಗಳೂ, ಆದರ್ಶಗಳು ಎಂಬುವಾದರೂ ಏನು?" ಎಂಬ ಪ್ರಶ್ನೆಗೆ ಡಾ. ಎಂ. ಚಿದಾನಂದ ಮೂರ್ತಿಯವರು ಇವು ಹೆಚ್ಚು ಕಡಿಮೆ ಸಂವಾದಿ ಪದಗಳು, "ಯಾವ ಭಾವನೆ ಅಥವಾ ಆದರ್ಶಗಳು ಒಟ್ಟು ಜನರ ಜೀವನವನ್ನು ಹಿಡಿದು ನಡೆಸುತ್ತವೆಯೋ, ಯಾವುದನ್ನು ಪಡೆಯಲು ಅಥವಾ ಆಗಲು ಒಂದು ಕಾಲದ ಜನಾಂಗ ಹಂಬಲಿಸುತ್ತದೆಯೋ, ಯಾವ ಭಾವನೆ ಅಥವಾ ಆದರ್ಶಗಳಿಗೆ ಉಳಿದ ಭಾವನೆ ಅಥವಾ ಆದರ್ಶಗಳಿಗಿಂತ ಹೆಚ್ಚು ಪ್ರಾಮುಖ್ಯತೆ ಉಂಟೋ ಅವುಗಳನ್ನು ಮೌಲ್ಯಗಳೆಂದು ಕರೆಯಬಹುದು"[೩] ಎಂದು ಅಭಿಪ್ರಾಯಪಟ್ಟಿದ್ದಾರೆ. ಇವನ್ನು ಮೌಲ್ಯಾದರ್ಶಗಳೆಂದು ಕರೆಯಬಹುದು. ಮೌಲ್ಯ ಮತ್ತು ಆದರ್ಶಗಳ ನಡುವೆ ಬಿರುಕು ಹೆಚ್ಚಿದಂತೆಲ್ಲಾ ಸಂಘರ್ಷಗಳು ಹೆಚ್ಚುತ್ತವೆ, ಅಪ್ರಾಮಾಣಿಕತೆಯೂ ಹೆಚ್ಚುತ್ತದೆ.

ಪ್ರತಿಯೊಂದು ಸಮಾಜಕ್ಕೂ ನೀತಿ-ಧರ್ಮ, ಜೀವನಾದರ್ಶಗಳು, ಇವುಗಳಿಗೆ ಸಂಬಂಧಿಸಿದಂತೆ ತನ್ನದೇ ಆದ ಪೂರ್ವಾಗ್ರಹಗಳೂ ಇರುತ್ತವೆ. ಒಂದರ್ಥದಲ್ಲಿ ಇವನ್ನೇ ಮೌಲ್ಯಗಳೆಂದು ಗುರುತಿಸುವುದು. ಇವು ಸಮಾಜದ ಎಲ್ಲರೂ ಬಹುಕಾಲದಿಂದ ಒಪ್ಪಿಕೊಂಡು ಬಂದಿರುವಂಥವು. ಹಾಗಾಗಿ ಎಲ್ಲರೂ ಇವನ್ನು ಪಾಲಿಸಬೇಕೆಂದು ಆ ಸಮಾಜದ ನಿರೀಕ್ಷೆ. ಸಮಾಜದ ಈ ನಿರೀಕ್ಷೆಗೆ ವಿರುದ್ಧವಾಗಿ ವ್ಯಕ್ತಿಗಳು ನಡೆದುಕೊಂಡಾಗ ಮೌಲ್ಯ ಸಂಘರ್ಷಗಳು

ಉಂಟಾಗಿ ಆದರ್ಶಗಳು ಏರುಪೇರಾಗಬಹುದು. ತೀವ್ರ ಸಂವೇದನಾಶೀಲನಾದ ಕವಿ ತನ್ನ ವೈಯಕ್ತಿಕ ಅನುಭವದ ಮೂಸೆಯಲ್ಲಿ ಇದನ್ನು ಶೋಧನೆಗೆ ಒಳಪಡಿಸಿದಾಗ ಸ್ಥಾಪಿತ ಮೌಲ್ಯಾದರ್ಶಗಳ ಪರಿಧಿಯನ್ನು ಮೀರಿ ನಿಜವಾದ ಜೀವನ ಸತ್ಯಗಳು ಹೊರಹೊಮ್ಮಬಹುದು.

ಇತಿಹಾಸವನ್ನು ವಸ್ತುವನ್ನಾಗಿ ಉಳ್ಳ ಮಹಾಕಾವ್ಯ ಮಹಾಪುರುಷರನ್ನು, ಉದಾತ್ತರನ್ನು, ನಾಯಕರನ್ನಾಗಿ ಉಳ್ಳದು. ಅವನು ಮೌಲ್ಯಗಳ ಪ್ರತಿನಿಧಿಯೆಂಬಂತೆ ಎದ್ದು ನಿಂತು ವಿರುದ್ಧ ಶಕ್ತಿಗಳೊಡನೆ ಹೋರಾಡುತ್ತಾ ಸಮಾಜದ ಆತ್ಮಗೌರವ, ಪ್ರತಿಷ್ಠೆಗಳ ಪ್ರತಿನಿಧಿಯೆಂಬಂತೆ ಕಂಡು ಬಂದು ಸಮಾಜದ ನಾಯಕನಾಗುತ್ತಾನೆ. ಧೈರ್ಯಶಾಲಿಯೂ, ಬುದ್ಧಿವಂತನೂ, ನಿಸ್ವಾರ್ಥಿಯೂ ಆದ ಇಂಥ ವ್ಯಕ್ತಿ ಸಮಾಜದ ಪ್ರತಿನಿಧಿಯಾಗಿ, ಮಾರ್ಗದರ್ಶಿಯಾಗಿ, ಸಂರಕ್ಷಕ ಶಕ್ತಿಯಾಗಿ ಆರಾಧ್ಯ ವ್ಯಕ್ತಿಯಾಗಿ ಗೋಚರಿಸುತ್ತಾನೆ. ಇಂತಹ ಪರಿಸರದಲ್ಲಿ ಹುಟ್ಟಿಕೊಳ್ಳುತ್ತಾರೆ ರಾಮ, ಅರ್ಜುನ, ಯುಧಿಷ್ಠಿರ, ಹೆಕ್ಟರ್, ಒಡಿಸಿಯಸ್, ಅಖಿಲೆಸ್ ಇಂಥವರು. ಮುಂದಿನವರ ಪಾಲಿಕೆಗೆ ಇವರ ನಡವಳಿಕೆಗಳು ಆದರ್ಶವಾಗುತ್ತವೆ. ವ್ಯಾಸ, ವಾಲ್ಮೀಕಿ, ಹೋಮರ್ ಮುಂತಾದ ಕವಿಗಳು ಚಿತ್ರಿಸಿರುವುದು ಇಂಥ ಉದಾತ್ತ ಆದರ್ಶ ವೀರರನ್ನು"[೪]

ಪಂಪ, ರನ್ನ, ಡಾಂಟೆ, ಮಿಲ್ಟನ್ ಮುಂತಾದ ಕವಿಗಳಿಗೂ ಇಂಥ ವೀರರೇ, ಇವರ ನಡವಳಿಕೆಗಳೇ ಆದರ್ಶಗಳಾಗಿ ಮೌಲ್ಯಗಳಾಗಿ ಕಂಡು ಬಂದಿವೆ. ಪಂಪ, ರನ್ನರ ಲೌಕಿಕ ಕಾವ್ಯದಲ್ಲಿ ಆ ಕಾಲದ ಜನರ ಗೌರವಕ್ಕೆ ಪಾತ್ರವಾಗಿದ್ದ ಮೌಲ್ಯಾದರ್ಶಗಳಿಗನುಗುಣವಾಗಿ ಪಾತ್ರಗಳನ್ನು ಚಿತ್ರಿಸಿರುವುದು ಕಂಡು ಬರುತ್ತದೆ. ಆ ಮೌಲ್ಯಾದರ್ಶಗಳೆಂದರೆ ನನ್ನಿ, ಚಾಗ, ಅಭಿಮಾನ, ಅಣ್ಮು, ಶೌಚ, ಸ್ವಾಮಿಭಕ್ತಿ (ಜೋಳದ ಪಾಳಿ), ಶರಣು ಬಂದವರನ್ನು ಕಾಪಾಡುವುದು ಈ ಮುಂತಾದವು.

ಮಾನವೀಯತೆಯ ನೆಲೆಗಟ್ಟಿನ ಮೇಲೆ ಮನುಷ್ಯನಲ್ಲೊಂದಾಗಿ ಮನುಷ್ಯನ ಮೂಲಕವೇ ಬದುಕನ್ನು ನೋಡುವ ಕ್ರಮಕ್ಕೆ ಬದ್ಧರಾಗಬೇಕಾಗಿದೆ. ಆದರೆ ಮೌಲ್ಯಾದರ್ಶಗಳು ದೂರವಾಗಿ, ಮನುಷ್ಯನಲ್ಲಿ ಸ್ವಾರ್ಥ, ಅಹಂಕಾರ, ಅಧಿಕಾರಮದ ಕೇಂದ್ರೀಕೃತವಾಗಿ ಸಂಪತ್ತನ್ನು ವೃದ್ಧಿಸಿಕೊಳ್ಳುವ, ಐಶಾರಾಮದ ಬದುಕನ್ನು ನಡೆಸುವಂತಹ ಹಂಬಲವನ್ನು ಬೆಳೆಸಿಕೊಂಡು ಸಮಾಜದಲ್ಲಿ ಅಸಮಾನತೆಯ ಗೋಡೆಯನ್ನೆಬ್ಬಿಸಿಕೊಂಡು ಮನುಷ್ಯ ಮನುಷ್ಯನನ್ನೇ ಸುಲಿಗೆ ಮಾಡಲು ಆರಂಭಿಸಿದಾಗ ಸಮಾಜದ ಸ್ವಾಸ್ಥ್ಯ ಕೆಟ್ಟಿತು.

ಹಿಂದಿನ ಆದರ್ಶ, ಮೌಲ್ಯಗಳು ಮಾಯವಾಗಿ ಆಧುನಿಕ ಮನುಷ್ಯ ಹಣ ಸಂಪಾದನೆ, ಆಸ್ತಿ ಸಂಗ್ರಹಣೆಯಲ್ಲಿ ತಾಮುಂದೆ-ನಾಮುಂದೆ ಎಂಬ ಪೈಪೋಟಿಯಲ್ಲಿ ತೊಡಗಿದಾಗ ದುಡಿಯುವ ಶ್ರಮಿಕ ವರ್ಗ ನಿಜಕ್ಕೂ ಕಷ್ಟಕ್ಕೊಳಗಾಯಿತು. ಬಂಡವಾಳಶಾಹಿ, ಅಧಿಕಾರಶಾಹಿ ವರ್ಗ ಅಭಿವೃದ್ಧಿಯಾದಂತೆ ಶ್ರಮಿಕ ವರ್ಗ, ಕೂಲಿ ಕಾರ್ಮಿಕರು ದುಡಿಮೆಗೆ ತಕ್ಕ ಪ್ರತಿಫಲವನ್ನು ಪಡೆಯುವುದು ದುಸ್ತರವಾಯಿತು.

ದುಡಿಯುವ ಮೂಲ ಚೈತನ್ಯ ಅಥವಾ ಶಕ್ತಿ. ಶಕ್ತಿ ನೀಡುವುದು ಅನ್ನ. ದುಡಿಯುವ ವರ್ಗಕ್ಕೆ ಅನ್ನ ಕಾಣುವುದೇ ಕಷ್ಟವಾದಾಗ ಜೀವ ಚೈತನ್ಯ ಪಡೆಯುವುದಾದರೂ ಎಲ್ಲಿಂದ? ದುಡಿಯುವ ವರ್ಗದ ಅನ್ನವನ್ನೇ ಕಿತ್ತುಕೊಂಡು ಬಂಡವಾಳಶಾಹಿ ವರ್ಗ, ಅಧಿಕಾರಶಾಹಿ ವರ್ಗ

ಕೂಲಿಕಾರ್ಮಿಕರನ್ನು ಒಡಲ ನೋವಿನಿಂದ ಬಳಲುವಂತೆ ಮಾಡಿತು. "ಹಡಗು ತುಂಬಿಸಲು ಹೋದವ ಬಂದ, ಹೊಟ್ಟೆ ತುಂಬಿಸಲು ಹೋದವ ಬರಲೇ ಇಲ್ಲ" ಎಂಬ ಗಾದೆ ಮಾತಿನಂತೆ ಧನಿಕರಿಗೆ ಹಡಗು ತುಂಬಾ ಸಂಪತ್ತನ್ನು ತುಂಬಿಸುವುದು ಕಷ್ಟವೇನಲ್ಲ. ಆದರೆ ಬಡವರ ಪಾಲಿಗೆ ಅದು ಅಸಾಧ್ಯವಾಗದೇ ಹೋಯಿತು. ಅನ್ನವನ್ನು ಅರಸುತ್ತಾ ಅರಸುತ್ತಾ ಅಲ್ಲೇ ಜೀವ ಬಿಡಬೇಕಾದುದು ದುರಂತವೇ ಸರಿ.

ಹಿಂದೆ ಬೇಡಿದಾಗ ನೀಡುವುದು ಒಂದು ಆದರ್ಶವಾದರೆ, ಬೇಡಿದಾಗ ತಿರಸ್ಕರಿಸುವುದು ಇಂದಿನ ರೂಢಿಯಾಗಿ ಬಿಟ್ಟಿದೆ.

ಹಸಿವಾದಡೆ ಭಿಕ್ಷಾನ್ನಗಳುಂಟು,
ತೃಷೆಯಾದಡೆ ಕೆರೆಹಳ್ಳಗಳುಂಟು,
ಶಯನಕ್ಕೆ ಪಾಳು ದೇಗುಲಗಳುಂಟು,
ಆತ್ಮಸಂಗಾತಕ್ಕೆ ನೀನಗುಂಟು

ಎಂದು ಸಾರುವ ಅಕ್ಕ ಮಹಾದೇವಿಯ ವಚನದಲ್ಲಿ 'ಹಸಿವು' ಎಂಬುದು ದೊಡ್ಡ ಸಮಸ್ಯೆಯೇ ಅಲ್ಲ. ಬೇಡಿದಾಗಲೆಲ್ಲಾ ಅನ್ನ ದೊರೆಯುತ್ತಿತ್ತು. ಬಾಯಾರಿಕೆಗೆ ಕೆರೆ-ಹಳ್ಳ-ಬಾವಿಗಳು, ಧರ್ಮಛತ್ರಗಳಿದ್ದವು. ಆದರೆ ಇಂದು ಹಣದ ದಾಹ ಹೆಚ್ಚಿಸಿಕೊಂಡ ಧನಿಕವರ್ಗಕ್ಕೆ ಬಡವರ ಹಸಿವಿನ ನೋವು ಕೇಳುವುದೇ ಇಲ್ಲ.

೫.೧ ಹಸಿವಿನ ನಿವಾರಣೆಗೆ ಮಹಿಳೆ ಕಂಡು ಕೊಂಡ ದಾರಿ

ಜಿ. ಎಸ್. ಶಿವರುದ್ರಪ್ಪನವರು ಹೇಳುವಂತೆ "ಹಿಂದಣ ಹೆಜ್ಜೆಯನರಿತಲ್ಲದೆ ಮುಂದಣ ಹೆಜ್ಜೆಯನಿಡಬಾರದು". ವರ್ತಮಾನದಲ್ಲಿದ್ದು ಭೂತಕಾಲವನ್ನು ಕೆದಕುತ್ತಲೇ ಭವಿಷ್ಯದ ಬಗ್ಗೆ ಆಲೋಚನೆ ಮಾಡಬೇಕು. ಈ ಹಿನ್ನೆಲೆಯಲ್ಲಿ ಹಲವಾರು ಸಾಮಾಜಿಕ ಸಮಸ್ಯೆಗಳನ್ನು ಭಾರತ ಅಂದಿನಿಂದಲೂ ಅನುಭವಿಸುತ್ತಲೇ ಬಂದು ಅದು ಇಂದಿಗೂ ಜೀವಂತವಾಗಿದೆ. ಸಾಮಾಜಿಕ ಸಮಸ್ಯೆಯ ರೂಪ ಭಿನ್ನತೆಯನ್ನು ಪಡೆದುಕೊಂಡಿದೆಯೇ ಹೊರತು ಸಮಸ್ಯೆ ಹಾಗೆಯೇ ಉಳಿದುಕೊಂಡಿದೆ. ಅಂದರೆ ಶೋಷಕರು ಮತ್ತು ಶೋಷಿತರು ವ್ಯಕ್ತಿ ರೂಪದಲ್ಲಿ ಬದಲಾವಣೆ ಹೊಂದಿದ್ದಾರೆ ಹೊರತು ಉದ್ದೇಶ ಮಾತ್ರ ಹಾಗೆ ಉಳಿದುಕೊಂಡಿದೆ.

ಈ ನಿಟ್ಟಿನಲ್ಲಿ ಭಾರತವನ್ನೇಕೆ, ಪ್ರಪಂಚದ ಕೆಲವು ರಾಷ್ಟ್ರಗಳಲ್ಲಿ ಇಂದಿಗೂ ಸದಾ ಕಾಡುತ್ತಿರುವ ಗಂಭೀರವಾದ ಸಾಮಾಜಿಕ ಸಮಸ್ಯೆಗಳಲ್ಲಿ ಹಸಿವಿನ ಸಮಸ್ಯೆಯೂ ಒಂದು. ಧರ್ಮ-ದೇವರ ಹೆಸರಿನಲ್ಲಿ ಆರ್ಥಿಕವಾಗಿ ಹಿಂದುಳಿದ ಸಾಮಾನ್ಯರನ್ನು ಭಯಭೀತಗೊಳಿಸಿ ಆ ಭಯದ ನೆರಳಿನಲ್ಲಿ ಇಲ್ಲಸಲ್ಲದ ನೀತಿ ನಿಯಮಗಳನ್ನು ಹೇರಿ ಅವರನ್ನು ಹಸಿವಿನಿಂದ ಬಳಲುವ ಹಾಗೆ ಮಾಡಲಾಗುತ್ತದೆ.

ಸಾಹಿತ್ಯವು ಸಮಾಜದ ಪ್ರತಿಬಿಂಬ. ಈ ಕಾರಣದಿಂದ ಸಮಾಜದ ಎಲ್ಲಾ ಆಗುಹೋಗುಗಳು ಸಾಹಿತ್ಯದ ವಸ್ತುವಾಗಿ ಬಿಡುತ್ತವೆ. ಗದ್ಯಪ್ರಕಾರ ಅತ್ಯಂತ

ಹಸಿವಿನ ಸಮಸ್ಯೆಯಂತಹ ವಸ್ತುವನ್ನು ಸಾಹಿತ್ಯದ ಮೂಲಕ ತರುವಲ್ಲಿ ಯಶಸ್ವಿಯಾಗಿದೆ. ಅದರಲ್ಲಿಯೂ ಸಣ್ಣ ಕಥೆಯ ಪ್ರಕಾರ ಪ್ರಧಾನ ಪಾತ್ರ ವಹಿಸುತದೆ.

ಬಡತನದ ಬೇಗೆಯಲ್ಲಿ ಬೆಂದು ಹೋಗುತ್ತಿರುವ ಸ್ತ್ರೀಸಂಕುಲ ತಮ್ಮ ಒಡಲನ್ನು ತುಂಬಿಸಿಕೊಳ್ಳಲು, ಅಂದರೆ ಹಸಿವಿನ ತೀವ್ರತೆಯಿಂದ ಪಾರಾಗಲು ಆಯ್ಕೆ ಮಾಡಿಕೊಂಡ ರೀತಿ ಮೈ ಜುಮ್ಮೆನಿಸುತ್ತದೆ. ಬೇಕೆಂದೇ ಸಾಮಾಜಿಕ ನಡಾವಳಿಗಳನ್ನು ಮುರಿದಿರುವ ಹಾಗೂ ಸ್ವಇಚ್ಛೆಯಿಂದ ತಮ್ಮ ದೇಹವನ್ನು ಹಣಕ್ಕಾಗಿ ಮಾರಾಟ ಮಾಡುವ, ಮಾಡುತ್ತಿರುವ ಬೆರಗಿನ ವಿಚಾರ ನಿಜಕ್ಕೂ ನಾಗರಿಕ ಸಮಾಜವೇ ತಲೆತಗ್ಗಿಸುವಂಥದ್ದು. ಕನಕದಾಸರ (ಉದರನಿಮಿತ್ಥಂ, ಬಹುಕೃತ ವೇಷಂ) ಎಲ್ಲಾರು ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ. ಉದರದ ನಿಮಿತ್ತವಾಗಿ ತಮ್ಮ ದೇಹ ಹಾಗೂ ಮನಸ್ಸನ್ನು ಮಾರಾಟಕ್ಕಿಡುವ ಈ ಮಹಿಳೆಯರ ನೋವನ್ನು, ಯಾತನಾಮಯ ಸ್ಥಿತಿಯನ್ನು ಈ ಸಮಾಜದ ನಾಗರಿಕರು ಅರ್ಥಮಾಡಿಕೊಳ್ಳದಿರುವುದು ಮಾತ್ರ ನಿಜಕ್ಕೂ ವಿಷಾದನೀಯವಾದ ಸಂಗತಿ.

ಹೆಣ್ಣು ಅನ್ನ, ವಸ್ತ್ರ, ವಸತಿ, ರಕ್ಷಣೆಗಾಗಿ ಪುರುಷನನ್ನೇ ಆಶ್ರಯಿಸಬೇಕಾಗಿ ಬಂದು ಗಂಡಿನ ಕೈ ಮೇಲಾಯಿತು. ಈ ಏರುಪೇರಿನಲ್ಲಿ ಕೂಡಾ ಹೆಣ್ಣು ಅನಿವಾರ್ಯವಾಗಿಯಲ್ಲದಿದ್ದರೂ ಸಂದರ್ಭದ ಒತ್ತಡಕ್ಕೆ ಸಿಲುಕಿ ವೇಶ್ಯಾವೃತ್ತಿಗಿಳಿಯಬೇಕಾಯಿತು ಎಂದು ಕೆಲವು ಸಮಾಜ ವಿಜ್ಞಾನಿಗಳು ವಾದಿಸುತ್ತಾರೆ. ಅಂತಸ್ಥಿನ ಜನರು ಹೇಳಿದಲ್ಲಿಗೆ ಹೋಗಿ ಸೇವೆ ಮಾಡಿಕೊಂಡು ಬರುವ ಈ ಸ್ತ್ರೀಯ ಕಾಯಕ ಪ್ರಾಚೀನ ಕಾಲದಿಂದಲೂ ನಡೆದು ಬಂದಿದೆ. 'ಕಟುಕನ ಕೈಗೆ ಕೊರಳನು ಕೊಟ್ಟು ಬಲಿಯಾದ ಕುರಿಯಂತೆ ಈ ಸ್ತ್ರೀಯರು ಅನಿವಾರ್ಯವಾಗಿ ಈ ಪದ್ಧತಿಗೆ ಒಗ್ಗಿದರು. ಮೌನ ಮಲ್ಲಿಗೆಯಾಗಿ ಮೇಲಿನವರಿಗಾಗಿ ಅರಳತೊಡಗಿದರು. ಹೊಟ್ಟೆಪಾಡಿಗಾಗಿ ಸಾಯತೊಡಗಿದರು' ಎಂದು ಚನ್ನಣ್ಣ ವಾಲೀಕರರು.[೫] ಅಭಿಪ್ರಾಯಪಟ್ಟಿದ್ದಾರೆ.

ನಿರಂಜನರ 'ಕೊನೆಯ ಗಿರಾಕಿ' ಕತೆಯಲ್ಲಿ ಹೇಗೆ ಗಿಡುಗವು ಆ ಹೆಣ್ಣನ್ನು ಸತ್ತ ಮೇಲೂ ಬಿಡದೆ ಕುಕ್ಕುತ್ತಾ ಶೋಷಣೆ ಮಾಡುತ್ತಿತ್ತೋ ಹಾಗೆ ಅಮಾಯಕ ಸ್ತ್ರೀಯರನ್ನು ರಾಜಕೀಯ, ಧರ್ಮ, ಅಧಿಕಾರವರ್ಗ, ಶ್ರೀಮಂತವರ್ಗ ಬಳಸಿಕೊಂಡು ಕೊನೆಗೆ ಸಾರ್ವಜನಿಕರ ವೇಶ್ಯೆಯಾಗುವುದನ್ನು ನೋಡುತ್ತಾ ಬಂದಿದ್ದೇವೆ. ತನ್ನ ಹಸಿವನ್ನು ನೀಗಿಸುವ ನಿಟ್ಟಿನಲ್ಲಿ ಹೆಣ್ಣು ಆಹಾರವಾದಳು ಎಂಬುದು ನಿಜಕ್ಕೂ ನಾಗರಿಕ ಸಜ್ಜನರು ತಮ್ಮನ್ನು ತಾವು ಪ್ರಶ್ನೆ ಮಾಡಿಕೊಂಡು ಉತ್ತರವನ್ನು ಕಂಡುಕೊಳ್ಳಬೇಕಾಗಿದೆ.

ಧರ್ಮ ಈ ಎಲ್ಲಕ್ಕೂ ರಕ್ಷಾಕವಚ. ಭಾರತೀಯ ಸ್ತ್ರೀಯರು ದೇವರನ್ನು ನಂಬಿರುವುದೇ ಇಲ್ಲಿ ವರವಾಗುವುದರ ಬದಲು ಶಾಪವಾಗುವುದನ್ನು ಕಂಡಿದ್ದೇವೆ. ಅದರೆ ಕೆಲವು ಪ್ರದೇಶಗಳಲ್ಲಿ ಇನ್ನೂ ಇಂತಹ ಪುರುಷರ ಶೋಷಣೆಯನ್ನು ದೇವರ ವರವೆಂದು ನಂಬಿಕೊಂಡು ಸ್ತ್ರೀಯರಿರುವುದು ವಿಪರ್ಯಾಸ. ದೇವರು, ಧರ್ಮದ ಹೆಸರಿನಲ್ಲಿ ಅವರನ್ನು ಮಾನಸಿಕವಾಗಿ ಕಟ್ಟಿ ಹಾಕುವ ಮತ್ತು ಕಟ್ಟಿ ಹಾಕುತ್ತಿರುವ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಸ್ತ್ರೀ ಅದನ್ನು ಒಪ್ಪಿಕೊಂಡಿರುವುದು ದುರಂತ. ಹೊಟ್ಟೆಪಾಡಿಗಾಗಿ ವೇಶ್ಯಾವೃತ್ತಿಗಿಳಿದವರಿಗೆ ತಾಯ್ತನದ ಬಯಕೆ ಇದ್ದರೂ ಕೂಡಾ ಅದನ್ನು ಅನುಭವಿಸುವಂತಿಲ್ಲ. ಕಾರಣ ಬಸುರಿ, ಬಾಣಂತಿ ಎಂಬ ನೆಪದಲ್ಲಿ ತಿಂಗಳುಗಟ್ಟಲೆ ದುಡಿಮೆ ಇರುವುದಿಲ್ಲ. ಮತ್ತು ಆರೋಗ್ಯ ಹಾಳಾಗುತ್ತದೆ, ಆಕರ್ಷಣೆ

ಕಡಿಮೆಯಾಗುತ್ತದೆ ಎಂಬ ಭಾವನೆ ಬೇರೂರಿದೆ. ಹಸಿದ ಒಡಲನ್ನು ತುಂಬಿಸಿಕೊಳ್ಳುವುದು ಹೇಗೆ? ಎಂಬ ಪ್ರಶ್ನೆ ಉದ್ಭವವಾಗುತ್ತದೆ.

ಅ. ನ. ಕೃ. ರವರು ತಮ್ಮ 'ನಗ್ನ ಸತ್ಯ' ಕಾದಂಬರಿಯಲ್ಲಿ "ವೇಶ್ಯಾ ಸಮಸ್ಯೆಯನ್ನು ಸಾಮಾಜಿಕ, ಕೌಟುಂಬಿಕ ಹಾಗೂ ರಾಷ್ಟ್ರೀಯ ದೃಷ್ಟಿಯಿಂದ ನೋಡಲು ಯತ್ನಿಸಿದ್ದೇನೆ. ಎಲ್ಲಾ ಸಮಸ್ಯೆಗಳ ಮೂಲಾಧಾರವಾಗಿರುವ ಬಡತನ ಮತ್ತು ಹಸಿವನ್ನು ನಿವಾರಿಸಿದರೆ ವೇಶ್ಯಾ ಸಮಸ್ಯೆಯ ಪರಿಹಾರವು ತಕ್ಕ ಮಟ್ಟಿಗೆ ಒದಗುತ್ತದೆ ಎಂದು ಸೂಚಿಸಿದ್ದೇನೆ" ಎಂದಿದ್ದಾರೆ.[೬] ಅಂದರೆ ಅ. ನ. ಕೃ. ರವರ ಪ್ರಕಾರ ಬಡತನ ಮತ್ತು ಹಸಿವಿನ ನಿರ್ಮೂಲನದಿಂದ ವೇಶ್ಯಾ ಸಮಸ್ಯೆಯು ನಿವಾರಣೆಯಾಗುತ್ತದೆ ಎಂಬುದು.

ಆರ್ಥಿಕ ಸಮಸ್ಯೆಗಳು ಬರಗಾಲ, ಬಡತನ, ಹಸಿವು ಇವು ಪುರುಷರನ್ನು ಭಯೋತ್ಪಾದಕರನ್ನಾಗಿ, ಕಳ್ಳರನ್ನಾಗಿ, ದರೋಡೆಕೋರರನ್ನಾಗಿ ಮಾಡಿದರೆ ಸ್ತ್ರೀಯು ವೇಶ್ಯಾವೃತ್ತಿಗೆ ಇಳಿದು ಬಿಡುತ್ತಾಳೆ. ಹೀಗೆ ಅದೆಷ್ಟೋ ಜನ ಆರ್ಥಿಕವಾಗಿ ಅಸಹಾಯಕರಾಗಿರುವವರು ತುತ್ತಿನ ಚೀಲವನ್ನು ತುಂಬಿಕೊಳ್ಳುವುದಕ್ಕಾಗಿ ವೇಶ್ಯಾವೃತ್ತಿಗೆ ಇಳಿದು ಬಿಡುತ್ತಾರೆ. ಶ್ರೀಮತಿ ಗೀತಾ ನಾಗಭೂಷಣರ 'ಹಸಿಮಾಂಸ ಮತ್ತು ಹದ್ದುಗಳು' ಕೃತಿಯಲ್ಲಿ ಹೆಣ್ಣು ಏಕೆ ಅನ್ಯ ಪುರುಷರಿಗೆ ಸೆರಗು ಹಾಸುತ್ತಾಳೆಂಬುದನ್ನು ವಿವರವಾಗಿ ತಿಳಿಸಿದ್ದಾರೆ. ಊರಲ್ಲಿ ಭೀಕರ ಬರಗಾಲ ಪ್ರಾಪ್ತವಾದ ಸಂದರ್ಭದಲ್ಲಿ ಫಕೀರಪ್ಪನ ಮಗಳಾದ ಲಚ್ಚಿಯು ಊರಿನ ಜನ ಗುಳೆ ಹೊರಟರೂ ತಾನು ಮಾತ್ರ 'ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸೀ' ಎಂಬ ವಾಕ್ಯಕ್ಕೆ ಅಂಟಿಕೊಂಡು ಊರಿನಲ್ಲಿಯೇ ಉಳಿಯುತ್ತಾಳೆ. ಆಕೆ ಉಳಿದರೆ ಸಾಕೆ, ಆಕೆಯ ಇರುವಿಕೆಗೆ ಸಾಕ್ಷಿಯಾಗಿರುವ ಜೀವ ಉಳಿಯಬೇಕಲ್ಲ. ಜೀವ ಉಳಿಯಬೇಕಾದರೆ ಅನ್ನ ಬೇಕಲ್ಲ. ಅನ್ನದ ಹಸಿವನ್ನು ನೀಗಿಸಿಕೊಳ್ಳಲು ಊರಿನ ಗುಮಾಸ್ತನಿಗೆ ತನ್ನನ್ನು ಒಪ್ಪಿಸಿಕೊಂಡದ್ದು.

ಆ ಊರಿನ ಉಳಿದ ಹೆಣ್ಣು ಮಕ್ಕಳು ಬೇರೆ ದಾರಿ ಕಾಣದೆ ಸುಲಭವಾಗಿ ಜೀವನ ನಿರ್ವಹಿಸಲು, ಸಿರಿವಂತರಾಗಲು ತಮ್ಮ ಊರಿನ ಸಿರಿವಂತರಿಗೆ ಸೆರಗು ಹಾಸುತ್ತಾರೆ. "ಅನ್ನದೇವರ ಮುಂದೆ ಇನ್ನು ದೇವರುಂಟೆ" ಎಂಬ ಸರ್ವಜ್ಞನ ಮಾತಿನ ತಾತ್ವಿಕ ಸಿದ್ಧಾಂತಕ್ಕೆ ಒಪ್ಪಿಕೊಂಡು ತಮ್ಮ ಶೀಲವನ್ನು ಹರಾಜಿಗಿಡುತ್ತಾರೆ. ಎಳೆ ಹರೆಯದ ಹೆಣ್ಣುಗಳು ತಮ್ಮ ಶೀಲವನ್ನು ಕಳಚಿಕೊಂಡು ಮಾರ್ಕೆಟ್ಟಿನ ಬೀದಿ ಬೀದಿಗಳಲ್ಲಿ ಬೆತ್ತಲಾಗತೊಡಗಿದರು. ಹಳ್ಳಿಯ ಈ ಮುಗ್ಧ ಹೆಣ್ಣುಗಳು ಕೇವಲ ತುತ್ತು ಅನ್ನಕ್ಕಾಗಿ ಸಿರಿವಂತ ಕಾಮುಕ ರಣಹದ್ದುಗಳ ಪೈದಿಗಳಾದರು. ಕಚ್ಚೆ ಹರುಕರ ಕಾಲ ಕೆಳಗೆ ತಮ್ಮನ್ನು ಒಪ್ಪಿಸಿಕೊಂಡರು.

ಆದರೆ ಲಚ್ಚಿ ಮಾತ್ರ ಧೃತಿಗೆಡದೆ ತನ್ನ ಶೀಲವನ್ನು ಉಳಿಸಿಕೊಂಡು ಬದುಕುವ, ಬದುಕಿ ತೋರಿಸುವ ನಿರ್ಧಾರ ತೆಗೆದುಕೊಳ್ಳುತ್ತಾಳೆ. ಕಾರಣ ಪ್ರಿಯಕರನ ಸಹಾಯವನ್ನು ಮನಸಾರೆ ನಂಬಿ ದಿನ ಕಳೆಯುತ್ತಿದ್ದಂತೆ ಹಸಿವಿನಿಂದ ಕಂಗಾಲಾಗಿ ಅನಿವಾರ್ಯವಾಗಿ ಪ್ರಿಯಕರ ಕೆಲಸ ಮಾಡುತ್ತಿದ್ದ ಯಜಮಾನರ ತೋಟದಿಂದ ರಾಮಗುಂಬಳ ತರುತ್ತಿದ್ದಾಗ ಯಜಮಾನ ಕುಲಕರ್ಣಿಯ ಕಣ್ಣಿಗೆ ಬೀಳುತ್ತಾಳೆ. ಲಚ್ಚಿಯನ್ನು ಉಪಯೋಗಿಸಿಕೊಳ್ಳಲು ಮುಂದಾಗುತ್ತಾನೆ. ಮಾನವನ್ನೇ ದೇವರೆಂದು ನಂಬಿರುವ ಲಚ್ಚಿಯಿಂದ ಗೌಡ ತಿರಸ್ಕೃತನಾಗುತಾನೆ. ಹತಾಶನಾದ ಕುಲಕರ್ಣಿ ಸೇಡು ತೀರಿಸಿಕೊಳ್ಳಲು ಈಕೆಯ ಮೇಲೆ ಕಳ್ಳತನದ ಆರೋಪ ಹೊರಿಸಿ

ಪೋಲೀಸರಿಗೆ ಓಡಿದು ಕೊಡುತ್ತಾನೆ. ಅಲ್ಲಿಂದ ಆರಂಭವಾಗುತ್ತದೆ ಲಚ್ಚಿಯನ್ನು ವಿವಿಧ ವರ್ಗದವರು ಹಿಂಡಿ ತಿನ್ನುವ ಕಾರ್ಯ.

ಕಾರಂತರ 'ಕನ್ಯಾಬಲಿ'ಯ ಮಾಲತಿ ಮದುವೆಯೆಂದರೇನು? ಎಂದು ತಿಳಿಯುವ ಮೊದಲೇ ಮದುವೆಯಾಗಿ ಕೆಲವೇ ದಿನಗಳಲ್ಲಿ ಗಂಡನನ್ನು ಕಳೆದುಕೊಂಡಳು. ಅಂತಿಮವಾಗಿ ಸಮಾಜದಿಂದ ತಿರಸ್ಕೃತಳಾದ ಮಾಲತಿ ವಿಧಿಯಿಲ್ಲದೆ ಮನೆ ಬಿಡುತ್ತಾಳೆ. ಮಂಗಳೂರಿನಿಂದ ಮೈಸೂರಿಗೂ, ಮೈಸೂರಿನಿಂದ ಬೆಂಗಳೂರಿಗೂ ಅಲೆಯುತ್ತಾಳೆ. ಈ ಅಲೆದಾಟದಲ್ಲಿ ಎಲ್ಲರೂ ಆಕೆಯನ್ನು ಬಳಸಿಕೊಂಡವರೇ. ಕಾದಂಬರಿಕಾರರು ಹೇಳುವಂತೆ ಈಕೆ ತನ್ನ 'ಅನ್ನಕ್ಕಾಗಿ ಸೂಳೆಯಾದಳು' ಎಂಬಲ್ಲಿ ಹಸಿವು ಎಷ್ಟು ಘೋರವಾದುದು, ತೀವ್ರವಾದುದು ಎಂಬುದು ಅರಿವಾಗುತ್ತದೆ.

ಮಾಲತಿಗೆ ಬೇಕಾದದ್ದು ಒಂದಿಷ್ಟು ಅನ್ನ. ಗಂಡನನ್ನು ಗಂಡ ಎಂದು ತಿಳಿಯುವ ಮೊದಲೇ ವಿಧಿ ಆತನನ್ನು ಕರೆದುಕೊಂಡು ಮೋಸ ಮಾಡಿದೆ. ಉಳಿದವರು ಮಾಡಿದ ಮೋಸ? ಕಾಣದ ಕೈ (ವಿಧಿ) ಒಂದಾದರೆ ಕಾಣಿಸುವ ಕೈಗಳು ನೂರಾರು. ಕೊನೆಯಲ್ಲಿ ಅಣ್ಣನಾದ ಮಹೇಶ ಮಾಲತಿಯನ್ನು ಪತ್ತೆ ಹಚ್ಚಿ ಮನೆಗೆ ಮರಳುವಂತೆ ಮನವೊಲಿಸುತ್ತಾನೆ. ಆಗ ಮಾಲತಿ, 'ಅಣ್ಣ, ನಾನು ವ್ಯಭಿಚಾರಕ್ಕಾಗಿ ಸೂಳೆಯಾಗಲಿಲ್ಲ, ಊಟಕ್ಕಾಗಿ (ಅನ್ನ) ಆದೆ' ಎನ್ನುವಲ್ಲಿ ಹಸಿವಿನ ಸಮಸ್ಯೆ ಮಹಿಳೆಯನ್ನು ನಾನಾ ಅವತಾರಗಳನ್ನು ತಾಳುವ ಹಾಗೆ ಮಾಡಿಬಿಡುತ್ತದೆ.

ಮನೆಯನ್ನು ಬಿಟ್ಟ ಮಾಲತಿಗೆ ಮಾನಕ್ಕಿಂತ ಹಸಿವಿನ ಪ್ರಶ್ನೆಯೇ ಮುಖ್ಯವಾಗುತ್ತದೆ. ಅದು ಸಹಜವೇ. ಹಾಗಾದರೆ ಹೀಗೆ ಹೆಣ್ಣು ತನ್ನ ಶೀಲವನ್ನು ಅಡವಿಟ್ಟೇ ಹೊಟ್ಟೆ ಹೊರೆದುಕೊಳ್ಳುವ (ಅನ್ನ ಸಂಪಾದಿಸುವ) ಸ್ಥಿತಿಯನ್ನು ಈ ಸಮಾಜ ಸೃಷ್ಟಿ ಮಾಡಿ ಬಿಟ್ಟಿದೆಯೇ? ಮಾಲತಿ ಬೇರೆ ದಾರಿ ಕಾಣದೆ ತನ್ನ ಶೀಲವನ್ನು ಮಾರಿ ಜೀವನ ನಿರ್ವಹಿಸುತ್ತಾಳೆ ಅಂದರೆ ಆರ್ಥಿಕ ಅಸಹಾಯಕತೆ ಇಂತಹ ಎಷ್ಟೋ ಹೆಣ್ಣುಗಳನ್ನು ಅತಂತ್ರಗೊಳಿಸಿಬಿಡುತ್ತದೆ.

ವೇಶ್ಯಾವೃತ್ತಿಗೆ ಸಾಮಾಜಿಕ ವ್ಯವಸ್ಥೆಯಲ್ಲಿ ಆರ್ಥಿಕ ಅಸಮಾನತೆಯೇ ಕಾರಣವಾಗುತ್ತದೆ. ಬಡತನವನ್ನು ಮೆಟ್ಟಿ ನಿಲ್ಲಬೇಕು. ಹಸಿವಿನ ಸಮಸ್ಯೆಯಿಂದ ಶಾಶ್ವತ ಪರಿಹಾರವನ್ನು ಕಂಡುಕೊಳ್ಳುವುದಕ್ಕೋಸ್ಕರ ವಿಧಿಯಿಲ್ಲದೆ ವೇಶ್ಯಾವೃತ್ತಿಯೆಡೆಗೆ ಮುಖ ಮಾಡಬೇಕಾಗುತ್ತದೆ. ಹಸಿವು ಮತ್ತು ಬಡತನ ಹೆಣ್ಣನ್ನಾಗಲೀ, ಗಂಡನ್ನಾಗಲೀ ಅಡ್ಡದಾರಿ ಹಿಡಿಯುವಂತೆ ಮಾಡಿಬಿಡುತ್ತದೆ.

ಒಬ್ಬೊಬ್ಬರೂ ಈ ಸಮಾಜದ ಅನಿಷ್ಟ ಪೀಡೆಗಳನ್ನು ಮೆಟ್ಟಿ ನಿಲ್ಲಬೇಕೆನ್ನುವ ದಿಸೆಯಲ್ಲಿದ್ದು ಅನಂತರ ಇವರೇ ಅನಿಷ್ಟ ಪೀಡೆಯಾಗುವುದು ಇಂದಿನ ಸಾಮಾಜಿಕ ಅವ್ಯವಸ್ಥೆಗೆ ಮತ್ತು ಶೋಷಣೆಗೆ ಸಾಕ್ಷಿಯಾಗುತ್ತದೆ. ಎಲ್ಲವೂ ಹೊಟ್ಟೆಗಾಗಿ, ಬದುಕಿನ ಬೇಕು-ಬೇಡಗಳ ನಡುವೆ ಇವರಿಗೆ ಸ್ವಾತಂತ್ರ್ಯವೇ ಇಲ್ಲ. ಹೆಣ್ಣುಗಳಿಗೆ ಕೊನೆಯಲ್ಲಿ ಇರುವ ಆಸ್ತಿಯೆಂದರೆ ಅವರ ಶೀಲವೇ. ಇದೇ ಹೆಣ್ತನದ ಶಾಪವಾಗಿರುವುದು ಕೂಡಾ ವಿಪರ್ಯಾಸ. ದಯ ದಾಕ್ಷಿಣ್ಯವಿಲ್ಲದ ಈ ಪುರುಷ ಸಮಾಜ ಹಂತ ಹಂತವಾಗಿ ಈಕೆಯನ್ನು ಸುಲಿಯುವುದನ್ನು ನೋಡುತ್ತೇವೆ. ಎಲ್ಲವೂ ಹಣಕ್ಕಾಗಿ,

ಹಣದ ಋಣಕ್ಕಾಗಿ. ಆರ್ಥಿಕ ಅಭದ್ರತೆ ಇಂತಹ ಸ್ಥಿತಿಗೆ ತಂದೊಡ್ಡುತ್ತದೆ. ಇವರ ಧರ್ಮದ ಮುಂದೆ ಮಾನವೀಯ ಧರ್ಮ ಮೂಲೆಗುಂಪಾಗಿರುವುದು ಶೋಚನೀಯ.

ಬಸವರಾಜ ಕಟ್ಟೀಮನೆಯವರ 'ನೀ ನನ್ನ ಮುಟ್ಟಬೇಡ' ಕೃತಿಯಲ್ಲಿ ಹೊಲೆಯರ ಹೆಣ್ಣು ಶಿವಗಂಗೆ ಅತ್ಯಂತ ಕಡು ಬಡತನದವಳು. ಕೂಲಿ ಮಾಡಿ ಜೀವಿಸುವ ಈ ವರ್ಗಕ್ಕೆ ಮಳೆಗಾಲದಲ್ಲಿ ಇದೂ ಸಿಗುತ್ತಿರಲಿಲ್ಲ. ಎರಡು ಮೂರು ದಿನದವರೆಗೆ ಉಪವಾಸ ಇರಬೇಕಾಗುತ್ತಿತ್ತು. ದೊಡ್ಡವರು ಸಣ್ಣವರು ಅದನ್ನೇ ಹಂಚಿಕೊಂಡು ಜೀವ ಉಳಿಸಿಕೊಳ್ಳುತ್ತಿದ್ದರು. 'ಸೂಳೆಗಾರಿಕೆ ಮಾಡುತ್ತಿದ್ದ ಹೆಂಗಸರಿಗೆ ಮತ್ತು ಅವರ ಕುಟುಂಬದ ಸದಸ್ಯರಿಗೆ ತೊಂದರೆಯಾಗುತ್ತಿರಲಿಲ್ಲ. ಉಪವಾಸ, ವನವಾಸ, ಕಾಯಿಲೆ, ಕಸಾಲೆಗಳಿಂದ ಎಲುಬಿನ ಗೂಡುಗಳಂತಾದ ಆ ಬಡ ಸ್ತ್ರೀಯರನ್ನು ಇಟ್ಟುಕೊಳ್ಳುವವರಾದರೂ ಯಾರು? ಅವರ ಪಾಲಿಗೆ ಮತ್ತೆ ಉಪವಾಸವೇ ಬರುತ್ತಿತ್ತು. ಮಕ್ಕಳು ಹುಟ್ಟುತ್ತಿದ್ದವು, ಸಾಯುತ್ತಿದ್ದವು. ಬದುಕಿರುವವರು ಸತ್ತವರಂತೆ ಕಾಣುತ್ತಿದ್ದರು.

ಸ್ತ್ರೀಯರು ಅನ್ನಕ್ಕಾಗಿ, ಹಣಕ್ಕಾಗಿ, ದೈಹಿಕ ಚಪಲಕ್ಕಾಗಿ, ಸೇಡಿಗಾಗಿ ಹೀಗೆ ಯಾವುದೋ ಒಂದು ಬಗೆಯ ಕಾರಣಕ್ಕಾಗಿ ಯಾರದೋ ಕೈಗೊಂಬೆಯಾಗಿ ಯಾರದೋ ಋಣವನ್ನು ತೀರಿಸಲಿಕ್ಕಾಗಿ ಮುಲಾಜಿಗೆ ಕಾಲಿಡುತ್ತಾರೆ. ಈ ಕಥೆ–ಕಾದಂಬರಿಗಳು ವೇಶ್ಯೆಯರ ದಾರುಣತೆಯನ್ನೋ, ಜೀವನಕ್ರಮವನ್ನೋ ಬಿಂಬಿಸುತ್ತವೆಯೇ ಹೊರತು ಪರಿಹಾರ ಕಂಡುಕೊಳ್ಳುವಲ್ಲಿ, ಹುಡುಕುವಲ್ಲಿ ವಿಫಲವಾಗಿ ಬಿಡುತ್ತವೆ.

ಹಸಿವೆಯ ಕಾರಣದಿಂದ ಬಳಲುವವರ ಬಗ್ಗೆ ಅನುಕಂಪಕ್ಕಿಂತ ಪರಿಹಾರ ಬೇಕಾಗಿದೆ. ಅದಕ್ಕೆಂದೇ "ಹಾರೈಸುವ ಕೈಗಳಿಗಿಂತ ನೀಡುವ ಕೈಗಳು ಹೆಚ್ಚು ಶ್ರೇಷ್ಟ" ಎಂದಿರುವುದು. ಹಸಿದವರಿಗೆ ಬೇಕಾಗಿರುವುದು ಅನ್ನವೇ ಹೊರತು ನಮ್ಮ ಅನುಕಂಪವಲ್ಲ. ಅನುಕಂಪದಿಂದ ಹೊಟ್ಟೆ ತುಂಬುವುದೂ ಇಲ್ಲ. ಗಾಯಗೊಂಡವರಿಗೆ ಮುಲಾಮಿನ (ಚಿಕಿತ್ಸೆಯ) ಅವಶ್ಯಕತೆಯಿರುವುದೇ ಹೊರತು ಸಾಂತ್ವನದ ಮಾತುಗಳಲ್ಲ. ಸಾಂತ್ವನದ ಮಾತುಗಳು ಗಾಯದ ಮೇಲೆ ಉಪ್ಪು ಸವರಿದಂತೆ ನೋವನ್ನು ಹೆಚ್ಚಿಸುತ್ತವೆ. ಚಿಕಿತ್ಸೆಯ ನಂತರ ಸಾಂತ್ವನದ ಮಾತುಗಳು ಹಿತವೆನ್ನಿಸುತ್ತವೆ.

ದಾರಿದ್ರ್ಯದಿಂದ ಅನ್ನವನ್ನೇ ಕಾಣದ ಮಹಿಳೆಗೆ ಪುರುಷನಾದವನು ನಾ ನಿನಗೆ ಅನ್ನ ಕೊಡುತ್ತೇನೆ (ಹಸಿವನ್ನು ನೀಗಿಸುತ್ತೇನೆ) ನೀ ನನ್ನ ಕಾಮದ ಹಸಿವನ್ನು ನೀಗಿಸು (ಮೈ ನೀಡು) ಎಂದರೆ ಆ ಹೆಣ್ಣು ಅನ್ನ ಪಡೆದದ್ದಕ್ಕಾಗಿ ಮುಲಾಜಿಲ್ಲದೆ ತನ್ನ ದೇಹವನ್ನು ಒಪ್ಪಿಸಬೇಕಾಗಿರುವುದು ಈ ಸಮಾಜದ ದುರ್ದೈವವೇ ಸರಿ. ಸಮಾಜ ಹೆಣ್ಣನ್ನು ನೋಡುವ ದೃಷ್ಟಿಕೋನ ಮೊದಲು ಬದಲಾಗಬೇಕು. ತಾಯಿಯಾಗಿ, ಪತ್ನಿಯಾಗಿ, ಮಗಳಾಗಿ, ಸೊಸೆಯಾಗಿ ಈ ಸಮಾಜವನ್ನು ಪೊರೆಯುತ್ತಿರುವ ಹೆಣ್ಣು ಈ ಸಮಾಜದ ಕಣ್ಣು ಎಂದು ಭಾವಿಸಬೇಕು.

ಹೆಣ್ಣಿನ ಉದರದ ಹಸಿವನ್ನು ಪರಿಹರಿಸುವುದಕ್ಕೆ ಪ್ರತಿಯಾಗಿ ಪ್ರತಿಫಲವನ್ನು ಪಡೆಯಲೇಬೇಕೆಂದರೆ ಸಮಾಜಕ್ಕೆ ಮಾದರಿಯಾಗಬಲ್ಲ, ಆಕೆಯ ಗುಣಶೀಲಕ್ಕೆ ಧಕ್ಕೆಯಾಗದ ರೀತಿಯಲ್ಲಿ ಅವಳಿಂದ ದುಡಿಸಿಕೊಳ್ಳಬಹುದಲ್ಲ. ದೇಹವನ್ನೇ ಒಡ್ಡಲು ಮುಂದಾದವಳು

ದುಡಿಯಲು ಒಲ್ಲೆ ಎನ್ನುತ್ತಾಳೆಯೇ? ಹೆಣ್ಣನ್ನು ಹೆಣ್ಣಾಗಿ ನೋಡದೆ ಅವಳದು ನಮ್ಮಂತೆ ಒಂದು ಜೀವ, ನಮ್ಮ ಹಾಗೆ ಸರ್ವ ಸ್ವತಂತ್ರಳು, ನಮಗೂ ಸರಿಸಾಟಿ ಎಂದು ಆಕೆಯನ್ನು ಗೌರವಿಸಬೇಕು ಎಂಬುದು ಎಲ್ಲರ ಮನದಲ್ಲಿ ಬರಬೇಕು.

ಬಡತನ, ಹೊಟ್ಟೆಗಿಲ್ಲವೆಂದು ಸಂಪಾದಿಸುವ ಕೂಲಿ ಸಾಲದೆಂದು ವೇಶ್ಯಾವೃತ್ತಿಗೆ ಇಳಿಯುವವರು ಆಲಸ್ಯ ಬಿಟ್ಟು ಜೀವನದ ಅತೀ ಲಾಲಸೆಯಿಂದ ಮುಕ್ತರಾಗಿ ದುಡಿದೇ ಅರ್ಥಪೂರ್ಣ ಜೀವನ ನಡೆಸಬಹುದೆಂಬುದನ್ನು ಮೊದಲು ಅರಿತುಕೊಂಡು ಸ್ವಯಂ ಜಾಗೃತರಾಗಬೇಕಾದುದು ಅಗತ್ಯ.

'ನಗ್ನ ಸತ್ಯ' ಕಾದಂಬರಿಯ ಮುನ್ನುಡಿಯಲ್ಲಿ ಅ. ನ. ಕೃ. ರವರು "ವೇಶ್ಯಾ ಸಮಸ್ಯೆಯನ್ನು ಸಾಮಾಜಿಕ, ಕೌಟುಂಬಿಕ ಹಾಗೂ ರಾಷ್ಟ್ರೀಯ ದೃಷ್ಟಿಯಿಂದ ನೋಡಲು ಯತ್ನಿಸಿದ್ದೇನೆ. ಎಲ್ಲಾ ಸಮಸ್ಯೆಗಳ ಮೂಲಾಧಾರವಾಗಿರುವ ಬಡತನ ಮತ್ತು ಹಸಿವು ನಿವಾರಣೆಯಾದರೆ ವೇಶ್ಯಾ ಸಮಸ್ಯೆಗೆ ಪರಿಹಾರವು ತಕ್ಕಮಟ್ಟಿಗೆ ಒದಗುತ್ತದೆ ಎಂದು ಸೂಚಿಸಿದ್ದೇನೆ" ಎನ್ನುತ್ತಾರೆ. ಆದರೆ ಬಡತನ ಮತ್ತು ಹಸಿವಿನ ಸಮಸ್ಯೆಯನ್ನು ಸಮಸ್ಯೆಯನ್ನಾಗಿಯೇ ಬಿಟ್ಟು ಬಿಡುತ್ತಾರೆ. ಕಾದಂಬರಿಯಲ್ಲಿ ಸಮಸ್ಯೆಯ ಸುಳಿಗೆ ಸಿಕ್ಕು ಒದ್ದಾಡುವ ಪಾತ್ರಗಳನ್ನು ಸಾಯಿಸುವುದರ ಮೂಲಕ ಓದುಗನಿಗೆ ಅನುಕಂಪ ಹುಟ್ಟುತ್ತದೆಯೇ ವಿನಃ ಪರಿಹಾರ ಸಿಗುವುದಿಲ್ಲ.

ಬಸವರಾಜ ಕಟ್ಟಿಮನಿಯವರ 'ಬೀದಿಯಲ್ಲಿ ಬಿದ್ದವಳು' ಕೃತಿಯಲ್ಲಿನ ಹಳ್ಳಿಯ ಬಡ ಹುಡುಗಿ ಯಮುನೆ ತನ್ನ ಇಚ್ಛೆಗೆ ವಿರುದ್ಧವಾಗಿ ಸೂಳೆಯಾಗಬೇಕಾದ ಪ್ರಸಂಗ ಬರುತ್ತದೆ. ಯಮುನೆಯ ದಾರುಣತೆಯನ್ನು ಕೇಳಿ ಮಲ್ಲಿ, "ಈ ಗೌಡರು, ಸಾಹುಕಾರರು ಇವರನ್ನೆಲ್ಲಾ ಕೂಲಿ ಕೆಲಸಕ್ಕೆ ಹಚ್ಚಬೇಕು. ಸರಕಾರ ಇವರ ಹೊಲ ಮನೀ ಎಲ್ಲಾ ಕಸಗೊಳ್ಳಬೇಕು. ಬಡವರನ್ನ ಕಾಡಿಸೋದನ್ನ ಆಗಲಾದರೂ ಬಿಟ್ಟಾರೇನೋ? ಇವರಿಗೆ ಈ ಉದ್ಯೋಗ ಇಲ್ಲದ್ದಕ್ಕೆ ಪುಂಡ ತನಾನೇ ಒಂದು ಉದ್ಯೋಗ ಆಗ್ಯೆತಿ. ಇವರಿಗೆ ನಮ್ಮಂಥವರೆಲ್ಲ ಸೂಳೆಯಾಗಿ ಬಾಳುವೆ ಮಾಡುವುದಕ್ಕೂ ಇಂಥ ಮಂದೀನೇ ಮೂಲ ಆಗುತ್ತಾರೆ" ಎಂದು ಸಮಾಜ ಸುಧಾರಕರ ಧಾಟಿಯಲ್ಲಿ ಆಡುವ ಮಾತುಗಳು ಕೃತಕವೆನ್ನಿಸಿದರೂ ಸಮಾಜದ ಒಂದು ವರ್ಗದ ಮೇಲಿರುವ ರೋಷ ಗೊತ್ತಾಗುತ್ತದೆ ಮತ್ತು ಸದಾ ಒಂದು ವರ್ಗ ಶತಶತಮಾನಗಳಿಂದಲೂ ಇನ್ನೊಂದು ವರ್ಗ ಮಾಡುತ್ತಿದ್ದ ಶೋಷಣೆಯನ್ನು ಸಹಿಸಿಕೊಂಡು ಬಡತನ ಮತ್ತು ಹಸಿವಿನ ಸಮಸ್ಯೆಯಿಂದ ನರಳುತ್ತಿರುವುದನ್ನು ಕಾಣಬಹುದಾಗಿದೆ.

ಬಡತನದ ಹೀನತೆಯಿಂದ ಅನುಭವಿಸುವ ಹಸಿವಿನಂತಹ ಗಂಭೀರ ಸಮಸ್ಯೆಯನ್ನು ಪುರುಷ ಲೇಖಕರು ನೋಡುವ ದೃಷ್ಟಿಕೋನಕ್ಕೂ ಮಹಿಳಾ ಲೇಖಕಿಯರು ನೋಡುವ ದೃಷ್ಟಿಕೋನಕ್ಕೂ ವ್ಯತ್ಯಾಸವಿದೆ. ಉದಾಹರಣೆಗೆ, ಒಂದು ಹೆಣ್ಣಿನ ಪ್ರಸವ ವೇದನೆಯನ್ನು ಪುರುಷನಿಗಿಂತ ಮಹಿಳೆ ಹೆಚ್ಚು ಸ್ಪಷ್ಟವಾಗಿ ಮತ್ತು ವಾಸ್ತವದ ನೆಲೆಯಲ್ಲಿ ಕಟ್ಟಿಕೊಡಬಲ್ಲಳು. ಅದು ಸ್ವತಃ ಅನುಭವದ ಗ್ರಹಿಕೆಯ ನೆಲೆಯಲ್ಲಿ ಆಗಬಲ್ಲದು. ಕೈಯನ್ನು ಕಳೆದುಕೊಂಡವನ ಬದುಕನ್ನು ಕೈ ಇದ್ದವನು ವರ್ಣಿಸುವುದು ಹೇಗೆ ಅಸಹಜವೋ ಹಾಗೆ.

"ಹಸಿವು", ಬಡತನ, ನಿರುದ್ಯೋಗ, ಕೈಗಾರೀಕೀಕರಣ, ನಗರೀಕರಣ ಮುಂತಾದವು ಮಹಿಳೆಯರು ವೇಶ್ಯಾವೃತ್ತಿಗೆ ಇಳಿಯಲು ಪ್ರಬಲವಾದ ಅವ್ಯಕ್ತ ಕಾರಣಗಳೆಂದು ಅನೇಕ ಸಮೀಕ್ಷೆ ಹಾಗೂ ಅಧ್ಯಯನಗಳಿಂದ ಖಚಿತವಾಗಿ ತಿಳಿದುಬಂದಿದೆ. ಅಸಹಾಯಕ ಹೆಂಗಸರಿಗೆ ವೇಶ್ಯಾವೃತ್ತಿಯು ಸುಲಭ ಜೀವನೋಪಾಯವಾಗಿದೆ" ಎಂದು ವಿಶ್ವನಾರಾಯಣರವರ 'ಸಾಮಾಜಿಕ ವಿಘಟನೆ' ಪುಸ್ತಕದ ಪುಟಸಂಖ್ಯೆ ೨೦೭ರಲ್ಲಿ ಉಲ್ಲೇಖವಾಗಿದೆ.

ಹೀಗೆ ವೇಶ್ಯಾವೃತ್ತಿಯಲ್ಲಿರುವವರು ತಮ್ಮ ತಮ್ಮ ಮಕ್ಕಳನ್ನು ಈ ವೃತ್ತಿಯಿಂದ ಮೇಲೆತ್ತದೆ ಪುನಃ ಒತ್ತಾಯಿಸುವುದನ್ನು ನೋಡುತ್ತೇವೆ. ಒಂದು ಕಡೆ ನೋವು, ಬೇಸರ, ಅಯ್ಯೋ ಎನಿಸಿದರೂ ಇನ್ನೊಂದು ಕಡೆ ಪ್ರತಿಯೊಬ್ಬ ತಾಯಿಯ ದುರ್ಬಲ ಮನಸ್ಥಿತಿಯ ಜೊತೆಜೊತೆಗೆ ಅದರ ಹಿಂದಿರುವ ಸಾಮಾಜಿಕ, ಆರ್ಥಿಕ, ಧಾರ್ಮಿಕ, ರಾಜಕೀಯ ಕಾರಣಗಳು ಅವರನ್ನು ಪರೋಕ್ಷವಾಗಿ ಒತ್ತಾಯಿಸುತ್ತಿರುತ್ತವೆ ಎಂಬ ವಾಸ್ತವತೆಯನ್ನು ಅರ್ಥಮಾಡಿಕೊಳ್ಳಬೇಕಾಗಿದೆ.

ಪಾಶ್ಚಾತ್ಯ ಮತ್ತು ಪೌರಾತ್ಯ ರಾಷ್ಟ್ರಗಳಿಗಿರುವ ಮುಖ್ಯವಾದ ಅಂತರ ಸಂಸ್ಕೃತಿ. ಸಂಸ್ಕೃತಿಯ ಮೂಲಕ ಆಯಾ ದೇಶಗಳು ಪ್ರಪಂಚದಲ್ಲಿ ಗುರುತಿಸಿಕೊಂಡಿವೆ. ಅದರಲ್ಲಿಯೂ ಭಾರತದಂತಹ ದೇಶಗಳು ಇಂದಿಗೂ ಭಾವನಾತ್ಮಕ ನೆಲೆಗಟ್ಟಿನಲ್ಲಿಯೇ ಬದುಕುವುದರಿಂದ ಸಂಬಂಧಗಳ ಗಟ್ಟಿತನವನ್ನು ಉಳಿಸಿಕೊಂಡಿವೆ.

ಈ ಹಿನ್ನೆಲೆಯಲ್ಲಿ ಕುಟುಂಬವು ಅತ್ಯಂತ ಮೂಲಭೂತವಾದ ಹಾಗು ಚಿಕ್ಕದೂ ಆದಂಥ ಸಾಮಾಜಿಕ ಸಂಸ್ಥೆ. ಸಾಮಾನ್ಯವಾಗಿ ಪ್ರತಿಯೊಬ್ಬ ವ್ಯಕ್ತಿಯೂ ಕುಟುಂಬದ ವ್ಯವಸ್ಥೆಯೊಳಗೆ ಜನಿಸುತ್ತಾನೆ ಅಥವಾ ಜನಿಸುತ್ತಾಳೆ. ವ್ಯಕ್ತಿಗೆ ದೊರೆಯುವ ಸಾಮಾಜಿಕ ಪರಿಸರ ಕುಟುಂಬದ್ದೇ ಆಗಿದ್ದು ಆತ ಅಥವಾ ಆಕೆಯ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಕುಟುಂಬ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಹೀಗಿರುವಾಗ ಒಮ್ಮೆಲೇ ಮಕ್ಕಳು, ಅದರಲ್ಲಿಯೂ ಹೆಣ್ಣು ಮಕ್ಕಳು ತಂದೆ-ತಾಯಿಯರಿಂದ ನಿರ್ಗತಿಕರಾದರೆ (ಬೇರ್ಪಟ್ಟರೆ) ಅವರ ಕೋಮಲ ಮನಸ್ಸಿನ ಮೇಲೆ ಬೀರುವ ಪರಿಣಾಮಗಳಾವುವು ಮತ್ತು ಆ ಸಂದರ್ಭದಲ್ಲಿ ಅವರ ಮಾನಸಿಕ ಸ್ಥಿತಿ ಹೇಗಿರುತ್ತದೆ? ಈ ನಿರ್ಗತಿಕತನವೇ ಅವರನ್ನು ಅಸಹಾಯಕರನ್ನಾಗಿಸುತ್ತದೆ. ಈ ಅಸಹಾಯಕತೆಯಲ್ಲಿ ಹಸಿವನ್ನು, ನೀರಡಿಕೆ, ನಿದ್ದೆಯಂತಹ ಜೈವಿಕ ಅವಶ್ಯಕತೆಗಳ ಪೂರೈಕೆಗಾಗಿ ದಾರಿ ಕಾಣದೆ ವೇಶ್ಯಾವೃತ್ತಿಗೆ ಇಳಿಯುವಂತೆ ಮಾಡಿ ಬಿಡುತ್ತದೆ.

೫.೨ ಹಸಿವಿನ ನಿವಾರಣೆಗೆ ಪುರುಷ ಕಂಡುಕೊಂಡ ದಾರಿ

ಹಸಿವು ಇದ್ದಾಗ ಅನ್ನವೇ ದೇವರಾಗಿ ಕಾಣುವುದು. ಹಸಿವು ಮನುಷ್ಯನಿಗೆ ತಗ್ಗಿಬಗ್ಗಿ ನಡೆಯುವುದನ್ನು ಸಹ ಕಲಿಸುತ್ತದೆ. ತುಂಬಿದ ಹೊಟ್ಟೆ ಅನೇಕ ಆಟಗಳನ್ನು ಆಡಿಸಿದರೆ ಹಸಿವು ಅನೇಕ ಪಾಠಗಳನ್ನು ಕಲಿಸುತ್ತದೆ. ಹಸಿವಿನ ನೋವಿಗೆ ಸಮಾನವಾದ ನೋವು ಯಾವುದೂ ಇಲ್ಲ. ಹಸಿವು ಎಂಬುದು ಹಸಿವಿನಿಂದ ಕಂಗೆಟ್ಟಿರುವ ಮನುಷ್ಯನ ತೀವ್ರತರವಾದ ಯಾತನೆ. ಹಸಿವಿನ ನಿವಾರಣೆಗೆ ಸರ್ಕಾರ, ವಿದೇಶೀ/ದೇಶೀಯ ಚಿಂತಕರು ಸಹ ಪ್ರಯತ್ನಿಸಿ ಹಲವು ಯೋಜನೆಗಳನ್ನು ರೂಪಿಸಿ ಕೊಟ್ಟಿದ್ದಾರೆ. ಆದರೆ ಕೆಲವೊಂದು ಬಾರಿ ಈ ಯೋಜನೆಗಳು ಮುಟ್ಟಬೇಕಾದವರನ್ನು ಮುಟ್ಟದೆ ಹೋಗಬಹುದು. ಇಂಥ ಯೋಜನೆಗಳು ತಲುಪದಿರುವಂಥ

ಸ್ಥಿತಿಯಲ್ಲಿ ಮಹಿಳೆ ಒಂದು ರೀತಿಯಲ್ಲಿ ತನ್ನ ಹಸಿವನ್ನು ನಿವಾರಿಸಿಕೊಳ್ಳಲು ಪ್ರಯತ್ನಿಸಿದರೆ ಪುರುಷ ಇನ್ನೊಂದು ಮಾರ್ಗದಲ್ಲಿ ಹಸಿವನ್ನು ಈಡೇರಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಕನಕದಾಸರು "ಎಲ್ಲಾರು ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ" ಎಂದು ಹೇಳಿರುವುದು ಅದಕ್ಕಾಗಿಯೇ. 'ಉದರನಿಮಿತ್ಥಂ ಬಹುಕೃತ ವೇಷಂ', ಹೊಟ್ಟೆಪಾಡಿಗಾಗಿ ಮನುಷ್ಯ ನಾನಾ ವೇಷಗಳನ್ನು ತಾಳುತ್ತಾನೆ. ಕೊಲೆ, ಸುಲಿಗೆ, ದರೋಡೆ, ಕಳ್ಳತನ, ಮೋಸ, ವಂಚನೆಯಂಥ ದುಷ್ಕೃತ್ಯಗಳಿಗೆ ಕಾರಣ ಈ ಹಸಿವೆಯೇ ಆಗಿದೆ. 'ಒಡಲಾಳ' ಕಥೆಯಲ್ಲಿನ ಕಡಲೆಕಾಯಿ ಪ್ರಸಂಗದಿಂದ ಇದನ್ನು ಮನಗಾಣಬಹುದು. ಸುಳ್ಳು ಹೇಳಿಯಾದರೂ ತನ್ನ ಹಸಿದ ಹೊಟ್ಟೆಯನ್ನು ತುಂಬಿಸಿಕೊಳ್ಳಲು ಪ್ರಯತ್ನಿಸುವುದು ಅಚ್ಚರಿಯೆನಿಸಿದರೂ ಅವನಿಗೆ ಏನೂ ಅನ್ನಿಸುವುದಿಲ್ಲ. ಆ ಕ್ಷಣಕ್ಕೆ ಆತನಿಗೆ ತಾನು ಮಾಡಿದ್ದೇ ಸರಿ ಎಂಬ ಭಾವನೆ. ಹಸಿದವರು ನೇರವಾಗಿ ಹೊಟೇಲ್‌ಗೆ ಹೋಗಿ ಹೊಟ್ಟೆ ತುಂಬುವಷ್ಟು ತಿಂದು ಬಿಲ್ ಎಂದ ಕೂಡಲೇ ಕಕ್ಕಾಬಿಕ್ಕಿಯಾಗಿ ಕೊಡಲು ಹಣವಿಲ್ಲದೆ ಕೊನೆಗೆ ತಿಂದ ಅನ್ನಕ್ಕೆ ಪ್ರಾಯಶ್ಚಿತ ರೂಪವಾಗಿ ಅಲ್ಲಿ ಪಾತ್ರೆ ತೊಳೆದು, ಹಿಟ್ಟು ರುಬ್ಬಿಯೋ, ಹೊಟೇಲ್‌ನ ಚಾಕರಿ ಮಾಡುತ್ತಾರೆ. ಕೆಲವರು ರಕ್ತದಾನ ಮಾಡಿ ಹಸಿದ ಹೊಟ್ಟೆಯನ್ನು ತುಂಬಿಸಿಕೊಂಡರೆ, ಕೆಲವರು ದೇಹದ ಅಂಗಾಂಗಗಳನ್ನೇ ಮಾರಿಕೊಳ್ಳುವುದು ಉಂಟು. ಹೀಗೆ ಪುರುಷರು ಗೊತ್ತಿದ್ದೋ ಅಥವಾ ತಿಳಿಯದೆಯೋ ಹಸಿದ ಹೊಟ್ಟೆಯನ್ನು ತುಂಬಿಸಿಕೊಳ್ಳುವುದು ವಿಚಿತ್ರವೆನಿಸಿದರೆ ಅದು ಅವರಿಗೆ ಅನಿವಾರ್ಯ. ಅನ್ನ, ಅನ್ನ ಎಂದು ಹಸಿದವರು ಬೇಡುವಾಗ ಕಿವಿ ಕೇಳದವರ ಗಮನವನ್ನು ಸೆಳೆಯುವುದಕ್ಕಾದರೂ ಹಸಿದ ಬಡ ಜೀವಗಳು ಅನುಸರಿಸುವ ಕ್ರಮ ನಿಜಕ್ಕೂ ನಾಗರಿಕ ಸಮಾಜವೇ ತಲೆತಗ್ಗಿಸುವಂಥದ್ದು. ಕುವೆಂಪು ಹೇಳುವ ಸರ್ವರಿಗೆ ಸಮಪಾಲು; ಸರ್ವರಿಗೆ ಸಮಬಾಳು ಸಿಕ್ಕಾಗ ಮಾತ್ರ ಎಲ್ಲರೂ ಸಂತೋಷದಿಂದಿರಲು ಸಾಧ್ಯ. ಹೊಟ್ಟೆ ತುಂಬಾ ಅನ್ನ, ಕೈತುಂಬಾ ಕೆಲಸವಿದ್ದಾಗ ಹಸಿದ ಬಡವರು ಬೇರೆ ಯಾವ ರೀತಿಯ ದುಷ್ಕೃತ್ಯಗಳನ್ನು ಮಾಡಲು ಮನಸ್ಸು ಮಾಡುವುದಿಲ್ಲ. ಹಸಿದ ಹೊಟ್ಟೆಗೆ ಮೊದಲು ಅನ್ನ ಕೊಡಬೇಕು. ಅನ್ನವೇ ಎಲ್ಲ, ಅನ್ನವೇ ದೇವರು.

೫.೩ ಹಸಿವಿನ ನಿವಾರಣೆಗೆ ಚಿಂತಕರು ಸೂಚಿಸಿದ ಕ್ರಮಗಳು

ನೂರಾರು ವರ್ಷಗಳಿಂದಲೂ ದಾರಿದ್ರ್ಯ, ಅಸಮಾನತೆ, ಅಜ್ಞಾನ, ಮೂಢ ನಂಬಿಕೆಗಳ ಕೈಂಕರ್ಯಕ್ಕೆ ಬಲಿಯಾಗಿ ಬೆಂಡಾಗಿರುವ, ನೋವಿನಿಂದ ಬಳಲುತ್ತಿರುವ ಹಿಂದುಳಿದ ಜನಾಂಗ ಭಾರತದಲ್ಲಿ ಅಧಿಕವಾಗಿದೆ. ಜಾತಿ-ಧರ್ಮ-ವರ್ಗಗಳ ವಿಷಮತೆಗಳ ಬಲಾತ್ಕಾರಗಳಿಂದ ಬಂಧಿತರಾದ ಭಾರತದ ಜನಕೋಟಿಯ ಕಷ್ಟವನ್ನು ಪರಿಹರಿಸಲು ಅನೇಕ ದಾರ್ಶನಿಕರು, ವಿಚಾರವಾದಿಗಳು, ಸುಧಾರಣಾವಾದಿಗಳು ನಿರಂತರವಾದ ಇನ್ನಿಲ್ಲದ ಪ್ರಯತ್ನಗಳನ್ನು ಮಾಡುತ್ತಲೇ ಬಂದಿದ್ದಾರೆ. ದೈನಂದಿನ ಬದುಕಿನ ದುಃಖದಲ್ಲಿ ಒಂದೋ ಎರಡೋ ಅಪರೂಪದ ಪರಿಹಾರ ಕಂಡಿರಬಹುದು. ಈ ಪ್ರಯತ್ನ ಯಾತನಾಮಯವಾದ ಬದುಕಿನಲ್ಲಿ ಹೊಸ ಬೆಳಕಾಗಿ ಕಂಡಿರಬಹುದು. ನಿರಂತರವಾಗಿ ತುಳಿಯುತ್ತಿರುವವರ ಬಿಗಿಹಿಡಿತದಲ್ಲಿ ಇದೂ ಒಂದು ಸಾಧನವಾಗಿ ಹೋಗುವ ಅಪಾಯವಿದೆ. ಈ ಬೆಳಕು ನಂದದಂತೆ ನೋಡಿಕೊಳ್ಳಬೇಕಾದ ಜಾಗ್ರತೆ ಅತೀ ಅವಶ್ಯಕ. ಪ್ರಜ್ಞಾವಂತ ಸಂಘಟಿತ ಪ್ರಯತ್ನಗಳಿಂದ (ಹೋರಾಟಗಳಿಂದ) ಮಾತ್ರ ವಿಶ್ವಕ್ಕೆ ಮುಕ್ತಿ ಮತ್ತು ತುಳಿತಕ್ಕೊಳಗಾದವರ ಪ್ರಗತಿ ಸಾಧ್ಯ.

ಸಮಾಜದಲ್ಲಿ ಸಾಮರಸ್ಯ (ಪರಸ್ಪರ ಹೊಂದಾಣಿಕೆ), ಸಮಾನತೆಗಳು ಇರಬೇಕೆಂಬುದು ದಾರ್ಶನಿಕರ ಇಂಗಿತ. "ವಿಶ್ವದಲ್ಲಿ ಭಕ್ತರು, ಸಂತರು, ಸಮಾಜ ಸೇವಕರು, ರಾಜಕಾರಣಿಗಳು, ವಿಜ್ಞಾನಿಗಳು, ಕವಿ, ಕಲಾವಿದರು, ಕ್ರಾಂತಿಕಾರಿಗಳು ಹೀಗೆ ವಿವಿಧ ರೀತಿಯ ಬದುಕನ್ನು ಕಂಡುಕೊಳ್ಳುವ ಮತ್ತು ಕಟ್ಟುವ ಕ್ರಿಯಾಶೀಲತೆ ತೋರಿದವರೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಸಾಮಾಜಿಕ ಚಿಂತಕರೆ ಆಗಿದ್ದಾರೆ".[೬]

ದೀನದಲಿತ ದುರ್ಬಲರಾದ ಮಾನವ ಜನಾಂಗದ ಪರವಾಗಿ ಹೋರಾಡಿದ ಪ್ರಮುಖ ವ್ಯಕ್ತಿಗಳ ಬದುಕಿನ ತತ್ವಗಳನ್ನು ಗಮನಿಸಬಹುದು. ಈ ಮಹಾನ್ ವ್ಯಕ್ತಿಗಳ ವ್ಯಕ್ತಿಗತ ಹೋರಾಟ ಮತ್ತು ಸಮಷ್ಟಿಯ ಬೆಳವಣಿಗೆಗಾಗಿ (ಸುಧಾರಣೆಗಾಗಿ) ದುಡಿದ ತತ್ವ ಪ್ರಧಾನ ದೃಷ್ಟಿ ಪ್ರಧಾನವಾದುದು.

ಮಹಾತ್ಮ ಗಾಂಧಿ, ರಾಮ್ ಮನೋಹರ್ ಲೋಹಿಯಾ, ಅಂಬೇಡ್ಕರ್, ಸ್ವಾಮಿ ವಿವೇಕಾನಂದ, ಕಾರ್ಲ್ ಮಾರ್ಕ್ಸ್, ಎಂಗೆಲ್ಸ್, ಕೌಟಿಲ್ಯ, ಮನು, ಮಾವೋ ತ್ಸೆ ತುಂಗ್, ಕನ್‌ಫ್ಯೂಷಿಯಸ್, ಮಾರ್ಟಿನ್ ಲೂಥರ್ ಕಿಂಗ್, ನೆಲ್ಸನ್ ಮಂಡೇಲಾ, ಲೆನಿನ್, ಅಮರ್ತ್ಯ ಸೇನ್, ಗುನ್ನಾರ್ ಮಿರ್ಡಾಲ್ ಇವರ ಚಿಂತನೆಗಳನ್ನು ಅರಿಯುವುದು ಬಹು ಮುಖ್ಯ.

ಪಾಶ್ಚಾತ್ಯರಲ್ಲಿ ಸಾಕ್ರೆಟೀಸ್, ಪ್ಲೇಟೋ, ಅರಿಸ್ಟಾಟಲ್ ತಮ್ಮ ವಿಶಾಲ ಜೀವನ ದರ್ಶನದಿಂದ, ಸಾಮಾಜಿಕ ಚಿಂತನೆಯಿಂದ ಸಮಾಜಪರ, ಜನಮುಖೀ ವ್ಯಕ್ತಿಗಳಾಗಿ ಕಂಡರು. ಪ್ಲೇಟೋನ ಆದರ್ಶರಾಜ್ಯದ ಕಲ್ಪನೆ ವಿನೂತನವಾಗಿದೆ. "ಭೂಮಿಯ ಮೇಲೆ ಹಾಗು ಇನ್ನಿತರ ವಸ್ತುಗಳ ಮೇಲೆ ವ್ಯಕ್ತಿಯ ಖಾಸಗಿ ಒಡೆತನ ಮತ್ತು ಏಕಸ್ವಾಮಿತ್ವ ಸ್ಥಾಪನೆಯಾದಂದಿನಿಂದಲೇ ಬಡತನವು ಹುಟ್ಟಿಕೊಂಡಿದೆ"[೮] ಎಂಬ ಹೆನ್ರಿ ಜಾರ್ಜ್‌ನೊಂದಿಗಿನ ಸಂಯುಕ್ತ ಹೇಳಿಕೆ ಬಡತನದ ಬಗೆಗೆ ಪ್ಲೇಟೋನ ನಿಲುವನ್ನು ಪ್ರಕಟಪಡಿಸುತ್ತದೆ. ಈ ಬಗೆಗೆ ತನ್ನ 'ರಿಪಬ್ಲಿಕ್' ಕೃತಿಯಲ್ಲಿ ಹೆಚ್ಚು ಚಿಂತಿಸುತ್ತಾನೆ. ಆದರೆ ಈತನ ಆದರ್ಶ ರಾಜ್ಯದ ಕಲ್ಪನೆ ಸೊಗಸಾಗಿ ಕಂಡರೂ, ವಾಸ್ತವಕ್ಕೆ ಎಟುಕದ ಹಲವು ಅಂಶಗಳ ಎಣಿಕೆಯಿಂದ ಅದು ದೂರವೇ ನಿಲ್ಲುತ್ತದೆ.

ಬಡತನದ ಬಗೆಗೆ ಭಾರತೀಯ ದಾರ್ಶನಿಕರ ನಿಲುವುಗಳ ಪರಿಗಣನೆಯಿಂದ ಅಧ್ಯಯನದ ಹೊಸ ಸಾಧ್ಯತೆಗಳು ತೆರೆದುಕೊಳ್ಳುತ್ತವೆ. ಧರ್ಮ, ಅರ್ಥ, ಕಾಮ, ಮೋಕ್ಷಗಳು ಭಾರತೀಯ ಪರಂಪರೆಯ ಶ್ರೇಷ್ಠ ಪುರುಷಾರ್ಥಗಳು. ಈ ಅರ್ಥಗಳಲ್ಲಿ ಧರ್ಮದ ಅನಂತರದ ಸ್ಥಾನ ಅರ್ಥಕ್ಕೆ ಮೀಸಲಾಗಿರುವುದು ಅರ್ಥದ ಅನಿವಾರ್ಯತೆಯನ್ನು ಶ್ರುತಪಡಿಸುತ್ತ್ತದೆ. ತಿರುವಳ್ಳುವರ್‌ರ 'ತಿರುಕ್ಕುರುಳ್' ನಲ್ಲಿಯೂ ಮೊದಲ ಮೂರು ಪುರುಷಾರ್ಥಗಳನ್ನು ಪ್ರಧಾನವಾಗಿ ಹೇಳಲಾಗಿದೆ. ಈ ಮೂರರ ಸಾಧನೆಯ ಮೂಲಕ ತನ್ನಿಂತಾನೇ ಮೋಕ್ಷ ಲಭ್ಯ ಎಂಬುದು ಈತನ ಅಭಿಪ್ರಾಯವಾಗಿದೆ.

'ಕೌಟಿಲ್ಯನ ಅರ್ಥಶಾಸ್ತ್ರ'ವು ಮಾನವನ ಮನಸ್ಸಿನ ಅತ್ಯುತ್ತಮ ಕೊಡುಗೆ. ರಾಜ್ಯ ಸ್ಥಾಪನೆಗೆ ಅತ್ಯಗತ್ಯವಾದ ಸಮಗ್ರ ವಿಚಾರ ಮಂಡನೆ ಉಳ್ಳ ಅಪರೂಪದ ಕೃತಿ. ರಾಜನ ಅರ್ಹತೆ, ಅಧಿಕಾರ, ಕರ್ತವ್ಯ, ಮಂತ್ರಿ ಮಹೋದಯರ ನೇಮಕ, ಪ್ರಜೆಗಳ ರಕ್ಷಣೆ, ಯುದ್ಧ, ಶಾಂತಿ, ರಾಜ್ಯಾಕ್ರಮಣ, ಸಾಮ್ರಾಜ್ಯ ಸ್ಥಾಪನೆ ಮೊದಲಾದ ಸೂಕ್ಷ್ಮ ವಿಚಾರಗಳ ಬಗೆಗೆ ಅಮೂಲ್ಯ ಮಾಹಿತಿ ಇದೆ.

ಸಮಾಜ ಪರ ನಿಲುಪಿಗಿಲ್ಲಿ ಬರಪಿಲ್ಲ. "ಕ್ರಾಂತಿಗಳಿಗೆ ಹಸಿವು-ಬಡತನವೇ ಮೂಲ ಕಾರಣವಾಗಿದ್ದು ಕೌಟಿಲ್ಯನ ಪ್ರಕಾರ ಕೆಡುಕಿಗಿಂತ ಕೆಡುಕಾದುದು ಜನರ ಬಡತನವೆಂಬುದಾಗಿತ್ತು. ಯಾವಾಗ ಜನರು ಆರ್ಥಿಕವಾಗಿ ತೊಂದರೆಗೀಡಾಗುತ್ತಾರೆ ಆಗ ಜನರು ರಾಜನ ಬಗ್ಗೆ ಅತೃಪ್ತರಾಗುತ್ತಾರೆ. ಅತೃಪ್ತರಾದವರು ಇಚ್ಛಾಪೂರ್ವಕವಾಗಿ ವಿರೋಧಿಗಳ ಜೊತೆ ಸೇರಿ ತಮ್ಮ ರಾಜನನ್ನೇ ನಾಶ ಮಾಡಲು ಯೋಚಿಸುತ್ತಾರೆ. ಆದ್ದರಿಂದ ರಾಜನು ಬಡತನದ ಲಕ್ಷಣಗಳು ಕಂಡ ತತ್‌ಕ್ಷಣ ಹಸಿವು-ಬಡತನ ನಿವಾರಿಸಲು ಕ್ರಮ ಕೈಗೊಳ್ಳಬೇಕೆಂದಿದ್ದಾನೆ".

ಕೌಟಿಲ್ಯನ ನಿಲುವು ಈ ರೀತಿಯದು. ಈತನ ಅರ್ಥಶಾಸ್ತ್ರವು ಬಡವರ ಬಗೆಗೆ ಮಾತನಾಡುತ್ತದೆ. ದೇಶದ ಬಹುಪಾಲು ಸಾಮಾನ್ಯ ಜನರ ಉದ್ಧಾರವನ್ನು ರಾಜ ಕಡೆಗಣಿಸಬಾರದೆಂಬ ಕಿವಿಮಾತಿದೆ. "ಪ್ರಜೆಗಳು ಸುಖಿಗಳಾದರೆ ರಾಜನೂ ಸುಖಿ. ಪ್ರಜೆಗಳ ಹಿತವೇ ರಾಜನ ಹಿತ. ರಾಜನಿಗೆ ಆತ್ಮಪ್ರಿಯ ಹಿತಗಳಿಲ್ಲ. ಪ್ರಜೆಗಳ ಪ್ರಿಯಹಿತವೇ ರಾಜನ ಪ್ರಿಯಹಿತ. ಆದ್ದರಿಂದ ರಾಜನು ಸದಾ ಉದ್ಯೋಗಶೀಲನಾಗಿ, ಸದಾ ಅರ್ಥ ವ್ಯವಹಾರವನ್ನು ನೋಡಬೇಕು".[೯]

ಅರ್ಥಶಾಸ್ತ್ರವು ಜೀವನದ ಮೂರು ಧ್ಯೇಯಗಳಾದ ಧರ್ಮಾರ್ಥ ಕಾಮಗಳನ್ನು ಒಪ್ಪುತ್ತದೆ. ಅರ್ಥವು ಅತ್ಯಂತ ಪ್ರಮುಖವಾದುದೆಂದು ಅಭಿಪ್ರಾಯಪಡುತ್ತದೆ. ಸರಕಾರ ಅವುಗಳಿಗೆಲ್ಲ ಅತ್ಯಗತ್ಯವಾದದ್ದೆಂದು ಮಾತ್ರ ತಿಳಿದು ತೃಪ್ತಿ ಹೊಂದಿದೆ.[೧೦]

"ಸರಕಾರವಿಲ್ಲದಿದ್ದರೆ ಮೀನು ಮೀನನ್ನು ತಿನ್ನುವಂತೆ ಪ್ರಬಲರು ದುರ್ಬಲರನ್ನು ಪೀಡಿಸುವಂತಹ ಅರಾಜಕತೆಯ ಸ್ಥಿತಿಯಿರಬಹುದು".[೧೧] ಕೌಟಿಲ್ಯನ ಈ ಎಚ್ಚರಿಕೆಯ ನುಡಿಗಳು ಸಮಾಜದ ಅಧ್ಯಯನಕ್ಕೆ ಅನುಕೂಲ ಒದಗಿಸುತ್ತವೆ.

ಕೌಟಿಲ್ಯನ ಅರ್ಥಶಾಸ್ತ್ರದ ನೀತಿನುಡಿ ಒಂದು ಬಗೆಯದಾದರೆ, ಮನುಸ್ಮೃತಿಯದ್ದು ಮತ್ತೊಂದು ಬಗೆಯದು. ಮನುಸ್ಮೃತಿಯ ೧೧ನೇ ಅಧ್ಯಾಯದ ೨೧, ೨೨ನೇ ಶ್ಲೋಕವಿಚಾರ ಪ್ರಸ್ತುತ ಕೊಂಚ ಮುಖ್ಯವೆನಿಸುತ್ತದೆ. "ಕ್ಷತ್ರಿಯನ ಮೂರ್ಖತನದಿಂದ ಬ್ರಾಹ್ಮಣನು ಹಸಿವಿನಿಂದ ಕಷ್ಟಪಡುತ್ತಾನೆ. ಆ ಬ್ರಾಹ್ಮಣನ ಪತ್ನೀಪುತ್ರ ಮೊದಲಾದ ಪೋಷ್ಯ ವರ್ಗವನ್ನು ತಿಳಿದು ಆತನ ಶಾಸ್ತ್ರಭ್ಯಾಸ, ಧರ್ಮಾಚರಣೆಗಳಿಗೆ ಯೋಗ್ಯವಾದ ಧರ್ಮವಿಹಿತವಾದ ಜೀವನ ವೃತ್ತಿಯನ್ನು ಕಲ್ಪಿಸಬೇಕು".[೧೨] ಎಂಬ ವಿಚಾರ ಬಡ ಬ್ರಾಹ್ಮಣನ ಪರಿಸ್ಥಿತಿ ತಿಳಿಸುತ್ತದೆ. 'ಹಸಿವಿನಿಂದ ಕಂಗೆಟ್ಟವನಿಗೆ ವೃತ್ತಿ' ಕೊಡಬೇಕಾದ ಅನಿವಾರ್ಯತೆಯ ಬಗ್ಗೆ ಒತ್ತಿ ಹೇಳಲಾಗಿದೆ. ಇಂದು ಸಾಮಾನ್ಯ ಜನರಿಗೆ ಬದುಕಿಗಾಗಿ, ಹಸಿವನ್ನು ನೀಗಿಸಿಕೊಳ್ಳಬೇಕಾದ ಅನಿವಾರ್ಯತೆ ಇದೆ. ಈ ತುಲನೆ ಇಲ್ಲಿ ಮುಖ್ಯವಾಗುತ್ತದೆ.

"ಸರಕಾರವಿಲ್ಲದಲ್ಲಿ ಸಮಾಜ ಕಂಟಕರು ಭಯೋತ್ಪಾದಕ ಚಟುವಟಿಕೆಗಳನ್ನು ನಡೆಸುತ್ತಾರೆ. ಪ್ರಜೆಗಳ ವಿತ್ತ ಜೀವಿತಗಳ ಸುರಕ್ಷಿತತೆ ಉಳಿಯದು; ಅವರು ಹೆದರಿ ದಿಕ್ಕಾಪಾಲಾಗಿ ಓಡಿಹೋಗಬೇಕಾಗುವುದು. ಈ ಭವಿಷ್ಯವನ್ನು ತಪ್ಪಿಸಲು ಬ್ರಹ್ಮನು ರಾಜನನ್ನು ಸೃಷ್ಟಿ ಮಾಡಿದನು" ಎನ್ನುತ್ತಾನೆ ಮನು. ಸಬಲರು (ಶಕ್ತರು) ದುರ್ಬಲರನ್ನು ಶೋಷಿಸುವ ಅನ್ಯಾಯಕ್ಕೆ ಅವನ ಪ್ರಕಾರ

ಸಮಾಜ ಪರ ನಿಲುವಿಗಿಲ್ಲಿ ಬರವಿಲ್ಲ. "ಕ್ರಾಂತಿಗಳಿಗೆ ಹಸಿವು-ಬಡತನವೇ ಮೂಲ ಕಾರಣವಾಗಿದ್ದು ಕೌಟಿಲ್ಯನ ಪ್ರಕಾರ ಕೆಡುಕಿಗಿಂತ ಕೆಡುಕಾದುದು ಜನರ ಬಡತನವೆಂಬುದಾಗಿತ್ತು. ಯಾವಾಗ ಜನರು ಆರ್ಥಿಕವಾಗಿ ತೊಂದರೆಗೀಡಾಗುತ್ತಾರೆ ಆಗ ಜನರು ರಾಜನ ಬಗ್ಗೆ ಅತೃಪ್ತರಾಗುತ್ತಾರೆ. ಅತೃಪ್ತರಾದವರು ಇಚ್ಛಾಪೂರ್ವಕವಾಗಿ ವಿರೋಧಿಗಳ ಜೊತೆ ಸೇರಿ ತಮ್ಮ ರಾಜನನ್ನೇ ನಾಶ ಮಾಡಲು ಯೋಚಿಸುತ್ತಾರೆ. ಆದ್ದರಿಂದ ರಾಜನು ಬಡತನದ ಲಕ್ಷಣಗಳು ಕಂಡ ತತ್‌ಕ್ಷಣ ಹಸಿವು-ಬಡತನ ನಿವಾರಿಸಲು ಕ್ರಮ ಕೈಗೊಳ್ಳಬೇಕೆಂದಿದ್ದಾನೆ".

ಕೌಟಿಲ್ಯನ ನಿಲುವು ಈ ರೀತಿಯದು. ಈತನ ಅರ್ಥಶಾಸ್ತ್ರವು ಬಡವರ ಬಗೆಗೆ ಮಾತನಾಡುತ್ತದೆ. ದೇಶದ ಬಹುಪಾಲು ಸಾಮಾನ್ಯ ಜನರ ಉದ್ಧಾರವನ್ನು ರಾಜ ಕಡೆಗಣಿಸಬಾರದೆಂಬ ಕಿವಿಮಾತಿದೆ. "ಪ್ರಜೆಗಳು ಸುಖಿಗಳಾದರೆ ರಾಜನೂ ಸುಖಿ. ಪ್ರಜೆಗಳ ಹಿತವೇ ರಾಜನ ಹಿತ. ರಾಜನಿಗೆ ಆತ್ಮಪ್ರಿಯ ಹಿತಗಳಿಲ್ಲ. ಪ್ರಜೆಗಳ ಪ್ರಿಯಹಿತವೇ ರಾಜನ ಪ್ರಿಯಹಿತ. ಆದ್ದರಿಂದ ರಾಜನು ಸದಾ ಉದ್ಯೋಗಶೀಲನಾಗಿ, ಸದಾ ಅರ್ಥ ವ್ಯವಹಾರವನ್ನು ನೋಡಬೇಕು".[೯]

ಅರ್ಥಶಾಸ್ತ್ರವು ಜೀವನದ ಮೂರು ಧ್ಯೇಯಗಳಾದ ಧರ್ಮಾರ್ಥ ಕಾಮಗಳನ್ನು ಒಪ್ಪುತ್ತದೆ. ಅರ್ಥವು ಅತ್ಯಂತ ಪ್ರಮುಖವಾದುದೆಂದು ಅಭಿಪ್ರಾಯಪಡುತ್ತದೆ. ಸರಕಾರ ಅವುಗಳಿಗೆಲ್ಲ ಅತ್ಯಗತ್ಯವಾದದ್ದೆಂದು ಮಾತ್ರ ತಿಳಿದು ತೃಪ್ತಿ ಹೊಂದಿದೆ.[೧೦]

"ಸರಕಾರವಿಲ್ಲದಿದ್ದರೆ ಮೀನು ಮೀನನ್ನು ತಿನ್ನುವಂತೆ ಪ್ರಬಲರು ದುರ್ಬಲರನ್ನು ಪೀಡಿಸುವಂತಹ ಅರಾಜಕತೆಯ ಸ್ಥಿತಿಯಿರಬಹುದು".[೧೧] ಕೌಟಿಲ್ಯನ ಈ ಎಚ್ಚರಿಕೆಯ ನುಡಿಗಳು ಸಮಾಜದ ಅಧ್ಯಯನಕ್ಕೆ ಅನುಕೂಲ ಒದಗಿಸುತ್ತವೆ.

ಕೌಟಿಲ್ಯನ ಅರ್ಥಶಾಸ್ತ್ರದ ನೀತಿನುಡಿ ಒಂದು ಬಗೆಯದಾದರೆ, ಮನುಸ್ಮೃತಿಯದ್ದು ಮತ್ತೊಂದು ಬಗೆಯದು. ಮನುಸ್ಮೃತಿಯ ೧೧ನೇ ಅಧ್ಯಾಯದ ೨೧, ೨೨ನೇ ಶ್ಲೋಕವಿಚಾರ ಪ್ರಸ್ತುತ ಕೊಂಚ ಮುಖ್ಯವೆನಿಸುತ್ತದೆ. "ಕ್ಷತ್ರಿಯನ ಮೂರ್ಖತನದಿಂದ ಬ್ರಾಹ್ಮಣನು ಹಸಿವಿನಿಂದ ಕಷ್ಟಪಡುತ್ತಾನೆ. ಆ ಬ್ರಾಹ್ಮಣನ ಪತ್ನೀಪುತ್ರ ಮೊದಲಾದ ಪೋಷ್ಯ ವರ್ಗವನ್ನು ತಿಳಿದು ಆತನ ಶಾಸ್ತ್ರಭ್ಯಾಸ, ಧರ್ಮಾಚರಣೆಗಳಿಗೆ ಯೋಗ್ಯವಾದ ಧರ್ಮವಿಹಿತವಾದ ಜೀವನ ವೃತ್ತಿಯನ್ನು ಕಲ್ಪಿಸಬೇಕು".[೧೨] ಎಂಬ ವಿಚಾರ ಬಡ ಬ್ರಾಹ್ಮಣನ ಪರಿಸ್ಥಿತಿ ತಿಳಿಸುತ್ತದೆ. 'ಹಸಿವಿನಿಂದ ಕಂಗೆಟ್ಟವನಿಗೆ ವೃತ್ತಿ' ಕೊಡಬೇಕಾದ ಅನಿವಾರ್ಯತೆಯ ಬಗ್ಗೆ ಒತ್ತಿ ಹೇಳಲಾಗಿದೆ. ಇಂದು ಸಾಮಾನ್ಯ ಜನರಿಗೆ ಬದುಕಿಗಾಗಿ, ಹಸಿವನ್ನು ನೀಗಿಸಿಕೊಳ್ಳಬೇಕಾದ ಅನಿವಾರ್ಯತೆ ಇದೆ. ಈ ತುಲನೆ ಇಲ್ಲಿ ಮುಖ್ಯವಾಗುತ್ತದೆ.

"ಸರಕಾರವಿಲ್ಲದಲ್ಲಿ ಸಮಾಜಕಂಟಕರು ಭಯೋತ್ಪಾದಕ ಚಟುವಟಿಕೆಗಳನ್ನು ನಡೆಸುತ್ತಾರೆ. ಪ್ರಜೆಗಳ ವಿತ್ತ ಜೀವಿತಗಳ ಸುರಕ್ಷಿತತೆ ಉಳಿಯದು; ಅವರು ಹೆದರಿ ದಿಕ್ಕಾಪಾಲಾಗಿ ಓಡಿಹೋಗಬೇಕಾಗುವುದು. ಈ ಭವಿಷ್ಯವನ್ನು ತಪ್ಪಿಸಲು ಬ್ರಹ್ಮನು ರಾಜನನ್ನು ಸೃಷ್ಟಿ ಮಾಡಿದನು" ಎನ್ನುತ್ತಾನೆ ಮನು. ಸಬಲರು (ಶಕ್ತರು) ದುರ್ಬಲರನ್ನು ಶೋಷಿಸುವ ಅನ್ಯಾಯಕ್ಕೆ ಅವನ ಪ್ರಕಾರ

ಇದೊಂದೇ ಮದ್ದು".[೧೩] ಈ ರಾಜ ಇಂದಿನವರಿಗಿಂತ ಭಿನ್ನ. ಈತ ಎಂಥವನೆಂದರೆ "ರಾಜನಿಲ್ಲಿ ದೇವರಿಗೆ ಜವಾಬುದಾರನಲ್ಲ, ಪ್ರಜೆಗಳಿಗೆ ಜವಾಬುದಾರ. ಪ್ರಜಾಹಿತಕ್ಕಿಲ್ಲಿ ರಾಜನು ಸಾಧನ".

"ರಾಜಹಿತ ಸಾಧನೆಯು ಪ್ರಜಾಹಿತ ಸಾಧನೆಯನ್ನೇ ಅವಲಂಬಿಸಿದೆ. ಆದುದರಿಂದ ಮನುವಿನ ಕಾಲದ ರಾಜನು ಸಾಂಕುಶ ಪ್ರಭು".[೧೪] ಹೀಗೆ ಅಲ್ಲಲ್ಲಿ ಜನಹಿತ ಚಿಂತನೆ ಕಂಡು ಬರುತ್ತದೆ. ಹೀಗೆ ಭಾರತೀಯ ಮತು ಪಾಶ್ಚಾತ್ಯ ಪರಂಪರೆಗಳಲ್ಲಿ ಅನ್ನದ ಸಮಸ್ಯೆಗೆ (ಹಸಿವಿಗೆ) ಕಾರಣವಾದ ಬಡತನದ ಬಗ್ಗೆ ಹರಿದಿರುವ ಚಿಂತನೆ ಮುಖ್ಯ ಅಂಶ.

ಮಾವೋ ತ್ಸೆ ತುಂಗ ತನ್ನ ಜನಮುಖೀ ನಿಲುವಿನಿಂದ ಮುಖ್ಯವಾಗುತ್ತಾನೆ. ಇಂದಿನ ಚೀನಾ ಬೆಳವಣಿಗೆಯಲ್ಲಿ ಈತನ ಹೋರಾಟದ ಹೆಜ್ಜೆ ಗುರುತುಗಳನ್ನು ಗುರುತಿಸಬಹುದು. "ಮಾರ್ಕ್ಸ್‌ವಾದವನ್ನು ತನ್ನ ದೇಶದ ಸ್ಥಿತಿಗಳಿಗೆ ಹೊಂದುವಂತೆ ಅರ್ಥೈಸಿ ಆ ಮೂಲಕ ರಶ್ಯಾದಲ್ಲಿ ಕ್ರಾಂತಿಯನ್ನು ಮಾಡಿದ ಲೆನಿನ್‌ನಂತೆಯೇ ಮಾವೋ ಸಹ ಚೀನಾದ ಪರಿಸ್ಥಿತಿಗೆ ಮಾರ್ಕ್ಸ್‌ವಾದವನ್ನು ಅಳವಡಿಸಿಕೊಂಡು ಅಲ್ಲಿಯೂ ಆರ್ಥಿಕ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರಗಳೆಲ್ಲವುಗಳಲ್ಲಿಯೂ ಕ್ರಾಂತಿಯನ್ನು ಸಾಧಿಸಿದನು".[೧೫] ಆದುದರಿಂದ ಆಧುನಿಕ ಚೀನಾದ ನೇತಾರ ಎಂಬ ಗೌರವ ಈತನಿಗೆ ಸಂದಿದೆ. ಈತನದು ಶ್ರಮಜೀವಿ ಪರ ನಿಲುವು. ಒಟ್ಟಾರೆ ಮಾವೊ ತ್ಸೆ ತುಂಗ ತನ್ನ ವೈಜ್ಞಾನಿಕ ಚಿಂತನಾಲಹರಿಯ ಮೂಲಕ ಜನಸಾಮಾನ್ಯರ ಏಳ್ಗಿಗೆ ದುಡಿದುದನ್ನಿಲ್ಲಿ ನೆನೆಯಬಹುದು.

ವ್ಲಾಡಿಮೀರ್ ವಿಲ್ಯಾಸೋವ್‌ರ ಗುಪ್ತ ಹೆಸರು ಲೆನಿನ್. ಲೆನಿನ್ ಮಾರ್ಕ್ಸ್‌ವಾದದ ಪ್ರಭಾವದ ಹಿನ್ನೆಲೆಯಿಂದ ಬೆಳೆದು ಕಾರ್ಮಿಕರ ಹಿತರಕ್ಷಣೆಯ ಮೂಲಕ ದೇಶದ ಸ್ವಾತಂತ್ರ್ಯಕ್ಕೆ ದುಡಿದ ಚಿಂತನಜೀವಿ. ಮಾರ್ಕ್ಸ್‌ವಾದದ ವೈಜ್ಞಾನಿಕ ಅನ್ವಯಕ್ರಮಕ್ಕಾಗಿ ಶ್ರಮಿಸಿದ ಲೆನಿನ್ ಶ್ರಮಿಕವರ್ಗಕ್ಕೆ ಜೀವನಾವಶ್ಯಕವಾದ ಹಲವು ವಸ್ತುಗಳನ್ನು ದೊರಕಿಸಿಕೊಡಲು ನಿರಂತರ ದುಡಿದನು. ಸಾವಿರಾರು ಬಡಜನರಿಗೆ ಲೆನಿನ್ ಆಶಾಕಿರಣವಾಗಿದ್ದ.

ಹೀಗೆ ಹೊಸ ಜಗತ್ತಿನ ಆವಿಷ್ಕಾರಕೆ ಶ್ರಮಿಸಿದ ಲೆನಿನ್ ಸಾಮಾನ್ಯ ಜನಜೀವನಕ್ಕೆ ಬೆಳಕನ್ನು ತಂದಿತ್ತನು, "ಹಣದ ಶಕ್ತಿಯ ಮೇಲೆ ಆಧರಿಸಿದ ಸಮಾಜದಲ್ಲಿ ಭಾರೀ ಸಂಖ್ಯೆಯ ದುಡಿಯುವ ಜನರು ಬಡತನದಲ್ಲಿಯೇ ಕೆಲವೇ ಶ್ರೀಮಂತರು ಪರೋಪಕಾರಿ ಜೀವಿಗಳಾಗಿಯೂ ಬಾಳುತ್ತಿರುವ ಸಮಾಜದಲ್ಲಿ ನಿಜವಾದ ಹಾಗೂ ಪರಿಣಾಮಕಾರಿಯಾದ ಸ್ವಾತಂತ್ರ್ಯವಿರಲು ಸಾಧ್ಯವಿಲ್ಲ"[೧೬] ಎಂದ ಲೆನಿನ್ ಸಮಾನತೆಯ ದುಡಿಮೆಗೆ ತನ್ನ ಕೈ ಜೋಡಿಸಿದನು. ಲೆನಿನ್ ತನ್ನ ಸಮಾಜಪರ ಕಾಳಜಿಯಿಂದ ಯಾವ ಕಾಲಕ್ಕೂ ಪ್ರಸ್ತುತನೇ.

ಕನ್‌ಫ್ಯೂಷಿಯಸ್ ಚೀನಾದ ಪ್ರಮುಖ ಚಿಂತಕ. ಸ್ವತಃ ಬಡತನ ಅನುಭವಿಸಿ ಬಂದಿದ್ದ ಈತನದು ಗಟ್ಟಿ ನಿಲುವು. "ಬಡತನ ಮತ್ತು ಮೂರ್ಖತೆ ಇವೆರಡೇ ಕಾರಣ ಮನುಷ್ಯ ತಪ್ಪು ಮಾಡಲಿಕ್ಕೆ. ದೇಶದ ಬಡತನವನ್ನು ನೀಗಿಸಿ ಅಜ್ಞಾನವನ್ನು ಕಳೆದರೆ ಅಪರಾಧ ಎಂಬುದು ನಾಮಾವಶೇಷವಾಗಿ ಹೋಗುತ್ತದೆ"[೧೭] ಎನ್ನುವ ಕನ್‌ಫ್ಯೂಷಿಯಸ್ ಬಡತನದ ನಿವಾರಣೆಗೆ ಮಹತ್ವದ ಪರಿಹಾರ ಸೂಚಿಸುತ್ತಾನೆ. "ಕಸುಬು ಕೈಗಾರಿಕೆ ಹರಡಿದರೆ, ಕರಕುಶಲ ಕಲೆಗಳನ್ನು ಬೆಳೆಸಿದರೆ ಬಡತನ ಅಳಿಯುತ್ತದೆ. ಆ ರೀತಿಯ ಶಿಕ್ಷಣ ಕೊಡಬೇಕು. ಪ್ರತಿಯೊಬ್ಬನಿಗೂ ಕೆಲಸ

ಸಿಗಬೇಕು, ಶಿಕ್ಷಣ ಸಿಗಬೇಕು".[೧೮] ಹೀಗೆ ಅಚ್ಚುಕಟ್ಟಾದ ತನ್ನ ವಿಚಾರ ಮಂಡನೆಯಿಂದ ಬಡತನದ ಬವಣೆಗೆ ಪರಿಹಾರ ಮಾರ್ಗ ಹುಡುಕಿರುವನು. ಆದುದರಿಂದ ಈ ಚಿಂತನೆ ಪ್ರಸ್ತುತವಾಗುತ್ತದೆ.

ಜಗತ್ತಿನ ಶೋಷಿತ ಜನಾಂಗದ ಬದುಕು, ಬವಣೆಗಾಗಿ ಹೋರಾಡಿದ ಮಾರ್ಟಿನ್ ಲೂಥರ್ ಕಿಂಗ್ ತನ್ನ ಹೋರಾಟ ನೆಲೆಯಿಂದ ಗಮನ ಸೆಳೆದಿದ್ದಾನೆ. ಮಾರ್ಕ್ಸ್, ಗಾಂಧಿ ವಿಚಾರಧಾರೆಯಿಂದ ಪ್ರೇರಿತನಾದ ಈತ ಜನರೇಳ್ಗೆಗೆ ದುಡಿದದ್ದು ಇಂದು ಇತಿಹಾಸ. ಗುಲಾಮತನ, ನೀಗ್ರೋ, ಜೀತಪದ್ಧತಿಯ ವಿರುದ್ಧ ಹೋರಾಟ ಕೈಗೊಂಡ ಅಮೇರಿಕಾದ ಗಾಂಧಿ ಲೂಥರ್ ಕಿಂಗ್ ಜನಸಾಮಾನ್ಯರಿಗಾಗಿ ತನ್ನ ಬದುಕನ್ನೇ ಮುಡಿಪಾಗಿಟ್ಟುಕೊಂಡನು. ದಕ್ಷಿಣ ಆಫ್ರಿಕಾದ ಅತ್ಯಂತ ಹಿಂದುಳಿದ, ಸಾಮಾಜಿಕವಾಗಿ ಶೋಷಿತರಾಗಿದ್ದ ಕರಿಯ ಜನಾಂಗದ ಪರ ಹೋರಾಟ ಮಾಡಿದ ನೆಲ್ಸನ್ ಮಂಡೇಲಾ ಕೂಡಾ ಮುಖ್ಯರಾಗುತ್ತಾರೆ. ತೀವ್ರ ಹೊರಾಟ ಮಾಡಿ ಕಪ್ಪು ಜನಾಂಗದವರಿಗೆ ಸ್ವಾತಂತ್ರ್ಯದ ಮೂಲಕ ಹೊಸ ಬದುಕು ನೀಡಿದ ಮಂಡೇಲಾ ಅವರೇ ಹೇಳುವ ಮಾತು ಸಾಮರಸ್ಯದ ಬದುಕಿನ ಹಿನ್ನೆಲೆಯಿಂದ ಮುಖ್ಯ. ಸಾಮಾನ್ಯ ಜನರ ಹೃದಯ ವೈಶಾಲ್ಯವನ್ನು ಇದು ತೆರೆದಿಡುತ್ತದೆ. "Whites are fellow South Africans and we want them to feel safe and we appreciate the contribution they have made to the development of the country".[೧೯]

ಅಮರ್ತ್ಯಸೇನ್ ಆಧುನಿಕ ಭಾರತದ ಪ್ರಮುಖ ಅರ್ಥಶಾಸ್ತ್ರಜ್ಞ, ತನ್ನ ವೈಜ್ಞಾನಿಕ ಚಿಂತನಾಕ್ರಮದಿಂದ ಭಾರತದ ಜನಸಾಮಾನ್ಯರ ಅಧ್ಯಯನಕ್ಕೆ ಹಲವು ಒಳನೋಟಗಳನ್ನು ಒದಗಿಸುತ್ತಾರೆ. "ಈ ದೇಶದ ಚರಿತ್ರೆಯನ್ನು ಗಮನಿಸಿದರೆ ಬಹುಮಟ್ಟಿಗೆ ಮೇಲುವರ್ಗ ಭೌತಿಕ ಸುಖಗಳನ್ನು ಅನುಭವಿಸುತ್ತಿದ್ದುದನ್ನು ಕಡೆಗಣಿಸಲಾಗದು. ಅಂದರೆ ಮೇಲುವರ್ಗ ಬಹುಮಟ್ಟಿಗೆ ಭೌತಿಕ ಸುಖಾಕಾಂಕ್ಷಿಯಾಗಿ ಇತ್ತು. ಹಾಗಿದ್ದರೆ ಸರಳ ಜೀವನ ವಿಧಾನ ಉಳಿದುಕೊಂಡದ್ದೆಲ್ಲಿ ಎಂದರೆ ಸಾಮಾನ್ಯ ವರ್ಗದಲ್ಲಿ".[೨೦]

ಹೀಗೆ ಪ್ರಬಲ-ದುರ್ಬಲ ವರ್ಗದ ಹೋರಾಟ ಪ್ರಕ್ರಿಯೆ ಅಂದಿನಿಂದಲೂ ಇತ್ತೆಂಬ ಅಂಶ ಸ್ಪಷ್ಟ. ಜನರಿಗೆ ಆರ್ಥಿಕ ಶಕ್ತಿ ಬಹು ಮುಖ್ಯ. "ಇದುವರೆಗೂ ಗ್ರಹಿಸಲಾರದ ಚರಿತ್ರೆಯಲ್ಲಿ ಸಾಮಾನ್ಯ ವರ್ಗ ಮೇಲುವರ್ಗದಿಂದ ಶೋಷಣೆಗೊಳಗಾಗಿತ್ತು ಎಂಬ ಅಂಶ ಸ್ಪಷ್ಟವಾಗಿದೆ".[೨೧]

ಸಾಮಾನ್ಯ ವರ್ಗದ ಅಪೇಕ್ಷೆ ಹತ್ತು ಅಂಶವಿದ್ದರೆ ಮೇಲ್ವರ್ಗದವರ ಅಪೇಕ್ಷೆ ನೂರಂಶದಷ್ಟಾಗುತ್ತದೆ ಎಂಬುದು ಇದಕ್ಕೆ ಕಾರಣವನ್ನು ಹುಡುಕಿ ಕೊಡುತ್ತದೆ. "ಅರಿವು, ಪ್ರಜ್ಞಾವಂತಿಕೆ, ತಾರ್ಕಿಕ ಶಕ್ತಿ, ಆರ್ಥಿಕ ಶಕ್ತಿಯಿಂದ ಬಳಲುತ್ತಿರುವ ದುರ್ಬಲ ಸಮುದಾಯ ದೊಡ್ಡ ಪ್ರಮಾಣದಲ್ಲಿದ್ದರೂ ಅದನ್ನು ಮೇಲೆತ್ತುವ ಪ್ರಾಮಾಣಿಕ ಶಕ್ತಿಯ ಅಭಾವವಿರುವಲ್ಲಿ ಅದು ಹಾಗೆಯೇ ಉಳಿದುಬಿಡುತ್ತದೆ".[೨೨] ಶೋಷಣೆಯ ಸರಪಳಿ ಬಡವರನ್ನು ಹಿಂಡಿ ಬಿಡುವ ಕಟು ಸತ್ಯವನ್ನಿಲ್ಲಿ ಹೇಳಲಾಗಿದೆ. ಬಡವರ ರಕ್ಷಣೆಗೆ ಮುಂದಾಗಬೇಕಾದ ಎಚ್ಚರಿಕೆಯ ಧ್ವನಿಯೂ ಇಲ್ಲಿದೆ.

ಸಾಮಾನ್ಯ ಜನರು ಮೇಲುವರ್ಗದವರನ್ನು ಅನುಕರಿಸುತ್ತಾರೆ. ಮೇಲ್ವರ್ಗದವರು ಪಾಶ್ಚಾತ್ಯ ಸಮಾಜವನ್ನು ಅನುಕರಿಸುತ್ತಾರೆ. ಪಾಶ್ಚಾತ್ಯರು ನವ ಸಾಮ್ರಾಜ್ಯಶಾಹಿ ನೀತಿಯನ್ನು ಅನುಸರಿಸುತ್ತಾರೆ. ಹೀಗೆ ಶೋಷಣೆಯ ಮೂಲ ಬೇರು ಸಾಮಾನ್ಯ ಹಂತದಿಂದ ವಿಶ್ವವನ್ನೇ ತಬ್ಬಿ

ಉಸಿರುಗಟ್ಟಿಸಿ ಬಿಡುವ ಪರಿಯನ್ನು ತೆರೆದಿಡಲಾಗಿದೆ. ತನ್ನದೇ ಸ್ವಂತ ಹಾದಿ ಹುಡುಕಿ ನಿರ್ಮಿಸಿಕೊಳ್ಳುವವರೆಗೆ ಈ ಶೋಷಣಾ ಪ್ರಕ್ರಿಯೆ ನಿರಂತರ.

ಆದುದರಿಂದ ಸಾಮಾನ್ಯ ಜನರು ಎಚ್ಚೆತ್ತುಕೊಳ್ಳಬೇಕಾದ ಅವಶ್ಯಕತೆಯನ್ನು ಇಲ್ಲಿ ಒತ್ತಿ ಹೇಳಲಾಗಿದೆ. ಹೀಗೆ ಜನಪರ ಅರ್ಥಶಾಸ್ತ್ರಜ್ಞರಾಗಿ, ಸಾಮಾಜಿಕ ಚಿಂತಕರಾಗಿ ಅಮರ್ತ್ಯ ಸೇನ್ ಮುಖ್ಯರಾಗುತ್ತಾರೆ. ಬಡತನ ಅರ್ಥಮೂಲದೊಂದಿಗೆ ಹೆಚ್ಚು ಸಂಬಂಧ ಹೊಂದಿದೆ. ಪಾಶ್ಚಾತ್ಯ ಆರ್ಥಿಕ ತಜ್ಞ ಗುನ್ನಾರ್ ಮಿರ್ಡಾಲ್ ಆರ್ಥಿಕ ಸಮತೆಯ ಬಗೆಗೆ ಹೆಚ್ಚು ಕಾಳಜಿ ವಹಿಸುತ್ತಾರೆ. ಆಧುನಿಕ ಭಾರತದಲ್ಲಿ ಪ್ರಮುಖ ಆರ್ಥಿಕ ತಜ್ಞ ಅಮರ್ತ್ಯ ಸೇನ್ ಭಾರತೀಯರ ಸುಧಾರಿತ ಬದುಕಿನೆಡೆಗೆ ಮುಖ ಮಾಡುತ್ತಾರೆ.

ಕಾರ್ಲ್ ಮಾರ್ಕ್ಸ್ – ಫ್ರೆಡ್ರಿಕ್ ಎಂಗೆಲ್ಸ್

ಕಾರ್ಲ್ ಮಾರ್ಕ್ಸ್ ಜಗತ್ತು ಕಂಡ ಅತ್ಯಂತ ಶ್ರೇಷ್ಠ ವೈಚಾರಿಕ. ಫ್ರೆಡ್ರಿಕ್ ಎಂಗೆಲ್ಸ್ ಮಾರ್ಕ್ಸ್‌ನ ಸಮಕಾಲೀನ, ಪ್ರಸಿದ್ಧ ಚಿಂತಕ. ಇವರಿಬ್ಬರು ಜರ್ಮನ್ ಸಂಜಾತರು. ಜರ್ಮನಿ ಹಿಟ್ಲರ್‌ನಂತಹ ರಕ್ತಪಿಪಾಸುವಿಗೆ ಜನ್ಮ ಕೊಟ್ಟದ್ದು. ಮಾರ್ಕ್ಸ್–ಎಂಗೆಲ್ಸ್ ತಮ್ಮ ಸಂಪೂರ್ಣ ಜೀವನವನ್ನು ಕಾರ್ಮಿಕರು, ಬಡವರ ಏಳಿಗೆಗಾಗಿ ಮುಡಿಪಾಗಿಟ್ಟರು. ಅನ್ನ, ನೀರು, ವಸತಿ, ಬಟ್ಟೆ ಈ ಮೂಲಭೂತ ಅಗತ್ಯಗಳು ಮೊದಲು ಮಾನವ ಜನಾಂಗಕ್ಕೆ ಒದಗಬೇಕು. ತಳ ಸಂಸ್ಕೃತಿಯ ಮೂಲಕ ಶ್ರೀಮಂತ ವರ್ಗವನ್ನು ಅರ್ಥೈಸುವ ಹೊಸ ಕ್ರಮವನ್ನು ಇವರು ರೂಢಿಗೆ ತಂದರು. ಇತಿಹಾಸದ ಪುನರ್‌ಸೃಷ್ಟಿಗೆ ಚಾಲನೆ ಕೊಟ್ಟರು. ಇವರ ಪ್ರಮುಖ ವಿಚಾರಧಾರೆ ಸಮಾಜದ ಸಮಾನತೆ. ಬಡವರನ್ನು ಶ್ರೀಮಂತರನ್ನಾಗಿ ಮಾಡುವ ಬದಲು ಶ್ರೀಮಂತರ ಹಣ ಕರಗಿಸಿ ಬಡವರಿಗೆ ಹಂಚಿ ಸಾಮಾಜಿಕ ಸಮಾನತೆ ತರಬೇಕೆಂಬ ಬೇರೆಯದೇ ಮಾರ್ಗ ಅನುಸರಿಸಿದರು.

ಮಾರ್ಕ್ಸ್–ಎಂಗೆಲ್ಸ್ ಶ್ರೀಮಂತ ಕುಟುಂಬದಲ್ಲಿ ಜನಿಸಿದರೂ ಬಡವರ ಪರವಾಗಿ ದುಡಿದರು. ಬಂಡವಾಳ ಪ್ರಭುತ್ವದ ನಾಶ ಮತ್ತು ಶ್ರಮಿಕ ವರ್ಗದ ಪ್ರಭುತ್ವ ಸ್ಥಾಪನೆ ಇವರ ಪ್ರಧಾನೋದ್ದೇಶ. ಬಂಡವಾಳಶಾಹಿ ಸಮಾಜದ ಬಿಗಿಹಿಡಿತ ಮಿತಿಮೀರಿದಾಗ ಕಾರ್ಮಿಕರು ಸಂಘಟಿತರಾಗಿ ಪ್ರಭುತ್ವದ ವಿರುದ್ಧ ಹೋರಾಡುವರು. ಆಗ ಕೊಳೆತ ಹಳೆಯ ಅಸಮತೆ ಸೃಷ್ಟಿಸಿದ ಬಂಡವಾಳದ ಬೂರ್ಷ್ವ ಸಮಾಜ ನಾಶ ಹೊಂದುವುದು. ಅದರ ಜಾಗದಲ್ಲಿ ಸಮಾನತೆ ಇರುವ ಕಾರ್ಮಿಕರೇ ಪ್ರಭುಗಳಾಗಿರುವ ಹೊಸ ಸಮಾಜದ ನಿರ್ಮಾಣವಾಗುವುದು. ಇದಕ್ಕೆ ಲೆನಿನ್ ಹೇಳುವಂತೆ "ಕಾರ್ಮಿಕ ವರ್ಗದ ವಿಮೋಚನೆಯು ಕಾರ್ಮಿಕ ವರ್ಗದಿಂದಲೇ ಆಗಬೇಕಾಗಿದೆ".[೨೩] ಆಗ ನವ ಸಮಾಜ ನಿರ್ಮಾಣ ಸಾಧ್ಯ. "ಕಾರ್ಮಿಕ ವರ್ಗದ ಕ್ರಾಂತಿಯ ಶೋಷಣೆಯನ್ನು ಕೊನೆಗಾಣಿಸುವುದಷ್ಟೇ ಅಲ್ಲ, ಎಲ್ಲಾ ರೀತಿಯ ಸಾಮಾಜಿಕ ಗುಲಾಮಗಿರಿಯನ್ನು ಹಾಗೂ ಕೆಲವು ಮಂದಿ ಇನ್ನೊಬ್ಬರ ಸತ್ವ ಹೀರಿ ಬದುಕುವ ಪರಾವಲಂಬಿ ಜೀವನವನ್ನು ಸಹ ಕೊನೆಗಾಣಿಸುತ್ತದೆ. ರಾಷ್ಟ್ರಿಯ ದಮನವನ್ನು ಸಹ ತೊಡೆದು ಹಾಕುತ್ತದೆ. ವಸಾಹತು ಶೋಷಣೆಯ ಹಾಗೂ ರಕ್ತಸಿಕ್ತ ಯುದ್ಧಗಳು ಎಂದೆಂದಿಗೂ ಕಾಣೆಯಾಗುತ್ತವೆ".[೨೪]

ಭಾರತದ ಬಗೆಗಿನ ಮಾರ್ಕ್ಸ್ ವಿಚಾರಧಾರೆ ಇತಿಹಾಸದ ಬಗೆಗೆ ಹೊಸ ದೃಷ್ಟಿಯನ್ನೇ ಕೊಡುತ್ತದೆ. "ಹಿಂದುಸ್ಥಾನದಲ್ಲಿ ಒಂದು ಸುವರ್ಣಯುಗ ಇದ್ದಿತೆಂದು ನಂಬುವವರ

ಅಭಿಪ್ರಾಯವನ್ನು ನಾನು ಒಪ್ಪುವುದಿಲ್ಲ. ಹಿಂದಿನ ಕಾಲದಲ್ಲೇ ಭಾರತದ ದುರವಸ್ಥೆಯು ಆರಂಭವಾಯಿತು. ಆದರೆ ಬ್ರಿಟಿಷರು ಹಿಂದುಸ್ಥಾನಕ್ಕೆ ಉಂಟು ಮಾಡಿದ ದುರವಸ್ಥೆಯು ಸಾರಭೂತವಾಗಿಯೇ ಬೇರೆ ತೆರನಾದದ್ದು. ಅದಕ್ಕೆ ಮುನ್ನ ಹಿಂದುಸ್ಥಾನವು ಅನುಭವಿಸಿದ್ದ ಎಲ್ಲಾ ಸಂಕಷ್ಟಗಳಿಗಿಂತ ಹೆಚ್ಚು ಅಪಾರವಾಗಿ ತೀವ್ರವಾದದ್ದು (ಬ್ರಿಟಿಷ್ ಅಧಿಪತ್ಯವು) ಭಾರತೀಯ ಸಮಾಜದ ಇಡೀ ಚೌಕಟ್ಟನ್ನೇ ಮುರಿದು ಹಾಕಿದೆ. ಹಿಂದುಸ್ಥಾನವನ್ನು ಎಲ್ಲಾ ಪುರಾತನ ಪರಂಪರೆಗಳಿಂದಲೂ ಅದರ ಇಡೀ ಗತ ಇತಿಹಾಸದಿಂದಲೂ ಪ್ರತ್ಯೇಕಿಸಿದೆ" ಎಂದಿದ್ದಾನೆ ಮಾರ್ಕ್ಸ್.[೨೫]

ಕಾರ್ಲ್ ಮಾರ್ಕ್ಸ್-ಎಂಗೆಲ್ಸ್ ಜರ್ಮನಿ, ರಷ್ಯಾ, ಫ್ರಾನ್ಸ್, ಇಂಗ್ಲೆಂಡ್ ಮೊದಲಾದ ದೇಶಗಳ ಕಾರ್ಮಿಕರ ಜೀವನ ಸುಧಾರಣೆಗಾಗಿ ಅವಿರತವಾಗಿ ಹೋರಾಡಿದರು. ಅವರ ಹೋರಾಟ ಸ್ಪಷ್ಟವೂ, ನಿರ್ದಿಷ್ಟವೂ ಆದುದಾಗಿತ್ತು. ಆದುದರಿಂದ ಇಂದಿಗೂ ಅವರು ಬಡವರ-ಕಾರ್ಮಿಕರ ಆರಾಧ್ಯದೈವವಾಗಿದ್ದಾರೆ. ಉತ್ಪಾದನಾ ಸಾಧನಗಳ ಮೇಲೆ ಖಾಸಗಿ ಒಡೆತನವಿಲ್ಲದ ಸಮಾಜ ಮಾತ್ರವೇ ಬಡತನವಿಲ್ಲದ ಸಮಾಜವಾಗಲು ಸಾಧ್ಯ. ಕಾರ್ಮಿಕ ವರ್ಗದ ಕರ್ತೃತ್ವದ ಮುಖೇನ ಮಾನವಕುಲದ ವಿಮೋಚನೆಯನ್ನು ಸಾಧಿಸುವುದು ಮತ್ತು ಭವ್ಯವಾದ ಹೊಸ ಸಮಾಜದ ನಿರ್ಮಾಣದ ಪಣ ತೊಟ್ಟ ಕ್ರಾಂತಿಕಾರಿಗಳು ಮಾರ್ಕ್ಸ್-ಎಂಗೆಲ್ಸ್".[೨೬] ಕಾರ್ಲ್ ಮಾರ್ಕ್ಸ್ ಮತ್ತು ಎಂಗೆಲ್ಸ್‌ರವರ ವಿಚಾರಧಾರೆಯ ಬೆಳಕಲ್ಲಿ ಪ್ರಸ್ತುತ ಅಧ್ಯಯನವನ್ನು ಮಾಡಲಾಗಿದೆ.

ಸ್ವಾಮಿ ವಿವೇಕಾನಂದ

ವಿಶ್ವ ಪರಂಪರೆಗೆ ಭಾರತದ ಅತ್ಯಪೂರ್ವ ಕೊಡುಗೆ ಸ್ವಾಮಿ ವಿವೇಕಾನಂದ. "ಏಳಿ, ಎದ್ದೇಳಿ, ಗುರಿ ಮುಟ್ಟುವವರೆಗೂ ನಿಲ್ಲದಿರಿ" ಎಂದು ಕರೆಕೊಟ್ಟ ಚೇತನ. ಭಾರತದ ಭವ್ಯ ಪರಂಪರೆಯ ಪುನರುತ್ಥಾನ ಮತ್ತು ಸಾಮಾನ್ಯ ಭಾರತೀಯರ ಉದ್ಧಾರಕಾರ್ಯ ವಿವೇಕಾನಂದರ ಜೀವನದ ಪರಮ ಉದ್ದೇಶವಾಗಿತ್ತು. "ಪಾಶ್ಚಾತ್ಯ ವಿಜ್ಞಾನದ ಸಹಾಯದಿಂದ ನಮ್ಮ ಆರ್ಥಿಕ, ಸಾಮಾಜಿಕ ಸ್ಥಿತಿಗತಿಗಳನ್ನು ಉನ್ನತಗೊಳಿಸಬೇಕು... ಅವರಿಂದ ಕೃಷಿ, ವ್ಯಾಪಾರ ಮೊದಲಾದವುಗಳನ್ನು ಕಲಿತುಕೊಂಡು ವಿನಿಮಯ ರೂಪವಾಗಿ ಅವರಿಗೆ ನಾವು ಏನಾದರೂ ಕೊಡಬೇಕು... ನಮ್ಮವರು ವೇದಾಂತದರ್ಶನದ ಅತ್ಯುದಾರ ಧರ್ಮವನ್ನು ಬೋಧಿಸಲು ಆಗಾಗ ಪಾಶ್ಚಾತ್ಯ ದೇಶಗಳಿಗೆ ಹೋಗಬೇಕು. ಈ ವಿಧವಾದ ಆದಾನ, ಪ್ರದಾನ ಸಂಬಂಧವನ್ನು ಸ್ಥಾಪಿಸಿ, ಅದರಿಂದ ಸ್ವದೇಶ ಕಲ್ಯಾಣವನ್ನು ಸಾಧಿಸಬೇಕು" ಹೀಗೆ ವಿದೇಶ ಪ್ರಯಾಣ ಮಾಡುವ ವಿವೇಕಾನಂದರ ಸ್ಪಷ್ಟ ಉದ್ದೇಶ ಭಾರತೀಯರ ಉದ್ಧಾರವೇ ಆಗಿತ್ತು.[೨೭]

ಶುಷ್ಕ ಧರ್ಮೋಪದೇಶ ಮಾಡುವುದು ವಿವೇಕಾನಂದರ ರೀತಿಯಲ್ಲ. ದೀನದಲಿತರ, ಬಡವರ, ದುರ್ಬಲ ಉದ್ಧಾರಕಾರ್ಯವೇ ನಿಜವಾದ ಧರ್ಮ. ಕೇವಲ ಧರ್ಮೋಪದೇಶ ಮಾಡುವ, ಮಾನವೀಯತೆಯನ್ನು ನಿರ್ಲಕ್ಷಿಸುವ ನಿರ್ಲಜ್ಜ ಜನರನ್ನು ವಿವೇಕಾನಂದರು ತರಾಟೆಗೆ ತೆಗೆದುಕೊಳ್ಳುತ್ತಾರೆ. "ಇಂಡಿಯಾ ದೇಶಕ್ಕೆ ಬೇಕಾಗಿರುವುದು ನಿಮ್ಮ ಧರ್ಮೋಪದೇಶವಲ್ಲ. ಅವರಿಗೆ ಧರ್ಮೋಪದೇಶ ಅಜೀರ್ಣವಾಗುವಷ್ಟು ಬೇಕಾದರೂ ಇದೆ. ಹಸಿವೆಯಿಂದ ದಿನವೂ ಸಾಯುತ್ತಿರುವ ಭರತಖಂಡದ ಲಕ್ಷಾಂತರ ಜನಗಳು ಧರ್ಮ, ಧರ್ಮ ಎಂದು ಒರಲುತ್ತಿಲ್ಲ.

ಅನ್ನ, ಅನ್ನ ಎಂದು ಹಸಿವೆಯಿಂದ ನರಳಿ ಒಣಗಿದ ಗಂಟಲಿನಿಂದ ಕಿರುಚುತ್ತಿದ್ದಾರೆ. ಅವರು ಕೇಳುವುದು ಅನ್ನ, ನೀವು ನೀಡುವುದು ಮಣ್ಣು. ಹಸಿವೆಯಿಂದ ಬಳಲಿ ಸಾಯುತ್ತಿರುವ ಜನಾಂಗಕ್ಕೆ ಧರ್ಮೋಪದೇಶ ಮಾಡುವುದು ಒಂದು ಮಹಾ ನೀಚ ಕಾರ್ಯ. ಹಸಿದವನಿಗೆ ವೇದಾಂತ ಬೋಧಿಸುವುದು ಒಂದು ಅಧಮಾಧಮ ಪಾಪ. ಇಂಡಿಯಾ ದೇಶದಲ್ಲಿ ಯಾವನಾದರೂ ಧನಾರ್ಜನೆಗಾಗಿ ಧರ್ಮಬೋಧೆ ಮಾಡಿದನೆಂದರೆ ಅವನ ಮುಖದ ಮೇಲೆ ಉಗುಳಿ ಸಮಾಜದಿಂದ ಕತ್ತು ಹಿಡಿದು ಹೊರಗೆ ನೂಕುತ್ತಾರೆ. (ಆದರೆ ಇಂದು ಪರಿಸ್ಥಿತಿ ಬದಲಾಗಿದೆ. ಹಣ, ಅಧಿಕಾರದಾಸೆಯತ್ತ ಈ ಕಾರ್ಯ ಮುಖ ಮಾಡಿದೆ. ಇಂಥವರನ್ನು ಜನ ಪೂಜಿಸುವ ಉದಾರತೆ ತೋರುತಿದ್ದಾರೆ). ಹಸಿದು ಸಾಯುವ ನನ್ನ ಸೋದರರ ಸಲುವಾಗಿ ನಿಮ್ಮಿಂದ ಸಹಾಯ ಬೇಡಲು ನಾನಿಲ್ಲಿಗೆ ಬಂದೆ".[೨೮]

ಪಾಶ್ಚಾತ್ಯರ ಮುಂದುವರಿದ ಸಮಾಜ ವಿವೇಕಾನಂದರನ್ನು ಚಿಂತಿಸುವಂತೆ ಮಾಡುತ್ತಿತ್ತು. ಒಂದು ಕಡೆ ಮುಂದುವರಿದ ಈ ಶ್ರೀಮಂತಿಕೆ, ಇನ್ನೊಂದು ಕಡೆ ಭಾರತದಲ್ಲಿನ ಜನರ ಶೋಚನೀಯ ಸ್ಥಿತಿ. ಭಾರತದಲ್ಲೇ ಬಲ್ಲಿದ-ಬಡವರೆಂಬ ಮಹದಂತರ ಕಣ್ಣಿಗೆ ರಾಚುತ್ತಿತ್ತು. ವಿವೇಕಾನಂದರಿಗೆ ಭಾರತದ ಉದ್ಧಾರ ಅಷ್ಟು ತೀವ್ರತರವಾಗಿ ಕಾಡುತ್ತಿತ್ತು ಎಂಬುದಿಲ್ಲಿ ಸ್ಪಷ್ಟವಾಗುತ್ತದೆ. ವಿದೇಶದಲ್ಲಿ "...ರಾತ್ರಿ ಹಂಸತೂಲಿಕಾ ತಲ್ಪದ ಮೇಲೆ ಪವಡಿಸಿದಾಗ ಇದ್ದಕ್ಕಿದ್ದ ಹಾಗೆ ಅವರಿಗೆ ಭಾರತ ದೇಶದ ದಾರಿದ್ರ್ಯದ ನೆನಪಾಯಿತು. ಅಮೆರಿಕಾ ಸಂಯುಕ್ತ ಸಂಸ್ಥಾನದ ಐಶ್ವರ್ಯಕ್ಕೂ, ಭಾರತಾಂಬೆಯ ಬಡತನಕ್ಕೂ ಇರುವ ತಾರತಮ್ಯದ ಪಿಶಾಚ ವಿಕಟಾಕಾರವಾಗಿ ಅವರೆದುರು ನಿಂತಿತು. ಸುರಿಯುತ್ತಿದ್ದ ಕಂಬನಿಗಳಿಂದ "ಹೇ ಜಗಜ್ಜನನಿ, ನನ್ನ ಮಾತೃಭೂಮಿ ಬಡತನದಲ್ಲಿ ಬಿದ್ದು ನರಳುತ್ತಿದೆ. ಕೀರ್ತಿಯಿಂದ ನನಗೆ ಆಗಬೇಕಾದುದೇನು? ಅಯ್ಯೋ ನಮಗೆಂತಹ ದುರವಸ್ಥೆ ಬಂದೊದಗಿದೆ? ಒಂದು ತುತ್ತು ಕೂಳಿಗೆ ಗತಿಯಿಲ್ಲವಲ್ಲ! ಇಲ್ಲಿಯಾದರೂ ಜನಗಳು ಐಶ್ವರ್ಯದಲ್ಲಿ ಓಲಾಡುತ್ತಿದ್ದಾರೆ. ಭಾರತೀಯರನ್ನು ಮೇಲೆತ್ತುವವರಾರು? ಹಸಿದವರಿಗೆ ಅನ್ನವಿಕ್ಕುವವರು ಯಾರು? ಹೇ ಜಗಜ್ಜನನಿ ನಮಗಾವುದಾದರೂ ದಾರಿ ತೋರು!"[೨೯]

"ನಾನು ತತ್ವವೇತ್ತನಲ್ಲ, ಧರ್ಮಗುರುವಲ್ಲ, ಮಹರ್ಷಿಯಲ್ಲ. ದರಿದ್ರರಿಗಾಗಿ ಮರುಗುವ ನಾನೊಬ್ಬ ದರಿದ್ರ" ಎನ್ನುವ ವಿವೇಕಾನಂದರು ಅತ್ಯಂತ ಪ್ರಮುಖರಾಗುತ್ತಾರೆ. "ಓ ನನ್ನ ತರುಣ ಮಿತ್ರರಿರಾ, ಕಂಕಣಬದ್ಧರಾಗಿ ಟೊಂಕ ಕಟ್ಟಿ ನಿಲ್ಲಿ... ಬಡವರಿಗಾಗಿ ಮರುಗಿ; ಕೈಯೆತ್ತಿ ಮೊರೆಯಿಡೀ. ಈ ನನ್ನ ಹೃದಯ ಸಹಾನುಭೂತಿಯನ್ನು ಬಡವರಿಗಾಗಿರುವ ಹೋರಾಟವನ್ನು ಅಜ್ಞಾನಿಗಳಿಗಾಗಿ, ಕೆಳಗೆ ಬಿದ್ದು ತುಳಿಸಿಕೊಳ್ಳುವವರಾಗಿರುವ ಮರುಕವನ್ನು ನಿಮಗೆ ದಾನ ಮಾಡಿ ಕೆಳಗೆ ಸಾಯುತ್ತೇನೆ..."[೩೦] ವಿವೇಕಾನಂದರು ತಮ್ಮ ಸಂಪೂರ್ಣ ಜೀವನವನ್ನು ದಾರಿದ್ರ್ಯದಲ್ಲಿ ಮುಳುಗಿದ ಜನರನ್ನು ಮೇಲಕ್ಕೆತ್ತುವ ಕಾರ್ಯದಲ್ಲಿ ಬಳಸಿದರು.

ವಿದ್ಯಾವಂತರಾದವರು ಸಮಾಜದ ಸುಧಾರಣೆಗಾಗಿ ಪ್ರಯತ್ನಿಸಬೇಕು. ಆಗ ಮಾತ್ರ ವಿದ್ಯೆಗೆ ನಿಜವಾದ ಬೆಲೆ ಪ್ರಾಪ್ತವಾಗುತ್ತದೆ. ಶಿಕ್ಷಣವೆಂದರೆ ಪ್ರತಿಯೊಬ್ಬ ವ್ಯಕ್ತಿಯಲ್ಲಿರುವ ಜ್ಞಾನವನ್ನು ಬೆಳಕಿಗೆ ತರುವ ಮಾಧ್ಯಮ. ಸ್ವಾರ್ಥ, ಭ್ರಷ್ಟಾಚಾರ ಮುಂತಾದವುಗಳಲ್ಲಿ ಮುಳುಗಿರುವ ನಾಗರಿಕ ಜನರಿಗೆ ವಿವೇಕಾನಂದರು ಕರೆ ನೀಡಿದ್ದಾರೆ. ಸಾಮಾನ್ಯರ ಏಳ್ಗೆಗೆ ದುಡಿಯುವಂತೆ ಪ್ರೇರಣೆ ನೀಡಿದ್ದಾರೆ.

"ಎಲ್ಲಿಯವರೆಗೆ ಲಕ್ಷಾಂತರ ಜನರು ದಾರಿದ್ರ್ಯದಲ್ಲಿ ಹೊರಳಾಡುವರೋ, ಅಲ್ಲಿಯವರೆಗೆ ಬಡವರ ರಕ್ತಪಾನದಿಂದ ವಿದ್ಯೆಯನ್ನು ಸಂಪಾದಿಸುವ ಪ್ರತಿಯೊಬ್ಬ ವಿದ್ಯಾವಂತನನ್ನೂ ಆತನು ಋಣ ವಿಮೋಚನೆಗಾಗಿ ಪ್ರಯತ್ನ ಮಾಡದಿದ್ದರೆ, ನೀಚ, ದ್ರೋಹಿಯೆಂದು ನಾನು ಕರೆಯುತ್ತೇನೆ"[೬೧]. ಪತಿತ ನಾರಾಯಣನ ಸೇವೆಯೇ ಪಾವನ ನಾರಾಯಣ ಸೇವೆ ಎಂಬುದು ವಿವೇಕಾನಂದರ ಒಮ್ಮತದ ನಿಲುವು.

೧೮೯೭ರಲ್ಲಿ ವಿವೇಕಾನಂದರು 'ರಾಮಕೃಷ್ಣ ಸಂಘ' ಸ್ಥಾಪಿಸಿದರು. ಇದು ಧರ್ಮ ಸಮನ್ವಯಗಳ ಉಪದೇಶ ನೀಡುತ್ತದೆ. ವಿದ್ಯೆಯ ಜೊತೆಗೆ ಕಾಲೇಜು, ಅನಾಥಾಶ್ರಮ, ಆಸ್ಪತ್ರೆಗಳನ್ನು ತೆರೆದು ಸಾಮಾಜಿಕ-ಮಾನವೀಯ ಸೇವೆಗಳನ್ನು ಸಲ್ಲಿಸುತ್ತಿದೆ. ವಿವೇಕಾನಂದರು ನಂಬುವ ಏಕೈಕ ದೇವರು "ಸಂಕಟದಲ್ಲಿರುವವರು ಮತ್ತು ಎಲ್ಲಾ ಜನಾಂಗದ ಬಡಜನರೇ ನಿಜವಾದ ದೇವರು".[೬೨] ಈ ಸಾಮಾನ್ಯರ ಜನರೇಳ್ಗೆಗೆ ದುಡಿಯುವುದು ರಾಮಕೃಷ್ಣ ಸಂಘದ ಪ್ರಮುಖ ಕರ್ತವ್ಯ. "ನಾನು ಬಡವ, ಬಡವರನ್ನು ಪ್ರೀತಿಸುತ್ತೇನೆ... ಬಡವರಿಗಾಗಿ ಯಾರ ಹೃದಯ ರಕ್ತ ಸುರಿಸುತ್ತದೆಯೋ ಅವರನ್ನು ನಾನು ಮಹಾತ್ಮ ಎಂದು ಕರೆಯುತ್ತೇನೆ. ಇಲ್ಲದಿದ್ದರೆ ಅವನು ದುರಾತ್ಮ..."[೬೩] ಹೀಗೆ ವಿವೇಕಾನಂದರು ಎಚ್ಚರಿಕೆ ಮಿಶ್ರಿತ ಕರೆ ನೀಡಿದ್ದಾರೆ. ಡಿ. ಆರ್. ನಾಗರಾಜುರವರು ಹೇಳುವಂತೆ "ರಾಮಕೃಷ್ಣರದ್ದು ಅಮೂರ್ತ ಆನಂದದ ವ್ಯಕ್ತಿತ್ವವಾದರೆ ವಿವೇಕಾನಂದರರದು ಕಟ್ಟುವ, ಸುಧಾರಿಸುವ, ಜೀವನದ ಸಾಂಸ್ಥಿಕ ಅಂಶಗಳ ಕಡೆಗೆ ಮುಖ್ಯ ಗಮನ ಕೊಟ್ಟ ವ್ಯಕ್ತಿತ್ವ".[೬೪]

ಸಂಘಟಿತರಾಗಿ, ಒಗ್ಗಟ್ಟಾಗಿ ಭಾರತೀಯರು ಹೋರಾಡುವುದಾದರೆ ಅವರ ಮೇಲಿನ ಶೋಷಣೆ, ದೌರ್ಜನ್ಯ ನಿಲ್ಲುವುದು. ಬಡತನ ನಾಶ ಹೊಂದುವುದು. ಸಮಾನತೆ ಇರುವ ಸುಂದರ, ಸಮೃದ್ಧ ಭಾರತದ ನಿರ್ಮಾಣವಾಗುವುದು. ಇದು ವಿವೇಕಾನಂದರ ಸ್ಪಷ್ಟ ನಿಲುವಾಗಿತ್ತು.

ರಾಮಮನೋಹರ ಲೋಹಿಯಾ

ಕಾರ್ಲ್ ಮಾರ್ಕ್ಸ್ ಮತ್ತು ಫ್ರೆಡ್ರಿಕ್ ಎಂಗೆಲ್ಸ್ ಜಗತ್ತಿನ ಸಮಾಜವಾದದ ಸ್ಥಾಪಕರು. ಇವರ ಸಮಾಜವಾದದ ಪ್ರಭಾವ, ಪ್ರೇರಣೆ ಪಡೆದ ಹಲವು ಮಹನೀಯರು ಅನೇಕ ದೇಶಗಳಲ್ಲಿ ಹರಡಿದ್ದಾರೆ. ಭಾರತೀಯ ಸಮಾಜವಾದದ ಪ್ರಮುಖ ಚಿಂತಕ-ರಾಜಕಾರಣಿ ರಾಮಮನೋಹರ ಲೋಹಿಯಾ ಅವರು. ಇವರು ಗಾಂಧಿಯ ಆರಾಧಕರೂ ಹೌದು; ವಿಮರ್ಶಕರೂ ಹೌದು. ಲೋಹಿಯಾ ಅವರು ಬಡವರ, ಎಲ್ಲಾ ಬಗೆಯ ಅವಮಾನಿತ ಜನವರ್ಗದ ಅಂತರಾಳದ ದನಿಯಾಗಿ ಬಾಳಿದವರು. ಗಾಂಧಿಯವರ ನೇರ ಶಿಷ್ಯರೂ, ಮಾನಸ ಪುತ್ರರೂ ಆಗಿದ್ದ ಇವರು ಸಮಾಜದ ಬಗೆ ಬಗೆಯ ಅನ್ಯಾಯಗಳ ಬೇರುಗಳನ್ನು ಹುಡುಕಿ, ಅವುಗಳ ಮೂಲೋಚ್ಚಾಟನೆ ಮಾಡಲು ಬಯಸಿದರು. ವರ್ಗ, ವರ್ಣ, ಜಾತಿ, ಅಸ್ಪೃಶ್ಯತೆ, ಲಿಂಗಭೇದ ನೀತಿಯ ಸೂಕ್ಷ್ಮತೆ, ಕೀಳರಿಮೆಗಳ ವಿರುದ್ಧ ನಿರಂತರ ಹೋರಾಟ ಕೈಗೊಂಡಿದ್ದರು.

"ಭಾರತವು ವಿಶ್ವದ ಅತ್ಯಂತ ಹಸಿದ ಮತ್ತು ಆಹಾರವನ್ನು ಬೇಡುವ ಒಂದು ಭಿಕ್ಷುಕ ದೇಶ ಎಂಬುದು ಎಲ್ಲರಿಗೂ ತಿಳಿದ ಸಂಗತಿಯಾಗಿತ್ತು. ಸ್ವಾತಂತ್ರ್ಯಾನಂತರ ಹದಿನೆಂಟು

ವರ್ಷಗಳಲ್ಲಿ ಇಲ್ಲಿ ಯಾವುದೇ ಅಭಿವೃದ್ಧಿಯಾಗಿಲ್ಲ. ಸ್ಥಿತಿಗತಿ ಇನ್ನೂ ಅಧೋಗತಿಗಿಳಿದಿದೆ. ಈಗ ಅವು ಇನ್ನೂ ಭೀಕರ ಹಂತ ತಲುಪುತ್ತಿವೆ. ಈಗಿನ ಸರ್ಕಾರ ಮಾತ್ತು ಅದರ ನೀತಿ ಮುಂದುವರಿದರೆ ಕ್ಷಾಮವು ವಾರ್ಷಿಕ ಘಟನೆಯಾಗುತ್ತದೆ".[೩೫] ಇಂದಿಗೆ ಭಾರತ ಸ್ವಾತಂತ್ರ್ಯ ಪಡೆದು ಎಪ್ಪತ್ತು ವರ್ಷಗಳಾಗಿದ್ದರೂ ಲೋಹಿಯಾ ಹೇಳಿದ್ದಕ್ಕಿಂತಲೂ ಪರಿಸ್ಥಿತಿಯೇನೂ ಬದಲಾಗಿಲ್ಲ. ಭಾರತ ಪ್ರಕಾಶಿಸುತ್ತಿದೆ ನಿಜ, ಆದರೆ ಅದು ಕಾಗದದ ಮೇಲೆ ಮಾತ್ರ. ಗುಡಿಸಲುಗಳ, ನೊಂದ ಜನಗಳ ಸ್ಥಿತಿಗತಿ ಶೋಚನೀಯವಾಗಿದೆ. 'ಬಡ ಭಾರತ' ಎಂಬ ಪದಮೌಲ್ಯವನ್ನು ಸಾರುವಂತಿದೆ.

ಸೂಕ್ಷ್ಮ ಸಂವೇದನೆಯ ಅಪ್ಪಟ ಭಾರತೀಯ ಮನಸ್ಸು ಲೋಹಿಯಾ ಅವರದ್ದು. ಅವರಿಗೆ ಆಹಾರ ರಾಷ್ಟ್ರಿಯ ತುರ್ತಿನ ವಿಚಾರವಾಗಿತ್ತು. ಪ್ರತಿಯೊಬ್ಬರೂ ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಬಾರದೆಂಬ ಆಕಾಂಕ್ಷೆ, ಅದಮ್ಯ ಚೇತನ ಲೋಹಿಯಾರವರದ್ದಾಗಿತ್ತು. ಸದಾ ಚಲನಶೀಲತೆಯೇ ಲೋಹಿಯಾರ ಜೀವಂತಿಕೆಯ ಲಕ್ಷಣ. "ಜನರ, ಜನರಿಗಾಗಿ ಹಾಗೂ ಜನರಿಂದ ರಚಿತವಾದ ಸರಕಾರವು ಅಂತಿಮವಾಗಿ ಮಾನವಕುಲ ಪರವಾದ ಹಾಗು ಸಮುದಾಯ ಪರವಾದ, ಸಮುದಾಯದಿಂದ ರಚಿತವಾದ ಸರ್ಕಾರವಾಗಿ ಬೆಳೆದು ಹೊಸ ನಾಗರಿಕತೆಯ ಉಗಮವಾಗಬೇಕು".[೩೬] ಈ ರೀತಿಯ ಸಾಮಾಜಿಕ ಕಳಕಳಿ ಲೋಹಿಯಾ ಅವರ ಸೃಜನ ಚಿಂತನೆಯ ಕೇಂದ್ರ ವಸ್ತು.

ಭಾರತ ಬಡತನ ಮತ್ತು ಹಸಿವಿನ ಸಮುದ್ರದಿಂದ ಸುತ್ತುವರಿದಿದೆ. ಭಾರತವು ಮಧ್ಯಮವರ್ಗದವರ ಹಿಡಿತದಲ್ಲಿ ಸಿಕ್ಕಿಬಿಟ್ಟಿದೆ. ಮಧ್ಯಮ ವರ್ಗದವರು ತಾವೇ ಕಟ್ಟಿಕೊಂಡ ಪುಟ್ಟಪುಟ್ಟ ದ್ವೀಪಗಳ ಹೊರಗೆ ಬಂದು ಬಡತನದ ಬೇಗೆಯಲ್ಲಿ ಬೇಯುತ್ತಿರುವ ಜನಸ್ತೋಮದೊಡನೆ ಬೆರೆಯುವ ಕಾಲ ಬಂದೀತೇ? ಪ್ರಾಮಾಣಿಕತೆಯಿಂದ ಮಾತ್ರ ಈ ಕಾರ್ಯ ಸಾಧ್ಯ. ಲೋಹಿಯಾ, ಅಂಬೇಡ್ಕರ್, ಮಾರ್ಕ್ಸ್, ಗಾಂಧಿಯಂಥ ವ್ಯಕ್ತಿಗಳಿಂದ ಇತಿಹಾಸದ ಪುನರ್‌ಸೃಷ್ಟಿ ಸಾಧ್ಯ. ಈ ಮಹಾ ವ್ಯಕ್ತಿಗಳು ದೀರ್ಘಕಾಲ ಬಾಳಿ ಬಂದು, ಬಹು ಆಳದವರೆಗೆ ಬೇರು ಬಿಟ್ಟಿರುವ ಸಾಮಾಜಿಕ ಅವ್ಯವಸ್ಥೆಯನ್ನು ಕೆಡವುವ ಮೊದಲ ಕೆಲಸ ಮಾಡುವರು. ಹೀಗೆ ಬೀಳಿಸುವುದಷ್ಟೇ ಅಲ್ಲ, ಆ ಸಾಮಾಗ್ರಿಯನ್ನೇ ಬಳಸಿ ಸಮಾನತೆ ಇರುವ ಹೊಸ ಸಮಾಜದ ನಿರ್ಮಾಣವನ್ನು ಮಾಡುವರು. ಇದು ಎಲ್ಲರಿಗೂ ಸಾಧ್ಯವಿಲ್ಲ. ಕೆಲವೇ ಕೆಲವರಿಗೆ ಮಾತ್ರ ಸಾಧ್ಯ. ಆದ್ದರಿಂದಲೇ ಇವರು ಮಹನೀಯರಾಗಿರುವುದು.

ಲೋಹಿಯಾರವರು ವ್ಯವಸ್ಥೆಯ ಸೂಕ್ಷ್ಮ ಅಧ್ಯಯನ ಮಾಡಬಲ್ಲರು. ಅವರ ಈ ಶೋಧನೆ ಸತ್ಯಕ್ಕೆ ಹೆಚ್ಚು ಹತ್ತಿರವಾಗಿ ಕಾಣುತ್ತದೆ. "ಬಡವರು ಅತೀ ಬಡವರಾಗುತ್ತಾರೆ ಮತ್ತು ಶ್ರೀಮಂತರು ಅತೀ ಶ್ರೀಮಂತರಾಗುತ್ತಾರೆ ಎಂದು ಮಾತ್ರ ಕೆಲವರು ಹೇಳಬಲ್ಲರು. ಇದು ಕೇವಲ ಅರ್ಧ ಸತ್ಯ. ಮೂರು ರೀತಿಯ ಬದಲಾವಣೆಗಳು ಉಂಟಾಗಿವೆ. ಶ್ರೀಮಂತರು ಇನ್ನಷ್ಟು ಶ್ರೀಮಂತರಾಗಿದ್ದಾರೆ. ಮಧ್ಯಮ ವರ್ಗದ ಒಂದು ಚಿಕ್ಕ ಭಾಗ ಪ್ರತಿ ವರ್ಷ ಮೇಲು ವರ್ಗದ ಸ್ತರಕ್ಕೆ ಏರುತ್ತದೆ. ಅನಾವಶ್ಯಕವಾಗಿ ಆಡಳಿತವನ್ನು ವಿಸ್ತಾರಗೊಳಿಸುವುದರಿಂದ ಮಧ್ಯಮ ವರ್ಗ ಅತಿಯಾಗಿ ಬೆಳೆಯತೊಡಗಿದೆ. ೫ ರಿಂದ ೭ ಕೋಟಿ ಜನ ನಗರಗಳಿಗೆ ವಲಸೆ ಬಂದು

ಕೈಗಾರಿಕೆಗಳಲ್ಲಿ ದುಡಿಯುತ್ತಿರುವುದರಿಂದ ಅವರು ಶೋಷಣೆಗೆ ಒಳಗಾಗುವ ಪ್ರಮಾಣವೂ ಹೆಚ್ಚಾಗಿದೆ".[೩೭]

ಶತಮಾನಗಳಿಂದ ಬಡತನವೆಂಬ ಬೀಸುವ ಕಲ್ಲಿನ ಮಧ್ಯೆ ಭಾರತ, ಭಾರತದ ಜನರು ನರಳುತ್ತಲೇ ಇದ್ದಾರೆ. ಸಾವಿರಾರು ವರ್ಷಗಳಿಂದ ನಮ್ಮನ್ನು ಆವರಿಸಿಕೊಂಡಿರುವ ಈ ಅಸಹ್ಯ ರಾಶಿಯ ನಾಶಕ್ಕೆ ಲೋಹಿಯಾ ಮುಂದಾಗುತ್ತಾರೆ. ಈ ಕ್ರಾಂತಿಕಾರಿ ಚಿಂತನೆಗಾಗಿ ಅವರು ತಮ್ಮ ಜೀವನವನ್ನೇ ಪಣವಾಗಿಟ್ಟವರು. "ಅನ್ಯಾಯವೆನ್ನುವುದು ಯಾವ ಗುಹೆಯಲ್ಲಿ ಅವಿತಿದ್ದರೂ 'ಮ್ಯಾನ್‌ಕೈಂಡ್' ಪತ್ರಿಕೆ ಅದನ್ನು ಬೇಟೆಯಾಡಲು ಪ್ರಯತ್ನಿಸುತ್ತದೆ".[೩೮]

ಲೋಹಿಯಾ ಅವರು ತಮ್ಮನ್ನು ತೊಡಗಿಸಿಕೊಂಡಿದ್ದ ಹೋರಾಟದ ಕ್ಷೇತ್ರ ಬಹು ವ್ಯಾಪ್ತಿಯುಳ್ಳದ್ದು. ರೈತ ಚಳವಳಿ, ವಿದ್ಯಾರ್ಥಿ ಚಳವಳಿ, ಬೆಲೆಯೇರಿಕೆ, ಭಾಷಾ ಸಮಸ್ಯೆ, ಪೋಲೀಸ್ ಮುಷ್ಕರ, ಪೌರಕಾರ್ಮಿಕರ ಮುಷ್ಕರ ಮೊದಲಾದ ಸಮಾಜದ ಹಲವು ರೋಗಗ್ರಸ್ಥ ಅಂಗಭಾಗಗಳಿಗೆ ಔಷಧೋಪಚಾರ ಮಾಡುವ ವೈದ್ಯ ದೃಷ್ಟಿ ಬೀರಿದರು. ಆದುದರಿಂದಲೇ ಅವರಿಗೆ ಸಮಾಜವಾದ, ಪ್ರಜಾಪ್ರಭುತ್ವಗಳು ಸಮಾನತೆಗಾಗಿನ ಸಮರಗಳಾಗಿ ಗೋಚರವಾಗುತ್ತವೆ.

ಹೀಗೆ ಲೋಹಿಯಾ ಅವರ ಬದುಕು-ಬರಹ, ಚಿಂತನೆ ತೆರೆದ ಪುಸ್ತಕದಂತೆ. ಇಲ್ಲಿ ಎಲ್ಲವೂ ಸ್ಪಷ್ಟ, ಖಚಿತ, ಸರಳ,ಅರ್ಥಗ್ರಹಿಕೆಗೆ ಸಿಗುವಂಥವು. ದ್ವಂದ್ವ ನಿಲುವಿಗಿಲ್ಲಿ ಎಡೆಯೇ ಇಲ್ಲ. ಸ್ಪಷ್ಟ ನಿಲುವುಗಳು, ಸ್ಪಷ್ಟ ಆಲೋಚನೆಯ ಪ್ರತಿಬಿಂಬಗಳು. ಅಂತೆಯೇ ಲೋಹಿಯಾ ಸಮಾಜದ ಸಾಮಾನ್ಯ ಜನರ ಏಳ್ಗೆಗೆ ದುಡಿಯುವ ಸ್ಪಷ್ಟ ಗುರಿ ಹೊಂದಿದ್ದರು. ಆಜೀವನ ಪರ್ಯಂತ ಅವಿವಾಹಿತರಾಗಿಯೇ ಉಳಿದು ಸಮಾಜಕ್ಕಾಗಿ ದುಡಿದರು, ಮಡಿದರು.

ಮಹಾತ್ಮ ಗಾಂಧೀಜಿ

ಮಹಾತ್ಮ ಗಾಂಧೀಜಿ ಭಾರತದ ಸ್ವತಂತ್ರ ಏಳ್ಗೆಗಾಗಿ ದುಡಿದ ಧೀಮಂತ ವ್ಯಕ್ತಿ. ಭಾರತೀಯರಿಗೆ ಗಾಂಧೀಜಿ ಕೇವಲ ವ್ಯಕ್ತಿಯಲ್ಲ, ಅದೊಂದು ಶಕ್ತಿ. ಭಾರತದ ಸ್ವಾತಂತ್ರ್ಯಕ್ಕೆ ದಾರಿ ತೋರಿ ಅದರ ಮುಂದಾಳುತ್ವ ವಹಿಸಿದ್ದು, ಶತಶಮಾನಗಳಿಂದ ಶೋಷಣೆಗೊಳಗಾದ ದೀನ ದಲಿತರ, ಸ್ತ್ರೀವರ್ಗದ ವಿಮೋಚನೆಗೆ ಯತ್ನಿಸಿದುದು, ಗ್ರಾಮ ಸ್ವರಾಜ್ಯದ ಸ್ಥಾಪಿತ ಏಳ್ಗೆಯಲ್ಲಿ ಭಾರತದ ಅಭಿವೃದ್ಧಿಯಿದೆ ಎಂಬುದರೆಡೆಗೆ ದೃಷ್ಟಿ ಬೀರಿದುದು ಮುಂತಾಗಿ ಗಾಂಧೀಜಿ ಸಮಗ್ರ ಭಾರತದ ನಿರ್ಮಾಣಕ್ಕೆ ಅವಿರತವಾಗಿ ಶ್ರಮಿಸಿದರು. ತಿಲಕರು ಈ ಹಿಂದೆ ಹೋರಾಡಿದಂತೆ ಜನಸಾಮಾನ್ಯರು ಪ್ರಧಾನ ಧಾರೆಗೆ ಬರಬೇಕು ಎಂಬುದು ಗಾಂಧೀಜಿಯವರ ನಿಲುವಾಗಿತ್ತು. ಆದುದರಿಂದ ಅವರು ಚಂಪಾರಣ್ಯ, ಖೇಡಾ, ಅಲಹಾಬಾದ್‌ನ ರೈತ, ಬಡ ಕೂಲಿ ಕಾರ್ಮಿಕರ ಮೂಲಕ ಹೋರಾಟದ ಹಾದಿ ತುಳಿದರು.

ಆಧುನಿಕ ಯುಗಪ್ರವರ್ತಕರು ಗಾಂಧೀಜಿ. ಜಗತ್ತಿನಲ್ಲಿ ಭೇದ ಇರಬಾರದು, ಯಾರೂ ಯಾರ ಮೇಲೂ ಸವಾರಿ ಮಾಡಬಾರದು. ಈ ತತ್ತ್ವಗಳನ್ನು ಗಾಂಧೀಜಿಯವರು ಸಾರಿ ಹೇಳುತ್ತಿದ್ದರು. ಗಾಂಧೀಜಿಯವರ ಜೀವನ-ಜೀವನ ವೃತ್ತ, ಅವರ ಅತ್ಯಂತ ಸರ್ವವ್ಯಾಪಕವಾದ

ವಿಚಾರ ಪ್ರಣಾಳಿ ಅವರು ತಮ್ಮ ಜೀವಮಾನದಲ್ಲಿ ಅವ್ಯಾಹತವಾಗಿ ನಡೆದುದೆಲ್ಲಾ ಜನಸಾಮಾನ್ಯರ ಪರವಾಗಿತ್ತು.

ಗಾಂಧೀಜಿ ತಮ್ಮ ವಿಚಾರ-ಉಚ್ಚಾರ, ಆಚಾರಗಳ ಮೂಲಕ ಮಾನವನ ಏಳ್ಗೆಗಾಗಿ ದುಡಿದರು. ಜಡ ಸೃಷ್ಟಿಯಲ್ಲಿರುವ ಪದಾರ್ಥಗಳು, ಅವುಗಳಲ್ಲಿರುವ ಶಕ್ತಿ ವಿಶೇಷತೆಗಳು, ಅವುಗಳೊಡನೆ ಸಬಲ-ದುರ್ಬಲ ಹಾಗೂ ಅಜ್ಞಾನಾವೃತ ಬಡಪಾಯಿ ಮಾನವರನ್ನು ಕೂಡಾ ತಮ್ಮಾಳುಗಳನ್ನಾಗಿಸಿ ತಮ್ಮ ದೇಹದ ಹಸಿವನ್ನು ತೀರಿಸಿಕೊಳ್ಳುವುದಕ್ಕಾಗಿ ಕೆಲವೇ ಬಲಿಷ್ಠ ಜನರು ಮೆರೆಯುವುದು ನಿಜವಾದ ಮಾನವ ಸಂಸ್ಕೃತಿಯ ಲಕ್ಷಣವಲ್ಲ ಎಂಬುದನ್ನು ಗಾಂಧೀಜಿ ತಿಳಿಹೇಳಿದರು. ಸರ್ವೋದಯ ಮಂತ್ರ ಸಾರಿದರು. ಸ್ವಾತಂತ್ರ್ಯದ ಜೊತೆಗೆ ಗಾಂಧೀಜಿ ಹೀನ-ದೀನ-ದುರ್ಬಲರ ಸಮಸ್ಯೆಗಳನ್ನು ಪರಿಹರಿಸುವುದು ತಮ್ಮ ಸಾಧನ ಸಂಪತ್ತು ಎಂದು ತಿಳಿದಿದ್ದರು.

ಗಾಂಧಿ ಗ್ರಾಮಾಂತರಗಳಲ್ಲಿ ಬಳಲುವ, ಬಡತನದ ಬೇಗೆಯಲ್ಲಿ ಬೆಂದು ಸುಣ್ಣವಾಗಿರುವ, ಶೋಷಣೆಗೆ ತುತ್ತಾಗಿ ನರಳುವ ಜನರ ಸೇವೆಯನ್ನು ಕೈಗೊಂಡರು. ಮಾನವರು ಪರಸ್ಪರ ಸ್ನೇಹದಿಂದ, ಸಹಕಾರದಿಂದ, ಸಮಭಾವದಿಂದ ಬಾಳಿ ಬಡತನವೆಂಬ ಶಬ್ದವೇ ಇಲ್ಲದಂತೆ ಮಾಡಬಲ್ಲರೆಂದು ಭಾವಿಸಿದ್ದರು. ಶೋಷಣೆರಹಿತ ಆರ್ಥಿಕ, ಸಾಮಾಜಿಕ, ರಾಜಕೀಯ ವ್ಯವಸ್ಥೆ ಸತ್ಯ-ಅಹಿಂಸೆಯ ಮಾರ್ಗದ ಮೂಲಕ ಸಾಧ್ಯ ಎಂದು ಗಾಂಧೀಜಿ ನಂಬಿದ್ದರು, ಅದರಂತೆ ನಡೆದರು.

ಹಳ್ಳಿ ಅಳಿದರೆ ಭಾರತವೂ ಅಳಿಯುತ್ತದೆ ಎಂದರು ಗಾಂಧೀಜಿ. ಬಡತನದ ರೇಖೆಗಿಂತ ಕೆಳಗಿರುವವರ ಸಂಖ್ಯೆ ದಿನೇದಿನೇ ಹೆಚ್ಚುತ್ತಲೇ ಇದೆ. ವ್ಯವಸಾಯ ಭೂಮಿ ಹೆಚ್ಚುತ್ತಿದೆ. ಭಾರತ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಿದೆ. ಆದರೆ ಅನ್ನ ಎಲ್ಲರಿಗೂ ಸಮನಾಗಿ ದೊರಕದು. ಅರೆಊಟ, ಅರೆಬಟ್ಟೆ, ಅರಕ್ಷಿತ ಜೀವನ ಸಾಮಾನ್ಯ ಜನರ ನಿತ್ಯ ಪಾಡಾಗಿದೆ. ಗಾಂಧೀಜಿಯವರ ಎಚ್ಚರದ ಮಾತುಗಳಿವು. "ಹಳ್ಳಿಯ ಜೀವನ ಸಂಸ್ಕೃತಿಯ ಪುನರುತ್ಥಾನವೇ. ನಿಜವಾದ ಸ್ವರಾಜ್ಯ. ಭಾರತದ ಜೀವಜೀವಗಳು ಕೃತಕ ನಗರ ಸಂಸ್ಕೃತಿಯಿಂದ ಎಂದೂ ಪೋಷಿತವಾಗದು. ಅದರ ಅಸಂಖ್ಯಾತ ಹಳ್ಳಿಗಳಲ್ಲಿ ಪಸರಿಸಿ ನಿಲ್ಲುವಂಥ ವಿಕೇಂದ್ರಿತ, ವಿಜ್ಞಾನರಹಿತ, ವಿಶ್ವಾಸವರ್ಧಕ ಗ್ರಾಮ ಸ್ವರಾಜ್ಯ ಸ್ಥಾಪನೆಯಿಂದ ಮಾತ್ರ ಸಾಧ್ಯ".[೩೯]

ಆಚಾರ್ಯ ಕೃಪಲಾನಿ ಅವರು "ಯೋಜನೆಗಳು ಮತ್ತು ಸರ್ವೋದಯ" ಎಂಬ ಕೃತಿಯಲ್ಲಿ ಗಾಂಧೀಜಿಯವರ ಜೀವನಾದರ್ಶದ ಬಗ್ಗೆ ಬೆಳಕು ಚೆಲ್ಲಿದ್ದಾರೆ. "ಭಾರತದ ಸಮಸ್ಯೆ ಆ ವಾದ ಈ ವಾದಗಳ ಸಮಸ್ಯೆಯಲ್ಲ ಎಂದು ಗಾಂಧೀಜಿ ತಿಳಿದಿದ್ದರು. ಬಂಡವಾಳವಾದ, ಸಮಾಜವಾದ ಅಥವಾ ಸಾಮ್ಯವಾದ ಎಂಬ ವಾಗ್ವಾದನ ಅಲ್ಲ. ಭಾರತದ ಅಸಂಖ್ಯಾತ ಗ್ರಾಮಗಳಲ್ಲಿ ಅರೆಮಾನವ ಸ್ಥಿತಿಯಲ್ಲಿ ಬದುಕುತ್ತಿರುವ ಅಗಾಧ ದೇಶಬಾಂಧವರ ಸಹಿಸಲಾಗದ ದಾರಿದ್ರ್ಯ ಮತ್ತು ಅಜ್ಞಾನ ಎಂದು ಮನಗಂಡರು. ಈ ಜನಕೋಟಿಯ ಮೇಲ್ಮೆಯಿಲ್ಲದೆ ಸ್ವರಾಜ್ಯಕ್ಕೆ ಬೇರೆ ಅರ್ಥವೇ ಇಲ್ಲ ಎಂಬುದೇ ಅವರ ದೃಢನಿಶ್ಚಯ. 'ಹಳಸಿದ ರೊಟ್ಟಿ, ಒಂದು ಚಿಟಿಕೆ ಉಪ್ಪು ಉಂಡು ದಿನ ಕಳೆಯುವ ದೀನ ಸ್ಥಿತಿಯಲ್ಲಿಯೇ ತೆವಳುತ್ತಾ ದುಡಿಯುತ್ತಿರುವ ಅಥವಾ ನಿರುದ್ಯೋಗಿಗಳಾಗಿರುವ ಜನಕೋಟಿಗಾಗಿ ಸ್ವರಾಜ್ಯ ಪಡೆಯಲೆಂದೇ ನಾನು ಶ್ರಮಿಸುತ್ತಿದ್ದೇನೆ'

ಎಂದರು. ಈ ಹೃದಯವಿದ್ರಾವಕ ದಾರಿದ್ರ್ಯಕ್ಕೆ ಕಾರಣ ದುಡಿಮೆಯ ಅಪಮೌಲ್ಯ. ಈ ದೇಶದ ಬಡಜನತೆಗೆ ಅಷ್ಟೇ ಅಲ್ಲ ಜಗತ್ತಿನ ದಲಿತಕೋಟಿಗೆ ಬೇಕಾದುದೇನು? ಸಂಭಾವನೆಯುಳ್ಳ ಉದ್ಯೋಗ, ಸಾಮಾಜಿಕ ಭದ್ರತೆ ಮತ್ತು ಅಭಿವೃದ್ಧಿಯಾಗುವ ಜೀವನಮಟ್ಟ – ಆಡಳಿತಗಾರರಿಗೆ, ಬುದ್ಧಿಜೀವಿಗಳಿಗೆ ಈ ವಿಷಯ ನನಗಿಂತ ಹೆಚ್ಚು ಅರಿವಾಗಿರಬೇಕು" ಎಂದಿದ್ದಾರೆ.[೪೦]

ಗಾಂಧೀಜಿಯ ಬಗೆಗೆ ಅರ್ಥಶಾಸ್ತ್ರಜ್ಞ ಗುನ್ನಾರ್ ಮಿರ್ಡಾಲ್ ಹೇಳಿರುವ ಮಾತುಗಳು ಅವರ ಸಾಮಾಜಿಕ ಕಳಕಳಿಯನ್ನು ತಿಳಿಸುತ್ತವೆ. "ಆರ್ಥಿಕ ಬೆಳವಣಿಗೆಯಲ್ಲಿ ವ್ಯಕ್ತಿಯೇ ಕೇಂದ್ರ ಬಿಂದು ಎಂದು ಭಾರತದ ಮಹಾತ್ಮಾ ಗಾಂಧೀಜಿ ಏಕಪ್ರಕಾರವಾಗಿ ಒತ್ತಿ ಹೇಳುತ್ತಿದ್ದರು. ಗಾಂಧಿ ಶ್ರೇಷ್ಠ ಚಿಂತನಶೀಲರು. ವಿಚಾರಬದ್ಧ ಯೋಜನಾ ಚತುರರು. ಅವರ ಯೋಜನೆ ಸಮಗ್ರ ದೃಷ್ಟಿಯದ್ದು. ಸಮಾನತೆಯ ಸಾಧನೆಗಾಗಿ ಭೂಮಿ ಮತ್ತು ಸಂಪತ್ತುಗಳ ಹಂಚಿಕೆ ಇವು ಯೋಜನೆಯ ಮೂಲ ಅಂಶಗಳು. ಇತ್ತೀಚಿನ ದಿನಗಳಲ್ಲಿ ನಾವು ಪುನಃ ಗಾಂಧಿ ಆದರ್ಶಗಳಿಗೆ ಮರಳಿದ್ದೇವೆ. ಆರ್ಥಿಕ ತಜ್ಞರು ಯಾವುದನ್ನು ಸರ್ವಾಂಗೀಣ ಯೋಜನೆ ಎನ್ನುವರೋ ಅದು ಗಾಂಧೀಜಿ ಸದಾ ಹೇಳುತ್ತಿದ್ದ ಮಾತುಗಳ ಆಧುನಿಕ ಪುನರಾವರ್ತನೆ".[೪೧]

ಗಾಂಧೀಜಿಯವರು ಸತತವಾಗಿ ದುಡಿದುದು ಸಾಮಾನ್ಯ ಜನರ ಏಳಿಗೆಗಾಗಿ, ಬಾಳುವೆಗಾಗಿ. ಆಚಾರ್ಯ ವಿನೋಭಾ ಭಾವೆ ಅವರ ಭೂದಾನ–ಗ್ರಾಮದಾನ ಚಳವಳಿಯ ಪ್ರಧಾನೋದ್ದೇಶ ಸಾಮಾಜಿಕ ಕ್ರಾಂತಿ, ಸರ್ವೋದಯ ಸಮಾಜದ ಸ್ಥಾಪನೆ. ಜಯಪ್ರಕಾಶ್ ನಾರಾಯಣರಂಥ ವಿಚಾರವಂತರು ಗಾಂಧಿ ವಿಚಾರಧಾರೆಯ ಮೂಲಕ ಸರ್ವೋದಯಕ್ಕಾಗಿ ದುಡಿದರು. ಇವರೆಲ್ಲರ ಮೂಲೋದ್ದೇಶ ಕಟ್ಟಕಡೆಯವನಿಗೂ ನ್ಯಾಯ (ಅನ್ ಟು ದಿ ಲಾಸ್ಟ್) ದೊರೆಯಬೇಕೆಂಬುದೇ ಆಗಿತ್ತು. ಆದುದರಿಂದ ಸಾಮಾನ್ಯ ಜನರ ಉದ್ಧಾರ ಕಾರ್ಯಕ್ಕಾಗಿ ಮಡಿದ ಇವರ ಸಾಧನೆ ಸ್ಮರಣೆಯವಾದುದೂ, ಅನುಕರಣೀಯವಾದುದೂ ಆಗಿದೆ.

೫.೪ ಹಸಿವಿನ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳು

ಹಸಿವು ಭಾರತದ ಬಹುಮುಖಿ ಸಮಸ್ಯೆ. ಹಸಿವಿಗೆ ಮುಖ್ಯ ಕಾರಣ ಬಡತನವೇ ಆಗಿದೆ. ಮೊದಲು ಬಡತನ ನಿವಾರಣೆಯಾದರೆ, ಹಸಿವು ತನ್ನಷ್ಟಕ್ಕೆ ತಾನೇ ನಿವಾರಣೆಯಾಗುತ್ತದೆ. ಆದ್ದರಿಂದ ಹಸಿವು ಮತ್ತು ಬಡತನದ ನಿವಾರಣೆಗೆ ನಿರಂತರ ಪ್ರಯತ್ನ ನಡೆಯುತ್ತದೇ ಇದೆ. ಇತಿಹಾಸದ ಆರಂಭ ಕಾಲದಿಂದಲೇ ಮಾನವನು ಹಸಿವು, ಬಡತನ ಮತ್ತು ಬಡವರನ್ನು ಅರಿತಿದ್ದಾನೆ. ಧರ್ಮ ಮತ್ತು ತತ್ವ ಸಿದ್ಧಾಂತಗಳು ಬಡತನದ ಪರಿಹಾರ ಮತ್ತು ಬಡವನ ಕಷ್ಟಕಾರ್ಪಣ್ಯಗಳ ನಿವಾರಣೆಗೆ ಹಿಂದಿನಿಂದಲೇ ಪ್ರಯತ್ನಿಸಿದ್ದವು. ಕೆಲವೊಮ್ಮೆ ಉಪದೇಶ ಮತ್ತು ಸಾಂತ್ವನಗಳ ಮೂಲಕ, ಕೆಲವೊಮ್ಮೆ ಆಮಿಷ ಮತ್ತು ಬೆದರಿಕೆಗಳ ಮೂಲಕ. ಕೆಲವರು ಅಸಮಾನತೆ ಮತ್ತು ಉಚ್ಚ ನೀಚತೆಗಳಿಲ್ಲದ ಬಡತನ ಮತ್ತು ದಾರಿದ್ರ್ಯವಿಲ್ಲದಂತಹ ಜಗತ್ತಿನ ಕಾಲ್ಪನಿಕ ಚಿತ್ರವನ್ನು ಬಿಡಿಸಿ ತೋರಿಸಿದರು. ಕೇವಲ ಪುಸ್ತಕದ ಪುಟಗಳಿಗೆ ಸೀಮಿತವಾಗಿದ್ದ ಜಗತ್ತು! ವಾಸ್ತವಿಕ ಜಗತ್ತಿನಲ್ಲಿ ಅದು ಕಾರ್ಯಗತವಾಗಲಿಲ್ಲ. ಪ್ಲೇಟೋನ 'ರಿಪಬ್ಲಿಕ್' ಅದಕ್ಕೆ ಉದಾಹರಣೆಯಾಗಿದೆ. ಕೆಲವರ ಚಿಕಿತ್ಸೆಯು ರೋಗಕ್ಕಿಂತ ಕಠಿಣವಾಗಿತ್ತು. ಐದನೇ ಶತಮಾನದಲ್ಲಿ

ಫ್ರಾನ್ಸ್‌ನಲ್ಲಿ ಹೊನ್ನು ಮತ್ತು ಮಣ್ಣು-ಹೆಣ್ಣು ಸಮಾಜದ ಸಾರ್ವಜನಿಕ ಸೊತ್ತೆಂದು ವಾದಿಸಿದ ಮಾಸ್ದಕ್‌ನ ಚಳವಳಿಯು ಆ ವರ್ಗಕ್ಕೆ ಸೇರಿದೆ.[೪೨]

ಭಾರತದಲ್ಲಿ ಹಸಿವು ಮತ್ತು ಬಡತನ ಬಹುದೊಡ್ಡ ಸಮಸ್ಯೆಯಾಗಿ ಪರಿಣಮಿಸಿವೆ. "ಬಡವರು ಇತರರಂತೆ ನಾಗರಿಕ ಮತ್ತು ರಾಜಕೀಯ ಹಕ್ಕುಗಳನ್ನು ಹೊಂದಿದ್ದರೂ ಕೂಡಾ ಅವರ ಇತರೆಲ್ಲಾ ಪರಿಸ್ಥಿತಿಗಳಿಂದಾಗಿ ಉಳಿದವರಂತೆ ರಾಜಕೀಯವಾಗಿ ಪ್ರಭಾವಿಯಾಗಲಾರರು"[೪೩] ಎಂಬ ಮಿಲಿಬ್ಯಾಂಡ್‌ರವರ ಮಾತು ಬಡವರ ಬಹುಮುಖದ ಸಮಸ್ಯೆಯನ್ನು ಅನಾವರಣ ಮಾಡುತ್ತದೆ.

ಬಡತನದಿಂದ ಉಂಟಾಗುವ ಪರಿಣಾಮಗಳು ಭೀಕರವಾದವುಗಳು ಎಂಬುದು ಸತ್ಯ. ಭೂತದ ರೂಪದ ಬಡತನವನ್ನು ನಿವಾರಿಸಲು ಭಾರತವನ್ನಾಳುತ್ತಿದ್ದ ಅಂದಿನ ಬ್ರಿಟಿಷರು ಗಂಭೀರ ಪ್ರಯತ್ನ ಮಾಡಲಿಲ್ಲ. ಸ್ವಾತಂತ್ರ್ಯ ನಂತರ ಭಾರತ ಸರ್ಕಾರ ಬಡತನವನ್ನು ಬುಡಸಹಿತ ಕಿತ್ತು ಹಾಕುವ ಉದ್ದೇಶದಿಂದ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತು.

- **ಪಂಚವಾರ್ಷಿಕ ಯೋಜನೆಗಳು:** ಭಾರತದ ಸ್ವಾತಂತ್ರ್ಯಾನಂತರ ೧೯೫೦-೫೧ ರಿಂದ ಇದುವರೆಗೆ ಹಲವು ಪಂಚವಾರ್ಷಿಕ ಮತ್ತು ವಾರ್ಷಿಕ ಯೋಜನೆಗಳು ಜಾರಿಗೊಂಡಿವೆ. ಇವುಗಳ ಮೂಲಕ ಕೋಟ್ಯಂತರ ರೂಪಾಯಿ ವ್ಯಯಿಸಿ ಬಡತನವನ್ನು ಪ್ರತ್ಯಕ್ಷವಾಗಿಯಾಗಲೀ ಅಥವಾ ಪರೋಕ್ಷವಾಗಿಯಾಗಲೀ ಬುಡಸಹಿತ ಕೀಳುವ ಉದ್ದೇಶ ಹೊಂದಿದೆ. ಆದರೆ ಯೋಜನೆಗಳ ಅನುಷ್ಠಾನದಲ್ಲಿನ ವಿಫಲತೆ ಹಸಿವು ಮತ್ತು ಬಡತನ ಇಂದಿಗೂ ಅಸ್ತಿತ್ವದಲ್ಲಿರಲು ಕಾರಣವಾಗಿದೆ.

- **ರಾಷ್ಟ್ರೀಕರಣ:** ರಾಷ್ಟ್ರೀಕರಣದ ಹಿಂದಿನ ಮುಖ್ಯ ಉದ್ದೇಶ ದುರ್ಬಲ ವರ್ಗಗಳಿಗೆ ಸಾಲಸೌಲಭ್ಯ ನೀಡುವುದೇ ಆಗಿದೆ. ಗ್ರಾಮೀಣ ಅರ್ಥ ವ್ಯವಸ್ಥೆಯನ್ನು ಆಧುನಿಕಗೊಳಿಸುವುದು ಅದರ ಮುಖ್ಯ ಉದ್ದೇಶವಾಗಿದೆ. ೧೯೬೯ ಮತು ೧೯೮೦ರಲ್ಲಿ ಬ್ಯಾಂಕುಗಳ ರಾಷ್ಟ್ರೀಕರಣ ಮಾಡಿದ್ದು, ಹಲವು ಕೈಗಾರಿಕಾ ಸಂಸ್ಥೆಗಳ ರಾಷ್ಟ್ರೀಕರಣ ಈ ನಿಟ್ಟಿನಲ್ಲಿ ಕೆಲಸ ಮಾಡಲು ಕೈಗೊಂಡ ಕ್ರಮಗಳಾಗಿವೆ. ಆದರೆ ಪರಿಣಾಮಕಾರಿಯಲ್ಲದ ಜಾರಿಯಿಂದ ಮಿಶ್ರಫಲ ಕಂಡಿದೆ.

- **೨೦ ಅಂಶಗಳ ಕಾರ್ಯಕ್ರಮ:** ಬಡತನ ಮತ್ತು ಆರ್ಥಿಕ ಶೋಷಣೆಯನ್ನು ನಿವಾರಣೆ ಮಾಡಲು ಮತ್ತು ಸಮಾಜದ ದುರ್ಬಲ ವರ್ಗಗಳನ್ನು ಮೇಲಕ್ಕೆತ್ತಲು ೨೦ ಅಂಶಗಳ ಕಾರ್ಯಕ್ರಮ ಘೋಷಿಸಲಾಯ್ತು. ಇತರ ಹಲವು ಅನುಕೂಲತೆಗಳನ್ನು ಒದಗಿಸಿ ಅಂತಿಮವಾಗಿ ಜನರ ಕಲ್ಯಾಣ ಸಾಧಿಸುವುದು ಇದರ ಮುಖ್ಯ ಉದ್ದೇಶವಾಗಿತ್ತು. ೧೯೭೫, ೧೯೮೨, ೧೯೮೬ರಲ್ಲಿ ಅಂದಿನ ಸರಕಾರ ೨೦ ಅಂಶಗಳ ಕಾರ್ಯಕ್ರಮ ಜಾರಿಗೆ ತಂದಿತು. ಇದರಿಂದ ಗ್ರಾಮೀಣ ಭಾರತದ ಜನರಿಗೆ ಕೆಲವು ಅನುಕೂಲತೆಗಳು ದೊರೆತರೂ ಈ ಯೋಜನೆ ಪೂರ್ಣ ಯಶಸ್ವಿಯಾಗದೆ ರಾಜಕೀಯ ಲಾಭ ಮಾತ್ರ ಆಯಿತು. ಆದುದರಿಂದ ಇದನ್ನು ಪುನಃ ೨೦೦೬ರಲ್ಲಿ ಜಾರಿಗೆ ತರಲಾಗಿದೆ.

- **ಭೂಸುಧಾರಣೆ:** ಗ್ರಾಮೀಣ ಭಾಗದಲ್ಲಿ ಬಡತನ ಅಸ್ತಿತ್ವದಲ್ಲಿರಲು ಭೂ ಒಡೆತನ ಪ್ರಮುಖ ಕಾರಣ. ಆದ್ದರಿಂದ 'ಉಳುವವನೇ ಹೊಲದೊಡೆಯ' ಮುಂತಾದ ಕಾರ್ಯಕ್ರಮಗಳ ಮೂಲಕ ಭೂಸುಧಾರಣೆ ಮಾಡಿ ಬಡತನ ಹೋಗಲಾಡಿಸುವುದು ಇದರ ಮೂಲೋದ್ದೇಶ. ಆದರೆ ರಾಜಕೀಯ ಇಚ್ಛಾಶಕ್ತಿಯ ಕೊರತೆಯಿಂದ ಇದು ಕೂಡಾ ಫಲಕಾರಿಯಾಗಲಿಲ್ಲ.

- **ಜನಸಂಖ್ಯಾ ನಿಯಂತ್ರಣ:** ದೇಶದ ಹಲವು ಸಮಸ್ಯೆಗಳಿಗೆ ಇದು ಮೂಲ ಕಾರಣ. ಆದ್ದರಿಂದ ಜನಸಂಖ್ಯೆಯನ್ನು ಹತೋಟಿಯಲ್ಲಿಟ್ಟರೆ ಬಡತನದಂತಹ ಭೀಕರ ಸಮಸ್ಯೆಗೆ ಪರಿಹಾರ ಕಾಣಬಹುದು. ಹಲವು ಯೋಜನೆಗಳ ಮೂಲಕ ಇದು ಮಂದಗತಿಯಲ್ಲಿ ಸಾಗಿದೆ. ನಿರೀಕ್ಷಿತ ಮಟ್ಟದಲ್ಲಿ ಯಶಸ್ಸು ಕಂಡಿಲ್ಲ.

- **ಸಣ್ಣ ಮತ್ತು ಗೃಹ ಕೈಗಾರಿಕಾಭಿವೃದ್ಧಿ:** ಈ ಕೈಗಾರಿಕೆಗಳನ್ನು ಪೋಷಿಸುವ ಮೂಲಕ ಗ್ರಾಮೀಣ ಮತ್ತು ನಗರ ಭಾಗದ ಬಡತನವನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡಬಹುದಾಗಿದೆ.

- **ಕೈಗಾರಿಕಾಭಿವೃದ್ಧಿ:** ಸಣ್ಣ ಕೈಗಾರಿಕೆಗಳೊಡನೆ ಬೃಹತ್ ಕೈಗಾರಿಕೆಗಳನ್ನು ಬೆಳೆಸುವುದರ ಮೂಲಕ ಲಕ್ಷಾಂತರ ಉದ್ಯೋಗ ಸೃಷ್ಟಿ ಸಾಧ್ಯ. ನಿರುದ್ಯೋಗ ನಿವಾರಣೆ ಮುಖೇನ ಬಡತನವನ್ನು ಸ್ವಲ್ಪ ಮಟ್ಟಿಗೆ ನಿವಾರಿಸಬಹುದು.

- **ಶಿಕ್ಷಣ:** ಮೂಲಭೂತವಾಗಿ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಶಿಕ್ಷಣದಿಂದ ಮೂಢತೆ, ಸಾಂಪ್ರದಾಯಿಕ ಮನೋಭಾವ ನಶಿಸಿ ವೈಜ್ಞಾನಿಕ ಚಿಂತನೆ ಬೆಳೆಯಲು ಸಾಧ್ಯ. ಶಿಕ್ಷಣದ ಜೊತೆಜೊತೆಗೆ ಉದ್ಯೋಗಾವಕಾಶಗಳ ಸೃಷ್ಟಿಯೂ ಅತೀ ಅಗತ್ಯ. ಜೊತೆಗೆ ಎಲ್ಲಾ ಕೆಲಸಗಳಿಗೂ ಗೌರವ ಕೊಡುವುದು ಮುಖ್ಯ. ಉದ್ಯೋಗ ದೊರೆತರೆ ಜನರು ಮಾಡುತ್ತಿರುವ ಕೊಲೆ, ದರೋಡೆ ಮುಂತಾದವು ನಿಂತು ಹಸಿವು ಮತ್ತು ಬಡತನ ನಿವಾರಣೆಯ ಜೊತೆಗೆ ಪ್ರಗತಿಶೀಲ ಸಮಾಜದ ನಿರ್ಮಾಣ ವೃದ್ಧಿಯೂ ಸಾಧ್ಯ.

- **ಮೂಲ ಸೌಕರ್ಯಗಳ ವಿಸ್ತರಣೆ:** ಸಾರಿಗೆ-ಸಂಪರ್ಕ, ಶಿಕ್ಷಣ, ತರಬೇತಿ, ವೈದ್ಯಕೀಯ ಸೌಲಭ್ಯ ಮೊದಲಾದ ಮೂಲಭೂತ ಸೌಲಭ್ಯಗಳನ್ನು ಒದಗಿಸಿ ಕೊಡುವುದರ ಮೂಲಕ ಬಡತನ ನಿವಾರಣೆ ಸಾಧ್ಯ.

ಬಡತನದ ನಿವಾರಣೆಗೆ ಇತರೆ ಕಾರ್ಯಕ್ರಮಗಳು

೧. ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ (IRDP).

೨. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮ (NREP).

೩. ಅಂತ್ಯೋದಯ ಕಾರ್ಯಕ್ರಮ.

೪. ಜವಾಹರ್ ರೋಜ್‌ಗಾರ್ ಯೋಜನೆ (JRY).

೫. ಗ್ರಾಮೀಣ ಯುವಕರ ಸ್ವಯಂ ಉದ್ಯೋಗ ಯೋಜನೆ.

೬. ಗ್ರಾಮೀಣ ಭೂರಹಿತ ಉದ್ಯೋಗ ಭರವಸಾ ಕಾರ್ಯಕ್ರಮ (RLEGP).

೭. ಗರೀಬಿ ಹಟಾವೊ ಮತ್ತು ಬೇಕಾರಿ ಹಟಾವೊ ಕಾರ್ಯಕ್ರಮ.

೮. ಕನಿಷ್ಠ ಅಗತ್ಯಗಳ ಕಾರ್ಯಕ್ರಮ (MNP).

೯. ನಗರದ ನಿರುದ್ಯೋಗ ನಿವಾರಣಾ ಕಾರ್ಯಕ್ರಮ.

ಹಸಿವು, ಬಡತನದಂತಹ ಮೂಲಭೂತವಾದ ಮತ್ತು ಗಂಭೀರವಾದ ಸಮಸ್ಯೆಗಳ ನಿವಾರಣೆಗೆ ಸರಕಾರ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಪಂಚವಾರ್ಷಿಕ ಯೋಜನೆಗಳಲ್ಲೂ ಆದ್ಯತೆ ನೀಡಲಾಗಿದೆ. ಬಡತನ ನಿವಾರಣೆಗೆ ನೀಡಿರುವ ಪ್ರಚಾರ, ಸಿದ್ಧತೆಗೆ ಹೋಲಿಸಿದರೆ ಸಾಧನೆ ತುಂಬಾ ಕಡಿಮೆ. ದೇಶದಾದ್ಯಂತ ಇಂದಿಗೂ ಕೋಟ್ಯಂತರ ಬಡಜನರ ಇರುವಿಕೆ ಇದಕ್ಕೆ ಸಾಕ್ಷಿ. ಸರ್ಕಾರದ ಈ ಯೋಜನೆಗಳಲ್ಲಿ ಯಶಸ್ಸಿಗಿಂತ ವಿಫಲಗೊಂಡ ಯೋಜನೆಗಳ ಸಂಖ್ಯೆಯೇ ವಿಪುಲವಾಗಿದೆ. ಅದಕ್ಕೆ ಕಾರಣಗಳನ್ನು ಹೀಗೆ ಪಟ್ಟಿ ಮಾಡಬಹುದು.

- ನಿಜಕ್ಕೂ ಆರ್ಥಿಕ ಸಹಾಯದ ಅಗತ್ಯವಿರುವ ಬಹಳಷ್ಟು ಜನರಿಗೆ ಸರ್ಕಾರಿ ಕಾರ್ಯಕ್ರಮ ಮತ್ತವುಗಳ ನಿಜವಾದ ಪ್ರಯೋಜನದ ಬಗ್ಗೆ ಯಾವುದೇ ತಿಳುವಳಿಕೆ ಇರುವುದಿಲ್ಲ.

- ಸರ್ಕಾರಿ ಕಾರ್ಯಕ್ರಮದ ಅವಶ್ಯಕತೆ ಅನಿವಾರ್ಯವಾಗಿರುವ ಅದೆಷ್ಟೋ ಜನರು ವ್ಯಕ್ತಿಗತ ಸ್ವಾಭಿಮಾನದ ಕಾರಣದಿಂದ ಅದಕ್ಕೆ ಕೈ ಚಾಚುವುದಿಲ್ಲ. ದಾನವೆಂಬಂತೆ ನೀಡಿದುದನ್ನು ಸ್ವೀಕರಿಸುವುದು ಆತ್ಮಗೌರವವುಳ್ಳ ಮಂದಿಗೆ ಮುಜುಗರವನ್ನುಂಟು ಮಾಡುವುದು ಮತ್ತು ಕೆಲವೊಮ್ಮೆ ಅವಮಾನಕರವೆನಿಸುವುದು.

- ಸರ್ಕಾರಿ ಕಾರ್ಯಕ್ರಮಗಳ ಲಾಭ ಪಡೆಯಲು ಕಾಯ್ದು ಕುಳಿತಿರುವ ಮಂದಿಗೆ ಮಾತ್ರ ಅವುಗಳಿಂದ ಪ್ರಯೋಜನವಾಗುವುದೇ ವಿನಃ ನಿಜಕ್ಕೂ ಸಹಾಯ ಯಾರಿಗೆ ಅಗತ್ಯವಿದೆ ಅಂಥ ಜನರನ್ನು ಅದು ತಾನಾಗಿಯೇ ಹುಡುಕಿಕೊಂಡು ಹೋಗಿ ತಲುಪುವುದಿಲ್ಲ.

- ಸರ್ಕಾರದ ಕಾರ್ಯಕ್ರಮಗಳ ಆರ್ಥಿಕ ಪ್ರಯೋಜನ ಪಡೆಯುವುದರ ಬಗ್ಗೆ ಇರಬಹುದಾದಂಥ ಬಹಳ ಸಂಕೀರ್ಣವಾದ ಮತ್ತು ತ್ರಾಸದಾಯಕವೆನಿಸುವ ನಿಯಮಗಳು ಎಷ್ಟೋ ಬಡವರನ್ನು ಅದರಿಂದ ಬಹು ದೂರವಿಡುತ್ತವೆ. ಅಂಥ ಕಾರ್ಯಕ್ರಮಗಳ ಪ್ರಯೋಜನ ಪಡೆದುಕೊಳ್ಳುವ ಅರ್ಹತೆಯುಳ್ಳ ಮಂದಿ ಕೂಡಾ ಸರ್ಕಾರಿ ಇಲಾಖೆಗಳ ನೌಕರರ ಮುಂದೆ ನಿಂತು ಅವರ ವೈಯಕ್ತಿಕ ವಿಷಯಗಳಿಗೆ ಸಂಬಂಧಪಟ್ಟಂತೆ ಕೇಳುವ ಪ್ರಶ್ನೆಗಳಿಗೆ ಹಲ್ಲುಗಿಂಜುತ್ತಾ ಉತ್ತರ ಹೇಳಿಕೊಂಡಿರಲು

ಸಿದ್ಧರಾಗಿರುವುದಿಲ್ಲ. ಆದ್ದರಿಂದ ನಿಜಕ್ಕೂ ಅರ್ಹತೆಯುಳ್ಳ ಮಂದಿ ಆ ಕಾರ್ಯಕ್ರಮಗಳ ಉಪಯೋಗವನ್ನೇ ಪಡೆಯದೆ ತಮ್ಮ ಬಡತನದಲ್ಲಿಯೇ ಸಂತೃಪ್ತಿಯನ್ನು ಕಾಣಬಹುದು.

- ಸರಕಾರದ ಹಲವು ಯೋಜನೆಗಳು ದೋಷಪೂರ್ಣವಾಗಿವೆ ಮತ್ತು ರಾಜಕೀಯ ದುರುದ್ದೇಶ ಹೊಂದಿವೆ.

- ಹಲವು ಯೋಜನೆಗಳ ನಡುವೆ ಸರಿಯಾದ ಹೊಂದಾಣಿಕೆ ಇಲ್ಲದೆ ಇರುವುದೂ ಕೂಡಾ ಬಡತನದ ಸುಧಾರಣೆಗೆ ತೊಡಕಾಯಿತು.

- ಬಡತನ ನಿವಾರಣೆಗೆ ಸರಕಾರ ಜಾರಿಗೊಳಿಸುವ ಯೋಜನೆಯ ಉಸ್ತುವಾರಿ ನೋಡಿಕೊಳ್ಳುವ ಸರ್ಕಾರಿ ನೌಕರರಿಗೆ ಸರ್ಕಾರ ನಿಗದಿಪಡಿಸಿದ ಗುರಿಯ ಬಗ್ಗೆ ವಿಶ್ವಾಸ ಇಲ್ಲದಿರುವುದು ಮತ್ತು ಅವರ ಪಾತ್ರದ ಬಗೆ ಅವರಿಗೆ ಸರಿಯಾದ ಬದ್ಧತೆ ಇಲ್ಲದಿರುವುದು ಯೋಜನೆಯ ವಿಫಲತೆಗೆ ಪ್ರಮುಖ ಕಾರಣ.

- ಬಡತನ ಹೋಗಲಾಡಿಸಲು ಬೇಕಾದ ಸಂಕಲ್ಪಶಕ್ತಿಯ ಕೊರತೆ ಯೋಜನೆಗಳ ವಿಫಲತೆಗೆ ಕಾರಣವಾಗಿದೆ.

- ಜವಾಹರ್ ಯೋಜನೆಗೆ ನಿಗದಿಯಾದ ನಿಧಿಯನ್ನು ಕೆಲ ಸರ್ಕಾರಗಳು ದುರುಪಯೋಗಪಡಿಸಿಕೊಂಡು ಯೋಜನೆಯ ನಿಷ್ಫಲಕ್ಕೆ ಕಾರಣವಾಗಿವೆ.

"ಹಸಿವು ಮತ್ತು ಬಡತನ ಎಂಬುವು ಗಂಭೀರವಾದ ಸಮಸ್ಯೆಗಳು. ಬಡತನ ನಿವಾರಣೆಯಾದಲ್ಲಿ ಹಸಿವು ಪರಿಹಾರವಾದೀತು. ಆದ್ದರಿಂದ ಬಡತನದ ನಿವಾರಣೆಗೆ ಕೇವಲ ಸರ್ಕಾರದ ಕಾರ್ಯಕ್ರಮಗಳನ್ನು ನಂಬಿ ಕೂರುವುದು ಸರಿಯಲ್ಲ. ಇದರಲ್ಲಿ ಸರಕಾರದ ಜೊತೆಜೊತೆಗೆ ಜನತೆ, ರಾಜಕೀಯ ಪಕ್ಷಗಳು, ಕೈಗಾರಿಕೋದ್ಯಮಿಗಳು ಮತ್ತು ಸ್ವಯಂ ಇಚ್ಛೆಯಿಂದ ಸ್ಥಾಪಿತವಾದ ಖಾಸಗಿ ಸಂಘ-ಸಂಸ್ಥೆಗಳ ಪಾತ್ರವೂ ಮುಖ್ಯ ಭಾರತ ದೇಶದಲ್ಲಿ ಪ್ರಾಕೃತಿಕ ಸಂಪತ್ತು ಮತ್ತು ಮಾನವ ಸಂಪತ್ತು ವಿಪುಲವಾಗಿದೆ. ಇವು ವ್ಯರ್ಥವಾಗದಂತೆ ಸಮರ್ಥವಾಗಿ ಬಳಸುವ, ಸದ್ವಿನಿಯೋಗವಾಗುವಂತೆ ಮಾಡುವ ಸಂಯೋಜನಾ ಕಾರ್ಯ ಮತ್ತು ಸಮಷ್ಟಿ ಇಚ್ಛಾಶಕ್ತಿಯ ಅವಶ್ಯಕತೆ ಇದೆ. ದುಡಿಯುವ ಎಲ್ಲಾ ಕೈಗಳಿಗೆ ಕೆಲಸ, ಜನಸಂಖ್ಯಾ ನಿಯಂತ್ರಣ, ಸಂಪತ್ತಿನ ಸಮಾನ ಹಂಚಿಕೆ, ಜನರಿಗೆ ಸ್ಪಂದಿಸುವ ಕ್ರಿಯಾಶೀಲ ಮತ್ತು ನಿಜವಾದ ಪ್ರಜಾಪ್ರಭುತ್ವ ಸರ್ಕಾರದ ಸ್ಥಾಪನೆ ಇಂಥ ಹಲವು ಅಂಶಗಳಿಂದ ಖಂಡಿತವಾಗಿ ಬಡತನವನ್ನು ಕಿತ್ತು ಹಾಕಬಹುದು" ಎಂದು ಎಚ್. ಕೆ. ವೆಂಕಟೇಶ್ ಅಭಿಪ್ರಾಯಪಟ್ಟಿದ್ದಾರೆ.[೪೪]

"ಈ ಪ್ರಪಂಚದಲ್ಲಿ ಯಾರೊಬ್ಬನ್ನ ದುರಾಸೆಯನ್ನು ತೃಪ್ತಿಪಡಿಸುವಷ್ಟು ಸಂಪತ್ತು ಇಲ್ಲದಿದ್ದರೂ ಪ್ರತಿಯೊಬ್ಬನ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವಷ್ಟು ಸಮೃದ್ಧಿ ಇದೆ" ಎಂಬ ಗಾಂಧೀಜಿಯವರ ಮಾತನ್ನು ಇಲ್ಲಿ ನೆನೆಯಬಹುದು.[೪೫] ಕೆಲವರು ಬಡತನದಲ್ಲಿ ಹುಟ್ಟಿ ಬಡತನದಲ್ಲಿ ಬದುಕಿ. ಬಡತನವನ್ನೇ ತಮ್ಮ ಮುಂದಿನ ಪೀಳಿಗೆಗೆ ಆಸ್ತಿಯಾಗಿ ಬಿಟ್ಟು ಹೋಗುತ್ತಾರೆ. ಆದ್ದರಿಂದ ಎಲ್ಲಾ ನೀತಿ-ನಿಯಮ, ಯೋಜನೆಗಳು ಸುವ್ಯವಸ್ಥಿತವಾಗಿ

ಸಂಯೋಜನೆಗೊಂಡು ಧನಾತ್ಮಕ ಫಲಿತದ ಕಡೆಗೆ ತುರ್ತು ಹೆಜ್ಜೆ ಇಡಬೇಕಾದ ಅಗತ್ಯ ಇಂದು ಈ ದೇಶಕ್ಕೆ ಅನಿವಾರ್ಯವಾಗಿದೆ.

ಪಂಚವಾರ್ಷಿಕ ಯೋಜನೆಗಳು, ರಾಷ್ಟ್ರೀಕರಣ, ಭೂಸುಧಾರಣೆ, ಜನಸಂಖ್ಯಾ ನಿಯಂತ್ರಣ, ಸಣ್ಣ ಮತ್ತು ಗೃಹ ಕೈಗಾರಿಕಾಭಿವೃದ್ಧಿ, ಶಿಕ್ಷಣ, ಮೂಲಭೂತ ಸೌಕರ್ಯ ಮುಂತಾದವು. ಇಷ್ಟೆಲ್ಲದರ ನಡುವೆಯೂ ಭಾರತವು ಸಂಪೂರ್ಣವಗಿ ಬಡತನದಿಂದ ಮುಕ್ತವಾಗಲು ಸಾಧ್ಯವಾಗಿಲ್ಲ. ಬಡತನದ ಗಂಭೀರವಾದ ಸಮಸ್ಯೆಯಿಂದ ಹಸಿವಿನ ತೀವ್ರತೆ ಹೆಚ್ಚಿದೆ. ಹಸಿವಿಗನ್ನ ದೊರಕದ ಹೊರತು ಅದು ನಿವಾರಣೆಯಾಗುವಂತೆ ಕಾಣುವುದಿಲ್ಲ. ಗಾಂಧಿ, ಲೋಹಿಯಾ, ಅಂಬೇಡ್ಕರ್ ಮುಂತಾದವರು ದೇಶದ ಮೂಲಭೂತ ಸಮಸ್ಯೆಗಳ ನಿವಾರಣೆಗೆ ಹಲವು ಸಲಹೆ ನೀಡಿದರೂ ಹಸಿವಿನ (ಬಡತನದ) ತೀವ್ರತೆ ಕಡಿಮೆಯಾಗಿಲ್ಲವೆಂದೇ ಹೇಳಬಹುದು.

ಸಹಸ್ರಮಾನ ಅಭಿವೃದ್ಧಿ ಗುರಿಗಳ ತಾತ್ವಿಕ ಆಯಾಮ

ಮೊತ್ತ ಮೊದಲನೆಯದಾಗಿ ಈ ಸಹಸ್ರಮಾನ ಅಭಿವೃದ್ಧಿ ಗುರಿಗಳ ಕಾರ್ಯಯೋಜನೆಯ ಮೂಲದಲ್ಲಿ ಮಾನವ ಅಭಿವೃದ್ಧಿ ಪ್ರಣಾಳಿಕೆಯು ಚಾಲಕ ಶಕ್ತಿಯಾಗಿ ಕೆಲಸ ಮಾಡಿರುವುದನ್ನು ಗುರುತಿಸಬಹುದಾಗಿದೆ. ಈ ಕಾರ್ಯಯೋಜನೆಯು ವರಮಾನ, ಉತ್ಪಾದನೆ, ಬಂಡವಾಳ ಹೂಡಿಕೆ, ಕೈಗಾರಿಕೀಕರಣ ಮುಂತಾದ ಸಂಗತಿಗಳಿಗೆ ಪ್ರತಿಯಾಗಿ ಹಸಿವು ಮತ್ತು ಕಡುಬಡತನದ ನಿವಾರಣೆ, ಶಿಶು ಮರಣ–ತಾಯಂದಿರ ಮರಣ ಕಡಿಮೆ ಮಾಡುವುದು, ಶಿಕ್ಷಣದ ಸಾರ್ವತ್ರೀಕರಣ, ಕುಡಿಯುವ ನೀರನ್ನು ಒದಗಿಸುವುದು, ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವುದು ಮುಂತಾದ ಧಾರಣಾ ಸಾಮರ್ಥ್ಯಗಳನ್ನು ವರ್ಧಿಸುವ ಮತ್ತು ಮಹಿಳಾ ಸ್ಪಂದಿಯಾದ ಸಂಗತಿಗಳನ್ನು ಒಳಗೊಂಡಿದೆ. ವರಮಾನ ಏರಿಕೆಯು ತನ್ನಷ್ಟಕ್ಕೆ ತಾನೇ ಜನರ ಬದುಕನ್ನು ಉತ್ತಮಪಡಿಸುವುದು ಸಾಧ್ಯವಿಲ್ಲ. ವರಮಾನ ಏರಿಕೆಯಾಗಿ ಬಿಟ್ಟರೆ ಬಡತನವು ತನ್ನಷ್ಟಕ್ಕೆ ತಾನೇ ನಿವಾರಣೆಯಾಗುವುದಿಲ್ಲ. ಬಡತನ, ಹಸಿವು, ಲಿಂಗತಾರತಮ್ಯ, ಅಸಮಾನತೆ ಮುಂತಾದ ಸಂಗತಿಗಳನ್ನು ನೇರವಾಗಿ ಎದುರಿಸಬೇಕಾಗುತ್ತದೆ.

ಸಹಸ್ರಮಾನದ ಅಭಿವೃದ್ಧಿಯ ಗುರಿಗಳು ಯಾವುವೆಂದರೆ,

೧. ಕಡುಬಡತನ ಮತ್ತು ತೀವ್ರ ಹಸಿವನ್ನು ತೊಡೆದು ಹಾಕುವುದು.

೨. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ.

೩. ಲಿಂಗ ಸಮಾನತೆ ಮತ್ತು ಮಹಿಳಾ ಸಬಲೀಕರಣ.

೪. ಮಕ್ಕಳ ಮರಣ ಪ್ರಮಾಣ ಕಡಿಮೆಗೊಳಿಸುವುದು.

೫. ತಾಯಂದಿರ ಆರೋಗ್ಯ ಉತ್ತಮಪಡಿಸುವುದು.

೬. ಮಾರಕ ರೋಗಗಳ ನಿಯಂತ್ರಣ.

೭. ಸುಸ್ಥಿರ ಪರಿಸರ ಪರಿಪಾಲನೆ.

೮. ಅಭಿವೃದ್ಧಿಗಾಗಿ ಜಾಗತಿಕ ಸಹಭಾಗಿತ್ವವನ್ನು ಸಾಧಿಸುವುದು.

ಇವು ಎಂಟು ಸಹಸ್ರಮಾನ ಅಭಿವೃದ್ಧಿ ಗುರಿಗಳು. ಇಲ್ಲಿ ವರಮಾನಕ್ಕೆ, ಬಂಡವಾಳಕ್ಕೆ, ತಂತ್ರಜ್ಞಾನಕ್ಕೆ ಸಂಬಂಧಿಸಿದ ಸಂಗತಿಗಳ ಉಲ್ಲೇಖವಿಲ್ಲ. ಅಭಿವೃದ್ಧಿಯ ಗತಿ ಉತ್ತಮವಾಗಿ ಬಿಟ್ಟರೆ, ತಂತ್ರಜ್ಞಾನ ಉನ್ನತ ಮಟ್ಟಕ್ಕೇರಿ ಬಿಟ್ಟರೆ, ಮೂಲಭೂತ ಸೌಲಭ್ಯ ವಿಸ್ತರಣೆಯಾಗಿ ಬಿಟ್ಟರೆ, ಬಡತನ, ಹಸಿವು, ಅನಕ್ಷರತೆ, ಅಪೌಷ್ಟಿಕತೆ, ಲಿಂಗ ಅಸಮಾನತೆ, ರೋಗ-ರುಜಿನಗಳು ತಮ್ಮಷ್ಟಕ್ಕೆ ತಾವೇ ನಿವಾರಣೆಯಾಗುತ್ತವೆ ಎಂಬುದು ನಿಜವಲ್ಲ ಎಂಬುದು ಇಂದು ಸ್ಪಷ್ಟವಾಗಿದೆ. ಅದಕ್ಕಾಗಿ ಸಹಸ್ರಮಾನ ಅಭಿವೃದ್ಧಿ ಗುರಿಗಳಲ್ಲಿ ಬಡತನ, ಹಸಿವು, ಅಪೌಷ್ಟಿಕತೆ, ಲಿಂಗ-ಅಸಮಾನತೆ, ಸಂತಾನೋತ್ಪತ್ತಿ ಸಮಸ್ಯೆಗಳು ಮುಂತಾದವುಗಳ ನಿವಾರಣೆಯನ್ನು ಪ್ರಜ್ಞಾಪೂರ್ವಕವಾಗಿ ಮಾಡಬೇಕಾಗುತ್ತದೆ ಎಂಬುದು ಅದರ ಸಂದೇಶವಾಗಿದೆ.

"ಬಡತನ ಎಂಬುದು ದುಃಸ್ಥಿತಿಗೆ ಸಂಬಂಧಿಸಿದ ಸಂಗತಿಯಾಗಿದೆ. ಲಾಗಾಯ್ತಿನಿಂದ ಬಡತನವನ್ನು ವರಮಾನ ಕೊರತೆಯ ಮಾಪನದ ಮೂಲಕ ಗುರುತಿಸಿಕೊಂಡು ಬರಲಾಗಿದೆ".[೮೯].

ಬಡತನ ಎನ್ನುವುದು ವರಮಾನ ಇಲ್ಲದಿರುವುದರ ಅಥವಾ ಅದು ಕಡಿಮೆಯಾಗಿರುವ ಸಮಸ್ಯೆಯಲ್ಲ. ಅದನ್ನು ಪಡೆಯಲು ಸಮಾಜದಲ್ಲಿ ಕೆಲವರಿಗೆ ಸಾಧ್ಯವಾಗದೇ ಇರುವುದರ ಸಮಸ್ಯೆ.

ಯು. ಎನ್. ಡಿ. ಪಿ. ಯು ತನ್ನ ೧೯೯೭ರ ಮಾನವ ಅಭಿವೃದ್ಧಿ ವರದಿಯಲ್ಲಿ "ಸಾಮಾನ್ಯವಾದ ಬದುಕನ್ನು ಸಾಗಿಸಲು ಅಗತ್ಯವಾದ ಆಯ್ಕೆಗಳು ಮತ್ತು ಅವಕಾಶಗಳು ದೊರೆಯದಿರುವುದು ಬಡತನ" ಎಂದು ನಿರ್ವಚಿಸಿದೆ (ಪು. ೧೫). ಇದು ಜನರ ಹಕ್ಕುದಾರಿಕೆಯ ವೈಫಲ್ಯದ ಸಂಗತಿಯಾಗಿದೆ. ಈ ಬಗ್ಗೆ ಹಸಿವನ್ನು ಕುರಿತಂತೆ ಅಮರ್ತ್ಯ ಸೇನ್ ಹೇಳಿರುವ ಮಾತು ಹೀಗಿದೆ: "Starvation is the characteristic of some people not having enough food to eat. It is not the characteristic of there being not enough food to eat".[೯೭]

ಈ ಮಾತನ್ನು ಸೇನ್ ತಮ್ಮ ಇತ್ತೀಚಿನ ಕೃತಿ 'The Idea of Justice' (೨೦೦೯; ೩೦೯) ನಲ್ಲಿ ಪುನರುಚ್ಚರಿಸಿದ್ದಾರೆ. ವಾಸ್ತವವಾಗಿ ಅವರ ೧೯೮೧ರ ಕೃತಿ 'Poverty and Famines' ನ ಉಪಶೀರ್ಷಿಕೆ 'An essay on entitlement and deprivation' ಹಸಿವಿನ, ಅರೆಹೊಟ್ಟೆಯ, ಬಡತನದ ಮೂಲದಲ್ಲಿರುವ ಜನರ ಹಕ್ಕುದಾರಿಕೆಯ ವೈಫಲ್ಯವೇ ವಿನಾ ಆಹಾರೋತ್ಪದನೆಯಲ್ಲಿನ ಕುಸಿತವಲ್ಲ ಎಂಬುದನ್ನು ಸೇನ್ ತಮ್ಮ ಈ ಕೃತಿಯಲ್ಲಿ ಪ್ರತಿಪಾದಿಸಿದ್ದಾರೆ.

ಬರ, ಹಸಿವು, ಅರೆಹೊಟ್ಟೆ, ಅಪೌಷ್ಟಿಕತೆ ಮುಂತಾದ ಸಮಸ್ಯೆಗಳನ್ನು ಪರಿಹರಿಸಲು ಜನರ ಆಹಾರದ ಮೇಲಿನ ಹಕ್ಕುದಾರಿಕೆಯನ್ನು ದಷ್ಟಪುಷ್ಟಗೊಳಿಸುವುದಕ್ಕೆ ಹೆಚ್ಚು ಗಮನ ನೀಡದೆ ಆಹಾರೋತ್ಪಾದನೆಯನ್ನು ಹೆಚ್ಚಿಸುವುದರ ಬಗ್ಗೆ ಹೆಚ್ಚು ಗಮನ ನೀಡಿದರೆ ಅಂತಹ ಕಾರ್ಯಯೋಜನೆ ಯಶಸ್ವಿಯಾಗುವುದು ಸಾಧ್ಯವಿಲ್ಲ. ಹಸಿವಿಗೆ ಸಂಬಂಧಿಸಿದಂತೆ ಇಲ್ಲಿರುವ

ಸಮಸ್ಯೆ ಆಹಾರವನ್ನು ಧಾರಣೆ ಮಾಡಿಕೊಳ್ಳುವ ಜನರ ಸಾಮರ್ಥ್ಯ. ಯಾರಿಗೆ ಧಾರಣಾ ಸಾಮರ್ಥ್ಯವು ಅಧಿಕವಾಗಿದೆಯೋ ಅವರ ಬದುಕು ಸಮೃದ್ಧವಾಗಿರುತ್ತದೆ. ಯಾರ ಧಾರಣಾ ಸಾಮರ್ಥ್ಯವು ದುರ್ಬಲವಾಗಿರುತ್ತದೆಯೋ ಅವರ ಬದುಕು ದುಃಸ್ಥಿತಿಯದ್ದಾಗುತ್ತದೆ. 'ಧಾರಣಾ ಸಾಮರ್ಥ್ಯ' ವೆಂಬುದು ಒಂದು ಬಗೆಯ ಸ್ವಾತಂತ್ರ್ಯ. ಅಂದರೆ ಲಭ್ಯವಿರುವ ಪರ್ಯಾಯ ಅವಕಾಶಗಳ ಕೂಟಗಳಲ್ಲಿ ಜನರು ತಮಗೆ ಅಗತ್ಯವಾದುದನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಮತ್ತು ಶಕ್ತಿಯನ್ನು ಧಾರಣಾ ಸಾಮರ್ಥ್ಯವೆಂದು ಹೇಳಲಾಗಿದೆ.[೪೮]

ಅಮರ್ತ್ಯ ಸೇನ್ ಇಲ್ಲಿ ಕುತೂಹಲಕಾರಿಯಾದ ಉದಾಹರಣೆ ನೀಡುತ್ತಾರೆ. ಶ್ರೀಮಂತರು ಉಪವಾಸ ವ್ರತ ಮಾಡುವ ಉದ್ದೇಶದಿಂದ ಆಹಾರವನ್ನು ಸೇವಿಸುವುದಿಲ್ಲ. ಅವರು ಆಹಾರವನ್ನು ನಿರಾಕರಿಸುತ್ತಾರೆ. ಬಡವರು ಆಹಾರ ಇಲ್ಲದ ಪರಿಣಾಮವಾಗಿ ಹಸಿವಿನಿಂದ ಇರುತ್ತಾರೆ. ಇಲ್ಲಿ ನಿರಾಕರಣೆ ಇಲ್ಲ. ಇಲ್ಲಿ ಇಬ್ಬರೂ ಆಹಾರವನ್ನು ಸೇವಿಸುತ್ತಿಲ್ಲ. ಒಬ್ಬರು ನಿರಾಕರಿಸುತ್ತಿದ್ದರೆ, ಮತ್ತೊಬ್ಬರು ಬೇಕು ಎಂದರೂ ಅದು ದೊರೆಯುತ್ತಿಲ್ಲ. ಆದರೆ ಶ್ರೀಮಂತರಿಗೆ ಉಪವಾಸ ಒಂದು ಆಯ್ಕೆ. ಅವರಿಗೆ ಪರ್ಯಾಯಗಳಿವೆ. ಬಡವರಿಗೆ ಅದು ಅನಿವಾರ್ಯ. ಇಲ್ಲಿ ಆಯ್ಕೆಗೆ ಅವಕಾಶವಿಲ್ಲ. ಮೊದಲನೆಯ ಪ್ರಕರಣದಲ್ಲಿ ಉದ್ದೇಶಪೂರ್ವಕವಾಗಿ ಜನರು ಉಪವಾಸವಿದ್ದರೆ ಎರಡನೆಯ ಪ್ರಕರಣದಲ್ಲಿ ಜನರು ಅನಿವಾರ್ಯವಾಗಿ, ಬೇರೆ ಮಾರ್ಗವಿಲ್ಲದೆ ಉಪವಾಸವಿದ್ದಾರೆ. ಹಸಿವು ಬೇರೆ, ಉಪವಾಸ ಬೇರೆ. ವರಮಾನ ವರ್ಧನೆಯ ಗತಿಯನ್ನು ತೀವ್ರಗೊಳಿಸಿದರೆ ಅಥವಾ ಆಹಾರ ಉತ್ಪಾದನೆಯನ್ನು ಹೆಚ್ಚಿಸಿ ಬಿಟ್ಟರೆ ಬಡತನ ಮತ್ತು ಹಸಿವು ನಿವಾರಣೆಯಾಗುವುದಿಲ್ಲ ಅಥವಾ ಜನರ ಆಯ್ಕೆಯ ವ್ಯಾಪ್ತಿಯು ವಿಸ್ತೃತಗೊಳ್ಳುವುದಿಲ್ಲ. ಉಪವಾಸವಿರುವವರ ಧಾರಣಾ ಸಾಮರ್ಥ್ಯ ಉತ್ತಮವಾಗಿದೆ. ಅವರಿಗೆ ಆಯ್ಕೆಯ ಅವಕಾಶಗಳಿವೆ. ಆದರೆ ಹಸಿವಿನಿಂದ ನರಳುತ್ತಿರುವವರ ಧಾರಣಾ ಸಾಮರ್ಥ್ಯ ದುರ್ಬಲವಾಗಿದೆ. ಆಯ್ಕೆಗೆ ಅವಕಾಶಗಳೇ ಇಲ್ಲ.

ಸಾಂಪ್ರದಾಯಿಕವಾಗಿ ಜನರ ಹಸಿವಿಗೆ ಆಹಾರ ಉತ್ಪಾದನೆಯ ಕೊರತೆಯನ್ನು ಕಾರಣ ಮಾಡುವುದು ರೂಢಿಯಲ್ಲಿದೆ. ಇದನ್ನು ಅಮರ್ತ್ಯ ಸೇನ್ 'Food Availability Decline' ವಾದ ಎಂದು ಕರೆಯುತ್ತಾರೆ. ಹಸಿವಿಗೆ ಇದು ಕಾರಣವಲ್ಲ ಎಂಬುದನ್ನು ಅವರು ಅನೇಕ ಅಧ್ಯಯನಗಳ ಮೂಲಕ ಸಾಧಿಸಿದ್ದಾರೆ (೧೯೮೧,೧೫೪-೧೬೦). ಅವರ ಪ್ರಕಾರ ಆಹಾರ-ಕೇಂದ್ರಿತ ಸಿದ್ಧಾಂತವು ಹಸಿವಿನ ಬಗ್ಗೆ ಹೆಚ್ಚು ಏನನ್ನೂ ಹೇಳಲು ಸಾಧ್ಯವಿಲ್ಲ. ಹಸಿವಿಗೆ ಮುಖ್ಯ ಕಾರಣ ಆಹಾರ ಪದಾರ್ಥದ ಮೇಲೆ ಹಕ್ಕುದಾರಿಕೆಯನ್ನು ಸಾಧಿಸುವಲ್ಲಿನ ಜನರ ವೈಫಲ್ಯ (food entitlement failure). ಹಸಿವು ಮತ್ತು ಆಹಾರೋತ್ಪಾದನೆಗಳ ನಡುವಿನ ಸಂಬಂಧ ಅಷ್ಟೊಂದು ಸರಳವಾದುದಲ್ಲ ಎಂಬುದನ್ನು ಸೇನ್ ಸಿದ್ಧ ಮಾಡಿ ತೋರಿಸಿದ್ದಾರೆ. ಆಹಾರೋತ್ಪಾದನೆ ಎಂಬುದು ಆಹಾರವನ್ನು ಏಕೈಕ ಸಂಗತಿಯಾಗಿ ಒಳಗೊಂಡಿದೆ. ಆದರೆ ಹಸಿವು ಎಂಬುದು ಆಹಾರೋತ್ಪಾದನೆ ಮತ್ತು ಜನರ ನಡುವಿನ ಸಂಬಂಧದ ಸಂಗತಿಯಾಗಿದೆ.

ಅರಿಸ್ಟಾಟಲ್ ಹೇಳುವಂತೆ "ಅತಿಯಾದ ದುರಾಸೆಯಿಂದ ಜನರು ಅಪರಾಧಗಳನ್ನು ಎಸಗುತ್ತಾರೆಯೇ ವಿನಾ ಜೀವನಾವಶ್ಯಕಗಳನ್ನು ಗಳಿಸಿಕೊಳ್ಳುವುದಕ್ಕಾಗಿ ಯಾರೂ ಗುರುತರವಾದ ಅಪರಾಧಗಳನ್ನು ಮಾಡುವುದಿಲ್ಲ. ಆದ್ದರಿಂದ ಬಡವರಿಗೆ ಅಗತ್ಯವಾಗಿರುವುದು ಆರ್ಥಿಕ

ಸಂಪನ್ಮೂಲಗಳ ಉತ್ಪಾದನೆಯಿಲ್ಲ. ಏಕೆಂದರೆ ಹೀಗೆ ಉತ್ಪಾದನೆಯಾದ ಸಂಪನ್ಮೂಲಗಳು ಉಳ್ಳವರ/ಬಲಾಢ್ಯರ ಪಾಲಾಗಿ ಬಿಡುತ್ತವೆ.

ಹೀಗೆ ಹಸಿವು, ಬಡತನ, ಅರೆಹೊಟ್ಟೆ ಮುಂತಾದವು ಬಹುಮುಖೀ ಸಮಸ್ಯೆಗಳು. ಅವು ಆಹಾರೋತ್ಪಾದನೆ ಅಥವ ವರಮಾನಕ್ಕೆ ಮಾತ್ರ ಸಂಬಂಧಿಸಿದ ಸಂಗತಿಗಳಲ್ಲ. ಆದುದರಿಂದ ಅವುಗಳನ್ನು ಬಹುಮುಖಿ ಕ್ರಮಗಳಿಂದ ಎದುರಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಬಡತನ, ಹಸಿವಿನ ಬಹುಮುಖಿ ಆಯಾಮಗಳನ್ನು ಗುರುತಿಸುವಂತಹ ಅಭಿವೃದ್ಧಿ ಅರ್ಥಶಾಸ್ತ್ರವನ್ನು ರೂಪಿಸುವ ಅಗತ್ಯದ ಬಗ್ಗೆ ಯು. ಎನ್. ಡಿ. ಪಿ. ಯ ೨೦೧೦ ರ ಮಾನವ ಅಭಿವೃದ್ಧಿ ವರದಿಯಲ್ಲಿ ಕರೆ ನೀಡಲಾಗಿದೆ.

ಬಡವರಿಗೆ, ಹಸಿದವರಿಗೆ, ಅರೆಹೊಟ್ಟೆಯವರಿಗೆ ಅಗತ್ಯವಾಗಿರುವುದು ಇತ್ಯಾತ್ಮಕ ಸ್ವಾತಂತ್ರ್ಯ. ಬಡತನದ ಸಂಕೋಲೆಯಿಂದ ಬಿಡುಗಡೆ ಪಡೆಯಲು ಅಗತ್ಯವಾದ ಅವಕಾಶಗಳನ್ನು ಒದಗಿಸಿಕೊಡಬೇಕಾಗುತ್ತದೆ.

ಒಂದು ಸಮಾಜದಲ್ಲಿ ಜನರು ಬಡವರಾಗಿರಬಾರದು, ಹಸಿವಿನಿಂದ ಬಳಲಬಾರದು. ಈ ಹಸಿವು ಮತ್ತು ಬಡತನದ ವಿರುದ್ಧ ಜನರಿಗೆ ಹಕ್ಕು ಇರಬೇಕು. ಇದಕ್ಕೆ ಕೆಲವು ಕಾರಣಗಳು ಹೀಗಿವೆ:

೧. ಹಸಿವು ಮತ್ತು ಬಡತನ ಪ್ರಧಾನವಾಗಿ ಸಾಮಾಜಿಕ-ಆರ್ಥಿಕ ಸಂಬಂಧಗಳ ಪರಿಣಾಮವಾಗಿ ಹುಟ್ಟಿಕೊಂಡ ಸಮಸ್ಯೆಗಳು.

೨. ಹಸಿವು ಮತ್ತು ಬಡತನ ಮನುಷ್ಯನಲ್ಲಿರುವ ಸೂಕ್ಷ್ಮತೆಯನ್ನು, ಸಂವೇದನಾಶೀಲತೆಯನ್ನು, ಮಾನವೀಯ ಗುಣಗಳನ್ನು ನಾಶ ಮಾಡಿಬಿಡುತ್ತದೆ.

೩. ಬಡತನವು ಸಮಾಜವೊಂದಕ್ಕೆ ತಟ್ಟಿದ ಸಾಮಾಜಿಕ-ಆರ್ಥಿಕ ಸಮಸ್ಯೆಯ ಸೂಚಿಯಾಗಿದೆ. ಇದು ಜನರಲ್ಲಿ ಅಸಹನೆಯನ್ನು ಉಂಟು ಮಾಡಿಬಿಡುತ್ತದೆ.

ಹಸಿವು ಮತ್ತು ಬಡತನದ ವಿರುದ್ಧದ ಹಕ್ಕು ಜನರಿಗೆ ಯಾಕೆ ಬೇಕು ಅಂದರೆ ಅವರು ಮನುಷ್ಯರಾಗಿರುವ ಕಾರಣಕ್ಕೆ ಎಂಬುದು ಸರಿಯಾದ ಉತ್ತರ. ಹಸಿವು ಮತ್ತು ಬಡತನದ ಸಂಕೋಲೆಯಿಂದ ಜನರನ್ನು ಬಿಡುಗಡೆಗೊಳಿಸುವುದು ಸಮಾಜವೊಂದರ ಸಮಷ್ಟಿ ಜವಾಬ್ದಾರಿಯಾಗಿದೆ. ಸಮಾಜದಲ್ಲಿ ಹಸಿವು ಮತ್ತು ಬಡತನ ಇರಬಾರದು ಎಂಬುದನ್ನು ಸಮಾನತೆ ಮೌಲ್ಯದ ನೆಲೆಯಲ್ಲಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕು.

ಕರ್ನಾಟಕದ ಹಸಿವು ಸೂಚ್ಯಂಕ

ಅಂತರರಾಷ್ಟ್ರೀಯ ಆಹಾರ ನೀತಿ ಸಂಶೋಧನಾ ಸಂಸ್ಥೆಯು ರೂಪಿಸಿರುವ ಭಾರತೀಯ ರಾಜ್ಯಗಳ ಹಸಿವು ಸೂಚ್ಯಂಕದ ಬಗ್ಗೆ ತಿಳಿದುಕೊಳ್ಳುವುದು ಅಗತ್ಯ[೪೯] ಹಸಿವಿನ ಸೂಚ್ಯಂಕವನ್ನು ಮೂರು ಸೂಚಿಗಳನ್ನು ಬಳಸಿ ಲೆಕ್ಕ ಹಾಕಲಾಗುತ್ತದೆ.

೧. ಪೌಷ್ಟಿಕ ಆಹಾರ ಅನುಭೋಗದ ಕೊರತೆಯನ್ನು ಸೂಚಿಸುವ ಅಪೌಷ್ಟಿಕತೆಯ ಪ್ರಮಾಣ.

೨. ಐದು ವರ್ಷಕ್ಕಿಂತ ಕಡಿಮೆ ವಯೋಮಾನದ ಮಕ್ಕಳಲ್ಲಿ ಅಗತ್ಯವಾದ ತೂಕಕ್ಕಿಂತ ಕಡಿಮೆ ತೂಕವಿರುವ ಮಕ್ಕಳ ಪ್ರಮಾಣ.

೩. ಐದು ವರ್ಷಕ್ಕಿಂತ ಕಡಿಮೆ ವಯೋಮಾನದ ಮಕ್ಕಳ ಮರಣ ಪ್ರಮಾಣ (ಪ್ರತೀ ನೂರು ಮಕ್ಕಳಿಗೆ).

ಈ ಮೂರು ಸೂಚಿಗಳನ್ನಾಧರಿಸಿ ಭಾರತದ ೧೭ ರಾಜ್ಯಗಳ ಹಸಿವು ಸೂಚ್ಯಂಕವನ್ನು ಲೆಕ್ಕ ಹಾಕಲಾಗಿದೆ. ಅದರ ಪ್ರಕಾರ ಆಯ್ದ ರಾಜ್ಯಗಳ ಹಸಿವು ಸೂಚ್ಯಂಕಗಳು ಈ ಕೆಳಗಿನಂತಿವೆ:[೫೦]

ರಾಜ್ಯಗಳ ಹಸಿವು ಸೂಚಂಕ: ೨೦೦೮[೫೦]	
ತಮಿಳುನಾಡು	೨೮.೧೦
ಆಂಧ್ರಪ್ರದೇಶ	೧೯.೫೩
ಕೇರಳ	೧೭.೬೩
ಕರ್ನಾಟಕ	೨೩.೩೦

ನಮ್ಮ ದೇಶದ ೧೭ ರಾಜ್ಯಗಳ ಹಸಿವು ಸೂಚ್ಯಂಕಗಳ ಪಟ್ಟಿಯಲ್ಲಿ ಕರ್ನಾಟಕದ ಸ್ಥಾನ ಹನ್ನೊಂದನೆಯದಾಗಿದೆ. ನಮ್ಮ ರಾಜ್ಯದ ಸ್ಥಿತಿಯು ಆಂಧ್ರಪ್ರದೇಶಕ್ಕಿಂತ ಕೆಳಮಟ್ಟದಲ್ಲಿದೆ. ಈ ಸೂಚ್ಯಂಕವು ಆರೋಗ್ಯಕ್ಕೆ ಸಂಬಂಧಿಸಿದ ಸೂಚಿಗಳನ್ನು ಆಧರಿಸಿರುವುದರಿಂದ ನಮ್ಮ ರಾಜ್ಯದ ಅನೇಕ ಜಿಲ್ಲೆಗಳ ಹಸಿವು ಸೂಚ್ಯಂಕ ಅತ್ಯಂತ ಕೆಳಮಟ್ಟದಲ್ಲಿರುವ ಸಾಧ್ಯತೆ ಇರುತ್ತದೆ.

೫.೫ ಹಸಿವಿನ ನಿವಾರಣೆಗೆ ಕೈಗೊಳ್ಳಬಹುದಾದ ಕ್ರಮಗಳು

ಜನರಿಗೆ ವಿದ್ಯೆಯ ಮಹತ್ವವನ್ನು ತಿಳಿಸಿಕೊಡುವುದು. ವಿದ್ಯೆಯ ಮೂಲಕ ಉದ್ಯಮಶೀಲತೆಯನ್ನು ಬೆಳಸಿಕೊಳ್ಳಲು ಪ್ರೇರಣೆ. ಯುವಸಮುದಾಯಕ್ಕೆ ಜೀವನ ನಿರ್ವಹಣೆಯ ದಾರಿಯನ್ನು ಒದಗಿಸುವ ಉದ್ದೇಶದಿಂದ ಗುಡಿ ಕೈಗಾರಿಕೆ, ವೃತ್ತಿಪರ ತರಬೇತಿ, ಕೌಶಲ್ಯಗಳ ತರಬೇತಿ ನೀಡುವುದು. ಪರಿಸರ ಸ್ನೇಹಿ ಕೈಗಾರಿಕೆಗಳನ್ನು ಸ್ಥಾಪಿಸುವುದು.

ಕಬ್ಬಿಣ ಕಾರ್ಖಾನೆ, ಹಂಚಿನ, ಗೇರುಬೀಜದ, ನೇಯ್ಗೆ ಕೈಮಗ್ಗಗಳ ಬಳೆಯ ಕಾರ್ಖಾನೆ, ಮುದ್ರಣಾಲಯಗಳನ್ನು ಅಭಿವೃದ್ಧಿ ಪಡಿಸಿ ಉದ್ಯೋಗಾವಕಾಶ ಹೆಚ್ಚಿಸುವುದರ ಜೊತೆಗೆ ವಸ್ತುಗಳ ಗುಣಮಟ್ಟವನ್ನು ಕಾಪಾಡುವುದು ಉತ್ಪಾದನೆಯನ್ನು ಹೆಚ್ಚಿಸುವುದು. ಉತ್ಪಾದನೆಯಾದ ವಸ್ತುಗಳಿಗೆ ಸೂಕ್ತ ಮಾರುಕಟ್ಟೆಯನ್ನು ಒದಗಿಸುವುದು. ರಫ್ತಿಗೆ ಉತ್ತೇಜನ ನೀಡುವುದು. ಸಮಾನ ದುಡಿಮೆಗೆ ಸಮಾನ ವೇತನ ನೀಡುವುದರ ಜೊತೆಗೆ ವೇತನ ತಾರತಮ್ಯ ನಿವಾರಣೆ. ಅರೋಗ್ಯಕ್ಕೆ ಹೆಚ್ಚಿನ ಪ್ರಾಶಸ್ತ್ಯ, ಸರ್ವರಿಗೂ ಗುಣಮಟ್ಟದ ಆಹಾರ ಸಿಗುವಂತೆ ನೋಡಿಕೊಳ್ಳುವುದು. ಗರ್ಭಿಣಿ ಸ್ತ್ರೀಯರನ್ನು ಕಾಳಜಿಯಿಂದ ನೋಡಿಕೊಂಡು ಪೌಷ್ಟಿಕಾಂಶದ ಆಹಾರ ನೀಡುವುದು. ಪುರುಷರಿಂದ ಮಹಿಳೆಗೆ, ಮಹಿಳೆಯಿಂದ ಪುರುಷರ ಮೇಲಾಗುವ ದೌರ್ಜನ್ಯಗಳನ್ನು ನಿಯಂತ್ರಿಸುವುದು. ಅಪರಾಧ, ಅನ್ಯಾಯ, ಅತ್ಯಾಚಾರ, ಸುಲಿಗೆ, ಶೋಷಣೆ, ಮೋಸ – ವಂಚನೆಗೆ ಕಡಿವಾಣ ಹಾಕಿ ಕಾನೂನನ್ನು ಬಲಪಡಿಸುವುದು. ವ್ಯಕ್ತಿ ಶ್ರೀಮಂತನಾಗಲಿ,

ಬಡವನಾಗಲಿ ತೀವ್ರಗತಿಯಲ್ಲಿ ನ್ಯಾಯ ಒದಗಿಸುವುದು. ರೈತರ ಬೆಳೆಗಳಿಗೆ ಬೆಂಬಲ ಬೆಲೆ ನೀಡುವುದು. ಗುಣಮಟ್ಟದ ಬೀಜ, ಹೆಚ್ಚಿನ ರಿಯಾಯಿತಿ ದರದಲ್ಲಿ ಪೂರೈಸುವುದು. ಸ್ವ ಉದ್ಯೋಗಕ್ಕೆ ಬೆಂಬಲ. ಕೃಷಿ–ಹೈನುಗಾರಿಕೆಗೆ, ಸ್ವಉದ್ಯೋಗಕ್ಕೆ ಸಹಾಯಧನ ಪ್ರೋತ್ಸಾಹ ನೀಡುವುದು.

ಕೊನೆ ಟಿಪ್ಪಣಿಗಳು

೧. ಅಶೋಕನ ಧರ್ಮಶಾಸನಗಳು: ಡಾ. ಶ್ರೀನಿವಾಸ ರಿತ್ತಿ ಕರ್ನಾಟಕ ವಿ. ವಿ., ಧಾರವಾಡ, ೧೯೬೯ ಪು. ಸಂ. ೫೬-೫೮.

೨. ಶಾಸನಗಳಲ್ಲಿ ವ್ಯವಸ್ಥೆ ಮತ್ತು ಮನುಷ್ಯ ಪರಿಕಲ್ಪನೆ, ಡಾ. ಎಚ್. ಎಸ್. ಗೋಪಾಲ ರಾವ್, ೧೯೯೩, ಪು. ಸಂ. ೩೩.

೩. ಚಿದಾನಂದ ಮೂರ್ತಿ, ಸಂಶೋಧನಾ ತರಂಗ, ಪು. ೩.

೪. ಜಿ. ಎಸ್. ಶಿವರುದ್ರಪ್ಪ, ಮಹಾಕಾವ್ಯ ಸಮೀಕ್ಷೆ, ಪು. ೩೩.

೫. ಚೆನ್ನಣ್ಣ ವಾಲೀಕರ್, ೧೦ನೇ ತರಗತಿಯ ಕನ್ನಡ ಪಠ್ಯಪುಸ್ತಕ, ಪುಟ ೫.

೬. ಅ. ನ. ಕೃ. 'ನಗ್ನ ಸತ್ಯ' ಮುನ್ನುಡಿ.

೭. ನಾಗಮೋಹನ ದಾಸ್, ಕಾರ್ಲ್ ಮಾರ್ಕ್ಸ್, ೧೯೯೪, ಪುಟ ೪.

೮. ಚ. ನ. ಶಂಕರ್ ರಾವ್, ಭಾರತದ ಸಾಮಾಜಿಕ ಸಮಸ್ಯೆಗಳು, ೨೦೦೩, ಪು. ೧೨೬.

೯. ಅನು. ಕೆ. ಕೃಷ್ಣ ಭಟ್, ಕೌಟಿಲ್ಯನ ಅರ್ಥಶಾಸ್ತ್ರ, ೧೯೬೨, ಪು. ೬೬.

೧೦. ಡಾ. ಕೆ. ಸದಾಶಿವ, ಪ್ರಾಚೀನ ಭಾರತದ ಇತಿಹಾಸ, ೨೦೦೪, ಪು. ೧೭೧.

೧೧. ಕೆ. ಕೃಷ್ಣ ಭಟ್ಟ, ಕೌಟಿಲ್ಯನ ಅರ್ಥಶಾಸ್ತ್ರ, ೧೯೯೬, ಪು. ೭.

೧೨. ಬಿ. ಶ್ರೀನಿವಾಸ ಭಟ್ಟ, ಮನುಸ್ಮೃತಿ, ೧೯೩೫, ಪು. ೫೮೩.

೧೩. ಡಾ. ಬಿ. ಆರ್. ಮೋಡಕ, ವೈ. ಬಿ. ಎಚ್. ಶ್ರೀಧರ, ಮನುಸ್ಮೃತಿ, ೧೯೭೪, ಪುಟ ೩.

೧೪. ಡಾ. ಬಿ. ಆರ್. ಮೋಡಕ, ಪ್ರಿ. ಬಿ. ಎಚ್. ಶ್ರೀಧರ್, ಮನುಸ್ಮೃತಿ, ೧೯೭೪, ಪು. V

೧೫. ನಗರಗೆರೆ ರಮೇಶ್, ಮಾವೋ ತ್ಸೆ ತುಂಗ, ೧೯೯೪, ಪು. ೨.

೧೬. ಡಾ. ಕೆ. ಕೇಶವ ಶರ್ಮ, ಲೆನಿನ್, ೧೯೯೪, ಪು. ೩೭.

೧೭. ಶಿವರಾಮಯ್ಯ, ಕನ್‌ಫ್ಯೂಷಿಯಸ್, ೧೯೯೪, ಪು. ೫.

೧೮. ಅದೇ, ಪು. ೬

೧೯. ರಂಜಾನ್ ದರ್ಗಾ, ನೆಲ್ಸನ್ ಮಂಡೇಲಾ, ೧೯೯೪, ಪುಟ ೭೧.

೨೦. ಅರವಿಂದ ಚೊಕ್ಕಾಡಿ, ಸಂಕ್ರಮಣ, ಸಂ. ಚಂದ್ರಶೇಖರ ಪಾಟೀಲ, ಜುಲೈ–ಆಗಸ್ಟ್ ೨೦೦೩, ಪುಟ ೩೮.

೨೧. ಅದೇ, ಪುಟ ೩೯.

೨೨. ಅದೇ, ಪುಟ ೩೯–೪೦.

೨೩. ಬಿ. ವಿ. ಕಕ್ಕಿಲ್ಲಾಯ, ಮಾರ್ಕ್ಸ್‌ವಾದಿ ವಿಚಾರಧಾರೆ, ಸಂ. ೧, ಕಾರ್ಲ್ ಮಾರ್ಕ್ಸ್ ಬದುಕು–ಬರಹ, ೧೯೮೫, ಪು. ೧೬೭.

೨೪. ನಾಗಮೋಹನ ದಾಸ್, ಕಾರ್ಲ್ ಮಾರ್ಕ್ಸ್, ೧೯೯೪, ಪು. ೧೨.

೨೫. ಬಿ. ವಿ. ಕಕ್ಕಿಲ್ಲಾಯ, ಮಾರ್ಕ್ಸ್‌ವಾದಿ ವಿಚಾರಧಾರೆ, ಸಂ. ೧, ಕಾರ್ಲ್ ಮಾರ್ಕ್ಸ್ ಬದುಕು–ಬರಹ, ೧೯೮೫, ಪು. ೨೯೫. ೨೯೬.

೨೬. ಅದೇ, ಪು. ೯೨, ೯೩.

೨೭. ಕುವೆಂಪು, ಸ್ವಾಮಿ ವಿವೇಕಾನಂದ, ೧೯೯೯, ಪು. ೧೧೫.

೨೮. ಅದೇ, ಪು. ೧೩೧–೧೩೨.

೨೯. ಅದೇ, ಪು. ೧೩೨.

೩೦. ಅದೇ, ಪು. ೧೩೨.

೩೧. ಅದೇ, ಪು. ೧೪೨.

೩೨. ಕೆ. ಸದಾಶಿವ, ಆಧುನಿಕ ಭಾರತದ ಇತಿಹಾಸ, ಪು. ೨೦೫.

೩೩. ಪ್ರಭುಶಂಕರ, ಸ್ವಾಮಿ ವಿವೇಕಾನಂದ, ೧೯೯೯, ಪು. ೯೮.

೩೪. ಡಿ. ಆರ್. ನಾಗರಾಜ್, ಶಕ್ತಿಶಾರದೆಯ ಮೇಳ, ೨೦೦೨, ಪು. ೯೪.

೩೫. ನಟರಾಜ್ ಹುಳಿಯಾರ್ (ಸಂ)., ಚಿಂತಾಮಣಿ ಕೊಡ್ಲೆಕೆರೆ, ಮನುಕುಲದ ಏಕತೆ, ಸಂ. ೪, ೨೦೦೪, ಪು. ೧೧೦.

೩೬. ಅದೇ, ಪು. ೧೧೧.

೩೭. ಅದೇ, ಪು. ೧೧೧.

೩೮. ಅದೇ, ಪು. ೧೧೧.

೩೯. ಮಹಾತ್ಮಾ ಗಾಂಧಿ, ನನ್ನ ಆದರ್ಶ ಗ್ರಾಮ, ಸಂ. ಕೆ. ಎಸ್. ನಾರಾಯಣ ಸ್ವಾಮಿ, ೧೯೮೪, ಪು. ೨.

೪೦. ಅದೇ, ಪು. ೫.

೪೧. ಅದೇ, ಪುಟ ೯.

೪೨. ಯೂಸುಫುಲ್ ಕರ್ಝಾವಿ, ಅನು: ಪಿ. ನೂರ್ ಮಹಮ್ಮದ್, ಇಸ್ಲಾಂ ಮತ್ತು ಬಡತನ ನಿವಾರಣೆ, ೨೦೦೦, ಮುನ್ನುಡಿ, ಪು. ೫.

೪೩. ಚ. ನ. ಶಂಕರ ರಾವ್, ಭಾರತದ ಸಾಮಾಜಿಕ ಸಮಸ್ಯೆಗಳು, ೨೦೦೩, ಪು. ೧೨೦.

೪೪. ಉರಿಯ ಕಾರುವ ಮೋಡ, ವೆಂಕಟೇಶ್ ಎಚ್. ಕೆ, ಮೈಸೂರು, ೨೦೧೩, ಪು. ೩೨.

೪೫. ಅದೇ, ಪು. ೩೨.

೪೬. ಅಮರ್ತ್ಯ ಸೇನ್, ೧೯೯೯:೧೦೮.

೪೭. Amartya Sen, 1981, p. 1.

೪೮. ಅಮರ್ತ್ಯ ಸೇನ್, ೧೯೯೯, ಪು. ೭೫.

೪೯. ಪೂರ್ಣಿಮಾ ಮೆನನ್ ಮತ್ತು ಇತರರು, ೨೦೦೮.

೫೦. ಮಾನವ ಅಭಿವೃದ್ಧಿ, ಮಾನವ ಬಡತನ, ಟಿ. ಕೆ. ಚಂದ್ರಶೇಖರ, ಪ್ರಸಾರಾಂಗ, ಕನ್ನಡ ವಿ. ವಿ., ೨೦೧೪, ೬೮.

ಅಧ್ಯಾಯ ೬: ಉಪಸಂಹಾರ

೬.೧ ಫಲಿತಗಳು

೬.೨ ಮುಂದಿನ ಅಧ್ಯಯನದ ಸಾಧ್ಯತೆಗಳು

ಅಧ್ಯಾಯ ೬

ಉಪಸಂಹಾರ

ಚಂದ್ರ ಮತ್ತು ಮಂಗಳನ ಮೇಲೆ ನಿವೇಶನವನ್ನು ಖರೀದಿಸಲು ಹೊರಟ್ಟಿದ್ದೇವೆ, ಅಣುವನ್ನು ಭೇದಿಸಿದ್ದೇವೆ. ಕಲ್ಲದೇವರ ಮುಂದೆ ಕರಗಿದ್ದೇವೆ. ಪ್ರಪಂಚದ ಹತ್ತು ಜನ ಶ್ರೀಮಂತರಲ್ಲಿ ನಾಲ್ಕನೆಯ ಭಾರತೀಯ ಎಂದು ಹಿರಿಹಿರಿ ಬೀಗಿದ್ದೇವೆ. ಇದೇ ಭಾರತದಲ್ಲಿ ದಿನ ಒಂದಕ್ಕೆ ಸುಮಾರು ೧೫ ಕೋಟಿಗಿಂತ ಹೆಚ್ಚು ಜನ ಒಂದು ಹೊತ್ತಿನ ಊಟಕ್ಕಾಗಿ ಹಪಹಪಿಸುವುದನ್ನು ಕಂಡಿದ್ದೇವೆ. ಮೂರನೆ ಮಹಾಯುದ್ಧ ಆಗುವುದಾದರೆ ಅದು ನೀರಿಗಾಗಿ ಅಥವಾ ಅನ್ನಕ್ಕಾಗಿ ಎಂಬ ಹೇಳಿಕೆಯನ್ನು ಕೇಳಿಸಿಕೊಂಡಿದ್ದೇವೆ. ಹೀಗಿರುವಾಗ ಬೇಂದ್ರೆ ಹೇಳುವಂತೆ ಅನ್ನ ತಿಂದು ಬದುಕಬಹುದು; ಚಿನ್ನ ತಿಂದು ಬದುಕಲು ಸಾಧ್ಯವೇ? ಎಂಬ ಪ್ರಶ್ನೆ ಈ ಹೊತ್ತಿಗೆ ಬಹಳ ಪ್ರಸ್ತುತವಾಗುತ್ತದೆ. ಹಸಿವನ್ನು ಪ್ರತಿನಿಧಿಸುವ ಅನ್ನ ಪರಿಣಾಮಕಾರಿಯಾದುದು. ಬಡವನ ಹಸಿವನ್ನು, ವಿಧವೆಯ ಕಣ್ಣೀರನ್ನು ಒರೆಸದ ಧರ್ಮದಲ್ಲಿ ನನಗೆ ನಂಬಿಕೆಯಿಲ್ಲ ಎಂದಿದ್ದಾರೆ ಅಂಬೇಡ್ಕರ್. (ಡಾ. ಬಾಬಾ ಸಾಹೇಬ್, ಅಂಬೇಡ್ಕರ್, ಅವರ ಸಮಗ್ರ ಬರಹಗಳು ಮತ್ತು ಭಾಷಣಗಳು, ಸಂಪುಟ ೪, ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ ೯೧, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು ಪುಟ ೨೨).

ಸಾಹಿತ್ಯ ಎಂದರೆ ಸಹಿತವಾದುದು ಎಂಬ ಹೇಳಿಕೆ ಸಂವೇದನೆ ಸಹಿತವಾದದ್ದು. ಇನ್ನೊಂದರ್ಥದಲ್ಲಿ ಸಾಹಿತ್ಯವೆಂದರೆ, ಅದು ವೇದನೆಯೂ ಹೌದು ನಿವೇದನೆಯೂ ಹೌದು, ಪ್ರೀತಿ–ಪ್ರೇಮ–ಪ್ರಣಯ, ರಾಷ್ಟ್ರಪ್ರೇಮ ಪ್ರಕೃತಿ ವರ್ಣನೆ ಇವೆಲ್ಲವನ್ನು ಪ್ರತಿಬಿಂಬಿಸುವುದು ಸಾಹಿತ್ಯದ ಕೆಲಸವಾದರೂ ನಿಜವಾಗಿಯೂ ಪ್ರತಿಬಿಂಬಿಸಬೇಕಾದದ್ದು ಏನನ್ನು ಎಂಬ ಜಿಜ್ಞಾಸೆ ನಮ್ಮನ್ನು ಕಾಡುತ್ತದೆ. ಉಳ್ಳವರ ಪ್ರತಿಬಿಂಬವೋ ಅಥವಾ ಇಲ್ಲದವರ ಪ್ರತಿಬಿಂಬವೋ ಎಂಬ ಪ್ರಶ್ನೆ ಹಾಕಿಕೊಂಡರೆ, ಸಾಹಿತ್ಯದ ನಿಜವಾದ ಕೆಲಸ ಇಲ್ಲದವರನ್ನು ಪ್ರತಿಬಿಂಬಿಸುವುದೇ ಆಗಿದೆ. ಆ ಮೂಲಕ ಸಾಹಿತ್ಯ ನಿಜವಾದ ಸಂವೇದನೆಯನ್ನು ಕಟ್ಟಿಕೊಡಬೇಕಾಗಿದೆ. ಈ ಕಾರಣಕ್ಕೆ ನವೋದಯ, ಪ್ರಗತಿಶೀಲ ನವ್ಯದಂತೆ ದಲಿತ–ಬಂಡಾಯವೂ ಹೆಚ್ಚು ಪರಿಣಾಮಕಾರಿಯಾದುದು ಎಂಬುದನ್ನು ಈ ಅಧ್ಯಯನದ ದೃಷ್ಟಿಯಲ್ಲಿ ಒಪ್ಪಿಕೊಳ್ಳಬಹುದು.

ಹಾಗೆಂದ ಮಾತ್ರಕ್ಕೆ ಇದಕ್ಕೂ ಮುಂಚೆ ಸಾಹಿತ್ಯದಲ್ಲಿ ಇಲ್ಲದವರ ಪರವಾಗಿ ದನಿ ಎದ್ದಿಲ್ಲ ಎಂದು ಹೇಳಲಿಕ್ಕಾಗುವುದಿಲ್ಲ. ಉದಾ: ವಚನ ಸಾಹಿತ್ಯದಲ್ಲಿ (ಕಲ್ಲ ನಾಗರ.....).

ಮೊದ ಮೊದಲು ಬಡತನದ ಬೇಗೆಯನ್ನು ಕಾವ್ಯ ಪ್ರತಿನಿಧಿಸಿದರೆ ಆನಂತರದಲ್ಲಿ ಹಸಿವಿನ ಬಗ್ಗೆ ಗಟ್ಟಿತನವನ್ನು ಕಟ್ಟಿಕೊಟ್ಟದ್ದು ಕಥನಸಾಹಿತ್ಯ ಎನ್ನುವುದು.

ಪ್ರಾಕೃತಿಕ ನಿಯಮವನ್ನು ಉಲ್ಲಂಘಿಸಿದ್ದೆ ಈ ಎಲ್ಲ ಸಮಸ್ಯೆಗಳಿಗೆ ಮೂಲ ಕಾರಣ. ಪ್ರಕೃತಿ ಅಂಗಗಳಲ್ಲಿ ಒಂದಾಗಿ ಸೂರ್ಯ ತನ್ನೆಲ್ಲ ಶಕ್ತಿಯನ್ನು ಒಂದೆಡೆ ಕೇಂದ್ರಿಕರಿಸಿಕೊಂಡಿದ್ದರೆ ಜಗತ್ತು ಬೆಳಗುತ್ತಿರಲಿಲ್ಲ. ಪ್ರಾಕೃತಿಕ ಶ್ರೀಮಂತಿಕೆಗೆ ವಿಕೇಂದ್ರೀಕರಣವೇ ಸಾಕ್ಷಿ.

- ರಾಜಕೀಯ ಕಾರಣ: ೧೯೭೨ ರಿಂದ ೮೦ ರ ಕಾಲಘಟ್ಟದ ವರೆಗೆ ೨ ಬಾರಿ ಮುಖ್ಯಮಂತ್ರಿಯಾಗಿದ್ದ ದಿ. ದೇವರಾಜು ಅರಸು ದೀನದಲಿತರ ಬಗ್ಗೆ ಇಟ್ಟುಕೊಂಡ ಕಾಳಜಿಯಿಂದ ಹಲವು ಸುಧಾರಣೆಗಳ ಪಿತಾಮಹರೆನಿಸಿಕೊಂಡರು. ಉದಾ: ಹಾವನೂರು ಆಯೋಗ, ಜೀತ ಪದ್ಧತಿ, ಮಲಹೊರುವ ಪದ್ಧತಿ ನಿವಾರಣೆ, ವಿದ್ಯಾರ್ಥಿ ನಿಲಯ, ಭೂಸುಧಾರಣೆ. ಉಳುವವನೇ ಹೊಲದೊಡೆಯದಂಥಹ ಈ ಎಲ್ಲ ನಿರ್ಧಾರಗಳು ಆ ಹೊತ್ತಿನ ದಲಿತ-ಬಂಡಾಯ ಸಾಹಿತ್ಯ ಘಟ್ಟದ ಮೇಲೆ ಗಂಭೀರವಾದ ಪರಿಣಾಮ ಬೀರಿದ್ದು ಇತಿಹಾಸ. ಈ ಎಲ್ಲ ಅಂಶಗಳ ಹಿಂದೆ ಈ ನೆಲದ ಜನರನ್ನು ಹಸಿವಿನಿಂದ ಮುಕ್ತರನ್ನಾಗಿಸುವುದೇ ಅದರ ಉದ್ದೇಶವಾಗಿತ್ತು.

- ನೋಯಿಯುವ ಹಲ್ಲಿನತ್ತ ನಾಲಗೆ ಮತ್ತೆ ಮತ್ತೆ ಹೊರಳುವಂತೆ ಈ ಹೊತ್ತಿನ ಭೀಕರ ಸಮಸ್ಯೆಯಾದ ಹಸಿವನ್ನು ಕುರಿತಂತೆ ಸಾಹಿತ್ಯದಲ್ಲಿ ಮತ್ತಷ್ಟು ಸಂಶೋಧನೆ ನಡೆಯಬೇಕಿದೆ.

೬.೧ ಫಲಿತಗಳು

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಉಳಿದೆಲ್ಲ ಪ್ರಕಾರಗಳಿಗಿಂತ ಸಂಶೋಧನ ಪ್ರಕಾರವು ಇಂದು ಗಟ್ಟಿಯಾಗಿ ಬೇರೂರುತ್ತಲಿದೆ. ಸಂಶೋಧನೆ ಎಂದರೆ, ಹುಡುಕು, ಶೋಧಿಸು ಎಂಬ ಸರಳ ಅರ್ಥವಿದ್ದರೂ ಅದರ ಒಳಾರ್ಥ ಅನ್ವೇಷಣೆ, ಹೊಸತು ಎಂಬ ಅರ್ಥವೂ ಇದೆ. ಈ ಕಾರಣಕ್ಕೆ ಒಂದು ಸಾಹಿತ್ಯಕೃತಿ ಕಾಲ ಕಾಲಕ್ಕೆ ತನ್ನ ಮೌಲ್ಯವನ್ನು ಬದಲಾಯಿಸಿಕೊಳ್ಳುತ್ತಿರುತ್ತದೆ. ಅದು ಸಹ ಒಬ್ಬ ವಿಮರ್ಶಕ ಅಥವಾ ಸಂಶೋಧಕನ ಕೈಯಲ್ಲಿರುತ್ತದೆ. ಈ ಕಾರಣಕ್ಕೆ ಮತ್ತೆ ಮತ್ತೆ ಪಂಪ, ಮತ್ತೆ ಮತ್ತೆ ಬೇಂದ್ರೆ ಎಂಬ ಕೃತಿಗಳು ಹುಟ್ಟಿಕೊಂಡಿದ್ದು ಒಂದು ಕಾಲಕ್ಕೆ ಪರಿಣಾಮ ಬೀರದ ಕೃತಿ ಪ್ರಸ್ತುತಕ್ಕೆ ಹತ್ತಿರ. ಎನಿಸಬಹುದು. ಅಂದರೆ ವಸ್ತುವಿನ ಬದಲಾವಣೆಗಿಂತ ವರ್ತಮಾನದ ಬದಲಾವಣೆ ಮುಖ್ಯವೆಂದಾಯಿತು.

ಕನ್ನಡ ಸಾಹಿತ್ಯದಲ್ಲಿ ಹಸಿವನ್ನು ವಸ್ತುವನ್ನಾಗಿರಿಸಿಕೊಂಡಿರುವ ಕಥಾಪ್ರಕಾರದ ಕೃತಿಗಳು ಇಂದು ಹೆಚ್ಚು ಪ್ರಸ್ತುತ ಎನಿಸುತ್ತದೆ. ಈ ಹಿನ್ನೆಲೆಯಲ್ಲಿಯೇ 'ಹಸಿವಿನ ಪರಿಕಲ್ಪನೆ: ಪ್ರಾತಿನಿಧಿಕ ಸಣ್ಣ ಕಥೆಗಳ ಹಿನ್ನೆಲೆಯಲ್ಲಿ' ಎಂಬ ಶೀರ್ಷಿಕೆಯ ಸಂಶೋಧನಾ ಪ್ರಬಂಧವು ಸಹ ಮೌಲ್ಯಯುತವಾದುದೆಂದು ಭಾವಿಸಬಹುದು.

ಹಸಿವು ಮನುಷ್ಯನ ಒಡಲು, ದೇಹ ಮನಸ್ಸಿಗೆ ಸಂಬಂಧಿಸಿದ್ದು ಈ ಹೊತ್ತಿಗೆ ಬೌದ್ಧಿಕತೆಯನ್ನೇ ಪ್ರಧಾನವಾಗಿ ಚರ್ಚಿಸುವಾಗ ಭೌತಿಕತೆಯ ಬಗ್ಗೆ ಚರ್ಚಿಸುವುದು ಅಷ್ಟೇ ಮುಖ್ಯವಾಗುತ್ತದೆ. ಈ ಹಸಿವು ಭೌತಿಕತೆಗೆ ಸಂಬಂಧಿಸಿದುದಾದರೂ ಬೌದ್ಧಿಕತೆಯ ಹಿನ್ನೆಲೆಯಲ್ಲಿ ಚರ್ಚಿಸುವುದು ಸಾರ್ವಕಾಲಿಕ ಸತ್ಯವಾಗಿದೆ. ಈ ಪ್ರಬಂಧದ ಉದ್ದೇಶವೂ ಇದೇ ಆಗಿದೆ.

ಸಣ್ಣ-ಕಥಾ ಪ್ರಕಾರವು ದುರ್ಗಸಿಂಹನ ಪಂಚತಂತ್ರದಿಂದ, ಜನಪದದಿಂದ ಹುಟ್ಟಿತ್ತಾದರೂ ಅಲ್ಲಿಯ ವಸ್ತುಗಳು ವಿಭಿನ್ನ. ಪ್ರಾಣಿ, ಪಕ್ಷಿ, ಮರ, ಗಿಡ, ಪುನರ್ಜನ್ಮ, ಮಾಯ, ಮಾಟ, ಉಪಾಯ, ಅಪಾಯ, ಅಷ್ಟಕ್ಕೆ ಸೀಮಿತಗೊಂಡಿತ್ತೆಂದು ಹೇಳಬಹುದು. ಆಧುನಿಕ ಕನ್ನಡ

ಸಾಹಿತ್ಯದಲ್ಲಿ ಹಸಿವನ್ನೇ ವಸ್ತುವಾಗಿರಿಸಿಕೊಂಡ ಒಂದಿಷ್ಟು ಕೃತಿಗಳಲ್ಲಿ ದೃಷ್ಟಿ ಹರಿಸಿದಾಗ ಅಧ್ಯಯನದ ಅನುಕೂಲ ದೃಷ್ಟಿಯಿಂದ ಪ್ರಾತಿನಿಧಿಕವಾಗಿ ಕೆಲವು ಕಥೆಗಳನ್ನು ಆಯ್ದುಕೊಂಡು ಈ ಅಧ್ಯಯನದ ವ್ಯಾಪ್ತಿಗೆ ಮಿತಿಗೊಳಿಸಿಕೊಳ್ಳಲಾಗಿದೆ.

ಕಾಲ ದೃಷ್ಟಿ, ಲಿಂಗೀಯ, ಪ್ರಾದೇಶಿಕತೆ, ಸಾಮಾಜಿಕ ಮುಂತಾದ ಹಿನ್ನೆಲೆಯಲ್ಲಿ ಹೊಸ ಆಯಾಮದಿಂದ ಸಂಶೋಧಿಸಿ, ಕೆಲವು ಫಲಿತಗಳನ್ನು ಕಂಡುಕೊಳ್ಳಲಾಗಿದೆ.

ಪೂರ್ವಾಧ್ಯಯನದ ಮೂಲಕ ಈ ಸಂಶೋಧನೆಗೆ ಹಲವು ಆಕರಗಳನ್ನು ಬಳಸಿಕೊಂಡು ಮುಂದಿನ ಅಧ್ಯಾಯಗಳಿಗೆ ನೆಲೆಗಟ್ಟಿನ ಸ್ವರೂಪವನ್ನು ನೀಡಲಾಗಿದೆ.

ಈ ಹಸಿವಿನ ಪರಿಕಲ್ಪನೆ ಬಂದದ್ದು ಇತ್ತೀಚೆಗೇನಲ್ಲ. ಈ ಜಗತ್ತು ಸೃಷ್ಟಿಯಾದಾಗಿನಿಂದಲೂ ಇದೆ. ಹಸಿವು ಕೇವಲ ಮಾನವನಿಗಷ್ಟೇ ಸಂಬಂಧಿಸಿದ್ದಲ್ಲ. ಚರಾಚರಗಳಲ್ಲಿ ಅಚರವೊಂದನ್ನು ಹೊರತುಪಡಿಸಿದರೆ, ಉಳಿದೆಲ್ಲವುಗೂ ಸಹ ಹಸಿವನ್ನು ನೀಗಿಸಿಕೊಳ್ಳಲು ಹೋರಾಡಿದ್ದನ್ನು ಕಂಡಿದ್ದೇವೆ. ಈ ಕಾರಣಕ್ಕೆ ಹಸಿವು ಎಂಬ ಪದ ಜೀವದ ಮೂಲಕ ಜೀವನಕ್ಕೂ ಸಂಬಂಧಿಸಿದ್ದು. ಆದಿಕಾಲದ ಸಾಹಿತ್ಯದಿಂದ ಇಂದಿನವರೆಗೂ ಬೇರೆ ಬೇರೆ ಆಯಾಮಗಳಲ್ಲಿ ಹಸಿವಿನ ವೈಭವೀಕರಣ ಮತ್ತು ವೈರುಧ್ಯವನ್ನು ಬಿಂಬಿಸಲಾಗಿದೆ. ಈ ಹಿನ್ನೆಲೆಯಲ್ಲಿ ಈ ಅಧ್ಯಾಯವನ್ನು ದಾಖಲಿಸಲಾಗಿದೆ. ಇದೇ ಅಧ್ಯಾಯದ ೨ನೇ ಭಾಗವಾಗಿ ಹಸಿವು ಎಂಬ ಪದಕ್ಕೆ ಸಾಹಿತಿಗಳು ವಿಜ್ಞಾನಿಗಳು, ಸಮಾಜಶಾಸ್ತ್ರಜ್ಞರು, ಮನಃಶಾಸ್ತ್ರಜ್ಞರು, ತಾತ್ವಿಕರು ನೀಡಿರುವ ವ್ಯಾಖ್ಯಾನಗಳನ್ನು ಅಧ್ಯಯನದ ಅನುಕೂಲದ ದೃಷ್ಟಿಯಿಂದ ದಾಖಲಿಸಿಕೊಳ್ಳಲಾಗಿದೆ.

೧. ಸಂಶೋಧನೆಯ ಒಟ್ಟು ಉದ್ದೇಶ ಕಾರಣ, ಪರಿಹಾರ ಹೇಳುವುದರ ಜೊತೆಗೆ ಕೊನೆಯಲ್ಲಿ ಕಂಡುಕೊಂಡ ಒಟ್ಟು ಬೆಳವಣಿಗೆಯನ್ನು ಹೇಳುವುದು ಆಗಿದೆ. ಹಸಿವನ್ನು ಧರ್ಮಾತೀತವಾದ, ಜಾತ್ಯತೀತವಾದ, ಪಕ್ಷಾತೀತವಾದ ಪರಿಕಲ್ಪನೆಯಲ್ಲಿ ನೋಡಬೇಕು. ಹಸಿವೆಗೆ ಮುಖ್ಯವಾಗಿ ಸಾಮಾಜಿಕವಾದ ಕಾರಣಗಳನ್ನು ಬಡತನ, ಜಾತಿ ವ್ಯವಸ್ಥೆ, ಧಾರಣಾ ಸಾಮರ್ಥ್ಯ ಕ್ಷೀಣಿಸಿರುವುದು, ಅನಕ್ಷರತೆ, ನಿರುದ್ಯೋಗ, ಆಲಸ್ಯ, ಅನಾರೋಗ್ಯ, ಅತಿಯಾದ ಜನಸಂಖ್ಯೆ, ದುಶ್ಚಟಗಳು, ಅರಿವಿನ ಕೊರತೆ, ನಿರಾಧಾರ, ಮದ್ಯಪಾನಾಸಕ್ತಿ ಮುಂತಾದವುಗಳಿಂದ ಹುಟ್ಟಿಕೊಂಡ ಪರಿಣಾಮಗಳನ್ನು ಗಮನಾರ್ಹವಾಗಿ ಗುರುತಿಸಲಾಗಿದೆ.

೨. ಯಾವುದೇ ದೇಶದ ಅರ್ಥ ವ್ಯವಸ್ಥೆ ಬುಡ ಮೇಲಾದಾಗ ಎಲ್ಲಾ ಕ್ಷೇತ್ರಗಳು ಅವ್ಯವಸ್ಥೆಯ ಆಗರವಾಗುತ್ತವೆ. ಇದನ್ನು ಕಂಡುಕೊಂಡ ಸಾಹಿತಿಗಳು ತಮ್ಮ ಸಾಹಿತ್ಯದ ಮೂಲಕ ವರ್ತಮಾನದ ಸಾಮಾಜಿಕ ಸ್ಥಿತಿಯನ್ನು ಪ್ರತಿಬಿಂಬಿಸಿರುತ್ತಾರೆ. ಹಸಿವಿಗೂ ಸಹ ಆರ್ಥಿಕ ಸ್ಥಿತಿಯು ಹೇಗೆ ಕಾರಣವಾಯಿತು ಎಂದು ದಾಖಲಿಸುತ್ತಲೇ ವಿಭಿನ್ನ ಆಯಾಮಗಳಲ್ಲಿ ಹಸಿವಿನಿಂದ ನರಳುತ್ತಿರುವ ವರ್ಗವನ್ನು ಅಂಕಿ ಅಂಶದ ಮೂಲಕ ಕಂಡುಕೊಳ್ಳಲಾಗಿದೆ. ಕೇಂದ್ರೀಕರಣಗೊಂಡ ಸಂಪತ್ತನ್ನು ವಿಕೇಂದ್ರಿಕರಣಗೊಳಿಸುವ ನಿಟ್ಟಿನಲ್ಲಿ ಚರ್ಚಿಸಲಾಗಿದೆ. ಉದಾ: ಬರಗಾಲದಂತ ಸ್ಥಿತಿಯಲ್ಲಿ ಕೆಲವು ಪುರುಷರು ಭಯೋತ್ಪಾದಕರಾಗಿ,

ದರೋಡೆಕೋರರಾಗಿಯೂ, ಕೆಲವು ಸ್ತ್ರೀಯರು ಕಳ್ಳಿಯರಾಗಿ, ವೇಶ್ಯೆಯರಾಗಿಯೂ ಸಮಾಜದಿಂದ ವಿಮುಖವಾಗಿರುವುದನ್ನು ನೋಡಲಾಗಿದೆ.

೩. ಈ ನೆಲ ಭಾವನೆಗಳ ಮಹಾಪೂರ. ಇಲ್ಲಿ ಭಾವನೆಗಳೊಂದಿಗೆ ಆಟವನ್ನು ಆಡಿದ್ದೇವೆ. ಚೆಲ್ಲಾಟವನ್ನು ಆಡಿದ್ದೇವೆ. ಈ ಹಿನ್ನೆಲೆಯಲ್ಲಿ ಧರ್ಮದ ಹೆಸರಿನ, ಧರ್ಮದ ಹಿನ್ನೆಲೆಯ ಧಾರ್ಮಿಕ ಭಾವನೆಗಳಲ್ಲಿ ಹಸಿವಿನತ್ತ ಕೊಂಡೊಯ್ದಿರುವ ಚಾರಿತ್ರಿಕ ಸತ್ಯವನ್ನು ದಾಖಲಿಸಲಾಗಿದೆ. ಸಂಶೋಧನೆಯ ದೃಷ್ಟಿಯಿಂದ ವ್ಯಾಪ್ತಿ ಮತ್ತು ಮಿತಿಯನ್ನು ನಿಗದಿತಪಡಿಸಿಕೊಂಡು ಕೆಲವು ಕಥೆಗಳಲ್ಲಿನ ಪಾತ್ರದ ಮೂಲಕ ಕಾರಣಗಳನ್ನು ದಾಖಲಿಸಲಾಗಿದೆ. ಧರ್ಮ ಕೆಲವು ವರ್ಗವನ್ನು ಕಾಪಾಡಿದುದಕ್ಕಿಂತ ಕಾಡಿರುವುದೇ ಹೆಚ್ಚು. ಹೆಣ್ಣನ್ನನಂತೂ ನಿರ್ಭಾವುಕಳನ್ನಾಗಿ ನೋಡಿದ್ದು ಮತ್ತೂ ದುರಂತ ಎಂಬ ಸತ್ಯವನ್ನು ಮನಗಾಣಲಾಗಿದೆ.

೪. ಪ್ರಜಾಪ್ರಭುತ್ವದ ನೆಲೆಗಟ್ಟಿನಲ್ಲಿ ನಿರ್ಮಾಣವಾದ ಸಂವಿಧಾನಬದ್ಧ ವ್ಯವಸ್ಥೆಯಲ್ಲಿ ನಮ್ಮನ್ನಾಳುವವರೇ ಉಳಿಸುವ ಬದಲು ರಾಜಕೀಯವಾಗಿ ಅಳಿಸಿ ಹಾಕಿದ್ದು ವಿಪರ್ಯಾಸ: ಹಲವು ಆಸೆಗಳನ್ನು ಎದೆಯವರೆಗೂ ತಂದು ಹೊಟ್ಟೆಗೆ ಇಳಿಸದೆ ಹಸಿವನ್ನೇ ಉಸಿರನ್ನಾಗಿಸಿಕೊಂಡಿರುವ ಒಂದು ವರ್ಗಕ್ಕೆ ಶಾಪವಾಗಿ ಪರಿಣಮಿಸಿದ್ದನ್ನು ಕಂಡುಕೊಳ್ಳಲಾಗಿದೆ. ದಬ್ಬಾಳಿಕೆ, ಮೌಢ್ಯತೆಯ ಹೇರಿಕೆ, ಆರ್ಥಿಕ ಅಸಮಾನತೆ ಇವೆಲ್ಲವೂ ಅವರಿಗೆ ಅಸ್ತ್ರವಾಗಿದೆ. ಸಾಹಿತ್ಯದ ಹಿನ್ನೆಲೆಯಲ್ಲಿ ಇವುಗಳನ್ನೆಲ್ಲಾ ಗುರುತಿಸಿ ಕೆಲವು ಕಥೆಗಳ ಪಾತ್ರಗಳ ಮೂಲಕ ಕಟ್ಟಿಕೊಡಲಾಗಿದೆ.

೫. ಪ್ರಕೃತಿಯನ್ನು ಪ್ರಪಂಚದಲ್ಲಿರಿಸಿರುವುದೇ ಒಂದು ಶಕ್ತಿಯನ್ನಾಗಿ, ಅರ್ಥಶಾಸ್ತ್ರಜ್ಞ ಟಿ. ಆರ್. ಮಾಲ್ಥಸ್ ಹೇಳಿದಂತೆ 'ಪ್ರಕೃತಿ ಎಂಬುದು ಬಡ್ಡಿ ತರುವ ಬಂಡವಾಳವಿದ್ದಂತೆ. ಬಡ್ಡಿಯನ್ನು ಬಳಸಿಕೊಳ್ಳಬೇಕಿತ್ತೇ ಹೊರತೂ ಬಂಡವಾಳವನ್ನಲ್ಲ. ಈ ಕಾರಣಕ್ಕೆ ಪ್ರಾಕೃತಿಕ ವಿಕೋಪಗಳನ್ನು ಎದುರಿಸಬೇಕಾಗಿದೆ. ಇದರಿಂದಲೇ ಹಸಿವಿನ ಸಮಸ್ಯೆ ತೀವ್ರವಾಗಿದೆ. 'ಹರಕೊಲ್ಲಲ್ ಗುರು ಕಾಯ್ವನೆ' ಎಂಬಂತೆ – ಪ್ರಾಕೃತಿಕ ಸಂಪನ್ಮೂಲವು ಅತಿವೃಷ್ಟಿ ಮತ್ತು ಅನಾವೃಷ್ಟಿಯ ಮೂಲಕ ಹಸಿವೆಗೆ ತುತ್ತಾದವರನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

೬. ಅನನ್ಯತೆಯನ್ನು ಸಾರುತ್ತಿರುವ ಈ ದೇಶದಲ್ಲಿ ಕೆಳವರ್ಗಕ್ಕೆ ಅನ್ಯಾಯ ಮಾಡುವುದರ ಮೂಲಕ ಅನ್ಯದೇಶವೆಂಬ ಭಾವನೆ ಬಂದು ಬಿಟ್ಟಿದೆ. ಆದರೆ ಪ್ರಕೃತಿ ಮುನಿಸಿಕೊಂಡಾಗ ಅದಕ್ಕೆ ಎಲ್ಲರೂ ಒಂದೇ ಎಂದು ಸಾರಿದ್ದು ವಿಶೇಷ ಮತ್ತು ವಿಪರ್ಯಾಸ.

೭. ಸಾಹಿತ್ಯದ ಮುಖ್ಯ ಉದ್ದೇಶ ಭೂತಕಾಲವನ್ನು ಹಿಡಿದಿಟ್ಟುಕೊಂಡು ವರ್ತಮಾನವನ್ನು ಪ್ರತಿನಿಧಿಸುತ್ತಾ, ಭವಿಷ್ಯದ ಕಡೆಗೆ ಬೆಳಕು ಚೆಲ್ಲುವುದೇ ಆಗಿದೆ. ಯಾರು ಇತಿಹಾಸವನ್ನು ಸೃಷ್ಟಿಸಲಾರರೋ ಅವರು ಭವಿಷ್ಯವನ್ನು ಸೃಷ್ಟಿಸಲಾರರು ಎಂಬಂತೆ ಸಾಹಿತ್ಯ ಈ ಜಗದ ಹಲವು ಸಮಸ್ಯೆಗಳಿಗೆ ದಿಕ್ಸೂಚಿಯಾಗಿದೆ. ಈ ನಿಟ್ಟಿನಲ್ಲಿ ಈ ಸಂಶೋಧನೆಯು ಬೇರೆ ಬೇರೆ ಕಾರಣಗಳಿಂದ ಹಸಿವೆಂಬ ಹೆಬ್ಬಾವಿಗೆ ತುತ್ತಾದವರನ್ನು ಅದರಿಂದ

ಹೊರಬರುವಂತೆ ಪ್ರೇರೇಪಿಸುವುದಾಗಿದೆ. ಒಂದು ಕೃತಿ ಬರೆಯುವ ಮುನ್ನ ಕೃತಿಕಾರನದ್ದು, ಬರೆದಾದ ಮೇಲೆ ಅದು ಸಾರ್ವಜನಿಕರದ್ದು. ಅಂದರೆ ಪಾತ್ರಗಳ ಮೂಲಕ ಎಲ್ಲವನ್ನೂ ಹೇಳಿಕೊಂಡ ಲೇಖಕ ಆ ಪಾತ್ರಗಳ ಮೂಲಕವೇ ಪರಿಹಾರವನ್ನು ನೀಡಬಲ್ಲ.

೮. ಗಾಂಧಿ, ಲೋಹಿಯಾ, ಅಂಬೇಡ್ಕರ್, ಅಮರ್ತ್ಯಸೇನ ಮುಂತಾದವರು ಹಸಿವಿನ ನಿವಾರಣೆಗೆ ಪಂಚವಾರ್ಷಿಕ ಯೋಜನೆಗಳು, ರಾಷ್ಟ್ರೀಕರಣ, ಭೂಸುಧಾರಣೆ, ಜನಸಂಖ್ಯಾ ನಿಯಂತ್ರಣ, ಸಣ್ಣ ಮತ್ತು ಗೃಹ ಕೈಗಾರಿಕಾಭಿವೃದ್ಧಿ, ಶಿಕ್ಷಣ, ಮೂಲಭೂತ ಸೌಕರ್ಯಗಳ ಬಗ್ಗೆ ತಿಳಿಸಿದ್ದಾರೆ. ಸಾಹಿತ್ಯದ ಸಂದರ್ಭದಲ್ಲೂ ಕೆಲವು ಲೇಖಕರ ಹಲವು ಪಾತ್ರಗಳು ಇದನ್ನೇ ದಾಖಲಿಸಿರುವುದನ್ನು ಗಮನಿಸಬಹುದಾಗಿದೆ.

೯. ಮಹಿಳೆಯರು ಹಸಿವೆಯ ಸಮಸ್ಯೆಯಿಂದ ಹೊರಬರುವುದಕ್ಕೆ ಕ್ರೈಸ್ತಮಿಷನರಿಗಳ ಆಗಮನ ವೇದಿಕೆಯಾಯಿತು. ಹೆಣ್ಣು ತನ್ನ ಶೀಲವನ್ನೇ ಪುರುಷ ಪ್ರಧಾನ ವ್ಯವಸ್ಥೆಗೆ ಮೀಸಲಿಟ್ಟು ಬದುಕಿನ ಮತ್ತು ಧರ್ಮದ ಒಂದು ಭಾಗ ಎಂದುಕೊಳ್ಳುವ ಹೊತ್ತಿನಲ್ಲಿ ಹೊಸ ಶೈಕ್ಷಣಿಕ ಪದ್ಧತಿ ಮೂಲಕ ಧರ್ಮದ ನಿಜವಾದ ವ್ಯಾಖ್ಯಾನವನ್ನು ಪ್ರಚಾರಪಡಿಸುತ್ತ ಈ ನೆಲದ ಧರ್ಮವನ್ನು ಪ್ರಶ್ನಿಸುವಂತೆ ಸಿದ್ಧಗೊಳಿಸಿ ಬಡತನದಿಂದ ಮುಕ್ತಗೊಳಿಸಿದ್ದು ನಿಜವಾದ ಪರಿಹಾರವೆ. ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ. ಬ್ರಿಟಿಷರ ಶಿಕ್ಷಣ ಹೆಣ್ಣನ್ನು ಸ್ವಾವಲಂಬಿಯನ್ನಾಗಿಸಿತು. ಈ ಸ್ವಾವಲಂಬನೆ ಹಸಿವು ಮುಕ್ತ ರಾಷ್ಟ್ರವನ್ನಾಗಿಸಲು ಮುಂದಾಗಿದ್ದು ವಿಶೇಷ.

೧೦. ಇಷ್ಟೆಲ್ಲ ಅನಿಷ್ಟಕ್ಕೆ ಪುರುಷ ಪ್ರಧಾನ ವ್ಯವಸ್ಥೆಯೇ ಕಾರಣ ಎಂದು ಕೂಗುತ್ತಿರುವಾಗ ಮನುಷ್ಯತ್ವದ ನೆಲೆಯಲ್ಲಿ ಹಸಿವನ್ನು ಹೋಗಲಾಡಿಸಲು ಲೇಖಕರು ಮತ್ತು ಪಾತ್ರಗಳು ಕಾಣಸಿಗುತ್ತವೆ. ಇದಕ್ಕೆ ಕಾರಂತರ 'ಅಡುಗೆ ಮನೆ' ಮತ್ತು ಆಶಾ ಬೆನಕಪ್ಪನವರ 'ತಂದೆಯ ಅಂತಃಕರಣ' ಉತ್ತಮ ಉದಾಹರಣೆ.

೧೧. ಹಸಿವು ಈ ನೆಲದ ಸಮಸ್ಯೆ ಮಾತ್ರವಲ್ಲ. ಇದೊಂದು ಜಾಗತಿಕ ಸಮಸ್ಯೆಯಾಗಿ ಪರಿಣಮಿಸದೆ. ಈ ಕಾರಣಕ್ಕೆ ವಿಶ್ವದ ಪ್ರತಿಯೊಂದು ರಾಷ್ಟ್ರವೂ ಪರಿಹರಿಸಲು ಪ್ರಯತ್ನಿಸಿವೆ, ಪ್ರಯತ್ನಪಡುತ್ತಿವೆ. ಉದಾ: ಲೆನಿನ್, ಕಾರ್ಲ್‌ಮಾರ್ಕ್ಸ್, ಟಾಲ್‌ಸ್ಟಾಯ್, ಕನ್‌ಫ್ಯೂಷಿಯಸ್, ಸಾಕ್ರೆಟಿಸ್, ಪ್ಲೇಟೋ, ಅರಿಸ್ಟಾಟಲ್, ಮಾರ್ಟಿನ್ ಲೂಥರ್‌ಕಿಂಗ್, ಜೆ.ಆರ್ ಮಾಲ್ಥಸ್, ಆಡಂ ಸ್ಮಿತ್, ಮುಂತಾದವರ ವಿಚಾರಗಳ ಮೂಲಕ ಕನ್ನಡ ಸಾಹಿತ್ಯವನ್ನು ಅನುಸಂಧಾನಗೊಳಿಸಿಗೊಂಡು ನೋಡಲಾಗಿದೆ.

೧೨. ಆಸೆಯಿದ್ದವರಿಗೆ ಅಧಿಕಾರವಿರುವುದಿಲ್ಲ, ಅಧಿಕಾರವಿದ್ದವರಿಗೆ ಆಸೆ ಇರುವುದಿಲ್ಲ ಎಂಬಂತಾಗಿದೆ ಈ ಹೊತ್ತಿನ ಸ್ಥಿತಿ. ಈ ನಿಟ್ಟಿನಲ್ಲಿ ಹಲವು ಯೋಚನೆ ಮತ್ತು ಯೋಜನೆಗಳ ಮೂಲಕ ಪರಿಹಾರಕ್ಕೆ ಮುಂದಾಗಬೇಕಿರುವ ಸಾಹಿತ್ಯರಂಗ ಖಾಸಗೀ ರಂಗಗಳ ಪಾತ್ರಗಳನ್ನು ಅಭಿವ್ಯಕ್ತಿಸಲಾಗಿದೆ. ಸಾಹಿತ್ಯಕ್ಕಿರುವ ಶಕ್ತಿಯನ್ನು ಶತಶತಮಾನಗಳಿಂದಲೂ ಕಂಡುಕೊಳ್ಳುತ್ತಾ ಬಂದಿದ್ದೇವೆ. ಶಾಸಕಾಂಗ, ಕಾರ್ಯಾಂಗ,

ನ್ಯಾಯಾಂಗಗಳು ದಾರಿತಪ್ಪಿದಾಗ ಸಾಹಿತ್ಯರಂಗ ಮತ್ತು ಅದರ ಒಂದು ಭಾಗವಾದ ಪತ್ರಿಕಾರಂಗವು ಹಲವು ಪರಿಹಾರವನ್ನು ಸೂಚಿಸಿದ್ದು ವಿಶೇಷ.

೧೩. ವಚನ ಕಾಲಘಟ್ಟದ ಬಹಳ ಮುಖ್ಯವಾದ ಪರಿಕಲ್ಪನೆಗಳಲ್ಲಿ ದಾಸೋಹವೂ ಒಂದು. ಇದರ ಮುಂದುವರಿದ ಭಾಗವೇ ಇವತ್ತಿಗೂ ಈ ಹೊತ್ತಿಗೂ ಮುಂದುವರಿಸಿಕೊಂಡು ಬರುತ್ತಿರುವ ಖಾಸಗಿ ಮಠ-ಮಂದಿರಗಳಲ್ಲಿನ ಅನ್ನಸಂತರ್ಪಣೆಯೂ ಒಂದು ಪರಿಹಾರ ಎಂಬುದನ್ನು ಗುರುತಿಸಲಾಗಿದೆ.

೧೪. ಆನೆ, ಇರುವೆ, ಕಾಗೆ ಮತ್ತು ಕಪ್ಪೆಗಳಿಗೆ ಅನ್ನವನ್ನು ಯಾರಿಡುತ್ತಾರೆ? ಹಸಿವಾದಾಗ ಅವುಗಳು ಆಹಾರವನ್ನು ಹುಡುಕಿಕೊಂಡು ಹೊರಡುತ್ತವೆ. ಮನುಷ್ಯನೂ ಸಹ ಈ ಹೊಟ್ಟೆಯ ಶಿಷ್ಯನೇ ಆದರೂ ಅವನ ನಾಲಗೆಯ ಪ್ರಭಾವ ಮಾತ್ರ ಎಲ್ಲ ಅಂಗಗಳಲ್ಲೂ ಇರುತ್ತದೆ. ಅದೇ ತರಹ ಅವನ ಹಸಿವು ನಾನಾ ರೀತಿಗಳಲ್ಲಿರುತ್ತದೆ.

೧೫. ಹಿಂದೂಗಳಲ್ಲಿ ಯಾರೂ ಅಸ್ಪೃಶ್ಯನ ಹಸಿವೆಗೆ ಅನ್ನ ವಸತಿ- ಮತ್ತು ಬಟ್ಟೆಗಳಿಗೆ ಜವಾಬ್ದಾರಿ ಹೊರಬೇಕಾಗಿಲ್ಲ. ಅವನ ಆರೋಗ್ಯವು ಯಾರ ಕಾಳಜಿಯೂ ಆಗಿರಬೇಕಾಗಿಲ್ಲ. ಹಾಗೆ ನೋಡಿದರೆ ಅಸ್ಪೃಶ್ಯನೊಬ್ಬನ ಮರಣವು ಪೀಡೆ ಕಳೆದಂತೆ ಎಂಬ ಭಾವನೆ ಇದೆ. ಹಿಂದು ಗಾದೆ ಒಂದು ಹೀಗಿದೆ. 'ಮಾದಿಗ ಸತ್ತ, ಮೈಲಿಗೆಯ ಭಯ ಮಾಯವಾಯಿತು.'

೧೬. ಪ್ರಾತಿನಿಧಿಕ ಕಥೆಗಳಲ್ಲಿ ಕೆಲವು ಮಹಿಳಾ ಪಾತ್ರಗಳು ಎದುರಾಗುವ ಸಮಸ್ಯೆಗಳಿಗೆ ಪಲಾಯನ ಮಾಡದೆ ನಿರ್ಭೀತಿಯಿಂದ ಎದುರಿಸಿರುವುದು ಕಂಡು ಬರುತ್ತದೆ. ಪುರುಷ ಪ್ರಧಾನ ವ್ಯವಸ್ಥೆಯನ್ನು ಪ್ರಶ್ನಿಸುವ, ದೌರ್ಜನ್ಯವನ್ನು ವಿರೋಧಿಸುವ ದಿಟ್ಟತನವನ್ನು ಪ್ರದರ್ಶಿಸಿವೆ.

೧೭. ಮಹಿಳೆಯರು ತಮಗಾದ ಶೋಷಣೆಗೆ, ಅನ್ಯಾಯಕ್ಕೆ ಪುರುಷನಷ್ಟೇ ಸಮರ್ಥವಾಗಿ ಮೈಕೊಡವಿ ಎದ್ದು ನಿಲ್ಲುವ ಪೌರುಷವನ್ನು ಬಿಂಬಿಸುವ, ಸ್ವತಂತ್ರವಾಗಿ ಕಾರ್ಯನಿರ್ವಹಿಸುವ ಸ್ವಾಭಿಮಾನದ ಪ್ರತೀಕವಾಗಿದ್ದಾರೆ.

೧೮. ಕುಟುಂಬ ನಿರ್ವಹಣೆಯಲ್ಲಿ ಸ್ತ್ರೀ ಪಾತ್ರಗಳು ಪುರುಷನಿಗೆ ಸರಿಸಾಟಿಯಾಗಿ ನಿಂತು ಹೋರಾಡಿವೆ. ಸಂಸಾರವನ್ನು ರಕ್ಷಿಸುವ ಹೊಣೆಗಾರಿಕೆಯನ್ನು ಸಮರ್ಥವಾಗಿ ನಿರ್ವಹಿಸಿವೆ.

೧೯. ಹಸಿವು ಮತ್ತು ಬಡತನ ಮನುಷ್ಯನಲ್ಲಿರುವ ಸೂಕ್ಷ್ಮತೆಯನ್ನು, ಸಂವೇದನಾಶೀಲತೆಯನ್ನು, ಮಾನವೀಯ ಗುಣಗಳನ್ನು ನಾಶ ಮಾಡಿ ಬಿಡುತ್ತದೆ.

೬.೨ ಮುಂದಿನ ಅಧ್ಯಯನದ ಸಾಧ್ಯತೆಗಳು

- ದಲಿತ ಬಂಡಾಯ ಕಥಾ ಸಾಹಿತ್ಯದಲ್ಲಿ ಹಸಿವಿನ ಪರಿಕಲ್ಪನೆಯ ಕುರಿತು ಅಧ್ಯಯನ ಮಾಡಬಹುದು.
- ನಾಟಕ, ಬೀದಿ ನಾಟಕಗಳಲ್ಲಿ ಹಸಿವಿನ ಪರಿಕಲ್ಪನೆಯ ಕುರಿತು ಅಧ್ಯಯನ ಮಾಡಬಹುದು.
- ಕನ್ನಡ ಕಾದಂಬರಿಗಳಲ್ಲಿ ಹಸಿವಿನ ಪರಿಕಲ್ಪನೆಯ ಕುರಿತು ಅಧ್ಯಯನ ಮಾಡಬಹುದು.
- ಕನ್ನಡದ ಆತ್ಮಕತೆಗಳಲ್ಲಿ ಹಸಿವಿನ ಪರಿಕಲ್ಪನೆಯ ಕುರಿತು ಅಧ್ಯಯನ ಮಾಡಬಹುದು.
- ವೈಚಾರಿಕ ಪ್ರಬಂಧಗಳಲ್ಲಿ ಹಸಿವಿನ ಪರಿಕಲ್ಪನೆಯ ಕುರಿತು ಅಧ್ಯಯನ ಮಾಡಬಹುದು.
- ನವೋದಯ, ಪ್ರಗತಿಶೀಲ ಕಾದಂಬರಿಗಳಲ್ಲಿ ಹಸಿವಿನ ಪರಿಕಲ್ಪನೆಯ ಕುರಿತು ಅಧ್ಯಯನ ಮಾಡಬಹುದು.

ಅನುಬಂಧ

೧. ಪ್ರಧಾನ ಆಕರಗಳು

೨. ಪರಾಮರ್ಶನ ಗ್ರಂಥಗಳು

೩. ಸಂಶೋಧನಾ ಪ್ರಬಂಧಗಳು

೧. ಪ್ರಧಾನ ಆಕರಗಳು

೧. ಅಲಕ ತೀರ್ಥಹಳ್ಳಿ, ಪದಕುಸಿಯೆ ನೆಲವಿಹುದು, ಪಾತರಗಿತ್ತಿ, ೨೦೧೭, ಪ್ರಸಾರಾಂಗ, ಮಂಗಳೂರು ವಿ. ವಿ.

೨. ಕುವೆಂಪು, ಯಾರೂ ಅರಿಯದ ವೀರ, ನುಡಿಶಿಲ್ಪ, ೨೦೧೭, ಪ್ರಸಾರಾಂಗ, ಮಂಗಳೂರು ವಿ. ವಿ.

೩. ಗಣೇಶ್ ಮೊಗಳ್ಳಿ, ಬುಗುರಿ, ದಿವಾಕರ್ (ಸಂ), ಶತಮಾನದ ಸಣ್ಣ ಕತೆಗಳು, ೨೦೧೧, ಪ್ರಿಸಮ್ ಬುಕ್ಸ್ ಪ್ರೈ. ಲಿಮಿಟೆಡ್, ಬೆಂಗಳೂರು.

೪. ಗೀತಾ ನಾಗಭೂಷಣ, ಜ್ವಲಂತ, ಕಥನ ಪ್ರೀತಿ, ೨೦೧೩, ಅಕ್ಷರ ಪ್ರಕಾಶನ, ಸಾಗರ.

೫. ಗಂಗಾ ಪಾದೇಕಲ್, ಮೂರಾಬಟ್ಟೆ, ಚಿನ್ನದ ಸೂಜಿ, ೨೦೦೮, ಶ್ರೀ ಕೃಷ್ಣ ಬುಕ್ಸ್ ಏಜೆನ್ಸಿ, ಬೆಂಗಳೂರು.

೬. ಗಂಗಾ ಪಾದೇಕಲ್, ಹಸಿವು, ಅದೇ.

೭. ಗಂಗಾ ಪಾದೇಕಲ್, ಒಂದು ಸಾವಿನ ಕಥೆ, ಅದೇ.

೮. ಗಂಗಾ ಪಾದೇಕಲ್, ನಮ್ಮಲ್ಲೊಬ್ಬಳು ಅಲೀಮ, ಅದೇ.

೯. ಗಂಗಾ ಪಾದೇಕಲ್, ಸೇಸಿಯ ಹಾಡು ಪಾಡು, ಅದೇ.

೧೦. ತುಳಸೀ ವೇಣುಗೋಪಾಲ್, ಆಕಾಶಬಾಣ, ಕಥನ ಪ್ರೀತಿ, ೨೦೧೩, ಅಕ್ಷರ ಪ್ರಕಾಶನ, ಸಾಗರ.

೧೧. ನಾಗವೇಣಿ ಎಚ್., ಇನಾಮು, ಮೀಯುವ ಆಟ, ೨೦೦೫, ಲೋಹಿಯಾ ಪ್ರಕಾಶನ, ಬಳ್ಳಾರಿ.

೧೨. ನಿರಂಜನ, ಕೊನೆಯ ಗಿರಾಕಿ, ಶತಮಾನದ ಸಣ್ಣ ಕತೆಗಳು, ೨೦೧೧, ಪ್ರಿಸಮ್ ಬುಕ್ಸ್ ಪ್ರೈ. ಲಿಮಿಟೆಡ್, ಬೆಂಗಳೂರು.

೧೩. ಫಕೀರ ಮುಹಮ್ಮದ್ ಕಟ್ಪಾಡಿ, ನೋಂಬು, ಅದೇ.

೧೪. ಬಷೀರ್ ಬಿ.ಎಂ, ಚೂರ್ಕತೆ, ಅಂತರ್ಜಾಲ.

೧೫. ಬಾನು ಮುಸ್ತಾಕ್, ದೇವರು ಮತ್ತು ಅಪಘಾತ, ಕನ್ನಡದ ಮೂವತ್ತು ಕಥೆಗಳು, ೨೦೧೪, ಸಾಹಿತ್ಯ ಅಕಾದೆಮಿ, ಬೆಂಗಳೂರು.

೧೬. ಭಾರತೀಪ್ರಿಯ, ಮೋಚಿ, ಶತಮಾನದ ಸಣ್ಣ ಕತೆಗಳು, ೨೦೧೧, ಪ್ರಿಸಮ್ ಬುಕ್ಸ್ ಪ್ರೈ ಲಿಮಿಟೆಡ್, ಬೆಂಗಳೂರು.

೧೭. ಭಂಡಾರಿ ಆರ್. ವಿ., ಅಂಗಡಿಪೂಜೆ, ಚೆಂದಳಿರು, ೨೦೧೦, ಪ್ರಸಾರಾಂಗ, ಮಂಗಳೂರು ವಿ. ವಿ., ಮಂಗಳೂರು.

೧೮. ಮಹಾದೇವ ದೇವನೂರು, ಮೂಡಲ ಸೀಮೇಲಿ ಕೊಲೆಗಿಲೆ, ಕನ್ನಡದ ಮೂವತ್ತು ಕಥೆಗಳು, ೨೦೧೪, ಸಾಹಿತ್ಯ ಅಕಾದೆಮಿ, ಬೆಂಗಳೂರು.

೧೯. ಮಹಾದೇವ ದೇವನೂರು, ಒಡಲಾಳ, ೧೯೮೬, ನವಕರ್ನಾಟಕ ಪಬ್ಲಿಕೇಷನ್, ಬೆಂಗಳೂರು.

೨೦. ಮಿತ್ರಾವೆಂಕಟರಾಜ್, ನಾಗಮ್ಮನ ಮನೆಯ ಸಣ್ಣಗೇಟು, ಹಕ್ಕಿ ಮತ್ತು ಅವಳು, ೧೯೯೭, ಸಾಹಿತ್ಯ ಪ್ರಕಾಶನ, ಮುಂಬಯಿ.

೨೧. ರಾಮಣ್ಣ ಬೆಸಗರಹಳ್ಳಿ, ಚೆಲುವನ ಪರಂಗಿ ಗಿಡಗಳು, ಬೆಸಗರಹಳ್ಳಿ ರಾಮಣ್ಣನವರ ಕಥೆಗಳು, ೨೦೧೫, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

೨೨. ರಾಮಣ್ಣ ಬೆಸಗರಹಳ್ಳಿ, ನೂರು ರೂಪಾಯಿ ನೋಟು, ಅದೇ.

೨೩. ರಾಮಣ್ಣ ಬೆಸಗರಹಳ್ಳಿ, ಜೀತ, ಅದೇ.

೨೪. ಲಲಿತಾನಾಯಕ್ ಬಿ.ಟಿ., ಕಳ್ರು, ಸಾಹಿತ್ಯ ಸಂವೇದನೆ ೩, ೨೦೧೧, ಪ್ರಸಾರಾಂಗ, ಕುವೆಂಪು ವಿ. ವಿ., ಶಿವಮೊಗ್ಗ.

೨೫. ಲಂಕೇಶ್ ಪಿ., ಕಣ್ಣಪ್ಪನ ಅಂತಿಮ ದಿನಗಳು, ಚೆಂದಳಿರು, ೨೦೧೦, ಪ್ರಸಾರಾಂಗ, ಮಂಗಳೂರು ವಿ. ವಿ.

೨೬. ಲಂಕೇಶ್ ಪಿ., ರೊಟ್ಟಿ, ಸಾಹಿತ್ಯ ಸಂವೇದನೆ ೩, ೨೦೧೧, ಪ್ರಸಾರಾಂಗ, ಕುವೆಂಪು ವಿ. ವಿ., ಶಿವಮೊಗ್ಗ.

೨೭. ವೀರಭದ್ರಪ್ಪ ಕುಂ, ದೇವರ ಹೆಣ, ಬರಿ ಕಥೆಯಲ್ಲೋ ಅಣ್ಣಾ, ೨೦೧೦, ಸಪ್ನ ಬುಕ್ ಹೌಸ್, ಬೆಂಗಳೂರು.

೨೮. ವೀರಭದ್ರಪ್ಪ ಕುಂ., ಕತ್ತಲನು ತ್ರಿಶೂಲ ಹಿಡಿದ ಕಥೆ, ಅದೇ.

೨೯. ವೀರಭದ್ರಪ್ಪ ಕುಂ, ಕಿವುಡ ನಾಯಿಯಾದ ಪ್ರಸಂಗ, ಅದೇ.

೩೦. ಶಿವರಾಮ ಕಾರಂತ, ಹಸಿವು, ಹಸಿವು ಕಥಾ ಸಂಕಲನ, ೨೦೧೭, ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ.

೩೧. ಶಿವರಾಮ ಕಾರಂತ, ಕಳ್ಳ ಫಕೀರ, ಅದೇ.

೩೨. ಶಿವರಾಮ ಕಾರಂತ, ಹೋಳಿಗೆ, ಅದೇ.

೩೩. ಶಿವರಾಮ ಕಾರಂತ, ನಂದಯ್ಯ ನಾಯರಿ, ಅದೇ.

೩೪. ಶಿವರಾಮ ಕಾರಂತ, ಅಜ್ಜೀ ಹೆಣ, ಅದೇ.

೩೫. ಶಿವರಾಮ ಕಾರಂತ, ಸೆಟ್ಟಿ ಸಾಲ, ಅದೇ.

೩೬. ಶಿವರಾಮ ಕಾರಂತ, ಮಗಳ ಮದುವೆ, ಅದೇ.

೩೭. ಶಿವರಾಮ ಕಾರಂತ, ಬಬ್ಬುಸಾಕ್ಷಿ, ಅದೇ.

೩೮. ಶಿವರಾಮ ಕಾರಂತ, ಅಡುಗೆ ಮನೆ, ಅದೇ.

೩೯. ಶಾಂತರಸ, ನಾಯಿ ಮತ್ತು ಪಿಂಚಣಿ, ಕಥನ ಪ್ರೀತಿ, ೨೦೧೩, ಅಕ್ಷರ ಪ್ರಕಾಶನ, ಸಾಗರ.

೪೦. ಶ್ರೀನಿವಾಸರಾಯ ಕೊರಡ್ಕಲ್, ಧನಿಯರ ಸತ್ಯನಾರಾಯಣ, ಬದುಕು-ಭಾವದ ಕಥೆಗಳು, ೨೦೦೪, ಕರ್ನಾಟಕ ಸಂಘ, ಪುತ್ತೂರು.

೪೧. ಸಾರಾ ಅಬೂಬಕ್ಕರ್, ಬಿತ್ತಿ ಬೆಳೆದವರು, ಚಪ್ಪಲಿಗಳು, ೧೯೮೯, ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು.

೪೨. ಸಾರಾ ಅಬೂಬಕ್ಕರ್, ನಿಯಮ ನಿಯಮಗಳ ನಡುವೆ, ಸಾಹಿತ್ಯ ಚಂದನ, ೨೦೦೯, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.

೪೩. ಹನೂರು ಚನ್ನಪ್ಪ, ಅನ್ನ, ಕನ್ನಡದ ಮುವತ್ತು ಕಥೆಗಳು, ೨೦೧೪, ಸಾಹಿತ್ಯ ಅಕಾದೆಮಿ, ಬೆಂಗಳೂರು.

೨. ಪರಾಮರ್ಶನ ಗ್ರಂಥಗಳು

೧. ಅಭಯಕುಮಾರ್, ಚೆಂದಳಿರು, ೨೦೧೦, ಪ್ರಸಾರಾಂಗ, ಮಂಗಳೂರು ವಿ.ವಿ

೨. ಅಭಯಕುಮಾರ್ ಕೆ., ತೆಂಕಣಗಾಳಿ, ೨೦೧೩, ಪ್ರಸಾರಾಂಗ, ಮಂಗಳೂರು ವಿ.ವಿ.

೩. ಅಭಯಕುಮಾರ್ ಕೆ., ತೆಂಬರೆನಾದ, ೨೦೧೦, ಪ್ರಸಾರಾಂಗ, ಮಂಗಳೂರು ವಿ.ವಿ.

೪. ಅಭಯಕುಮಾರ್ ಕೆ., ಕೆಡ್ಡಸ, ೨೦೧೧, ಪ್ರಸಾರಾಂಗ, ಮಂಗಳೂರು ವಿ.ವಿ.

೫. ಅಭಯಕುಮಾರ್, ಕಜಿತ, ೨೦೧೧, ಪ್ರಸಾರಾಂಗ, ಮಂಗಳೂರು ವಿ.ವಿ.

೬. ಅಭಯಕುಮಾರ್, ಪತ್ತಾಯ, ೨೦೧೦, ಪ್ರಸಾರಾಂಗ, ಮಂಗಳೂರು ವಿ.ವಿ.

೭. ಅಭಯಕುಮಾರ್, ಕೇದಗೆ, ೨೦೧೦, ಪ್ರಸಾರಾಂಗ, ಮಂಗಳೂರು ವಿ.ವಿ.

೮. ಅಭಯಕುಮಾರ್, ಸುರಹೊನ್ನೆ, ೨೦೧೩, ಪ್ರಸಾರಾಂಗ, ಮಂಗಳೂರು ವಿ.ವಿ.

೯. ಅಭಯಕುಮಾರ್, ಹುತ್ತರಿ, ೨೦೧೩, ಪ್ರಸಾರಾಂಗ, ಮಂಗಳೂರು ವಿ.ವಿ.

೧೦. ಅಭಯಕುಮಾರ್, ಪಡಿಮಂಚ, ೨೦೧೦, ಪ್ರಸಾರಾಂಗ, ಮಂಗಳೂರು ವಿ.ವಿ.

೧೧. ಅಭಯಕುಮಾರ್, (ಪುದುಮೆ ಪುಟ ೭೫) ೨೦೧೦, ಪ್ರಸಾರಾಂಗ, ಮಂಗಳೂರು ವಿ.ವಿ.

೧೨. ಅಮರೇಶ ನುಗಡೋಣಿ, ಕನ್ನಡ ಸಂಶೋಧನೆಯ ವೈಧಾನಿಕತೆಗಳು, ೨೦೦೮, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

೧೩. ಆಮೂರ ಜೆ. ಎಸ್., ಕನ್ನಡ ಕಥನ ಸಾಹಿತ್ಯ , ೧೯೮೬, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೪. ಅಭಿವೃದ್ಧಿ ಅಧ್ಯಯನದ ಪ್ರಬಂಧಗಳು, ಹಕ್ಕು-ಹಂಗು, ೨೦೧೧, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೧೫. ಅರವಿಂದ ಮಾಲಗಿತ್ತಿ, ದಲಿತ ಸಾಹಿತ್ಯ ಚಳವಳಿಯ ತಾತ್ವಿಕ ಚಿಂತನ, ೧೯೮೯, ಹೊಸದಿಕ್ಕು, ಪ್ರಕಾಶನ, ಬೆಂಗಳೂರು.

೧೬. ಅರವಿಂದ ಮಾಲಗಿತ್ತಿ, ಮೂಕನಿಗೆ ಬಾಯಿ ಬಂದಾಗ, ೧೯೮೧, ಶೈಲ ಪ್ರಕಾಶನ, ಮುದ್ದೆಬಿಹಾಳ

೧೭. ಅರವಿಂದ ಮಾಲಗಿತ್ತಿ, ಕಪ್ಪುಕಾವ್ಯ, ೧೯೮೫, ಶೈಲ ಪ್ರಕಾಶನ, ಮುದ್ದೆಬಿಹಾಳ

೧೮. ಅಶೋಕ ಟಿ. ಪಿ., ಕಥನ ಭಾರತಿ, ೨೦೧೫, ಮಣಿಪಾಲ್ ಯೂನಿವರ್ಸಿಟಿ ಪ್ರೆಸ್ , ಮಣಿಪಾಲ

೧೯. ಅಶೋಕ ಟಿ. ಪಿ., ಕಥನ ಪ್ರೀತಿ, ೨೦೧೩, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ

೨೦. ಎಚ್ಚಾರ್ಕೆ, ಭಾರತದ ಆರ್ಥಿಕ ವ್ಯವಸ್ಥೆ, ಸಪ್ನ ಬುಕ್ ಹೌಸ್, ೨೦೦೫, ಬೆಂಗಳೂರು.

೨೧. ಕನ್ನಡ ಸಾಹಿತ್ಯದಲ್ಲಿ ಮನುಷ್ಯ ಪರಿಕಲ್ಪನೆ, ೧೯೯೩, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೨೨. ಕರ್ನಾಟಕ ಮಾನವ ಅಭಿವೃದ್ಧಿ ವರದಿ, ೨೦೦೬, ಸಾಂಖ್ಯಿಕ ಇಲಾಖೆ, ಬೆಂಗಳೂರು

೨೩. ಕೃಷ್ಣಪ್ಪ ಜಿ., ಹಾಡುಹಕ್ಕಿ ಅಂಬಿಕಾತನಯದತ್ತ, ಶ್ರೀರಂಗ ಪ್ರಕಾಶನ, ೧೯೯೫, ಮೈಸೂರು.

೨೪. ಕುಮಾರ ಸ್ವಾಮಿ ಆರ್, ತುಂಗಾ ತರಂಗ, ೨೦೧೭ರ ವಾರ್ಷಿಕ ಸಂಚಿಕೆ, ತೀರ್ಥಹಳ್ಳಿ

೨೫. ಕುವೆಂಪು, ಸ್ವಾಮಿ ವಿವೇಕಾನಂದ, ಶ್ರೀರಾಮಕೃಷ್ಣ ಆಶ್ರಮ, ೧೯೯೯, ಮೈಸೂರು.

೨೬. ಕೋದಂಡರಾಮ ಎನ್. ಕೆ., ಕನ್ನಡದ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ, ೧೯೯೯, ಗಾಯತ್ರಿ ಸ್ಮಾರಕ ಗ್ರಂಥಮಾಲೆ, ಮೈಸೂರು.

೨೭. ಗಂಗಾಧರ ಮೂರ್ತಿ, ಭಾರತದಲ್ಲಿ ಜಾತಿ ಹೋರಾಟಗಳು, ೧೯೯೪, ಕ.ದ. ಸಂ. ಸಮಿತಿ, ಕೋಲಾರ.

೨೮. ಚಂದ್ರಶೇಖರ ಟಿ. ಆರ್., ಮಾನವ ಅಭಿವೃದ್ಧಿ ಮಾನವ ಬಡತನ ಮತ್ತು ಮಾನವ ಹಕ್ಕುಗಳು, ೨೦೧೪, ಪ್ರಸಾರಾಂಗ ಹಂಪಿ ಕನ್ನಡ ವಿ.ವಿ.

೨೯. ಚಂದ್ರಶೇಖರ ಟಿ. ಆರ್., ಮಹಿಳೆಯರ ಸಂತಾನೋತ್ಪತ್ತಿಯ ದುಸ್ಥಿತಿಯ ಸ್ವರೂಪ ಮಹಿಳಾ ಅಧ್ಯಯನ, ೨೦೧೦, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೩೦. ಚಿನ್ನಪ್ಪಗೌಡ ಕೆ., ನುಡಿಲಹರಿ, ೨೦೦೬, ಪ್ರಸಾರಾಂಗ, ಮಂಗಳೂರು ವಿ.ವಿ.

೩೧. ಚಿನ್ನಪ್ಪಗೌಡ ಕೆ., ಮೆಲ್ನುಡಿ, ೨೦೦೭, ಪ್ರಸಾರಾಂಗ, ಮಂಗಳೂರು ವಿ.ವಿ.

೩೨. ಜನಾರ್ಧನ ಭಟ್ ಬಿ., ಬದುಕು-ಭಾವದ ಕಥೆಗಳು, ೨೦೦೪, ಕರ್ನಾಟಕ ಸಂಘ, ಪುತ್ತೂರು

೩೩. ಜವರೇಗೌಡ ದೇ (ಸಂ), ಕುವೆಂಪು ಸಾಹಿತ್ಯದಲ್ಲಿ ರೈತ, ಪ್ರತಿಧ್ವನಿ ಪ್ರಕಾಶನ, ೧೯೮೬, ಮೈಸೂರು.

೩೪. ಜವರೇಗೌಡ ದೇ (ಸಂ), ಕುವೆಂಪು ಕವನಗಳು ಅನ್ವಯಿಕ ವಿಮರ್ಶೆ, ಸಹ್ಯಾದ್ರಿ ಪ್ರಕಾಶನ, ೧೯೮೮, ಮೈಸೂರು.

೩೫. ಜವರೇಗೌಡ ದೇ. (ಸಂ), ಯದುಗಿರಿ ಪು. ತಿ. ನ. ಅಭಿನಂದನ ಗ್ರಂಥ, ಡಿ. ವಿ. ಕೆ. ಮೂರ್ತಿ, ೧೯೮೧, ಮೈಸೂರು.

೩೬. ತಿಳಿಕನ್ನಡ, ಹತ್ತನೆಯ ತರಗತಿ ಪಠ್ಯಪುಸ್ತಕ, ೨೦೧೧, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

೩೭. ದೇವರಾಜ್ ಎಚ್. ಜೆ., ಭಾರತದ ಆರ್ಥಿಕಾಭಿವೃದ್ಧಿ, ಚೇತನ ಬುಕ್ ಹೌಸ್, ೧೯೯೫, ಮೈಸೂರು.

೩೮. ನಟರಾಜ್ ಹುಳಿಯಾರ್, ಮಾನವಕುಲದ ಏಕತೆ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ೨೦೦೦, ಬೆಂಗಳೂರು.

೩೯. ನಾಗಭೂಷಣ ಸ್ವಾಮಿ ಓ.ಎಲ್., ವಿಮರ್ಶೆಯ ಪರಿಭಾಷೆ, ೧೯೯೮, ಅಂಕಿತ ಪುಸ್ತಕ, ಬೆಂಗಳೂರು

೪೦. ನಾಗರಾಜು ಡಿ. ಆರ್, ಸಾಹಿತ್ಯ ಕಥನ, ೧೯೯೬, ಅಕ್ಷರ ಪರಕಾಶನ, ಹೆಗ್ಗೋಡು, ಸಾಗರ.

೪೧. ನಾಗರಾಜು ಡಿ. ಸಾಮಾಜಿಕ ಚಳವಳಿಗಳು, ೧೯೯೯, ಚೇತನಾ ಬುಕ್ ಹೌಸ್, ಮೈಸೂರು.

೪೨. ನೀಲಿ ಬಾನಲ್ಲಿ ಕೆಂಪು ಸೂರ್ಯ, ೨೦೧೬, ಜನಶಕ್ತಿ ಪ್ರಕಾಶನ, ಬೆಂಗಳೂರು

೪೩. ಫಕೀರ್ ಮಹಮ್ಮದ್ ಕಟ್ಪಾಡಿ, ಕನ್ನಡದ ಮೂವತ್ತು ಕಥೆಗಳು, ೨೦೧೪, ಕೃಷ್ಣಮೂರ್ತಿ ಹನೂರು ಸಾಹಿತ್ಯ ಅಕಾಡೆಮಿ, ಬೆಂಗಳೂರು

೪೪. ಪುರುಷೋತ್ತಮ ಬಿಳಿಮಲೆ, ಬಂಡಾಯ ದಲಿತ ಸಾಹಿತ್ಯ, ೧೯೯೧, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೪೫. ಪ್ರಶಾಂತ ಮಾಡ್ತ, ಕನ್ನಡ ಪದನಿಧಿ, ಕನ್ನಡ ಸಂಘ, ಸಂತ ಜೋಸೆಫ್ ಸಂಜೆ ಕಾಲೇಜು, ಬೆಂಗಳೂರು

೪೬. ಪ್ರಭುಶಂಕರ, ಸಾಹಿತ್ಯ ಮತ್ತು ಆಧುನಿಕತೆ, ೧೯೯೩, ಪ್ರಸಾರಾಂಗ, ಬೆಂಗಳೂರು ವಿ.ವಿ., ಬೆಂಗಳೂರು.

೪೭. ಬಸವಣ್ಣನವರ ಷಟ್‌ಸ್ಥಳ ವಚನಗಳು, ೨೦೧೮, ಲಿಂಗಾಯತ್ ಅಧ್ಯಯನ ಅಕಾಡೆಮಿ, ಬೆಳಗಾವಿ

೪೮. ಬರಗೂರು ರಾಮಚಂದ್ರಪ್ಪ, ಕನ್ನಡ ಸಾಹಿತ್ಯದಲ್ಲಿ ಅಸ್ಪೃಶ್ಯತೆಯ ಪರಿಕಲ್ಪನೆ, ೧೯೯೩, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೪೯. ಬರಗೂರು ರಾಮಚಂದ್ರಪ್ಪ, ಕನ್ನಡ ಸಾಹಿತ್ಯದಲ್ಲಿ ನೋವಿನ ನೆಲೆಗಳು, ೧೯೯೩, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೫೦. ಬರಗೂರು ರಾಮಚಂದ್ರಪ್ಪ, ಕನ್ನಡ ಸಾಹಿತ್ಯದಲ್ಲಿ ಹಿಂಸೆಯ ಸ್ವರೂಪ, ೧೯೯೩, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೫೧. ಬುದ್ದಣ್ಣ ಹಿಂಗಮಿರೆ, ಶ್ರೀ ಬೇಂದ್ರೆ ಅಭಿನಂದನ ಗ್ರಂಥ, ಸಮಾಜ ಪುಸ್ತಕಾಲಯ, ೧೯೭೭, ಧಾರವಾಡ.

೫೨. ಭಾರತಿ ಹಾದಿಗೆ ಬಿ. ಎಂ., ಭಾರತೀಯ ಪ್ರಚಲಿತ ಸಾಮಾಜಿಕ ಸಮಸ್ಯೆಗಳು, ೨೦೦೩, ಚೇತನ್ ಬುಕ್ ಹೌಸ್, ಮೈಸೂರು.

೫೩. ಮರುಳಯ್ಯ ಸಾ. ಶಿ., ಮಾಸ್ತಿಯವರ ಕಾವ್ಯ ಒಂದು ಸಮೀಕ್ಷೆ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ೧೯೯೪, ಬೆಂಗಳೂರು.

೫೪. ಮುಗಳಿ ರಂ. ಶ್ರೀ, ಕನ್ನಡ ಸಾಹಿತ್ಯ ಚರಿತ್ರೆ, ೨೦೦೩, ಗೀತಾ ಬುಕ್ ಹೌಸ್, ಬೆಂಗಳೂರು.

೫೫. ಮೋಹನ್ ಕುಂಟಾರ್ ಕಲಾಭಿಮಾನಿ ೨೦೧೬, ಕರ್ನಾಟಕ ಕಲಾಭಿಮಾನಿ ಸಂಘ, ೨೦೧೬, ಹೊಸಪೇಟೆ.

೫೬. ಯೂಸುಫುಲ್ ಕರ್ಝಾವಿ, ಇಸ್ಲಾಂ ಮತ್ತು ಬಡತನ, ೨೦೦೦, ಶಾಂತಿ ಪ್ರಕಾಶನ, ಮಂಗಳೂರು

೫೭. ರಾಜಾರಂ ಬಿ.ವಿ. (ಅನುವಾದಕರು, ಧಮ್ಮಪದ, ೨೦೧೪, ಮಹಾಬೋಧಿ ಸೊಸಾಯ್ಟಿ, ಬೆಂಗಳೂರು

೫೮. ರಾಮಚಂದ್ರನ್ ಸಿ.ಎನ್., ವಸಾಹತೋತ್ತರ ಚಿಂತನೆ, ೨೦೦೨, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೫೯. ರಾಮಚಂದ್ರನ್ ಸಿ.ಎನ್, ಸಾಹಿತ್ಯ ವಿಮರ್ಶೆ, ೧೯೯೭, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೬೦. ರಂಜಾನ್‌ದರ್ಗಾ, ನೆಲ್ಸನ್ ಮಂಡೇಲಾ, ೧೯೯೪, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.,

೬೧. ಲಕ್ಕಪ್ಪಗೌಡ ಎಚ್ ಜೆ, ಡಾ. ಅಂಬೇಡ್ಕರ್, ೨೦೦೪, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೬೨. ವಿವಿಧ ಲೇಖಕರು, ಕನ್ನಡ ಸಾಹಿತ್ಯದಲ್ಲಿ ಮನುಷ್ಯ ಪರಿಕಲ್ಪನೆ, ೧೯೯೩, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೬೩. ವಿವಿಧ ಲೇಖಕರು, ಕನ್ನಡ ಸಾಹಿತ್ಯದಲ್ಲಿ ಪ್ರಧಾನ ಮತ್ತು ಅಧೀನ ಸಂಸ್ಕೃತಿ, ೧೯೯೩, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೬೪. ವಿವಿಧ ಲೇಖಕಿಯರು, ಲೇಖಕಿಯರ ಸಣ್ಣ ಕಥೆಗಳು, ೧೯೮೯, ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು.

೬೫. ವೈದೇಹಿ, ಗೋಲ, ಅಕ್ಷರ ಪ್ರಕಾಶನ ಹೆಗ್ಗೋಡು, ೧೯೮೬.

೬೬. ವೆಂಕಟರಮಣನ್ ಡಿ. ಆರ್, ಕಗ್ಗಕ್ಕೊಂದು ಕೈಪಿಡಿ, ೨೦೧೦, ನಿತ್ಯಾನಂದ ಪ್ರಕಾಶನ, ಬೆಂಗಳೂರು

೬೭. ಶಿವರಾಮ ಶೆಟ್ಟಿ ಬಿ., ಪಾತರಗಿತ್ತಿ, ೨೦೧೭, ಪ್ರಸಾರಾಂಗ, ಮಂಗಳೂರು ವಿ.ವಿ.

೬೮. ಶಿವರಾಮ ಶೆಟ್ಟಿ ಬಿ., ನುಡಿಬೆಳಕು, ೨೦೧೮, ಪ್ರಸಾರಾಂಗ, ಮಂಗಳೂರು ವಿ.ವಿ.

೬೯. ಶಿವರಾಮ ಶೆಟ್ಟಿ ಬಿ., ನುಡಿವಿಜ್ಞಾನ, ೨೦೧೭, ಪ್ರಸಾರಾಂಗ, ಮಂಗಳೂರು ವಿ.ವಿ.

೭೦. ಶಿವರಾಮಶೆಟ್ಟಿ, ಕೊಡಗೂಸು, ೨೦೧೭, ಪ್ರಸಾರಾಂಗ, ಮಂಗಳೂರು ವಿ.ವಿ.

೭೧. ಶಿವರಾಮಶೆಟ್ಟಿ, ನುಡಿಶಿಲ್ಪ, ೨೦೧೭, ಪ್ರಸಾರಾಂಗ, ಮಂಗಳೂರು ವಿ.ವಿ.

೭೨. ಶಿವರಾಮ ಪಡಿಕಲ್, ನಾಡು ನುಡಿಯ ರೂಪಕ, ೨೦೦೧, ಪ್ರಸಾರಾಂಗ, ಮಂಗಳ ಗಂಗೋತ್ರಿ, ಮಂಗಳೂರು ವಿಶ್ವವಿದ್ಯಾನಿಲಯ.

೭೩. ಶ್ರೀಕಾಂತ್, ಶ್ರೀಮದ್ಭಗವದ್ಗೀತಾ ಮತ್ತು ಕಗ್ಗ ತಾತ್ಪರ್ಯ, ೨೦೧೫, ಬೆಂಗಳೂರು

೭೪. ಶ್ರೀನಿವಾಸ ಮೂರ್ತಿ ಎಂ. ಆರ್, ಸಾಹಿತ್ಯವಲೋಕನ, ೧೯೭೮, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

೭೫. ಶಿವರಾಮಯ್ಯ, ಕನ್‌ಫ್ಯೂಶಿಯಸ್, ೧೯೯೪, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೭೬. ಶೇಷಗಿರಿ ರಾವ್ ಎಲ್. ಎಸ್. ಮತ್ತು ಇತರರು (ಸಂ), ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ, ೧೯೯೩, ಉದಯಭಾನು ಕಲಾಸಂಘ, ಬೆಂಗಳೂರು.

೭೭. ಶೇಷಗಿರಿ ರಾವ್ ಎಲ್. ಎಸ್. ಹೊಸಗನ್ನಡ ಸಾಹಿತ್ಯ ಚರಿತ್ರೆ, ೧೯೯೯, ಅಂಕಿತ ಪುಸ್ತಕ, ಬೆಂಗಳೂರು.

೭೮. ಶಂಕರನಾರಾಯಣ ರಾವ್, ಭಾರತದ ಸಾಮಾಜಿಕ ಸಮಸ್ಯೆ, ೨೦೦೩, ಜೈ ಭಾರತ್ ಪ್ರಕಾಶನ, ಮಂಗಳೂರು

೭೯. ಶೈಲಾ ನಾಗರಾಜ್, ಮಾರ್ಟಿನ್ ಲೂಥರ್ ಕಿಂಗ್, ೧೯೯೪, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೮೦. ಸತ್ಯನಾರಾಯಣ ಮಲ್ಲಿಪಟ್ಟಣ, ಕನ್ನಡ ಸಣ್ಣ ಕಥೆ ಹೆಜ್ಜೆ ಹಾದಿ, ೧೯೮೫, ಸಂಕಲನ ಪ್ರಕಾಶನ ಮೈಸೂರು.

೮೧. ಸಬಿಹಾ ಭೂಮಿಗೌಡ, ಗದ್ಯಸಿರಿ, ೨೦೧೪, ಪ್ರಸಾರಾಂಗ, ಮಂಗಳೂರು ವಿ.ವಿ.

೮೨. ಸಬೀಹಾ ಭೂಮಿಗೌಡ, ತಿಜೋರಿ, ೨೦೧೪, ಪ್ರಸಾರಾಂಗ, ಮಂಗಳೂರು ವಿ.ವಿ.

೮೩. ಸಬೀಹಾ ಭೂಮಿಗೌಡ, ನೇತ್ರಾವತಿ, ೨೦೧೪, ಪ್ರಸಾರಾಂಗ, ಮಂಗಳೂರು ವಿ.ವಿ.

೮೪. ಸದಾಶಿವ ಕೆ., ಪ್ರಾಚೀನ ಭಾರತದ ಇತಿಹಾಸ, ೨೦೦೪, ಪ್ರಿಯದರ್ಶಿನಿ ಪ್ರಕಾಶನ ಮೈಸೂರು

೮೫. ಸದಾಶಿವ ಕೆ. ಆಧುನಿಕ ಭಾರತದ ಇತಿಹಾಸ, ೨೦೦೪, ಪ್ರಿಯದರ್ಶಿನಿ ಪ್ರಕಾಶನ ಮೈಸೂರು

೮೬. ಸಣ್ಣರಾಮ, ಸಾಹಿತ್ಯ ಸಂವೇದನೆ-೩, ೨೦೧೧, ಪ್ರಸಾರಾಂಗ, ಕು.ವಿ.ವಿ., ಶಂಕರಘಟ್ಟ, ಶಿವಮೊಗ್ಗ

೮೭. ಸರೋಜ ಆಚಾರ್ಯ, ವ್ಯವಸ್ಥೆ, ೧೯೯೯, ರಮಣಶ್ರೀ ಪ್ರಕಾಶನ, ಬೆಂಗಳೂರು

೮೮. ಸಾಹಿತ್ಯ ಸಂಚಲನ, ಪ್ರಥಮ ಪಿ.ಯು, ಕನ್ನಡ ಪಠ್ಯ ಪುಸ್ತಕ ೨೦೦೯, ಪ.ಪೂ. ಶಿ. ಇ., ಬೆಂಗಳೂರು - ೨

೮೯. ಸಿದ್ದೇಶ್ ನೆಲ್ಲಿಕಟ್ಟೆ, ಮರ್ತ್ಯದ ವಿಸ್ಮಯ ಮಹಾದೇವಮ್ಮ, ೨೦೧೮, ಬುಕ್‌ಹೌಸ್, ಬೆಂಗಳೂರು

೯೦. ಸಿದ್ದಲಿಂಗಯ್ಯ, ಏಕಲವ್ಯ, ೧೯೮೬, ಅಜಂತಾ ಪ್ರಕಾಶನ, ಕೆಂಗೇರಿ, ಬೆಂಗಳೂರು

೯೧. ಸುಭಾಷ್ ಭರಣಿ, ಧರೆಗೆ ದೊಡ್ಡವರು, ೨೦೦೫, ದ್ರಾವಿಡ್ ಪಬ್ಲಿಕೇಶನ್, ಮೈಸೂರು

೯೨. ಸುಮತೀಂದ್ರ ನಾಡಿಗ್, ಅಡಿಗರ ಕಾವ್ಯ, ಸುಮತಿ ಪ್ರಕಾಶನ, ೧೯೭೫, ಬೆಂಗಳೂರು.

೩. ಸಂಶೋಧನಾ ಪ್ರಬಂಧಗಳು

೧. ಗಣಪತಿ ಜಿ. (ಸಣ್ಣರಾಮ), ಪ್ರಾಚೀನ ಕನ್ನಡ ಗದ್ಯ ಕೃತಿಗಳ ಸಾಂಸ್ಕೃತಿಕ ಅಧ್ಯಯನ, ೨೦೧೦, ಕುವೆಂಪು ವಿ.ವಿ.

೨. ಗಿರಿಜಾಶಾಸ್ತ್ರಿ (ತಾಳ್ತಜೆ), ಕನ್ನಡ ಸಣ್ಣಕಥೆಗಳು -ಒಂದು ಸ್ತ್ರೀವಾದಿ ಅಧ್ಯಯನ, ೧೯೯೪, ಮುಂಬೈ ವಿ.ವಿ.

೩. ಚಂದ್ರಶೇಖರ (ಪ್ರೀತಿ ಶ್ರೀಮಂದರ್‌ಕುಮಾರ್), ವೆಂಕಟಯ್ಯ ಜಿ. ಜೀವನ ಮತ್ತು ಸಾಹಿತ್ಯ ೨೦೧೦, ಮೈಸೂರು ವಿ.ವಿ.

೪. ನಂದಕುಮಾರ ಸ್ವಾಮಿ (ನರಹಳ್ಳಿ), ಆಧುನಿಕ ಕನ್ನಡ ಮಹಿಳಾ ಕಥಾ ಸಾಹಿತ್ಯ, ೨೦೦೩, ಬೆಂಗಳೂರು ವಿ.ವಿ.

೫. ಬಾಳಾ ಸಾಹೇಬ (ರಹಮತ್), ಆಧುನಿಕ ಕನ್ನಡ ಕಥಾ ಸಾಹಿತ್ಯದಲ್ಲಿ ಜೈನ ಸಂವೇದನೆ, ೨೦೦೪, ಹಂಪಿ

೬. ಮಲ್ಲಿಕಾಘಂಟಿ (ರಾಜೂರ), ಕನ್ನಡದಲ್ಲಿ ಮಹಿಳಾ ಕಥಾ ಸಾಹಿತ್ಯ, ೧೯೯೧, ಕ.ವಿ.ವಿ.

೭. ಮೋಹನ್ ಕುಂಟಾರ್ (ಪಿ.ವಿ. ಕುಲಕರ್ಣಿ), ೧೯೭೦-೮೦ರ ದಶಕದ ಕನ್ನಡ ಸಣ್ಣಕಥೆಗಳು – ಒಂದು ಅಧ್ಯಯನ, ೧೯೯೩, ಮಧುರೈ, ಕಾ.ವಿ.ವಿ.

೮. ರವೀಂದ್ರ ಎನ್. (ಗಂಗಾನಾಯ್ಕ್), ಕನ್ನಡ ದಲಿತರ ಕಥಾ ಸಾಹಿತ್ಯದಲ್ಲಿ ದಲಿತರ ಬದುಕಿನ ಸಂಘರ್ಷ ಮತ್ತು ಪರಿವರ್ತನೆ, ೨೦೦೬, ಮೈಸೂರು ವಿ.ವಿ.

೯. ವಿನೋದ ಶ್ರೀಮತಿ, ಕರಾವಳಿ ಮಹಿಳಾ ಕಥಾ ಸಾಹಿತ್ಯದಲ್ಲಿ ಪ್ರತಿರೋಧನ ನೆಲೆಗಳು (ವರದರಾಜ ಚಂದ್ರಗಿರಿ) ಕನ್ನಡ ವಿವಿ. ಹಂಪಿ, ೨೦೧೯

೧೦. ವೆಂಕಟೇಶ್ ಎಚ್. ಕೆ. (ಎಂ.ಎಸ್ ತಾರಾನಾಥ), ಬಡತನದ ಪರಿಕಲ್ಪನೆ ನವೋದಯ ಕಾವ್ಯದಲ್ಲಿ, ೨೦೧೦, ಮೈಸೂರು ವಿ.ವಿ.

೧೧. ಶಿವಶಂಕರ್ (ಶಿರೂರ್), ವೀಣಾಶಾಂತೇಶ್ವರಿ ಅವರ ಕಥೆಗಳು, ೧೯೯೪, ಕ.ವಿ.ವಿ.

೧೨. ಶಿವಾನಂದ ಕಲ್ಘಣ್ಣನವರ (ಡಿ.ಎ.ಹುಬ್ಬಳ್ಳಿ), ಕನ್ನಡದಲ್ಲಿ ಮುಸ್ಲಿಂ ಲೇಖಕರ ಕಥಾ ಸಾಹಿತ್ಯ, ೨೦೦೩, ಕ. ವಿಶ್ವವಿದ್ಯಾಲಯ

೧೩. ಶ್ರೀಪತಿ ಹಳಗುಂದ (ಪ್ರಶಾಂತ ನಾಯ್ಕ್), ಕನ್ನಡ ಕಾದಂಬರಿಗಳಲ್ಲಿ ವೇಶ್ಯಾ ಜೀವನ, ೨೦೦೫, ಕುವೆಂಪು ವಿ.ವಿ.

೧೪. ಸಜಿಹಾ (ವಿವೇಕ ರೈ), ದಕ್ಷಿಣ ಕನ್ನಡ ಜಿಲ್ಲೆಯ ಸಣ್ಣಕಥೆಗಳ ಹುಟ್ಟು ಮತ್ತು ಬೆಳವಣಿಗೆ, ೧೯೯೨, ಮಂಗಳೂರು ವಿ. ವಿ.

೧೫. ಸೋಮಶೇಖರ ಹಾಲತಿ (ರಾಮಕೃಷ್ಣ), ಲಂಕೇಶ್ ಪಿ. ಸಾಹಿತ್ಯ, ೨೦೦೩, ಮೈಸೂರು ವಿ.ವಿ.

೧೬. ಹೊನ್ನಯ್ಯ ಸಿ. ಜಿ. (ಸಿ. ವೀರಣ್ಣ), ಆಧುನಿಕ ಕನ್ನಡ ಸಣ್ಣ ಕಥೆಗಳಲ್ಲಿ ದಲಿತರ ಜೀವನ, ೨೦೦೩, ಬೆಂಗಳೂರು ವಿ. ವಿ.